॥ ಶ್ರೀ ॥

ಧರ್ಮಾಶ್ವಮೇಧ ಪರ್ವವೆಂಬ

# ವಚನ ಜೈಮಿನಿ ಭಾರತ

ಕಥಾಸಂಗ್ರಹವು.



ವೇ|| ಕವಿನಾಗಶರ್ಮರಿಂದ ಪರಿಶೋಧಿಸಿ ಬರೆಯಲ್ಪಟ್ಟು

ಇದರ ಸರ್ವ ಸ್ವಾತಂತ್ರ್ಯವನ್ನು ಪಡೆದಿರುವ

ಬೆಂಗಳೂರು ಸಿಟಿ, ಚಿಕ್ಕಪೇಟೆ, ಕಲಾಸಿದ್ಧಿ ಬುಕ್‌ಡಿಪೋ ಪ್ರೊಪ್ರೈಟರ್

## ಟಿ. ಕೆ. ಕೃಷ್ಣಸ್ವಾಮಿಶೆಟ್ಟರ

…ಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

…ಳೂರು ಸಿಟಿ.

1934. Price 1-4-0.

…y Right Registered.

494.8148
SHA
2864

VFD - 2014

# ಪೀಠಿಕೆ.

VFD.

ವೇದವ್ಯಾಸರು ರಚಿಸಿದ ಮಹಾಭಾರತದಲ್ಲಿ ೧೮ ಪರ್ವಗಳು ಪ್ರಸಿದ್ಧವಾಗಿರುವುದು ಜನಜನಿತವಾದ ವಿಷಯವೇಸರಿ ! ಆ ಹದಿನೆಂಟು ಪರ್ವಗಳಲ್ಲಿ ಒಂದಾದ ಅಶ್ವಮೇಧಪರ್ವವನ್ನು ವ್ಯಾಸಮಹರ್ಷಿಯ ಶಿಷ್ಯರಲ್ಲಿ ಪ್ರಸಿದ್ಧನಾದ ಜೈಮಿನಿಋಷಿಯು ತನ್ನ ಪಾಂಡಿತ್ಯದಿಂದ ಸಂಸ್ಕೃತಭಾಷೆಯಲ್ಲಿ ಬಹು ರಮ್ಯವಾಗಿ ಬರೆದು ಗುರುವಿಗೆ ತೋರಿಸಲು, ವ್ಯಾಸರು ಅದನ್ನು ಮೆಚ್ಚಿ ಕೊಂಡಾಡಿದರಂತೆ. ಇದು ಸಂಸ್ಕೃತಪಾಂಡಿತ್ಯವುಳ್ಳವರಿಗೆಲ್ಲ ತಿಳಿದ ವಿಷಯವೆ ! ಇಂಥ ಮನೋಹರವಾದ ಅಶ್ವಮೇಧ ಪರ್ವವನ್ನು ಕನ್ನಡದಲ್ಲಿ ಬರೆದು ಜೈಮಿನಿಯ ವಿದ್ಯಾವಿಚಕ್ಷಣೆಯನ್ನು ಕನ್ನಡಿಗರಿಗೆ ತಿಳಿಸಬೇಕೆಂಬ ಕುತೂಹಲದಿಂದ ದೇವನೂರು ವಾಸಿಯಾಗಿದ್ದ ಭರದ್ವಾಜಗೋತ್ರದ ಅಣ್ಣಾಮಯ್ಯನವರ ಮಗನಾದ ಲಕ್ಷ್ಮೀಶನೆಂಬ ಕವಿಯು ಸರಳಪದಸುಂದರವಾದ ಜೈಮಿನಿಭಾರತದ ಕಥೆಯನ್ನು ಬಹುರಮ್ಯವಾದ ಕನ್ನಡ ಷಟ್ಪದಿ ಕಾವ್ಯರೂಪದಲ್ಲಿ ಬರೆದು ಅದರಿಂದ " ಕರ್ಣಾಟಕವಿ ಚೂತವನಚೈತ್ರ " ಎಂಬ ಬಿರುದನ್ನು ಪಡೆದನು. ಈ ವಿಚಾರವೆಲ್ಲ ವಾಚಕಮಹಾಶಯರಿಗೆ ತಕ್ಕಮಟ್ಟಿಗೆ ತಿಳಿದೆ ಇರಬಹುದು. ಇಂಥ ಶ್ರೇಷ್ಠವಾದ ಕನ್ನಡ ಜೈಮಿನಿಯೂ ಕೂಡ ವಿದ್ಯಾವಂತರಿಗೆ ವಿನೋದವನ್ನುಂಟುಮಾಡುವಂತೆ ಇತರರಿಗೆ ಪದ ಪದಾರ್ಥಜ್ಞಾನ ದುರ್ಲಭವಾಗಿದ್ದಕಾರಣ ಕವಿಯ ಆಶಯಕ್ಕೆ ಕೊರತೆಬಾರದಂತೆ ಮೃದು ಮಧುರಪದ ನಿಬಿಡವಾದ ವಚನರೂಪದಲ್ಲಿ ಬರೆಯಬೇಕೆಂದು ಬೆಂಗಳೂರು ಸಿಟಿ ಕಲಾನಿಧಿಪ್ರೆಸ್ ಪ್ರೊಪ್ರೈಟರ್ ಮ|| ರಾ|| ಟಿ. ಕೆ. ಕೃಷ್ಣಸ್ವಾಮಿಸೆಟ್ಟರು ಪ್ರೋತ್ಸಾಹಿಸಲಾಗಿ ಅವರ ಅಭಿಪ್ರಾಯವನ್ನು ಅನುಸರಿಸಿ ನಾನು ಈ ವಚನಗ್ರಂಥವನ್ನು ಬರೆದೆನು. ಮಹಾಜನರು ಇದನ್ನು ಓದಿ ಆನಂದಿಸುತ್ತ ಲೋಪ ದೋಷಗಳನ್ನು ತಿಳಿಸಿದರೆ ವಿನಯಪೂರ್ವಕವಾಗಿ ಸ್ವೀಕರಿಸುವೆನಲ್ಲದೆ ನನ್ನ ಶ್ರಮವೂ ಸಾರ್ಥಕವಾದೀತು ಎಂದು ತ್ರಿಕಾಲದಲ್ಲಿಯೂ ಭಗವಂತನನ್ನು ಪ್ರಾರ್ಥಿಸುವ,

ಬೆಂಗಳೂರು ನಗರ
ತಾ|| 6-6-34.

ವಿದ್ವಜ್ಜನ ವಿಧೇಯ,
ಕವಿನಾಗಶರ್ಮ.

# ವಿಷಯಾನುಕ್ರಮಣಿಕೆ.


| | ವಿಷಯ. | ಪುಟಸಂಖ್ಯೆ. |
|---|---|---|
| ೧ | ಪೀಠಿಕಾ ಸಂಧಿ ಪ್ರಾರಂಭಃ .... .... | ೧ |
| ೨ | ಎರಡನೆಯ ಸಂಧಿ ಕಥಾ ಪ್ರಾರಂಭ .... .... | ೪ |
| ೩ | ಭೀಮನು ವೃಷಕೇತುವಿಗೆ ಭದ್ರಾವತಿಯ ವಿಚಾರವನ್ನು ಹೇಳುವಿಕೆ | ೧೫ |
| ೪ | ಕುದುರೆಯನ್ನು ತೆಗೆದುಕೊಂಡು ಭೀಮಸೇನನು ಹಸ್ತಿನಾವತಿಗೆ ಬಂದುದು .... .... .... | ೨೧ |
| ೫ | ಶ್ರೀ ಕೃಷ್ಣನು ದ್ವಾರಕಿಗೆ ಬಂದುದು ವೇದವ್ಯಾಸರು ಧರ್ಮರಾಯನಿಗೆ ಧರ್ಮೋಪದೇಶ ಮಾಡಿದುದು .... | ೩೧ |
| ೬ | ಭೀಮಸೇನನು ದ್ವಾರಕಾನಗರಕ್ಕೆ ಬಂದುದು .... | ೪೩ |
| ೭ | ಶ್ರೀಕೃಷ್ಣನು ಪರಿವಾರಸಹಿತ ಹಸ್ತಿನಾವತಿಗೆ ಬಿಜಯಂಗೈದುದು | ೫೦ |
| ೮ | ಯಜ್ಞಾರ್ಥವಾಗಿ ಬಿಟ್ಟ ಕುದುರೆಯು ನೀಲಧ್ವಜನ ಪಟ್ಟಣಕ್ಕೆ ಹೋದುದು .... .... .... | ೫೯ |
| ೯ | ಅಗ್ನಿ ನೀಲಧ್ವಜನಿಗೆ ಅಳಿಯನಾದ ಕಥೆ ಅರ್ಜುನನಿಗೆ ಗಂಗಾಶಾಪ ಬಂದುದು .... .... | ೬೫ |
| ೧೦ | ಅಶ್ವವು ಶಿಲೆಯ ಮೇಲೆ ನಡೆತಂದು ನಡೆಗೆಡುವಿಕೆ .... | ೭೧ |
| ೧೧ | ಸುಧನ್ವನ ಕಥೆ ಪ್ರಾರಂಭ .... .... | ೭೯ |
| ೧೨ | ಅರ್ಜುನ ಸುಧನ್ವರ ಕಾಳಗ .... .... | ೮೫ |
| ೧೩ | ಶ್ರೀಕೃಷ್ಣನು ಅರ್ಜುನನಿಗೆ ಸಾರಥಿಯಾಗಿ ಸುಧನ್ವನನ್ನು ಕೊಲ್ಲಿಸಿದುದು .... .... .... | ೯೨ |
| ೧೪ | ಗರುಡನು ಸುರಥನ ಶಿರಸ್ಸನ್ನು ಪ್ರಯಾಗಕ್ಕೆ ತೆಗೆದುಕೊಂಡು ಹೋದಾಗ ಈಶ್ವರನು ಅದನ್ನು ರುಂಡಮಾಲೆಗೆ ಸೇರಿಸಿಕೊಂಡುದು | ೧೦೧ |
| ೧೫ | ಯಜ್ಞಾಶ್ವವು ಪೆಣ್ಣುದುರೆಯಾಗಿ ಹುಲಿಯಾದ ಕಥೆ .... | ೧೦೬ |
| ೧೬ | ಪ್ರಮೀಳೆಯನ್ನು ಒಡಂಬಡಿಸಿ ಅರ್ಜುನನು ಮುಂದೆಹೊರಟುದು | ೧೧೨ |
| ೧೭ | ಬಭ್ರುವಾಹನನು ಅರ್ಜುನನ ಕುದುರೆಯನ್ನು ಕಟ್ಟಿದಕಥೆ | ೧೧೯ |
| ೧೮ | ರಾಮಾಯಣದ ಕುಶಲವರಕಾಳಗದ ಕಥೆ .... | ೧೨೮ |
| ೧೯ | ಶ್ರೀರಾಮನಿಗೆ ಭರತಲಕ್ಷ್ಮಣರು ನೀತಿಯನ್ನು ಹೇಳಿದುದು | ೧೩೭ |
| ೨೦ | ವಾಲ್ಮೀಕಿಯು ಸೀತೆಯನ್ನು ಆಶ್ರಮಕ್ಕೆ ಕರೆದುಕೊಂಡು ಹೋದುದು .... .... .... | ೧೩೯ |

೨೧ ವಾಲ್ಮೀಕಿಋಷಿಯು ಸೀತೆಯನ್ನು ಕಾಣುವಿಕೆ .... ೧೪೩
೨೨ ಲವನು ರಾಮನ ಅಶ್ವಮೇಧದ ಕುದುರೆಯನ್ನು ಕಟ್ಟಿದುದು ೧೪೭
೨೩ ಶತ್ರುಘ್ನನು ಲವನಮೇಲೆ ಯುದ್ಧಮಾಡಿ ಗೆದ್ದುದು .... ೧೫೦
೨೪ ಲಕ್ಷ್ಮಣನು ಕುಶಲವರಮೇಲೆ ಯುದ್ಧಕ್ಕೆ ಬಂದುದು .... ೧೫೩
೨೫ ಲವನು ಸೂರ್ಯನನ್ನು ಪ್ರಾರ್ಥಿಸಿ ಬಿಲ್ಲನ್ನು ಪಡೆದುದು ೧೫೪
೨೬ ಕುಶನೊಡನೆ ಯುದ್ಧಮಾಡಿ ಲಕ್ಷ್ಮಣನು ಮೂರ್ಛೆಹೋದುದು ೧೫೫
೨೭ ಭರತನು ಕುಶಲವರಮೇಲೆ ಯುದ್ಧಕ್ಕೆ ಬಂದುದು .... ೧೫೯
೨೮ ಶ್ರೀರಾಮರು ಲವಕುಶರಮೇಲೆ ಯುದ್ಧಮಾಡಿದುದು.... ೧೬೧
೨೯ ಮಕ್ಕಳಿಂದ ಮೂರ್ಛಿತನಾದ ರಾಮನು ವಾಲ್ಮೀಕಿಯಿಂದ ಎಚ್ಚರ
ಗೊಂಡು ಅಯೋಧ್ಯೆಯನ್ನು ಸೇರಿ ಯಜ್ಞವನ್ನು ಪೂರೈಸುವಿಕೆ ೧೬೫
೩೦ ಶ್ರೀರಾಮನು ಸೀತೆಯೊಡನೆ ಕೂಡಿ ಯಜ್ಞ ಮಾಡಿದುದು ೧೬೮
೩೧ ಬಭ್ರುವಾಹನ ಪ್ರದ್ಯುಮ್ನರ ಯುದ್ಧ .... ೧೭೦
೩೨ ಬಭ್ರುವಾಹನನು ವೃಷಕೇತುವನ್ನೂ ಅರ್ಜುನನನ್ನೂ
ಕೊಂದುದು .... .... .... ೧೭೭
೩೩ ವೃಷಕೇತು ಬಭ್ರುವಾಹನರ ಕಾಳಗ.... .... ೧೭೯
೩೪ ಕೃಷ್ಣಾರ್ಜುನರನ್ನು ಗೆದ್ದು ತಾಮ್ರಧ್ವಜನು ಕುದುರೆಯನ್ನು
ತಂದೆಗೊಪ್ಪಿಸಿದುದು .... .... .... ೨೦೦
೩೫ ತಾಮ್ರಧ್ವಜ ಅನಿರುದ್ಧರ ಯುದ್ಧ .... .... ೨೦೨
೩೬ ಅರ್ಜುನ ತಾಮ್ರಧ್ವಜರ ಯುದ್ಧ .... .... ೨೦೪
೩೭ ತಾಮ್ರಧ್ವಜನಿಂದ ಕೃಷ್ಣಾರ್ಜುನರು ಮೂರ್ಛೆಹೋದುದು ೨೦೬
೩೮ ಮಯೂರಧ್ವಜನು ವೇಷಧಾರಿಯಾದ ವಿಷ್ಣುವಿಗೆ ತನ್ನ
ಅರ್ಧ ದೇಹವನ್ನು ಕೊಯ್ದುಕೊಟ್ಟುದು .... ೨೦೮
೩೯ ಅರ್ಜುನನು ಕುದುರೆಯೊಡನೆ ಸಾರಸ್ವತಪುರವನ್ನು ಹೊಕ್ಕು
ವೀರವರ್ಮನನ್ನು ಗೆದ್ದುದು .... .... ೨೧೯
೪೦ ಅರ್ಜುನನಿಗೆ ಶ್ರೀಕೃಷ್ಣನು ಯಮನ ವೃತ್ತಾಂತವನ್ನು
ಹೇಳಿದುದು .... .... .... ೨೨೧
೪೧ ಮುಂದೆ ಹೊರಟ ಕುದುರೆಯು ಮಾಗೀಕಾಲದಲ್ಲಿ ಕಾಣಿಸದೆ
ಮಾಯವಾಗಲು ನಾರದರು ಅರ್ಜುನನಿಗೆ ಅದನ್ನು ತಿಳಿಸುವಿಕೆ ೨೨೭

೪೨ ನಾರದರು ಅರ್ಜುನನಿಗೆ ಚಂದ್ರಹಾಸನ ಕಥೆಯನ್ನು ಹೇಳಿದುದು ೨೨೯

೪೩ ಕುಳಿಂದನು ಚಂದ್ರಹಾಸನನ್ನು ಕಂಡುದು .... ೨೩೨

೪೪ ದುಷ್ಟಬುದ್ಧಿಯು ಚಂದ್ರಹಾಸನನ್ನು ಕುಂತಳಪುರಕ್ಕೆ ಕಳುಹಿಸಿದುದು .... .... .... ೨೩೫

೪೫ ಚಂದ್ರಹಾಸನ ದಿಗ್ವಿಜಯ .... .... ೨೩೬

೪೬ ದುಷ್ಟಬುದ್ಧಿಯು ಚಂದನಾವತಿಗೆ ಬಂದುದು .... ೨೩೯

೪೭ ವಿಷಯೆ ಚಂದ್ರಹಾಸನ ಸೆರಗಿನಲ್ಲಿದ್ದ ಪತ್ರವನ್ನು ತಿದ್ದಿದ ಕಥೆ ೨೪೩

೪೮ ಚಂದ್ರಹಾಸನು ಕುಂತಳಪುರಕ್ಕೆ ಬಂದುದು .... ೨೪೯

೪೯ ಚಂದ್ರಹಾಸನು ವಿಷಯೆಯನ್ನು ವರಿಸಿದಮೇಲೆ ಮಡಿದ ಮೈದುನನನ್ನೂ ಮಾವನನ್ನೂ ಬದುಕಿಸಿದುದು .... ೨೫೧

೫೦ ಚಂಡಾಲರು ಚಂಡಿಕಾಲಯದಲ್ಲಿ ಮದನನನ್ನು ಕೊಂದುದು ೨೫೬

೫೧ ಚಂದ್ರಹಾಸನಿಗೂ ಚಂಪಕಮಾಲಿನಿಗೂ ಮದುವೆ ಮತ್ತು ಕುಂತಳರಾಜ್ಯದ ಪಟ್ಟಾಭಿಷೇಕ .... .... ೨೫೮

೫೨ ಬಕದಾಲ್ಭ್ಯರ ಕಥೆ .... .... .... ೨೬೫

೫೩ ಕೃಷ್ಣಾರ್ಜುನರು ಬಕದಾಲ್ಭ್ಯರೊಡನೆ ಹಸ್ತಿನಾಪುರಕ್ಕೆ ಬಂದುದು ೨೬೫

೫೪ ಧರ್ಮರಾಯನು ಯಜ್ಞವನ್ನು ಪ್ರಾರಂಭಿಸಿದುದು .... ೨೭೪

೫೫ ಅಶ್ವಸಂಜ್ಞಪನ ಅವಭೃತಾದಿಗಳು .... .... ೨೭೮

ಶ್ರೀರಸ್ತು.

ಶ್ರೀ ಕೃಷ್ಣಾಯ ನಮಃ.

ಕನ್ನಡ ವಚನ

# ಜೈಮಿನಿಭಾರತ ಕಥಾಸಂಗ್ರಹ.

## ಪೀಠಿಕಾ ಸಂಧಿ ಪ್ರಾರಂಭಃ.

ವೃತ್ತಂ || ಶ್ರೀ ಮಹಿಮಾಕರಂ ಸುಖದ ನಾನತರಿಂ ಗಭಯಂ ಕರಂ |
ಕಾಮರಿಪು ಪ್ರಿಯಂ ಗಿರಿಸುತಾ ಮುದ ನೀರಧಿ ಭಕ್ತವತ್ಸಲಂ ||
ಸೋಮಕಳಾ ವಿರಾಜಿತ ಕಿರೀಟ ನನಾಮಯ ನಾರ್ಯರಕ್ಷಕಂ !
ಪ್ರೇಮದೆ ಪಾಲಿಕೆಮ್ಮ ನನಿಶಂ ಕವಿನಾಗ ನುತಂ ವಿನಾಯಕಂ ||೧||

ಕಂದ || ಕವಿಯ ಮನೋ ಭಾವದೊಳಿರ |
ದವತರಿಸಿದ ಪರಿಯ ನರಿದು ಪದದರ್ಥಗಳಂ ||
ಸುವಿವೇಕದೆ ಸಂಘಟಿಸುತೆ |
ಸವಿ ನುಡಿಯಿಂ ದೊರೆದೆ ನಲ್ತೆ ಜೈಮಿನಿ ಕಥೆಯಂ ||೨||

ಶ್ರೀ ಕಾಂತೆಯ ನಯನ ಚಕೋರಗಳು ಅರಳಿ ನಲಿಯುತ್ತಿರಲು, ಭಕ್ತರ ಮನಃಕುಮುದಗಳು ಅರಳುತ್ತಿರಲು, ಭೂಲೋಕದ ಭಾಗ್ಯನಿಧಿಯಾದ ಕ್ಷೀರಾರ್ಣವವು ಮೇರೆವರಿದುಕ್ಕುತ್ತಿರಲು, ಸದಾ ಸರಸಪೂರ್ಣವಾದ ಕರುಣಾಮೃತದಿಂದ ಕೂಡಿ, ಹುಸಿನಗೆಯೆಂಬ ಬೆಳ್ದಿಂಗಳನ್ನು ವಿಸ್ತರಿಸುತ್ತಿರುವ ದೇವಪುರದ ಶ್ರೀ ಲಕ್ಷ್ಮೀಶನ ಮುಖಚಂದ್ರನು ನಮಗೆ ಆನಂದವನ್ನುಂಟುಮಾಡಲಿ ?

---

ನಮ್ಮಲ್ಲಿ ಕಥೆ, ಕಾವ್ಯ, ಪುರಾಣ, ನಾಟಕ, ಯಕ್ಷಗಾನಗ್ರಂಥ, ಜ್ಯೋತಿಷ್ಯ, ವೈದ್ಯ, ಧರ್ಮಶಾಸ್ತ್ರ ಮುಂತಾದ ಗ್ರಂಥಗಳೂ ಸ್ಕೂಲ್‌ಪುಸ್ತಕಗಳೂ ಮತ್ತು ಪ್ರತಿ ವರ್ಷವೂ ಆಗುವ ನಾಲ್ಕು ನಮೂನೆಯ ಪಾಕೆಟ್ ಡೈರಿಗಳು ಕ್ಯಾಲೆಂಡರ್‌ಗಳೂ ಸಹಾ ದೊರೆಯುವವು.

ನಮ್ಮ ವಿಳಾಸ:—ಟಿ. ಕೆ. ಕೃಷ್ಣಸ್ವಾಮಿಶೆಟ್ಟಿ,
ಕಳಾನಿಧಿ ಬುಕ್‌ಡಿಪ್ಪೊ ಪ್ರೊಪ್ರೈಟರ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸರ್ಪವನ್ನೇ ಸರ್ವಾಭರಣವನ್ನಾಗಿ ಮಾಡಿಕೊಂಡು ಪಾವನಸ್ವರೂಪನಾಗಿ, ಮುನಿಮುಖ್ಯರಾದ ನಾರದಾದಿಗಳಿಂದ ನಮಸ್ಕರಿಸಲ್ಪಟ್ಟ ಪಾದಕಮಲ ನೆನಿಸಿ, ಚಂದ್ರಶೇಖರನಾಗಿ ಸರ್ವಮಂಗಳೆಯನ್ನೊಡಗೂಡಿ, ಕೈವಲ್ಯಾಪೇಕ್ಷಿಗ ಳಾದ ಸಕಲ ದೇವತೆಗಳ ಸಂಭಾವನೆಯನ್ನು ಸ್ವೀಕರಿಸುತ್ತ, ಲೋಕಾಭಿವೃ ದ್ಧಿಗೆ ಕಾರಣನಾಗಿ ಮೂರುಕಣ್ಣಿನಿಂದ ಮೂರುಲೋಕಗಳನ್ನೂ ಬೆಳಗುತ್ತಿರುವ ಗಂಗಾಧರನು ನಮ್ಮನ್ನು ಸಲಹಲಿ ? ಉದಯಕಾಲದ ಮುಂಬೆಳಗಿನಂತೆ ಹೊಳೆ ಯುವ ದಂತಕಾಂತಿಯುಳ್ಳವನಾಗಿ, ಸಂಧ್ಯಾರಾಗದಂತೆ ರಾಜಿಸುವ ಸಿಂಧೂರ ತಿಲಕವುಳ್ಳ ಹಣೆಯಿಂದ ಕೂಡಿ, ಎಳೆಬಿಸಿಲಿನ ಕಳೆಯಂತೆ ಹೊಳೆಯುವ ರತ್ನ ಕಿರೀಟವನ್ನು ಧರಿಸಿ, ಉದಯಾದ್ರಿಯ ಸೊಬಗನ್ನು ಹೋಲುತ್ತಿರುವ ಮಂಗ ಳಾಕಾರದಿಂದೊಪ್ಪುವ ಸರ್ವಸಿದ್ಧಿದಾಯಕನಾದ ವಿನಾಯಕನು ನಮಗೆ ನಿರ್ವಿ ಘ್ನತೆಯನ್ನು ದಯೆಪಾಲಿಸಲಿ ? ಮೂರು ಲೋಕಗಳಲ್ಲಿಯೂ ಮಾನ್ಯರಾದ ದೇವತೆಗಳಿಂದ ಸೇವ್ಯಳಾಗಿ ಬ್ರಹ್ಮನಿಗೆ ಪಟ್ಟದರಸಿಯಾಗಿ ವರದೆಯಾಗಿ ಕಲ್ಯಾಣಿ ಯೆನಿಸಿ ನಾಗವೇಣಿಯಾಗಿ ವಾಕ್ಯಾಧಿ ದೇವತೆಯಾದ ಓ ಜಗಜ್ಜನನಿಯಾದ ಶಾರದೆಯೇ ! ಈ ನನ್ನ ಕಾವ್ಯವು ಭೂಲೋಕದಲ್ಲಿ ಸಕಲರಿಂದಲೂ ಆದರಿಸ ಲ್ಪಡುವಂತೆ ನನ್ನ ಮುಖಕಮಲದಲ್ಲಿ ನೀನು ನಿಂತು, ಹುಸಿನಗೆಯಿಂದ ನೋಡಿ, ನಿರ್ಮಲವಾದ ಸುಮತಿಯನ್ನು ಕೊಡು ? ಅನ್ಯರಬಳಿಕೆಗೆ ಸಂದ ಅರ್ಥ ವನ್ನು ನಿರೀಕ್ಷಿಸದೆ ಯತಿಭಂಗಕ್ಕೆ ಅವಕಾಶವನ್ನು ಕೊಡದೆ, ನಿಜವಾದ ಕ್ರಿಯಾ ನ್ವಯಂಗಳಿಗೆ ದೂಷಣೆಯನ್ನು ತಾರದೆ ವಿಶೇಷಗುಣ ಗೌರವವನ್ನು ಮೀರದೆ, ದುರುಕ್ತಿಗಳ್ಗೆ ಸೇರದೆ ಸನ್ಮಾರ್ಗದಲ್ಲಿ ನಡೆಯುವ ಸತ್ಪುರುಷನ ಗಾಂಭೀರ್ಯದಂತಿ ರುವ ಈ ಕಾವ್ಯವನ್ನು ಶಾರದಾದೇವಿಯ ಕರುಣದಿಂದ ಹೇಳುವೆನು, ಸರ್ವರೂ ದೋಷಗಳನ್ನು ತೊರೆದು ಲಾಲಿಸಬೇಕು:—ಛಂದಸ್ಸು, ಕಾವ್ಯಲಕ್ಷಣ, ಅಲಂ ಕಾರ, ಸಭ್ಭಾವ, ನವರಸಗಳಿಂದ ಕೂಡಿ, ಪ್ರಖ್ಯಾತವಾದ ಕಾವ್ಯವು ಸತ್ಕೃತಿ ಯೆನಿಸುವುದು. ಯುಕ್ತಿ ಚಮತ್ಕಾರಗಳಿಲ್ಲದ ಇದು ಅನಾದರಣೀಯವೆಂದು ನನ್ನನ್ನು ಜರಿದು ದಂದುಗದಿಂದ ಕವಿತೆಯನ್ನು ಪೇಳ್ದನೆಂದು ಹಾಸ್ಯಮಾಡದಿ ರುವಂಥ ನಿರ್ಮಲತರವಾದ ವಾಕ್ಯರಚನಾ ಬುದ್ಧಿಯನ್ನು ದೇವಪುರದ ಲಕ್ಷ್ಮೀ ರಮಣನೇ ಕೊಟ್ಟನೆಂದು ತಿಳಿದು, ಸಜ್ಜನರು ಕೇಳಬೇಕು.

ಹದವಾಗಿ ಕಾಸಿ ಹೆಪ್ಪುಹಾಕಿದ ಹಾಲಿನಲ್ಲಿ ಹುದಗಿರುವ ಕೆನೆಯನ್ನು ಕಡೆದು, ರುಚಿಯಾದ ಬೆಣ್ಣೆಯನ್ನು ತೆಗೆದು, ಆನಂದದಿಂದ ಸವಿಯದೆ ಹಾಲಿಗೆ ಹುಳಿಯನ್ನು ಹಿಂಡಿ ಬೆಣ್ಣೆಬಾರದಂತೆ ತಿರುಳನ್ನು ನೀಗಿಕೊಂಡರೆ ಹಾಲು ಕರೆದ ಹಸುವಿಗೇನು ಕೊರತೆ ? ಹೇಳಿದ ಕಾವ್ಯವನ್ನು ಕೇಳಿ, ಪದಾರ್ಥಗಳನ್ನು ತಿಳಿದು ಚೆನ್ನಾಗಿ ಯೋಚಿಸಿ ಭಾವಿಸದೆ ಇದು ಹೊಸಗ್ರಂಥವೆಂದು ಜರಿದು ನಿಂದಿಸಿದರೆ

ಕಾವ್ಯವನ್ನು ರಚಿಸಿದವನ ತಪ್ಪೇನು ? ಏನೂ ಇಲ್ಲ ಆದರಂತೆ ವಿವೇಕಿಗಳು ಮತ್ಸರವನ್ನು ಬಿಟ್ಟು ಕಾವ್ಯವನ್ನು ಲಾಲಿಸಬೇಕು. ಜಾಣರಾದವರು ತಲೆದೂಗಿ ನಲಿಯುವಂತೆ ಇರದಿದ್ದರೆ ಕಾವ್ಯಕ್ಕೆ ಹಾನಿಯುಂಟಾಗುವದೆಂದು ತಿಳಿದು, ಸಂಗೀತ ವಿದ್ಯಾವಿಶಾರದನಾದ ಪಂಡಿತನು ವೀಣೆಯಿಂದ ಗಾನವನ್ನು ನುಡಿಸುವಂತೆ ದೇವಪುರದ ಲಕ್ಷ್ಮೀರಮಣನು ತಾನಾಗಿಯೇ ನನ್ನಮೂಲಕ ಈ ಕಾವ್ಯವನ್ನು ಹೇಳಿಸಿರುವನೆಂದರಿತು ಮಚ್ಚರವನ್ನು ಬಿಟ್ಟು ಸಜ್ಜನ ಶಿರೋಮಣಿಗಳೆಲ್ಲರೂ ಕಾವ್ಯವನ್ನು ಕೇಳಬೇಕು. ದುಷ್ಟಾಹಿಯ ಭಯಂಕರವಾದ ವಿಷವುಳ್ಳ ಮುಖದಿಂದ ನುಂಗಲ್ಪಟ್ಟರೂ ದೋಷಪೂರಿತವಾದರೂ ನಶಿಸಿಹೋದ ಕಲಾಶಕಲಗಳಿಂದ ಕೂಡಿದ್ದರೂ ಚಂದ್ರನಂತೆ ನನ್ನ ಕಾವ್ಯವು ಸುಮನಸ್ಕರಾದವರಿಗೆ ಇಷ್ಟವಾಗದೆ ಇರಲಾರದು. ಅಲ್ಲದೆ ಇದನ್ನು ಅನಿಷ್ಟವೆಂದು ಹೇಳುವವನು ಕಾಮುಕನಾದ ವಿರಹಿಗೂ ಮೋಸಗಾರನಾದ ಕಳ್ಳನಿಗೂ ಸಮನಾಗುವನು. ಮುಖವು ಹೇಗೆ ಇರುವುದೋ ಹಾಗೆಯೆ ಕನ್ನಡಿಯು ಪ್ರತಿಬಿಂಬವನ್ನು ತೋರಿಸುವುದಲ್ಲದೆ ಬೇರೊಂದುಬಗೆಯಾಗಿ ತೋರಿಸುವುದೆ ? ಲೋಕದಲ್ಲಿ ಕನ್ನಡ ನುಡಿಯ ಸೊಬಗನ್ನು ಬಲ್ಲವರು ಹೇಗೆ ಕಾವ್ಯವನ್ನು ರಚಿಸಿದರೋ ಆ ಮಾರ್ಗವೇ ನನಗೆ ಸಮ್ಮತವಾದುದರಿಂದ ಪೂರ್ವಕವಿಗಳಿಗೆ ನಮಸ್ಕರಿಸಿ ಕಾವ್ಯವನ್ನು ಹೇಳುವೆನು.

ಸದ್ಭಕ್ತಿಯಿಂದ ಹೃದಯಕಮಲದಲ್ಲಿ ಲಕ್ಷ್ಮೀಪತಿಯನ್ನು ಧ್ಯಾನಿಸುವ ಭಗವದ್ಭಕ್ತರ ಅನುಗ್ರಹವುಳ್ಳವನಾಗಿ ಪಂಡಿತಮಾನ್ಯನಾಗಿ ಜನರ ಮೆಚ್ಚುಗೆಗೆ ಪಾತ್ರನಾದ ಭರದ್ವಾಜ ಗೋತ್ರದ ಅಣ್ಣಮಾಂಕನಿಗೆ ಮಗನಾಗಿ ಕರ್ಣಾಟ "ಕವಿ ಚೂತವನ ಚೈತ್ರ" ನೆಂಬ ಬಿರುದನ್ನು ಪಡೆದು ಪ್ರಸಿದ್ಧನಾದ ಲಕ್ಷ್ಮೀಶನೆಂಬ ಕವಿಯು ಧರ್ಮಾಶ್ವಮೇಧದ ಕಥೆಯನ್ನು ಕನ್ನಡದಲ್ಲಿ ಜೈಮಿನಿಭಾರತವೆಂಬ ಹೆಸರಿನಿಂದ ರಚಿಸಿದನು. ಉತ್ತಮ ವರ್ಣದಿಂದಕೂಡಿ ರೂಪಸೌಂದರ್ಯವನ್ನು ಪಡೆದು, ಮಧುರತರ ರಸವನ್ನೊಳಗೊಂಡು ಮನೋಹರವಾಗಿ ರಾಜಿಸುತ್ತ ಸುಮನೋನುರಾಗದಿಂದ ಕಿವಿಗಿಂಪಾಗಿ ಹಾಡುತ್ತಿರುವ ಮರಿದುಂಬಿಗಳು (ಷಟ್ಪದಿಗಳು) ವಿದ್ವತ್ಸಭೆಯೆಂಬ ತಾವರೆಗೊಳದಲ್ಲಿ ಸಂತೋಷದಿಂದ ನಲಿದು ನಾಟ್ಯವಾಡದಿರುವುವೆ ? ಎಂಬಂತೆ ನವರಸಾಲಂಕಾರ ಚಿತ್ರಚಮತ್ಕಾರ ಮೃದು ಮಧುರಶೈಲಿಯಿಂದ ಸರ್ವಾಲಂಕಾರ ಸುಂದರವಾಗಿರುವ ಕಾವ್ಯವು ಪಂಡಿತರಿಂದ ಮಾನ್ಯವಾಗದೆ ಇರುವುದೆ ? ಎಂದು ಕವಿಯು ಮಂಗಲಾಚರಣೆ ವಸ್ತುನಿರ್ದೇಶ ಗ್ರಂಥನಿರ್ಮಾಣಪ್ರತಿಜ್ಞೆ ಅಂಕಿತಾನುಮಾದ ಕಾವ್ಯಸ್ವಭಾವಗಳನ್ನು ವಿವರಿಸಿ ಮುಂದೆ ಜೈಮಿನಿಭಾರತದ ಕಥೆಯನ್ನು ವಿವರಿಸುವನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಮಕರಂದ ಮಧುಕರಾಯಮಾನ ಕಲ್ಯಾಣ

ಪುರೀ ನಿಲಯ ಕವಿನಾಗ ಶರ್ಮ ಪ್ರಣೀತ ಜೈಮಿನಿ ಭಾರತ ಕಥಾಸಂಗ್ರಹದಲ್ಲಿ ಪೀಠಿಕಾಧ್ಯಾಯಂ ಸಂಪೂರ್ಣಂ.

# ಎರಡನೆಯ ಸಂಧಿ.

## ಕಥಾ ಪ್ರಾರಂಭ.

ಐವತ್ತು ಕೋಟಿ ಯೋಜನ ವಿಸ್ತಾರವಾದ ಈ ಭೂಮಂಡಲವನ್ನು ಆವರಿಸಿಕೊಂಡಿರುವ ಸಪ್ತಸಮುದ್ರಗಳ ಮಧ್ಯದಲ್ಲಿ ಜಂಬೂದ್ವೀಪವೆಂಬ ಪ್ರಖ್ಯಾತವಾದ ಆರ್ಯಭೂಮಿಯುಂಟು. ಆ ಜಂಬೂದ್ವೀಪದ ಮಧ್ಯಭಾಗದಲ್ಲಿ ಸದಾ ಸುರತಸುಖವನ್ನು ಅನುಭವಿಸಲು, ನೆರೆದಿರುವ ದೇವನಾರಿಯರ ಮೈಬಣ್ಣದ ಹೊಳಪೋ ಅಥವಾ ಕಾರ್ಗಾಲದ ಮಿಂಚಿನ ಸಮೂಹವೋ, ಎನ್ನುವಂತೆ ಸುವರ್ಣಾದ್ರಿಯು ಕಂಗೊಳಿಸುತ್ತಿರುವುದು. ಆ ಕನಕಾದ್ರಿಗೆ ದಕ್ಷಿಣಭಾಗದಲ್ಲಿ ಚಂದ್ರವಂಶದ ಅರಸರ ಆಳ್ವಿಕೆಯಿಂದ ಖ್ಯಾತಿವೆತ್ತ ಹಸ್ತಿನಾಪುರವೆಂಬುದೊಂದುಂಟು. ಅಲ್ಲಿಗೆ ದೊರೆಯಾದ ಜನಮೇಜಯರಾಯನು ಮಹಾಭಾರತದಲ್ಲಿ ಅಶ್ವಮೇಧ ಪರ್ವದ ಕಥೆಯನ್ನು ತಾನು ಸ್ವಸ್ಥಚಿತ್ತನಾಗಿ ಕೇಳಲೆಳಸಿ, ಜೈಮಿನಿ ಮುನೀಶ್ವರನನ್ನು ಕುರಿತು ಹೀಗೆ ಪ್ರಶ್ನೆಮಾಡಿದನು.

ಹಿಂದೆ ಪಾಂಡವರು ಕೌರವರನ್ನು ಜಯಿಸಿ, ಸಾಮ್ರಾಜ್ಯಪದವಿಯನ್ನು ಪಡೆದಮೇಲೆ ಹೇಗೆ ರಾಜ್ಯವನ್ನು ಆಳಿದರು ? ಯಾವ ಯಾವ ಕೆಲಸಗಳನ್ನು ಮಾಡಿದರು ಎಂದು ಹರ್ಷಚಿತ್ತನಾಗಿ ಜನಮೇಜಯರಾಯನು ಬೆಸಗೊಳಲು, ಋಷಿವರ್ಯನಾದ ಜೈಮಿನಿಮುನಿಯು ಕರ್ಣಾನಂದಕರವಾದ ಭಾರತದ ಕಥೆಯನ್ನು ಹೀಗೆ ಹೇಳಲಾರಂಭಿಸಿದನು.

ಎಲೈ ಜನಮೇಜಯನೇ ಕೇಳು ? ಇದು ಪುಣ್ಯಕರವಾದ ಪಾಂಡವರ ಕಥೆ. ದುರ್ಯೋಧನನನ್ನು ಯುದ್ಧದಲ್ಲಿ ಗೆದ್ದಬಳಿಕ, ಧರ್ಮರಾಯನು ತನ್ನ ತಮ್ಮಂದಿರಿಂದೊಡಗೂಡಿ ನಳನಹುಷಾದಿ ರಾಯರಲ್ಲಿ ಲೇಶಮಾತ್ರವೂ ಈ ಗುಣಗಳಿರಲಿಲ್ಲ ಎನ್ನುವಂತೆ ರಾಜ್ಯಭಾರ ಮಾಡಿದನು. ಇಂತಪ್ಪ ಧರ್ಮಪುತ್ರನು ಆಳುತ್ತಿರುವ ದೇಶದಲ್ಲಿ ಕಳವು, ಕೊಲೆ, ಹಾದರ, ಮೋಸ, ಹಗೆತನ, ಹಿಂಸೆ, ಮೃಗಬಾಧೆ, ಹೆದರಿಕೆ, ಶಿಕ್ಷೆ, ಕಷ್ಟ, ನಿಷ್ಠುರ, ಜಗಳ, ನಿಂದೆ, ಕೋಪ, ನೀಚಕಾರ್ಯ, ಗರ್ಜನೆ, ವಂಚನೆ, ಅಪಕೀರ್ತಿ, ವಿಯೋಗ ದುಃಖ, ಆಲಸ್ಯ, ಕ್ರೂರತನಗಳೆಂಬೀ ಗುಣಗಳು ತಲೆದೋರದೆ ಮರೆಯಾಗಿದ್ದವು, ಏನು ಹೇಳಲಿ ? ನೀತಿ ಚಾತುರ್ಯ, ಕೀರ್ತಿಯು ಮಾಂಗಲ್ಯ, ಭೋಗದಿಂದಾದ ಸಂಪ್ರೀತಿ, ಪರಹಿತ,

ವಿನಯ, ಮಂಗಳಕರವಾದ ಐಶ್ವರ್ಯ, ಗೆಲ್ಮೆ, ಯಶಸ್ಸು, ವಿದ್ಯಾವಿಭವ, ಆಯುಸ್ಸು, ಆರೋಗ್ಯ, ಸೌಖ್ಯ, ಅಭಿವೃದ್ಧಿ, ಸತ್ಯ, ಸ್ಥಿರವಾದ ಭಕ್ತಿ, ಜಾತಿಧರ್ಮ, ಆಚಾರನಿಷ್ಠೆ, ಧರ್ಮಜ್ಞತೆ, ಅಷ್ಟೈಶ್ವರ್ಯ, ಶಮೆ, ದಮೆ, ದಯಾ, ದಾನ, ದಾಕ್ಷಿಣ್ಯಂಗಳು ಧರ್ಮರಾಯನ ರಾಜ್ಯದಲ್ಲಿ ಹೆಚ್ಚುತ್ತಿದ್ದುವು. ಕುಟಿಲವು ಹೆಂಗಸರ ಮುಂಗುರುಳಿನಲ್ಲಿಯೂ, ಚಂಚಲವು ಕುಡಿನೋಟದ ಜೆಡಗಿನಲ್ಲಿಯೂ, ಕಾಠಿಣ್ಯವು ಮೊಲೆಗಳಲ್ಲಿಯೂ, ಬಡತನವು ನಡುವಿನಲ್ಲಿಯೂ, ಮಾಂದ್ಯವು ನಡಿಗೆಯಲ್ಲಿಯೂ ಕಾಣುತ್ತಿದ್ದಿತು. ಅಲ್ಲದೆ ಮದದಿಂದ ಮೆರೆಯುವುದು, ಸಂಕೋಲೆಯಿಂದ ಕೊರಗುವುದು, ಹರಿಯಲ್ಲಿ ದ್ವೇಷ, ಬುದ್ಧಿಮಾಂದ್ಯ ಮೊದಲಾದವು ಆನೆಗಳ ಗುಂಪಿನಲ್ಲಲ್ಲದೆ ಧರ್ಮರಾಯನ ನಾಡಿನಲ್ಲಿರಲಿಲ್ಲ. ಗರುಡನಲ್ಲಿ ಅಹಿತತ್ವ, ಅರಣ್ಯದಲ್ಲಿ ದಾನವಾರಣ, ಹವಳದ ಮಣಿಯಲ್ಲಿ ಸದಾರುಣತ್ವ, ಸರೋವರದಲ್ಲಿ ಕಲಹಂಸಮಯವು, ನಳಿನಾಕ್ಷಿಯರ ಕೊರಳಿನಲ್ಲಿ ಹಾರವಲಯವು, ಮರ ಗಿಡಗಳಲ್ಲಿ ಅನೇಕಾಗ್ರತೆಗಳು, ನಂದನವನದಲ್ಲಿ ಮಹಾಶೋಕವು, ಚೈತ್ರ ಮಾಸದಲ್ಲಿ ಮಾರಹಿತವಲ್ಲದೆ ಧರ್ಮನಂದನನ ರಾಜ್ಯದಲ್ಲಿ ಕಾಣುತ್ತಿರಲಿಲ್ಲ. ಆತಪತ್ರವನ್ನು ಕೊಡೆಯೆಂದೂ, ಹೊಟ್ಟೆಯನ್ನು ಪೊಡೆಯೆಂದೂ, ದಧಿಮಂಥನವನ್ನು ಕಡೆಯೆಂದೂ, ದುಂಬಿಗಳನ್ನು ಅಳಿಯೆಂದೂ, ನೀರಿನ ಹೊನಲನ್ನು ತೊರೆಯೆಂದೂ, ಒಗೆದ ಬಟ್ಟೆಯನ್ನು ಮಡಿಯೆಂದೂ, ತಲೆಗೂದಲನ್ನು ಮುಡಿಯೆಂದೂ ಪಟ್ಟವಾಗಿ ಮುಚ್ಚಿಕೊಂಡಿರುವ ನೋಡವನ್ನು ಜಡಿಯೆಂದೂ, ಕಲ್ಲನ್ನು ಅರೆಯೆಂದೂ ಹೇಳುತ್ತಿದ್ದರಲ್ಲದೆ ಬೇರೆ ಅರ್ಥದಲ್ಲಿ ಆ ಮಾತುಗಳನ್ನು ಬಳಸುತ್ತಿರಲಿಲ್ಲ. ಎಲ್ಲರೂ ಭೋಗಿಗಳು ಪಾತಾಳವಾಸಿಗಳಲ್ಲ. ಸರ್ವರೂ ವಿದ್ಯಾಧರರು ದೇವತೆಗಳಲ್ಲ. ಅಷ್ಟರೂ ದಾಕ್ಷಿಣ್ಯವರ್ತಿಗಳು. (ದಕ್ಷಿಣದಿಕ್ಕಿನಲ್ಲಿರುವವರು) ಲಂಕಾವಾಸಿಗಳಲ್ಲ. ಸಕಲರೂ ಸುಮನೋರತರು ದುಂಬಿಗಳಲ್ಲ. ಅಖಿಲರೂ ಗುಣದಿಂದ ಕೂಡಿದವರು ಕ್ರೂರಿಗಳಲ್ಲ. ಮನುಷ್ಯರೆಲ್ಲರೂ ಕಾಂತಾರ ಮಿತಭೋಗಿಗಳಾದರೂ ನೀಚರೆಂದೆನಿಸದೆ ಸತ್ಖ್ಯಾತಿಯನ್ನು ಪಡೆದಿದ್ದರು. ವಸುಗಣಕ್ಕೆ ಉಪಭೋಗ್ಯವಾಗದೆ ಆರೋಗ್ಯಕರವಾದ ಸೌರಭ್ಯದಿಂದ ಕೂಡಿರದೆ ಸದಾ ಸುಮನಸರಿಗೆ ಅನುರಾಗವನ್ನು ಹುಟ್ಟಿಸದೆ ಶ್ರೀ ಮಹಾ ವಿಷ್ಣುವಿನ ವಿಭವದಂತೆ ಶ್ಲಾಘ್ಯವಾಗದೆ ಮನೋಹರವಾದ ಅಪ್ಸರೋದ್ಯಾನದ ಸೊಬಗನ್ನು ಮೀರಿಸದೆ ರಂಜಿಸುವ ರಾಜೇಂದ್ರನಿಗೆ ಆವಾಸಸ್ಥಾನವಾಗಿರದೆ ಸುಖದ ನೆಲೆ ವೀಡೆನಿಸದೆ ಇದ್ದರೆ ಚದುರರಾದ ಪಂಡಿತರು ಹಸ್ತಿನಾವತಿಯನ್ನು ಇಂದ್ರನ ಅಮರಾವತಿಗೆ ಸರಿಯೆಂದು ಹೋಲಿಸುತ್ತಿದ್ದರೆ? ಎಂಬಂತೆ ಧರ್ಮರಾಯನ ರಾಜಧಾನಿಯು ಸೊಬಗು ಮೂರುಲೋಕವನ್ನು ಮೀರಿಸುತ್ತಿದ್ದಿತು. ಹೀಗಿರುವ ರಾಜಧಾನಿಯಲ್ಲಿ ರಾಜ್ಯವಾಳುತ್ತಿದ್ದ ಧರ್ಮ

ರಾಯನ ಕೀರ್ತಿಯು ಐರಾವತವನ್ನು ತಿರಸ್ಕರಿಸಿ, ನಾಗರಾಜನನ್ನು ನಾಚುವಂತೆ ಮಾಡಿ ಕೈಲಾಸವನ್ನು ಅಚ್ಚರಿಪಡಿಸಿ ಶುಭ್ರವಾಗಿ ರಾಜಿಸುತ್ತಿರುವ ಕ್ಷೀರಸಮುದ್ರವನ್ನು ಜಡರಾಶಿಯಲ್ಲಿ ಸೇರಿಸಿ, ಮುಕ್ತಿದಾಯಕನಾದ ಶ್ರೀ ಕೃಷ್ಣನ ಶಂಖವನ್ನು ಟೊಳ್ಳುಗಳೆದು ತಿರಸ್ಕರಿಸಿ, ದೇವಗಂಗೆಯನ್ನು ಸ್ಥಾನ ಭ್ರಷ್ಟಳನ್ನಾಗಿ ಮಾಡಿ, ಮೂರುಲೋಕದಲ್ಲಿಯೂ ತನಗಿಂತ ನಿರ್ಮಲವಾದ ವಸ್ತುವೇ ಇಲ್ಲವೆಂಬಂತೆ ಹೊಳೆಯುತ್ತಿದ್ದಿತು.

ಹೀಗೆ ಕೀರ್ತಿನಿರ್ಮಲನಾಗಿ ಹೊಳೆಯುತ್ತಿರುವ ಧರ್ಮರಾಯನನ್ನು ಭೂಲೋಕದ ಜನರು ನಾರಾಯಣನಂತೆ ಬಲಯುತನೆಂದೂ, ಈಶ್ವರನಂತೆ ರಾಜಶೇಖರನೆಂದೂ, ಬ್ರಹ್ಮನಂತೆ ಚತುರಾನನನೆಂದೂ, ಸಮುದ್ರರಾಜನಂತೆ ರತ್ನಾಕರನೆಂದೂ, ಚಂದ್ರನಂತೆ ಕುವಲಯಾನಂದಕರನೆಂದೂ ಸೂರ್ಯನಂತೆ ನಿರ್ದೋಷಿಯಾದವನೆಂದೂ, ದೇವೇಂದ್ರನಂತೆ ಸುರಭಿಸಂಸೇವ್ಯನೆಂದೂ, ಹೊಗಳುತ್ತಿದ್ದರು, ಒಂದಾನೊಂದುದಿನ ವೇದವ್ಯಾಸಮುನಿಯು ಹಸ್ತಿನಾಪುರಕ್ಕೆ ಬಂದನು. ಆಗ ಧರ್ಮರಾಯನು ತಮ್ಮಂದಿರೊಡಗೂಡಿ ಬಂದ ಮುನಿವರ್ಯನನ್ನು ಸತ್ಕರಿಸಿ ಮಣಿದೆರಗಲು, ಆಶೀರ್ವದಿಸಿ ಹರಸುತ ತಲೆದಡವಿ ಮಂತ್ರಾಕ್ಷತೆಗಳನ್ನಿತ್ತು ಕುಳಿತುಕೊಂಡು ಉರಿಬಿಸಿಲಬೇಗೆಯಿಂದ ಬಾಡಿದ ಬಳ್ಳಿಯಂತೆ ಕಾಂತಿಗೆಟ್ಟ ಮುಖವುಳ್ಳ ಧರ್ಮರಾಯನನ್ನು ಕಂಡು, ವೇದವ್ಯಾಸನು ಎಲೈ ಧರ್ಮರಾಯನೇ ! ಸಕಲ ಸಾಮ್ರಾಜ್ಯಪದವಿಯನ್ನು ವಹಿಸಿರುವ ನೀನು ಸಂತೋಷವನ್ನು ತೊರೆದು ಖಿನ್ನನಾಗಿರುವದಕ್ಕೆ ಕಾರಣವೇನು ಎಂದು ಕೇಳಿದನು. ಜೀಯಾ ! ನನ್ನ ಮನಸ್ಸಂತಾಪದಿಂದ ದೇಹವು ಬೆಂದು ಬೆಂಡಾಗಿಹೋಗಿದೆ. ನಾನು ಈ ದುಃಖವನ್ನು ಸಹಿಸಲಾರೆ ಎಂದು ನುಡಿಯಲು ವ್ಯಾಸಮುನಿಯು ಇಂತೆಂದನು.

ಆಯ್ಯಾ ! ಮುತ್ತಿದ ಕತ್ತಲೆಯಲ್ಲಿ ಹೊತ್ತು ಕಾಣದೆ ಹೋದರೆ ಸೂರ್ಯನಿಗೆ ಬೆಳಕನ್ನು ತೋರಿಸುವರು ಯಾರು ? ಬೇಸಗೆಯ ಬಿಸಿಲಿಗೆ ಗಾಳಿಯೆ ಬೆವರಿದರೆ ಬೀಸಣಿಗೆಯಿಂದ ಬೀಸುವರು ಯಾರು ? ಮೋಸದ ವಿಷಕ್ಕೆ ಗರುಡನೆ ಹೆದರಿಕೊಂಡರೆ ವಿಷಹರ ಮಂತ್ರವನ್ನು ಹಾಕುವರು ಯಾರು ? ಉಕ್ಕಿಬರುವ ದುಃಖಪರಂಪರೆಗೆ ಮನಸ್ಸನ್ನು ಕೊಟ್ಟರೆ ನಿನ್ನನ್ನು ಕಾಪಾಡುವರಾರು ? ಎಂದು ಕೇಳಲು, ಧರ್ಮಪುತ್ರನು ವ್ಯಾಸಮುನಿಯ ಮುಖವನ್ನು ನೋಡಿ ಸ್ವಾಮಿ ! ನನ್ನ ದುಃಖವನ್ನು ಹೇಗೆ ಸಹಿಸಲಿ ! ಚಿಕ್ಕಂದಿನಿಂದ ಸಾಕಿದ ಭೀಷ್ಮರಿಗೆ ದ್ರೋಹಮಾಡಿ, ಅಣ್ಣನೆಂದರಿಯದೆ ಕರ್ಣನನ್ನು ಕೊಲ್ಲಿಸಿದೆ, ತಿಳಿದಂತೆ ಗುರುವಧೆಯನ್ನು ಮಾಡಿದೆ, ದುರ್ಯೋಧನ ಶಲ್ಯ ಮೊದಲಾದ ನೆಂಟರನ್ನು ಕೊಲ್ಲಿಸಿದೆ ಇನ್ನು ನಾನು ಬಾಳಬಹುದೆ ? ಹಾಗೂ ಬಾಳಿ ಫಲವೇನು ? ಶಿಷ್ಯರಿ

ಲ್ಲದ ಗುರುವಿನಂತೆಯೂ, ಪಾಂಡಿತ್ಯವಿಲ್ಲದ ಬ್ರಾಹ್ಮಣನಂತೆಯೂ, ಹವಿರ್ಭಾಗ
ವಿಲ್ಲದ ಅಗ್ನಿಯಂತೆಯೂ, ನೀರಿನಾಸರೆಯಿಲ್ಲದ ಬೇಸಾಯದಂತೆಯೂ, ತನ್ನ
ನೆಂಟರಿಷ್ಟರಿಂದೊಡಗೂಡಿ ಬಾಳದ ಮನುಷ್ಯನ ಸಂಸಾರದಿಂದೇನು ಪ್ರಯೋ
ಜನ ? ಸಾಯುವವರೆಗೂ ಕಾಡಿನಲ್ಲಾದರೂ ಇದ್ದರೆ ಲೇಸು. ಅಶಾಶ್ವತ
ವಾದ ದೇಹಸುಖವನ್ನು ಬಯಸಿ ಸದ್ಗತಿಯನ್ನು ಕೆಡಿಸಿಕೊಂಡು, ಹಮ್ಮು ಹಗೆ
ತನದಿಂದ ನೆಂಟರನ್ನು ಕೊಂದ ಪಾಪವೆಂಬ ಮರವು ವಿಷರೂಪದಿಂದ ಬೆಳೆದು
ಪರದಲ್ಲಿ ಫಲಿಸದೆ ಇರಲಾರದು. ನಾನು ರಾಜ್ಯಭಾರ ಮಾಡಿದರೂ ಕೀರ್ತಿಯು
ಕೆಡದಿರಲಾರದು. ಆದುದರಿಂದ ಈ ದೊರೆತನವನ್ನು ಬಿಟ್ಟು ಚಿತ್ತಶುದ್ಧಿಯಿಂದ
ಶ್ರೀಕೃಷ್ಣಮೂರ್ತಿಯನ್ನು ಭಜಿಸುವೆನು, ಎಂದು ಬಿನ್ನೈಸಲು ಬಾದರಾಯ
ಣನು ಆತನ ಮನೋಭಾವವನ್ನು ತಿಳಿದು ತಲೆದೂಗಿ ಧರ್ಮರಾಯ ! ನೀನು
ಶಾಸ್ತ್ರಾಗಮ ಪುರಾಣ ಪ್ರವಚನಗಳನ್ನು ಬಲ್ಲ ಪ್ರೌಢನೇಹೊರತು ಮೂಢನಲ್ಲ.
ಮನೋವ್ಯಾಕುಲದಿಂದ ಘನತರವಾದ ರಾಜ್ಯವನ್ನು ಧರ್ಮದಿಂದಾಳಲಾರದೆ
ಅರಣ್ಯವನ್ನು ಹೊಕ್ಕರೆ ಯಾವಪುಣ್ಯ ಉಂಟಾಗುವುದು ? ಎನಲು ಯುಧಿಷ್ಠಿ
ರನು ಸ್ವಾಮಿ! ದೊರೆತನವಾಯಿತೆಂಬ ಆನಂದವೆ ನನಗಿಲ್ಲ. ಭೀಷ್ಮ, ದ್ರೋಣ,
ಕರ್ಣ, ಶಲ್ಯ, ಕೌರವಾದಿಗಳಿಲ್ಲದ ಬಳಿಕ ಈ ರಾಜ್ಯವನ್ನು ಭೀಮನಿಗೆ ವಹಿಸಿ,
ದಾಯಾದ ವಧೆಯಿಂದ ಅಪವಿತ್ರವಾದ ದೇಹವನ್ನು ಕಾಡಿಗಟ್ಟುವೆನೆಂದು
ಹೇಳಲು, ವ್ಯಾಸಮುನಿಯು ನಕ್ಕು ಇಂತೆಂದನು.

ರಾಜಧರ್ಮವನ್ನು ವಿಚಾರಿಸಿದರೆ ನಿನಗೆ ಗೋತ್ರವಧೆಯ ದೋಷ
ವುಂಟೇ ? ನೀನು ರಾಜ್ಯವಾಳುವುದನ್ನು ಬಿಟ್ಟರೆ ಪರಿಶುದ್ಧನಾಗುವೆಯಾ !
ಓಹೋ ನನಗೆ ತಿಳಿಯದು ? ನಿನ್ನ ದೇಹವನ್ನು ಅಡವಿಗಟ್ಟುವ ಸೂತ್ರವು
ಯಾವ ಧರ್ಮಶಾಸ್ತ್ರದಲ್ಲಿ ಹೇಳಿದೆ? ಆಗಲಿ ನೀನು ಕಾಡಿಗೆ ಹೋಗು ನಾನು ಭೀಮ
ನಿಗೆ ರಾಜ್ಯವನ್ನು ಕೊಡುವೆನು ? ಧರ್ಮಜ ನೀನು ಹೀಗೆ ಹುಚ್ಚನಂತೆ
ಆಡುತ್ತಿದ್ದರೆ ಪಂಡಿತರು ಮೆಚ್ಚುವರೆ ? ಸಾಕು. ನಿನ್ನ ವಂಶದರಸುಗಳು
ಉತ್ತಮಯಾಗಗಳನ್ನು ಮಾಡಿ ಪ್ರಸಿದ್ಧಿಗೆ ಬಂದರು. ಆದಕಾರಣ ನೀನು
ಸತ್ಕೀರ್ತಿಗೋಸ್ಕರ ಯಜ್ಞಯಾಗಾದಿಗಳನ್ನು ಮಾಡಿದರೆ ಗೋತ್ರವಧೆಯ
ಪಾಪವು ನಾಶವಾಗಿ ನೀನು ಪರಿಶುದ್ಧನಾಗುವೆ ? ನನ್ನ ಮಾತನ್ನು ಕೇಳು
ಎನಲು ಧರ್ಮರಾಯನು ಹಾಗಾದರೆ ನಿನ್ನ ಕರುಣಾಕಟಾಕ್ಷದಿಂದ ನಾನೆ ಧೊರೆಯಾ
ಗಿರುವೆನು ? ದಾಯಾದಿಗಳನ್ನು ಕೊಂದ ಪಾಪವು ಯಾವ ಕರ್ಮದಿಂದ ನಾಶ
ವಾಗುವದು. ಸದಾಚಾರಕ್ಕೆ ಕುಂದುಂಟಾಗದ ಅಂಥ ಕರ್ಮಯಾವುದು ?
ಅದನ್ನು ನನಗೆ ತಿಳಿಸಬೇಕೆಂದು ಬೇಡಿಕೊಳ್ಳಲು ? ವ್ಯಾಸಮುನಿಯು ಮತ್ತೆ
ಇಂತೆಂದನು.

ಧರ್ಮಜನೆ ! ಯೋಚಿಸಬೇಡ ! ಹಿಂದೆ ಶ್ರೀರಾಮನು ಅಶ್ವಮೇಧಯಾಗ ಮಾಡಿ ಬ್ರಾಹ್ಮಣರನ್ನು ದಣಿಸಿದನು. ನೀನು ಅವನಂತೆ ಯಾಗವನ್ನು ಮಾಡಿದರೆ ನಿನಗೆ ಸಮಾನರಾದವರು ಲೋಕದಲ್ಲೆಲ್ಲಿಯೂ ಇಲ್ಲವೆನಲು ಧರ್ಮರಾಯನು ಆ ಯಾಗಕ್ಕೆ ಲಕ್ಷಣವಾವುದು ? ಅದನ್ನು ಮಾಡುವುದು ಹೇಗೆ ? ಎಷ್ಟು ಋತ್ವಿಕ್ಕುಗಳು ಬೇಕು ? ದಕ್ಷಿಣೆಯ ಹಣವು ಎಷ್ಟಾಗಬೇಕು ? ಅದನ್ನೆಲ್ಲ ವಿವರಿಸಿ ಹೇಳು ಎಂದು ಬಿನ್ನೈಸಲು, ವೇದವ್ಯಾಸನು ಅಯ್ಯಾ ಕೇಳು ! ಅಚ್ಚ ಬಿಳುಪಾದ ಮೈಯುಳ್ಳದ್ದಾಗಿ ಹಳದಿಯ ಬಾಲದಿಂದ ಹೊಳೆಯುತ್ತ ಗತಿಚಾತುರ್ಯವನ್ನು ತಿಳಿದು, ಕಪ್ಪಾದ ಒಂದೇ ಕಿವಿಯಿಂದ ಹೊಳೆಯುವ ಕೋಸಲಾಶ್ವವನ್ನು ಸಂಪಾದಿಸಿ ತಂದು ಯಾಗವನ್ನು ಮಾಡಬೇಕೆಂದರೆ ಭೂಲೋಕವನ್ನು ಒಂದೇ ಕೊಡೆಯಿಂದಾಳುವ ರಾಜನಿಗೆ ನಿರಾಯಾಸವಾಗಿ ನೆರವೇರುವುದು.

ಆ ಯಜ್ಞವನ್ನು ಮಾಡುವ ರೀತಿಯನ್ನು ಹೇಳುವೆನು ಕೇಳು ? ಸತ್ಕುಲದಲ್ಲಿ ಹುಟ್ಟಿ ಸತ್ಯಶೌಚ ಆಚಾರಪರರೆನಿಸಿ ವೇದಶಾಸ್ತ್ರಸಂಪನ್ನರಾದ ಇಪ್ಪತ್ತುಸಾವಿರ ಬ್ರಾಹ್ಮಣರಿಗೆ ದೀಕ್ಷಾವಸ್ತ್ರಂಗಳನ್ನಿತ್ತು ಧನಕನಕಾದಿಗಳಿಂದ ಸಂತುಷ್ಟರಪ್ಪಂತೆ ಪೂಜಿಸಿ, ಪ್ರತಿಯೊಬ್ಬರಿಗೂ ಬೇರೆಬೇರೆಯಾಗಿ ಒಂದು ಬಳ್ಳ ಮುತ್ತನ್ನೂ ಅಸಂಖ್ಯಾತವಾಗಿ ಬೆಲೆಬಾಳುವ ಗಜಾಶ್ವ ರಥಂಗಳನ್ನು ಕೊಟ್ಟು, ಉಚಿತವಾದ ತೆರದಿಂದಲಂಕರಿಸಿದ ಗೋಸಹಸ್ರಂಗಳನ್ನು ದಾನಮಾಡಿ, ಒಂದು ಭಾರಪೂರಿತವಾದ ಹನ್ನೆರಡು ಮಣದ ಹೊನ್ನನ್ನು ಸಮರ್ಪಿಸಿ, ಅಷ್ಟುಜನ ಬ್ರಾಹ್ಮಣೋತ್ತಮರಿಂದಲೂ ಸುಖಕರವಾದ ಆಶಿಷವನ್ನು ಪಡೆದು, ಸಭೆಯಲ್ಲಿರುವ ಭೂಸುರರಪ್ಪಣೆಯಂತೆ, ಪ್ರಪಂಚದಲ್ಲಿ ಬಲಶಾಲಿಗಳಾದ ಗಂಡುಗಲಿಗಳಿದ್ದರೆ ಈ ಕುದುರೆಯನ್ನು ಹಿಡಿದು ಕಟ್ಟಬಹುದೆಂಬ ಒಕ್ಕಣೆಯೊಡನೆ ತನ್ನ ಬಿರುದಿನ ಬರೆಹವನ್ನು ಬರೆದು ಪೊಂಬಟ್ಟೆದ ಹಲಿಗೆಯನ್ನು ಕುದುರೆಯ ಹಣೆಗೆ ಕಟ್ಟಿ, ಲೋಕದಲ್ಲೆಲ್ಲ ಸಂಚರಿಸಿಕೊಂಡು ಬರುವಂತೆ ಕುದುರೆಯನ್ನು ಬಿಡಬೇಕು. ಹೀಗೆ ಬಿಟ್ಟ ಕುದುರೆಯು ಒಂದು ವರುಷದವರೆಗೆ ಸ್ವೇಚ್ಛೆಯಾಗಿ ತಿರುಗುತ್ತಿರಲು ಕಂಡಕಂಡ ರಾಜಪುತ್ರರೆಲ್ಲರೂ ಧನಕನಕಗಳನ್ನು ಕುದುರೆಯ ಪಾದದಲ್ಲಿ ಸುರಿದು ಲೋಕವನ್ನು ತೃಪ್ತಿಪಡಿಸುವರು. ಹಾಗಿಲ್ಲದೆ ಶೂರರಾದವರು ಕಟ್ಟಿದರೆ ಹಯರಕ್ಷೆಯ ಬೆಂಗಾವಲಿನವರು ಅದನ್ನು ಬಿಡಿಸಿ ತರಬೇಕು. ಅವರಿಂದ ಸಾಧ್ಯವಾಗದ ಪಕ್ಷದಲ್ಲಿ ಕರ್ತನೇ ಹೋಗಿ ಕಾದಿ ಕುದುರೆಯನ್ನು ಬಿಡಿಸಿಕೊಂಡು ಬಂದು ಮುಂದೆ ನಡೆಸಬೇಕು. ಹೀಗೆ ಆ ಕುದುರೆಯು ಭೂಲೋಕವನ್ನೆಲ್ಲ ತಿರುಗಿಕೊಂಡು ತನ್ನ ನೆಲೆಗೆ ಬಂದು ನಿಂತಮೇಲೆ ಅದುವರೆಗೆ ಅಸಿಪತ್ರವೆಂಬ ಉರುತರ ತಪಸ್ಸನ್ನು ಮಾಡುತ್ತಿದ್ದ ಕರ್ತೃವು ವೇದೋಕ್ತಮಾರ್ಗದಿಂದ ಯಾಗವನ್ನು ಮಾಡಬೇಕು. ಈ ಕೆಲಸವು ನಿನ್ನ ಕೈಲಾಗುವದಾಗಿದ್ದರೆ ಪ್ರಿಯ

ತ್ನಮಾಡೆಂದು ನುಡಿಯಲು ಧರ್ಮರಾಯನು ವ್ಯಾಸಮುನಿಯನ್ನು ಕುರಿತು ಸ್ವಾಮಿಾ! ನನ್ನಲ್ಲಿ ಹಣವಿಲ್ಲ, ಪ್ರಜೆಗಳಿಂದಲಾದರೂ ತೆಗೆದುಕೊಳ್ಳೋಣ ವೆಂದರೆ ಕೌರವರ ಕೋಟಲೆಯಿಂದ ಪ್ರಜಾಸಮೂಹವು ನೊಂದಿರುವುದು, ನೀವು ಹೇಳಿದ ಲಕ್ಷಣಯುಕ್ತವಾದ ಕುದುರೆಯೂ ಇಲ್ಲ, ನನ್ನ ತಮ್ಮಂದಿರು ಘೋರವಾದ ಭಾರತಯುದ್ಧದಲ್ಲಿ ಬಹಳವಾಗಿ ಬಳಲಿರುವುದರಿಂದ ಸಹಾಯ ಕರೂ ಇಲ್ಲ, ಅರ್ಜುನನ ಸಾರಥಿಯಾದ ಶ್ರೀಕೃಷ್ಣನೂ ಹತ್ತಿರದಲ್ಲಿಲ್ಲ, ಹೀಗಿರು ವಲ್ಲಿ ಈ ಯಾಗವು ಹೇಗೆ ನೆರವೇರುವುದು ಹೇಳಿ ಎಂದನು. ಆಗ ಬಾದರಾಯ ಣನು ಕರುಣಾರಸ ಭರಿತಾಂತರಂಗನಾಗಿ ಯುಧಿಷ್ಠಿರಾ! ನೀನು ಇದಕ್ಕಾಗಿ ಯೋಚಿಸಬೇಡ? ನಿನಗೆ ಬೇಕಾದ ಸಹಾಯವನ್ನು ಯಾಗಕ್ಕನುಕೂಲವಾದ ಕುದುರೆಯನ್ನೂ ಸಾಕಾದಷ್ಟು ಹಣವನ್ನೂ ತೋರಿಸುವೆನು. ಹಿಂದೆ ಮರುತ್ತ ರಾಯನು ಅಶ್ವಮೇಧವನ್ನು ಮಾಡಿ, ಬಹಳವಾದ ದ್ರವ್ಯವನ್ನು ಬ್ರಾಹ್ಮಣರಿಗೆ ದಾನಮಾಡಲು ಅವರು ಅದನ್ನು ತೆಗೆದುಕೊಂಡು ಹೋಗುವಾಗ ಹೊರಲಾರದೆ ಹಿಮಾಲಯದಲ್ಲಿ ಬಿಟ್ಟು ಕೈಗೆ ಸಿಕ್ಕಿದಷ್ಟರಲ್ಲೇ ಸಂತುಷ್ಟರಾಗಿ ಹೊರಟುಹೋಗಿ ರುವರು. ಆ ಧನವನ್ನು ನಿರಾಯಾಸದಿಂದ ತಂದು ನೀನು ಉಪಯೋಗಿಸಬಹು ದೆಂದು ಬಿನ್ನೈಸಲು, ಧರ್ಮರಾಯನು ಆಹಾ! ಮೊದಲೆ ಮರುಳಾಗಿರುವವ ನಿಗೆ ಉನ್ಮತ್ತವನ್ನು ತಿನ್ನಿಸಿದಂತೆ ಗೋತ್ರವಧೆಯನ್ನು ನೀಗಿಕೊಳ್ಳುವ ಕಾರ್ಯಕ್ಕೆ ವಿಪ್ರಧನವನ್ನು ತಂದು ಬಳಸಿಕೊಂಡರೆ ಸುಖವುಂಟೇ? ಇಹಪರ ಗಳಲ್ಲಿ ಕೀರ್ತಿಯು ಲಭಿಸುವುದೇ? ಹೇಳು ಎಂದು ನುಡಿಯಲು ವ್ಯಾಸಮು ನಿಯು ಭೂಪಾಲಚೂಡಾಮಣಿಯೇ! ಹಿಂದೆ ಪರಶುರಾಮನು ಸಕಲ ರಾಜನಿಕರ ವನ್ನು ಕೊಂದು ಭೂಮಂಡಲವನ್ನು ಬ್ರಾಹ್ಮಣರಿಗೆ ದಾನ ಕೊಟ್ಟುದನ್ನು ಕಾಣೆಯಾ? ಈ ಲೋಕವೇ ಬ್ರಾಹ್ಮಣರದಲ್ಲವೇ? ಭುಜಬಲವುಳ್ಳ ಕ್ಷತ್ರಿ ಯರೇ ಈ ಲೋಕಕ್ಕೆ ರಾಜರೆನ್ನುವುದರಲ್ಲಿ ಅನುಮಾನವಿಲ್ಲ. ಆ ಹಿಮಾಲಯ ದಲ್ಲಿರುವ ಹಣವು ನ್ಯಾಯವಾಗಿ ಬ್ರಾಹ್ಮಣರಿಗೆ ಸಲ್ಲದು. ರಾಜನಾದ ನಿನ್ನದೇ ಆಗಿರುವುದು ಭದ್ರಾವತಿಗೆ ಧೊರೆಯಾದ ಯೌವನಾಶ್ವನು ಸಲ್ಲಕ್ಷಣ ಯುಕ್ತ ವಾದ ಕುದುರೆಯನ್ನು ಸಾಕುತ್ತಿರುವನು. ಅಂತಹ ಕುದುರೆಯು ನಿನಗೆ ಕಾರ್ಯ ಉಂಟಾಗಿದ್ದರೆ ಸಿಕ್ಕದೆ ಇರುವುದೇ? ಘಟೋತ್ಕಚನ ಮಗನಾದ ಈ ಮೇಘನಾ ದನೂ, ಕರ್ಣನ ಸುತನಾದ ವೃಷಕೇತುವೂ ಶೂರರಲ್ಲವೆ? ನಿನ್ನ ತಮ್ಮಂದಿರು ನಿನ್ನ ಮಾತನ್ನು ಮಿಾರತಕ್ಕವರೇ? ನೀನಾಗಿ ಸ್ಮರಿಸಿದರೆ ಕೃಷ್ಣನು ತಾನಾ ಗಿಯೆ ಬಾರನೇ? ಇದೊಂದು ಮಹತ್ತರವಾದ ಕಾರ್ಯವೆಂದು ಹೆದರದೆ ಯಾಗಕ್ಕೆ ಪ್ರಯತ್ನಿಸು. ಸಕಲ ಸಾಮಗ್ರಿಗಳೂ ದೊರೆಯುವುವು ಎಂದು ಹೇಳಲು

ಧರ್ಮರಾಯನು ಭೀಮನಕಡೆಗೆ ತಿರುಗಿ ನೋಡಿದನು ಆಗ ವಾಯುಪುತ್ರನು ಅಣ್ಣನನ್ನು ಕುರಿತು ಇಂತೆಂದನು.

ಅಣ್ಣಾ . ಹೆದರಬೇಡ ? ಬಾದರಾಯಣನು ಕರುಣದಿಂದ ಹಣವನ್ನೂ ಕುದುರೆಯನ್ನೂ ತೋರಿಸಿರುವನು. ಯಾಗಕ್ಕೆ ಯತ್ನವನ್ನು ಮಾಡು ? ನಾನು ಯೌವನಾಶ್ವವನ್ನು ಗೆದ್ದು ಕುದುರೆಯನ್ನು ತಂದುಕೊಡದಿದ್ದರೆ ಪರಲೋಕ ಬಾಹಿರನಾಗಿ ಹೋಗುವೆನು ಎನಲು ಅದನ್ನು ಕೇಳಿ ರಣರಂಗಭೀಮನಾದ ವೃಷಕೇತುವು ತಾತಾ ! ನನಗೆ ಅಪ್ಪಣೆಕೊಡು ? ಚಿಕ್ಕಪ್ಪನು ಆಡಿದ ಮಾತಿಗೆ ತಪ್ಪುವಂತಾದರೆ ನಾನು ಕರ್ಣಪುತ್ರನಾಗುವೆನೆ ? ನನ್ನ ಪರಾಕ್ರಮವನ್ನು ನೋಡು ಎಂದು ಹೇಳಿದನು. ಆ ಮಾತಿಗೆ ಸಂತೋಷಿಸಿ, ಬಿಗಿಯಪ್ಪಿ ಮುದ್ದಾಡಿ ವತ್ಸಾ ! ನಿನ್ನ ಶೌರ್ಯವನ್ನು ನಾನು ಬಲ್ಲೆ ಮೊದಲು ರಾಜ್ಯಕ್ಕಾಗಿ ಒಡಹುಟ್ಟಿದವನನ್ನು ಕೊಂದು ಅವನ ಮಗನಾದ ನಿನ್ನನ್ನೂ ಕುದುರೆಯನ್ನು ತರಲೋಸುಗ ಈಗ ಯುದ್ಧಕ್ಕೆ ಹೇಗೆ ಕಳುಹಿಸಲಿ ! ಸಾಕು ಆ ಮಾತನ್ನು ಬಿಡು ಎಂದನು.

ವೃಷಕೇತುವು ಜೀಯಾ ! ನಮ್ಮತಂದೆಯು ನಿಮ್ಮೊಡನೆ ಸೌಜನ್ಯದಿಂದಿರದೆ ವೈರವನ್ನು ಬೆಳಸಿದನು. ನಾನು ಆತನು ಮಾಡಿದ ಅಪರಾಧವನ್ನು ಕಳೆಯದಿದ್ದರೆ ಹುಟ್ಟಿ ಫಲವೇನು ? ಕುದುರೆಯನ್ನು ತರಹೋಗುವ ಭೀಮಸೇನನ ಹಗೆಗಳನ್ನು ಯುದ್ಧದಲ್ಲಿ ಕೊಂದು ಕುದುರೆಯನ್ನು ತರುವೆನು ನನಗೆ ನೇಮಿಸೆಂದನು. ಹೀಗೆ ಭೀಮ ವೃಷಕೇತುಗಳು ಮಾಡಿದ ಪ್ರತಿಜ್ಞೆಯನ್ನು ಕೇಳಿದ ಬಳಿಕ ಮೇಘನಾದನು ಧರ್ಮರಾಯನಿಗೆ ನಮಸ್ಕರಿಸಿ ಜೆಯಾ ! ಭದ್ರಾವತಿಗೆ ಹೋಗಿ ಯೌವನಾಶ್ವನ ಸೇನೆಯನ್ನು ಸವರಿ, ಭೀಮಸೇನನೊಡನೆ ಸೆಣಸುವವನು ಇಂದ್ರನಾದರೂ ಅವನನ್ನು ಸಂಹರಿಸಿ, ಕ್ಷಣಮಾತ್ರದಲ್ಲಿ ಕುದುರೆಯನ್ನು ತಂದೊಪ್ಪಿಸುವೆನೆಂದು ಬಿನ್ನವಿಸಿದನು. ಬಳಿಕ ವೃಷಕೇತು ಹೋದರೇನು ? ಮೇಘನಾದನು ಬಂದರೇನು ? ನಾನೇ ಮುಳಿದು ನಿಂತರೇನು ? ಶ್ರೀಹರಿಯ ಕರುಣವಿದ್ದರೆ ಇದೆಲ್ಲ ಕ್ಷಣಮಾತ್ರದಲ್ಲಿ ಕೈಗೂಡುವದು ನನಗೆ ವಿಜಯವೀಳಯವನ್ನಿತ್ತು ಕಳುಹಿಸು ಎಂದು ಭೀಮಸೇನನು ಬೇಡಿಕೊಂಡನು.

ಕೇಳೈ ಜನಮೇಜಯರಾಯನೇ ! ಇಂತು ಭೀಮಸೇನ ವೃಷಕೇತು, ಮೇಘನಾದರು ಕುದುರೆಯನ್ನು ತಂದೊಪ್ಪಿಸಲು ಅಪ್ಪಣೆಯಂ ಬೇಡುತ್ತಿರಲು, ಧರ್ಮರಾಯನು ವ್ಯಾಸಮುನಿಯ ಮುಖವನ್ನು ನೋಡಿ, ನಮಗೆ ಸಾರಥಿಯಾದ ಕೃಷ್ಣನೊಡನೆ ಯೋಚಿಸದೆ ಈದಿನ ನಾನು ಇವರನ್ನು ಕುದುರೆಗಾಗಿ ಕಳುಹಿಸಿದರೆ ಕೃಷ್ಣನಿಗೆ ಮನಸ್ಸು ಬದಲಾಯಿಸುವುದೋ ಇಲ್ಲವೋ ನನಗೆ ತಿಳಿಯದು. ಅದಕ್ಕಾಗಿ ಮುಂದೋರದೆ ಚಿಂತೆಗೊಂಡಿರುವೆನೆನಲು ವ್ಯಾಸಮುನಿಯು ಅಯ್ಯಾ! ನೀನು ಹುಚ್ಚನೇ! ಶ್ರೀಕೃಷ್ಣನು ನಿಮ್ಮಲ್ಲಿ ಕೋಪಿಸು

ವಷ್ಟು ಸಾಮರ್ಥ್ಯವುಳ್ಳವನೆ? ವೃಕೋದರ ವೃಷಕೇತುಗಳ ಪರಾಕ್ರಮವು ಸಾಧಾರಣವಾದುದೆ? ಮೇಘನಾದನು ಅಲ್ಪನೆ? ಹೀಗೇಕೆ ಚಿಂತಿಸುವೆ? ಈಗಲೆ ಇವರಿಗೆ ಸೇನುವನ್ನಿತ್ತು ಕಳುಹು ಎಂದು ಒಡಂಬಡಿಸಲು ಧರ್ಮರಾಯನು ಆ ಮೂವರಿಗೂ ವಿಜಯವೀಳೆಯವನ್ನು ಕೊಟ್ಟನು.

ಅನಂತರದಲ್ಲಿ ಯುಧಿಷ್ಠಿರನನ್ನು ಹರಿಸಿ ಬಾದರಾಯಣನು ತನ್ನ ಆಶ್ರಮಕ್ಕೆ ತೆರಳಿದನು. ಧರ್ಮರಾಯನು ಮನಸ್ಸಿನಲ್ಲಿ ಹೆದರುತ್ತ ಶ್ರೀಕೃಷ್ಣನಿಲ್ಲದೆ ನನ್ನ ಯಾಗವು ಹೇಗೆ ನಡೆದೀತು? ಈಗಲೆ ಅರ್ಜುನನನ್ನು ಕಳುಹಿಸಿ, ಶ್ರೀ ಹರಿಯನ್ನು ಕರೆಸುವೆನೆಂದು ಚಿಂತಿಸುತ್ತಿರಲು ಅಲೆದಲೆದು ಹುಡುಕುತ್ತಿರುವ ರತ್ನವು ಕಾಲಿಗೆ ಸಿಕ್ಕಿದಂತೆ, ರಾಜಶೇಖರನಾದ ಧರ್ಮರಾಯನ ಬಳಿಗೆ ಚಾರಕನೋರ್ವನೈತಂದು ಸ್ವಾಮಿ! ಪರಾಕು. ಯಾದವಾಗ್ರಣಿಯಾದ ಶ್ರೀಧವನು ನಿಮ್ಮ ದರ್ಶನಾರ್ಥವಾಗಿ ಬಂದು ಈ ಪುರಹೊರವಳಯದಲ್ಲಿ ಕಾದುಕೊಂಡಿರುವನೆಂದು ಹೇಳಲು, ಧರ್ಮರಾಯನು ಆತನಿಗೆ ಉಡುಗೆರೆಗಳನ್ನು ಕೊಟ್ಟು, ಭಕ್ತರ ಮನೋಭೀಷ್ಟವನ್ನು ನೆರವೇರಿಸುವುದರಲ್ಲಿ ಶ್ರೀಕೃಷ್ಣನಿಗೆಷ್ಟು ಉತ್ಸಾಹವಿರುವುದೋ ಕಾಣೆ? ಶಿವಶಿವಾ! ಮೂರುಲೋಕಗಳಲ್ಲಿಯೂ ನಾನೇ ಧನ್ಯ ಎಂದು ಹೇಳುತ್ತ ಅರಮನೆಯಿಂದ ಹೊರಟನು. ಈದಿನ ಬೆಳಿಗ್ಗೆ ವ್ಯಾಸಮುನಿಯು ಬಂದು ಅಶ್ವಮೇಧ ಯಾಗವನ್ನು ಮಾಡುವಂತೆ ನಿರೂಪಿಸಿ ಹೊರಟುಹೋದನು. ಸಾಯಂಕಾಲಕ್ಕೆ ಶ್ರೀಕೃಷ್ಣನು ತಾನಾಗಿ ಹಸ್ತಿನಾವತಿಗೆ ಬಂದನೆಂದು ಪಾಂಡವರೆಲ್ಲರೂ ಸಂತೋಷದಿಂದ ವಂದಿಮಾಗಧ ಗಾಯಕರೊಡನೆ ವಾದ್ಯಧ್ವನಿಗಳಿಂದ ಕೈದೀವಿಗೆಯ ಬೆಳಕಿನಲ್ಲಿ ಸ್ವಾಮಿಯನ್ನಿದಿರ್ಗೊಂಡರು. ಹೊಳೆವ ಮಣಿಮಕುಟದ, ಸಾಲುಗೊಂಡ ಅಳಕಾವಳಿಯ, ಚಂದ್ರನಂತಿರುವ ಮುಖದ ತಿದ್ದಿದ ಕಸ್ತೂರಿಯ ತಿಲಕದ, ಮನೋಹರವಾದ ಹುಬ್ಬುಗಳನ್ನು ಆವರಿಸಿಕೊಂಡಿರುವ ಕಣ್ಣೆವೆಯ, ನೀಲವಾದ ಎಳಸುಗಣ್ಣುಗಳ, ಸಂಪಿಗೆಯಂತಿರುವ ಮೂಗಿನ, ಸುಲಿಪಲ್ಲುಗಳನ್ನು ಸ್ವಲ್ಪವಾಗಿ ತೋರುವ ಹುಸಿನಗೆಯ ಕಾಂತಿಯನ್ನು ಬೀರುವ ಕದಪುಗಳ, ಚೆಲುವಾದ ಕರ್ಣಪೂರಗಳಿಂದ ಹೊಳೆಯುವ, ಸಂಮೋಹನದ ಗಣಿಯಾದ ಸುಂದರಾಂಗನಾದ ಶ್ರೀ ಮನ್ಮಥನನ್ನು ಹಡೆದ ಸೊಬಗಿನ ದಿವ್ಯಮಂಗಳಮೂರ್ತಿಯನ್ನು ಧರ್ಮರಾಯನು ಕಂಡನು. ಕೇಳೈ ಜನಮೇಜಯರಾಯನೇ! ಮನುಷ್ಯಲೀಲೆಯನ್ನು ತಾಳಿ ಶ್ರೀ ಕೃಷ್ಣನು ಪೊಂದೇರಿನಿಂದಿಳಿದು ಬಂದು ಧರ್ಮರಾಯನ ಕಾಲುಗಳಿಗೆರಗುತ್ತಿರಲು, ಆತನು ದೂರವಾಗಿ ನಿಂತು ಕಮಲನಾಭನ ಪಾದಗಳಿಗೆರಗಿ ಸಕಲ ಋಷಿಗಳೂ ಬೆರಗಾಗುವಂತೆ ತೆಗೆದು ಬಿಗಿಯಪ್ಪಿದನು.

ಆಬಳಿಕ ಶ್ರೀಹರಿಯು ಭೀಮ ಮೊದಲಾದವರನ್ನು ಅಕ್ಕರೆಯಿಂದಾಲಿಂಗಿಸುತ್ತ ಹರ್ಷದಿಂದರಮನೆಗೆ ನಡೆತಂದನು. ಆಗ ದ್ರೌಪದಿಯು ಶರಣಜನಪಾಪಹಾರಕ, ದೈತ್ಯ ಮದವಿದಾರಕ, ಗೋವರ್ಧನೋದ್ಧಾರಕ, ಪೀತಾಂಬರಧಾರಿ, ಕೌಸ್ತುಭರತ್ನಾಭರಣ, ಮುರಾರಿ ನನ್ನನ್ನು ಸಲಹು ಎಂದು ಕಾಲ್ಗೆರಗಿದಳು. ಅಕ್ಕರಿಂದಾಕೆಯನ್ನು ತೆಗೆದೆತ್ತಿ ಸಂತೈಸಿ, ಮನೆಗೆ ಕಳುಹಿಸಿ ನೆರೆದಿದ್ದ ಜನರೆಲ್ಲರನ್ನೂ ಉಚಿತವರಿದು ಸತ್ಕರಿಸಿ, ಅವರವರ ಮನೆಗಳಿಗೆ ಬೀಳ್ಕೊಟ್ಟು ಮಿತವಾದ ಪರಿವಾರದೊಡನೆ ಆ ದಿನದ ರಾತ್ರಿಯು ರಾಜ ಸಭೆಯಲ್ಲಿ ಸಂತೋಷದಿಂದ ಕುಳಿತಿದ್ದನು. ಇಂದ್ರಸಭೆಯನ್ನು ತಿರಸ್ಕರಿಸುವಂತಹ ವೈಭವದಿಂದ ಹೊಳೆಯುತ್ತಿರುವ ಧರ್ಮರಾಯನ ಓಲಗಶಾಲೆಯನ್ನು ನೋಡಿ, ಶ್ರೀ ಕೃಷ್ಣನು ಧರ್ಮರಾಯ! ಭೂಲೋಕದಲ್ಲಿ ನಿನ್ನೈಶ್ವರ್ಯವನ್ನು ವಿಚಾರಿಸತಕ್ಕವರೇ ಇಲ್ಲ! ರಾಜಧರ್ಮದಲ್ಲಿ ನಳ ನಹುಷ ಹರಿಶ್ಚಂದ್ರಾದಿಗಳೂ ನಿನಗೆ ಸೋತುಹೋಗುವರು. ಹೀಗಿರುವುದರಿಂದ ನಾವೇ ಧನ್ಯರಲ್ಲವೇ? ಎಂದನು. ಆಗ ಧರ್ಮರಾಯನು ಸ್ವಾಮಿ! ಇನ್ನೇನು ನಿಮ್ಮ ಭಕ್ತರ ಅಭಿವೃದ್ಧಿಯಿಂದಲೇ ನೀವು ಕೃತಾರ್ಥರಾಗುವುದು. ಪಾಂಡವ ಸ್ಥಾಪನಾಚಾರ್ಯನೆಂಬ ಬಿರುದಿನಿಂದ ಆಚಂದ್ರಾರ್ಕವಾಗಿ ಲೋಕವು ನಿನ್ನನ್ನು ಹೊಗಳದೆ ಇರುವುದೆ? ಸಾಕು. ಆ ಮಾತು ಇರಲಿ. ನಾನು ಇನ್ನು ಮಾಡಬೇಕಾದ ರಾಜಕಾರ್ಯವೇನು ಆಜ್ಞಾಪಿಸು ಎಂದು ಹೇಳಿ, ಭೀಮನ ಮುಖವನ್ನು ನೋಡಿದನು ಬಳಿಕ ಶ್ರೀಕೃಷ್ಣನು ಎಲೈ ಧರ್ಮನಂದನನೇ ದಾಯಾದಿಗಳು ಮಡಿದುಹೋದರು, ಶತ್ರುರಾಜರು ಹೆದರಿ ಶರಣಾಗತರಾದರು, ನಿನ್ನ ಆಳ್ವಿಕೆಗೆ ಅಪಾಯವೇ ಇಲ್ಲ. ಆತುರವಾಗಿ ಮಾಡಬೇಕಾದ ಬೇಟೆಯೂ ದಿಗ್ವಿಜಯವೂ ಇಲ್ಲ. ಅರ್ಜುನ ಭೀಮಾದಿಗಳೇನೂ ಪರಾಧೀನರಾಗಿಲ್ಲ. ನಕುಲ ಸಹದೇವರಲ್ಲಿ ಸ್ವಲ್ಪವೂ ತಪ್ಪಿಲ್ಲ. ನಿನ್ನ ಚತುರಂಗಸೇನೆಗೆ ಎದುರಿಲ್ಲ. ಹೀಗಿರುವಲ್ಲಿ ನೀನು ಮಾಡಬೇಕಾದ ರಾಜಕಾರ್ಯವಾವುದುಂಟು ಎಂದು ಶ್ರೀಕೃಷ್ಣನು ಹೇಳಿದನು. ಸ್ವಾಮಿ! ಚರಾಚರಾತ್ಮಕವಾದ ಈ ಭೂಮಂಡಲದ ಆಡಳಿತವು ಹೇಗೆ ನಡೆಯುತ್ತಿದೆ ಎಂಬುದು ನಿಮಗೆ ತಿಳಿಯದೆ? ಶಿವ ಶಿವಾ ಸಂದೇಹಿಗರಂತೆ ನಮ್ಮನ್ನು ಅಣಕವಾಡುವುದೇಕೆ? ಸಾಕು. ಮರೆಮಾಚುವುದೇನು ? ಬಾದರಾಯಣನು ಈ ದಿನ ಇಲ್ಲಿಗೆ ಬಂದು ನಿಮ್ಮ ವಂಶದವರಿಗೆ ತಕ್ಕುದಾದ ಅಶ್ವಮೇಧ ಯಾಗವನ್ನು ಮಾಡಿ ಸುಯಶಸ್ಕನಾಗೆಂದು ಕರುಣದಿಂದ ನಿರೂಪಿಸಿ ಹೊರಟುಹೋದನು ಆ ಯಾಗಕ್ಕೆ ತಕ್ಕ ಕುದುರೆಯನ್ನು ತರುವೆನೆಂದು ಈ ಭೀಮನು ಪ್ರತಿಜ್ಞೆ ಮಾಡಿದನು. ನಿಮ್ಮ ಪಾದಾರವಿಂದದ ಬಲದಿಂದ ಬಂಡತೊಂಡರೆಗಳನ್ನೆಲ್ಲ ದಾಂಟಿ, ಸಾಮ್ರಾಜ್ಯಪದವಿಯನ್ನು ಪಡೆದೆವು.

ಹೀಗಿರುವಲ್ಲಿ ಈ ರಾಜ್ಯಸುಖದಿಂಪ ಮೈ ಮರೆತರೆ ಸತ್ಪುರುಷರು ನಮ್ಮನ್ನು ಮೆಚ್ಚುವರೆ? ಭರತವಂಶದಲ್ಲಿ ಹುಟ್ಟಿದ ನಾವು ಲೋಕಪಾವನ ವಾದ ಅಶ್ವಮೇಧಯಾಗವನ್ನು ಹೇಗೆ ಮಾಡಬೇಕು? ಎಂದು ಬಿನ್ನವಿಸಲು, ಶ್ರೀಕೃಷ್ಣನು ರಾಜೇಂದ್ರಾ! ಬಾದರಾಯಣನ ಬಲೆಗೆ ಸಿಕ್ಕಿಬಿದ್ದು ನೀನು ಮರು ಳಾಗಬಹುದೆ? ದೋರ್ಬಲದ ದುರುಳತನವು ಭೀಮನಲ್ಲಿರುವುದನ್ನು ಕಾಣೆಯಾ? ಹಿಂದೆ ಗೆದ್ದ ರಾಜರಂತೆ ಯೌವನಾಶ್ವಾದಿಗಳು ಸಾಧಾರಣರೆ? ಎಂದಿಗೂ ಅಲ್ಲ. ಮಲ್ಲಿಗೆಯ ಬನಗಳಲ್ಲಿ ಸಂಚರಿಸುವ ಮರಿದುಂಬಿಯು ಸಂಪಗೆಯ ರಸವನ್ನು ಹೀರಬಲ್ಲುದೇ ? ಮುಂದುಗಾಣದೆ ಅಶ್ವಮೇಧಯಾಗಕ್ಕೆ ಏಕೆ ಪ್ರಯತ್ನ ಮಾಡಿದೆ? ಎಲೈ ಮರುಳೇ ಈ ಭೀಮನು ಬುದ್ಧಿವಂತನಾಗಿದ್ದರೆ ಬಕನ ಬಲಿ ಗಾಗಿ ಮಾಡಿದ ಅನ್ನದ ರಾಶಿಯನ್ನು ತಿನ್ನುತ್ತಿದ್ದನೆ ? ನೀತಿಕೋವಿದನಾದರೆ ರಕ್ಕಸಿಯನ್ನು ಅಕ್ಕರೆಯಿಂದ ಮದುವೆಯಾಗುತ್ತಿದ್ದನೆ? ಲೋಕಕ್ಕೆ ಆಶ್ಚರ್ಯ ವನ್ನು ಹುಟ್ಟಿಸುವ ವಿಜಾತೀಯ ಪುರುಷನಾದ ಈ ಭೀಮನ ಹೇಳಿಕೆಯಂತೆ ಯಾಗೋದ್ಯುಕ್ತನಾದ ನಿನ್ನ ಇಷ್ಟಾರ್ಥವು ಪೂರ್ತಿಯಾಗುವುದೆ? ಎಂದನು. ಆ ಮಾತನ್ನು ಕೇಳಿ, ಭೀಮಸೇನನು ಓಹೋ! ಸಮಸ್ತ ಲೋಕಗಳನ್ನೂ ಅಡಗಿಸಿಕೊಂಡಿರುವ ನಿನ್ನ ಹೊಟ್ಟೆಯು ವಿಚಿತ್ರಕರವಲ್ಲವೆ? ನರಕಾಸುರನ ಮನೆಯ ಹೆಂಗೆಸರು ರಾಕ್ಷಸಿಯರಲ್ಲವೆ? ಆಶ್ಚರ್ಯಕರವಾದ ಮಾತುಗಳನ್ನಾಡಿದೆ ಇನ್ನು ಹೆದರಿಸಬೇಡ. ಕರಡಿಯ ಮಗಳನ್ನು ಮದುವೆಯಾದವನಿಗೆ ಲೋಕ ದಲ್ಲಿ ಅದ್ಭುತಾಕಾರವು ಸಲ್ಲದೆ? ನಿನ್ನ ಯೋಚನೆಗಳನ್ನು ನಾನು ಬಲ್ಲೆ. ಕೊಟ್ಟಭಾಷೆಗೆ ತಪ್ಪದೆ ಕುದುರೆಯನ್ನು ತಂದುಕೊಡುವೆನು ಎಂದು ಹೇಳಲು, ಕೊಟ್ಟಭಾಷೆಗೆ ನೀನು ತಪ್ಪುವನಲ್ಲ. ನಿನ್ನ ವಿಶೇಷ ಸಾಮರ್ಥ್ಯವನ್ನು ನಾವು ಬಲ್ಲೆವು. ಹಿಂದೆ ರಣರಂಗದಲ್ಲಿ ಪಿಶಾಚರಂತೆ ರಕ್ತವನ್ನು ಕುಡಿದು, ದೇಹ ವನ್ನು ಸಂರಕ್ಷಿಸಿಕೊಂಡ ಭಂಡತನವು ನಿನ್ನ ಶೌರ್ಯಕ್ಕೆ ಭೂಷಣವಲ್ಲವೆ ? ಎಲಾ ಬಾಣಸಿಗಾ ! ನೀನು ಲೋಕದಲ್ಲಿ ನಿಂದೆಗೆ ಹೆದರತಕ್ಕವನೆ ? ಎಂದು ಶ್ರೀಹ ರಿಯು ಹಾಸ್ಯಮಾಡಿದನು. ಆಗ ಭೀಮನು ಹರಹರಾ ! ನೀವು ಲೋಕಾಪವಾ ದಕ್ಕೆ ಹೆದರಿ ಕೃತ್ರಿಮವಾದ ಜಾರವಿದ್ಯೆಗಳನ್ನು ಓದಿದಿರಿ ? ಹೆಣ್ಣಾಗಿದ್ದು ಕೊಂಡು ಬಾಣಸದ ಕೆಲಸವನ್ನು ಕಲಿಯಲಿಲ್ಲವಷ್ಟೆ ! ಹೇಸಿಕೆ ಇಲ್ಲದೆ ರಾಕ್ಷಸಿ ಯಾದ ಪೂತನಿಯ ಪ್ರಾಣಗಳನ್ನು ಹೀರಿದವರು ಯಾರು ? ರಾಜಸಮೂಹದಲ್ಲಿ ಗೊಲ್ಲಗೌಡನಿಗೆ ಯಾವಬಗೆಯ ಒಡನಾಟ ಉಂಟು. ಇನ್ನು ಹೆಚ್ಚಾಗಿ ಹೇಳ ಲಾರೆ. ಆಡಿದ ಮಾತಿಗೆ ತಪ್ಪದೆ ಕುದುರೆಯನ್ನು ತರುವೆನು. ಯಾಗವನ್ನು ಮಾಡಿಸಿ ನೀವು ನಮ್ಮನ್ನು ಸಲಹಬೇಕು ಎಂದು ಬಿನ್ನವಿಸಲು ಶ್ರೀಕೃಷ್ಣನು ಸಕ್ಕು ಭೀಮಸೇನಾ ! ನೀನು ಕಲಹಕ್ಕೆಂದಿಗೂ ಹೆದರುವವನಲ್ಲ, ಬಹಳವಾಗಿ

ಹರಟದೆ ಕುದುರೆಯನ್ನು ತರುವದಾದರೆ ತಂದುಕೊಡು, ಲೋಕದಲ್ಲಿ ಬಹು ಮಂದಿ ಶೂರರಿರುವರು, ಆತ್ಮಶಕ್ತಿಯನ್ನು ಯೋಚಿಸದೆ ಯಾಗವನ್ನು ಕೈಕೊಂಡರೆ ಮುಂದೆ ವಿಘ್ನಉಂಟಾಗುವದು ಎನಲು, ಧರ್ಮರಾಯನು ಸ್ವಾಮೀ ! ನಿಮ್ಮ ಪಾದಾರವಿಂದಗಳ ಬಲ್ಮೆಯೊಂದಿದ್ದರೆ ನಮಗೆ ವಿಜಯವೇ ಆಗುವುದು ತಾವ ಲ್ಲದೆ ಮತ್ತಾರಿದ್ದರೂ ಏನುಫಲ ? ಕರುಣದಿಂದ ನಮ್ಮನ್ನು ಕಾಪಾಡಬೇಕು ಎಂದು ಕಾಲ್ಗೆರಗಿ ಬೇಡಿಕೊಳ್ಳಲು, ಮಕುಟವನ್ನು ಪಿಡಿದೆತ್ತಿ ವೈದಿಕವಿ ರಾಜರು ಮಾಡುವ ಕಾರ್ಯಗಳು ನಿನ್ನ ಪದ್ಧತಿಯನ್ನು ಹೋಲುವವು ಇನ್ನು ಯಾಗಕ್ಕೆ ದೀಕ್ಷೆಯನ್ನು ವಹಿಸು ಈ ಕಾರ್ಯವು ನಿನಗೆಂದಿಗೂ ಅಸಾಧ್ಯವಾಗಲಾ ರದು ನಾನೆ ನಿಂತು ನಡೆಸುವೆನೆಂದು ಶ್ರೀಹರಿಯು ಅಭಯದಾನ ಮಾಡಿದನು.

ಕಮಲನಾಭನ ಮಾತನ್ನು ಕೇಳಿ ಯಾಗ ಪ್ರಯತ್ನಮಾಡಿ ಭೀಮ ವೃಷ ಕೇತು ಮೇಘನಾದರನ್ನು ಕುದುರೆಗಾಗಿ ಕಳುಹಿಸಿ, ಸಭೆಯನ್ನು ಬೀಳ್ಕೊಟ್ಟು ಶ್ರೀಕೃಷ್ಣನೊಡಗೂಡಿ ಅರಮನೆಯಲ್ಲಿ ಅತಿಶಯವಾದ ಷಡ್ರಸದಡಿಗೆಯನ್ನು ಆರೋಗಿಸಿ, ನಿರ್ಮಲವಾದ ಹಂಸತೂಲಿಕಾತಲ್ಪದಲ್ಲಿ ಧರ್ಮರಾಯನು ಶಯನಿಸಿ ದನು. ಅಷ್ಟರಲ್ಲಿ ಸೂರ್ಯನ ಸಾರಥಿಯಾದ ಅರುಣನ ಆಗಮನದ ಕಲೆಗಳು ತೋರಿಬಂದವು. ಪೂರ್ವದಿಕ್ಕು ಕೆಂಪಾಯಿತು, ನಕ್ಷತ್ರಗಳು ಮಾಯವಾದವು, ಮಂದಮಾರುತವು ಮೆಲ್ಲಮೆಲ್ಲನೆ ಬೀಸಿತು, ತಾವರೆಗಳು ಅರಳಿದವು, ಸೆರೆಯಾ ಗಿದ್ದ ಮರಿದುಂಬಿಗಳು ಮೊರೆಯಲಾರಂಬಿಸಿದವು, ನೈದಿಲೆಯ ಸೊಬಗು ಕುಂದಿ ಹೋಯಿತು, ಜಕ್ಕವಕ್ಕಿಗಳು ನೆಕ್ಕದವು, ಉಕ್ಕಿಬರುವ ಕಿರಣಜಾಲವುಳ್ಳ ಸೂರ್ಯನು ಹರಡಿಕೊಂಡಿದ್ದ ಕತ್ತಲೆಯು ಹೆದರಿ ಯಾವದಿಕ್ಕಿಗೆ ಹೋಗುವುದೋ ನೋಡುವೆನೆಂದು ಬಯಸಿ ಉದಯಾದ್ರಿಯ ಶಿಖರವನ್ನು ಹತ್ತಿದನು. (ಅಂದರೆ ಸೂರ್ಯೋದಯವಾಯಿತೆಂದರ್ಥ) ವ್ಯಾಸಮುನಿಯು ಬಂದು ಯಾಗಕರ್ಮವನ್ನು ಬೋಧಿಸದುದೂ ಕೃಷ್ಣಮೂರ್ತಿಯು ತಾನಾಗಿಯೇ ನನ್ನಬಳಿಗೆ ಬಂದುದೂ ಸಾಧಾರಣವೇ, ಆಹಾ ! ಇದು ನನ್ನ ಭಾಗ್ಯದೇವತೆಯ ಬಲವಲ್ಲದೆ ಅನ್ಯಥಾ ಅಲ್ಲವೆಂದು ಧರ್ಮರಾಯನು ನಿದ್ರೆಯನ್ನುಬಿಟ್ಟು ಉದಯಕಾಲದ ಕರ್ಮಗಳನ್ನು ತೀರಿಸಿ ಓಲಗಶಾಲೆಗೆ ಬಂದು ಸಿಂಹಾಸನದಲ್ಲಿ ಕುಳಿತಿದ್ದನು. ಬಳಿಕ ಭೀಮನು ನಿತ್ಯಕರ್ಮವನ್ನು ತೀರಿಸಿಕೊಂಡು ಬೇಗನೆ ಓಲಗಶಾಲೆಗೆ ಬಂದು ಧರ್ಮರಾಯನಿಗೆ ನಮಸ್ಕರಿಸಿ, ಆತನಪ್ಪಣೆಯನ್ನು ಪಡೆದು, ಅಂಗರಕ್ಷೆಯ ಕಾರ್ಯವನ್ನು ಅರ್ಜುನನಿ ಗೊಪ್ಪಿಸಿ ವೃಷಕೇತು ಮೇಘನಾದರೆಂಬ ವೀರರನ್ನು ಬರಮಾಡಿ, ದೇವಪುರನಿಲಯ ಲಕ್ಷ್ಮೀಪತಿಯ ಪಾದಸೇವೆಯನ್ನುಮಾಡಿ ಹೊಗಳುತ್ತ, ವಂದಿಮಾಗಧರ ಮಂಗ ಳಧ್ವನಿಯೊಡನೆ ಮೊಳಗುತ್ತಿರುವ ವಾದ್ಯಗಳರವದಿಂದ ಕೂಡಿ ಸುವಾಸಿನಿ ಯರು ಸಂತೋಷಪೂರಕವಾಗಿ ಸೇಸೆತಳಿದು ಸೊಡರೆತ್ತಿ ಆರತಿಗಳನ್ನು ಬೆಳಗು

ತ್ತಿರಲು ಹಸನ್ಮುಖಿಯಾಗಿ ಹಸ್ತಿನಾವತಿಯಿಂದ ಹೊರಟು ಕುದುರೆಯನ್ನು ತರಲೋಸುಗ ಭದ್ರಾವತಿಗೆ ಹೊರಟನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತಲಸದರುಣ ಚರಣ ಸರೋಜಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ

ಕವಿನಾಗಶರ್ಮಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ

ದ್ವಿತೀಯಾಧ್ಯಾಯಂ ಸಂಪೂರ್ಣಂ.



# ಮೂರನೆಯ ಸಂಧಿ.

ಭೀಮನು ವೃಷಕೇತುವಿಗೆ ಭದ್ರಾವತಿಯ ವಿಚಾರವನ್ನು ಹೇಳುವಿಕೆ.

ಎಲೈ ಜನಮೇಜಯರಾಯನೇ ! ಮುಂದಿನ ಕಥಾವಿಸ್ತಾರವನ್ನು ಲಾಲಿಸು. ಭೀಮನು ವೃಷಕೇತು ಮೇಘನಾದರೊಡನೆ ಹೊರಟುಬರಲು, ಮುಂದೆ ಭದ್ರಾವತೀ ನಗರದ ರಾಜ್ಯವು ಸದಾ ನಿರ್ಮಲ ಶ್ರೀಕರಗ್ರಾಹಿಯಾಗಿ ಪ್ರಖ್ಯಾತವಾದ ವನಮಾಲೆಯಿಂದಕೂಡಿ, ಮನ್ಮಥನ ಉದ್ಭವಕ್ಕೆ ನೆಲೆವೀಡಾಗಿ ಶ್ರೀಹರಿಯಂತೆ ರಂಜಿಸಿತು. ಆ ರಾಜ್ಯದಲ್ಲಿ ತಿಳಿನೀರಿನಿಂದ ತುಂಬಿ ಹರಿಯುವ ಕೆರೆತೊರೆಗಳೂ, ಅರಳಿದ ಕಮಲಗಳುಳ್ಳ ತಾವರೆಕೊಳಗಳೂ, ರತ್ನಕಾಂತಿ ಯಂತಿರುವ ಗದ್ದೆಬೆದ್ದಲುಗಳೂ, ಅಮೃತಶಿಲೆ ನೀಲಮಣಿ ಪಚ್ಚೆಗಳಿಂದ ಮಾಡ

ಲ್ಪಟ್ಟ ಬೆಟ್ಟಗಳೂ, ದಟ್ಟವಾಗಿ ಹರಡಿಕೊಂಡು ಮೇಯುತ್ತಿರುವ ಗೋವುಹಿಷಿಗಳೂ, ಗುಂಪುಗುಂಪಾಗಿ ಸಂಚರಿಸುತ್ತಿರುವ ಆನೆಗಳೂ, ಹೊಳೆಹೊಳೆದು ಬೆಳಗುತ್ತಿರುವ ಕಸ್ತೂರಿ ಮೃಗಗಳೂ, ಬಗೆಬಗೆಯ ಬಣ್ಣದ ನಾನಾವಿಧವಾದ ಪಕ್ಷಿಗಳೂ, ಸುಂದರವಾಗಿ ಹೊಳೆಯುತ್ತಿರುವ ಮನೆಗಳೂ, ಸದಾಚಾರಸಂಪನ್ನರಾದ ಜನಗಳೂ ಎಲ್ಲಿನೋಡಿದರೆ ಅಲ್ಲಿ ತುಂಬಿತುಳುಕುತ್ತಿದ್ದರು. ಮತ್ತು ಹಂಸೆಗಳಾಡದ ಸರೋವರವೂ, ತಂಪಾಗಿ ಬೀಸದ ಸುಳಿಗಾಳಿಯೂ, ಗಾಳಿಯನ್ನನುಸರಿಸದ ಮರಿದುಂಬಿಗಳೂ, ದುಂಬಿಗಳು ಝೇಂಕರಿಸದಿರುವ ಹೂಗೊಂಚಲೂ, ಹೂಬಿಡದಿರುವ ಎಳಬಳ್ಳಿಗಳೂ, ಹೂಬಳ್ಳಿಯಿಲ್ಲದ ಮಾವಿನಮರಗಳೂ, ಮಾವಿನಮರಗಳಿಲ್ಲದ ಉದ್ಯಾನವನವೂ, ಉದ್ಯಾನವನಗಳಿಲ್ಲದ ಊರೂ, ಊರುಗಳಿಲ್ಲದ ಸ್ಥಳವೂ ಆ ರಾಜ್ಯದಲ್ಲಿ ಎಲ್ಲಿಯೂ ಕಾಣಬರಲಿಲ್ಲ. ಆ ಭದ್ರಾವತಿಯ ರಾಜ್ಯದಲ್ಲಿ ಬೆಳೆಸಾಗದ ಭೂಮಿಯೂ, ತಾವರೆಗಳಿಲ್ಲದ ಕೊಳವೂ, ರತ್ನಗಳಿಂದ ಶೋಭಿಸದ ಪರ್ವತಗಳೂ, ವನಲಕ್ಷ್ಮಿಯ ಮೈಬಣ್ಣದಂತೆ ಹೊಳೆಯುವ ಕೆಂಪಾದ ಚಿಗುರಿಲ್ಲದ ಉದ್ಯಾನವನಗಳೂ, ಮನೋಹರವಾದ ಧ್ವನಿಯಿಂದ ಕಿವಿಗಿಂಪಾಗಿ ಹಾಡದ ಪಶುಪಕ್ಷಿಗಳೂ, ಸರ್ವದಾ ಸಂತೋಷದಿಂದ ನಲಿಯದಿರುವ ಜನಗಳೂ ಇರಲಿಲ್ಲ. ಗದ್ದೆಬೆದ್ದಲುಗಳಲ್ಲಿ ಬೆಳೆದಿರುವ ಬಾಲುತೆನೆಗಳಮೇಲೆ ಕುಳಿತಿರುವ ಗಿಳಿಗಳನ್ನು ಪಾಮರಿಯರು ಓಡಿಸುತ್ತಿರುವಾಗ ಹಾರಿಹೋಗುವ ಗಿಳಿಗಳ ಮೈಬಣ್ಣದಂತೆ ಇಕ್ಕೆಲಗಳಲ್ಲಿ ಸೊಂಪಾಗಿ ಬೆಳೆದು ರಾಜಿಸುತ್ತಿರುವ ಕಬ್ಬಿನ ಗರಿಗಳು ಹಸುರಾಗಿ ಹೊಳೆಯುತ್ತಿದ್ದವು. ತಂಗಾಳಿಯ ಸುಖಕ್ಕೆ ತಲೆಯನ್ನು ತೂಗುತ್ತ ಕಮಲರೇಣುಗಳ ಪರಿಮಳಕ್ಕೆ ಶಿರವನಲ್ಲಾಡಿಸುತ್ತ, ಮರಿದುಂಬಿಗಳ ಮೊರೆತಕ್ಕೆ ಮೈಯುಬ್ಬಿ ನಲಿಯುತ್ತ ಹೊಂಬಣ್ಣದ ಸೀರೆಯನ್ನುಟ್ಟು ಹೊಳೆಯುತ್ತಿರುವ ಶ್ರೀದೇವಿಯನ್ನು ಸೇವಿಸುವಂತೆ ಅಲ್ಲಿದ್ದ ಹೊಲಕಾಯುವ ಪಾಮರಿಯು ದಾರಿಗರನ್ನು ಮರಳುಮಾಡಿ ನಡೆಗೆಡಿಸುತ್ತಿದ್ದರು. ಇನ್ನೊಂದು ವಿಚಿತ್ರವಾದ ಆಶ್ಚರ್ಯವನ್ನು ಏನು ಹೇಳಲಿ !

ಆ ದೇಶದಲ್ಲಿ ಸಂಚರಿಸುವ ದಾರಿಗರು ಗದ್ದೆಬೆದ್ದಲುಗಳ ಸುವಾಸನೆಯನ್ನೂ, ಹೊಲವನ್ನು ಕಾಯುತ್ತಿರುವ ಪಾಮರಿಯರ ಮೈಸೊಬಗನ್ನೂ, ಅರಳಿದ ಹೂಗಳ ಪರಿಮಳವನ್ನೂ ತರುಲತೆಗಳ ಸೊಂಪನ್ನೂ, ತಿಳಿಗೊಳದ ಅಲರ್ದಾವರೆಯ ತನಿರಸದ ಮಕರಂದವನ್ನೂ ಸವಿದು ಮದಿಸಿದ ಮರಿದುಂಬಿಗಳೊಡನೆ ಸಂಚರಿಸುತ್ತಿರುವ ಮಂದಮಾರುತನ ಮೈಗಂಪಿನಿಂದ ತಮ್ಮಾಯಾಸವನ್ನು ನೀಗಿಕೊಂಡು ಸುಖಿಸುತ್ತಿರುವರು. ದಾರಿಗಳಲ್ಲಿರುವ ಅರವಟ್ಟಿಗೆಗಳಲ್ಲಿ ತಂಪಾದ ತಿಳಿನೀರನ್ನು ತುಂಬಿ ನೀರೆರೆಯುತ್ತಿರುವ ಸುಂದರಿಯರ ಕಡೆಗೆ ದೃಷ್ಟಿಯನ್ನಿಟ್ಟು ಚಾಚಿ, ಮುಖವನ್ನು ಓರೆಮಾಡಿ ಹೊಯ್ಯುವ ನೀರನ್ನು ಹೊರಗೆ

ಚೆಲ್ಲಿ ಬಯಲಿಗೆ ಬಾಯನ್ನು ಬಿಟ್ಟು, ಆ ಬಾಲೆಯರನ್ನು ನಗಿಸುತ್ತ ಪಥಿಕರು ತೃಷೆಯಿಂದ ನರಳುತ್ತಿದ್ದರು. ಸುಂದರಾಂಗಿಯರು ಸೊಗಸಾದ ಕೈಗಳಿಂದ ಎರೆಯುತ್ತಿರುವ ತಂಪಾದ, ಸುವಾಸನೆಯಿಂದ ಕೂಡಿದ, ತಿಳಿನೀರನ್ನು ಅಕ್ಕರೆಯಿಂದ ಕುಡಿಯುತ್ತಿದ್ದರೂ, ಬಾಲೆಯರ ಚಂದುಟಿಯ ಸವಿಯನ್ನು, ಕುಡಿನೋಟದ ಹೊಳಪನ್ನು ಬಲ್ಮೊಲೆಗಳನ್ನು ಬಿಗಿಯಪ್ಪುವ ಸೊಂಪನ್ನೂ, ಪಡೆಯಬೇಕೆಂಬ ಬಯಕೆಯಿಂದ ದಾರಿಗರು ತಪಿಸುತ್ತಿದ್ದರು. ಮತ್ತೊಂದೆಡೆಯಲ್ಲಿ ತನಿರಸವುಳ್ಳ ಸಿಹಿಮಾವಿನ ಕಳಿವಣ್ಣನ್ನು ಗಿಳಿಯು ಕುಟುಕಿದರೆ ಸೋರುವ ರಸದಂತೆ ಹೊಂಗೆಲಸವನ್ನು ಹಿಡಿದು ನೀರೆರೆಯುತ್ತಿರುವ ಲಲಿತಾಂಗಿಯರ ದೇಹಕಾಂತಿಯು ಜಲಧಾರೆಯಲ್ಲಿ ಪ್ರತಿಬಿಂಬಿಸಿ, ಪಾಂಥರ ಶ್ರಮವನ್ನು ಹೋಗಲಾಡಿಸುತ್ತಿದ್ದಿತು. ಮನೋಹರವಾದ ಬಿಳುಗಲ್ಲಿನಿಂದ ಮಾಡಿದ ಮೊಗೆಯು ಮುಖಚಂದ್ರನನ್ನು ನೋಡಿ ಸುರಿಸುವ ನೀರೋ ಎನ್ನುವಂತೆ ಇರಲು ತಂಪಾದ ತಿಳಿನೀರನ್ನು ಕುಡಿಯುತ್ತ ಆ ಅರವಟ್ಟಿಗೆಗಳಲ್ಲಿರುವ ನಾರಿಯರ ಕೋಮಲವಾದ ಅಂಗಗಳ ಲಾವಣ್ಯಕ್ಕೆ ಮೆಚ್ಚಿ ಮನಸ್ಸನ್ನು ಬಿಗಿಹಿಡಿದು ಆನಂದದಿಂದ ನಲಿಯುತ್ತಿರುವ ಪಥಿಕರು ರಾಜಿಸುತ್ತಿದ್ದರು.

ಹೀಗೆ ಹೊಳೆಯುತ್ತಿರುವ ರಾಜ್ಯದ ಸೊಬಗನ್ನು ಕಂಡು, ಇನ್ನೆಷ್ಟು ಸೊಗಸಾದ ದೇಶವೋ ನೋಡಬೇಕೆಂದು ಭೀಮಾದಿಗಳು ಬರುತ್ತಿರುವಲ್ಲಿ ಸನ್ನೆಯಿಂದ ಗಂಡನನ್ನು ಬರಮಾಡಿ ಚೆನ್ನೆಸೆವ ಉನ್ನತವಾದ ಮಂಚದಲ್ಲಿ ರತಿಕಲಾಪ್ರೌಢಿಮೆಯನ್ನು ತಿಳಿದು ಬಗೆಯರಿದು ಒಡಗೂಡಿ ಆನಂದವನ್ನನುಭವಿಸುತ್ತಿರುವ ಪುರಸ್ತ್ರೀಯರಿಗೆ ವಿಶ್ರಾಂತಿಸುಖವನ್ನು ಕೊಡುವ ರತ್ನಮಯವಾದ ಪಳುಕಿನ ಪಾಸರಗಲ್ಲುಗಳುಳ್ಳ ಗವಿಗಳಿಂದ ಕೂಡಿದ ಪರ್ವತವನ್ನು ಕಂಡು, ಅದರ ಶಿಖರವನ್ನೇರಿ ನಿಂತು ಮೂಡಣದೆಸೆಯಲ್ಲಿರುವ ಭದ್ರಾವತಿಯ ನಗರದ ವೈಭವನ್ನು ಕಂಡು ತಲೆದೂಗುತ್ತ ವೃಕೋದರನು ಎಲೈ ವೃಷಕೇತುವೇ! ನೋಡಿದೆಯಾ! ಗಗನಚುಂಬಿತವಾದ ಯಾಗಧೂಮವೆಂಬ ಮುಂಗುರುಳನ್ನು ಧರಿಸಿದ ಭೂದೇವಿಯೆಂಬ ಹೆಂಗಸಿಗೆ ಈ ಭದ್ರಾವತಿಯು ಮುಖಮಂಡಲದ ಹಾಗಿರುವುದು. ಅದಲ್ಲದೆ ಎಷ್ಟುಜನಗಳಿದ್ದರೇನು? ಎಂಥ ಯಶಸ್ಸನ್ನು ಪಡೆದರೇನು? ಅಮರಾವತಿಯು ತ್ರಿದಶಾವಾಸವೆಂಬ ಹೆಸರನ್ನೂ, ಅಳಕಾಪುರಿಯು ಗುಹ್ಯಾಸ್ಪದವೆಂಬ ಬಿರುದನ್ನು ಹೊಂದಿತಲ್ಲವೆ ಇನ್ನು ನನ್ನಹಾಗೆ ಎಷ್ಟು ಜನರಿದ್ದರೂ ರೀತಿ ಖ್ಯಾತಿಗಳಿಗೆ ಕುಂದಿಲ್ಲದಿರುವ ನಗರವುಂಟೆ ? ಎಂಬ ಗರ್ವದಿಂದ ಈ ಭದ್ರಾವತಿಯು ಇಂದ್ರನ ಮತ್ತು ಕುಬೇರ ನಗರಗಳನ್ನು ನಗುವ ಸೌಧರಾಜಿಗಳಿಂದ ಹೊಳೆಯುತ್ತಿರುವುದು. ಕೈಲಾಸ ಪರ್ವತದಮೇಲೆ ಸುಳಿವ ಬೇಕಿನ ಬಳ್ಳಿಯೋ ಬೆಳ್ಮುಗಿಲಿನ ಮಧ್ಯದಲ್ಲಿ ಹೊಳೆವ ಕಾರುಮಿಂಚೋ, ಶಿವನ ಶಿರೋ

ಭಾಗದಲ್ಲಿರುವ ಚಂದ್ರಕಿರಣವೋ ಅಥವಾ ಕರುವಾಡಗಳಲ್ಲಿ ಸಂಚರಿಸುವ ಹೆಂಗಳ ಮೈಬಣ್ಣವೋ ಕಾಣೆ. ಇಂತಹ ಅಚ್ಚರಿಯನ್ನು ಲೋಕದಲ್ಲೆಲ್ಲಿಯಾದರೂ ನೋಡಿರುವೆಯಾ ! ಕೆಂದೋರಣದಿಂದ ಹೊಳೆದು ಸಾಲುಗೊಂಡ ಗುಡಿಗಳಲ್ಲಿ ಕಲಶ, ಕನ್ನಡಿಗಳ ಸಾಲಿನಿಂದ ಸೊಗಸಾಗಿ ಸೀಗುರಿ ಪತಾಕೆಗಳ ನರ್ತನದಿಂದ ಕೂಡಿ, ಮುತ್ತುಗಳ ಗೊಂಚಲುಗಳಿಂದ ಹೊಳೆವ ಬೀದಿಗಳು ಕಂಗೊಳಿಸುತ್ತಿರುವವು. ಎತ್ತರವಾದ ಕರುವಾಡದಲ್ಲಿರುವ ಚಂದ್ರಮುಖಿಯರ ಮುಖಚಂದ್ರಿಕೆಯೂ, ಉನ್ನತವಾದ ಗೋಪುರಗಳಲ್ಲಿರುವ ರತ್ನಕಾಂತಿಗಳೆಂಬ ಎಳೆವಿಸಿಲೂ, ಈ ನಗರದಲ್ಲಿ ಒಟ್ಟಿಗೆ ಸೇರಿ ಸೂರ್ಯ ಚಂದ್ರರು ಅಚ್ಚಳಿಯದೆ ಇರುತ್ತಿರುವಂತೆ ಉನ್ನತವಾದ ಕೋಟೆಯತೆನೆಗಳಿಂದ ಸೊಗಸುತ್ತಿರುವುದು. ಪುರಸ್ತ್ರೀಯು ತನ್ನಲ್ಲಿ ಬಾಳುವ ಜನರಿಗೆ ಸದಾ ಸೌಖ್ಯವನ್ನುಂಟುಮಾಡಲೆಂದು ಇಷ್ಟದೇವತೆಯನ್ನು ಪ್ರಾರ್ಥಿಸಿ, ವರದಿಂದ ಪಡೆದ ಹಸುರುಸೀರೆಯೋ ಎನ್ನುವಂತೆ ಭೂದೇವಿಯ ಮುಖ ಕಮಲವನ್ನು ಮುಚ್ಚಿಕೊಂಡಿರುವ ನವೀನವಾದ ಪತ್ರಪುಷ್ಪಾವಳಿಗಳಿಂದ ಉದ್ಯಾನವನವು ಕಂಗೊಳಿಸುತ್ತಿರುವುದು. ಸದಾ ಇಲ್ಲಿನ ಬಳ್ಳಿವೆಣ್ಣುಗಳು ಪುಷ್ಪಿಣಿಯರಾಗಿರುವರು, ಇವರನ್ನು ನೋಕಬಾರದೆಂದು ಸೂರ್ಯನು ತನ್ನ ಕಿರಣಗಳನ್ನು ಹೊರತೆಗೆದನೋ ಎನ್ನುವಂತೆ ಎಡೆಯಿಲ್ಲದೆ, ದಟ್ಟವಾದೆಲೆಗಳ ನೆಳಲಿನಿಂದ ಸೊಗಸುತ್ತಿರುವ ನಂದನವನಗಳು ಜನರಿಗೆ ಸುಖದಾಯಕಗಳಾಗಿರುವುವು. ತಿಳಿಗೊಳದ ನೀರನ್ನು ಕದಡಿ, ಹೂವಿನ ಬಂಡನ್ನು ಕೆದರಿ, ಮದದಿಂದ ಮದಿಸಿ, ಮರಗಿಡಗಳನ್ನು ಮುರಿದಾಡಿ, ಮಂದಮಾರುತನೆಂಬ ಮದ್ದಾನೆಯು ವನಗಳಲ್ಲಿ ಸಂಚರಿಸುತ್ತಿರಲು, ವಿಹಗಗಳನ್ನು ದೂರಹೋಗಿರೆಂದು ಕೂಗಿ ಹೇಳುವಂತೆ ಕೋಗಿಲೆಗಳು ಕೂಗುತ್ತಿರುವುವು. ಮೊರೆಯುತ್ತಿರುವ ಮರಿದುಂಬಿಗಳನ್ನು ನೋಡವೆಂದೂ, ಮಂದಮಾರುತನಿಂದಲೆಯುವ ಬಳ್ಳಿಗಳ ಹೊಳಪನ್ನು ಮಿಂಚೆಂದೂ, ಹೂವಿನಿಂದೊಸರುವ ಮಕರಂದವನ್ನು ಮಳೆಯೆಂದೂ ತಿಳಿದು, ಉದ್ಯಾನಗಳಲ್ಲಿರುವ ನವಿಲುಗಳು ಕುಣಿಯುತ್ತಿರುವುವು. ಬಿರಿದ ಹೊಂಬಾಳೆಯ ಕುಸುರಿಗಳೆಂಬ ಅಕ್ಷತೆಗಳಿಂದಲೂ, ಮರಗಿಡಬಳ್ಳಿಗಳಲ್ಲಿ ಪೂತಿರುವ ಹೂಗಳೆಂಬ ಪುಷ್ಪಾಂಜಲಿಗಳಿಂದಲೂ, ತೆಂಗಿನಕಾಯಿಗಳಿಂದಲೂ, ಎಳನೀರಿನ ಅರ್ಘ್ಯದಿಂದಲೂ, ವನದೇವತೆಯು ಭೂದೇವಿಯನ್ನು ಪೂಜಿಸುತ್ತಿರುವಂತೆ ಕಾಣುವುದು. ಕೆಂದಳಿರ ಹೆಚ್ಚಿಕೆಯಿಂದಲೂ ಮಧುರವಾಗಿ ಧ್ವನಿಮಾಡುವ ಕೋಗಿಲೆಗಳ ಸೊಂಪಿನಿಂದಲೂ, ಹೂಗೊಂಚಲಿನಿಂದ ಸುರಿಯುತ್ತಿರುವ ಮಕರಂದದಿಂದಲೂ, ಕಳಿವಣ್ಣುಗಳಿಗೆ ಬಳಸಿರುವ ಗಿಳಿವಿಂಡಿನಿಂದಲೂ, ಮನೋಹರವಾದ ಸಿಹಿಮಾವಿನಮರಗಳಿಂದಲೂ ಈನಾಡಿನ ನಂದನಗಳು ವಿರಾಜಿಸುತ್ತಿರುವುವು. ನಮ್ಮ ಹಾಗೆ ಪ್ರಿಯರನ್ನು

ಆಲಿಂಗಿಸದಿದ್ದರೆ ಈ ನಂದನದಲ್ಲಿ ಮನ್ಮಥನು ಅರೆಗಳಿಗೆಯೂ ನಿಲಗೊಡಿಸನೆಂದು ಹೇಳುವಂತೆ, ಭೋಗಿಗಳಾದವರಿಗೆ ತಮ್ಮಿಂದಾಗುವ ಉಪಕಾರವನ್ನು ಮಾಡು ವಂತೆ ವೀಳೆಯದೆಲೆಯ ಬಳ್ಳಿಗಳು ಪೂತ ಪೂಗದ್ರುಮಂಗಳನ್ನು ಅಪ್ಪಿಕೊಂಡಿ ರುವುವು. ತನಗೆ ಮಾಡಿದ ಉಪಕಾರವನ್ನು ಮರೆಯದ ಸತ್ಪುರುಷರಂತೆ, ಗುದ್ದಲಿಯ ಪೆಟ್ಟನ್ನು ಸಹಿಸಿ, ತಮ್ಮನ್ನು ಬೆಳಸಿದ ಭೂದೇವಿಗೆ ಹಣ್ಣುತುಂ ಬಿದ ಗೊನೆಯನ್ನು ಕೊಡುವುದಕ್ಕಾಗಿ ಬಾಗಿದವೋ ಎನ್ನುವಂತೆ ಬಾಳೆಯ ಗಿಡಗಳು ಹೊಳೆಯುತ್ತಿರುವುವು. ಕೆಂದಳಿರ ಕೆಂಡವನ್ನು ತುಳಿದು ಮೊನೆಯಾದ ಮೊಗ್ಗುಗಳೆಂಬ ಶಸ್ತ್ರಗಳನ್ನು ಹಾಯ್ದು, ಪೂವಿನ ಹೀಚೆಂಬ ವಜ್ರಮುಷ್ಟಿ ಯನ್ನು ಧರಿಸಿ, ಬಳ್ಳಿಗಳೆಂಬ ಚಾಟಿಗಳನ್ನು ಹೊಸೆದು, ಕೋಗಿಲೆಯ ಸ್ವರ ದಿಂದ ಆಲುತ್ತ ವನದೇವತೆಯ ಓಲಗಶಾಲೆಯಲ್ಲಿ ತೂಳಗವಾಡುವಂತೆ ಮಂದ ಮಾರುತನು ಕಂಗೊಳಿಸುತ್ತಿರುವನು.

ಪಾರಿಜಾತ, ಪಾದರಿ, ಪುನ್ನಾಗ, ಚಂಪಕ, ಬಕುಳ, ಮಂದಾರ, ಕುರ ವಕ, ಸುರಗಿ, ನಂದ್ಯಾವರ್ತ, ಕರವೀರ, ಶಿರೀಷ, ಸೇವಂತಿಗೆ ಮೊದಲಾದ ಮರ ಗಳು, ಮನ್ಮಥನ ಬಗೆಬಗೆಯ ಬಾಣಗಳುಳ್ಳ ಬತ್ತಳಿಕೆಯಂತೆ, ಮಲ್ಲಿಗೆ ಜಾಜಿ ಮಾಧವೀ ಮೊದಲಾದ ಬಳ್ಳಿಗಳೊಡನೆ ಹೊಳೆಯುತ್ತಿರುವುವು. ಹೊನ್ನೆ, ಸುರಹೊನ್ನೆ, ತೇಗ, ಮಾದಳ, ತಾಳೆ, ಹೊಂಗೆ, ಜಾಲಾರಿ, ಹೆಬ್ಬಹಲಸು, ಮುತ್ತುಗ, ಅಶೋಕ, ಮಾವು ಮೊದಲಾದ ಮರಗಳಿಂದ ಚೆಲುವಾದ ಉದ್ಯಾ ನವು ಪೂರ್ವದಲ್ಲಿ ಮಾಡಿದ ಪಾಪದಿಂದ ಕಂಟಕರೂಪವಾಗಿ, ತನ್ನನ್ನು ಬಳಸಿ ರುವ ಬೇಲಿಯಿಂದ ಕೂಡಿರುವುದು, ಅಲ್ಲದೆ ಬೇಲಿಯಲ್ಲಿ ಬೆಳೆದಿರುವ ತಾಳೆಯಗಿ ಡಗಳು ಕಂಟಕಿ ಸಮೂಹದ ದುಸ್ಸಹವಾಸದಿಂದ ಮೈಯೆಲ್ಲವೂ ಮಲಿನವಾಗಿ, ದುಂಬಿಗಳ ಕೋಟಲೆಗೆ ಸಿಕ್ಕಿಹೋಗಿರುವುವು. ಇಂಥ ಸಹವಾಸವು ನಮಗೆ ಬೇಡವೆಂದು ಅತ್ಯಂತ ಮನೋಹರವಾಗಿರುವ ಸಂಪಗೆಯ ಹೂಗಳನ್ನು ನೋಡಿ, ಮುಡಿವಾಳ, ಲಾವಂಚ, ಅಗರು, ಚಂದನ ಮೊದಲಾದ ಮರಗಳು ಬೇರೂರಿ, ಬೆಳೆದು, ಅಚ್ಚಮಲ್ಲಿಗೆಯ ಮತ್ತು ಜಾಜಿಯ ಹೂಗಳಿಂದ ಕೂಡಿ, ಸುವಾಸನೆ ಯನ್ನು ಬೀರುತ್ತಿರುವುವು. ತಂಗಾಳಿಗೆ ತನಿಗಂಪನ್ನು ಕೊಡದಿರುವ ಮರಗಳು ಈ ಉದ್ಯಾನದಲ್ಲಿ ಇಲ್ಲ. ಇಂತಪ್ಪ ನಂದನದ ಮಧ್ಯಭಾಗದಲ್ಲಿರುವ ಸರೋವರ ದಲ್ಲಿರುವ ಅರಳಿರುವ ತಾವರೆಯುಗಳಲ್ಲಿ ತುಂಬಿಕೊಂಡಿರುವ ಮಕರಂದವನ್ನು ಸವಿ ದು ಜೊತೆಗೂಂಡು ಸುಖಿಸಿ ಝೇಂಕರಿಸುತ್ತಿರುವ ಮರದುಂಬಿಗಳ ಬಳಗವನ್ನು ನೋಡು. ಎಲೈ ವೃಷಕೇತುವೇ ಇಂದ್ರನ ವಜ್ರಘಾತಕ್ಕೆ ಹೆದರಿ ಸಮುದ್ರಕ್ಕೆ ಹೋಗಿ ಬೀಳುತ್ತಿರುವ ಗಿರಿಸಮೂಹದ ಮರಿಗಳೊ, ಸಮುದ್ರದ ನೀರನ್ನು ಕುಡಿಯಲೆಂದು ಬಾನಿಂದ ಭೂಮಿಗಿಳಿದ ಮುಗಿಲ ಮೋಹರವೋ, ದಿಗ್ಗಜಗಳು

ಅನೇಕ ರೂಪವನ್ನು ತಾಳಿದವೊ ಎನ್ನುವಂತೆ ನಗರದಿಂದ ನಂದನಸರೋವರಕ್ಕೆ ಜಲಕೇಳಿಗಾಗಿ ಬರುತ್ತಿರುವ ಮದ್ದಾನೆಗಳ ಗುಂಪು ಹೊಳೆಯುತ್ತಿರುವುದು. ನೀಚರಲ್ಲಿ ಬಿಕ್ಷವನ್ನು ಬೇಡುವ ಯಾಚಕರಹಾಗೆ, ಊರಿಂದ ಹೊರಟು ಸರೋವರದೆಡೆಗೆ ಬಂದು ನೀರಿನಲ್ಲಿ ಮುಳುಗುತ್ತಿರುವ ಆನೆಗಳ ಮದಧಾರೆಯ ಸೊಂಪನ್ನು ತೊರೆದು ದುಂಬಿಗಳು ದೂರಹೋಗಲು ಪರೋಪಕಾರಿಗಳಲ್ಲದವರನ್ನು ಗೆಹೆಗಹಿಸಿ ನಗುವಂತೆ ಅರಳಿದ ಅಚ್ಚದಾವರೆಯ ಹೂಗಳು ಮಧುರವಾದ ಮಕರಂದವನ್ನು ಕೊಡುತ್ತಿರುವುವು. ಮಳೆಗಾಲದ ಮೋಡಗಳಹಾಗೆ ಗುಂಪಾಗಿ ಸೇರಿದು ನೀರು ಕುಡಿಯುವುದಕ್ಕಾಗಿ ಊರ ಹೆಬ್ಬಾಗಿಲಿಂದ ಹೊರಗೆ ಬಂದು, ತಿರುಗಿ ಹೋಗುತ್ತಿರುವ ಕುದುರೆಗಳ ಸಮೂಹವು ಮಾರ್ಗದಲ್ಲಿ ಸಂದಣಿಸಿರುವುದು. ಇಂಥಾ ಸೌಭಾಗ್ಯವು ಭದ್ರಾವತೀನಗರದ ರಾಜನಿಗಲ್ಲದೆ ಲೋಕದಲ್ಲಿ ಮತ್ತಾರಿಗುಂಟು ? ಆಹಾ ! ಈತನ ವೈಭವವನ್ನು ನಾನು ಎಷ್ಟುಹೇಳಲಿ ! ಎಂದಿತು ಭೀಮಸೇನನು ಆಶ್ಚರ್ಯಗಳನ್ನು ವೃಷಕೇತುವಿಗೆ ತೋರಿಸುತ್ತಿರಲು, ಕುದುರೆಗಳ ವೇಗವನ್ನು ನಿವಾರಿಸುವ ಭದ್ರಾವತೀನಗರದ ಜನಗಳನ್ನು ಕಂಡು, ಕಾಲ್ಗೆಟ್ಟು ನಡೆಯಲಾರದೆ ಮೆತ್ತಗೆ ಹೋಗುವ ತನ್ನ ರಥಾಶ್ವಗಳನ್ನು ನೋಡಿ. ಸೂರ್ಯನು ಬಹಳವಾದ ಕೋಪದಿಂದ ಉರಿಯನ್ನು ಸುರಿಸಿದನೋ ! ಎನ್ನುವಂತೆ ಬಿಸಿಲು ಬಲವಾಗಿ ಏರಿತು ಆಗ ಭೀಮಸೇನನು ಅಕಟಾ ! ಸೂರ್ಯನು ನಡುಹಗಲಿಗೆ ಬಂದನು, ಈ ಕುದುರೆಗಳ ಗುಂಪುನಲ್ಲಿ ನಾನು ಯಜ್ಞಾಶ್ವವನ್ನು ಕಾಣೆನಲ್ಲಾ, ಅದು ಇಲ್ಲಿಇಲ್ಲವೋ ! ಅಥವಾ ಅದನ್ನು ಹೊರಕ್ಕೆ ಬಿಡಲೊ ಇಲ್ಲವೆ ನನಗೆಕಾಣಿಸದೆ ಇರುವುದೋ ಇದರ ಕಾರಣವನ್ನು ನಾವು ಹೇಗೆ ತಿಳಿಯಲಿ. ಎಲೈ ವೃಷಕೇತುವೆ ! ಹೇಳು ಎಂದು ಭೀಮನು, ಚಿಂತಾಕುಲನಾಗಿ ನುಡಿಯುತ್ತ ದೇವಪುರನಿಲಯ ಲಕ್ಷ್ಮೀರಮಣನನ್ನು ಸ್ಮರಿಸುತ್ತಿದ್ದನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತಲಸದರುಣ ಚರಣ ಸರೋಜ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿ ನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ

ಮೂರನೆಯ ಅಧ್ಯಾಯಂ ಸಂಪೂರ್ಣಂ.



# ನಾಲ್ಕನೆಯ ಸಂಧಿ.

ಕುದುರೆಯನ್ನು ತೆಗೆದುಕೊಂಡು ಭೀಮಸೇನನು ಹಸ್ತಿನಾವತಿಗೆ ಬಂದುದು.

ಎಲೈ ಜನಮೇಜಯರಾಯನೇ ! ಕೇಳು, ಪ್ರಣಯಕೋಪದಿಂದ ಮುನಿಸಿಕೊಂಡ ಪ್ರೇಯಸಿಯ ಮುಖಕಮಲದಲ್ಲಿ ಹುಸಿನಗೆಯುಂಟಾಗುವವರೆಗೂ ಸಂತಾಪ ಪಡುತ್ತಿರುವ ನಾಗರಿಕ ಪುರುಷನಂತೆ, ಭೀಮನು ■ ಉತ್ತಮಾಶ್ವವು ಹೊರಗೆಬರುವವರೆಗೂ ಚಿಂತಿಸುತ್ತಿದ್ದು ವೃಷಕೇತುವಿನ ಮುಖವನ್ನು ನೋಡಿ ತನ್ನನ್ನು ತಾನೇ ನಿಂದಿಸಿಕೊಂಡನು. ನಾನು ಈ ಉತ್ತಮಾಶ್ವವನ್ನು ತಂದುಕೊಡುವೆನೆಂದು ಗುರುವಾದ ವ್ಯಾಸನಿಗೂ, ದೇವನಾದ ಶ್ರೀಹರಿಗೂ, ಸ್ವಾಮಿಯಾದ ಧರ್ಮರಾಯನಿಗೂ, ಹೇಳಿದವನಾದೆ ಈಗ ಅದನ್ನು ತಂದೊಪ್ಪಿಸದೆ ಹೋದರೆ ಗುರುದ್ರೋಹ, ದೈವದ್ರೋಹ, ಸ್ವಾಮಿದ್ರೋಹಗಳೂ, ಪ್ರತಿಜ್ಞಾಭಂಗದಿಂದ ಆತ್ಮದ್ರೋಹವೂ ಧರ್ಮಕಾರ್ಯಕ್ಕೆ ನೆರವಾಗದ ಪರಾಕ್ರಮದಿಂದ ಧರ್ಮದ್ರೋಹವೂ ಕೂಡಿ ಐದುಬಗೆಯಾದ ಪಾಪಗಳು ನನಗೆ ಬಂದಿರುವವೆ ? ವ್ಯಾಸನು ಸುಳ್ಳು ಹೇಳಿದನೆ ? ಸುಳ್ಳಾಗಿದ್ದರೆ ಕೃಷ್ಣನು ಒಪ್ಪುತ್ತಿದ್ದನೆ ? ಒಪ್ಪಿದರೂ ಉತ್ತಮವಾದಶಕುನಗಳು ಜಯವನ್ನು ಸೂಚಿಸುತ್ತಿದ್ದವೆ? ಹಾಗೆ ಶಕುನಂಗಳು ಬೇಕಾಗಿ ಜಯವನ್ನು ತೋರಿಸಿದರೂ, ಧರ್ಮರಾಯನು ಭಾಗ್ಯಹೀನನೆ ? ಹಾಗಾದರೂ, ಚಂದ್ರವಂಶಕ್ಕೆ ಅಪಯಶಸ್ಸುಂಟಾಗುವುದೆ ? ಹಾಗೆ ಅಪಯಶಸ್ಸುಂಟಾದರೆ

ಭೂಲೋಕವು ನಿಂತಿರುವುದೆ ? ಒಂದುವೇಳೆ ಭೂಲೋಕವೂ ನಿಂತಿದ್ದರೆ ನನ್ನ ಮಾತು ಬಂಜೆಯಾಗುವುದೆ ? ಇದು ಹೊಸದು, ಯಾವ ಪಾಪಕರ್ಮದಿಂದ ಕುದುರೆಯು ಕಾಣಿಸದಿರುವುದೋ ! ಕಾಣೆನೆಂದು ಕೊರಗಿ, ಪಾಪಿಯಾದವನಿಗೆ ಆಡಿದ ಮಾತು ಸುಳ್ಳಾಗುವುದು. ಪರಸ್ತ್ರೀಗಾಮಿಗೆ ಮನೋವೃತ್ತಿಯು ಹಾಳಾಗುವುದು. ಗುರುವನ್ನೂ ಬ್ರಾಹ್ಮಣನನ್ನೂ ಕೊಂದವರಿಗೆ ಕಂಡವಸ್ತುವೂ ಕಾಣದಂತೆ ಮರೆಯಾಗುವುದು ಇದುಜಗತ್ಪ್ರಸಿದ್ಧವಾಗಿರುವುದು. ನಾನು ಯಾವ ಜನ್ಮದಲ್ಲಿ ಏನು ಪಾಪವನ್ನು ಮಾಡಿದ್ದೆನೋ ! ಅಲ್ಲದೆ ಶ್ರೀಕೃಷ್ಣನು ತನ್ನ ಭಕ್ತರಕ್ಷಣೆಯನ್ನು ತೊರೆದನೋ ! ಶಿವಶಿವಾ ! ಕುದುರೆಯು ಏತಕ್ಕೆ ಇನ್ನೂ ಕಾಣಿಸದಿರುವುದು ವ್ಯಾಸೋಕ್ತವಾದ ಲಕ್ಷಣಗಳಿಂದ ಕೂಡಿದ ಕುದುರೆಯು ಈ ನಗರದಲ್ಲಿಲ್ಲದಿದ್ದರೆ ನಾನು ಹೇಗೆ ಧರ್ಮರಾಯನಿಗೆ ಮುಖವನ್ನು ತೋರಿಸಲಿ ! ಎಲ್ಲಿದ್ದರೂ ಹುಡುಕಿತಾರದಿದ್ದರೆ ನನ್ನ ಭಾಷೆಯು ಉಳಿಯಲಾರದೆಂದು ಬಗೆಬಗೆಯಾಗಿ ಹಂಬಲಿಸುತ್ತಿದ್ದನು. ಅಷ್ಟರಲ್ಲಿಯೇ ನಿರ್ಮಲವಾದ ವಸ್ತ್ರಾಭರಣಗಳಿಂದಲಂಕರಿಸಿ ಮನೋಹರವಾದ ಗಂಧಮಾಲ್ಯಾದಿಗಳಿಂದ ಪೂಜಿಸಿ, ಛತ್ರಚಾಮರಗಳಿಂದ ಬಳಸಿ, ಅನೇಕವಿಧವಾದ ಸೇನೆಯಿಂದ ಸುತ್ತಿ, ಹೊಗಳುತ್ತಿರುವ ಸಾರಥಿಗಳ ವಾಘೆಯನ್ನು ಪಿಡಿದಿರುವ ರಾವುತರ ಸಮೂಹದೊಡನೆ, ಮಂಗಳವಾದ್ಯಗಳು ಭೋರ್ಗರೆಯುತ್ತಿರಲು ಆ ಕುದುರೆಯು ನೀರ್ಗುಡಿಯಲು ಬರುತ್ತಿದ್ದಿತು.

ಆಗ ಪರ್ವತಾಗ್ರದಲ್ಲಿ ಕುಳಿತಿದ್ದ ಭೀಮನು ಬಹುಬಲಯುಕ್ತನಾದ ಯೌವನಾಶ್ವ ಭೂಪಾಲನ ಭಾಗ್ಯಲಕ್ಷ್ಮಿಯು ಕುಡಿನೋಟದಂತೆ ಹೊಳೆಯುತ್ತಿರುವ ಆ ಕುದುರೆಯನ್ನು ಕಂಡು, ಚಂದ್ರೋದಯದಲ್ಲಿ ಉಕ್ಕುವ ಸಮುದ್ರದಂತೆಯೂ, ಅಮೃತವನ್ನು ಕಂಡು ನಲಿಯುವ ದೇವೇಂದ್ರನಂತೆಯೂ, ಸಂತೋಷವನ್ನು ಹೊಂದಿ, ಕಲಾಕೋವಿದನಾದುದರಿಂದ ಚದುರಪದಗತಿಯಿಂದಲೂ, ಸರಸವಾದ ಧ್ವನಿಯಿಂದಲೂ, ಸುವರ್ಣಶೋಭಿತವಾದ ಅಲಂಕಾರಂಗಳಿಂದಲೂ, ಸಲ್ಲಕ್ಷಣಲಾವಣ್ಯದ ಲಲಿತತೆಯಿಂದಲೂ, ಶ್ರುತಿರಂಜನವಾದ ವಿಶೇಷಾರ್ಥಗಳಿಂದಲೂ ಕೂಡಿ ಹೊಳೆಯುವ ಸತ್ಕವಿಯ ಪ್ರೌಢಗ್ರಂಥದಂತೆ ಮನೋಹರವಾಗಿರುವ ಕುದುರೆಯನ್ನು ಕಂಡು ಸಂತೋಷಪಟ್ಟನು. ಬಳಿಕ ಮೂರು ಲೋಕಗಳಲ್ಲಿಯೂ ಇಂಥ ಆಶ್ಚರ್ಯಕರವಾದ ಕುದುರೆಯೆ ಇಲ್ಲವೆಂದು ಭೀಮಸೇನನು ಅಕ್ಕರೆಯಿಂದ ನೋಡುತ್ತಿರಲು, ಮೇಘನಾದನು ಮುಂದೆ ಬಂದು ಭೀಮಸೇನನ ಕಾಲಿಗೆರಗಿ, ಸ್ವಾಮಿಾ ! ಇನ್ನು ನನ್ನ ಪರಾಕ್ರಮವನ್ನು ನೋಡು ಎಂದು ಹೇಳುತ್ತ ಯೌವನಾಶ್ವನ ಅಶ್ವರಕ್ಷೆಯ ಕಾಲ್ಬಲವು ಕಣ್ಗೆಡುವಂತೆ ಮಾಯಾಜಾಲವನ್ನು ಬೀಸಿದನು. ಎಲ್ಲಾ ಕಡೆಯಲ್ಲಿಯೂ ಪ್ರಳಯ

ಕಾಲದ ಕಾಲಮೇಘವು ಮುತ್ತಿಕೊಂಡಿತು. ಬರಸಿಡಲು ಬೀಳಲಾರಂಭಿಸಿತು. ಬಿರುಗಾಳಿಯು ಮೊರೆದು ಬೀಸಿತು. ಕಗ್ಗತ್ತಲೆಯು ಕವಿದುಕೊಂಡಿತು. ಕೆಂಧೂಳಿಯು ಕಡಲಿಸಹಾಗೆದ್ದು ಕಣ್ಣುತೆರೆಯುವುದಕ್ಕಾದಂತೆ ಆಗಿ ದಿಕ್ಕು ತೋರದಂತೆ ಇದ್ದಿತು. ಯೌವನಶ್ವನ ಸೇನೆಯು ಮೇಘನಾದನ ಮಾಯದಿಂದ ಕೊರಗಿತು.

ಆಗ ಆಕಾಶದಲ್ಲಿ ಸಂಚರಿಸುತ್ತಿದ್ದ ಗಂಧರ್ವನೊಬ್ಬನು ಈ ಮಾಯವನ್ನು ಕಂಡು ಇಂದ್ರನಿಗೆ ದೂರಿದನು. ಆತನು ತನ್ನ ಚಾರಕರನ್ನು ಕಳುಹಿಸಿ ಹೀಗಾಗಲು ಕಾರಣವೇನೆಂದು ಕೇಳಿಸಲು, ಭೀಮನ ಮೊಮ್ಮಗನಾದ ನಾನು ಧರ್ಮರಾಯನ ಯಾಗಕ್ಕಾಗಿ, ಕುದುರೆಯನ್ನು ತೆಗೆದುಕೊಂಡು ಹೋಗುತ್ತಿರುವೆನೆಂದು ಹೇಳಿದನು ಇಂದ್ರನು ಆ ಮಾತನ್ನು ಕೇಳಿ ಸಂತೋಷದಿಂದ ಸುಮನಸರೊಡಗೂಡಿ ಯುದ್ಧವನ್ನು ನೋಡುವುದಕ್ಕಾಗಿ ಬಂದನು. ಇತ್ತಲಾದರೋ ಮೇಘನಾದನು ಕೆಂಧೂಳಿನಲ್ಲಿ ಮುಳುಗಿ, ಕತ್ತಲೆಯಿಂದ ಕಣ್ಗೆಟ್ಟು ಕೊರಗುತ್ತಿದ್ದ ಅಂಗರಕ್ಷೆಯ ಸೇನೆಯನ್ನು ಬಡಿದು, ಯೌವನಾಶ್ವನ ಮಕ್ಕಳನ್ನು ಕೆಡವಿ, ಕಲಹಂಸವು ಕಮಲಾಕರದಿಂದ ತಾವರೆಯನ್ನು ಕಿತ್ತುಕೊಂಡೇಳುವಂತೆ, ಆ ಉತ್ತಮಾಶ್ವವನ್ನು ತೆಗೆದುಕೊಂಡು ಅಂತರಿಕ್ಷಕ್ಕೆ ಹಾರಿದನು. ಭೀಮ ವೃಷಕೇತುಗಳು ಬೆರಗಾದರು. ರಾಹುನುಂಗಿದ ಚಂದ್ರಬಿಂಬವೋ, ಗರುಡನೆತ್ತಿಕೊಂಡೋಡುವ ಅಮೃತಕಲಶವೋ ಕಾಲಮೇಘದ ನಡುವೆ ಇರುವ ಬಳ್ಳಿಮಿಂಚಿನ ಹಬ್ಬುಗೆಯೋ, ಎನ್ನುವಂತೆ ಮೇಘನಾದನು ಎಡದಕಂಕುಳಲ್ಲಿ ಇರುಕಿಸಿಕೊಂಡೋಡುವ ಕುದುರೆಯನ್ನು ಅಂತರಿಕ್ಷದಲ್ಲಿ ಕಂಡು, ಯೌವನಾಶ್ವನ ಸೈನಿಕರು, ಕಮಲಬಾಂಧವನಾದ ಸೂರ್ಯನು ತನ್ನ ರಥಕ್ಕೆ ಇರುವ ಏಳು ಕುದುರೆಗಳ ಜೊತೆಗೆ ಮತ್ತೊಂದನ್ನು ಹೂಡಬೇಕೆಂದು ತೆಗೆದುಕೊಂಡು ಹೋಗುವನೋ, ಇಲ್ಲದೆ ಬಲಶಾಲಿಗಳಾದ ಹಗೆಗಳು ಬಾದು ಎಂಟು ದಿಕ್ಕುಗಳಲ್ಲಿಯೂ ಮುತ್ತಿಕೊಂಡರೋ, ಎನ್ನುವಂತೆ ಮೇಘನಾದನನ್ನು ಮುತ್ತಿಕೊಂಡು ಚತುರಂಗಸೇನೆಯು ಬರಲು ಅವನು ಆಕಾಶದಲ್ಲಿ ಆ ಬಲವನ್ನು ಸೈಪರಿದನು. ಅದನ್ನು ಕಂಡು ಎಲಾ ನೀಚನೆ ! ಮಾಯಾಜಾಲದಿಂದ ಕುದುರೆಯನ್ನು ಕದ್ದುಕೊಂಡೋಡುವ ನಿನ್ನನ್ನು ಯೌವನಾಶ್ವನ ಭಟರು ಪ್ರಾಣದಿಂದ ಬಿಡುವರೆ, ಅಯ್ಯೋ ! ಮುಂದುಗಾಣದೆ ನಮ್ಮನ್ನು ಕೆಣಕಿದೆಯಲ್ಲಾ ! ನಿನ್ನ ಜೀವವನ್ನು ಉಳಿಸಿಕೋ ಎಂದು ಗದರಿದರು.

ಹಿಂದಿರುಗಿ ನೋಡಿ ಮೇಘನಾದನು ಆಹಾ ! ಹೆಣವು ಪ್ರಾಣಹಾರಕನಾದ ಯಮನನ್ನು ಬೆನ್ನಟ್ಟುವಂತೆ ನಿಮ್ಮ ಸಾಹಸವು ಬಯಲಾಯಿತಲ್ಲಾ ಎಂದು ಕಲ್ಮಳೆಯನ್ನು ಸುರಿಸತೊಡಗಲು, ಅಕ್ಷೋಹಿಣಿಯ ಸಂಖ್ಯೆಯಿಂದ

ಯೌವನಾಶ್ವನ ಸೇನೆಯು ಮುತ್ತಿಗೆಯನ್ನು ಹಾಕಿತು, ತನ್ನಲ್ಲಿದ್ದ ಕುದುರೆಯನ್ನು ಕದ್ದುಕೊಂಡೋಡುವ ಮೇಘನಾದನನ್ನು ಹಿಡಿಯಲೆಂದು ಭೂಮಿಯೆ ಗಗನಕ್ಕೆ ಹಾರಿದಂತೆ ಮೊದಲಿಗಿಂತಲೂ ಹೆಚ್ಚಾಗಿ ಸೇನೆಗಳ ಪದಹತಿಯಿಂದೆದ್ದು ಕೆಂಧೂಳಿಯು ಆಕಾಶವನ್ನು ಮುಚ್ಚಿಕೊಂಡಿತು. ತಮ್ಮಟೆ, ಬೇರಿ, ಕೊಂಬು, ದವಣೆಗಳ ಶಬ್ದವೂ, ಆನೆಗಳ ಘಂಟಾನಾದವೂ, ಕುದುರೆಗಳ ಖುರಪುಟ ಧ್ವನಿಯೂ, ರಥದಗಾಲಿಗಳುಲಿವೂ, ವೀರಭಟರ ಸಿಂಹನಾದವೂ, ಶೂರರ ಚಾಪ ಟಂಕಾರವೂ, ರಣಧೀರ ಬೊಬ್ಬೆಯೂ, ಒಂದಾಗಿ ಬ್ರಹ್ಮಾಂಡವನ್ನು ಮುಚ್ಚಿಕೊಂಡಿತು. ಸುತ್ತಿಗೆಗಳನ್ನು ಎತ್ತಿಹಿಡಿಯಲು ಕತ್ತಲೆಯಾಗಿ, ಮಸೆವೆತ್ತ ಕತ್ತಿಗಳನ್ನು ಹಿಡಿದುಬರುವ ರಾವುತರ ಕೈಬೆಳಗಿನಿಂದ ಸೈನ್ಯದಲ್ಲಿ ಬೆಳಕಾಗುತ್ತಿರಲು ಮದ್ದಾನೆಗಳ ತಂಡದಲ್ಲಿ ಮಿರುಗುವ ಚಾಮರಗಳು ಯುದ್ಧರಂಗದ ಲಕ್ಷಣಗಳನ್ನು ಚಿತ್ರಿಸುತಿದ್ದವು. ಹೀಗೆ ತನ್ನನ್ನು ಹಿಂದಟ್ಟಿಕೊಂಡು ಬರುತ್ತಿರುವ ಶತ್ರುಸೇನೆಯನ್ನು ಲಕ್ಷ್ಯಮಾಡದೆ ಎಡದ ಕಂಕುಳಲ್ಲಿರುವ ಕುದುರೆಯನ್ನು ಭದ್ರಮಾಡಿಕೊಂಡು ಮೇಘನಾದನು ನಸುನಗುತ್ತ ಮುಂದೆ ಬರುತ್ತಿದ್ದನು.

ಅದನ್ನು ಕಂಡು ಕೈಲಾಗದ ಹೇಡಿಗಳನ್ನು ಹಿಂದಕ್ಕೆ ನೂಕಿ ವೀರಭಟರು ಮುಂದಕ್ಕೆ ಬರದು ನಿಲ್ಲು ! ನಿಲ್ಲು ! ಕುದುರೆಗಳ್ಳನನ್ನು ತೋರಿಸು ! ಎಲಾ ಚೋರನೇ ನಿನ್ನ ಜೀವದಲ್ಲಿ ಆಸೆಯುಂಟಾದರೆ ಕುದುರೆಯನ್ನು ಬಿಟ್ಟುಹೋಗು ಎಂದು ಚತುರಂಗಸೇನೆಯು ಮೇಲಾಯ್ದು ಮುತ್ತಿತು, ಓಹೋ ! ನಿಮ್ಮ ಸೈನ್ಯದಲ್ಲಿ ನೀವೇ ಶೂರರೋ ! ನಾನು ಕುದುರೆಯನ್ನು ಕದ್ದು ತಂದವನಲ್ಲ, ನಿಮ್ಮ ಕಣ್ಣೆದುರಿಗೆ ತೆಗೆದುಕೊಂಡು ಹೋಗುತ್ತಿರುವೆನು ಸಾಹಸಿಗಳಾದರೆ ಬಿಡಿಸಿಕೊಳ್ಳಿ ! ಎಂದು ಮೇಘನಾದನು ಮೂರುಲೋಕಗಳೂ ಬೆದರುವಂತೆ ಆರ್ಭಟಿಸಿದನು. ಆಗ ಸೇನೆಯನ್ನು ಮಾಯೆಯಿಂದ ಕೊಂದು ಕುದುರೆಯನ್ನು ಗಗನಮಾರ್ಗದಲ್ಲಿ ತೆಗೆದುಕೊಂಡೋಡುವ ಮೇಘನಾದನನ್ನು ಹಿಡಿದುತನ್ನಿ ಎಂದು ಯೌವನಾಶ್ವನು ಅಜೇಯರಾದ ಎಂಟುಸಾವಿರ ಜನಗಳನ್ನು ಕಳುಹಲು, ಅವರು ಆತನ ದಾರಿಗಡ್ಡವಾಗಿ ನಿಂತು, ಬಿಡು ! ಸಾಯಬೇಡ. ಕುದುರೆಯನ್ನು ಬಿಟ್ಟು ಬದುಕಿಕೊ ಎಂದು ಬಾಣಗಳ ಮಳೆಯನ್ನು ಸುರಿಸುತ್ತಿರಲು ಅಯ್ಯಾ ! ನೀವುಶೂರರೇ ಹೌದು ? ಸ್ವಾಮಿಕಾರ್ಯದಲ್ಲಿ ನಿರತರು, ನನಗಾದರೋ ಜೀವದಾಸೆಯೇಇಲ್ಲ ಎಂದು ಹೇಳುತ್ತ ಮೇಘನಾದನುಗದೆಯಿಂದ ಅವರನ್ನೂ ಅವರ ರಥಾಶ್ವಗಜಪದಾತಿಗಳನ್ನು ಬಡಿದು ಕೆಡವಿದನು. ಕೂಡಲೆ ಆನೆಕುದುರೆಗಳಿಂದ ಕೂಡಿದ ರಥಪದಾತಿಳ ಮತ್ತೊಂದು ಸೇನೆಯು ಬರಲು ಮೇಘನಾದನು ಕ್ಷಣಮಾತ್ರದಲ್ಲಿ ಅದನ್ನು ಆಹುತಿಗೊಂಡದು. ಬಳಿಕ ಯೌವನಾಶ್ವನ ಮಗನು ಅಟ್ಟಹಾಸದಿಂದ ಸೇನೆ

ಯೊಡನೆ ಯುದ್ಧಕ್ಕೆ ನಿಂತನು. ಆತನನ್ನೂ ಲಕ್ಷ್ಯಮಾಡದೆ ರಕ್ಕಸನು ಕಕ್ಕಸನಾಗಿ ಕುದುರೆಯನ್ನು ತೆಗೆದುಕೊಂಡೋಡಿದನೆಂಬ ವಾರ್ತೆಯನ್ನು ಕೇಳಿ, ಯೌವನಾಶ್ವನು ಆಹಾ ! ಇದೇನು ಆಶ್ಚರ್ಯ ! ಅರಳಿದ ಸಂಪಗೆಯ ರಸವನ್ನು ಕುಡಿಯುವುದಕ್ಕೆ ಮರಿದುಂಬಿಯು ಬಂದಹಾಗಾಯಿತು ! ಇದು ಹೊಸದು ನೋಡೋಣ ! ಎಂದು ತಾನೇ ಸೈನ್ಯವನ್ನು ತೆಗೆದುಕೊಂಡು ಹೊರಟನು. ಆಗ ಭಗೀರಥನನ್ನು ಮೀರಿ ಬರುವ ಗಂಗೆಯಪ್ರವಾಹದಂತೆ ಸೇನೆಯು ತಂಡತಂಡವಾಗಿ ಹೊರಟಿತು. ಭೂಮಿ ನಡುಗುವಂತೆ ನಡೆದು ಬರುತ್ತಿರುವ ಸೇನೆಯನ್ನು ಕಂಡು, ವೃಷಕೇತುವು ಕೋಪದಿಂದ ಕುದಿಯುತ್ತ ಕುದುರೆಯನ್ನೊಂದುಮರದ ಬುಡಕ್ಕೆ ಬಿಗಿದು, ಅದರ ಕಾವಲಿಗಾಗಿ ಮೇಘನಾದನನ್ನು ನಿಲ್ಲಿಸಿ, ತಮ್ಮಮೇಲೆ ನುಗ್ಗಿ ಬರುವ ಸೇನೆಗಿದಿರಾಗಿ ತಾನೆ ನಿಂತುಕೊಂಡನು. ಆಗ ರೋಷಾವೇಶದಿಂದ ಬರುವ ಸುವೇಗನ ಸೇನೆಗಿದಿರಾಗಿ, ಭೀಮಸೇನನು ಮಹಾವಾತಘಾತಕ್ಕೆ ಹೆದರದೆ ನಿಲ್ಲುವ ಕುಲಾಚಲದಂತೆ ತಾನೇ ನಿಂತುಕೊಂಡನು.

ಎಲೈ ಜನಮೇಜಯರಾಯನೇ ! ಕೇಳು. ಇತ್ತ ಸುವೇಗನ ಬಲದಲ್ಲಿ ಕೆಂಧೂಳಿ ಎದ್ದು ದಿಗ್ಜಾಲವನ್ನು ಮುತ್ತಿಕೊಳ್ಳಲು, ಭೀಮನು ಅದನ್ನು ಸಹಿಸಲಾರದೆ ತಳಮಳಿಸುತ್ತಿರುವ ಕತ್ತಿಗಳನ್ನೆತ್ತಿ ಬಿಲ್ಲನ್ನು ತಿರುವುತ್ತ ಕೈದೀಂಟಿಯನ್ನು ಹೋಗಲಾಡಿಸಿಕೊಳ್ಳಬೇಕೆಂದಿರುವ ಸಮಯದಲ್ಲಿ ವೀರಭಟರ ಸಮೂಹದೊಡನೆ ಯೌವನಾಶ್ವನು ಬಂದು ಕುದುರೆಗಳ್ಳನಾರೋ ಕಾಣೆ ಬಲು ಶೂರನಾಗಿರಬಹುದು, ಆಹಾ ! ಅವನೆಲ್ಲಿ ತೋರಿಸು ! ಅವನ ರಕ್ತವನ್ನು ಚೆಲ್ಲಿ ಭೂತಗಣಗಳಿಗೆ ಹಬ್ಬವನ್ನು ಮಾಡುವೆನೆಂದು ಗರ್ಜಿಸಲು ವೃಷಕೇತುವು ಇದಿರಾಗಿ ಬಂದು ಧೈರ್ಯದಿಂದ ಬಾಣವನ್ನು ಹೊಡೆದನು. ಆಗ ಯೌವನಾಶ್ವನು ಎಲಾ ! ನೀನು ಯಾರು ? ಇನ್ನೂ ಹುಡುಗನಾಗಿರುವೆ ? ನನ್ನೊಡನೆ ಯುದ್ಧಕ್ಕೆ ಬಂದೆಯೊ ! ನಿನ್ನೊಡನೆ ನಾನು ಕಾಯಲೊಲ್ಲೆನು, ಕುದುರೆಯನ್ನು ಬಿಟ್ಟುಹೋಗು ಎಂದು ಹೇಳಿದನು. ಅದನ್ನು ಕೇಳಿ ವೃಷಕೇತುವು ಅಯ್ಯಾ ! ಯಾರಾದರೇನು ? ಹಗೆಯು ದೊಡ್ಡದಾಗಿರುವುದೆಂದು ಸಿಂಹದಮರಿಯು ಹೆದರುವುದೆ ? ನಾನು ಕುದುರೆಯನ್ನು ಬಿಡುವುದಿಲ್ಲ, ನೀನು ಶೂರನಾಗಿದ್ದರೆ ಬಿಡಿಸಿಕೊ, ದೊಡ್ಡವನು ಚಿಕ್ಕವನೆಂಬ ಕವಿಕರ ವಿನಗೇಕೆ ? ಎಲ್ಲಿ ನಿನ್ನ ಸಾಹಸವನ್ನು ತೋರಿಸು ಎಂದು ಮೂರ್ಛೆಹೋಗುವಂತೆ ಯೌವನಾಶ್ವನನ್ನು ಹೊಡೆದನು. ಯೌವನಾಶ್ವನು ಅದನ್ನು ಸಹಿಸಿಕೊಂಡು ಅಯ್ಯಾ ! ಮೂರುಲೋಕದಲ್ಲಿಯೂ ನನ್ನೊಡನೆ ಯುದ್ಧಮಾಡುವ ಶೂರರೇ ಇಲ್ಲ, ನಮಗೆ ಸಾಹಸವೂ ಉಂಟು, ಆದರೆ ಮಾಡುವುದೇನು ? ಇದೂ ನಮ್ಮ ಪುಣ್ಯವೇ ಸರಿ ! ಎಂದು ಆಕರ್ಣಾಂತವಾಗಿ ಸೆಳೆದ ಬಾಣವನ್ನು ಹೊಡೆದನು ಅದನ್ನು ತುಂಡುಮಾಡಿ

ಸಮುದ್ರವು ಮೇರೆದಪ್ಪಿದಂತೆ ವೃಷಕೇತುವು ತನ್ನ ಬಾಣಗಳಿಂದ ಯೌವನಾಶ್ವ ನನ್ನು ಮುತ್ತಿದನು. ಒಬ್ಬನು ಬಿಟ್ಟಬಾಣವನ್ನು ಬೇರೊಬ್ಬನು ಕಡಿದುಹಾಕುತ್ತ ರೋಷದಿಂದ ಯುದ್ಧಮಾಡುತ್ತಿದ್ದ ವೃಷಕೇತುವು ಯೌವನಾಶ್ವನ ಶಕ್ತಿಯನ್ನೂ ಕುಂದಿಸಿ, ಸಾರಥಿಯನ್ನು ಕೆಡಹಿ ಕುದುರೆಗಳನ್ನು ತರಿದು, ಬಾಣಗಳನ್ನು ಕಡಿದು, ಪ್ರತಿ ಬಾಣಗಳನ್ನು ಹೊಡೆದು, ಯೌವನಾಶ್ವನ ಮೈಯನ್ನೂ ಬಲೆ ಯಂತೆ ತೂತುತೂತಾಗಿ ಮಾಡಿದನು.

ಆಗ ಯೌವನಾಶ್ವನು ತನ್ನ ಮೈಯಲ್ಲಿ ಸಿಕ್ಕಿದ ಬಾಣಗಳನ್ನು ಕಿತ್ತು ಹಾಕಿ ಗಾಯಗಳನ್ನು ಲಕ್ಷ್ಯಮಾಡದೆ, ಅತ್ಯಂತ ರೋಷದಿಂದುರಿಯುತ್ತ ಕಣ್ಣು ಗಳಿಂದ ಉರಿಯು ಹೊರಸೂಸುವುದೋ, ಎನ್ನುವಂತೆ ಕೆಂಪಾದ ಕಣ್ಣುಗಳುಳ್ಳ ವನಾಗಿ ಆಗ್ನೇಯಾಸ್ತ್ರವನ್ನು ಹೂಡಿ ಕಿವಿವರೆಗೆಳೆದು ಹೊಡೆದನು, ವೃಷಕೇ ತುವು ವಾರುಣಾಸ್ತ್ರದಿಂದದನ್ನು ನಿವಾರಿಸಿಕೊಂಡು ನಸುನಗುತ್ತಿದ್ದನು. ಬಳಿಕ ಯೌವನಾಶ್ವನು ಮೇಘಾಸ್ತ್ರವನ್ನು ಹೂಡಲು ವೃಷಕೇತು ವಾಯುವ್ಯಾಸ್ತ್ರ ದಿಂದ ಅದನ್ನು ತಡೆಗಡಿದನು. ತಿಮಿರಾಸ್ತ್ರವನ್ನು ಬಿಡಲು ಸೂರಾಸ್ತ್ರದಿಂದ ಅದ ನ್ನು ಪರಿಹರಿಸಿದನು. ಪರ್ವತಾಸ್ತ್ರವನ್ನು ಹೂಡೆಯಲು ಇಂದ್ರಾಸ್ತ್ರದಿಂದಅದನ್ನು ಕಡಿದುಹಾಕಿದನು. ಸರ್ಪಬಾಣವನ್ನು ಹೂಡಿ ಹೊಡೆಯಲು ಗರುಡಾಸ್ತ್ರದಿಂದ ಶತ್ರುಬಲವನ್ನು ಮುರಿದನು. ಅದನ್ನು ಕಂಡು ಯೌವನಾಶ್ವನು ಎಲಾ ತರುಣಾ ! ಶಹಬಾಸ್ ! ನಿನಗೆ ಮಂತ್ರಾಸ್ತ್ರಗಳ ಪ್ರಯೋಗವೂ ತಿಳಿದಿದೆ ಆಹಾ ! ನೀನೆ ಶೂರನು ಎಂದು ಹೇಳುತ್ತ ಮಾಯಾಯುದ್ಧವನ್ನು ಪ್ರಾರಂಭಿಸಿ ಆಕಾಶದಲ್ಲಿ ಅಂಬುಗಳ ಸೇತುವೆಯನ್ನು ಕಟ್ಟಿದನು.

ವೃಷಕೇತುವು ಕ್ಷಣಮಾತ್ರದಲ್ಲಿ ಆ ಸೇತುವೆಯನ್ನು ಕಡಿದು ಹಾಕಲು ಪರ್ವತದಂತೆ ಬಾಣಗಳ ರಾಶಿಯು ಉದಿರಿ ಭೂಮಿಗ ಬಿದ್ದಿತು. ಹೀಗೆ ಬಗೆಬಗೆ ಯಾದ ಬಲ್ಮೆಯಿಂದವರಿಬ್ಬರೂ ಸರಿಸಮನಾಗಿ ಯುದ್ಧಮಾಡುತ್ತಿರಲು, ವೃಷ ಕೇತುವಿನ ಪರಾಕ್ರಮಕ್ಕೆ ಮೆಚ್ಚಿ ಯೌವನಾಶ್ವನು ಎಲಾ ನೀನು ಹುಡುಗನಾ ದರೂ ಶೂರನೆಸರಿ ! ನಿನ್ನ ತಂದೆ ಯಾರು ? ಆತನ ತಂದೆಯ ಹೆಸರೇನು ? ಹೇಳು ಎನಲು, ಆಹಾ ! ಹೊಡೆಯುವದಕ್ಕೆ ಬಂದಕಾಲದಲ್ಲಿ ನೋವನ್ನು ಸಹಿಸಲಾ ರದೆ ತಂದೆತಾತಂದಿರನ್ನು ಕೇಳುವೆಯಾ ? ನನ್ನ ಪರಾಕ್ರಮದಿಂದಲೇ ಕರ್ಣನೆ ತಂದೆ ಸೂರ್ಯನೆ ತಾತ ಎಂಬುದನ್ನು ತಿಳಿಯಲಾರದೆ ಹೋದೆಯಾ ? ಅವರೀ ರ್ವರೂ ಹಗೆಗಳಿಗೆ ಒಳಗಾಗದ ವೀರರಲ್ಲವೆ ? ಎಂದು ಬಾಣವನ್ನು ಹೊಡೆದನು. ಓಹೋ ! ನೀನು ಬಾಣಚಮತ್ಕಾರವನ್ನು ತಿಳಿದ ಘಟುಭಟನಾಗಿರುವೆ ಈ ನನ್ನ ಬಾಣದ ಬಿಗಿಯನ್ನು ನೋಡು ಎಂದು ಯೌವನಾಶ್ವನು ಮರಳಿ ವೃಷಕೇ ತುವನ್ನು ಹೊಡೆದನು. ಆ ಆಶ್ಚರ್ಯವನ್ನು ಏನು ಹೇಳಲಿ ! ವೃಷಕೇತುವಿನ

ಬಾಣದ ಪೆಟ್ಟಿಗೆ ಯೌವನಾಶ್ವನ ಬಿಲ್ಲು ಬಾಣಗಳೂ, ರಥಕುದುರೆಗಳೂ, ಸಾರಥಿಯೂ ಚತುರಂಗಸೈನ್ಯವೂ, ನುಚ್ಚುನೂರಾಗಿ ಪುಡಿಪುಡಿಯಾಯಿತು.

ಎಲೈ ಜನಮೇಜಯರಾಯನೇ ! ಕೇಳು ಯೌವನಾಶ್ವನ ಸೇನೆಯ ಸಾಮರ್ಥ್ಯವನ್ನು ಏನೆಂದು ಹೇಳಲಿ, ತಲೆ ಬಿದ್ದಮೇಲೆ ಮುಂಡಗಳೇ ಕಾದುತ್ತಿದ್ದವು, ಮುಂಡವು ಬಿದ್ದರೆ ತಲೆಗಳೆದ್ದು ಕುಣಿದವು ತೋಳನ್ನು ಕಡಿಯಲು ಅವು ಆಯುಧಗಳನ್ನು ಮುರಿದವು, ಕಾಲುಗಳನ್ನು ಕತ್ತರಿಸಿದರೂ ಮುಂದೆ ನಡೆದವು, ದೀಪವನ್ನು ಮುತ್ತಿಕೊಳ್ಳುವ ಪತಂಗದ ಹುಳುವಿನಂತೆ ಕಡಿವ ಕೈಕಾಲುತಲೆಯುಳ್ಳ ಯೌವನಾಶ್ವನ ಸೇನೆಯು ವೃಷಕೇತುವನ್ನು ಮುತ್ತಿಕೊಂಡಿತು. ಇಂತಪ್ಪ ಸೇನೆಯ ಭಯಂಕರವಾದ ರಣರಂಗದಲ್ಲಿನೊಂದು, ಕಲ್ಪಾಂತ ಭೈರವನಾದ ಯಮನಹಾಗೆ ಮೂರ್ಛೆಗೆಡೆದು ಬಿದ್ದುಹೋದ ಯೌವನಾಶ್ವನನ್ನು ಕಂಡು ತಮ್ಮ ಪ್ರಾಣಗಳುಳಿದರೆ ಸಾಕೆಂದು ವೀರರೆಲ್ಲರೂ ದೂರವಾಗಿ ಸರಿದು ದಿಕ್ಕುದಿಕ್ಕುಗಳಿಗೆ ಓಡಿದರು. ಎಷ್ಟುಹೊತ್ತಾದರೂ ಹಗೆಯು ಎಚ್ಚರಗೊಳ್ಳದಿರುವುದನ್ನು ಕಂಡು ವೃಷಕೇತುವು ತನ್ನೊಡನೆ ಕಾದುವ ವೀರರೇ ಇಲ್ಲ. ಎಂದು ಹಮ್ಮೈಸಿ, ಆತನಬಳಿಗೆ ಬಂದು ಏನಯ್ಯಾ ! ಮೂರ್ಛೆಹೋಗಲು ಕಾರಣವೇನು ? ಎಂದು ಮಾತನಾಡಿಸಿದರೂ, ಎಚ್ಚರಗೊಳ್ಳದಿರುವ ಯೌವನಾಶ್ವನು ಬದುಕಿರುವನೋ ಇಲ್ಲವೋ ಎಂದು ಆತನ ಉಸುರನ್ನು ನೋಡಿ, ನಾನು ಸತ್ಯವಂತನಾಗಿ, ರಣಧೀರನಾಗಿ, ಕರ್ಣಪುತ್ರನಾಗಿದ್ದರೆ ಈ ಯೌವನಾಶ್ವನು ಬದುಕಲಿ ! ಎಂದು ದೇವರನ್ನು ಪ್ರಾರ್ಥಿಸಿ, ಶೈತ್ಯೋಪಚಾರದಿಂದ ಅವನನ್ನು ಉಪಚರಿಸುತ್ತಿರಲು ಯೌವನಾಶ್ವನು ಮೈಮುರಿದೆದ್ದನು. ಕೂಡಲೆ ಆತನಿಗರಿಯದಂತೆ ಕಡುವೇಗದಿಂದ ತನ್ನ ರಥದೆಡೆಗೆ ಬಂದು ಬಾಣವನ್ನುತಡುಕಿ, ಪರಾಕ್ರಮದಿಂದಾರ್ದು ಬೆದರಿಸುತ್ತ ತನ್ನ ಬಿಂಕವನ್ನು ತೋರಿಸಿ ವೃಷಕೇತುವು ನಿಂತುಕೊಂಡನು. ಆಗ ಎಚ್ಚತ್ತು ಸುತ್ತಲೂನೋಡಿ ತನ್ನವರಾರು ಇಲ್ಲದಿರಲು, ಯುದ್ಧವನ್ನು ಬಿಟ್ಟು, ಬೇಕಾಗಿ ಬೆದರಿಸುತ್ತಿರುವ ವೃಷಕೇತುವಿನ ಪರಾಕ್ರಮಕ್ಕೆ ಮೆಚ್ಚಿ ವೈರಾಗ್ಯವನ್ನು ಹೊಂದಿ ಶೌರ್ಯ ಧೈರ್ಯಗಳು ಇವನಲ್ಲಿ ಸಲ್ಲದು. ನನ್ನಲ್ಲಿ ಕರುಣವನ್ನು ತೋರಿಸಿದವನೊಡನೆ ಯುದ್ಧಮಾಡುವುದು ಸರಿಯಲ್ಲ ಎಂದು ತಿಳಿದು, ಎಲೈ ವೃಷಕೇತುವೇ ಲಾಲಿಸು, ಮೂರುಲೋಕದಲ್ಲಿಯೂ ನನಗೆ ಸಮರಾದ ಶೂರರೇ ಇಲ್ಲವೆಂದು ನಾನು ಮೆರೆಯುತ್ತಿದ್ದೆನು, ಅಂಥವನನ್ನು ನೀನು ಗೆದ್ದೆಯಾದುದರಿಂದ ನಿನ್ನ ಸಾಹಸಕ್ಕೆ ನಾನು ಮೆಚ್ಚಿದೆನು. ನೀನು ಯಾರ ವಂಶದವನು ? ಲೋಕವಿಖ್ಯಾತವಾದ ಈ ಕುದುರೆಯು ನಿನಗೇತಕ್ಕೆ ? ನನ್ನ ಶೀಲ ಸದಾಚಾರಗಳಿಗೆ ನಾನು ಆಳಾಗಿರುವೆನು ನನಗೆ ದಯಮಾಡಿ ತಿಳಿಸೆಂದು ಬೇಡಿಕೊಳ್ಳುತ್ತಿರುವ ಯೌವನಾಶ್ವನನ್ನು ಕುರಿತು

ಅಯ್ಯಾ ! ಹಾಗಾದರೆ ಕೇಳು, ಲೋಕಕ್ಕೆ ಕಣ್ಣಾಗಿರುವ ಸೂರ್ಯಭಗವಂತನಿಗೆ ಮಗನಾದ ಕರ್ಣನನ್ನು ಕೇಳಿರುವೆಯಷ್ಟೆ ? ಆತನ ಅಕ್ಕರೆಯ ಮಗನಾದ ನನ್ನನ್ನು ವೃಷಕೇತುವೆಂದು ಕರೆಯುವರು ಮಾನವ ಲೀಲಾರೂಪದಿಂದ ಪಾಂಡವರ ಪ್ರಾಣರೂಪವಾಗಿರುವ ಶ್ರೀಕೃಷ್ಣನು ತನ್ನ ಲೀಲಾ ವಿನೋದಕ್ಕಾಗಿ ಧರ್ಮರಾಜನಮೂಲಕ ಅಶ್ವಮೇಧವನ್ನು ಮಾಡಿಸುವನು, ಅದಕ್ಕಾಗಿ ಈ ಕುದುರೆಯನ್ನು ನಾನು ತೆಗೆದುಕೊಂಡು ಹೋಗುವೆನು ಎಂದು ಹೇಳಿದನು.

ಆಹಾ ! ನೀನು ಇದುವರೆಗೂ ಇದನ್ನು ನಮ್ಮೊಡನೆ ಹೇಳಲೆ ಇಲ್ಲವಲ್ಲಾ ! ಪ್ರತ್ಯಕ್ಷ ಧರ್ಮಸ್ವರೂಪನಾದ ಯುಧಿಷ್ಠಿರನ ಯಾಗಕ್ಕೆ ನನ್ನ ಕುದುರೆಯು ಸಲ್ಲುವುದಾದರೆ, ಲೋಕೋತ್ತರವಾದ ನಮ್ಮ ಭಾಗ್ಯವು ಶ್ರೀಹರಿಪ್ರೀತಿಯಾಗುವಂತೆ ಸಮರ್ಪಿಸುವೆನು. ನಿಮ್ಮ ಚಿಕ್ಕಪ್ಪನಾದ ಭೀಮನು ಎಲ್ಲಿ ತೋರಿಸು ಎಂದು ಕೇಳಲು, ಅಯ್ಯಾ ನಿನಗೆ ಕೃಷ್ಣಾರ್ಪಣವಾಗಿ ಸರ್ವಸ್ವವನ್ನು ಒಪ್ಪಿಸುವ ಮನಸ್ಸುಂಟಾದರೆ ಪಾಂಡವರಿಗೆ ಪರಮಪ್ರೀತಿಯುಂಟಾಗುವುದು. ಪಾಂಡವರು ತೃಪ್ತರಾದರೆ ಶ್ರೀಹರಿಯು ಮೆಚ್ಚದೆ ಇರನು. ಆದಕಾರಣ ನೀನು ಭೀಮನನ್ನು ಕಾಣುವುದು ನ್ಯಾಯವಾಗಿದೆ ಎಂದು ಹೇಳಿ ತಾವಿಬ್ಬರು ಹೊರಡುವುದಕ್ಕಾಗಿ ರಥವನ್ನು ಸಿದ್ಧಮಾಡಿದನು.

ಆಗ ವೃಷಕೇತುವು ಯೌವನಾಶ್ವನೊಡನೆ ಮಾತನಾಡುತ್ತ ಬರುತ್ತಿರುವುದನ್ನು ಕಂಡು ಆಕಾಶದಲ್ಲಿ ನೆರೆದಿದ್ದ ದೇವತೆಗಳು ಹೂಮಳೆಯನ್ನು ಸುರಿಸಿದರು. ಆಗಿನ ಕಾಲದಲ್ಲಿ ಸುವೇಗನೊಡನೆ ಯುದ್ಧಮಾಡುತ್ತಿದ್ದ ಭೀಮಸೇನನು ತನ್ನ ಗದಾದಂಡದಿಂದಾತನ ಚತುರಂಗಬಲವನ್ನು ಕಡಿದು ಕಾದುತ್ತಿರಲು ಸುವೇಗನು ಆತನ ಬಿಂಕವನ್ನು ಕೊಂಕಿಸುವಂತೆ ಪೋಣರುತ್ತಿರುವಷ್ಟರಲ್ಲಿಯೆ, ವೃಷಕೇತು ಯೌವನಾಶ್ವರು ಒಂದೇ ರಥದಲ್ಲಿ ಕುಳಿತು ಬರುತ್ತಿರುವುದನ್ನು ನೋಡಿ ಭೀಮ ಸುವೇಗರಿಬ್ಬರೂ ಆಶ್ಚರ್ಯಪಟ್ಟರು. ವೃಷಕೇತು ರಥದಿಂದಿಳಿದು ಯುದ್ಧಮಾಡುತ್ತಿರುವ ಭೀಮನನ್ನು ಯೌವನಾಶ್ವನಿಗೆ ತೋರಿಸಿದನ. ಆತನು ಮುಂದೆ ಬರುತ್ತ ಭಕ್ತಿಯುಳ್ಳವನಾಗಿ ತನ್ನ ಮಗನನ್ನು ಕುರಿತು, ಅಯ್ಯಾ ! ಇವರು ನಮ್ಮ ಕುದುರೆಯನ್ನು ಕದ್ದರೆಂದು ಕೋಪಿಸಬೇಡ, ಪಾಂಡುನಂದನನಾದ ಧರ್ಮರಾಯನು ಮಾಡುವ ಯಾಗಕ್ಕಾಗಿ ಶ್ರೀಕೃಷ್ಣನು ಈ ಕುದುರೆಯನ್ನು ತರುವಂತೆ ಇವರನ್ನು ಇಲ್ಲಿಗೆ ಕಳುಹಿಸಿರುವನಂತೆ. ಆದಕಾರಣ ನಮ್ಮ ಸರ್ವಸ್ವವನ್ನು ಶ್ರೀಹರಿಗೆ ಪ್ರೀತಿಯಾಗಿ ಒಪ್ಪಿಸುವೆವೆಂದು ಹೇಳಲು ಸುವೇಗನು ತಂದೆಯಬಳಿಗೆ ಬಂದನು.

ಬಳಿಕ ಅವರಿಬ್ಬರೂ ಭೀಮಸೇನನಿಗೆ ನಮಸ್ಕಾರಮಾಡಿ ಕೈಮುಗಿದು ನಿಂತುಕೊಂಡಿದ್ದರು. ಆಗ ಭೀಮನು ವೃತಕೇತುವನ್ನು ಕುರಿತು, ಅಯ್ಯಾ !

ಇವರಾರು ? ಎಂದು ಪ್ರಶ್ನೆಮಾಡಿದನು. ಸ್ವಾಮಿ ! ಇವನು ಈ ನಾಡಿಗರ ಸಾದ ಲೋಕೈಕವೀರನಾದ ಯೌವನಾಶ್ವನು ತಾನು ಆತನ ನೆಳಲಿನಂತಿರುವ ಸುವೇಗನೆಂಬ ಪುತ್ರನು ಇವರಿಬ್ಬರೂ ಕೃಷ್ಣನ ದರ್ಶನ ಮಾಡಬೇಕೆಂಬಾಸೆ ಯಿಂದ ತಮ್ಮ ಸರ್ವಸ್ವವನ್ನು ಧರ್ಮರಾಯನ ಪಾದಗಳಿಗೊಪ್ಪಿಸಿ ನಿಮ್ಮನ್ನು ಕಾಣುವುದಕ್ಕಾಗಿ ಬಂದಿರುವರೆಂದು ಹೇಳಿ ನಮಸ್ಕರಿಸಲು ಭೀಮನು ಅಕ್ಕರೆ ಯಿಂದ ಆ ತಂದೆಮಕ್ಕಳನ್ನು ತಕ್ಕೈಸಿ, ಮೃದುವಚನಗಳಿಂದ ಆದರಿಸಲು, ಯೌವನಾಶ್ವನು ಇಂತೆಂದನು:—

ಎಲೈ ಭೀಮಸೇನನೇ ! ಲೋಕದಲ್ಲಿ ಯುದ್ಧದಲ್ಲಿ ಜಾಣರಾದ ಬಹು ಮಂದಿ ಶೂರರುಂಟು ಆದರೆ ಆಯಾಸಗೊಂಡ ಹಗೆಯನ್ನು ಆದರಿಸಿ ಕಾದುವ ಧರ್ಮಾತ್ಮನಾದ ಶೂರನು ಈ ವೃಷಕೇತುವೆ ಹೊರತು ಮತ್ತಾರನ್ನೂ ನೋಡ ಲಿಲ್ಲ. ಯಾವ ದೇವನ ಕರುಣದಿಂದ ಈ ಲೋಕದಲ್ಲಿ ಸಮಸ್ತ ಕಾರ್ಯಗಳೂ ನಡೆಯುತ್ತಿರುವುದೋ ಆತನ ಪ್ರೀತಿಗಾಗಿ ನಾನು ಕುದುರೆಯನ್ನು ಕೊಡದೆ ಹೋಗುತ್ತಿದ್ದೆನೆ ? ಹರಹರಾ ! ನೀವು ತಪ್ಪುಮಾಡಿದಿರಿ. ಯುದ್ಧಮಾಡಲೋ ಸುಗ ವೃಷಕೇತುವೂ ಬಂದನು, ಏನುಹೇಳಲಿ ! ಆದರೆ ಈ ವೃಷಕೇತುವಿನೊ ಡನೆ ಕಾದಿದುರಿಂದ ನನ್ನ ಜನ್ಮವು ಸಫಲವಾಯಿತು. ನಾನು ಧನ್ಯನಾದೆನು. ಇನ್ನು ನೀವು ಮಾಡಿದ ಉಪಕಾರಕ್ಕಾಗಿ ನನ್ನ ಪರಿವಾರ ಸಹಿತ ನನ್ನ ಸರ್ವ ಸ್ವವನ್ನೂ ಶ್ರೀಹರಿಗೆ ಸಮರ್ಪಿಸುವೆನೆಂದು ಬಿನ್ನೈಸಿದನು. ಆಗ ಭೀಮಸೇ ನನು ಅಯ್ಯಾ ! ಹಾಗಾದರೆ ಧರ್ಮರಾಯನಿಗೆ ನಾನೂ ಸೇರಿ ನಾಲ್ಕುಜನ ತಮ್ಮಂದಿರುಂಟು. ನೀನೂ ಆತನಿಗೆ ಸಹಾಯಕನಾಗಿ ತಮ್ಮನಾದ ಬಳಿಕ ನಮ್ಮೈವರಿಗೂ ಶ್ರೀಹರಿಯನ್ನು ನೋಡುವುದು ಅಸಾಧ್ಯವಲ್ಲ ನನ್ನೊಡನೆ ಹಸ್ತಿನಾವತಿಗೆ ಬಂದು ಧರ್ಮಪುತ್ರನ ಯಾಗವನ್ನು ಆಗಮಾಡಿಸಿ ಶ್ರೀಹರಿಯ ದರ್ಶನದಿಂದ ಕೃತಾರ್ಥನಾಗಬಹುದು ಎಂದು ಹೇಳಿದನು. ಆ ಮಾತನ್ನು ಲಾಲಿಸಿ, ಯೌವನಾಶ್ವನು ಸ್ವಾಮಿ ! ತಾವು ನಮ್ಮ ಪಟ್ಟಣಕ್ಕೆ ಬಂದು ನನ್ನಿಂದ ಸತ್ಕೃತರಾಗದೆ ಹೊರಡುವುದು ಸರಿಯಲ್ಲ ! ನನ್ನ ಅರಮನೆಗೆ ದಯಮಾಡಿ ನಾನೂ ನನ್ನ ಪರಿವಾರದವರೂ ಮಾಡುವ ಸೇವೆಯನ್ನು ಕೈಗೊಂಡು ಬಳಿಕ ನನ್ನನ್ನು ತಮ್ಮೊಡನೆ ಕರೆದುಕೊಂಡು ಹಸ್ತಿನಾವತಿಗೆ ಹೋಗಬೇಕೆಂದು ಬೇಡಿ ಕೊಳ್ಳಲು ಭೀಮಸೇನನು ಅದಕ್ಕೆ ಸಮ್ಮತಿಸಿದನು.

ಬಳಿಕ ಮೇಘನಾದನು ಹಿಡಿದುಕಟ್ಟಿದ ಕುದುರೆಯನ್ನು ತರಿಸಿ ತನ್ನ ಮಗ ನಾದ ಸುವೇಗನ ವಶಕ್ಕೆ ಕೊಟ್ಟು ಭೀಮ, ವೃಷಕೇತು, ಮೇಘನಾದರನ್ನು ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋಗಿ ಮನೋಹರವಾಗಿ ಸಿಂಗರಿಸಿರುವ ಭದ್ರಾವತಿಯಲ್ಲಿ, ಓಲಗ ತಾಳ ಮೇಳಗಳೊಡನೆ ವಂದಿಮಾಗಧ ವಾರನಾರೀ

ಸಮೂಹದೊಡನೆ ಅಟ್ಟಹಾಸದಿಂದವರನ್ನು ಇದಿರ್ಗೊಂಡು ಮೂರು ದಿನಗಳ ವರೆಗೆ ಆದರದಿಂದ ಅವರನ್ನು ಸತ್ಕರಿಸಿ, ಆ ಬಳಿಕ ಭೀಮಸೇನನ ಅಭಿಮತದಂತೆ ಹಸ್ತಿನಾವತಿಗೆ ಹೊರಡಲುದ್ಯುಕ್ತನಾಗಿ, ತನ್ನ ಭಂಡಾರದ ಸಮಸ್ತ ವಸ್ತುಗಳನ್ನು ತರಿಸಿ, ಪುತ್ರಮಿತ್ರ ಬಂಧು ಕಳತ್ರಾದಿಗಳಿಂದೊಡಗೂಡಿ ಪಟ್ಟದರಸಿಯಾದ ಪ್ರಭಾವತಿಯನ್ನು ಸಂಗಡ ಕರೆದುಕೊಂಡು ಪ್ರಜಾಸಮೂಹದೊಡನೆ ಕುದುರೆಯನ್ನು ತೆಗೆದುಕೊಂಡು ಭೀಮಸೇನನೊಡನೆ ಹೊರಡುವಾಗ ಶ್ರೀಹರಿಯ ದರ್ಶನಾರ್ಥವಾಗಿ ಹಸ್ತಿನಾವತಿಗೆ ಬರಬೇಕೆಂದು ತನ್ನ ತಾಯಿಯನ್ನು ಕರೆದನು, ಅವಳು ಅಯ್ಯೋ ! ಈ ರಾಜವೈಭವವನ್ನು ತೊರೆದು ನಾನು ಪರದೇಶಕ್ಕೆ ಬರಲಾರೆ ಎಂದು ಮುಷ್ಕರ ಮಾಡಿದರೂ, ಬಲಾತ್ಕಾರದಿಂದ ಅವಳನ್ನು ಅಂದಣದಲ್ಲಿ ಕುಳ್ಳಿರಿಸಿಕೊಂಡು ಹೊರಟನು.

ಆಗ ಭೀಮನು ಪಟ್ಟಣದಲ್ಲಾರೂ ಉಳಿಯದಂತೆ ಎಲ್ಲರನ್ನೂ ಹೊರಡಿಸಿ, ಇಷ್ಟುಜನರನ್ನು ನಡೆಸಿಕೊಂಡು ಹೋದರೆ ಬಹುದಿನವಾಗುವುದು. ಅದುವರೆಗೂ ಈ ಸ್ಥಿತಿಯನ್ನು ಧರ್ಮರಾಯನಿಗೆ ತಿಳಿಸದಿರುವುದು ಸರಿಯಲ್ಲವೆಂದು ಮೇಘನಾದ ವೃಷಕೇತುಗಳನ್ನು ಆಯೌವನಾಶ್ವನ ಬೆಂಗಾವಲಿಗಾಗಿ ಬಿಟ್ಟು, ತಾನು ನಿಂತಲ್ಲಿ ನಿಲ್ಲದೆ ಹಸ್ತಿನಾಪುರಕ್ಕೆ ಬಂದನು. ಉದ್ಯಾನವನಕ್ಕೆ ವಸಂತರಾಜನ ಆಗಮನವನ್ನು ಎಚ್ಚರಿಸುವ ಮಂದಮಾರುತನಹಾಗೆ, ಭೀಮನು ರಾಜಸಭೆಯನ್ನು ಹೊಕ್ಕು, ಧರ್ಮರಾಯನ ಪಾದಗಳಿಗೆರಗಿ ನಿಂತಿರಲು, ಅಕ್ಕರೆಯಿಂದಾತನನ್ನು ತೆಗೆದು ಬಿಗಿದಪ್ಪಿ, ಅಯ್ಯಾ ! ವೃಷಕೇತು ಮೇಘನಾದರೆಲ್ಲಿ ? ಹೋದಕಾರ್ಯವೇನಾಯಿತು ? ಒಬ್ಬನೇ ಬರಲು ಕಾರಣವೇನು ? ನೀನು ಆಡಿದಮಾತಿಗೆ ಕುಂದಿಲ್ಲವಷ್ಟೆ ಎಂದು ಕೇಳಿದನು.

ಆಗ ಭೀಮಸೇನನು ತಾನು ಭದ್ರಾವತಿಗೆ ಹೋಗಿ ಕುದುರೆಯನ್ನು ಹಿಡಿದುಕಟ್ಟಿ ಕಾಡುಕಂಗೆಟ್ಟು ಯೌವನಾಶ್ವಾದಿಗಳು ಮರೆಹೊಕ್ಕು ಬಿನ್ನವಿಸಿದ ವಿನಯವಚನಗಳನ್ನೂ, ಯೌವನಾಶ್ವನು ತನ್ನ ಸಕಲ ಪರಿವಾರದೊಡನೆ ಶ್ರೀಹರಿಯ ಸಂದರ್ಶನಕ್ಕಾಗಿ ಹೊರಟು ಬರುತ್ತಿರುವುದನ್ನೂ ಹೇಳಲು, ಧರ್ಮರಾಯನು ಶೂರನಾದ ಭೀಮನನ್ನು ಅಕ್ಕರೆಯಿಂದ ಆಲಿಂಗಿಸಿ ಆರತಿಗಳನ್ನು ಮಾಡಿಸಲು; ಮುತ್ತು ರತ್ನಗಳ ಆರತಿಗಳನ್ನು ನಿವಾಳಿಸುವ ಅರವಿಂದನಯನೆಯರ ಮಂಗಳ ಗೀತಗಳ ಮಧುರ ಧ್ವನಿಯೊಡನೆ ಭೀಮಸೇನನು ಅಂತಃಪುರವನ್ನು ಹೊಕ್ಕು ದ್ರೌಪದಿಗೆ ತನ್ನ ವಿಜಯವಾರ್ತೆಯನ್ನು ಹೇಳಿ ಶ್ರೀಕೃಷ್ಣನಿಗೆ ನಮಸ್ಕಾರಮಾಡಿ, ಭದ್ರಾವತೀ ನಗರಾಧೀಶನನ್ನು ಗೆದ್ದ ಸಂಗತಿಯನ್ನು ವಿವರಿಸಿ ಹೇಳಲು, ದೇವಪುರದ ಲಕ್ಷ್ಮೀರಮಣನು ಭೀಮಸೇನನನ್ನು ಆದರದಿಂದ ಮನ್ನಿಸಿದನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತಲಸದರುಣ ಚರಣ ಸರೋಜ ಮಕರಂದ

ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿ ನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ನಾಲ್ಕನೆಯ ಸಂಧಿ ಸಂಪೂರ್ಣಂ.




# ಐದನೆಯ ಸಂಧಿ.

ಶ್ರೀ ಕೃಷ್ಣನು ದ್ವಾರಕಿಗೆ ಬಂದುದು ವೇದವ್ಯಾಸರು ಧರ್ಮರಾಯನಿಗೆ ಧರ್ಮೋಪದೇಶ ಮಾಡಿದುದು.

ಎಲೈ ಜನಮೇಜಯರಾಯನೇ ! ಕೇಳು, ಬಳಿಕ ಶ್ರೀಕೃಷ್ಣನು ಭೀಮನನ್ನು ಅಂತಃಪುರಕ್ಕೆ ಕಳುಹಿಸಿಕೊಟ್ಟಮೇಲೆ, ಊಳಿಗದವರು ಧರ್ಮರಾಯನ ಬಳಿಗೆ ಬಂದು ಸ್ವಾಮಿ ! ತಮ್ಮ ಸೇವೆಗಾಗಿ ಭದ್ರಾವತೀ ನಗರದ ಯೌವನಾಶ್ವನು ತನ್ನ ಸರ್ವಸ್ವವನ್ನು ತೆಗೆದುಕೊಂಡು ಸಪರಿವಾರಯುಕ್ತನಾಗಿ ಹೊರಟು ಬಂದು ಬಹಿರುದ್ಯಾನದಲ್ಲಿ ಕಾದುಕೊಂಡಿರುವನು ಎಂದು ಹೇಳಿದರು. ಹೀಗೆ ಬಿನ್ನವಿಸಿದ ದೂತನಿಗೆ ಉಚಿತವರಿತು ಉಡುಗೆರೆಯನ್ನಿತ್ತು ಬಳಿಕ ಅನುಜ ಮಂತ್ರಿ ಸಾಮಂತ ಸೇನಾನಾಯಕರನ್ನೂ, ವಂದಿಮಾಗಧ ಪುರೋಹಿತ ಪರಿವಾರದವರನ್ನೂ ಬನಮಾಡಿ, ಸಮಸ್ತ ಸೈನ್ಯದೊಡನೆ ಮೇರು ಮಂದರ ಸಮಾನವಾದ ಮದ್ದಾನೆಯಮೇಲೆ ಹರಿಸಹಿತನಾಗಿ ದ್ರೌಪದಿಯೊಡನೆ ಕುಳಿತು, ಆನಂದಕರವಾಗಿ ಸಿಂಗರಿಸಿದ ಬೀದಿಗಳಲ್ಲಿ ಗುಂಪುಗುಂಪಾಗಿ ನಿಂತಿರುವ ಜನದ ಸಂದಣಿಯೊಡನೆ ಬರುತಿದ್ದ ಧರ್ಮರಾಯನು, ಮನೋಹರವಾದ ರತ್ನಕಾಂತಿಗಳಿಂದ ಕೂಡಿ, ಉದಯಪರ್ವತದ ಶಿಖರದ ತುದಿಯಲ್ಲಿ ಥಳಥಳಿಸುವ ಬಾಲಸೂರ್ಯ

ನಂತೆ ಹೊಳೆಯುತ್ತ ತನ್ನನ್ನು ಇದಿರ್ಗೊಳಲ್ಲೆಂದು ಬರುತ್ತಿರುವುದನ್ನು ಕಂಡು, ಭದ್ರಾವತೀನಗರದ ಯೌವನಾಶ್ವನು ಎದುರಾಗಿ ಬಂದ ಭೀಮನೊಡನೆ ಸಂತೋಷದಿಂದ ಸಲ್ಲಾಪಿಸುತ್ತ, ರಾಜಾಧಿರಾಜನಾದ ಧರ್ಮರಾಯನಬಳಿಗೆ ಬಂದನು. ಭೀಮನೊಡನೆ ಬಂದ ಯೌವನಾಶ್ವನನ್ನು ಕಂಡು ಯುಧಿಷ್ಠಿರನು ಆನೆಯಿಂದಿಳಿದು ನಿಂದಿರಲು, ಯೌವನಾಶ್ವನು ಪಾದಗಳಿಗೆರಗಿ, ಪರಮೋತ್ತಮವಾದ ರತ್ನರಾಶಿಗಳಿಂದೊಪ್ಪುವ ಕಪ್ಪಕಾಣಿಕೆಗಳನ್ನು ಕೊಟ್ಟು ನಮಸ್ಕರಿಸಲು, ಧರ್ಮರಾಯನು ಪ್ರೀತಿಯಿಂದಾತನನ್ನು ಆಲಿಂಗಿಸಿಕೊಂಡು, ಅಯ್ಯಾ ! ನೀನು ನನಗೆ ಭೀಮಾದಿಗಳಿಗಿಂತ ಅಧಿಕ ಪ್ರಿಯನಾದವನು ಆದುದರಿಂದ ಯಾದವಕುಲಾಗ್ರಣಿಯಾದ ಈ ಶ್ರೀಹರಿಯ ಸಂದರ್ಶನದಿಂದ ಕೃತಾರ್ಥನಾಗು ಎಂದು ಶ್ರೀಕೃಷ್ಣಮೂರ್ತಿಯನ್ನು ತೋರಿಸಿದನು.

ಆನಂತರದಲ್ಲಿ ಆ ಯೌವನಾಶ್ವನು ಕನ್ನೈದಿಲೆಯಂತೆ ಕಾಂತಿಯೂ, ಕೋಮಲವಾದ ಲಾವಣ್ಯವುಳ್ಳವನಾಗಿ ನವರತ್ನಮಯವಾದ ಕಿರೀಟವನ್ನು ಧರಿಸಿ, ಕನ್ನೆವುರ, ಬಂದಿಬಾಪುರಿ, ಮುಕ್ತಾಹಾರ, ಕೇಯೂರಗಳಿಂದೊಪ್ಪಿ, ರತ್ನಖಚಿತವಾದ ಮಣಿಮಂಜೀರವೆಂಬ ಕಟಸೂತ್ರಮುಳ್ಳವನಾಗಿ ಸರ್ವೋತ್ತಮವಾದ ಶ್ರೀವತ್ಸವೆಂಬ ಲಾಂಛನವೂ ಕೌಸ್ತುಭರತ್ನವೂ ರಾಜಿಸುತ್ತಿರುವ ಹೃದಯಾಂಗಣದಿಂದ ಶೋಭವೆತ್ತು, ನೇತ್ರಾನಂದಕರವಾದ ಪೀತಾಂಬರವನ್ನು ಹೊದೆದು, ಅರಳಿದ ಕೆಂದಾವರೆಯ ದಳದಂತೆ ಪಾದತಳಮುಳ್ಳವನಾಗಿ, ಲಕ್ಷ್ಮೀಮನೋಹರನಾಗಿ ಸುಂದರಾಭರಣಗಳಿಂದ ಮನೋಹರನಾಗಿದ್ದ ಶ್ರೀಹರಿಯ ದಿವ್ಯಮಂಗಳಮೂರ್ತಿಯನ್ನು ಕಣ್ಣೆದುರಿಗೆ ಕಂಡು, ತೃಪ್ತಿಕರವಾಗೀಕ್ಷಿಸಿ ಆನಂದದಿಂದುಬ್ಬುವ ರೋಮಾಂಚದಿಂದ ಕೂಡಿ ಬ್ರಹ್ಮ ರುದ್ರ ಮಹೇಂದ್ರ ಮೊದಲಾದ ಮಹಾಮಹಿಮರಿಗೂ, ಅಗೋಚರನಾಗಿದ್ದ ಸಚ್ಚಿದಾನಂದಮೂರ್ತಿಯ ದರ್ಶನವು ಭೂಲೋಕದವರಿಗೆ ದೊರೆವುದು ಆಶ್ಚರ್ಯವಲ್ಲವೆ ? ಎಂದು ಹರ್ಷಿಸುತ್ತ ಆ ಮುಕುಂದನ ಮೋಹದಾಯಕವಾದ ಪಾದಕಮಲಗಳಲ್ಲಿ ಮನೋಹರವಾದ ರತ್ನಕಾಂತಿಗಳಿಂದೊಪ್ಪುವ ತನ್ನ ಕಿರೀಟವನ್ನು ಬಾಚಿ ನಮಸ್ಕರಿಸಿ, ಕಮಲಾಕ್ಷ ಕಾಳೀಯಮಥನ, ಕಪಿರಾಜಸಂಪೂಜಿತ, ಗೋವರ್ಧನೋದ್ಧಾರ, ಕೂರ್ಮಾವತಾರಿ, ನೈದಿಲೆವಣ್ಣ, ಲಕ್ಷ್ಮೀಕಾಂತ ಧೃತಶಂಖಚಕ್ರ ಗದಾಪದ್ಮಶೋಭಿತ, ಕೌಸ್ತುಭರತ್ನಧಾರಿ ವಿರಾಜಿತ ಕಸ್ತೂರಿಕಾತಿಲಕ ರಕ್ಷಿಸು ! ರಕ್ಷಿಸು ! ಎಂದು ಬೇಡಿಕೊಳ್ಳುತ್ತಿರಲು, ಶ್ರೀಕೃಷ್ಣನು ಆತನನ್ನು ಆಲಿಂಗಿಸಿ ಸಂತೈಸಲು, ಯೌವನಾಶ್ವನು ಅಯ್ಯಾ ! ವಿಷಯಸುಖಗಳನ್ನು ತೊರೆದು ಸದಾ ನಿರ್ಮಲಚಿತ್ತರಾಗಿ ತನ್ನನ್ನೇ ಧ್ಯಾನಿಸುತ್ತಿರುವ ಮಹಾಮುನಿಗಳ ಹೃದಯಮಧ್ಯದಲ್ಲಿ ವಾಸಿಸುತ್ತಿರುವ ನಾರಾಯಣನನ್ನು ಸಾರಥಿಯಾಗಿ ಮಾಡಿಕೊಂಡ

ಅರ್ಜುನನು ಯಾರು ಎಂದು ಕೇಳಿ, ತನ್ನೆದುರಿಗೆ ಪ್ರತ್ಯಕ್ಷನಾಗಿನಿಂತಿದ್ದ ಅರ್ಜುನನನ್ನು ಕಂಡು ಆತನ ಸುಗುಣಗಳನ್ನು ಕೊಂಡಾಡಿ ಉಚಿತವರಿತು ಉಳಿದ ನಕುಲ ಸಹದೇವಾದಿಗಳನ್ನು ಮನ್ನಿಸಿದನು

ಅನಂತರದಲ್ಲಿ ಮಿಂಚಿನ ಬಳ್ಳಿಯೊಡನೆ ಶೋಭಿಸುವ ಮೋಡವನ್ನು ಕುಲಾಚಲದ ಶಿಖರದೆಡೆಗೆ ತಂದೊಡ್ಡುವ ಮಾರುತನಂತೆ, ಸುವೇಗನು ಯಜ್ಞಾಶ್ವವನ್ನು ತಂದು ಶ್ರೀಕೃಷ್ಣಮೂರ್ತಿಯಮುಂದೆ ನಿಲ್ಲಿಸಿ ನಮಸ್ಕರಿಸಿದನು ಸರ್ವರೂ ಆ ಕುದುರೆಯನ್ನು ನೋಡುತ್ತ ಸಂತೋಷದಿಂದ ನಲಿದಾಡಿದರು ಹೀಗೆ ಕುದುರೆಯನ್ನು ಧರ್ಮರಾಯನಿಗೊಪ್ಪಿಸಿ ತಾನು ತಂದಿರುವ ಧನಕನಕ ಮಣಿಭೂಷಣ ವಸ್ತ್ರವಾಹನ ಕದಂಬವನ್ನೂ ಕಪ್ಪಕಾಣಿಕೆಗಳಿಂದೊಪ್ಪುವ ತನ್ನ ಸರ್ವಸ್ವವನ್ನೂ ಶ್ರೀಪತಿಯಾದ ಲಕ್ಷ್ಮೀಕಾಂತನಿಗರ್ಪಿಸಿ ಆತನ ದಿವ್ಯಮಂಗಳ ಲಾವಣ್ಯವನ್ನು ನೋಡಿನೋಡಿ ಆನಂದಸಾಗರದ ಮಧ್ಯದಲ್ಲಿ ಯೌವನಾಶ್ವ ಸುವೇಗರು ಮುಳುಗಿ ತೇಲುತ್ತಿರಲು ಯೌವನಾಶ್ವನ ರಾಣಿಯಾದ ಪ್ರಭಾವತಿಯು, ಕಪ್ಪಕಾಣಿಕೆಗಳನ್ನು ರಾಜಯೋಗ್ಯವಾದ ವಸ್ತುಗಳನ್ನು ತಂದು ಕುಂತೀದೇವಿಯ ಮುಂದಿಟ್ಟು ಆಕೆಗೆ ನಮಸ್ಕರಿಸಿ ಆನಂತರ ರಾಣಿಯಾದ ದ್ರೌಪದಿಗೆ ನಮಸ್ಕರಿಸಲು, ಹಗೆತನವನ್ನು ಬಿಟ್ಟು ಕೆಂದಾವರೆಯ ಅಂದವನ್ನು ನೋಡಬೇಕೆಂದು ಬಂದ ಚಂದ್ರಮಂಡಲದಂತೆ ಪ್ರಭಾವತಿಯ ಮುಖಮಂಡಲವು ರಾಜಿಸುತ್ತಿದ್ದಿತು, ದ್ರೌಪದಿ ಸುಭದ್ರೆ ಮೊದಲಾದ ತನ್ನ ಬಂಧುವರ್ಗದವರಿಂದ ಕೂಡಿ, ಕಂಕಣಗಳು ಝಣಝಣರೆಂದು ಗುಲ್ಲಿಸುತ್ತಿರಲು, ಪ್ರಭಾವತಿಯನ್ನು ಬಿಗಿಯಪ್ಪಿ ಮನ್ನಿಸಿ ಕರೆತಂದು ತನ್ನಬಲಭಾಗದಲ್ಲಿ ಕುಳ್ಳಿರಿಸಿಕೊಂಡಳು. ಅನಂತರ ಕೃಷ್ಣನು ಕೈಲಾಸಪರ್ವತದಂತೆ ಹೊಳೆಯುವ ಅಂಗರಾಗವುಳ್ಳ ಕುದುರೆಯನ್ನು ನೋಡಿ, ವೃಷಕೇತು ಭೀಮಾದಿಗಳನ್ನು ಹೊಗಳಿ ಆಲಿಂಗಿಸಿಕೊಂಡು, ಮನ್ನಣೆಯ ಮನೆಯಾದ ಯೌವನಾಶ್ವನನ್ನು ಉಪಚರಿಸಿ, ಹಸ್ತಿನಾಪುರಕ್ಕೆ ಕರೆದುಕೊಂಡು ಬಂದನು.

ಹೀಗೆ ಧರ್ಮರಾಯನು ಯೌವನಾಶ್ವ ಭೂಪತಿಯನ್ನು ಮರ್ಯಾದೆಯಿಂದ ಸಂತೈಸುತ್ತಿರಲು, ಕೃಷ್ಣನು ಅಯ್ಯಾ ! ಯಜ್ಞಾರಂಭಕ್ಕೆ ಯೋಗ್ಯವಾದ ಚೈತ್ರಮಾಸವು ಕಳೆದುಹೋಯಿತು, ಇನ್ನು ನೀನು ಯಾಗದೀಕ್ಷಿತನಾಗಬೇಕಾದರೆ ಹನ್ನೊಂದು ತಿಂಗಳವರೆಗೆ ಕಾಯಬೇಕು. ಆ ಕಾಲಕ್ಕೆ ನೀನು ನನ್ನನ್ನು ಕರೆಸಿದರೇ ! ನನ್ನ ಸರ್ವಸ್ವವನ್ನು ತೆಗೆದುಕೊಂಡು, ಬಂಧುಮಿತ್ರ ಕಳತ್ರಸಹಿತನಾಗಿ ಸಕಲ ಯಾದವರೊಡನೆ ಬಂದು, ನಿನ್ನ ಯಾಗವನ್ನು ಪೂರ್ತಿಗೊಳಿಸುವೆನು ಅದುವರೆಗೂ ಈ ಯೌವನಾಶ್ವಾದಿಗಳನ್ನು ಸುಖದಿಂದ ಸತ್ಕರಿಸುತ್ತಿರೆಂದು ಹೇಳಿ, ಕುಂತೀಮೊದಲಾದವರಿಂದ ಅಪ್ಪಣೆಯನ್ನು ಪಡೆದು, ಧರ್ಮರಾಯನನ್ನು

ಬೀಳ್ಕೊಂಡು ಶ್ರೀಹರಿಯು ದ್ವಾರಕಾ ನಗರವನ್ನು ಕುರಿತು ಪ್ರಯಾಣ ಮಾಡಿದನು.

ಇತ್ತ ಧರ್ಮರಾಯನು ಶ್ರೀಹರಿಯು ಹೊರಟುಹೋದಬಳಿಕ ಚಿಂತಾಕ್ರಾಂತನಾಗಿ ತಪಿಸುತ್ತಿರಲು ಮರಳಿ ವೇದವ್ಯಾಸಮುನಿಯು ಆತನಬಳಿಗೆ ಬಂದು ಮಂಟಪವನ್ನು ರಚಿಸುವ ವಿಧಾನವನ್ನು ತಿಳಿಸಿ, ಯಾಗಶಾಲೆಯನ್ನು ಕಟ್ಟಿಸಿ, ಅದರಲ್ಲಿ ಆ ಕುದುರೆಯನ್ನು ಇಟ್ಟುಕೊಂಡು ಅದರ ರಕ್ಷಣೆಗಾಗಿ ಅಸಂಖ್ಯಾತವಾದ ಗಜ ರಥ ಪದಾತಿಗಳನ್ನು ನಿಲ್ಲಿಸಿ, ಸಲಹುತ್ತ ವೇದವ್ಯಾಸನ ಮುಖದಿಂದ ರಾಜಶಿರೋಮಣಿಯಾದ ಮರುತ್ತರಾಯನ ಕಥೆಯನ್ನು ಕೇಳಿದನು.

ಎಲೈ ಮುನಿವರ್ಯನೇ! ಪೂರ್ವದಲ್ಲಿ ಮರುತ್ತರಾಯನು ಯಾವ ತಪಸ್ವಿಯ ಬೋಧೆಯಿಂದ ಅಶ್ವಮೇಧ ಯಾಗವನ್ನು ಮಾಡಿದನು, ಅದರ ವಿಸ್ತಾರವನ್ನು ನನಗೆ ವಿವರಿಸಿ ಹೇಳಬೇಕೆಂದು ಬೆಸಗೊಂಡ ಧರ್ಮರಾಯನನ್ನು ನೋಡಿ, ವ್ಯಾಸಮಹರ್ಷಿಯು ಅಯ್ಯಾ! ಹಾಗಾದರೆ ಹೇಳುವೆನು ಕೇಳು? ಪೂರ್ವಯುಗದಲ್ಲಿ ನೀತಿ, ಖ್ಯಾತಿ, ಗುಣ, ಗಾಂಭೀರ್ಯ, ಶೌರ್ಯ, ಔದಾರ್ಯಾದಿಗಳಿಂದ ಪ್ರಖ್ಯಾತವಾದ ಸೂರ್ಯವಂಶದಲ್ಲಿ ಪಾರಂಪರ್ಯವಾಗಿ ಹುಟ್ಟಿದ ಇಕ್ಷ್ವಾಕುರಾಯನ ತರುವಾಯ ಕರಂಧಮರಾಜನು ಮುನಿಪುಂಗವನಾದ ಆಂಗೀರಸ ಮುನಿಯನ್ನು ಆದರಿಸಿ, ಆತನಮೂಲಕ ಅಶ್ವಮೇಧ ಯಾಗವನ್ನು ಮಾಡಿದನು. ಆ ಕರಂಧಮನಿಗೆ ಮಗನಾಗಿ ಮೋಕ್ಷಸಾಮ್ರಾಜ್ಯವನ್ನು ಪಡೆದ ಅವಿಕ್ಷಿ ಎಂಬ ರಾಯನ ಮಗನಾದ ಮರುತ್ತರಾಯನು ಹಗೆಗಳನ್ನುಗೆದ್ದು ಜಗನ್ನಾಯಕನನ್ನು ಭಕ್ತಿಯಿಂದ ಮೆಚ್ಚಿಸಿ, ಧರ್ಮಮಾರ್ಗವನ್ನು ಬಿಡದೆ, ಚಾತುರಂಗದ ಚತುರತೆಯಿಂದ ಈ ಭೂಲೋಕವನ್ನು ಬಿಳುಗೊಡೆಯ ನೆಳಲಿನಲ್ಲಿ ಪರಿಪಾಲಿಸುತ್ತಿದ್ದನು. ಇಂತಪ್ಪ ಚಕ್ರವರ್ತಿಯು ಪೂರ್ವಾಚಾರದಂತೆ ತನ್ನ ರಾಜಧಾನಿಯು ದೇವತೆಗಳಿಗೂ ಬ್ರಾಹ್ಮಣರಿಗೂ ಉಪಯೋಗವಾಗಲೋಸುಗ ಅಶ್ವಮೇಧಯಾಗವನ್ನು ಮಾಡಬೇಕೆಂದು ಬಯಸಿ, ದೇವಗುರುವಾದ ಬೃಹಸ್ಪತಿಯಬಳಿಗೆ ಹೋಗಿ ನಮಸ್ಕರಿಸಿ ಸ್ವಾಮಿ! ನಮ್ಮ ತಾತನು ಯಜ್ಞಮಾಡುವ ಕಾಲದಲ್ಲಿ ನಿಮ್ಮ ತಂದೆಯವರೇ ಪುರೋಹಿತರಾಗಿದ್ದು ನಮ್ಮಗಳನ್ನು ಉದ್ಧರಿಸಿದರು ಈಗ ನಾನು ಮಾಡಬೇಕಾಗಿರುವ ಯಜ್ಞಕ್ಕೆ ನೀವು ಆಚಾರ್ಯರಾಗಿ ಬರಬೇಕು ಎಂದು ಬೇಡಿಕೊಂಡನು, ಅದನ್ನು ಕೇಳಿ ಬೃಹಸ್ಪತಿಯು ಹಾಗೆಯೇ ಆಗಲಿ ಎಂದು ಸಮ್ಮತಿಸಿದನು.

ಇಂದ್ರನು ಈ ವಾರ್ತೆಯನ್ನು ತಿಳಿದು, ಗುರುವರ್ಯನನ್ನು ಬರಮಾಡಿ ಸ್ವಾಮಿ! ಮಾನವರ ಯಾಗದಲ್ಲಿ ದೇವಗುರುವಾದ ನೀವು ಆಚಾರ್ಯರಾಗುವುದು ಸರಿಯಲ್ಲ, ಇದು ದೂಷ್ಯವಾದುದೆಂದು ನಿರ್ಬಂಧಪಡಿಸಿದನು. ಬಳಿಕ

ತನ್ನ ಮನೋರಥಕ್ಕೆ ಭಂಗ ಉಂಟಾಗಿ ಮರುತ್ತರಾಯನು ಖಿನ್ನನಾಗಿ, ತನ್ನೂರಿಗೆ ಬರುತ್ತಿರಲು ಮಧ್ಯಮಾರ್ಗದಲ್ಲಿ ನಾರದಮುನಿಯು ಪ್ರತ್ಯಕ್ಷನಾದನು. ಬಳಿಕ ರಾಯನು ನಾರದನ ಪಾದಕಮಲಗಳಿಗೆರಗಲು, ದೇವಋಷಿಯು ಆತನ ಮುಖವನ್ನು ನೋಡಿ, ಎಲೈ ರಾಜೇಂದ್ರನೇ ! ಇದೇನು ? ನೀನು ಖಿನ್ನನಾಗಿ ಬಾಡಿದ ಮುಖವುಳ್ಳವನಾಗಿರುವೆಯಲ್ಲಾ! ನಿನಗೆ ಚಿಂತೆಯೇನು ? ಹೇಳು ಎಂದು ಕೇಳಲು ಮರುತ್ತರಾಯನು ಬೃಹಸ್ಪತಿಯಿಂದ ತನಗುಂಟಾದ ಅವಮಾನವನ್ನು ವಿಸ್ತರಿಸಿ ಹೇಳಿ, ಸ್ವಾಮಿಾ ! ಸಂಕಲ್ಪ ಭಂಗವಾದುದರಿಂದ ನಾನು ರಾಜ್ಯ ಪ್ರವೇಶಮಾಡದೆ, ಅರಣ್ಯವನ್ನು ಹೊಕ್ಕು ಘೋರವಾದ ತಪಸ್ಸನ್ನು ಮಾಡುತ್ತ ಸದ್ಗತಿಯನ್ನು ಹೊಂದಬೇಕೆಂದಿರುವೆನುಎಂದು ಮರಳಿನಮಸ್ಕರಿಸಲು ನಾರದನು ಆತನನ್ನು ಕುರಿತು, ರಾಜೇಂದ್ರಾ ! ನಾನು ಹೇಳುವುದನ್ನು ಲಾಲಿಸು ! ಪೂರ್ವದಲ್ಲಿ ಬ್ರಹ್ಮನ ಮಾನಸ ಪುತ್ರನಾದ ಆಂಗೀರಸನೆಂಬ ಮುನಿಗೆ ಬೃಹಸ್ಪತಿ ಮತ್ತು ಸಂವರ್ತರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಅವರಲ್ಲಿ ದಾಯಾದ ಮತ್ಸರವು ದಿನದಿನಕ್ಕೆ ಹೆಚ್ಚುತ್ತ ಬಂದು ಬೃಹಸ್ಪತಿಯು ಆತನಿಗೆ ಭಾಗವನ್ನು ಕೊಡದೆ ಓಡಿಸಿಬಿಟ್ಟನು. ಹೀಗೆ ಗತಿಗೆಟ್ಟ ಸಂವರ್ತನು ಉತ್ತಮವಾದ ಕಾಶೀಕ್ಷೇತ್ರದಲ್ಲಿ ಅವಧೂತನಾಗಿರುವನು, ಅವನನ್ನು ಕರೆದುಕೊಂಡು ಬಂದರೆ ನಿನ್ನ ಯಾಗವು ನೆರವೇರುವುದು, ಕಾಶೀನಗರದಲ್ಲಿ ಅವನು ನಿನಗೆ ಗೋಚರನಾಗದಿದ್ದರೆ ಊರಬಾಗಿಲಲ್ಲಿ ಹೆಣವನ್ನು ಜನರು ತಂದಿಟ್ಟಕಾಲದಲ್ಲಿ ತಾನಾಗಿ ದೂರಹೋಗುವನು. ಆತನಬಳಿಗೆ ನೀನು ಹೋದುದನ್ನು ಕಂಡು, ಅವನು ದೂರಹೋದರೆ ನೀನು ಅವನನ್ನಗಲದೆ ಜೊತೆಯಲ್ಲಿಯೆ ಹೊರಡು; ಹೀಗೆ ನಿಂತಕಡೆ ನಿಲ್ಲದೆ ಆತನ ಹಿಂದೆಯೆ ಹೋಗುತ್ತಿದ್ದರೆ ಕೋಪದಿಂದ ಹೊಡೆದು, ಬೈದು, ಉಗುಳಿ, ಎಂಥ ಶಿಕ್ಷೆಮಾಡಿದರೂ ಹಿಂದೆಯೆ ಹೋಗುತ್ತಿದ್ದರೆ ನೀನು ಯಾರು ? ನಿನಗೆ ನನ್ನ ಇರವನ್ನು ಹೇಳಿದವರು ಯಾರು ? ಎಂದು ಕೇಳುವನು. ಬಳಿಕ ಸ್ವಾಮಿಾ ! ನಾರದರು ತಮ್ಮ ಮಹಿಮೆಯನ್ನು ನನ್ನೊಡನೆ ಹೇಳಿ ಅಗ್ನಿಪ್ರವೇಶ ಮಾಡಿದರು ಎಂದು ಹೇಳು, ಇನ್ನು ಯೋಚಿಸಬೇಡ, ಹೊರಡು ನಿನ್ನ ಕಾರ್ಯವು ಕೈಗೂಡುವದೆಂದು ತಿಳಿಸಲು, ಮರುತ್ತರಾಯನು ಬಹಳ ಸಂತೋಷದಿಂದ ಶ್ರೀಕಂಠನಾದ ಶಂಕರನು ತಾರಕಬ್ರಹ್ಮೋಪದೇಶದಿಂದ ಮುಕ್ತಿಯನ್ನು ಕೊಡುತ್ತಿರುವಂಥ ದರ್ಶನಮಾತ್ರದಿಂದಲೆ ಸಕಲ ಪಾಪಗಳನ್ನೂ ಹೋಗಲಾಡಿಸುತ್ತಿರುವಂತಹ, ಸಕಲವಾದ ಈತಿಬಾಧೆಗಳಿಗೂ ದೂರವಾಗಿರುವ ಕಾಶೀನಗರಕ್ಕೆ ಬಂದು ಮುಕ್ತಿದಾಯಕನಾದ ವಿಶ್ವೇಶ್ವರನಿಗೆ ನಮಸ್ಕಾರಮಾಡಿ, ನಾರದರು ಹೇಳಿದಂತೆ, ಊರುಬಾಗಲಿಗೆ ಬಂದು ನೋಡುವಲ್ಲಿ, ಜನರು ಒಂದಾನೊಂದು ಶವವನ್ನು ತಂದಿಡಲು ದೂರವಾಗಿನಿಂತ ಸಂವರ್ತನು

ನಿಯನ್ನು ಕಂಡು ಆತನನ್ನು ಎಡೆಬಿಡದೆ ಅನುವರ್ತಿಸಿಕೊಂಡು ಹೋಗಿ ಯಾವ
ಶಿಕ್ಷೆಯನ್ನು ಮಾಡಿದರೂ, ತನ್ನನ್ನು ಬಿಟ್ಟು ಹೋಗದಿರುವ ರಾಯನನ್ನು
ನೋಡಿ ಸಂವರ್ತನು ನೀನು ಯಾರು ? ಇಲ್ಲಿಗೆ ಬರಲು ಕಾರಣವೇನು ? ನನ್ನನ್ನು
ಯಾರೆಂದು ತಿಳಿದಿರುವೆ ಹೇಳು ಎಂದು ಕೇಳಿದನು. ಆಗ ಮರುತ್ತನು
ಸ್ವಾಮಿ ! ದೇವಗುರುವಾದ ಬೃಹಸ್ಪತಿಗೆಣ್ಣನಾಗಿ, ಬ್ರಾಹ್ಮಣವರ್ಯನಾದ
ಆಂಗಿರಸ ಋಷಿಗೆ ಮಗನಾಗಿ, ಶ್ರುತಿವೇತ್ತ ಸಂವರ್ತಮುನಿಯು ತಾವೆ ಎಂದು
ತಿಳಿದು ನಾನು ನಿಮ್ಮಬಳಿಗೆ ಬಂದೆ. ತ್ರಿಲೋಕಸಂಚಾರಿಯಾದ ನಾರದಮಹ
ರ್ಷಿಯು ತಮ್ಮ ಮಹಿಮೆಯನ್ನು ನನಗೆ ಹೇಳಿ ಬೆಂಕಿಯಲ್ಲಿ ಬಿದ್ದನು ಎಂದು
ಹೇಳಲು, ಆ ಋಷಿವರ್ಯನು ಮರುತ್ತರಾಯನನ್ನು ನೋಡಿ, ಅಯ್ಯಾ !
ನಿನಗೆ ನನ್ನಿಂದಾಗಬೇಕಾದ ಕೆಲಸವೇನು ಹೇಳು ಎಂದು ಕೇಳಿದನು.

ಅದಕ್ಕೆ ಮರುತ್ತರಾಯನು ಸ್ವಾಮಿ! ನಾನು ಸೂರ್ಯವಂಶದ ದೊರೆ
ಯಾದ ಅವಿಕ್ಷಿಯ ಮಗ ಮರುತ್ತರಾಯನು. ನಿಮ್ಮಣ್ಣನಾದ ಬೃಹಸ್ಪತಿ
ಯನ್ನು ಯಾಗದಲ್ಲಿ ಆಚಾರ್ಯನಾಗಿರಬೇಕೆಂದು ಬೇಡಿಕೊಂಡರೂ ಆತನು
ತಿರಸ್ಕರಿಸಿದುದರಿಂದ ನಾರದರ ಹೇಳಿಕೆಯಂತೆ ನಾನು ತಮ್ಮ ಬಳಿಗೆ ಬಂದೆ,
ತಾವು ಕರುಣದಿಂದ ನಾನು ಮಾಡುವ ಯಜ್ಞದಲ್ಲಿ ಆಚಾರ್ಯಪಟ್ಟವನ್ನು ವಹಿಸಿ
ಕಾಪಾಡಬೇಕೆಂದು ಬೇಡಿಕೊಂಡನು ಆಗ ಸಂವರ್ತಮುನಿಯು ಆಹಾ !
ರಾಯ! ಬಹಳ ಚೆನ್ನಾಯಿತು, ನಮ್ಮಣ್ಣನಾದ ಬೃಹಸ್ಪತಿಯು ಇಂದ್ರನನ್ನು
ಒಡಂಬಡಿಸಿ ತಾನೇ ಆಚಾರ್ಯನಾಗಿರಬೇಕೆಂದು ಕೇಳಿದರೆ ಆಗ ನೀನೇನು
ಮಾಡುತ್ತೀಯೆ ? ಹೇಳು. ಈ ಯಜ್ಞಕ್ಕೆ ನಾನೆಂದಿಗೂ ಯಾಜಕನಾಗಿ
ಬರಲಾರೆ ಎಂದು ಹೇಳಲು, ಸ್ವಾಮಿ! ಕರುಣಾಳುಗಳಾದ ತಮ್ಮನ್ನು ಆಚಾರ್ಯ
ಪಟ್ಟದಿಂದ ದೂರಮಾಡಿದರೆ, ನಾನು ಬ್ರಹ್ಮಘಾತಕನಿಗುಂಟಾಗುವ ದುರ್ಗತಿ
ಯನ್ನು ಹೊಂದುವೆನು ಈ ವಿಷಯದಲ್ಲಿ ಅನುಮಾನವೇ ಇಲ್ಲವೆಂದು ಪ್ರತಿಜ್ಞೆ
ಮಾಡಲು, ಸಂವರ್ತಋಷಿಯು ಹಾಗಾದರೆ ನಾನೆ ನಿನ್ನ ಯಾಗಕ್ಕೆ ಆಚಾರ್ಯ
ನಾಗುವೆನು. ನೀನು ಈಗಲೇ ಹಿಮಾಲಯಕ್ಕೆ ಹೋಗಿ, ರಜತಾದ್ರಿ ನಿವಾಸ
ನಾದ ಸದಾಶಿವನನ್ನು ಕಂಡು ಆತನಿಗೆ ನಮಸ್ಕರಿಸಿ ಭಕ್ತಿಯಿಂದ ಪೂಜಿಸಿದರೆ,
ಧನಕನಕ ರಾಶಿಗಳನ್ನು ಕೊಡುವನು. ಆಬಳಿಕ ನಾವು ತ್ರಿಲೋಕಾನಂದ
ಕರವಾಗಿ ಯಜ್ಞವನ್ನು ಮಾಡಬಹುದೆಂದು ಹೇಳಿದನು. ಕೂಡಲೆ ಮರುತ್ತ
ರಾಯನು ಅತ್ಯಾನಂದದಿಂದ ಹಿಮಾಲಯಕ್ಕೆ ಬಂದು ಚಂದ್ರಶೇಖರನನ್ನು
ಭಕ್ತಿಯಿಂದ ಪೂಜಿಸಿ, ಬೇಡಿಕೊಳ್ಳಲು ಕರುಣಾಳುವಾದ ಈಶ್ವರನು ಕೊಟ್ಟ
ಧನಕನಕ ವಸ್ತುವಾಹನಗಳ ರಾಶಿಯಿಂದೊಡಗೂಡಿ, ವೈದಿಕಮಾರ್ಗದಿಂದ
ಬ್ರಾಹ್ಮಣೋತ್ತಮರು ಹೇಳಿದಂತೆ ಶಾಸ್ತ್ರೋಕ್ತವಾದ ಯಾಗಶಾಲೆಯನ್ನು

ಕಟ್ಟಿಸಿ, ಸಂವರ್ತಮುನಿಯನ್ನು ಕರೆಸಿಕೊಂಡು ಸಕಲವೈಭವಯುಕ್ತನಾಗಿ ಯಜ್ಞಾರಂಭಕಾಲದಲ್ಲಿ ವಿರಾಜಿಸುತ್ತಿದ್ದನು. ಈ ಸುದ್ದಿಯನ್ನು ಕೇಳಿ ಬೃಹಸ್ಪತಿಯು ತನ್ನ ದಾಯಾದಿಯಾದ ಸಂವರ್ತನು ಧನವಂತನಾಗಿ ಬಾಳುವನು. ಇದನ್ನು ಹೇಗಾದರೂ ತಪ್ಪಿಸಬೇಕೆಂದು ಇಂದ್ರನಿಗೆ ಮೊರೆಯಿಟ್ಟನು ಆಗ ಇಂದ್ರನಿಂದ ಆಜ್ಞಪ್ತನಾದ ಅಗ್ನಿಯು ಮರುತ್ತರಾಯನ ಬಳಿಗೆ ಬಂದು, ಇಂದ್ರನು ಹೇಳಿ ಕಳುಹಿಸಿದ ಮಾತುಗಳನ್ನು ಹೀಗೆ ವಿವರಿಸಿದನು.

ಅಯ್ಯಾ! ಈ ಸಂವರ್ತಮುನಿಯನ್ನು ಬಿಟ್ಟು ಬೃಹಸ್ಪತಿಯಿಂದ ಯಾಗ ಮಾಡಿಸದಿದ್ದರೆ ನಿನ್ನ ಯಜ್ಞಕ್ಕೆ ಬಂಗವುಂಟಾಗುವದು ಎಂದನು. ಮರುತ್ತ ರಾಯನು ಅಯ್ಯಾ! ಆ ಬೃಹಸ್ಪತಿಯೇ ನಮ್ಮ ಕುಲದೈವವೆಂದು ತಿಳಿದು ಮೊದಲೆ ನಾನು ಆತನ ಬಳಿಗೆ ಹೋಗಿ ಬೇಡಿಕೊಂಡಾಗ ಆತನು ನನ್ನನ್ನು ತಿರಸ್ಕರಿಸಿದಕಾರಣ ಈ ಸಂವರ್ತಮುನಿಯನ್ನು ನಾನು ಆಚಾರ್ಯನನ್ನಾಗಿ ನಿಯಮಿಸಿಕೊಂಡೆ. ಈಗ ನಾನು ಅಸತ್ಯವನ್ನು ಹಿಡಿದು ಆತನನ್ನು ಬಿಡಲಾರೆ, ಯಜ್ಞವು ನಡೆದರೆ ನಡೆಯಲಿ, ನಡೆಯದಿದ್ದರೆ ಹೋಗಲಿ! ಎಂದು ಹೇಳಿದನು.

ಆಗ ಸಂವರ್ತಮುನಿಯು ಕೋಪದಿಂದ ಕುದಿಯುತ್ತ ಅಯ್ಯಾ! ನೀನೇತಕ್ಕೆ ಹೆದರಿಕೊಂಡು ಹೀಗೆ ಬೇಡಿಕೊಳ್ಳುವೆ! ಪ್ರತ್ಯುತ್ತರವನ್ನು ಹೇಳದೆ ಅಗ್ನಿಯನ್ನು ಹಿಂದಕ್ಕೆ ಕಳುಹು; ಯಜ್ಞಕ್ಕೆ ವಿಘ್ನಮಾಡುವುದಕ್ಕೆ ಇಂದ್ರನು ಬಂದರೆ, ಸುರಲೋಕದ ಸೊಬಗನ್ನು ಕುಂದಿಸುವೆನು ಹೆದರಬೇಡವೆಂದು ಗರ್ಜಿಸಿದನು. ಈ ವಾರ್ತೆಯನ್ನು ತಂದು ಅಗ್ನಿಯು ಇಂದ್ರನಿಗೆ ಹೇಳಲು ಅವನು ಅಯ್ಯಾ! ನೀನು ಮತ್ತೊಂದುಸಾರಿ ಮರುತ್ತರಾಯನ ಬಳಿಗೆ ಹೋಗಿ ವ್ಯರ್ಥವಾಗಿ ಇಂದ್ರನ ವಜ್ರಾಯುಧದ ಪೆಟ್ಟಿಗೆ ಗುರಿಯಾಗಬೇಡ, ಬೃಹಸ್ಪತಿಗೆ ಆಚಾರ್ಯಪಟ್ಟವನ್ನು ವಹಿಸಿ ನೀನು ಸುಖವಾಗಿ ಬಾಳು ಎಂದು ಹೇಳಿ ಬಾ! ಎಂದು ನೇಮಿಸಲು, ಅಗ್ನಿದೇವನು ಸ್ವಾಮಿ! ತಪೋಮಹಿಮನಾದ ಸಂವರ್ತಮುನಿಯು ಕೋಪಗೊಳ್ಳುವನು, ಆತನ ಕೋಪವನ್ನು ನಾನು ತಾಳಲಾರೆ, ಹಿಂದೆ ಬಹುಮಂದಿ ಆತನ ಬ್ರಹ್ಮಶಾಪದಿಂದ ನೊಂದಿರುವರು, ಆದಕಾರಣ ಮರಳಿ ನಾನು ಅಲ್ಲಿಗೆ ಹೋಗಲಾರೆ ಎಂದು ಅಪ್ಪಣೆಯನ್ನು ಪಡೆದು ಹೊರಟು ಹೋದನು. ಬಳಿಕ ಇಂದ್ರನು ಧೃತರಾಷ್ಟ್ರನೆಂಬ ಗಂಧರ್ವನನ್ನು ಕರೆದು, ಹಿಂದೆ ಹೇಳಿದಂತೆ ಹೇಳಿ ಆತನನ್ನು ಮರುತ್ತರಾಯನ ಬಳಿಗೆ ಕಳುಹಿಸಿದನು. ಆಗಲೂ ಸಂವರ್ತಮುನಿಯು ಕೋಪಿಸಿಕೊಂಡು ಅವನನ್ನು ಧಿಕ್ಕರಿಸಿ ಕಳುಹಿಸಿದುದನ್ನು ಇಂದ್ರನು ಕೇಳಿ ಸನ್ನಾಹದಿಂದ ಸರ್ವ ಸೇನೆಯನ್ನು ತೆಗೆದುಕೊಂಡು, ವಜ್ರಾಯುಧವನ್ನು ಹಿಡಿದು ಮರುತ್ತರಾಯನ ಬಳಿಗೆ ಬರಲು, ಭಯದಿಂದ ನಡುಗುತ್ತಿರುವ ರಾಯನನ್ನು ಸಂತೈಸಿ ಪುರೋಹಿತನಾದ ಸಂವರ್ತ

ಮುನಿಯು ಇಂದ್ರನೆ ಮೊದಲಾಗಿ ಆತನೊಡನೆ ಬಂದ ಪರಿವಾರದವರೆಲ್ಲ, ಚಿತ್ರದಲ್ಲಿ ಬರೆದ ಬೊಂಬೆಗಳಂತೆ ಸ್ತಬ್ಧರಾಗಿ ನಿಲ್ಲುವಂತೆ ಮಾಡಿ ಗರ್ಜಿಸುತ್ತಿರುವುದನ್ನು ಕಂಡು ಮರುತ್ತನು ಮಹರ್ಷಿಯನ್ನು ವಿನಯದಿಂದ ಇಂತೆಂದು ಬೇಡಿಕೊಳ್ಳುತ್ತಿದ್ದನು.

ಎಲೈ ತಪೋಧನನಾದ ಮುನಿಪುಂಗವನೇ ! ನನ್ನ ಯಾಗದಲ್ಲಿ ಹವಿರ್ಭಾಗವನ್ನು ತೆಗೆದುಕೊಳ್ಳುವ ದೇವ ಸಮೂಹವು ಹೀಗಿರಬಹುದೆ ? ಇನ್ನಾದರೂ ಇವರೊಡನೆ ವೈರವನ್ನು ಬಿಟ್ಟು, ಪ್ರತ್ಯಕ್ಷವಾಗಿಬಂದು ಆಹುತಿಗಳನ್ನು ಸ್ವೀಕರಿಸುವಂತೆಮಾಡು ಎಂದು ಬೇಡಿಕೊಂಡನು. ಆಗ ಇಂದ್ರನು ಸಂವರ್ತಮುನಿಯ ಸಾಮರ್ಥ್ಯಕ್ಕೆ ಮೆಚ್ಚಿ ಮರುತ್ತರಾಯನನ್ನು ಮನ್ನಿಸಿ, ಯಜ್ಞದಲ್ಲಿ ಪ್ರತ್ಯಕ್ಷವಾಗಿ ಹವಿಸ್ಸನ್ನು ಗ್ರಹಿಸುವೆನೆಂದು ಹೇಳಿದನು, ಮರುತ್ತರಾಯನಿಗೆ ಬಹಳ ಸಂತೋಷವಾಯಿತು. ಬಳಿಕ ಸಂವರ್ತಮುನಿಯು ಸಕಲ ವೈದಿಕೋತ್ತಮರಿಂದೊಡಗೂಡಿ ವೇದೋಕ್ತಕ್ರಮದಿಂದ ಯಜ್ಞವನ್ನಾಗಮಾಡಿಸಿ ದೇವತೆಗಳಸಮೂಹವು ತೃಪ್ತಿಪಟ್ಟಂತೆ, ಮೂರುಲೋಕದವರು ತೃಪ್ತರಾಗಲು ಭೂದೇವತೆಗಳು ಬಹಳವಾದ ಕನಕರಾಶಿಗಳನ್ನು ಹೊತ್ತುಹೊತ್ತು ದಣಿದು, ಹೊರಲಾಗದ ಭಾಗವನ್ನು ಹಿಮಾಲಯದ ಪ್ರಾಂತದಲ್ಲಿ ಬಿಟ್ಟು ಸಂತೋಷಭರಿತರಾಗಿ ತಂತಮ್ಮ ನಗರಗಳಿಗೆ ಹೊರಟುಹೋದರು. ಓಹೋ ! ಆ ಮರುತ್ತರಾಯನು ಮಾಡಿದ ಯಜ್ಞದ ವಿಜೃಂಭಣೆಯನ್ನು ನಾನು ಏನು ಹೇಳಲಿ ! ಮೂರುಲೋಕವೂ ಆಶ್ಚರ್ಯಪಟ್ಟಿತು, ಆಬಳಿಕ ಸಂತುಷ್ಟರಾದ ಸಕಲದೇವತೆಗಳೂ ಅವಭೃತಸ್ನಾತನಾದ ಮರುತ್ತರಾಯನಿಗೆ ಸಕಲೇಷ್ಟಗಳೂ ಸಿದ್ಧಿಯಾಗುವಂತೆ ವರವನ್ನು ಸಲ್ಲಿಸಿದರು. ದಾನದಕ್ಷಿಣೆಗಳಿಂದ ಸಂವರ್ತಮುನಿಯು ತೃಪ್ತಿಪಟ್ಟನು. ಮೂರು ಲೋಕವೂ ಕೊಂಡಾಡುವಂತೆ ಬಹುಕಾಲವರೆಗೂ ಖ್ಯಾತಿವಂತನಾಗಿ ಮರುತ್ತರಾಯನು ಸುಖದಿಂದ ರಾಜ್ಯವಾಳಿದನು.

ಎಲೈ ಜನಮೇಜಯರಾಯನೇ ಕೇಳು, ಹೀಗೆ ವ್ಯಾಸರುಹೇಳಿದ ಮರುತ್ತನ ಯಜ್ಞವಿಧಾನವನ್ನು ಕೇಳಿ ಧರ್ಮರಾಯನು ಮರಳಿ ಬಾದರಾಯಣನನ್ನು ಕುರಿತು ಸ್ವಾಮಿ ! ಯಾವ ಕೃತ್ಯದಿಂದ ಇಹದಲ್ಲಿ ಕೀರ್ತಿಯೂ ಪರದಲ್ಲಿ ಸುಖವೂ ಉಂಟಾಗುವುದು ? ಮತ್ತಾವಕಾರ್ಯಗಳಿಂದ ಪ್ರಾಣಿಗಳಿಗೆ ನರಕಬಾಧೆಯುಂಟಾಗುವುದೆಂದು ಬೆಸಗೊಳಲು, ಧರ್ಮಾತ್ಮನಾದ ವ್ಯಾಸಮುನಿಯು ಯುಧಿಷ್ಠಿರನನ್ನು ಕುರಿತು ಇಂತೆಂದನು:—ಸದಾ ಸತ್ಕರ್ಮವನ್ನೇ ಮಾಡುತ್ತ ಸಕಲ ವೇದಾರ್ಥಗಳನ್ನು ಬಲ್ಲವನಾಗಿ, ಪರದ್ರವ್ಯ, ಪರಾನ್ನ, ಪರವಧೂಚಿಂತೆಯನ್ನು ಸ್ವಪ್ನದಲ್ಲಿಯೂ ಅಪೇಕ್ಷಿಸದೆ, ಅಪವಾದಕ್ಕೆ ಗುರಿಯಾಗದೆ, ಮೋಸಗಾರನೆನಿಸದೆ, ಸದಾಚಾರಸಂಪನ್ನನಾಗಿರುವ ಬ್ರಾಹ್ಮಣನು ಇಹದಲ್ಲಿ ಕೀರ್ತಿ

ಯನ್ನೂ, ಪರದಲ್ಲಿ ಸುಖವನ್ನೂ, ದೇಹಾಂತದಲ್ಲಿ ಸದ್ಗತಿಯನ್ನು ಪಡೆಯುವನು.

ಧರ್ಮಸೂಕ್ಷ್ಮಗಳನ್ನು ತಿಳಿದು, ಪ್ರಜಾನೆಮ್ಮದಿಗೆ ಭಂಗಬಾರದಂತೆ ಜನರನ್ನು ಸಲಹುತ್ತ, ಕುಲಾಚಾರಕ್ರಮನಿರತನಾಗಿ ರಣರಂಗ ಭೀಮನಾಗಿ, ಆತ್ಮವಿದ್ಯೆಯನ್ನರಿದು, ಪ್ರಖ್ಯಾತನಾದ ರಾಜನು ರಣಭೂಮಿಯಲ್ಲಿ ಸತ್ತರೆ ಅಮರಾವತಿಯ ಐಶ್ವರ್ಯವನ್ನು ಸೂರೆಗೊಳ್ಳುವನು. ಕೆಟ್ಟಮಾತುಗಳನ್ನಾಡದೆ, ಅತಿಥಿಅಭ್ಯಾಗತರನ್ನು ಧಿಕ್ಕರಿಸದೆ, ಧನಸಂಪಾದನೆಮಾಡಿ, ಗೋವಿಪ್ರಸಂರಕ್ಷಣೆಯನ್ನು ಮಾಡುವ ವೈಶ್ಯನು ಇಹಪರಗಳಲ್ಲಿ ಕೀರ್ತಿಕೈವಲ್ಯಗಳನ್ನು ಹೊಂದುವನಲ್ಲದೆ ಹರಿಪದಧ್ಯಾನದಿಂದ ಮೋಕ್ಷವನ್ನು ಹೊಂದುವನು. ದ್ವಿಜರಾದ ತ್ರಿವರ್ಣದವರ ಅಜ್ಞಾನುವರ್ತಿಯಾಗಿ ನಡೆದುಕೊಳ್ಳುವ ಶೂದ್ರನು, ಶ್ರೀಹರಿಯಧ್ಯಾನದಿಂದ ಪರಿಶುದ್ಧನಾದ ಸದ್ಗತಿಯನ್ನು ಪಡೆಯುವನು ಸುಚರಿತ್ರಳಾಗಿ, ಗುಣವತಿಯೆಂದು ಖ್ಯಾತಿವೆತ್ತು ಮಾನವಂತೆಯಾಗಿ, ಪತಿಭೀತಳೆನಿಸಿಕೊಂಡಿರುವ ಪತಿವ್ರತಾನಾರಿಯನ್ನು ದೇವತೆಗಳಾದಿಯಾಗಿ ಸಕಲರೂ ಹೊಗಳುವರು ಆಹಾ ! ಅಂತಪ್ಪ ಸಾಧ್ವೀಮಣಿಯ ಭಾಗ್ಯವೆಂಥದೋ ನಾನು ಕಾಣೆ ! ಗಂಡನೇ ಸಕಲ ದೇವಸ್ವರೂಪನೆಂದು ಆತನನ್ನು ಎಡಬಿಡದೆ ವರ್ತಿಸುತ್ತಿರುವ ಹೆಂಗಸರು ಮೂರುಲೋಕಗಳಿಗೂ ಪೂಜ್ಯವಾದ ಸದ್ಗತಿಯನ್ನು ಪಡೆಯುವರು. ಇಂತಪ್ಪ ಸದ್ಗತಿಯನ್ನು ನೀಗಿಕೊಳ್ಳುವ ಕಾಮಿನಿಯರು, ಬಹು ಸಾಹಸವಂತರು, ಅವರ ಮಾಯಾಶೀಲಗಳನ್ನು ಎಂದಿಗೂ ನಂಬಬಾರದು. ಅಲ್ಲದೆ ತಂದೆಯಿಂದ ಬಾಲ್ಯದಲ್ಲಿ ಗಂಡನಿಂದ ಪ್ರಾಯದಲ್ಲಿ, ಮಕ್ಕಳಿಂದ ಮುದಿತನದಲ್ಲಿ ರಕ್ಷಿಸಲ್ಪಡುವ ಸ್ತ್ರೀಸಮುದಾಯಕ್ಕೆ ಎಂದಿಗೂ ಸ್ವಾತಂತ್ರ್ಯವನ್ನು ಕೊಡಬಾರದು, ಹಾಗಿಲ್ಲದೆ ತಾನೆತಾನಾಗಿ ಸ್ವೇಚ್ಛೆಯಿಂದ ಬಾಳುವ ನಾರಿಯಿಂದ ವಂಶಕ್ಕೆ ಹಾನಿಯುಂಟಾಗುವದು. ದ್ವಿಜಪಂಗ್ತಿಯಿಂದ ಶೋಭಿಸದಿರುವ ಬಾಲೆಯೂ, ಯಜ್ಞಶಾಲೆಯೂ, ಸಮನಾದ ಪಾದಗಳಿಲ್ಲವಾದರೆ ಯುವತಿಯೂ, ಕವಿತ್ವವೂ ಮನೋಹರವಾದ ಕರಭೋರು ಕಾಂತಿಯಿಲ್ಲವಾದರೆ ಚಂದ್ರನೂ, ಸುಂದರಾಂಗಿಯೂ, ಶಾಲಿಸೌಂದರ್ಯವನ್ನು ಹೊಂದದಿದ್ದರೆ ಭೂಮಿಯೂ, ಕಾಮಿನಿಯೂ, ಮಂಗಳಕರಳಾಗಿದ್ದರೂ ಅಭಿವೃದ್ಧಿಯನ್ನು ಹೊಂದಲಾರರು. ಮಾವ, ಭಾವ, ಅತ್ತೆ ಮೊದಲಾದವರನ್ನು ಸೇವೆಯಿಂದ ತೃಪ್ತಿಪಡಿಸುತ್ತ, ತನ್ನ ಗಂಡನಿಗೆ ಸುರತಾಮೃತವನ್ನು ಕೊಟ್ಟು, ಸದಾಚಾರದಿಂದ ನಡೆದುಕೊಳ್ಳುವ ಹೆಂಗಸಿಗೆ ಸಕಲ ಲಕ್ಷಣಗಳೂ ಮಂಗಳಕರಗಳಾಗುವುವು. ಹಾಗಿಲ್ಲದೆ ಹಾವಿನಂತೆಯೂ, ಹೋರಿಯಂತೆಯೂ, ಆಗಾಗ್ಗೆ ಮೊರೆದೆದ್ದು ಗದರಿ, ಗರ್ಜಿಸಿ ಮನೆಗಲಹಗಳನ್ನು ಮಾಡದೆ, ಪೀಡಿಸುವ ಹೆಂಗಸು, ಆವಳ ಗಂಡನಿಗೂ ಬಂಧುಜನಗಳಿಗೂ, ಮರ

ಣವೇ ಉತ್ತಮವೆನ್ನುವಂತೆ ಮಾಡಲಾರಳೇ ? ಕಾಲುಗಳೂ ನಾಲಗೆಯೂ ಕಪ್ಪುಬಣ್ಣದಿಂದ ಕೂಡಿ, ಭೂಮಿಯಮೇಲೆ ನಡೆಯುವಾಗ ಸಮವಾದ ಕಾಲು ಬೆರಳುಗಳು ಭೂಸ್ಪರ್ಶವಾಗದಿರುವ ಹೆಂಗಸಿಗೆ ಮುತ್ತೈದೆತನವು ಉಳಿಯಲಾ ರದು. ಅಂತಪ್ಪವಳು ವಿಧವೆಯಾದಬಳಿಕ ಸದಾಚಾರದಿಂದೊಡಗೂಡಿ, ಆಲಸ್ಯ ವನ್ನು ತೊರೆದು ಸತ್ಕಾರ್ಯಪರಳಾಗಿ ದೇಹವನ್ನು ಬಿಟ್ಟರೆ, ಅಂತ್ಯದಲ್ಲಿ ಪತಿಲೋ ಕವನ್ನು ಹೊಂದುವಳು. ಚಿತ್ತಚಾಂಚಲ್ಯವನ್ನು ಹೊಂದಿ ಮತ್ತರಾದ ದುರು ಳರೊಡನಾಡುವುದಕ್ಕೆಳಸಿ, ಅಧರ್ಮಪರಳಾಗಿ, ಅಹಂಕಾರದಿಂದ ಹೊಟ್ಟೆಹೊರೆ ದುಕೊಳ್ಳುತ್ತ ಧೂರೆಯನ್ನು ಬಿಟ್ಟ ಹಾವಿನಂತೆ ಕ್ರೂರಳಾಗಿರುವ ಹೆಂಗಸಿನ ಗತಿಯು ದುರ್ಗತಿಯಾಗುವುದು. ಅಂಥವಳ ಸಂಗದಲ್ಲಿದ್ದವನೂ, ಅವಳನ್ನು ಮದುವೆಯಾದ ಗಂಡನೂ, ಆ ಹೆಂಗಸೂ, ಮೂವರೂ ಪತಿತರಾಗಿ ದುರ್ಗತಿಗಿಳಿ ಯುವರು. ಆದಕಾರಣ ಎಂತಹ ಸಂಕಟದಲ್ಲಿಯಾದರೂ ಪರಸ್ತ್ರೀಯನ್ನು ಸೇರಬಾರದು ಒಂದುವೇಳೆ ಸೇರಿದರೆ ಸದ್ಗತಿಯುಂಟಾಗುವುದೆ ? ಎಂದಿಗೂ ಆಗ ಲಾರದು ? ವಿಷಭೋಜನದಂತೆ ಅಂಥವರನ್ನು ಕಣ್ಣೆತ್ತಿಯೂ ನೋಡಬಾರದು. ಮನೆಗೆಲಸವನ್ನು ತೊರೆದು ನೆರೆಹೊರೆಗಳಲ್ಲಿ ಅಲೆಯುವಳೂ, ಹುಟ್ಟಿದಮನೆಯ ಲ್ಲಿರುವವಳೂ, ಅಡಿಗಡಿಗೂ ಮಕ್ಕಳನ್ನು ಮುದ್ದಿಸುವವಳೂ, ಪ್ರೀತಿಯಿಂದ ಹಾಡುವವಳೂ, ನಿಷ್ಕಾರಣವಾಗಿ ಗಹಗಹಿಸಿ ನಗುವವಳೂ, ಬಾಗಿಲಲ್ಲಿನಿಂತು ಬೀದಿಯಲ್ಲಿ ಹೋಗುವವರನ್ನು ನೋಡುವವಳೂ, ಜನಸಂದಣಿಯಲ್ಲಿ ಆಲೆದಾಡು ವವಳೂ, ದೇಶದೇಶದ ಮಾತುಗಳನ್ನು ಮನೆಗೆತಂದು ಹೇಳುವವಳೂ, ಚಿಕ್ಕವ ರೊಡನೆಯೂ ಹುಡುಗರೊಂದಿಗೆಯೂ ಆಟವಾಡುವವಳೂ, ತನ್ನ ಯೋಗ್ಯತೆ ಯನ್ನು ಮೀರಿ ಅಲಂಕಾರ ಮಾಡಿಕೊಳ್ಳುವವಳೂ, ಶಿಕ್ಷೆರಕ್ಷೆಗೆ ನಿಲ್ಲುವಳೇ ? ಎಂದಿಗೂ ನಿಲ್ಲಲಾರಳು. ಆದಕಾರಣದಿಂದ ಪಂಡಿತರಾದವರು, ತಂತಮ್ಮ ತರು ಣಿಯರು ನರ್ತಕಿ ನಾಪಿತೆ, ಎಲೆಗಾತಿ, ಕುಂಟಣಿ, ದಾದಿ ಸೋಲಿಗರವಳು, ಕೊರ ಮಿತಿ, ಗಂಡಬಿಟ್ಟವಳು, ಹೂವಾಡಿಗಿತ್ತಿ, ಸಕೇಶಿ, ಮುಟ್ಟಾದ ಹೆಂಗಸು, ಪರಿ ಚಾರಕಳು ಮೊದಲಾದವರೊಡನೆ ಸ್ನೇಹಮಾಡಿದರೆ ದುರಾಚಾರವನ್ನು ಕಲಿಯು ವರೆಂಬ ಸಿದ್ಧನೀತಿಯನ್ನು ತಿಳಿದು, ಮಾನಿನಿಯರ ಮಾನಕ್ಕೆ ಹಾನಿಬರದಂತೆ ಅವ ರನ್ನು ಪಾಲಿಸುತ್ತಿರಬೇಕು. ಮದನಬಾಣದಿಂದ ನೊಂದು, ಮತ್ತೊಬ್ಬ ಪುರು ಷನೊಡಲೆಳಸಿ, ಹಲುಬಿ ಹಂಬಲಿಸುತ್ತ ತನಗನುಕೂಲಳಾದ ದಾದಿಯನ್ನು ಕರೆದು, ಅವಳಿಗಿಷ್ಟವಾದುದನ್ನು ಕೊಟ್ಟು ಒಡಂಬಡಿಸಿ, ಸಮಯಸಂದರ್ಭಗಳ ನ್ನರಿತು, ನೆರೆಹೊರೆಯವರು ಕಾಣದಂತೆ ಗಂಡನಿಗೆ ಮೋಸಮಾಡಿ, ಮನೆಯ ಜನಗಳನ್ನು ಮರುಳುಗೊಳಿಸಿ, ಕಾಮಕೇಳಿಯಲ್ಲಿ ಕೂಡಿದ್ದು, ಮರಳಿ ಮಹಾಪತಿ ವ್ರತೆಯಾದ ಗರತಿಯರಂತಿರುವವರೇ ಜಾರೆಯರೆನಿಸುವರು, ಅಂಥವರ ಮುಖ

ವನ್ನು ನೋಡಬಹುದೆ ! ತನ್ನನ್ನು ನೋಡಿ ಮೋಹಿಸಿದ ಪುರುಷನನ್ನು ಕಂಡು, ಕಡೆಗಣ್ಣಿನ ನೋಟದಿಂದ ತನ್ನಿಂಗಿತವನ್ನು ಸೂಚಿಸಿ ಜೋಲಾಡುವ ತುರುಬನ್ನು ಸರಿಮಾಡುವ ನೆವದಿಂದ ಕೈಗಳನೆತ್ತಿ ಜಾರಿದಸೆರಗನ್ನು ಓರೆಮಾಡಿ ಹೊದೆಯುತ್ತ ಮೊಲೆಗಳ ಚೆಲುವನ್ನು ತೋರಿ, ಹುಸಿಲಜ್ಜೆಯಿಂದ ಮುಂದೆ ಹೋಗುವವಳಂತೆ ನಟಿಸುತ್ತ ಮೆಲ್ಲಮೆಲ್ಲನೆ ನಡೆದು, ತನ್ನ ಬೆಡಗಿನಿಂದ ನಾಲ್ಕುಕಡೆಯುವರನ್ನೂ ಮರುಳುಮಾಡುತ್ತಿರುವ ಹೆಂಗಸರೇ ಜಾರೆಯರೆನಿಸಿಕೊಳ್ಳುವರು. ತನ್ನೈಶ್ವರ್ಯವನ್ನು ತಾನು ಅನುಭವಿಸಲು ಇಷ್ಟವಿಲ್ಲದವಳಾಗಿ, ಸದಾ ಚಂಚಲೆಯಾಗಿ ಹುರುಡಿನಿಂದ ಹುಡುಗಾಟವನ್ನು ಆಡುವವಳಾಗಿ, ಮೊಂಡುತನದಿಂದ, ಹಠವಾದಿಯಾಗಿ, ನೀಚಳಾಗಿ, ಕೋಪಿಷ್ಠೆಯೆನಿಸಿ, ಕುಹಕಿಯಾಗಿ, ನೀಚಕುಲದಲ್ಲಿ ಹುಟ್ಟಿದವಳಾಗಿ, ಎಂಥ ಸುಖ ಸೌಭಾಗ್ಯಗಳಿದ್ದರೂ ತೃಪ್ತಿಯಿಲ್ಲದವಳಾಗಿ, ಕುಲನಾಶಿನಿಯೆಂದೆನಿಸಿ, ಕಪಟಸ್ವಭಾವದವಳಾಗಿ, ಗಂಟುವ್ಯಾಜ್ಯಗಳನ್ನು ಹೂಡುವವಳಾಗಿ, ಜಗಳಗಂಟಿಯಾಗಿ, ಬಹು ದುಷ್ಟಳಾಗಿ, ವೈರಸ್ಯೆಯಾಗಿ, ಪರಾನುಕೂಲೆಯಾಗಿ, ಪಾದರಿಯಾಗಿ, ವಿಷಮಗತಿಯವಳಾಗಿ, ವಿಹ್ವಲಾಂತಃಕರಣೆಯಾಗಿ, ವಿಷದಂತೆ ಕ್ರೂರಳಾಗಿ, ವಿಪರೀತವರ್ತನೆಯುಳ್ಳವಳಾಗಿ, ಸದಾ ಸಂಕಟಪಡುವಳಾಗಿ, ಕಳ್ಳತನವನ್ನು ಕಲಿತಿರುವಳಾಗಿ, ತಾಮಸಿಯಾಗಿ, ಬಹು ನಿದ್ರೆಯಿಂದ ಬೆಗಡುಗೊಂಡವಳಾಗಿ, ಇರುವ ಹೆಂಗಸನ್ನು ಸಹ ವಾದ ಗುಣಧರ್ಮಉಳ್ಳವಳೆಂದು ನಂಬಿ ಯಾಜಮಾನ್ಯದಲ್ಲಿ ನಿಲ್ಲಿಸಿದರೆ ಕೇಡಿಗ ಬೀಡಾಗದಿರುವುದೆ ?

ಕೇಳೈ ಧರ್ಮರಾಯನೇ ! ಬಹುಮಾತುಗಳಿಂದ ಫಲವೇನು ? ಚಿತ್ರದಲ್ಲಿ ಬರೆದ ಹೆಣ್ಣುಬೊಂಬೆಯನ್ನು ನಂಬಬಾರದು ಎನ್ನುವಲ್ಲಿ ಉಳಿದ ಹೆಂಗಸರ ನೆಲೆಯನ್ನು ಕಂಡವರುಂಟೆ ? ಅದು ಹಾಗಿರಲಿ ! ಹೆಣ್ಣಾಗಿ ಹುಟ್ಟಿದವಳಿಗೆ ವ್ರತ, ಕಥೆ, ದಾನ, ಧರ್ಮ, ತಪಸ್ಸು, ಧರ್ಮನಿಷ್ಠೆ, ತೀರ್ಥಯಾತ್ರೆ, ಮೊದಲಾದುವುಗಳೊಂದೂ ಇಲ್ಲದಿದ್ದರೂ ಅನುದಿನವೂ ಆದರದಿಂದ ಪತಿಸೇವೆಯನ್ನು ಹಿತಕರವಾಗಿ ಮಾಡುವ ಪತಿವ್ರತದಿಂದಲೆ ಇಹಪರಗಳಲ್ಲಿ ಸದ್ಗತಿಯುಂಟಾಗುವದು. ಅಯ್ಯಾ ಧರ್ಮನಂದನಾ ! ಸಾರಭೂತವಾದ ಈ ಧರ್ಮರಹಸ್ಯವನ್ನು ಕೇಳು. ರಾಜನಾದವನು ಹಣವನ್ನು ಕೊಟ್ಟು, ಲೀಲಾಲೋಲನಾಗಿ ತನ್ನಬಳಿಯಲ್ಲಿ ಜೂಜುಗಾರರು, ನಾಸ್ತಿಕರು, ಚಾಡಿಕೋರರು, ಕರುಬರು, ನೀಚರು ಮೊದಲಾದವರನ್ನು ಇಟ್ಟುಕೊಂಡರೆ ಪ್ರಜಾನೆಮ್ಮದಿಗೆ ಭಂಗವುಂಟಾಗುವದಲ್ಲದೆ ಇಹಪರಗಳಲ್ಲಿ ಸದ್ಗತಿಯೂ ನಾಶವಾಗುವುದು. ಅಲ್ಲದೆ ಆಚಾರಧರ್ಮವನ್ನು ತೊರೆದು ನಡೆಯುವ ಬ್ರಾಹ್ಮಣನು, ಭಗವನ್ನಿಯಮವನ್ನು ವಿಚಾರುವವನಾದುದರಿಂದ ಆತನಿಗಿಂತಲೂ ಬಾಹ್ಯರಾದವರುಂಟೆ ? ಭಗವದ್ಧ್ಯಾನವಿಲ್ಲದವ

ನಿಗೆ ಮೂರುಲೋಕಗಳಲ್ಲಿ ಎಲ್ಲಿಯಾದರೂ ಸದ್ಗತಿಯುಂಟಾಗುವುದೇ ? ಎಂದಿಗೂ ಆಗಲಾರದು. ಇನ್ನು ಭಾಗ್ಯದೇವತೆಯಾದ ಲಕ್ಷ್ಮೀದೇವಿಯು ನೆಲೆಸಿರುವ ಮತ್ತು ಬಿಟ್ಟೋಡುವ ಪುಣ್ಯಾಪುಣ್ಯಗಳ ಲಕ್ಷಣಗಳನ್ನು ನಿನಗಾಗಿ ವಿವರಿಸುವೆನು ಕೇಳು.

ಸತ್ಯವಂತನಾಗಿ, ಶೌಚಾಚಾರಪರನಾಗಿ, ಪ್ರಾಣಿವತ್ಸಲನಾಗಿ, ತನ್ನಂತೆ ಸಕಲವನ್ನೂ ನೋಡುವ ಪುರುಷನ ಮನೆಯಲ್ಲಿಯೂ, ತನ್ನ ಗಂಡನೇ ಸಕಲ ದೇವತಾಸ್ವರೂಪನೆಂದರಿತು, ಸುಚರಿತ್ರಳಾಗಿ, ಸದಾ ಹಿತಕರವಾಗಿ ಪತಿಸೇವೆಯನ್ನು ಮಾಡಿಕೊಂಡಿರುವ ಹದಿಬದೆಯ ನೆಲೆಯಲ್ಲಿಯೂ, ಅಂತಪ್ಪ ಪತಿವ್ರತೆಯರ ಮುಖಕಮಲ, ಪಾದಪದ್ಮ, ಅಂಗುಳಿಗಳೆಂಬ ಮದನಬಾಣಗಳಿಂದ ಪೀಡಿತನಾಗದ ಜಿತೇಂದ್ರಿಯನ ಗೃಹದಲ್ಲಿಯೂ, ಭಾಗ್ಯಲಕ್ಷ್ಮಿಯು ಸುಖದಿಂದ ನೆಲೆಯಾಗಿರುವಳು. ಮುತ್ತು ಮಾಣಿಕ್ಯಗಳಿಗಿಂತಲೂ ಧಾನ್ಯವೇ ಉತ್ತಮವಾದುದೆಂದು ಸಂಗ್ರಹಿಸಿ, ಹಣಕ್ಕಿಂತಲೂ ಅನ್ನವು ಅಗ್ಗವಾದುದೆಂದು ವೆಚ್ಚಮಾಡುವವನಾಗಿ, ಅತಿಥಿಗಳನ್ನು ಮಕ್ಕಳಿಗಿಂತಲೂ ಅಧಿಕವಾಗಿ ಆದರಿಸುತ್ತ, ತನ್ನ ತಾಯಿತಂದೆ ನೆಂಟರಿಷ್ಟರನ್ನು ಪ್ರೀತಿಯಿಂದ ಮನ್ನಿಸುವ ಯಾವ ಪುರುಷನಿರುವನೋ ಅಂಥವನೇ ಸದಾಚಾರಸಂಪನ್ನನು ಆದುದರಿಂದ ಆತನ ಮನೆಯಲ್ಲಿ ಭಾಗ್ಯಲಕ್ಷ್ಮಿಯು ನೆಲೆಯಾಗಿ ನಿಲ್ಲುವಳು. ಮೇಲ್ನುಡಿಯುವನಾಗಿ, ಮಾಡಿದ ಉಪಕಾರವನ್ನು ಮರೆಯದವನಾಗಿ ದಾನಿಯೆಂಬ ಬಿರುದನ್ನು ಪಡೆದು, ಪರಸ್ತ್ರೀವ್ಯಸನಕ್ಕೆ ಸಿಕ್ಕದೆ, ಮಾನವಂತನಾಗಿ, ಸಾಕ್ಷಿವಾದಕ್ಕೆ ಹೋಗದೆ, ತೀರ್ಥಸಂಗಿಯಾಗಿ, ತನಗಳವಟ್ಟ ಸತ್ಕರ್ಮಗಳನ್ನು ಬಿಡದವನಾಗಿ, ಆಡಿದಮಾತನ್ನು ತಪ್ಪದೆ ನಡೆಸುವವನಾಗಿ, ಗೋಬ್ರಾಹ್ಮಣ ರಕ್ಷಣಪರನಾಗಿ, ನಾನಾಧರ್ಮಗಳನ್ನು ಮಾಡುವವನ ಮನೆಯಲ್ಲಿ ಮಹಾಲಕ್ಷ್ಮಿಯು ಮೂರ್ತಿಗೊಂಡಿರುವಳಲ್ಲದೆ ಮತ್ತೆಲ್ಲಿಯೂ ಹೋಗಲೊಲ್ಲಳು. ಹೊಸಲು, ಒರಳು, ಒನಕೆಗಳಮೇಲೆ ಕುಳಿತುಕೊಳ್ಳುವವನು, ಎರಡು ಕೈಗಳಿಂದಲೂ ತಲೆಯನ್ನು ಕೆರೆದುಕೊಳ್ಳುವವನು, ಬಹಳವಾಗಿ ಜೂಜಾಡುವವನು, ಮಿತಿಮೀರಿ ಊಟಮಾಡುವವನು, ನಿಂತು ನೀರನ್ನು ಕುಡಿಯುವವನು, ಉದಯಾಸ್ತಮಯ ಕಾಲಗಳಲ್ಲಿ ನಿದ್ರೆಮಾಡುತ್ತಿರುವವನು ಪರರನ್ನು ನಿಂದಿಸಿ, ತನ್ನನ್ನು ತಾನೆ ಹೊಗಳಿಕೊಳ್ಳುವವನು, ಸಮಯವನ್ನು ಹುಡುಕಿಕೊಂಡಿದ್ದು ಪರದ್ರವ್ಯವನ್ನು ಅಪಹರಿಸುವವನು, ನಿರುದ್ಯೋಗಿಯಾಗಿ ಕಾಲವನ್ನು ಕಳೆಯುವವನು, ಇವರೆಲ್ಲರೂ ತಂತಮ್ಮ ಮನೆಯಲ್ಲಿ ಭಾಗ್ಯಲಕ್ಷ್ಮಿಯು ಕುಳಿತುಕೊಳ್ಳುವ ಬಣ್ಣದ ಹಸೆಯಮೇಲೆ ಭಾಗ್ಯಹೀನಳಾದ ದರಿದ್ರಲಕ್ಷ್ಮಿಯನ್ನು ಕುಳ್ಳಿರಿಸಿಕೊಂಡು ಸೇವಿಸುತ್ತಿರುವರು. ಹಾಗಲ್ಲದೆ ಜಡ ಮೂರ್ಖ, ಕೋಪಿಷ್ಠ, ಶಠ, ತಾಮಸಿ, ನಿಷ್ಠುರವಾದಿ, ಚಾಡಿಕಾರ, ಕೃತಘ್ನ

ಕರುಬ, ಬ್ರಹ್ಮಘ್ನ, ಕುಚೇಷ್ಟೆಗಾರ, ಕಾಮುಕಿ, ಪ್ರಾಣಹಿಂಸಕ, ಡಾಂಭಿಕ, ಪಾಷಂಡಿ, ಹೊಟ್ಟೆಬಾಕ, ಖೂಳ, ಸ್ಥಿರಬುದ್ಧಿ ಇಲ್ಲದವನು, ಕುಹಕಿ ಕುತ್ಸಿತ, ದುರಾಚಾರಿ, ವಿಶ್ವಾಸಘಾತಕ, ಪಾಪಿಷ್ಠ ಎಂಬ ಇಷ್ಟು ಜನರನ್ನೂ ಪ್ರಯತ್ನಪೂರ್ವಕವಾಗಿ ಭಾಗ್ಯಲಕ್ಷ್ಮಿಯು ಬಿಟ್ಟೋಡುವಳು.

ಹೀಗೆ ಸಕಲ ಧರ್ಮಸೂಕ್ಷ್ಮಗಳನ್ನು ಬೋಧಿಸಿ, ಯಜ್ಞಾರಂಭಕಾಲವು ಹತ್ತಿರವಾದುದರಿಂದ ಹಿಮಾಲಯದಲ್ಲಿನ ಧನವನ್ನು ತರಿಸು ಎಂದು ವೇದವ್ಯಾಸಮುನಿಯು ಹೇಳಲು, ಧರ್ಮರಾಯನು ಸರ್ವಸನ್ನಾಹದಿಂದ ಚತುರಂಗಸೇನೆಯೊಡಗೊಂಡು ಅರ್ಜುನಾದಿ ಸಹಜಾತರೊಡನೆ ವೇದವ್ಯಾಸನು ಹೇಳಿದ ಮಾರ್ಗದಲ್ಲಿ ಹೊರಟು, ಬಹುಮಂದಿ ಬ್ರಾಹ್ಮಣರಿಂದೊಡಗೂಡಿ ಮರುತ್ತರಾಯನ ಯಾಗದಲ್ಲಿ ದೊರೆತ ಹಣವನ್ನು ಬಿಟ್ಟುಹೋದಬಳಿಗೆ ಬಂದು ಧೂಪ, ದೀಪ, ನೈವೇದ್ಯ, ಗಂಧ, ಪುಷ್ಪಾಕ್ಷತೆ ನಮಸ್ಕಾರಗಳಿಂದ ಶಾಸ್ತ್ರನತ್ತಾಗಿ ನಿಧಿಪಾಲಕನಾದ ಕುಬೇರನನ್ನು ಪೂಜಿಸಿ, ಅಷ್ಟದಿಕ್ಪಾಲರನ್ನರ್ಚಿಸಿ, ಅರವತ್ತುನಾಲ್ಕುಬಗೆಯ ಯೋಗಿಣಿಯರಿಗೆ ಆಹುತಿಯನ್ನು ಕೊಟ್ಟು, ಅಲ್ಲಿನ ಧನಕನಕಗಳನ್ನು ಹಸ್ತಿರಥ ತುರುಗೋಷ್ಟ್ರ ಪದಾತಿಗಳಮೇಲೆ ಹೇರಿಕೊಂಡು ಸಂತೋಷದಿಂದ ವೇದವ್ಯಾಸನೊಡನೆ ಹಸ್ತಿನಾಪುರಕ್ಕೆ ಬಂದು ಧರ್ಮರಾಯನು, ಮುಂದಿನ ಕಾರ್ಯಗಳೆಲ್ಲವೂ ನಿರ್ವಿಘ್ನವಾಗಿ ನಡೆಯಬೇಕಾದರೆ ತಕ್ಕ ತಂತ್ರಗಳನ್ನು ತೋರಿಸುವ ಶ್ರೀ ಕೃಷ್ಣಮೂರ್ತಿಯನ್ನು ಕರೆಸಬೇಕೆಂದು ಯೋಚಿಸಿ ದೇವಪುರ ಲಕ್ಷ್ಮೀರಮಣನನ್ನು ಶೀಘ್ರವಾಗಿ ಕರೆತರುವುದೆಂದು ಹೇಳಿ ಭೀಮಸೇನನನ್ನು ಹಸ್ತಿನಾಪುರದಿಂದ ದ್ವಾರಕೆಗೆ ಕಳುಹಿಸಿದನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿ ನಾಗಶರ್ಮ ಪ್ರಣೀತ ಜೈಮಿನಿ ಭಾರತ ಕಥಾ ಸಂಗ್ರಹದಲ್ಲಿ ಐದನೆಯ ಸಂಧಿ ಸಂಪೂರ್ಣಂ. ಶ್ರೀ ಶ್ರೀ ಶ್ರೀ.

## ಆ ರ ನೆ ಯ ಸಂ ಧಿ .

ಭೀಮಸೇನನು ದ್ವಾರಕಾನಗರಕ್ಕೆ ಬಂದುದು.

ಎಲೈ ಜನಮೇಜಯರಾಯನೇ ! ಇನ್ನು ಮುಂದಿನಕಥೆಯನ್ನು ಲಾಲಿಸು! ಬಳಿಕ ಹಸ್ತಿನಾಪುರದಿಂದ ಹೊರಟು ಭೀಮನು, ಪಯಣಮಾಡಿ ಬಂದು ವಜ್ರಹತಿಯಿಂದ ಬೆದರಿಬೆದರಿದ ಪರ್ವತಗಳ ಭಯಕ್ಕೆ ಔಷಧಿಯಾಗಿ, ಅತುಲಕಲ್ಲೋಲಮಾಲೆಗೆ ನಿರವಧಿಯೆನಿಸಿ, ನಾನಾ ಜಲಜಂತುಗಳಿಗೆ ಆವಾಸಸ್ಥಾನವಾಗಿ,

ಭೂಮಂಡಲವನ್ನು ಅಗಳ್ತೆಯಂತೆ ಸುತ್ತಿಕೊಂಡು, ಅಪರಿಮಿತ ಗುಣಸಂಭೂತವಾದ ಅಮೃತಕ್ಕೆ ತವರ್ಮನೆಯೆನಿಸಿ, ಬಹುವಿಧ ರತ್ನರಾಶಿಗಳಿಗಾಕರವಾಗಿ ಉದ್ಘೋಷಿಸುತ್ತಿರುವ ಸಮುದ್ರವನ್ನು ಕಂಡನು. ಅಂತಪ್ಪ ಸಮುದ್ರವು ಘುಳಘುಳನೆ ಹೊರಡುತ್ತಿರುವ ಸುಳಿಗಳಿಂದಲೂ, ಸೆಳವಿನಿಂದ ಕೂಡಿ ಏಳುತ್ತಿರುವ ನೊರೆಯ ತೆರಗಳಿಂದಲೂ, ಮುತ್ತಿನಂತೆ ರಾಜಿಸುತ್ತಿರುವ ತುಂತುರ್ವನಿಗಳಿಂದಲೂ, ನಾನಾವಿಧವಾದ ಜಲಜಂತುಗಳ ಗಂಭೀರಧ್ವನಿಯಿಂದಲೂ ರತ್ನರಾಶಿಗಳ ಕಾಂತಿಯಿಂದಲೂ, ದಿಕ್ಕುದಿಕ್ಕಿನಿಂದ ಬಂದು ಸೇರುವ ಪ್ರವಾಹಗಳಿಂದಲೂ, ಮೊಸಳೆ ಮೊದಲಾದ ಕ್ರೂರಜಂತುಗಳ ಸಂಘದಿಂದಲೂ, ಅಳತೆಗಾಣದ ಆಳದಿಂದಲೂ, ಹೀಗೆಂದು ನಿಶ್ಚಯಿಸಲಾಗದ ಪೆಂಪಿನಿಂದಿರುವ ತಡಿಕುಡಿಗಳಿಂದಲೂ ಮನೋಹರವಾಗಿದ್ದ ಸಮುದ್ರವು, ಅಗಸ್ತ್ಯಮುನಿಯು ಅಬ್ಬದಿಂದ ಆರ್ಭಟಿಸುತ್ತ ಅಂಗೈ ಆಪೋಶನವಾಗಿ ಮಾಡಿದುದನ್ನೂ, ಪರಶುರಾಮನು ಕೋಪದಿಂದ ಕೊರಗಿಸಿದುದನ್ನೂ, ದಾಶರಥಿಯ ದಾರುಣವಾದ ಬಾಣಹತಿಗೆ ಬಟ್ಟೆಗೊಟ್ಟುದನ್ನೂ, ಪ್ರತಿದಿನವೂ ತನ್ನನ್ನು ಅಧಿಕವಾಗಿ ಪೀಡಿಸುತ್ತಿರುವ ಬಡಬಾನಲನ ಕೋಟಲೆಯನ್ನೂ, ಅತ್ಯಂತವಾದ ಜಡಭಾವವು ತನಗೆ ಬಂದದ್ದನ್ನೂ, ಭಂಗರೂಪವು ಹೋಗಿಬರುತ್ತಿರುವುದನ್ನೂ, ನೆನೆದುಕೊಂಡು ನಿಟ್ಟುಸುರಿನಿಂದ ಬಿಸುಸುಯ್ದು ವೀರನಾದ ಭೀಮಸೇನನಿಗೆ ಎಚ್ಚರಿಸುವಂತೆ ರಾರಾಜಿಸುತ್ತಿದ್ದಿತು. ಅಯ್ಯೋ ! ಇಂದ್ರನ ಅಷ್ಟೈಶ್ವರ್ಯಗಳಿಗೆ ಆಕರವಾದ ಸಕಲ ವಸ್ತುಗಳನ್ನೂ ನಾನು ಸಂಗ್ರಹಿಸಿ ಕೊಟ್ಟರುವೆನು, ಅದುದರಿಂದ ನನ್ನ ಕಡೆಯುವರಿಗೆ ಆತನೆಂದಿಗೂ ಕೇಡುಮಾಡಲಾರನು. ಮೊದಲಿನಂತೆ ಸುಖವಾಗಿ ನೀವು ಭೂಲೋಕದಲ್ಲಿ ವಾಸಮಾಡಿಕೊಂಡಿರಿ ! ಎಂದು ಹೇಳಿ ತನ್ನಲ್ಲಿ ಅಡಗಿಕೊಂಡಿದ್ದ ಪರ್ವತಗಳನ್ನು ಹೊರಹೊರಡಿಸಿದಂತೆ ಅಲ್ಲೋಲ ಕಲ್ಲೋಲವಾದ ತೆರೆಗಳು ಆ ಪಾರಾವಾರದಲ್ಲಿ ಮೇರೆದಪ್ಪಿ ಬರುತ್ತಿದ್ದವು.

ಇಂತಹ ಸಮುದ್ರವು ಶಿವನಂತೆ ಗಂಗಾಹಿಮಕರಾವಹವಾಗಿ ಮಾಧವನಂತೆ ಗೋತ್ರೈಕಪಾಲಕಮೆನಿಸಿ, ಬ್ರಹ್ಮನಂತೆ ಸಮಸ್ತ ಭುವನಾಶ್ರಯವಾಗಿ ಖ್ಯಾತಿವೆತ್ತು, ಇಂದ್ರನಂತೆ ಅನಿಮಿಷಸಮೂಹಕ್ಕೊಡೆಯನಾಗಿ, ದಿನನಾಥನಾದ ಸೂರ್ಯನಹಾಗೆ ಅನಂತರತ್ನಶೋಭಿಯಾಗಿ, ರಾಜಸಮೂಹದಂತೆ ಅಸಂಖ್ಯಾತವಾದ ವಾಹಿನೀಸಂಗತಮೆನಿಸಿ, ಉಪವನದಂತೆ ವಿದ್ರುಮಲತಾಶೋಭಿಯಾಗಿ ಕಣ್ಗೊಳಿಸುತ್ತಿದ್ದಿತು. ಹೀಗೆ ರಾಜಿಸುತ್ತಿರುವ ಸಮುದ್ರದ ಸೊಬಗನ್ನು ನೋಡುತ್ತ ಭೀಮನು ದ್ವಾರಕಾಪಟ್ಟಣದ ಊರಬಾಗಿಲಿಗೆ ಬಂದು, ಆನೆ, ಕುದುರೆ, ರಥ, ಛತ್ರ, ಚಾಮರ ಮೊದಲಾದವುಗಳಿಂದ ಶೋಭಿಸುತ್ತಿರುವ ಪಟ್ಟಣದ ಸೌಭಾಗ್ಯವನ್ನು ನೋಡಿ ಹೊಗಳುತ್ತ, ಪುರಪ್ರವೇಶಮಾಡಿ ರಾಜಿಸುತ್ತಿ

ರುವ ರಾಜಮಾರ್ಗದ ಎಡಬಲಗಳಲ್ಲಿ ಮುಗಿಲಮುಟ್ಟುವ ಸಮುದ್ರದ ತೆರೆಗಳಂತೆ ಹೊಳೆಯುತ್ತಿರುವ ಉಪ್ಪರಿಗೆಗಳಮೇಲೆ, ಬೆಳ್ಮುಗಿಲಿನ ನಡುವೆ ಥಳಥಳಿಸುತ್ತಿರುವ ಮಿಂಚುಗಳಹಾಗಿರುವ, ಕರುವಾಡದನೆಲೆವನೆಗಳಲ್ಲಿ ನಿಂತು ನೋಡುತ್ತಿರುವ ಎಳೆವೆಣ್ಗಳ ಕಟಾಕ್ಷ ಮರೀಚಿಯನ್ನು ಕಂಡು ಹರ್ಷಿತನಾದನು. ಆ ಕರುವಾಡದ ಚಂದ್ರಶಾಲೆಗಳಲ್ಲಿ ಏಕಾಂತವಾಗಿದ್ದು ತಮ್ಮ ದೇಹಶ್ರಮವನ್ನು ನೀಗಿಕೊಳ್ಳುತ್ತಿರುವ ಪದ್ಮಗಂಧಿಯರ ಬಲ್ಮೊಲೆಗಳಿಗೆ ಬೆಜ್ಜದಂತಿರುವ ಚಂದನಗಂಧದ ಸೊಗಸನ್ನೂ, ಹೂಮುಡಿದ ಜಡೆಮುಡಿಯ ಸುವಾಸನೆಯನ್ನು ಜನಸಮೂಹಕ್ಕೆ ತಂದೊಡ್ಡುವ ಮಂದಮಾರುತನು ಚಾಡಿಕಾರನಂತೆ, ರಾಜಬೀದಿಗಳಲ್ಲಿ ಅಲೆದಾಡುತ್ತಿದ್ದನು. ದುರ್ಗಮವೆನಿಸಿ, ಜಡಾಶ್ರಯವನ್ನು ಹೊಂದಿ, ಕ್ರೂರಜಂತುಗಳ ಸಂಗದಲ್ಲಿದ್ದರೂ ಮುತ್ತು ಹವಳಗಳು, ಈ ಪುರವನ್ನು ಸೇರಿದವೋ ! ಎಂಬಂತೆ ರತ್ನಪಡೀವ್ಯಾಪಾರಿಗಳ ಮಳಿಗೆಗಳು ಹೊಳೆಯುತ್ತಿದ್ದವು. ಕುಬೇರನು ತನ್ನ ಭಂಡಾರದ ನವನಿಧಿಗಳನ್ನು ಹೊರತೆಗೆದು ಲೋಕಕ್ಕೆಲ್ಲ ತೋರಿಸಲೆಂದು ಬಿಚ್ಚಿರಿಸಿದನೋ ಎನ್ನುವಂತೆ ಚಿನ್ನ ಬೆಳ್ಳಿಗಳ ಅಂಗಡಿಗಳು ರಾರಾಜಿಸುತ್ತಿದ್ದವು.

ಈ ದ್ವಾರಕಿಯು ಶ್ರೀಕಾಂತನಾದ ಲಕ್ಷ್ಮೀಪತಿಗೆ ರಾಜಧಾನಿಯಾಗಿರುವಾಗ ಲಕ್ಷ್ಮಿಯು ನಿಶ್ಚಲಳಾಗಿ ಇಲ್ಲಿರುವದಾಶ್ಚರ್ಯವೇ ? ಭೂದೇವಿಯು ತನ್ನಲ್ಲಿರುವ ವಸ್ತುಜಾಲಗಳನ್ನು ತನ್ನೊಡೆಯನಾದ ಶ್ರೀಹರಿಗೆ ತಂದೀಯಳೇ ಹೇಳು ಎನ್ನುವಂತೆ ಬಗೆಬಗೆಯಾದ ನವೀನ ವಸ್ತುಗಳಿಂದ ರಾಜಿಸುತ್ತಿದ್ದ ಅಂಗಡಿಗಳ ಸಾಲು ವಿರಾಜಿಸಿತು. ಇಂತೆಸೆವ ದ್ವಾರಕೆಯುವಣಿಗ್ವಾಟಿಕೆಯಲ್ಲಿ ನಲಿದಾಡುತ್ತಿರುವ ಸ್ತ್ರೀಯರು ಮಂದಹಾಸದಿಂದ ಅರೆಬಿರಿದ ಮಲ್ಲಿಗೆಯನ್ನೂ, ಸವಿಮಾಚೀನವಾದ ದಂತರಾಜಿಗಳಲ್ಲಿ ಕುಂದಕುಸುಮವನ್ನೂ, ಮುಖದಲ್ಲಿ ತಾವರೆಯನ್ನೂ, ಕೋಮಲವಾದ ತೋಳುಗಳಲ್ಲಿ ಶಿರಿಸವನ್ನೂ, ಹೊಳೆಯುತ್ತಿರುವ ಮೂಗಿನಲ್ಲಿ ಸಂಪಗೆಯನ್ನೂ, ಎಸಳುಗಣ್ಣುಗಳಲ್ಲಿ ನೆಯ್ದಿಲೆಯನ್ನೂ, ಉಗುರುಗಳಲ್ಲಿ ಕೇದಗೆಯನ್ನೂ ಅಕ್ಕರೆಯಿಂದಿಟ್ಟುಕೊಂಡು ಮಾರುತ್ತ ಹೂವಾಡಿಗರಅಂಗಡಿಯಲ್ಲಿ ಕುಳಿತಿರುವ ಮಾಲೆಗಾತಿಯರು ಮೋಹಗೊಳಿಸುತ್ತಿರುವರು. ಬಾಣವು ಹೂವಾಯಿತು, ಹೆದೆಯಾದರೋ ಹಾರಾಡುವ ದುಂಬಿಗಳು, ಬಿಲ್ಲಾದರೋ ಕಬ್ಬಿನಜಲ್ಲೆ, ಇವುಗಳಿಂದ ತನ್ನ ಪ್ರತಿಜ್ಞೆಯನ್ನು ನೆರವೇರಿಸಲಾಗದು ಎಂದು ಯೋಚಿಸಿ ಮನ್ಮಥನು ಹೂವಡಿಗಿತ್ತಿಯರ ಹುಬ್ಬೆಂಬ ಬಿಲ್ಲಿನಲ್ಲಿ ಕುರುಳೆಂಬ ಹೆದೆಯನ್ನು ಕಟ್ಟಿ, ಕಣ್ಣುಗಳೆಂಬ ಕೂರಂಬುಗಳನ್ನು ಹೂಡಿ, ಸಾಹಸದಿಂದ ವಿಟರೆಂಬ ಮೃಗಗಳನ್ನು ಬೇಟೆಯಾಡಿ ಆ ಸ್ತ್ರೀಯರು ಬಲ್ಮೊಲೆಗಳೆಂಬ ಬೆಟ್ಟದ ತುದಿಯಲ್ಲಿ ಕೆಡವುತ್ತಿರುವನು. ತಾವು [illegible]

ಕ್ತವಾದ ಮಾಲೆಗಳಿಗೆ ತಂತಮ್ಮ ಸುಯ್ಯಲರ ಸುವಾಸನೆಯನ್ನು ಕೊಡುತ್ತ ಕೋಮಲವಾದ ತಮ್ಮ ಮೈವಳ್ಳಿಯಿಂದ ಹೂವಾಲೆಗಳಿಗೆ ಮೃದುತ್ವವನ್ನು ಕೊಟ್ಟು, ತಮ್ಮ ಅವಯವಂಗಳ ಸೌಂದರ್ಯದಿಂದ ಹೂಗಳಿಗಂದವನ್ನುಂಟು ಮಾಡುವ ಮನ್ಮಥನ ಬಾಣದಂತಿರುವ ಸ್ತ್ರೀಯರು ಶೋಭಿಸುತ್ತಿದ್ದರು.

ಈತೆರದಂಗಡಿಬೀದಿಯ ವಿಚಿತ್ರವಾದ ಸೊಬಗನ್ನು ನೋಡುತ್ತ ಭೀಮಸೇನನು ಮುಂದೆ ಮನೋಹರವಾಗಿ ಕಾಣುತ್ತಿರುವ ಸೂಳೆಗೇರಿಗಾಗಿ ನಡೆತಂದನು. ತೋರವಾದ ಬಲ್ಮೊಲೆಗಳಿಗೂ, ನೀಳವಾದ ನಯನಗಳಿಗೂ, ಸೊಗಸಾದ ಬಡನಡುವಿನ ಬೆಡಗಿಗೂ, ಇಂಬಾಗಿ ಬೆಳೆದಿರುವ ಮುಡಿಗಳ ಸೊಬಗಿಗೂ, ಸರಿಹೋಲುವ ವಸ್ತುಗಳನ್ನು ಕಾಣದೆ ಬ್ರಹ್ಮನು ಲೋಕವಿಖ್ಯಾತವಾದ ದೊಡ್ಡ ಬೆಟ್ಟ, ಒಂದುಸೀರೆ, ಒಪ್ಪಿಡಿ, ಕರಭಂಗಳನ್ನು ಸೃಷ್ಟಿಸಿ, ಸಾಮ್ಯವನ್ನು ತೋರಿಸುತ್ತ, ಕೋಮಲವಾದ ಕೈಕಾಲುಗಳೆಂಬ ತಾವರೆಗಳನ್ನು ನಿರ್ಮಿಸಿರುವನೆಂಬಂತೆ ರಾಜಿಸುವ ಸುಂದರಾಂಗಿಯರು ಆ ರಾಜವೀಧಿಯಲ್ಲಿ ಕಣ್ಗೊಳಿಸುತ್ತಿದ್ದರು. ಅಂತಪ್ಪ ವಾರನಾರಿಯರ ಓರೆನೋಟಕ್ಕೆ ಸೋತುಹೋಗಿ ಮೀರಿದ ಮೋಹದಿಂದ ಸೇವಿಸುತ್ತಿರುವ ವಿಟನೊಬ್ಬನು, ಸಿಂಹದಂತೆ ಬಡವಾದ ನಡುವುಳ್ಳ ಇವಳ ಅವಯವದ ಬೆಡಗು ಊರ್ವಶಿಯ ನಡುವಿಗೆ ಸರಿಹೋಲುವುದೆ ? ಆಹಾ ! ವಸಂತಕಾಲದಲ್ಲುಲಿವ ಕೋಗಿಲೆಯ ಸುಮ್ದನಿಯು ಈ ಕಲಕಂಠಿಯ ಕೊರಲ್ದನಿಗೆ ಸಮವಾಗುವುದೆ ? ಹೂಬಾಣದಂತೆ ರಂಜಿಸುವ ಇವಳ ಕುಡಿನೋಟವು, ರಂಭೆಯ ಸೋಗೆಗಣ್ಣುಗಳಿಗೆ ಪಾಸಟಿಯಪ್ಪುದೆ ? ಹೇಳು ಎಂಬದಾಗಿ ತನ್ನ ಪ್ರೇಯಸಿಯನ್ನು ಬಣ್ಣಿಸುತ್ತಿದ್ದನು. ಇನ್ನು ಪೂರ್ವಸ್ನೇಹವನ್ನು ಮರೆತುಬಿಡು, ದಾಕ್ಷಿಣ್ಯ ಮಾಡಬೇಡ, ನಿನಗೆ ಅಪರವಯಸ್ಸಾಯಿತು, ಮಾರುತ್ತರ ಕೊಟ್ಟು ಮಾತನಾಡು, ಹೇಳಿದಕಾಲ ತೀರಿತು, ವಾಸವನ್ನು ಬಿಡಿಸು, ಇನ್ನು ನಿನ್ನನ್ನು ಕೂಡಿರುವ ಮೋಹಪಾಶವನ್ನು ಪರಿದುದೇ ಆದರೆ ಮೊದಲು ಬಂದವನನ್ನು ನೂಕು, ಸಾಕು ತಡಮಾಡಬೇಡವೆಂದು ಒಬ್ಬ ಮುದಿಕುಂಟಣಿಯು ತನ್ನ ಮಗಳಿಗೆ ಬುದ್ಧಿಹೇಳುವಂತೆ ನಾಲ್ಕು ದಿಕ್ಕುಗಳನ್ನು ಹೆಸರಿಸುತ್ತಿದ್ದಳು. ಇಂತು ಬಗೆಬಗೆಯಾದ ಬಿನದದ ಜಾಣ್ಮೆಯನ್ನು ತೋರಿಸುತ್ತಿರುವ ವಾರಾಂಗನೆಯರಲ್ಲಿ ಚದುರಂಗವನ್ನಾಡುತ್ತಿದ್ದ ನಾಯಿಕನಾಯಕರು ಹೀಗೆ ಸರಸವಾಗಿ ಮರ್ಮವನ್ನೆತ್ತಿ ಮಾತಾಡುತ್ತಿರ್ದರು ಹೇಗೆಂದರೆ:-

ಇನ್ನು ನನ್ನನ್ನು ಹಿಡಿಯಬೇಡ. ಮೊದಲು ಆನೆಸಿಕ್ಕಿದುದನ್ನು ನೋಡಿದೆಯಾ ? ಆಹಾ ! ನಿನ್ನ ಕೈಗುದುರೆ ನನ್ನ ಮನೆಯಲ್ಲಿ ಪೋದುದು, ನಿನ್ನ ತೇರು ಮುರಿದು ಮುಗ್ಗಡಿಸಿತು, ನಿನ್ನಾಟವೂ ಕಟ್ಟಿತು, ನಿನ್ನ ಚತುರಂಗವನ್ನು ನಾನೇ ಗೆದ್ದೆನೆಂದು ವಿಟನು ನುಡಿದನು. ಜೋಡಿಗಟ್ಟಿದ ಹಳದಿಯ ಕಾಯನ್ನು

ಹಿಂಡಿ ಹಿಡಿಯದೆ ಹೋದರೆ, ನಂಬಿಕೆಯಾಗಿ ಕೈಗೆ ಸಿಕ್ಕಿದ ಕರದಿನ ಜುಗವನ್ನು ಹೊಡೆಯದಿದ್ದರೆ ಮೆಚ್ಚಿಗೆಯಾಗಿ ಹಣ್ಣಿಗೆ ಬಂದಿರುವ ಕೆಂಗಾಯಿಗಳನ್ನು ಹಿಳಿಯದೆ ಹೋದರೆ, ಹಸುರುಬಣ್ಣದ ಹ್ವಾಸಂಗಿಯೇ ! ನಿನ್ನಿಂದ ನನಗೆ ಫಲವೇನು ಎಂದು ತನ್ನ ನಾಯಕಿಯನ್ನು ಮೆಚ್ಚಿಸುವ ಬಿಂಕದಿಂದೋರ್ವ ವಿಟನು ಪಗಡೆಯನ್ನಾಡುತ್ತಿದ್ದನು. ಅಲ್ಲೊಬ್ಬ ಜಾರಪುರುಷನು ತನಗುಂಟಾದ ಅವಮಾನವನ್ನು ಕುರಿತು ತನ್ನ ಪ್ರೇಯಸಿಯ ಮೃದುವಾದ ಮನಸ್ಸು ಏನುಕಾರಣ ಅವಳ ಕುಚದಂತೆ ಕಠಿಣವಾಯಿತು. ಇವಳು ಮಾಡುತ್ತಿದ್ದ ಮರ್ಯಾದೆಯು ಏಕೆ ಅವಳ ಮೆಲ್ನಡೆಯಂತೆ ಮಂದವಾಯಿತು. ನನ್ನಲ್ಲಿಟ್ಟಿದ್ದ ಅನುರಾಗವು ಇವಳ ಬದನಡುವಿನಂತೆ ಕ್ಷೀಣವಾಗಲು ಕಾರಣವೇನು ? ಇವಳಾಡುವ ನಲ್ಮಾತುಗಳೇಕೆ ? ಇವಳ ಮುಂಗುರುಳಿನಂತೆ ಕಪ್ಪಾಗಿ ಕೊಂಕಾಗಿ ಹೋಯಿತು. ಓಹೋ ! ಇವಳು ಏನನ್ನೂ ಬಲ್ಲವಳಲ್ಲ ಇವಳ ತಾಯಿ ಇವಳಿಗೆ ಹೇಳಿಕೊಟ್ಟಿರಬೇಕೆಂದು ಚಿಂತಿಸುತ್ತಿದ್ದನು. ಇದೆಲ್ಲವನ್ನೂ ನೋಡಿ ಭೀಮನು ಆಶ್ಚರ್ಯಯುಕ್ತನಾಗಿ, ನಾನಾದಿಕ್ಕುಗಳಿಂದಲೂ ಬಂದು, ಶ್ರೀಕೃಷ್ಣನ ಕೀರ್ತಿಯನ್ನು ಕೇಳಿ, ತಂತಮ್ಮ ವಿದ್ಯಾವಿನೋದಗಳನ್ನು ತೋರಿಸಿ, ಬಹುಮಾನ ಪಡೆಯಬೇಕೆಂದು ನೆರೆದಿರುವ ಪಂಡಿತಮಂಡಲಿಯವರಿಂದ ಹೊಳೆಯುತ್ತಿರುವ ಅರಮನೆಯ ಬಾಗಿಲಿಗೆಬಂದು ಸೇರಿದನು. ಆ ಅರಮನೆಯ ಮುಂಭಾಗದಲ್ಲಿ, ಟಗರನ್ನು ಹೆಣಗಿಸುವ ಕೋಳಿಗಳನ್ನು ಕಾಳಗಕ್ಕೆಬಿಡುವ ಆನೆ ಕುದುರೆಗಳ ಸಾಧನೆಯನ್ನು ತೋರಿಸುತ್ತಿರುವ ಬಗೆಬಗೆಯಾದ ವಿನೋದದಿಂದ ಜೂಜು, ಪಗಡೆ, ನೆತ್ತ ಮೊದಲಾದ ಆಟಗಳ್ನಾಡುತ್ತ ಸಂತೋಷದಿಂದ ನಲಿಯುತ್ತಿರುವ ರಾಜಪುತ್ರರ ಮೈಗೆ ಅನುಲೇಪನಗಳಾಗಿದ್ದು, ಜನಸಂದಣಿಯಲ್ಲಿ ಸುರಿದು ಕೆಳಕ್ಕೆ ಬಿದ್ದ ಪರಿಮಳದ ಪುಡಿಗಳನ್ನು ಆನೆಗಳು ಮೈಗೆರಚಿಕೊಳ್ಳುತ್ತಿದ್ದವು. ಅದರ ಮುಂಭಾಗದಲ್ಲಿ ಕ್ಷೀರಸಮುದ್ರವು ತನ್ನಲ್ಲಿ ವಾಸವಾಗಿದ್ದ ಶ್ರೀಕೃಷ್ಣನು ಇಲ್ಲಿಗೆ ಬಂದನೆಂದು ರತ್ನರಾಶಿಗಳ್ನೆತಂದು ನಿಂತಿರುವುದೋ ಎನ್ನುವಂತೆ ಹೊಳೆಯುತ್ತಿರುವ ಅರಮನೆಯನ್ನು ಕಂಡು ಭೀಮನು ರಥದಿಂದಿಳಿದು ಅಕ್ಕರೆಯಿಂದ ನಮಸ್ಕರಿಸಿ ಉಕ್ಕಿಬರುವ ರೋಮಾಂಚನಯುಕ್ತನಾಗಿ, ಮನ್ಮಥನನ್ನು ಹೆತ್ತ ಚೆಲುವಿಕೆಯೂ, ಶ್ರೀದೇವಿಯನ್ನು ಕೈವಿಡಿದ ಐಶ್ವರ್ಯವೂ, ಬ್ರಹ್ಮಾದಿ ದೇವತೆಗಳನ್ನು ಸಂರಕ್ಷಿಸುವ ಉದಾರಭಾವವೂ, ನನಗೆ ಸಾಲದೆಂದು ದೊರೆತನವನ್ನು ಪಡೆದಂತೆ, ಅತ್ಯಂತ ವಿಸ್ತಾರವಾಗಿ ಹೊಳೆಯುತ್ತಿರುವ ಬಣ್ಣಿಸಲಾಗದ ಶ್ರೀಕೃಷ್ಣನ ಮನೆಯನ್ನು ಕಂಡು ದೃಷ್ಟಿಸಿ ನೋಡುತ್ತ ಪಾರಿಜಾತ ಕುಸುಮಗಳಿಗೆರಗಿ ಝೇಂಕರಿಸುತ್ತ ಸಾಲುಗಟ್ಟಿರುವ ಮರಿದುಂಬಿಗಳ ಸಾಲುಗಳೇ ತೋರಣಗಳಾಗಿ, ಹೇಳಲಾಗದ ಸೌಭಾಗ್ಯದಿಂದೊಪ್ಪುತ್ತಿರುವ ಸೊಬಗನ್ನು

ಕಣ್ಣಾರೆ ಕಂಡು, ತನ್ನೊಡನೆ ಬಂದ ಸೇವಕರನ್ನು ಬಾಗಿಲಲ್ಲಿ ನಿಲ್ಲಿಸಿ, ಅರಮನೆಯನ್ನು ಪ್ರವೇಶಮಾಡಲು ದ್ವಾರಪಾಲಕರು ತಡೆಯದೆ ಅಂತರಾಂತರದಿಂದ ಆದಿಮೂರ್ತಿಗೆ ಬಿನ್ನಪಂಗೈಯಲೆಂದೋಡುತ್ತಿದ್ದರು.

ಅಷ್ಟುಹೊತ್ತಿಗೆ ಶ್ರೀಕೃಷ್ಣನು ರಮಣೀಯವಾದ ಸಾಲುದೀಪಗಳಿಂದ ಹೊಳೆದು ರತ್ನರಾಜಿಗಳಿಂದ ಕಣ್ಗೊಳಿಸುತ್ತಿರುವ ಭೋಜನಶಾಲೆಗೆ ಬಂದು ಇಷ್ಟಮಿತ್ರರೊಡನೆ ಕುಳಿತು, ತಾಯಿಯರು ಭಂಗಾರದ ತಟ್ಟೆಗಳಲ್ಲಿ ಸಜ್ಜು ಮಾಡಿದ ಮೃಷ್ಟಾನ್ನವನ್ನು ಭುಜಿಸುತ್ತ ಎಡಬಲಗಳಲ್ಲಿ ನಿಂತು ಚಮರವಿಕ್ಕುವ ಪಟ್ಟದರಸಿಯರ ಮೋಹವನ್ನು ಮನದಣಿಯೆ ಸವಿಯುತ್ತ ಕುಳಿತಿದ್ದನು. ಗೋಪ್ಯವಾಗಿ ದೇವತೆಗಳಿಗೆ ಅಮೃತವನ್ನು ಹಂಚಿದ ಈ ನಿತ್ಯತೃಪ್ತನು, ಸಮಸ್ತ ಯಾಗಗಳಲ್ಲಿಯೂ ಅಗ್ನಿಮುಖದಿಂದ ಹವಿರ್ಭಾಗವನ್ನು ಕೈಕೊಂಡು ಅದರ ಫಲವನ್ನು ಕೊಡುವನಾಗಿರುವನು. ಗೊತ್ತಾಗಿ ಮಾಡಬೇಕಾದ ರಾಜ ಭೋಜನದಲ್ಲಿ ಯಾವ ಕೊರತೆಯಿದ್ದರೂ, ಮನ್ನಿಸಿ ಪೊರೆಯಬೇಕೆಂದವರನ್ನು ಮನ್ನಿಸುತ್ತ, ಮನುಷ್ಯಲೀಲೆಗೆ ಸಾರ್ಥಕವೆನ್ನುವಂತೆ, ಚಿನ್ನದ ಹರಿವಾಣದಲ್ಲೂ, ಭಂಗಾರದ ಬಟ್ಟಲಿನಲ್ಲೂ ಬಡಿಸಿ ಸಿದ್ಧವಾದ ಅನ್ನ, ತೊವ್ವೆ, ಹುಳಿ, ಪಲ್ಯ, ಪಚ್ಚಡಿ, ಪಾಯಸ, ಭಕ್ಷ್ಯ, ಭೋಜ್ಯ, ಪರಡಿ, ಸಕ್ಕರೆ, ಸೀಕರಣೆ, ರಸಾಯನ, ಸಾರು, ಉಪ್ಪಿನಕಾಯಿ, ಮೊಸರು, ಹಾಲು ಮೊದಲಾದವುಗಳನ್ನು ತೃಪ್ತಿಯಿಂದ ತಂದಿಕ್ಕುವ ದೇವಕಿ ಯಶೋದೆಯರ ಕರುಣಾಮೃತಕ್ಕೆ ಸರಿಹೋಲಿಸಿ ಸವಿಯುತ್ತಿದ್ದನು.

ಆ ಕಾಲದಲ್ಲಿ ಅಟ್ಟಹಾಸದಿಂದ ಆದರಿಸುತ್ತಿರುವ ಅಷ್ಟಮಹಿಷಿಯರ ಮೋಹದ ಮಾತುಗಳನ್ನು ಲಾಲಿಸುತ್ತ ಶ್ರೀಕೃಷ್ಣನೊಡನೆ ಸರಸವಾಡುತ್ತಿದ್ದ ಸತ್ಯಭಾಮೆಯು ಶ್ರೀಕೃಷ್ಣನ ಬಳಿಗೈತರುವ ಭೀಮನನ್ನು ಕಂಡು ಭಾವನ್ಮೈದುನನು ಬಂದನೆಂದು ಎಚ್ಚರಿಕೆ ಹೇಳಲು ಬಾಗಿಲಲ್ಲಿದ್ದ ಸೈರೇಂಧ್ರಿಯು ಊಟದ ಸಮಯವಾದುದರಿಂದ ಹೋಗಕೂಡದೆಂದು ತಡೆದು ನಿಲ್ಲಿಸಿದಳು. ಊಟಮಾಡುವ ಕಾಲವೆ? ಯಾರಿಗೆ ಭೂತಗ್ರಸ್ತವಾಯಿತು? ಈ ಮನೆಯಲ್ಲಿ ಯಾರೂ ಇಲ್ಲವೆ? ಮಾತನಾಡದಿರುವುದಕ್ಕೆ ಕಾರಣವೇನು? ಸತ್ಯಭಾಮೆ ದೇವಕಿಯರು ಹತ್ತಿರದಲ್ಲಿಲ್ಲವೆ? ನನ್ನನ್ನು ಇಲ್ಲಿಯೆ ನಿಲ್ಲಿಸಲು ಕಾರಣವೇನು? ಏನು ಧಾನ್ಯಕ್ಕೆ ದುರ್ಭಿಕ್ಷ ಉಂಟಾಯಿತೆ? ಈ ಊರಲ್ಲಿ ಮಳೆಬೆಳೆಗಳಾಗುವುದಿಲ್ಲವೆ? ಇಷ್ಟೊಂದು ಜನರನ್ನು ಏಕೆ ಮದುವೆಯಾಗಬೇಕಾಗಿತ್ತು ಎಂಬದಾಗಿ ಭೀಮನು ಹಾಸ್ಯರೂಪದಿಂದ ಹಂಗಿಸುತ್ತ ಮಾತನಾಡಿದನು ಅದನ್ನು ಲಾಲಿಸಿ ಶ್ರೀಕೃಷ್ಣಮೂರ್ತಿಯು ರುಕ್ಮಿಣಿ ಸತ್ಯಭಾಮೆಯರ ಮುಖವನ್ನು ನೋಡುತ್ತ ಬೇಗಬೇಗನೆ ಉಂಡು, ಬಿಕ್ಕಿಂದು ತೇಗುತ್ತ, ಸಮನಗುತ್ತಿರುವುದನ್ನು ಕಂಡು ಭೀಮನು

ಅಯ್ಯಾ ! ನಾನು ಬಂದವನು ಒಬ್ಬನೇ ಹೊರತು ಮತ್ತೊಬ್ಬರಿಲ್ಲ. ನೀನು ಉಣ್ಣಬೇಕೆಂದು ಮುನಿದು ಕುಳಿತರೆ ಈ ಲೋಕವೆ ಒಂದು ತುತ್ತಿಗಾಗುವುದು, ಈ ನಿನ್ನ ಮನುಷ್ಯಲೀಲೆಯನ್ನು ಬಲ್ಲವರು ಯಾರು ? ನಮ್ಮನ್ನು ರಕ್ಷಿಸು ಎಂದು ಬೇಡಿಕೊಂಡನು. ಗೊಲ್ಲರ ಮನೆಯನ್ನು ಹೊಕ್ಕು ಎಲ್ಲರನ್ನೂ ವಂಚಿಸಿ ಒಳ್ಳೆಯ ಬೆಣ್ಣೆ ಗಳ್ಳಿಯ ಮೊಸರು, ಬೆಲ್ಲದಂತಿರುವ ಹಾಲುಗಳನ್ನು ಕದ್ದು ತಿನ್ನುತ್ತಿದ್ದವನಿಗೆ ಮೃಷ್ಟಾನ್ನವು ಸಿಕ್ಕಿದರೆ ಎಡಬಲದಲ್ಲಿರುವವರನ್ನು ಕಣ್ಣೆತ್ತಿ ನೋಡುವನೆ ? ದನವನ್ನು ಕಾಯುತ್ತ ಕಾಡಿನಲ್ಲಿ ಅಲೆಯುತ್ತಿದ್ದವನಿಗೆ ದೊರೆತ ನವಾದರೆ ಭೂಮಿಯನ್ನು ನೋಡಿಕೊಂಡು ನಡೆಯುತ್ತಾನೆಯೆ ? ಸೋದರಮಾವನನ್ನು ಕೊಂದವನು ನೆಂಟರನ್ನು ಆದರಿಸುತ್ತಾನೆಯೆ ? ಹಾಲುಕಡಿಸಿದವಳ ಹರಣವನ್ನು ಹೀರಿದವನು ಪುರುಷೋತ್ತಮನೆನಿಸುವನೆ ! ಅಯ್ಯೊ ! ನಾವು ಅರಿಯದೆ ಮೂಢರಾದೆವು ! ದೇವತ್ವವನ್ನು ಬಿಟ್ಟು ಮನುಷ್ಯನಾಗಿ ಹುಟ್ಟಿದವನಿಗೆ ಮರ್ಯಾದೆಯುಂಟೆ ? ನಾನು ಈತನನ್ನು ನೋಡುವುದು ಯೋಗ್ಯವಲ್ಲೆಂದು ಕೋಪದಿಂದ ಹಿಂದಿರುಗುತ್ತಿರುವ ಭೀಮನನ್ನು ಆಗತಾನೆ ಕಂಡವನ ಹಾಗೆ, ಓಹೋ ವೃಕೋದರನು ಯಾವಾಗ ಬಂದನು ? ಆತನನ್ನು ತಡೆದವರು ಯಾರು ? ಏತರಿಂದ ಮುನಿಸುಕೊಂಡನು ? ಈಕಡೆಗೆ ಬರಹೇಳು ? ಬೇಗಕರೆ ! ಎಂದು ಹೇಳುತ್ತಿರುವ ಶ್ರೀಕೃಷ್ಣನ ಮಾತುಗಳಿಗೆ ಭೀಮನು ಸ್ವಾಮಿ ! ನಿಮ್ಮಲ್ಲಿ ನನಗೆ ಬಹಳವಾದ ಸಲಿಗೆಯುಂಟಾದರೂ, ಇಲ್ಲಿ ನಮ್ಮನ್ನು ಪುರಸ್ಕರಿಸುವವರೇ ಇಲ್ಲ ಎಂದು ಹೇಳಲು, ಅಯ್ಯಾ ! ನಾವೇ ನಿನ್ನನ್ನು ಭಾವಮೈದುನನೆಂಬ ಬಿಂಕದಿಂದ ಬಾಗಿಲಲ್ಲಿ ತಡೆಸಿದೆವು, ಇತ್ತಬಾ ! ಸಿಟ್ಟುಮಾಡಬೇಡ ! ಎಂದು ಹೇಳಿ ತನ್ನಪಕ್ಕದಲ್ಲಿ ಕುಳ್ಳಿರಿಸಿಕೊಂಡು, ಬಗೆಬಗೆಯಾದ ಷಡ್ರಸಾನ್ನವನ್ನು ಭಕ್ಷ್ಯಭೋಜ್ಯಗಳೊಡನೆ ತೃಪ್ತಿಯುಂಟಾಗುವಂತೆ ಭೀಮಸೇನನಿಗೆ ಉಣಬಡಿಸಿ, ಅನಂತರದಲ್ಲಿ ಅತಿಶಯವಾದ ಗಂಧಪುಷ್ಪ ತಾಂಬೂಲಗಳನ್ನು ಕೊಟ್ಟು ಆದರಸಿ, ಅಕ್ಕರೆಯಿಂದ ಕ್ಷೇಮಸಮಾಚಾರವನ್ನು ಕೇಳುತ್ತ, ದೇವಪುರದ ಲಕ್ಷ್ಮೀರಮಣನು, ಕುಂತೀಕುಮಾರಕನಾದ ಭೀಮಸೇನನನ್ನು ಸಂತೈಸುತ್ತಿದ್ದನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರಿ ನಿಲಯ ಕವಿ ನಾಗೇಶಮರ್ಮ ಪ್ರಣೀತಜೈಮಿನಿಭಾರತ ಕಥಾಸಂಗ್ರಹದಲ್ಲಿ ಆರನೆಯಸಂಧಿ ಸಂಪೂರ್ಣಂ.

# ಏಳನೆಯ ಸಂಧಿ.

## ಶ್ರೀಕೃಷ್ಣನು ಪರಿವಾರಸಹಿತ ಹಸ್ತಿನಾವತಿಗೆ ಬಿಜಯಂಗೈದುದು.

ಎಲೈ ಜನಮೇಜಯರಾಯನೇ ! ಕೇಳು. ಶ್ರೀಕೃಷ್ಣಮೂರ್ತಿಯು ಹೀಗೆ ಭೀಮಸೇನನನ್ನು ಸಂತೈಸಿದ ಬಳಿಕ ತನ್ನ ಮಂತ್ರಿಯಾದ ಕೃತವರ್ಮನನ್ನು ಕರೆದು ಅಯ್ಯಾ ! ಹಸ್ತಿನಾಪುರಕ್ಕೆ ಹೊರಡುವುದಕ್ಕೆ ನಮ್ಮ ನಗರದ ಜನರೆಲ್ಲರೂ ಸಿದ್ಧರಾಗಿರಲಿ ! ಸೇನಾಪರಿವಾರಗಳಿಗೆ ಅಜ್ಞೆಮಾಡು, ಹೊರವಳಯದಲ್ಲಿ ಗುಡಾರವನ್ನು ಹೊಡೆಸು, ಊರಿನಲ್ಲಿ ಡಂಗುರವನ್ನು ಹೊಯ್ಸು, ಶೀಘ್ರವಾಗಿ ಸಕಲವನ್ನು ಸಿದ್ಧಮಾಡು ಎಂದು ಅಜ್ಞೆಮಾಡಿದನು. ಆಬಳಿಕ ಕೃತವರ್ಮನ ಅಪ್ಪಣೆಯಂತೆ ನಗರರಕ್ಷಣೆಗಾಗಿ ನಿಂತ ಬಲರಾಮ ವಸುದೇವರು ಹೊರತು ಉಳಿದ ಪ್ರದ್ಯುಮ್ನ, ಗದ, ಸಾಂಬ, ಅನಿರುದ್ಧ, ಶಠ, ನಿಶಠ, ಅಕ್ರೂರ, ಸಾತ್ಯಕಿ ಮೊದಲಾದ ಯಾದವರೂ, ದೇವಿಕಿಸಮೇತ ಸಕಲ ನಾರೀಸಮೂಹವೂ ಹೊರಟು ನಿಂತಿರಲು, ಜಯಬೇರಿಗಳು ಮೊಳಗಿದವು, ಸಕಲರೂ ತಂತಮ್ಮ ಬಂಧು, ಮಿತ್ರ, ಪುತ್ರ, ಕಳತ್ರ, ಪುರೋಹಿತಮಂಡಲಿಯೊಡನೆ ಹೊರಟರು. ಮನೋಹರವಾದಲಂಕಾರದೊಡನೆ ಯಶೋದೆ ಮತ್ತು ದೇವಕಿದೇವಿಯರ ಪಾಲಕಿಯು ಮುಂದೆ ಹೋಗುತ್ತಿರಲು, ತಂತಮ್ಮ ದಾದಿಯರಿಂದ ಸೇವ್ಯಮಾದ ರುಕ್ಮಿಣಿ ಸತ್ಯಭಾಮೆಯರ ಪಾಲಕಿಯು ಅಟ್ಟಹಾಸದಿಂದ ಮುಂದೆ ನಡೆದು ಬರುತ್ತಿದ್ದಿತು.

ಹೀಗೆ ಸರ್ವಸನ್ನಾಹದಿಂದ ಚತುರಂಗಸೇನೆಯೂ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ಜಾತಿಯ ಜನರೂ ಆನೆ, ಕುದುರೆ, ಒಂಟೆ, ಬಂಡಿ, ಭಾರ, ಹೇರುಗಳಮೇಲೆ ಧನಧಾನ್ಯಗಳೂ, ಆಕಾಶವನ್ನೂ ಭೂಮಿಯನ್ನೂ ಒಂದಾಗಿ ಮಾಡುವಂತೆ ಗೋಮುಹಿಷಿ ರಥಾರಾಜಿಗಳೂ ನಡೆದುಬಂದವು. ಅವರಲ್ಲಿ ನಟ, ವಿಟ, ಗಾಯಕ, ವಂದಿಮಾಗಧರ ಗುಂಪಿನಲ್ಲಿ ಬೆರೆದು ಪರಿಪರಿಯಾದ ಮೋಹದ ಮಾತುಗಳನ್ನಾಡಿ, ವ್ಯಂಗ, ಸರಸೋಕ್ತಿ, ಹುಸಿಲಜ್ಜೆ, ಬಿಂಕ ಮೊದಲಾದವುಗಳನ್ನು ತೋರಿಸುತ್ತಿರುವ ವಾರಾಂಗನೆಯರ ಸಮೂಹವೂ ಮೂರು ಲೋಕದವರನ್ನೂ ಮರುಳುಮಾಡುವಂತೆ ಬರುತ್ತಿದ್ದಿತು. ಹೀಗೆ ಬರುತ್ತಿರುವ ಅಸಂಖ್ಯಾತವಾದ ಸೇನಾಜನರ ಸಂದಣಿಯೊಡನೆ ಹೊರಟು, ಬಲರಾಮ ವಸುದೇವರಿಗೆ ನಮಸ್ಕಾರಮಾಡಿ ದ್ವಾರಕಿಯ ರಕ್ಷಣೆಗಾಗಿ ಅವರನ್ನು ಅಲ್ಲಿಯೇ ಬಿಟ್ಟು ತಾನು ಭೀಮನೊಡನೆ ಹೊರಟುಬರುತ್ತ ಮಾರ್ಗಮಧ್ಯದಲ್ಲಿ ಸಿಕ್ಕಿದ ಒಂದಾನೊಂದು ಸರೋವರದ ಬಳಿಯಲ್ಲಿ ಶ್ರೀಕೃಷ್ಣನು ಬಿಡಾರವನ್ನು ಬಿಡಿಸಿ

ನಡೆದು ದಣಿವಿರುವ ದಂಡಿನವರನ್ನು ಸುದಾರಿಸಿಕೊಳ್ಳುವಂತೆ ಅಪ್ಪಣೆಮಾಡಿ, ತನ್ನ ಪ್ರೇಯಸೀಮಣಿಯಾದ ರುಕ್ಮಿಣಿಗೆ ಆ ಸ್ಥಳದ ಸೊಬಗನ್ನು ತೋರಿಸಿ ವಿನೋದವಾಗಿ ಮಾತನಾಡುತ್ತ, ರುಕ್ಮಿಣಿಯ ಸರಸಸಂಭಾಷಣೆಗೆ ಸದುತ್ತರವನ್ನು ಕೊಟ್ಟು, ಭೀಮನೊಡನೆ ಸರಸವಾಡುತ್ತ ಆ ರಾತ್ರಿಯನ್ನು ಸುಖವಾಗಿ ಕಳೆದು ಮರುದಿನ ಸೂರ್ಯೋದಯಕಾಲಕ್ಕೆ ಅಲ್ಲಿಂದ ಹೊರಟು ಚತುರಂಗಬಲ ಸಮೇತನಾಗಿ ಬರುವಂತೆ ಭೀಮನಿಗೆ ನೇಮಿಸಿ ಶ್ರೀಕೃಷ್ಣನು ತಾನು ಏಕಾಂಗಿಯಾಗಿಹಸ್ತಿನಾಪುರದ ದ್ವಾರದೇಶವನ್ನು ಸೇರಿದನು, ಧರ್ಮರಾಯನು ಆ ವಾರ್ತೆಯನ್ನು ಕೇಳಿ ತನ್ನ ಪುರಜನ ಪರಿವಾರದೊಡಗೂಡಿ, ಶ್ರೀಕೃಷ್ಣನ ಸಂದರ್ಶನಕ್ಕಾಗಿ ನಡೆತಂದನು.

ಆಗ ಹಸ್ತಿನಾಪುರದ ಜನರು ಶ್ರೀಕೃಷ್ಣಮೂರ್ತಿಯನ್ನು ಕಂಡು, ವೇದ ವೇದಾಂತ ವಾಕ್ಯಗಳಿಂದ ಸ್ತುತಿಸಲಾರಂಭಿಸಿ, ಎಲೈ ಸಚ್ಚಿದಾನಂದ ಮೂರ್ತಿಯೇ ! ವೇದಾಗಮ ಪುರಾಣಗಳ ಮಾರ್ಗವನ್ನು ಬಿಟ್ಟು ಕರ್ಮಭ್ರಷ್ಟರಾಗಿ ಬ್ರಹ್ಮಹತ್ಯಾದಿ ಪಾಪಗಳನ್ನು ಮಾಡಿದ ಪರಮನೀಚರಿಗೂ ಕೂಡ ನಿನ್ನ ನಾಮಸ್ಮರಣೆಯು ಮುಕ್ತಿದಾಯಕವಾಗುವುದು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಗಳೆಂಬ ನಾಲ್ಕು ಆಶ್ರಮಗಳಲ್ಲಿ ಮಾಡಿದ ದಾನ, ಧರ್ಮ, ಪರೋಪಕಾರಗಳಿಂದಲೂ, ಯಜ್ಞ, ಯಾಗ, ಜಪ, ತಪ, ಸಮಾಧಿಗಳಿಂದಲೂ, ಉಂಟಾಗುವ ಪುಣ್ಯವು ನಿನ್ನ ಸ್ಮರಣೆಯಿಂದಲೆ ಉಂಟಾಗುತ್ತಿರುವಲ್ಲಿ ನಾವು ನಿನ್ನನ್ನು ಹೊಗಳಬಲ್ಲವೆ ? ಸ್ವಾಮಿ ! ನಮ್ಮನ್ನು ರಕ್ಷಿಸು ಎಂದರು.

ಆಬಳಿಕ ಧರ್ಮರಾಯನು ಪರಿವಾರಯುಕ್ತನಾಗಿ ಶ್ರೀಹರಿಗೆ ನಮಿಸಿ ಕಪ್ಪಕಾಣಿಕೆಗಳನ್ನು ಕೊಟ್ಟು, ಪಾದಮೂಲದಲ್ಲಿ ಮುಖಪದ್ಮವನ್ನಿಕ್ಕಿ ನಮಸ್ಕಾರಮಾಡಲು, ಶ್ರೀಕೃಷ್ಣನು ಧರ್ಮಪುತ್ರನನ್ನು ಮಣಿದೆತ್ತಿ ತಕ್ಕೈಸಿ, ವೇಣು, ವೀಣಾ, ಮೃದಂಗ, ತಾಳ ಮೇಳಗಳ ವಿನೋದವನ್ನು ತೋರಿಸುತ್ತಿರುವ ವಂದಿ ಮಾಗಧ ನಟ ವಿಟ ಗಾಯಕರೊಡನೆ ಹಸ್ತಿನಾಪುರವನ್ನು ಪ್ರವೇಶಮಾಡಿದನು. ಆ ಪುರದ ಬೀದಿಗಳಲ್ಲಿ ಸಾಲಾಗಿ ನಿಂತು ಶ್ರೀ ಕೃಷ್ಣದರ್ಶನವನ್ನು ಮಾಡುತ್ತಿದ್ದ ಪುರಂಧ್ರಿಯರು ತಂತಮ್ಮ ಸೋಮ್ಮುಡಿಗಳು ನಿರ್ಮಲಾಂತಃಕರಣನಾದ ಶ್ರೀಹರಿಯ ಪಾದಾರವಿಂದದ ಮಕರಂದವನ್ನು ಸವಿಯುವ ಮರಿದುಂಬಿಗಳ ಬಳಗದಂತಿರಲು ನಲಿದು ನಮಸ್ಕರಿಸಿ, ಧನ್ಯನಾದರು.

ಬಳಿಕ ಅನಂತರೂಪಿಯಾದ ಶ್ರೀಹರಿಯು ಅರಮನೆಯನ್ನು ಹೊಕ್ಕು ಧೃತರಾಷ್ಟ್ರ ಮೊದಲಾದ ಹಿರಿಯರಿಗೆ ನಮಸ್ಕಾರಮಾಡಿ ನಕುಲಾದಿಗಳಾದ ಕಿರಿಯರನ್ನು ಸಂತೈಸಿ ಯೌವನಾಶ್ವಾದಿಗಳನ್ನು ಸನ್ಮಾನಿಸಿ, ದ್ರೌಪದಿ ಮೊದ

ಲಾದವರನ್ನು ಅಕ್ಕರೆಯಿಂದ ಮಾತನಾಡಿಸಿ ಅವರವರ ಕ್ಷೇಮಲಾಭಗಳನ್ನು ಕೇಳಿ, ಸುಖದಿಂದ ಸಿಂಹಾಸನದಲ್ಲಿ ಕುಳಿತುಕೊಂಡನು. ಆಗ ಧರ್ಮರಾಯನು ಶ್ರೀಕೃಷ್ಣನನ್ನು ನೋಡಿ, ಸ್ವಾಮೀ ! ತಮ್ಮ ಬಂಧುವರ್ಗದವರಾಗಿ, ನಮ್ಮ ಹಿರಿಯರಾದ ದೇವಕಿ ಯಶೋದೆಯರಿಗೆ ಸುಖವೇ ? ಮನ್ಮಥ ಬಲರಾಮ, ಕೃತವರ್ಮ ಮೊದಲಾದ ಯದುವೀರರು ಪದುಳಿಗರೆ ? ಭೀಮನು ನಿಮ್ಮ ಸನ್ನಿಧಿಗೆ ಬರಲಿಲ್ಲವೆ ? ಪರಿವಾರದವರಿಲ್ಲದೆ ಏಕಾಂಗಿಯಾಗಿ ನೀವು ಮಾತ್ರ ಹೊರಟು ಬರಲು ಕಾರಣವೇನು ? ಎಂದು ಕೇಳಿದನು. ಅಯ್ಯಾ ಸಕಲ ಯಾದವರನ್ನು ಸಂಗಡ ಕರೆದುಕೊಂಡು ಬರುತ್ತ ಮಧ್ಯಮಾರ್ಗದಲ್ಲಿ ಗಂಗಾತೀರದ ಸರಸ್ತಟದಲ್ಲಿ ವಿನೋದವಾಗಿ ಸುದಾರಿಸಿಕೊಂಡು ಬರುವಂತೆ ಬಿಡಾರವನ್ನು ಬಿಡಿಸಿಬಂದೆನು. ಆದಕಾರಣ ನಮ್ಮ ಸೇನೆಯು ಆ ಸ್ಥಲದಲ್ಲಿದೆ ನೋಡಿಕೊಂಡುಬರೋಣ? ಬಾ ! ಎಂದು ಕರೆದನು. ಧರ್ಮರಾಯನು ಸಂತೋಷದಿಂದ ನಲಿಯುತ್ತ ಅರ್ಜುನನನ್ನು ಕರೆದು, ಅಯ್ಯಾ ! ಶ್ರೀಹರಿಯ ಕೃಪೆಯಿಂದ ಇಂದು ನಾವು ಧನ್ಯರಾದೆವು, ಪುರವನ್ನು ಶೃಂಗಾರಮಾಡಿಸು, ಬಾಲೆಯರು ಅಲಂಕರಿಸಿಕೊಂಡು ಅಂದಣಗಳನ್ನೇರಿ, ಹೊರಡಲಿ ! ಮಂಗಳವಾದ್ಯಗಳು ಮೊಳಗುತ್ತಿರಲಿ ! ಊರಹೊರಗೂ ಒಳಗೂ ಸಾರಯೋಗ್ಯವಾದ ಅಲಂಕಾರವು ಮೆರೆಯಲಿ ! ನಿನ್ನ ಬುದ್ಧಿಚಾತುರ್ಯವನ್ನು ಉಪಯೋಗಿಸು ಎಂದು ಗೊತ್ತುಮಾಡಿದನು. ಅಣ್ಣನಾಜ್ಞೆಯಂತೆ ಸಕಲ ಸಾಮಗ್ರಿಗಳೂ ಒದಗಿಬರಲು, ಅರ್ಜುನನು ಅಟ್ಟಹಾಸದಿಂದ ನಗರವನ್ನು ಸಿಂಗರಿಸಿದನು. ಬಳಿಕ ಧರ್ಮರಾಯನು ಯಜ್ಞಾಶ್ವವನ್ನು ಮುಂದೆ ಬಿಡಿಸಿಕೊಂಡು ಎಡಭಾಗದಲ್ಲಿ ಅರ್ಜುನನೂ, ಬಲಭಾಗದಲ್ಲಿ ಶ್ರೀಕೃಷ್ಣನೂ, ಮುಂದೆ ಮಹಾಸೇನೆಯೂ, ಹಿಂದೆ ಪರಿವಾರದಜನರೂ ಬರುತ್ತಿರಲು ಸ್ವಚ್ಛವಾದ ಮಲ್ಲಿಗೆಯ ಹೂವಿನ ರಾಶಿಯಂತೆ ಹೊಳೆಯುತ್ತಿರುವ ಬಿಳಿಯಮರಳುಳ್ಳ ದೇವಗಂಗೆಯ ತಡಿಗೆಬಂದು ಯಾದವ ಮುಖ್ಯರನ್ನೂ ದೇವಕಿ ಯಶೋದೆಯರನ್ನೂ ನಮಸ್ಕಾರಪೂರ್ವಕವಾಗಿ ಕಾಣಿಸಿಕೊಂಡು ಕುಶಲವಾರ್ತೆಯನ್ನು ಕೇಳಿ ಸನ್ಮಾನಿಸಿದಬಳಿಕ ಯೌವನಾಶ್ವನ ಧರ್ಮಪತ್ನಿಯಾದ ಪ್ರಭಾವತಿಯು ರುಕ್ಮಿಣಿ ಮೊದಲಾದವರಿಗೆ ನಮಸ್ಕರಿಸಿ, ಕೃಷ್ಣನ ಮಾತೆಯರನ್ನು ಕಂಡು, ಉಲ್ಲಾಸದಿಂದ ಅವರ ಮೆಲ್ಲಡಿಗಳಿಗೆ ಮಣಿದೆದ್ದಳು. ನಂತರ ಭೀಮಸೇನನು ಮಹಾವಿನಯದಿಂದ ಮಣಿದು ನಮಸ್ಕರಿಸಲು, ಧರ್ಮರಾಯನು ಅಕ್ಕರೆಯಿಂದ ಅವನನ್ನು ಬಿಗಿಯಪ್ಪಿ ಮನ್ನಿಸಿದನು.

ಇತ್ತ ದ್ರೌಪದಿಯು ಸತ್ಯಭಾಮೆಯನ್ನು ಕುರಿತು ಅಮ್ಮಾ! ಹದಿನಾರು ಸಾವಿರ ರಾಣಿಯರಲ್ಲಿ ಯಾರೂ ಒಲಿಸಲಾರದೆಹೋದ ಈ ಕೃಷ್ಣನನ್ನು ನೀನು ಒಲಿಸಿಕೊಂಡಿರುವೆಯಲ್ಲ, ನಿನ್ನ ಬೆಡಗಿಗೆ ಇದು ಸಾರ್ಥಕವಾಯಿತು ಎಂದಳು.

ಅದಕ್ಕೆ ಸತ್ಯಭಾಮೆ ಅಮ್ಮಾ! ಐದುಜನ ಗಂಡಂದಿರನ್ನು ಮದುವೆಯಾಗಿ ಅವರನ್ನು ಮರುಳುಮಾಡುತ್ತಿರುವ ಮಹಾ ಪತಿವ್ರತೆಯಾದ ನಿನ್ನಲ್ಲಿ ನಾನು ಮಾತನಾಡುವುದಕ್ಕೆ ಭಯಪಡುತ್ತೇನೆ ಎಂದು ಹೇಳಿದಳು. ಅಮ್ಮಾ ಕರುಣಾನಿಧಿಯಾದ ಈ ಕೃಷ್ಣಮೂರ್ತಿಯನ್ನು ನಾನು ಒಲಿಸಿಕೊಳ್ಳದಿದ್ದರೆ ನನ್ನ ಮಾನವನ್ನು ಕಾಯುತ್ತಿದ್ದವರು ಯಾರು? ಬಹುಮಂದಿ ಶೂರರಿದ್ದರೂ ಕೌರವನ ಸಭೆಯಲ್ಲಿ ನನ್ನ ಮಾನಕ್ಕೆ ಬಂದ ಭಯವನ್ನು ಸೀಗಿದರೆ? ಪಾರಿಜಾತದ ನೋಂಪಿಯನ್ನು ಮಾಡಲೆಂದು ಗಂಡನನ್ನೆ ನಾರದನಿಗೆ ದಾನವಾಗಿ ಕೊಟ್ಟವಳಾದ ನಿನಗೆ ಇನ್ನು ಇದಿರುಂಟೆ? ಈ ರುಕ್ಮಿಣಿಪತಿಯು ಅನಾಥರಿಗೆ ನಾಥನಲ್ಲವೆ? ಎಂದು ಸರಸವಾಡುತ್ತಿರುವಲ್ಲಿ ಸಕಲ ಸ್ತ್ರೀಕದಂಬವೂ ಯಜ್ಞಾಶ್ವವನ್ನು ಕಂಡು ಆಶ್ಚರ್ಯಯುಕ್ತರಾಗಿ ಭಕ್ತಿಯಿಂದ ಪೂಜಿಸುತ್ತಿದ್ದರು. ಅಷ್ಟರಲ್ಲಿಯೇ ಸಾಲ್ವನ ತಮ್ಮನಾದ ಅನುಸಾಲ್ವನೆಂಬವನು ಕೃಷ್ಣನಮೇಲಿದ್ದ ಹಗೆತನವನ್ನು ತೀರಿಸಿಕೊಳ್ಳಬೇಕೆಂದು ಯೋಚಿಸಿ, ಮೋಸದಿಂದ ಆ ಕುದುರೆಯನ್ನು ತೆಗೆದುಕೊಂಡು ಹೋಗಿ ಗೃಧ್ರವ್ಯೂಹದಂತೆ ನಿಲ್ಲಿಸಿರುವ ತನ್ನ ಸೇನೆಯ ಮಧ್ಯದಲ್ಲಿಟ್ಟು, ತಾನು ಮುಂಭಾಗದಲ್ಲಿ ನಿಂತು ಧನುರ್ಧಾರಿಯಾಗಿ ತನ್ನ ಮಂತ್ರಿಯನ್ನು ನೋಡಿ ಇಂತೆಂದನು:—ನಮ್ಮಣ್ಣನನ್ನು ಕೊಂದು, ಶೃಂಗಾರಮಯವಾಗಿದ್ದ ಈ ನಮ್ಮ ಸೌಭರಿ ನಗರವನ್ನು ಸುಟ್ಟ ಈ ಗೊಲ್ಲರ ನಲ್ಲನನ್ನು ಹಿಡಿದು ಅವನ ಎದೆಯಲ್ಲಿ ಬಿರಿಹೊಯ್ಯುವ ಸುಣ್ಣವನ್ನು ಸುರಿದು, ಯಾದವ ಪಾಂಡವರ ಬಿಂಕವನ್ನು ಮುರಿದು ಹಗೆಯ ಬಗೆಯನ್ನು ಸೀಳಿ ನಿಸ್ಸಾರವಾಗಿ ಮಾಡುವೆನು. ನನ್ನೆದುರಿಗೆ ನಿಂತು ಬದುಕುವರಾರು? ಸೇನೆಯು ಯುದ್ಧ ಸನ್ನದ್ಧವಾಗಿರಲಿ! ಎಚ್ಚರಿಕೆ ಎಂದು ಹೇಳಿದನು. ಅದನ್ನು ಕೇಳಿ ಆತನು ಈಗ ಬಂದಿರುವ ಗೊಲ್ಲನು ಯುದ್ಧಮಾಡಬಲ್ಲನೇ! ನಿನ್ನ ಮುಂದೆ ನಿಲ್ಲುವ ಶಕ್ತಿ ಅವನಿಗುಂಟೆ? ನಾನೇ ಆತನನ್ನು ಜಯಿಸುವೆನೆಂದು ಬೇಡಿಕೊಳ್ಳಲು, ಅನುಸಾಲ್ವನು ಅಯ್ಯಾ! ಕೃಷ್ಣನೊಡನೆ ಕಾದಿ ಗೆಲ್ಲುವ ವೀರನು ಯಾರಾದರೂ ಸರಿಯೇ! ಆತನಿಗೆ ಹಿಂದೆ ಮಾಡಿದ ದ್ರೋಹವನ್ನು, ಮುಂದೆ ಮಾಡುವ ಅಪರಾಧವನ್ನೂ ಕ್ಷಮಿಸಿ, ಸಹಸ್ರಸಂಖ್ಯೆಯ ಊರು, ಕೇರಿ, ಆನೆ, ಕುದುರೆ ರಥ, ಪದಾತಿಗಳನ್ನು ಬಳುವಳಿಯಾಗಿ ಕೊಡುವೆನೆಂದು ಶಪಥಮಾಡಿದನು. ಆತನ ಮಂತ್ರಿಯಾದ ಸುಧಾರನು ರಾಜನ ಪ್ರತಿಜ್ಞೆಯನ್ನು ಕೇಳಿ ಸೇನಾಮಂಡಲದಲ್ಲೆಲ್ಲ ಸಾರಿಸಿದನು, ವೀರಭಟರೆಲ್ಲರೂ ವೀರಾವೇಶದಿಂದ ಮೊರೆದು ಗರ್ಜಿಸಿದರು ಭೇರಿ, ಪಟಹ, ಡಿಂಡಿಮಾದಿಗಳು ಮೊಳಗಿದವು, ಸಮುದ್ರದಂತೆ ಅಪಾರವಾದ ಸೇನಾಮಂಡಲದಲ್ಲಿ ಗಂಭೀರಧ್ವನಿಯು ಮೂಡಿತು. ಅದನ್ನು ಕೇಳಿ, ಕೃಷ್ಣನಸಂಗಡ ಬಂದಿದ್ದ ಸ್ತ್ರೀಸಮೂಹವು ಬೆದರಿ ಚೆಲ್ಲಾದರು,

ಮುನಿಗಳು ಮಹದ್ಭಯದಿಂದ ನಡುಗಿದರು, ಧರ್ಮರಾಯನು ಇದೇನು ಕೌತುಕ ವೆಂದು ಕಳವಳಿಸುತ್ತಿದ್ದನು. ಹೀಗಿರುವಲ್ಲಿ ಹರಿಯು ಶಿರವನಲ್ಲಾಡಿಸುತ್ತ ಆಹಾ! ಹೆದರಬೇಡಿ, ಹಿಂದೆ ನಾವು ಯುದ್ಧದಲ್ಲಿ ಕೊಂದ ಸಾಲ್ವನ ತಮ್ಮನಾದ ಅನುಸಾಲ್ವನೆಂಬವನು ತನ್ನ ಅಣ್ಣನನ್ನು ಕೊಂದ ಕೋಪದಿಂದ ಬಲವಾದ ಸೈನ್ಯವನ್ನು ಕಟ್ಟಿಕೊಂಡು ನಮ್ಮೊಡನೆ ಯುದ್ಧಕ್ಕೆ ಬಂದಿರುವನು. ಈ ಖೂಳನಿಗೆ ಕೊಂಚವೂ ಭಯವಿಲ್ಲವೆಂದು ತೋರುತ್ತದೆ. ನಮ್ಮ ಸೈನ್ಯದ ವೀರರಲ್ಲಿ ಇವನೊಡನೆ ಕಾದಾಡಿ ಕುದುರೆಯನ್ನು ತಂದುಕೊಡುವರಿಗೆ ತಾಂಬೂ ಲವನ್ನು ಕೊಟ್ಟು ಕಳುಹಿಸು ಎಂದು ಹೇಳಿದನು. ಶ್ರೀಕೃಷ್ಣನ ಮಾತು ಗಳನ್ನು ಕೇಳಿ ಶೂರರೆಲ್ಲರೂ ಸುಮ್ಮನಿದ್ದರು. ಆಗ ಯದುವೀರನಾದ ಪ್ರದ್ಯು ಮ್ನನು ಶ್ರೀಕೃಷ್ಣನಬಳಿಗೆ ಬಂದು ಸ್ವಾಮಿಾ! ಈ ಹಗೆಯನ್ನು ಕೊಂದು ಕುದುರೆಯನ್ನು ತಂದೊಪ್ಪಿಸದಿದ್ದರೆ ನಾನು ವೃಷಳೀಪತಿಯಾದವನ ಪಾಪಕ್ಕೆ ಗುರಿಯಾಗುವೆನೆಂದು ಶಪಥ ಮಾಡಿ ತಾಂಬೂಲವನ್ನು ತೆಗೆದುಕೊಂಡು ಹೊರಟನು

ಬಳಿಕ ವೃಷಕೇತುವು ಯದುಕುಲತಿಲಕನಾದ ಶ್ರೀಹರಿಯ ಪಾದಗಳಿಗೆ ನಮಸ್ಕಾರಮಾಡಿ ಸ್ವಾಮಿಾ ! ಈ ಅನುಸಾಲ್ವನನ್ನು ಯುದ್ಧದಲ್ಲಿ ಹಿಡಿದು ಶರಪಾಶದಲ್ಲಿ ಬಿಗಿದು ನಿಮ್ಮಡಿಗೆ ತಂದೊಪ್ಪಿಸದಿದ್ದರೆ ನಾನು ಬ್ರಹ್ಮಘಾತಕಿಯ ಗತಿಯನ್ನು ಹೊಂದುವೆನೆಂದು ಶಪಥಮಾಡಿ, ಸತ್ಕೃತನಾಗಿ ಹೊರಟನು. ಯೋಗಿಗಳನ್ನು ಗೆದ್ದ ಮಿಾನಧ್ವಜವನ್ನು ಎತ್ತಿಗಟ್ಟಿ, ಮಿಂಚಿಗಿಂತಲೂ ವೇಗ ವಾಗಿ ಓಡುವ ಕುದುರೆಗಳನ್ನು ಹೂಡಿ, ರತ್ನಕಾಂತಿಯಿಂದ ಸೂರ್ಯ ಬಿಂಬವನ್ನು ತಿರಸ್ಕರಿಸುತ್ತಿರುವ ತೇರನ್ನು ತರಿಸಿ, ಯುದ್ಧಸನ್ನಾಹಕ್ಕೆ ಸಿದ್ಧ ವಾಗಿರುವ ಘೋರವಾದ ರಥವನ್ನು ನಿಲ್ಲಿಸಿ, ಸಾರಥಿಯು ಹಸಾದವೆಂದು ಬಿನ್ನೈಸಲು ಮನ್ಮಥನು ತನ್ನ ಧನುಸ್ಸನ್ನು ತೆಗೆದುಕೊಂಡು ರಥವನ್ನೇರಿ ಯುದ್ಧಕ್ಕೆ ಹೊರಟನು. ಅದನ್ನು ಕಂಡು ಅನುಸಾಲ್ವನು ಇವನಾರು ? ಇವನ ರಥವಲ್ಲಿ ಮಿಾನಧ್ವಜವಿದೆ ? ಮನ್ಮಥನೇ ಆಗಿರಬೇಕು ಹರಿಯಲ್ಲ! ಆಗಲಿ? ಇವನ ಶೌರ್ಯವನ್ನು ಮುರಿಯುವೆನೆಂದು ಹಿಗ್ಗುತ್ತಿರಲು ಮನ್ಮಥನು ತನ್ನ ಪಂಚಬಾಣಗಳನ್ನು ಬಿರುಸಾಗಿ ಹೂಡಿ ಹೊಡೆದನು. ಅದನ್ನು ನೋಡಿ ಅನುಸಾಲ್ವನು ಅಯ್ಯಾ ! ನಾವು ಜಿತೇಂದ್ರಿಯರು, ಕಬ್ಬಿನ ಬಿಲ್ಲು, ಹೂವಿನ ಬಾಣ, ದುಂಬಿಯ ಹೆದೆ, ಐದೆಐದು ಬಾಣಗಳು ನಮ್ಮಲ್ಲಿಲ್ಲ. ನನ್ನ ಕೈಬೆಸುಗೆ ಯನ್ನು ನೋಡು ಎಂದು ಹೇಳಿ ಮನ್ಮಥನನ್ನು ಹೊಡೆದನು. ಆ ಬಾಣವು ಎದೆಯಲ್ಲಿ ನಾಂಟಹೋಗಿ ಮನ್ಮಥನನ್ನು ಮೂರ್ಛೆಗೊಳಿಸಲು, ಸಾರಥಿ ರಥ ವನ್ನು ಶ್ರೀಕೃಷ್ಣನಿದ್ದ ಕಡೆಗೆ ಸಾಗಿಸಿದನು. ಕೃಷ್ಣಮೂರ್ತಿಯು ತನ್ನ ಮಗ

ನನ್ನು ನೋಡಿ ಹಗೆಯನ್ನು ಗೆಲ್ಲಲಾರದ ಹೇಡಿ ಎಂದು ಜರಿದು ಕಾಲಿನ
ತುದಿಯಿಂದೊದೆದನು.

ಬಳಿಕ ಭೀಮನು ಅಯ್ಯಾ! ನಿನ್ನಮಗನು ಈ ರಕ್ಕಸರಿಗೆ ಸೋಲತಕ್ಕ
ವನೇ ? ಏತಕ್ಕೆ ಕೋಪಮಾಡುವೆ? ವೃಷಕೇತುವಿಗೆ ಬೆಂಬಲವನು ಕಳುಹಿಸು
ಎಂದು ಬೇಡಿಕೊಳ್ಳಲು ಶ್ರೀಕೃಷ್ಣನು ಹಾಗಾದರೆ ನೀನೇ ಸಹಾಯಕನಾಗಿ
ಹೋಗು ಎಂದು ಹೇಳಿದನು. ಆಗ ಭೀಮನು ನಾಲ್ಕುದಿಕ್ಕುಗಳೂ ಬೆದರಿಬೆಂ
ಡಾಗುವಂತೆ ಆರ್ಭಟಿಸುತ್ತ ಬಾಣಗಳ ಮಳೆಯನ್ನುಸುರಿಸಿ, ಅನುಸಾಲ್ವನ
ಚತುರಂಗಸೇನೆಯನ್ನು ಮುತ್ತಿದನು. ಅದನ್ನು ನೋಡಿ ವೃಷಕೇತುವು ಸ್ವಾಮೀ!
ಹುಡುಗರು ಬಯಸಿದ ಪದಾರ್ಥವನ್ನೂ ನಡೆನುಡಿಗಳನ್ನೂ ಹಿರಿಯರು
ಬಯಸುವರೆ ? ಈತನೊಡನೆ ಯುದ್ಧಮಾಡುವ ಕೆಲಸ ನನಗೆ ಮೀಸಲಾಗಿರಲಿ
ಎಂದು ನಾನು ಬಂದರೆ ನೀವು ಇಲ್ಲಿಗೆ ಬರಬಹುದೆ ? ಎಂದು ಕೇಳಲು, ಅಯ್ಯಾ !
ಹಾಗಲ್ಲ, ತಂದೆಯು ಕೈಹಿಡಿದು ಹಣ್ಣನ್ನು ತಿನ್ನಿಸಿದರೆ ಮಗನು ತಿನ್ನಲೊಲ್ಲನೆ ?
ನಾನು ನಿನಗೆ ರಣರಂಗದ ರುಚಿಯನ್ನು ತೋರಿಸುವುದಕ್ಕಾಗಿ ಬಂದೆನು ಎಂದು
ಹೇಳಿದನು. ಅದನ್ನು ಕೇಳಿ ವೃಷಕೇತುವು ನಸುನಕ್ಕು ಬಿಲ್ಲಿನಲ್ಲಿ ಬಾಣವನ್ನು
ಹೂಡಿ ಗರ್ಜಿಸುತ್ತ ಸೇನಾಜನರ ಕಣ್ಣುಗಳು ಕೂರಿಹೋಗಿ ಅಷ್ಟು ದಿಕ್ಕುಗಳೂ,
ಬಾಣಮಯವಾಗಿ ರಕ್ತಪ್ರವಾಹವು ಹರಿಯುವಂತೆ ಬಾಣಕೋಟಿಗಳ ಬಿರುಮ
ಳೆಯನ್ನು ಸುರಿಸಿದನು. ಆ ಅದ್ಭುತವನ್ನು ನೋಡಿ ಅನುಸಾಲ್ವನು ಈಗ
ಹೊಸದಾಗಿ ಬಂದು ಯುದ್ಧಮಾಡುವನಾರು ? ವೃಷಭಧ್ವಜವು ಕಂಗೊಳಿಸು
ತ್ತಿದೆ ಆದುದರಿಂದ ಇವನು ಶಿವನಲ್ಲ ! ಕರ್ಣಪುತ್ರನಾಗಿರಬಹುದು ಇವನ ಪರಾ
ಕ್ರಮವನ್ನು ತಿಳಿಯಬೇಕು. ಆಗಲಿ ! ನೋಡೋಣ ಎಂದು ಗರ್ಜಿಸುತ್ತ
ಕೂರಲಗುಗಳನ್ನು ಹೂಡಿ ಹೊಡೆದನು. ಆ ಬಾಣಗಳು ವೃಷಕೇತುವಿನ ಎದೆ
ಯನ್ನು ಉಚ್ಚಳಿಸಿ ಗಗನಕ್ಕೆ ಹಾರಿದವು. ಕರ್ಣಪುತ್ರನು ಎಚ್ಚರಗೆಟ್ಟು ಮಲ
ಗಿದನು. ಕೂಡಲೆ ಸಾರಥಿಯು ಭೀಮನ ಬಳಿಗೆ ರಥವನ್ನು ಹೊಡೆಯಲು
ಮೈಗಾಯದ ಮೈಮರೆತವನ್ನು ಕಂಡು ಭೀಮನು ಮಹಾಕೋಪದಿಂದ ಗದೆ
ಯನ್ನು ತಿರುವಿ ಅಪ್ಪಳಿಸಿದನು, ರಥವು ನುಚ್ಚುನೂರಾಯಿತು, ಸಾರಥಿಯು
ಸತ್ತನು, ಕುದುರೆಗಳು ಮಡಿದವು, ಅನುಸಾಲ್ವನು ಅಂತರಿಕ್ಷಕ್ಕೆ ಹಾರಿದನು.
ಭೀಮನು ವೀರರನ್ನು ಕೂರಲಗಿನಿಂದ ಕಡಿದು, ಆನೆಗಳನ್ನು ಸೊಂಡಿಲಿ ಹಿಡಿದು
ಬಾನೆಡೆಗೆ ಹಾರಿಸಿ, ಪದಾತಿಗಳನ್ನು ಪಾದಘಟ್ಟನೆಯಿಂದ ತುಳಿದು ರಥಗಳನ್ನು
ತರಗೆಲೆಯಂತೆ ತಳ್ಳಿ, ಸಕಲರನ್ನೂ ಕೊಂದು, ವಿಕಲರನ್ನಾಗಿ ಮಾಡಿ ತನ್ನೊ
ಡನೆ ಕಾದುವುದಕ್ಕಾರೂ ಇಲ್ಲದೆ ಗರ್ಜಿಸುತ್ತಿರಲು ಅನುಸಾಲ್ವನು ಹೊಸ ರಥ

ವನ್ನು ಹತ್ತಿ ಹೊಮ್ಮಿದ ಶೌರ್ಯದಿಂದ ನೆಮ್ಮದಿಗೆಡುವಂತೆ ಭೀಮನನ್ನು ಹೊಡೆದು ನೋಯಿಸಿದನು.

ಭೀಮನು ಯಮದಂಡದಂತೆ ಭಯಂಕರವಾದ ತನ್ನ ಗದೆಯನ್ನು ತಿರುಗಿಸುತ್ತ ಅನುಸಾಲ್ವನ ಬಾಣಜಾಲವನ್ನು ಪರಿಹರಿಸುತ್ತಿರಲು, ಅನುಸಾಲ್ವನು ಕಾಲರುದ್ರನಂತೆ ಉರಿದೆದ್ದು ಕೋಪದಿಂದೊಂದು ಬಾಣವನ್ನು ಹೊಡೆದನು. ಆ ಬಾಣವು ಭೀಮನ ಹೃದಯವನ್ನು ಭೇದಿಸಿ ಮಹಾ ಭಯಂಕರವಾಗಿ ಮೂರ್ಛೆಯನ್ನುಂಟುಮಾಡಿತು, ಭೀಮನು ಶಕ್ತಿಗುಂದಿ ಮೈಮರೆದನು. ಆಗ ಶ್ರೀಹರಿಯು ಆಹಾ! ಈ ಖಳನು ಇವರ ಸಾಹಸಕ್ಕೆ ಜಗ್ಗುವವನಲ್ಲ! ನಾನೇ ಹೊರಡಬೇಕೆಂದು ಯೋಚಿಸಿ ಇದಿರಾಗಿ ಹೊರಟು, ಇವು ಕುದುರೆಗಳಲ್ಲ ಕಾರು ಮಿಂಚುಗಳು ಇದು ಚಕ್ರಧ್ವನಿಯಲ್ಲ ಮಹಾಪ್ರಳಯದ ಮರಿಗುಡುಗು, ಇದು ಶಾರ್ಙ್ಗಧನುವಲ್ಲ ಮಳೆಗಾಲದ ಮಹೇಂದ್ರಚಾಪ, ಇವುಗಳು ಕೂರ್ಗಣೆಗಳಲ್ಲ ಮಳೆಯ ಹನಿಗಳು ಈತನು ಶ್ರೀಕೃಷ್ಣನಲ್ಲ ಕಾಲಮೇಘನೆಂಬಂತೆ ಆಶ್ಚರ್ಯವನ್ನುಂಟುಮಾಡುತ್ತ ಯುದ್ಧಕ್ಕೆ ಬಂದನು ಧ್ವಜದಲ್ಲಿ ಕಂಗೊಳಿಸುವ ಗರುಡ ಚಿಹ್ನೆಯನ್ನು ಕಂಡು ಇವನೇ ಕೃಷ್ಣನೆಂದರಿತು ಅನುಸಾಲ್ವನು ಗದರಿ, ಮೂದಲಿಸುತ್ತ ನೊರೆದೆದ್ದನು. ಅಷ್ಟರಲ್ಲೇ ಮನ್ಮಥನು ಮರಳಿ ಮೈಗೊಲಿದ ಮಹಾ ಶೌರ್ಯದಿಂದ ವೀರರು ಶತ್ರುಬಲವನ್ನು ಮುತ್ತಿದರು. ಶ್ರೀಕೃಷ್ಣನು ಸೂರ್ಯಕೋಟಿಯ ಸೀತ್ಕಾರವನ್ನು ಮೀರಿಸುವ ಚಕ್ರವನ್ನು ತಿರುವುತ್ತ ಯುದ್ಧಕ್ಕೆ ನಿಂತನು. ಆಗ ಅನುಸಾಲ್ವನು ಮೊದಲು ನನ್ನ ಅಣ್ಣನನ್ನು ಕೊಂದ ನೀಚನು ಈತನೇ ಅಲ್ಲಿವೆ ಇವನನ್ನು ಕೊಲ್ಲದೆ ಬಿಡಲಾರೆನೆಂದು ಬಾಣಗಳಿಂದ ಕುದುರೆಗಳನ್ನು ಹೊಡೆದನು, ಅವು ಬಾಣಹತಿಯನ್ನು ತಾಳಲಾರದೆ ದಿಕ್ಕೆಟ್ಟು ಓಡಿಹೋದವು. ಆಗ ಶ್ರೀಕೃಷ್ಣನು ರಥದಲ್ಲಿ ಕುಳಿತಿರುವುದನ್ನು ಕಾಣದೆ ಅನುಸಾಲ್ವನು ಚಿಂತಿಸುತ್ತ ತನ್ನ ಮಂತ್ರಿಯನ್ನು ಕರೆದು ಅಯ್ಯಾ! ರಾಜ್ಯದಲ್ಲಿ ದಾನ ಧರ್ಮ ಪರೋಪಕಾರಗಳಿಗಾಗಿ ಕೊಡುತ್ತಿದ್ದ ಧನವು ಕಡಿಮೆಯಾಯಿತೋ! ಪರಿವಾರದವರು ಸಂಬಳಸಾರಿಕೆಗಳಿಲ್ಲದೆ ನೊಂದರೋ! ನ್ಯಾಯ ವಿಚಾರಣೆಯು ತಪ್ಪಿ ಪ್ರಜಾನೆಮ್ಮದಿಗೆ ಭಂಗ ಉಂಟಾಯಿತೋ! ಇಲ್ಲವೆ? ಕಾಮಾತುರತೆಯಿಂದ ಕಾಮಿನಿಯರು ಕಾಂತರನ್ನು ಬಿಟ್ಟು ಪರಪುರುಷರಲ್ಲಿ ನೆರೆದರೋ! ಮಕ್ಕಳಿಲ್ಲದ ಮನೆಹಾಳು ಸ್ವತ್ತು ನನ್ನ ಭಂಡಾರಕ್ಕೆ ಬಂದಿತೋ! ಹಾ! ಯಾವ ಪಾಪ ಉಂಟಾಯಿತೊ! ಮಹಾ ಶೌರ್ಯದಿಂದ ಮದಿಸಿ ಕಾದುವುದಕ್ಕೆ ಬಂದ ಕೃಷ್ಣನು ನನ್ನ ಕಣ್ಣಿಗೆ ಕಾಣಿಸುವುದಿಲ್ಲವಲ್ಲಾ? ಎಂದು ಚಿಂತಿಸುತ್ತಿದ್ದನು. ಅಷ್ಟರಲ್ಲೇ ಶ್ರೀಕೃಷ್ಣನು ಹೊಸ ರಥವನ್ನೇರಿ ಸಾಲ್ವನಿಗೆ ಅಭಿಮುಖವಾಗಿ ಬಂದು ಆಕರ್ಣಾಂತವಾಗಿ ಸೆಳೆದ ಬಾಣವನ್ನು ಹೊಡೆಯಲು

ಅನುಸಾಲ್ವನು ಶ್ರೀಕೃಷ್ಣನನ್ನು ಕಂಡು ಯುದ್ಧಕ್ಕೆ ಬಂದು ಮಾಯಾಡಂಬರ ವನ್ನು ತೋರಿಸಿದರ ಫಲವೇನು? ಕೆಚ್ಚೆದೆಯವನಾದರೆ ಬೆಚ್ಚದೆ ನಿಂತುಕೊಂಡು ಬಲವನ್ನು ತೋರಿಸು ಎಂದು ಹೇಳುತ್ತ ಬಾಣವನ್ನು ಬಿಟ್ಟನು ಶ್ರೀಕೃಷ್ಣನು ಹುಸಿನಗೆಯಿಂದ ಆ ಬಾಣವನ್ನು ಪರಿಹರಿಸಿಕೊಂಡು ಈ ರಾಕ್ಷಸರ ಹಾವಳಿಯು ನಮಗೆ ತಪ್ಪುದುದಲ್ಲವಲ್ಲಾ! ಇದನ್ನು ನೀಗಬೇಕೆಂಬ ಕೋಪದಿಂದ ಕೂರಲ ಗನ್ನು ತೊಟ್ಟುಬಿಟ್ಟರೂ, ಅನುಸಾಲ್ವನು ಅದನ್ನು ಕತ್ತರಿಸಿ, ಶ್ರೀಹರಿಯನ್ನು ಅರೆಸರಳಿನಿಂದ ಹೊಡೆಯಲು, ಶ್ರೀಕೃಷ್ಣನು ಎದೆಗೆಟ್ಟು ಹದವಳಿದು ಮೂರ್ಛೆಗೆ ಸಂದನು. ಸಾರಥಿಯು ಕಮಲಾಕ್ಷನ ಸ್ಥಿತಿಯನ್ನು ಕಂಡು ಧರ್ಮರಾಯನ ಬಳಿಗೆ ರಥವನ್ನು ತರಲು ಎಲ್ಲರೂ ರಥದಸುತ್ತಲೂ ಮುತ್ತಿಕೊಂಡು ನೋಡು ತ್ತಿದ್ದರು.

ಆಗ ಸತ್ಯಭಾಮೆಯು ಹುಸಿನಗೆಯಿಂದ ಗಂಡನನ್ನು ನೋಡುತ್ತ ರಾಕ್ಷಸ ನನ್ನು ಕೊಲ್ಲುವುದಕ್ಕೆ ಹೋಗಿ ಸೋತುಬಂದೆಯಾ ಎಂದು, ಮಗನನ್ನು ಮಾನ ಗೆಡಿಸಿದ ನೀನು ಈಗ ಯಾವಗತಿಗೆ ಬಂದೆ? ಲೋಕದ ಜನರು ಇನ್ನು ನಿನ್ನನ್ನು ಹೊಗಳಬಲ್ಲರೆ? ನಿನ್ನ ಪರಾಕ್ರಮಕ್ಕೆ ಸರಿಹೋಲುವರಾರು? ಎಂದು ಜರಿಯು ತ್ತಿರುವುದನ್ನು ಕೇಳಿ ಶ್ರೀಕೃಷ್ಣನು ಕಣ್ದೆರೆದು ಲಜ್ಜೆಯಿಂದ ಶೌರ್ಯವು ಇಮ್ಮಡಿಸಲು, ಕೆಂಗಣ್ಣುಗಳಿಂದ ದಿಕ್ಕುದಿಕ್ಕುಗಳನ್ನೂ ನೋಡುತ್ತ ಮಹಾ ಕೋಪದಿಂದ ಮತ್ತೆ ಯುದ್ಧ ಸನ್ನದ್ಧನಾಗುತ್ತಿದ್ದನು. ಇತ್ತ ವೃಷಕೇತುವು ಹರಿಯನ್ನು ರಣದಲ್ಲಿ ಹಿಂದಕ್ಕೆ ಓಡಿಸಿದ ವೀರನೇ! ನಿಲ್ಲು. ನಿನ್ನ ಸಾಹಸ ವನ್ನು ನೋಡುವೆನು ಎಂದು ಬೊಬ್ಬಿರಿದು ಬಾಣವನ್ನು ಹೊಡೆದನು. ಅದಕ್ಕೆ ಅನುಸಾಲ್ವನು ಹೆಂಗಸನ್ನು ಕೊಂದ ಕೊಬ್ಬು, ಬಂಡಿಯನ್ನೆಳೆದ ಬಲವೂ, ಎತ್ತು ಕತ್ತೆಗಳನ್ನು ಸದೆದ ಮದವೂ, ಹಕ್ಕಿಹಾವುಗಳನ್ನು ಗೆದ್ದ ಸೊಕ್ಕೂ ಇದ್ದರೇನು? ಆ ಗೋಪಾಲನು ನನ್ನೆದುರಿಗೆ ನಿಲ್ಲಬಲ್ಲನೆ? ನೀನು ಕರ್ಣಪುತ್ರ ನಾದದೊಳ್ಳಿತು, ನನ್ನ ಕೈಚಳಕವನ್ನು ನೋಡು, ಎಂದು ಬಾಣವನ್ನು ಹೊಡೆ ದನು. ಎಲಾ! ನೀಚ! ನೀನು ಏನು ಹೇಳಿದರೇನು, ಶ್ರೀಕೃಷ್ಣನು ಗೋಪಾ ಲನಲ್ಲವೆ! ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಪಾಲಿಸದೆ ಬಿಡುವನೆ? ನೊಣವು ಮದ್ದಾನೆಯನ್ನು ಕೆಡಹಬಲ್ಲುದೆ? ನೀನು ಶೌರ್ಯವಂತನೇ ಹೌದು ನಿನ್ನೊ ಡನೆ ನಾವು ಕಾದಲಾರೆವು ಎಂದು ಕೂರ್ಗಣೆಗಳನ್ನು ಕರೆದನು. ಅನುಸಾ ಲ್ವನು ಅದನ್ನು ಕತ್ತರಿಸಿ ಹೊಸವ ಸೆಸು ಬಾಣಗಳನ್ನು ಹೊಡೆಯಲು ವೃಷ ಕೇತುವು ಸೂರ್ಯಚಂದ್ರರು ಗತಿಗೆಡುವಂತೆ ಆಕಾಶದಲ್ಲಿ ಬಾಣಜಾಲವನ್ನು ಬಲೆಗಟ್ಟಿ, ಕೈಚಳಕದ ಕೊಬ್ಬಿನಿಂದ ಕಾಮಚಾರಿಯಾದ ರಾಕ್ಷಸನನ್ನು ಮುತ್ತಿ

ಕೊಂಡು ಕಟ್ಟುಗ್ರವಾದ ಕೂರ್ಗಣೆಗಳನ್ನು ಆಕರ್ಣಾಂತವಾಗಿ ಸೆಳೆದು ಯಾರೂ ಅರಿಯದಂತೆ ಅನುಸಾಲ್ವನನ್ನು ಹೊಡೆದು ಕೆಡಹಿದನು.

ಬಳಿಕ ಅರೆಗಳಿಗೆಯಲ್ಲಿ ಆತನ ಚತುರಂಗ ಸೈನ್ಯವು ಕಂಗೆಟ್ಟು ಚಂದ್ರನನ್ನು ಕಂಡ ಕಾಳರಾತ್ರಿಯ ಕಗ್ಗತ್ತಲೆಯಂತೆ ಮಾಯವಾಯಿತು. ಬಳಿಕ ವೃಷಕೇತುವು ಅನುಸಾಲ್ವನನ್ನು ಶರಪಾಶದಿಂದ ಕಟ್ಟಿ ತಂದು ಶ್ರೀಕೃಷ್ಣನ ಕಾಲುಗಳಮೇಲೆ ಕೆಡಹಿ ನಮಸ್ಕಾರಮಾಡಿ ನಿಂತುಕೊಂಡನು. ಶ್ರೀಕೃಷ್ಣನೂ ಧರ್ಮರಾಯನೂ ವೃಷಕೇತುವನ್ನು ಆಲಿಂಗಿಸಿಕೊಂಡು ಸನ್ಮಾನಮಾಡಿದರು, ಸಕಲ ವೀರರೂ ಉಂಡಾಡಿಗಳಾದ ಇತರರಂತಲ್ಲದೆ ಗಂಡುಗಲಿಯಾದ ಈತನು ತನ್ನ ಪ್ರತಿಜ್ಞೆಯನ್ನು ಪೂರ್ತಿಮಾಡಿ ಧನ್ಯನಾದನೆಂದು ಹೊಗಳಿದರು. ಅಷ್ಟು ಹೊತ್ತಿಗೆ ಮೂರ್ಛೆಗೊಂಡಿದ್ದ ಅನುಸಾಲ್ವನು ಮೈಮುರಿದೆದ್ದು ಮಾರಜನಕನನ್ನು ನೋಡಿ, ಸ್ವಾಮೀ ! ಮಹಾಮಹಿಮನಾದ ನಿನ್ನನ್ನು ಮನುಷ್ಯಮಾತ್ರದವನೆಂದರಿತು ದ್ವೇಷದಿಂದ ಪಳಿಯುತ್ತಿದ್ದೆನು. ಈ ದಿನ ನಿನ್ನ ಮಹಿಮೆಯು ನನಗೆ ತಿಳಿಯಿತು, ನನ್ನನ್ನು ಮನ್ನಿಸಿ ಉದ್ಧರಿಸೆಂದು ಬೇಡಿಕೊಂಡನು

ಆಗ ವೃಷಕೇತುವು ಯುದ್ಧರಂಗದಲ್ಲಿ ಬದ್ಧವೈರದಿಂದ ನಿಂದಿಸಿದ ನಿನ್ನ ಅಹಂಕಾರವೆಲ್ಲಿ ಅಡಗಿಹೋಯಿತು ? ಅಯ್ಯೋ ! ಈ ಹಾಳುದೇಹವನ್ನು ಸುಡು . ಸುಮ್ಮನೆ ಗಳಹಬೇಡವೆಂದು ಗದರಿಸಲು, ಎಲೆ ಮರುಳೇ ! ಮಹಾಮಹಿಮನ ಮಾಯಾಜಾಲವನ್ನು ನೀನು ಬಲ್ಲೆಯಾ ? ಈ ಗೋಪಾಲಕೃಷ್ಣನನ್ನು ದ್ವೇಷದಿಂದಾಗಲಿ, ಪ್ರೀತಿಯಿಂದಾಗಲಿ, ಪಳಿದುಹೊಗಳುವ ಜನರ ಪಾಪವು ನಾಶವಾಗಿ ಅವರಿಗೆ ಪರಮಪದವು ದೊರೆವುದಲ್ಲವೆ ? ನಾನು ಮಾಡಿದ ದೂಷಣೆಯಿಂದಲೆ ಹೇಳಲಾಗದ ಸುಕೃತವು ನನಗೊದಗಿತು ಎಂದು ಹೇಳುತ್ತ ಶ್ರೀಹರಿಯ ಪಾದಗಳಿಗೆ ನಮಸ್ಕರಿಸಿದನು. ಅಷ್ಟುಹೊತ್ತಿಗೆ ಪ್ರದ್ಯುಮ್ನನು ಉಳಿದ ಚತುರಂಗಬಲವನ್ನು ಸೋಲಿಸಿ, ತಾನು ಕೊಟ್ಟ ಭಾಷೆಯಂತೆ ಕುದುರೆಯನ್ನು ತಂದು, ಧರ್ಮರಾಯನಮುಂದೆ ನಿಲ್ಲಿಸಿ, ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿ ಕೈಮುಗಿದು ನಸುನಕ್ಕನು.

ಬಳಿಕ ಶ್ರೀಕೃಷ್ಣಮೂರ್ತಿಯು ಮಣಿದೆರಗಿದ ಅನುಸಾಲ್ವನನ್ನು ಬೋಳೈಸಿ ಮೇಲಕ್ಕೆ ನೆಗಪಿ ಅಯ್ಯಾ ! ಇನ್ನು ಮುಂದೆ ಲೋಕಪೂಜ್ಯವಾದ ಮಿತ್ರತೆಯನ್ನು ನಮ್ಮಲ್ಲಿಟ್ಟು ಧರ್ಮಪುತ್ರನ ಯಾಗಕ್ಕೆ ಸಹಾಯಕನಾಗಿರು ಎಂದು ಹೇಳಿ ತಮಗುಂಟಾದ ಜಯದಿಂದ ಸಂತುಷ್ಟನಾಗಿ ಸಕಲಜನಳಿಂದೊಡಗೂಡಿ, ಓಲಗ, ತಾಳ, ಮೇಳ, ನಟ ನರ್ತಕಿ ಗಾಯಕ, ಪುರೋಹಿತ ಪರಿವಾರದೊಡನೆ ಉತ್ಸಾಹದಿಂದ ಹಸ್ತಿನಾಪುರಕ್ಕೆ ಬರಲು ಧರ್ಮಪುತ್ರನು ಅವರಿಗೆ ತಕ್ಕ ಬಿಡಾರವನ್ನು ಬಿಡಿಸಿ, ಬೇಕಾದ ವಸ್ತುಗಳನ್ನು ತರಿಸಿಕೊಟ್ಟು ಬಗೆಗೊಂಡ ಸಂಭ್ರಮ

ದಿಂದ ಜಗದೊಡೆಯನನ್ನು ಧ್ಯಾನಿಸುವಂತೆ ಸುಮ್ಮಾನದಿಂದಿರಿಸಿ, ತಾನು ತನ್ನ ಪರಿವಾರದೊಡನೆ ದೇವಪುರನಿಲಯ ಲಕ್ಷ್ಮೀಪತಿಯನ್ನು ಸೇವಿಸುತ್ತಿದ್ದನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕ ರಾಯಮಾನ ಕಲ್ಯಾಣಪುರೀ ನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಏಳನೆಯ ಸಂಧಿ ಸಂಪೂರ್ಣಂ.

ಶ್ರೀ. ಶ್ರೀ. ಶ್ರೀ.

# ಎಂಟನೆಯ ಸಂಧಿ.

ಯಜ್ಞಾರ್ಥವಾಗಿ ಬಿಟ್ಟ ಕುದುರೆಯು ನೀಲಧ್ವಜನ ಪಟ್ಟಣಕ್ಕೆ ಹೋದುದು.

ಎಲೈ ಜನಮೇಜಯರಾಯನೇ ! ಕೇಳು. ಹೀಗೆ ಶ್ರೀ ಕೃಷ್ಣಮೂರ್ತಿಯು ಧರ್ಮರಾಯನ ಸೇವೆಯನ್ನು ಕೈಕೊಳ್ಳುತ್ತಿರುವಲ್ಲಿ, ಗಂಗಾತಟದಲ್ಲಿ ಸಕಲ ಸಾಮಗ್ರಿಗಳಿಂದ ಕೂಡಿ ಶಾಸ್ತ್ರೋಕ್ತವಿಧಿಯಂತೆ ನಿರ್ಮಿಸಿದ ಯಾಗ ಮಂಟಪವು ಸಿದ್ಧವಾಯಿತು ಕೂಡಲೆ ಯಜ್ಞಾರಂಭಕಾಲವಾದ ವಸಂತಋತು ತಲೆದೋರಿತು. ಆದರ ಸೊಬಗನ್ನು ಹೇಳುವೆನು ಲಾಲಿಸು ನಿಲುಗಡೆಯಿಲ್ಲದೆ ಬಲವಾಗಿ ಬೀಸುತ್ತಿದ್ದ ಬಿರುಗಾಳಿಯು ಮಲಯಪರ್ವತವನ್ನು ಹೊಕ್ಕು ಅಲ್ಲಿನ ಸರ್ಪಗಳಿಗೆ ತನ್ನ ಬಲವನ್ನು ಆಹಾರವಾಗಿ ಕೊಟ್ಟು, ಅಲ್ಲಿರಲಾರದೆ ಹೊರಟು ಸರಸಿಯಲ್ಲಿ ಅರಳಿದ ಅರೆದಾವರೆಯ ಬಿರಿಮುಗುಳಿನಲ್ಲಿ ಮಕರಂದಪಾನವನ್ನು ಮಾಡುತ್ತಿದ್ದ ಮರಿದುಂಬಿಗಳ ಬಳಗದೊಡನೆ ಒಲಿದಾಡುತ್ತಿರುವಂತೆ ನಸುಗಾಳಿಯು ಬೀಸಲಾರಂಭಿಸಿತು. ಚಿಗುರಿನ ತೋರಣವನ್ನು ಕಟ್ಟಿಸಿ, ಮರಿಕೋಗಿಲೆಗಳ ಬಾಯಿಕಟ್ಟನ್ನು ಬಿಡಿಸಿ, ದುಂಬಿಗಳ ಬಳಗಕ್ಕೆ ಉಂಟಾಗಿದ್ದ ಸೆರೆಯನ್ನು ಹೋಗಲಾಡಿಸಿ, ಕಮಲಗಳ ಸೊಂಪನ್ನು ಸೂರೆಗೊಂಡು, ವಿರಹಿಗಳೆಲ್ಲರೂ ಮಂದಮಾರುತನ ಮೈಸೊಂಪಿಗೆ ಮನಸೋತು ನೆರೆಯುವಂತೆಮಾಡಿ, ಬೆಳದಿಂಗಳೆಂಬ ಚಂದ್ರಕಾಂತಿಯನ್ನು ಹೆಚ್ಚಿಸಿ, ಮನ್ಮಥರಾಜನು ಹೊರಟು, ಮಾಗಿಯನ್ನು ನಡನಡುಗಿಸಿ, ಸಕಲ ಲೋಕಗಳನ್ನು ಆಳತೊಡಗಿದನು. ಮಾವು ಮುತ್ತುಗವನ್ನೂ, ಮರಿದುಂಬಿಗಳು ಕೋಗಿಲೆಯನ್ನೂ, ಸಂಪಗೆಯು ಹೊನ್ನುದಾವರೆಯನ್ನೂ, ಅರಳಿದಮಲ್ಲಿಗೆಯು ಬಿಳುಪಾದ ಬೆಳದಿಂಗಳನ್ನೂ, ಗಿಳಿಗಳು ವನರಾಜಿಯನ್ನೂ, ಹಗೆತನದಿಂದ ಸೋಲಿಸುತ್ತ ಕೆಂಪು ಕಪ್ಪು, ಹಳದಿ ಪಳುಕು ಪಚ್ಚೆಗಳ ವರ್ಣದಿಂದಕೂಡಿ ಶೋಭಿಸುತ್ತ ವಸಂತಕಾಲದ ವನಲಕ್ಷ್ಮಿಯ ಮೈಬಣ್ಣದಂತೆ ರಾಜಿಸಿದವು, ಆಕಾಲದಲ್ಲಿ ಕೆಂದಳಿರಕಾಂತಿಯಿಂದ ಸುಂದರವಾದ ನೆಳಲನ್ನು ಕೊಡುತ್ತಿರುವ ಮರಗಿಡುಗಳ ನೆರಳಿನಲ್ಲಿ ಕುಳಿತು, ತಿಳಿಗೊ

ಳೆದ ತಣ್ಣೀರನ್ನು ಕುಡಿದು, ಮಂದಮಂದವಾಗಿ ಬೀಸುವ ಮಲಯಾನಿಲನಿಗೆ ಮೈಗೊಟ್ಟು ತಂತಮ್ಮ ಮಾರ್ಗಶ್ರಮವನ್ನು ಕಳೆದುಕೊಳ್ಳುತ್ತ ದಾರಿಗರು ಸುಖಿಸುತ್ತಿದ್ದರು. ವಿರಹಿಗಳು ತಂತಮ್ಮ ಪ್ರೇಯಸಿಯರೊಡನೆ ಬೆರೆದು ಅಂದ ಚಂದದಿಂದಲಂಕೃತರಾಗಿ ಪಚ್ಚಕರ್ಪೂರದಿಂದೊಡವೆರೆದ ಮಲಯಜಗಂಧವನ್ನು ತೊಡೆದು ತಂಪುಗೊಂಡು, ನಿರ್ಮಲವಾದ ಉಪ್ಪರಿಗೆಗಳಲ್ಲಿ ವಿಹರಿಸುತ್ತಿದ್ದರು.

ಅಂತಹ ವಸಂತಕಾಲದಲ್ಲಿ ಧರ್ಮರಾಯನ ಕೀರ್ತಿಯಂತೆ ಬೆಳದಿಂಗಳು ಹರಿಯಿತು, ಯಾಚಕರನ್ನು ಕೂಗಿ ಕರೆಯುವಹಾಗೆ ಕೋಗಿಲೆಗಳು ಕೂಗಿದವು, ಭೂಮಿಯ ಜನಗಳಿಗೆ ಆಶ್ಚರ್ಯ ಉಂಟಾಗುವಂತೆ ಮಾವು ಚಿಗುರಿತು, ನಾಶವಾದ ಪಾಪದಂತೆ ಶೀತಮಯವಾದ ಮಾಗಿಯು ಮೈಗೆಟ್ಟಿತು, ಪುಣ್ಯವಾಸನೆಯು ಕೈಗೆಣ್ಮಿದಂತೆ ತೆಂಕಣಗಾಳಿಯು ಬೀಸಲಾರಂಭಿಸಿತು. ಎಲೈ ಜನಮೇಜಯರಾಯನೇ ! ಕೇಳು. ಇಂತು ಉಲ್ಲಾಸಕರವಾದ ಚೈತ್ರಮಾಸದಲ್ಲಿ ಹುಣ್ಣಿಮೆಯ ದಿವಸ ಶುಭಮುಹೂರ್ತದಲ್ಲಿ ಧರ್ಮರಾಯನು ವೇದವ್ಯಾಸ ಮೊದಲಾದ ಮುನಿಮುಖ್ಯರನ್ನು ಕರೆಯಿಸಿ, ಶ್ರೀಕೃಷ್ಣನ ಅಪ್ಪಣೆಯಂತೆ, ಶಾಸ್ತ್ರೋಕ್ತವಾಗಿ ಯಜ್ಞಾಶ್ವವನ್ನು ಪೂಜೆಮಾಡಿ, ವೇದವಿಧಾನದಂತೆ ತಾನು ಅಶ್ವಮೇಧಯಾಗಕ್ಕೆ ದೀಕ್ಷಾಬದ್ಧನಾಗಿ ಚಂದ್ರವಂಶದಲ್ಲಿ ಅಗ್ಗಳನಾದ ಪಾಂಡುರಾಯನ ಮಗನಾದ ಧರ್ಮರಾಯನ ಯಾಗಪಶುವಾದ ಈ ಕುದುರೆಯನ್ನು ಭೂಮಂಡಲದಲ್ಲಿರುವ ಯಾವ ವೀರರಾದರೂ ಕಟ್ಟಬಹುದೆಂದು ಬರೆದ ಭಂಗಾರದ ಪಟ್ಟವನ್ನು ಆ ಕುದುರೆಯ ಹಣೆಗೆಕಟ್ಟಿ, ರತ್ನಮಾಲ್ಯಾಭರಣ, ಗಂಧ, ಪುಷ್ಪ, ಧೂಪ, ದೀಪಗಳಿಂದ ಕುದುರೆಯನ್ನು ಅರ್ಚಿಸಿ, ಶುಭಮುಹೂರ್ತದಲ್ಲಿ ಹೊರಡಿಸಿದರು. ಉತ್ತಮವಾದ ಆಹಾರದಿಂದಲೂ, ಆರೋಗ್ಯಕರವಾದ ಸ್ನಾನದಿಂದಲೂ, ಸದಾ ತಾಂಬೂಲ ವಸ್ತ್ರಭೂಷಣ ಮೊದಲಾದ ಆಭರಣಗಳಿಂದಲೂ, ಪರಿಮಳ ಗಂಧ, ಯಕ್ಷ ಕರ್ದಮ ಮೊದಲಾದ ಅನುಲೇಪನಗಳಿಂದಲೂ ಕೂಡಿ, ಗಂಡಹೆಂಡಿರ ಏಕಾಂತವಾಸಕ್ಕೆ ಯೋಗ್ಯವಾದ ಸಜ್ಜೆವನೆಯಲ್ಲಿ ಹಂಸತೂಲಿಕಾತಲ್ಪದಮೇಲೆ ಶಯನಿಸಿದ್ದರೂ, ಸ್ತ್ರೀಸಂಗವನ್ನು ತೊರೆದು ವೈರಾಗ್ಯದಿಂದ ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವ ಅಸಿಪತ್ರವ್ರತವನ್ನು ಹಿಡಿದು ಧರ್ಮರಾಯನಿರುತಿದ್ದನು. ಒಂದು ವರುಷಕ್ಕೆ ಕೊನೆಗಾಣುವ ಯಾಗಕ್ಕೆ ದೀಕ್ಷಿತನಾಗಿರುವೆನಾದುದರಿಂದ ಅದುವರೆಗೂ ಅಸಿವ್ರತವನ್ನು ಕೈಕೊಂಡಿರುವೆನೆಂದು ಧರ್ಮಪುತ್ರನು ಹೇಳಿದನು.

ಬಳಿಕ ಶ್ರೀಕೃಷ್ಣನ ಆಜ್ಞೆಯಂತೆ ಅರ್ಜುನನೊಡನೆ ಕುದುರೆಕಾವಲಿಗಾಗಿ, ಲೋಕೈಕವೀರರಾದ ಶೂರರು ಅನುಸಾಲ್ವ, ಸಾತ್ಯಕಿ, ಪ್ರದ್ಯುಮ್ನ, ಕೃತವರ್ಮ, ಯೌವನಾಶ್ವ, ವೃಷಕೇತು ಮೊದಲಾದವರು ಹೊರಟುಬರುತ್ತಿರಲು,

ಅರ್ಜುನನು ಶುಭಮುಹೂರ್ತದಲ್ಲಿ ಕುದುರೆಯನ್ನು ಪೂಜಿಸಿ, ನವಗ್ರಹಗಳನ್ನು ಧ್ಯಾನಿಸಿ, ಹಿರಿಯರನ್ನು ಮನ್ನಿಸಿ, ಗುರುಜನಗಳನ್ನು ಸೇವಿಸಿ, ದಿಕ್ಪಾಲಕರನ್ನು ಮನದಲ್ಲಿ ನೆನೆದು, ಕೃಷ್ಣಮೂರ್ತಿಯ ಪಾದಗಳಿಗೆರಗಿ, ತನ್ನ ಹೆಂಡತಿಯರು ತಳಿದಸೇಸೆಯನ್ನು ತಳೆದು ಹೊಗಳುತ್ತಿರುವ ವಂದಿಮಾಗಧರ ಮಂಗಳರವದೊಡನೆ ಪೊರಮಟ್ಟನು. ಬಳಿಕ ದ್ರೌಪದಿಯು ಮುತ್ತಿನಾರತಿಯನ್ನು ತಂದು, ಮುರವೈರಿಯೂ ಆತನ ಹೆಂಡತಿಯರೂ ಹೊಗಳುವಂತೆ ಶತ್ರುಗಳನ್ನು ಗೆದ್ದು ಬಾರೆಂದು ಹರಿಸಿ, ಸೇಸೆದಳಿಯಲು ಅಕ್ಕರೆಯಿಂದವಳನ್ನು ಆಲಿಂಗಿಸಿ, ಮುತ್ತಿಟ್ಟುಕೊಂಡು, ಕುರುಳುಗಳನ್ನು ನೇವರಿಸಿ ಸಮಾಧಾನಪಡಿಸಿ ಅವಳನ್ನು ಬೀಳ್ಕೊಂಡು ಹೊರವಂಟನು.

ಆಗ ಶ್ರೀಕೃಷ್ಣನು ತನ್ನ ಮಗನಾದ ಪ್ರದ್ಯುಮ್ನನನ್ನು ಸೇನಾಧಿಕಾರಕ್ಕೆ ನಿಲ್ಲಿಸಿ, ಅರ್ಜುನನ ಬೆಂಗಾವಲಾಗಿರುವಂತೆ ಹೇಳಿ ಅವನ ಸಹಾಯಕ್ಕೆ ಸುವೇಗ ಅನುಸಾಲ್ವರನ್ನು ಜೊತೆಮಾಡಿ ತಾನು ಹಿಂದಿರುಗಿ ಪಟ್ಟಣಕ್ಕೆ ಬಂದನು. ಆಗ ಊಹಿಸಲಸದಳವಾದ ಅಪರಿಮಿತಸೈನ್ಯದ ಸಂದಣಿಯಿಂದ ಮೇರೆದಪ್ಪಿದ ಮಹಾಸಮುದ್ರದಂತೆ, ತರುಗುಲ್ಮಲತೆಗಳನ್ನೊಳಗೊಂಡ ಮಹಾರಣ್ಯದಂತೆ ಭೂಮಂಡಲವನ್ನೊಂದಾಗಿಬಳಸಿ ನಡೆದುಬರುತ್ತಿರುವ ಸೇನೆಯ ಮುಂಭಾಗದಲ್ಲಿ ತೆಂಕಮುಖವಾಗಿ ನಡೆದುಬರುತ್ತಿದ್ದ ಯಾಗದ ಕುದುರೆಯು ರಥಪದಾತಿಗಳ ಸಂದಣಿಯೊಡನೆ ನಡೆದುಬಂದು ಮಾಹಿಷ್ಮತೀನಗರದ ಬಹಿರುದ್ಯಾನ ಸೀಮೆಯಲ್ಲಿ ನಿಂತುಕೊಂಡಿತು. ಆ ಪಟ್ಟಣಕ್ಕೆ ದೊರೆಯಾದ ನೀಲಧ್ವಜನಿಗೆ ಮಗನಾದ ಪ್ರವೀರನೆಂಬವನು ತನ್ನ ಹೆಂಡತಿಯಾದ ಮದನಮಂಜರಿಯೊಡನೆ ಉದ್ಯಾನಕ್ಕೆ ನಡೆತಂದು ವಸಂತಕೇಳಿಯಲ್ಲಿರುತಿರಲು, ಮಿಂಡೆದ್ದ ಬಾಲೆಯರು ತಂಡತಂಡವಾಗಿ ನೆರೆದು, ಬಂಡುದುಂಬಿದ ಬಿರುಮುಗುಳ ಹೂಗಳನ್ನು ಕೊಯ್ಯುತ ವಿಲಾಸದಿಂದ ವಿಹರಿಸುತ್ತಿದ್ದರು. ಮೊಳೆವಲ್ಲುಗಳಲ್ಲಿ ಮೊಲ್ಲೆಯನ್ನೂ, ಚೆಂದುಟಿಯಿಂದ ಬಂಧೂಕಕುಸುಮವನ್ನೂ ಎಳೆನಗೆಯಿಂದ ಮಲ್ಲಿಗೆಯನ್ನೂ, ಕುಡಿಗಣ್ಣಿನಿಂದ ಕನ್ನೈದಿಲೆಯನ್ನೂ, ನಳಿತೋಳುಗಳಿಂದ ಶಿರೀಷವನ್ನೂ, ನಾಸಿಕದಿಂದ ಚಂಪಕವನ್ನೂ, ಜರಿದು ಹೂಗಳು ತಮ್ಮಲ್ಲಿ ಅಡಗಿರುವಂತೆ ಅಳವಟ್ಟಿರಲು ಕುಸುಮಗಂಧಿಯರು ಅಲ್ಲಿ ಹೊಸ ಹೂಗಳನ್ನು ಹುಡುಕಿ ಕುಯ್ಯುತ್ತಿರುವರೆಂಬ ಸಂಕಟದಿಂದ ಅವರ ನಡುವು ಬಡವಾದಂತೆ ಬಳುಕಾಡುತ್ತಿದ್ದಿತು

ಇಂತಪ್ಪ ಸುಂದರಿಯರು ಜಾಜಿ, ಕಣಿಗಲೆ, ಸೇವಂತಿಗೆ, ಶಿರಿಸ, ಬೆಟ್ಟದಾವರೆ, ಸಂಪಗೆ, ಪಾದರಿ, ಸುರಗಿ, ಸುರಹೊನ್ನೆ, ಗುಲಾಬಿ ಮೊದಲಾದ ಹೂಗಳನ್ನು ಕೊಯ್ಯುತ್ತ ಮಾವಿನಚಿಗುರನ್ನು ಕೊಯ್ಯಲೆಂದು ಬಡನಡುವು ಬಳುಕಾಡುವಂತೆ, ತುದಿಗಾಲಿನಲ್ಲಿ ನಿಂತು, ತೋಳ ಮೊದಲು ತೀಲಾಡುವಂತೆ ಕೈ

ಗಳನ್ನೆತ್ತಿ ಬಲಿತ ಬಲ್ಮೊಲೆಗಳು ಒಲಿದಾಡುತ್ತಿರಲು, ನಿಡುಮುಡಿಯ ನೀಲಾಲಕಂಗಳು ಹೂಗಳಿಗೆರಗಿದ ತುಂಬಿವಿಂಡಿನಂತೆ ರಂಜಿಸುತ್ತಿರಲು, ಮನ್ಮಥನ ಸೋಕ್ಕಾನೆಗಳಂತೆ ವಿವಿಧವಿಲಾಸದಿಂದ ನ್ಯೈಮರೆದು ಮನೋವಿಲಾಸದಿಂದ ಪುಷ್ಪಪಚಯದಲ್ಲಿ ಪೂರ್ಣಾನಂದವನ್ನು ಪಡೆಯುತ್ತಿದ್ದರು. ಇತ್ತ ಪ್ರವೀರನ ಹೆಂಡತಿಯಾದ ಮದನಮಂಜರಿಯು ಕುದುರೆಯನ್ನು ಕಂಡು, ಕಟ್ಟಳ್ಕರಿಂದದರ ಪಟ್ಟದಲಿಪಿಯನ್ನೋದಿಕೊಂಡು ವಿಸ್ಮಿತಳಾಗಿ ಗಂಡನಿಗೆರುಹಲು, ಆತನು ಕಡುಗೋಪದಿಂದ ಕುದಿದು ಹೆಂಡತಿಯನ್ನು ನೋಡುತ್ತ ಕುದುರೆಯನ್ನು ಕಟ್ಟಿಹಾಕಿ, ತನ್ನ ಚತುರಂಗಬಲವನ್ನು ಬರಮಾಡಿ ಅರ್ಜುನನೊಡನೆ ಯುದ್ಧಮಾಡಲು ಸಿದ್ಧನಾದನು.

ಎಲೈ ಜನಮೇಜಯರಾಯನೇ ! ಲಾಲಿಸು. ಯಜ್ಞಪುರುಷನಾದ ಅಗ್ನಿಯು ಆ ನೀಲಧ್ವಜನಿಗೆ ಅಳಿಯನಾಗಿ ಮನೆಗೆಲಸಗಳನ್ನು ಮಾಡುತ್ತಿರುವನು ಅದು ಹೇಗೆಂದರೆ:— ಈನೀಲಧ್ವಜನು ಮಗಳು ಮೂರುಲೋಕದಲ್ಲಿಯೂ ಸುಲಭಸಾಧ್ಯರಾದ ದೇವತೆಗಳಾರಿರುವರೆಂದು ಚಿಂತಿಸಿ, ತನ್ನ ಭಕ್ತಿಯಿಂದ ಅಗ್ನಿಯನ್ನು ಮೆಚ್ಚಿಸಿ, ಮದುವೆಯಾದಳು. ಅಂದಿನಿಂದ ಯಜ್ಞೇಶ್ವರನು ನೀಲಧ್ವಜನಿಗೆ ಅಳಿಯನಾಗಿ ಅವನ ಆಡಳಿತವನ್ನೆಲ್ಲ ತಾನೆ ವಹಿಸಿಕೊಂಡಿರುವನು. ಆತನ ಬಲದಿಂದಲೇ ಈ ಪ್ರವೀರನು ಕುದುರೆಯನ್ನು ಕಟ್ಟಲು ಕಾದಲನುವಾದನು. ಬಳಿಕ ಅರ್ಜುನನ ಪಾಳಯದವರು ನುಗ್ಗಿಬರಿದುಬಂದು ಮಹಾರ್ಣವದಂತೆ ಮೋಹರಿಸಿ, ಕಟ್ಟಿದ್ದ ಕುದುರೆಯನ್ನು ಬಿಡಿಸಿಕೊಳ್ಳಲೆಂದು ತಮ್ಮ ಕೈದೋರಿದರು.

ಆಗ ಪ್ರವೀರನು ಅವರ ಸಾಹಸವನ್ನು ನಿಲ್ಲಿಸಿ ನಿಮ್ಮೊಡೆಯನಿಗೆ ಶೌರ್ಯವಿದ್ದರೆ ನನ್ನೆದುರಿಗೆ ಬಂದು ಯುದ್ಧಮಾಡಿ ಕುದುರೆಯನ್ನು ಬಿಡಿಸಿಕೊಳ್ಳಲಿ ಎಂದು ಗದರಿಸಿದನು. ಅದನ್ನು ಕೇಳಿ ಅರ್ಜುನನು ನಸುನಗುತ್ತ ಎಳೆಗೋಪದಿಂದನಲಿದಾಡಿ, ತನ್ನ ಸೇನೆಯವರನ್ನು ನೋಡಲು ಯುದ್ಧದಲ್ಲಿ ಧೀರರಾದ ಆಸೈನಿಕರು ದಡವನ್ನು ಮೀರಿದ ಕಡಲಿನಂತೆ ತೇರೈಸಿಬಂದು ಪ್ರವೀರನನ್ನು ನಾಲ್ಕುಕಡೆಯಿಂದಲೂ ಮುತ್ತಿಕೊಂಡರು. ಸೂರ್ಯಚಂದ್ರರಗತಿಯು ನಿಂತುಹೋಯಿತು, ಭೂಮಿಯು ನಡುಗಿತು, ಪರಬಲದ ವೀರರು ಕಳೆಗೆಟ್ಟರು, ಉರಿಮಸಗುತ್ತಿರುವ ಕೆಂಗರಿಯ ಬಾಣಗಳು ಎಲ್ಲೆಲ್ಲಿಯೂ ಹರಡಿಕೊಂಡುವು, ಮೂರು ಲೋಕದವರೂ ಹೆದರಿದರು. ಆದರೂ ಪ್ರವೀರನು ಹೆದರದೆ ಚಾರಿಯರಿದು ಬಾರಿಬಾರಿಗೂ ಬರುತ್ತಿರುವ ಹಗೆಗಳ ಕೂರಲಗುಗಳನ್ನು ಕಡಿದು ತುಂಡಿಸಿ, ರೋಷದಿಂದ ಗರ್ಜಿಸುತ್ತಿರುವುದನ್ನು ಕಂಡು ಪ್ರದ್ಯುಮ್ನ, ಸಾತ್ಯಕಿ, ವೃಷಕೇತು, ಸುವೇಗ, ಅನುಸಾಲ್ವ, ಕೃತವರ್ಮ ಮೊದಲಾದವರು ಮುಂದರಿದು ಬಂದು, ಪ್ರಳಯಕಾಲದ ಮೇಘಜಾಲದಂತೆ ಬಾಣಗಳ ಮಳೆಯನ್ನು ಸುರಿ

ಸುತ್ತ ಪ್ರವೀರರನ್ನು ಮುತ್ತಿದರು. ಅವರನ್ನೂ ಲಕ್ಷ್ಯಮಾಡದೆ ಆ ಪ್ರವೀರನು ಧೈರ್ಯದಿಂದ ಕಾದುತ್ತಿರುವಲ್ಲಿ ನೀಲಧ್ವಜನು ಈ ವಾರ್ತೆಯನ್ನು ಕೇಳಿ ತನ್ನ ಮೂಲಬಲದ ಕಾಲಾಳುಗಳ ದಳವನ್ನು ತೆಗೆದುಕೊಂಡು ಕಾಲಮೇಘವು ಕವಿದಂತೆ ಮೂರುಲೋಕವನ್ನು ಭಯಪಡಿಸುತ್ತ ಪ್ರವೀರನಿಗೊತ್ತಾಸೆಯಾಗಿ ನಡೆತಂದನು. ಆಗ ಮಹಾರೋಷದಿಂದ ಮುಂದರಿದುಬಂದ ನೀಲಧ್ವಜನ ಸೈನ್ಯದವರು ತಮ್ಮ ಯುಕ್ತಿಶಕ್ತಿಗಳನ್ನು ವೆಚ್ಚಮಾಡಿ ವೀರಾವೇಶದಿಂದ ಕಾದುತ್ತ ಕಡುಗಲಿಗಳನ್ನು ಕಂಗೆಡಿಸಿ, ಕೃತವರ್ಮನುರೆಬೆಯನ್ನೂ, ಸಾಲ್ವನ ಶೌರ್ಯವನ್ನೂ, ಸುವೇಗನ ಪರಾಕ್ರಮವನ್ನೂ, ವೃಷಕೇತುವಿನ ಉಬ್ಬಟೆಯನ್ನು, ಸಾತ್ಯಕಿಯ ಸತ್ವವನ್ನೂ, ಯೌವನಾಶ್ವನ ವಿಕ್ರಮವನ್ನೂ, ಪ್ರದ್ಯುಮ್ನನ ಪರಾಕ್ರಮವನ್ನೂ ಹಾಳುಮಾಡಿ ಮೆರೆಯುತ್ತಿರುವುದನ್ನು ಕಂಡು ನೀಲಧ್ವಜನು ಸಂತುಷ್ಟನಾಗಿ ಮಹಾಸಮುದ್ರವು ಮೇರೆತಪ್ಪಿದಂತೆ ಬಂದ ಸೇನೆಯನ್ನೂ ಅಷ್ಟದಿಕ್ಪಾಲರಂತೆ ಆರ್ಭಟಿಸುವ ಎಂಟುಜನ ವೀರರನ್ನು ಕಂಗೆಡಿಸಿ, ಮೆರೆಯುತ್ತಿದ್ದನು. ಅದನ್ನು ಕಂಡು ಕಡುಕೋಪದಿಂದ ಕೆಂಗಣ್ಣುಗಳನ್ನು ತಿರುವುತ್ತ ಅರ್ಜುನನು ತನ್ನ ಗಾಂಡೀವವನ್ನು ತುಡುಕಿ ಬಾಣವನ್ನು ಹೂಡಿ ರಭಸದಿಂದ ಹೊಡೆಯಲು ನೀಲಧ್ವಜನ ಸೇನೆಯು ಅರ್ಜುನನ ಆರ್ಭಟವನ್ನು ತಾಳಲಾರದೆ ಊರಬಾಗಲಿಗೆ ಓಡಿಹೋಯಿತು. ಹೀಗೆ ಕಂಗೆಟ್ಟು ಓಡಿಬಂದ ಕಟ್ಟಾಸುರದ ವೀರರನ್ನು ಕಂಡು, ಪ್ರವೀರನು ಬಹು ರೋಷದಿಂದವರನ್ನು ಹಿಂದಿರುಹಿ ನಡೆಸಿಕೊಂಡು ಬಂದು ತನ್ನೊಡನೆ ಕಾದಲನುವಾದ ವೃಷಕೇತುವಿಗೆ ದುರಾಗಿ ಮೊದಲಿಗಿಂತಲೂ ಹೆಚ್ಚಾದ ಧೈರ್ಯದಿಂದ ಯುದ್ಧಮಾಡುತ್ತಿದ್ದನು.

ಇತ್ತ ಅರ್ಜುನನು ಮುರಿದಹುಬ್ಬುಗಳೆಂಬ ಮರಿಕೆಂಡಗಳಿಂದ ತರುಗಿಡಗಳನ್ನುದುರಿಸುವ ಮಹಾರುದ್ರನಂತೆ ಕೆಂಗರಿಯ ಬಾಣಗಳನ್ನು ಸುರಿಸಿ, ಶತ್ರುಸೇನೆಯವರು ಮುಂಗಾಣದಂತೆ ನೋಡಿಗೆಡಿಸಿ, ಯುದ್ಧಮಾಡುತ್ತ ಕಾಲರಕ್ಕಸನಂತೆ ಉರವಣಿಸಿಬಂದ ನೀಲಧ್ವಜನನ್ನು ಬಲವಾಗಿ ಹೊಡೆದು ಸೋಲಿಸಿದನು. ಅರ್ಜುನನ ಬಾಣದಿಂದ ಬಲಗುಂದಿ ಕಂಗೆಟ್ಟ ನೀಲಧ್ವಜನು ತನ್ನ ಬಳಿಯಲ್ಲಿರುವ ಅಳಿಯನಾದ ಅಗ್ನಿದೇವನನ್ನು ನೋಡಿ, ಅಯ್ಯಾ ! ನಿನ್ನಂತಹ ಲೋಕಪೂಜ್ಯನಾದ ಅಳಿಯನು ನನಗಿದ್ದರೂ ನಾನು ಇಂಥ ದುರವಸ್ಥೆಯನ್ನು ಅನುಭವಿಸಬೇಕಾಯಿತಲ್ಲಾ ! ಈ ಅರ್ಜುನನ ಭಯವನ್ನು ಹೋಗಲಾಡಿಸಿ ನನ್ನನ್ನು ಸಂರಕ್ಷಿಸಲಾರೆಯಾ ! ದಯೆಮಾಡು ! ಕರುಣದಿಂದ ಕಾಪಾಡು, ದೂರದಲ್ಲಿ ನಿಂತು ದುರುದುಂಬಿತನದಿಂದ ನೋಡುವ ದುರುಳರಂತೆ ತಟಸ್ಥನಾಗಿರಬೇಡ ಎಂದು ಬೇಡಿಕೊಂಡನು. ಆಬಳಿಕ ಅಗ್ನಿಯು ತನ್ನ ಸಾಮರ್ಥ್ಯವನ್ನು ಅರ್ಜುನನಮೇಲೆ ತೋರಲಾರಂಭಿಸಿದನು. ಆಹಾ ! ಹೇಳಲೇನು. ಸಿಂದ, ಸೀಗುರಿ,

ಪತಾಕೆ, ಬತ್ತಳಿಕೆ, ಬಿಲ್ಲು, ವಜ್ರಕವಚ, ವಸ್ತ್ರ, ವಾಹನ, ಬಲಿ, ಸರಳು, ರಥ, ಗಜ, ಅಶ್ವ, ಸತ್ತಿಗೆಚಾಮರ, ಗಾಲಿಗಳು ಟಕ್ಕೆಯು ಮೊದಲಾದ ಸಕಲ ವಸ್ತುಗಳಲ್ಲಿಯೂ ಉರಿ ಹೊರಟಿತು, ದಿಕ್ಕುದಿಕ್ಕಿನಲ್ಲಿಯೂ ಹೊಗೆಯು ಹಬ್ಬಿಕೊಂಡಿತು. ಭುಗಭುಗನೆ ನಾನಾಮಾರ್ಗಗಳಿಂದಲೂ ಬೆಂಕಿಯು ಕಿಡಿಯನ್ನುಗುಳಿತು, ಸೀತ್ಕಾರದಿಂದ ಸೀದು ಬೇಯುವ ಧ್ವನಿಯು ಧಗಧಗನೆ ದಾಳಿಯಿಟ್ಟಿತು, ತೆಗೆತೆಗೆದು ಬೆದರಿ ಓಡುವ ಗಂಡುಗಲಿಗಳ ತಂಡವನ್ನು ಮಹಾಜ್ವಾಲೆಯು ಮುತ್ತಿಕೊಂಡಿತು. ಅರ್ಜುನನ ಸೈನ್ಯದಲ್ಲಿ ಅಧಿಕವಾದ ಅಬ್ಬರವೂ ಅತುಳವಾದ ಭಯವೂ, ಅನಂತವಾದ ತಾಪವೂ, ಅವಧಿಯಿಲ್ಲದ ಆತಂಕವೂ ಉಂಟಾಯಿತು. ಇದೆಲ್ಲವನ್ನೂ ಕಂಡು ಅರ್ಜುನನು ಶಿವಶಿವಾ ! ನಮ್ಮ ಸೇನೆಗೆ ಇಂತಹ ಅದ್ಭುತವು ಹೇಗೆ ಬಂದಿತು. ಧರ್ಮರಾಯನ ಯಾಗವು ಹೇಗೆ ನಡೆದೀತು ? ಕಂಗೆಟ್ಟು ಕಳವಳಿಸುವ ನಮ್ಮ ಸೇನೆಯು ಶೌರ್ಯದಿಂದಕಾದಿ ಗೆಲ್ಲುವುದು ಹೇಗೆ ಇದೆಲ್ಲವೂ ನನಗೆ ಅಸಾಧ್ಯವಾಗಿ ತೋರುವುದಲ್ಲಾ ! ಆಗಲಿ ! ಹಿಂದೆ ನನಗೆ ಗಾಂಡೀವವನ್ನಿತ್ತ ಯಜ್ಞೇಶ್ವರನನ್ನು ಅಗ್ನಿಸೂಕ್ತದಿಂದ ಧ್ಯಾನಿಸಿ ಆತನಿಂದ ನನ್ನ ಶ್ರಮವನ್ನು ಹೋಗಲಾಡಿಸಿಕೊಳ್ಳುವೆನೆಂದು ಯೋಚಿಸಿ ಮಿಂದು ಮಡಿಯುಟ್ಟು ಶುಚಿರ್ಭೂತನಾಗಿ, ವೇದೋಕ್ತಮಾರ್ಗದಿಂದ ಅಗ್ನಿಸೂಕ್ತವನ್ನು ಪಠಿಸುತ್ತ ತಲೆವಾಗಿ ನಮಸ್ಕರಿಸಿ, ಸ್ವಾಮಿಾ ! ನಿನ್ನ ತೃಪ್ತಿಗಾಗಿ ನಾವು ಮಾಡುವ ಈ ಯಾಗಕ್ಕೆ ನೀನು ವಿಘ್ನರೂಪನಾಗಿ ನಿಲ್ಲಬಹುದೆ ? ಅಷ್ಟದಿಕ್ಪಾಲಕರೊಡನೆ ಸಕಲ ದೇವತೆಗಳಿಗೂ ಕೊಡುವ ಹವಿರ್ಭಾಗಗಳನ್ನು ಸ್ವೀಕರಿಸುವವನು ನೀನೆ ಅಲ್ಲವೆ ? ಮೂರು ಲೋಕಗಳಲ್ಲಿಯೂ ಇರುವ ಚರಾಚರ ವಸ್ತುಗಳಲ್ಲಿ ವ್ಯಾಪಿಸಿರುವವನು ನೀನೆ ಅಲ್ಲವೆ ? ನಿನ್ನನ್ನು ಬಿಟ್ಟರೆ ಅನ್ಯರಾದ ದೇವತೆಗಳಿರುವರೆ ? ಕರುಣಾನಿಧಿಯಾದ ನೀನು ಮೊದಲು ಕರುಣದಿಂದ ಗಾಂಡೀವವನ್ನು ಕೊಟ್ಟೆ ! ನನ್ನ ಹೆಂಡತಿಯಾದ ದ್ರೌಪದಿ ನಿನಗೆ ಮಗಳಾಗಬೇಕು. ಹೀಗಿರುವಲ್ಲಿ ನಾವು ನಿನಗನ್ಯರೆ ? ನಮ್ಮ ಯಜ್ಞಕ್ಕೆ ನೀನು ಸಹಾಯಕನಲ್ಲವೆ ? ದಯಮಾಡಿ ರಕ್ಷಿಸು ಎಂದು ಬೇಡಿಕೊಂಡನು. ಆಗ ಅಗ್ನಿಯು ಆತನ ಭಕ್ತಿಗೆಮೆಚ್ಚಿ ಅಯ್ಯಾ ! ನೀನು ಹೇಳಿದುದು ನಿಜ ಶ್ರೀಕೃಷ್ಣನೇ ನಿನಗೆ ಸದಾ ಸುಪ್ರಸನ್ನನಾಗಿ ಹತ್ತಿರದಲ್ಲಿರುತ್ತಿರುವಲ್ಲಿ ಈ ಅಶ್ವಮೇಧವನ್ನು ಮಾಡಬೇಕೆಂಬ ಯೋಚನೆಯೇಕೆ ? ಇದರಿಂದ ಅಮೃತವನ್ನು ಕುಡಿಯಲಾರದೆ ನೀರುಮಜ್ಜಿಗೆಯನ್ನು ಅರಸಿದವನಂತೆ ಮೂಢನಾಗುವೆಯಲ್ಲವೆ ? ಎಂದು ಹೇಳಲು ಪಾರ್ಥನು ಸ್ವಾಮಿಾ ! ತಾವು ಹೇಳುವುದು ನಿಜವೇ ಸರಿ. ಶ್ರೀಹರಿಯ ಸಂದರ್ಶನದಿಂದಲೆ ಸಕಲಾರ್ಥಗಳೂ ಕೈಗೂಡಿದರೂ ಸ್ವಧರ್ಮವನ್ನು ಮಿಾರಿ ನಡೆಯಲಾಗುವುದೆ ? ಆಗದು ನಮಗೆ ಶ್ರೀಹರಿಯೇ ಯಾಗವನ್ನು ಮಾಡುವಂತೆ ಆಜ್ಞೆ ಮಾಡಿದುದರಿಂದ

ನಾವು ಇದನ್ನು ಕೈಕೊಂಡೆವು ಎಂದು ಪ್ರಾರ್ಥಿಸಿದನು. ಆಗ ಅಗ್ನಿಯು ಅರ್ಜುನನಿಗೆ ಅಭಯವನ್ನಿತ್ತು ತನಗೆ ಮಾವನಾದ ನೀಲಧ್ವಜನನ್ನು ಕರೆದು ಇನ್ನು ಅರ್ಜುನನೊಡನೆ ಯುದ್ಧ ಮಾಡಬೇಡ ಕುದುರೆಯನ್ನೊಪ್ಪಿಸು, ಸೇನೆಯು ಮಾಹಿಷ್ಮತಿಗೆ ಹೊರಡಲಿ, ಎಂದು ಸಮಾದಾನಮಾಡಿ ಒಡಂಬಡಿಸಿದನು. ಅರ್ಜುನನು ನಾರಾಯಣಾಸ್ತ್ರವನ್ನು ಹೊಡೆದು ಉರಿಯನ್ನು ಹೋಗಲಾಡಿಸಿ ತನ್ನ ಸೇನೆಯವರಿಗೆ ತಂಪುಮಾಡಿ, ತಣ್ಣಸವನ್ನು ಬೀರಿದನು. ಅಷ್ಟುಹೊತ್ತಿಗೆ ದಿನಮಣಿಯಾದ ಸೂರ್ಯನು ಪಶ್ಚಿಮಾಂಗನೆಯ ಬೈತಲೆಯ ಮಣಿಯಂತೆ ರಾಜಿಸುತ್ತ ಅಸ್ತಗಿರಿಯ ಶಿಖರದಲ್ಲಿ ಕಂಗೊಳಿಸುತ್ತಿರಲು, ಹಕ್ಕಿಗಳು ಗೂಡುಗಳನ್ನು ಸೇರಿದವು, ಗೂಬೆಗಳು ಕಣ್ದೆರೆಯಲಾರಂಭಿಸಿದವು, ಕಮಲಗಳು ಮರಿದುಂಬಿಗಳನ್ನು ಸೆರೆಯಾಗಿ ಮಾಡಿಕೊಂಡು ದಳಗಳೆಂಬ ಬಾಗಿಲುಗಳನ್ನು ಮುಚ್ಚಿಕೊಂಡವು, ನೈದಿಲೆಗಳು ಅರಳಿದವು, ನಕ್ಷತ್ರಗಳು ಗಗನಮಂಡಲದಲ್ಲಿ ಹೊಳೆದವು, ಚಕ್ರವಾಕಗಳು ವಿರಹದಿಂದ ಕಂಗೆಟ್ಟವು, ಕತ್ತಲೆಯು ಮೂರುಲೋಕವನ್ನು ಅವತರಿಸಿಕೊಂಡಿತು ಮನೆಮನೆಗಳಲ್ಲಿಯೂ ದೀಪಗಳು ಮನೋಹರವಾಗಿ ಕಂಗೊಳಿಸುತ್ತಿದ್ದವು.

ಬಳಿಕ ನೀಲಧ್ವಜನು ಭಂಗದಿಂದ ಕಂಗೆಟ್ಟು ತನ್ನ ಪಟ್ಟಣಕ್ಕೆ ಹೊರಡಲು, ಅರ್ಜುನನು ನಾರಾಯಣಾಸ್ತ್ರದಿಂದ ಸೇನಾಜನರಿಗೆ ಸುಖವನ್ನುಂಟುಮಾಡಿ ಯಜ್ಞಾಶ್ವದ ಸುತ್ತಲೂ ಪಾಳೆಯವನ್ನು ಬಿಡಿಸಿ, ಅಗ್ನಿಯನ್ನು ಬೇಡಿಕೊಂಡು ಅಟ್ಟಹಾಸದಿಂದ ದೇವಪುರನಿಲಯ ಲಕ್ಷ್ಮೀಪತಿಯ ಪಾದಕಮಲಗಳನ್ನು ಧ್ಯಾನಿಸುತ್ತಿದ್ದನು ಎಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಎಂಟನೆಯ ಸಂಧಿ ಸಂಪೂರ್ಣಂ. ಶ್ರೀ. ಶ್ರೀ. ಶ್ರೀ.

## ಒಂಭತ್ತನೆಯ ಸಂಧಿ.

ಅಗ್ನಿ ನೀಲಧ್ವಜನಿಗೆ ಅಳಿಯನಾದ ಕಥೆ ಅರ್ಜುನನಿಗೆ ಗಂಗಾಶಾಪ ಬಂದುದು.

ಎಲೈ ಜನಮೇಜಯರಾಯನೇ ! ಕೇಳು. ಹೀಗೆ ಅಗ್ನಿದೇವನ ಆಜ್ಞೆಯಂತೆ ಅರಮನೆಯನ್ನು ಹೊಕ್ಕು ಅರ್ಜುನನಿಗೆ ಕುದುರೆಯನ್ನೊಪ್ಪಿಸಬೇಕೆಂದು ನೀಲಧ್ವಜನು ತನ್ನಾಪ್ತಮಂತ್ರಿಗಳೊಡನೆ ಯೋಚಿಸುತ್ತಿದ್ದನು.

ವಾರ್ತೆಯನ್ನು ಕೇಳಿ ನೀಲಧ್ವಜನ ಹೆಂಡತಿಯಾದ ಜ್ವಾಲೆಯು ದಿಗ್ಗನೆದ್ದು ತನ್ನ ಗಂಡನಿರುವ ಓಲಗಶಾಲೆಗೆ ಬಂದು ಪ್ರಾಣಕಾಂತ ! ನೀನು ಹೆದರಬೇಡ. ಅರ್ಜುನನಿಗೆ ಕುದುರೆಯನ್ನೊಪ್ಪಿಸಬೇಡ ತಡಿ ನನ್ನ ಮಾತನ್ನು ಕೇಳು. ಕೇಳದಿದ್ದರೆ ಬಹಳ ಅನರ್ಥಕ್ಕೆ ಗುರಿಯಾಗುವೆ ? ಎಂದು ಅಡ್ಡಿಮಾಡಿದಳು.

ಬಳಿಕ ಇದುವರೆಗೂ ಕಥೆಯನ್ನು ಲಾಲಿಸಿದ ಜನಮೇಜಯರಾಯನು ತನ್ನ ಮನಸ್ಸಿನಲ್ಲಿ ಸಂದೇಹಪಟ್ಟು ಜೈಮಿನಿಯನ್ನು ಕುರಿತು ಸ್ವಾಮಿ ! ಅಗ್ನಿಯು ಯಾವ ಕಾರಣದಿಂದ ನೀಲಧ್ವಜನಿಗೆ ಅಳಿಯನಾದನು ? ಹಾಗೆ ಅಳಿಯನಾದರೂ ಆತನ ಮನೆಯಲ್ಲಿಯೆ ಇದ್ದುಕೊಂಡು, ಅವನನ್ನು ಪಾಲಿಸಲು ಕಾರಣವೇನು ? ಅಗ್ನಿದೇವನನ್ನೇ ಮದುವೆಯಾಗಲು ನೀಲಧಜನ ಮಗಳು ಏನುಮಾಡಿದಳು ಇದೆಲ್ಲವನ್ನೂ ವಿಸ್ತರಿಸಿ ಹೇಳು, ಎಂದು ಬೆಸಗೆ ಂಡನು ಆಗ ಜೈಮಿನಿಋಷಿಯು ಇಂತೆಂದು ಹೇಳತೊಡಗಿದನು.

ಹಾಗಾದರೆ ಹೇಳುವೆನು ಕೇಳು ರಾಯ ! ಧೊರೆಯಾದ ನೀಲಧ್ವಜನು ತನ್ನ ಪಟ್ಟದರಸಿಯಾದ ಜ್ವಾಲೆ ಎಂಬುವಳಲ್ಲಿ ರೂಪ ಗುಣ ಶೀಲ ಸುಂದರಿಯಾದ ಸ್ವಾಹೆಯೆಂಬ ಮಗಳನ್ನು ಪಡೆದು ಅತಿಶಯವಾದ ಅಕ್ಕರೆಯಿಂದ ಸಲಹುತ್ತಿದ್ದನು ಆ ಮಗಳಿಗೆ ಅಂಗಸೌಂದರ್ಯವನ್ನು ಹೆಚ್ಚಿಸುವ ಅಗ್ಗಳವಾದ ಪ್ರಾಯವು ಬಂದಿತು ಅದನ್ನು ಕಂಡು ಧೊರೆಯಾದ ನೀಲಧ್ವಜನು ಪ್ರಪಂಚದಮೇಲಿರುವ ಅರಸುಮಕ್ಕಳ ರೂಪುಗಳನ್ನು ಅಂದವಾದ ಪಟಗಳಲ್ಲಿ ಬರೆಸಿ, ತರಿಸಿ, ಅದನ್ನು ಮಗಳಿಗೆ ತೋರಿಸಿ ಇವರಲ್ಲಿ ನಿನಗಾವನು ಗಂಡನಾದರೆ ತೃಪ್ತಳಾಗುವೆ ಹೇಳು ಎಂದು ಕೇಳಿದನು. ಯಕ್ಷ, ರಾಕ್ಷಸ, ಕಿನ್ನರ, ಕಿಂಪುರುಷ, ಗರುಡ, ಗಂಧರ್ವ ನಾಗರುಗಳನ್ನೂ ಭೂಮಂಡಲದ ಧೊರೆಮಕ್ಕಳನ್ನೂ, ಹರಿಹರಬ್ರಹ್ಮಾದಿಗಳನ್ನೂ, ವಸಂತಮನ್ಮಥರನ್ನೂ, ಅಷ್ಟದಿಕ್ಪಾಲಕರನ್ನೂ ತನ್ನ ದೇದೀಪ್ತಾಂಗದಿಂದ ಜರಿಯುತ್ತ ಅಷ್ಟದಿಕ್ಪಾಲಕರ ನಡುವೆ ಅಟ್ಟಹಾಸದಿಂದ ಕುಳಿತಿರುವ ಅಗ್ನಿದೇವನನ್ನು ಆ ಬಾಲೆಯು ತನಗೀತನೇ ಗಂಡನಾಗಬೇಕೆಂದು ಕೋರಿದಳು. ಅದನ್ನು ಕೇಳಿ ನೀಲಧ್ವಜನು ಅಮ್ಮಾ ! ನೀನು ಮೂರುಲೋಕದವರಿಗೂ ಅಸದಳವಾದುದನ್ನು ಯೋಚಿಸಿದೆಯಲ್ಲ ! ಇದನ್ನು ಮಾಡುವುದು ಹೇಗೆ ಎಂದು ಚಿಂತಿಸುತ್ತಿರಲು, ಸ್ವಾಹಾದೇವಿಯು ಕುಪಿತಳಾಗಿ ತನ್ನ ತಂದೆಯನ್ನು ಜರಿದು ಹೊರನೂಕಿ, ಅಲ್ಲಿಂದ ಹೊರಟು ಪುರದ ಬಹಿರುದ್ಯಾನದಲ್ಲಿ ಹರಿಯುವ ನರ್ಮದಾ ನದಿಯಲ್ಲಿ ಮಿಂದು ಭಕ್ತಿಯಿಂದ ಅಗ್ನಿದೇವನನ್ನು ಧ್ಯಾನಿಸುತ್ತಿದ್ದಳು.

ಹೀಗೆ ಧ್ಯಾನಿಸುತ್ತಿರುವ ಸ್ವಾಹೆಯ ಭಕ್ತಿಗೆಮೆಚ್ಚಿ, ಅಗ್ನಿಯು ಬ್ರಾಹ್ಮಣವೇಷದಿಂದ ನೀಲಧ್ವಜನ ಅರಮನೆಗೆ ಬರಲು ಆತನು ಬಂದ ಬ್ರಾಹ್ಮಣನನ್ನು

ಭಕ್ತಿಯಿಂದ ಸತ್ಕರಿಸಿ, ಆ ನ ಆಶಿಷವನ್ನು ಕೈಕೊಂಡು ಸ್ವಾಮಿಾ ! ತಾವು ಯಾವ ಕಾರ್ಯಾರ್ಥವಾಗಿ ನನ್ನ ಮನೆಗೆ ದಯಮಾಡಿದಿರಿ ? ಹೇಳಬೇಕೆಂದು ಕೇಳಿದನು. ಬ್ರಾಹ್ಮಣನು ಅಯ್ಯಾ ! ನಾನು ಕನ್ಯಾರ್ಥಿಯಾಗಿ ಬಂದಿರುವೆನು ನಿನ್ನ ಮಗಳನ್ನು ನನಗೆ ಕೊಟ್ಟು ಮದುವೆಮಾಡು ಸಂದೇಹಪಡಬೇಡ. ಬ್ರಾಹ್ಮಣನಾದವನು ಕ್ಷತ್ರಿಯ ಪುತ್ರಿಯನ್ನು ವರಿಸಬಹುದೆಂದು ಶಾಸ್ತ್ರ ಉಂಟು ಎಂದು ಹೇಳಿದನು. ಬಳಿಕ ನೀಲಧ್ವಜನು ಅಯ್ಯಾ ! ನೀನು ಹೇಳುವುದು ನಿಜ ಕ್ಷತ್ರಿಯನಾದವನು ಬ್ರಾಹ್ಮಣನಿಗೆ ಕನ್ಯಾದಾನವನ್ನು ಮಾಡಬಹುದು. ಆದರೆ ನನ್ನ ಮಗಳು ಅಗ್ನಿಯನ್ನು ಹೊರತಾಗಿ ಮತ್ತಾರನ್ನೂ ವರಿಸಲೊಲ್ಲೆನೆಂದು ಶಪಥಮಾಡಿರುವಳು ಆದಕಾರಣ ನಿನ್ನ ಇಷ್ಟಾರ್ಥವನ್ನು ನಾನು ನೆರವೇರಿಸಲು ಸಮರ್ಥನಲ್ಲ ! ಎಂದು ನುಡಿದನು ಹವ್ಯವಾಹನನು ಎಲೈ ರಾಜೇಂದ್ರನೇ ! ಇನ್ನು ಯೋಚಿಸಬೇಡ ! ನಿನ್ನ ಮಗಳು ಯಾವ ದೇವನನ್ನು ವರಿಸಬೇಕೆಂದು ಬಯಸಿರುವಳೋ ಆತನೇ ನಾನು ಬ್ರಾಹ್ಮಣರೂಪದಿಂದ ಇಲ್ಲಿಗೆ ಬಂದಿರುವೆನೆಂದು ತಿಳಿ ! ನಾನೆ ಅಗ್ನಿಪುರುಷನು ಸಂತೋಷದಿಂದ ನಿನ್ನ ಮಗಳ ಅಭಿಲಾಷೆಯನ್ನು ನೆರವೇರಿಸು ! ಎಂದನು.

ಆಬಳಿಕ ಸ್ವಾಹಾಯುಕ್ತನಾಗಿ ನೀಲಧ್ವಜನು ಅಗ್ನಿಯನ್ನು ಪರೀಕ್ಷಿಸಿ, ಯಜ್ಞಪುರುಷನೆ ಹೌದೆಂದು ನಂಬಿ, ಆತನನ್ನು ಕುರಿತು ಸ್ವಾಮಿಾ ! ಆದರೆ ನಿಮಗೆ ನನ್ನ ಮಗಳನ್ನು ಕೊಟ್ಟು ಮದುವೆಮಾಡುವೆ ನೀವಾದರೋ ಈ ದಿನ ಮೊದಲ್ಗೊಂಡು ನನ್ನ ಮನೆಯಲ್ಲೇ ಇದ್ದುಕೊಂಡು ನನ್ನನ್ನು ನನ್ನ ಪ್ರಜೆಗಳನ್ನು ಸುಖದಿಂದಸಂರಕ್ಷಿಸುತ್ತ, ನನ್ನ ಪಟ್ಟಣಕ್ಕೆ ಹೊರಕೋಂಟೆಯಂತೆ ನಿರತ ರಕ್ಷಕನಾಗಿರಬೇಕೆಂದು ಬೇಡಿಕೊಂಡನು. ಆ ಅರ್ಥಕ್ಕೆ ಅಗ್ನಿಯು ಒಪ್ಪಿದುದರಿಂದ ನೀಲಧ್ವಜನು ತನ್ನ ಮಗಳನ್ನು ಶಾಸ್ತ್ರವಿಧಿಯಂತೆ ಅಗ್ನಿದೇವನಿಗೆ ಮದುವೆಮಾಡಿದನು ಅಂದಿನಿಂದಲೂ ಕ್ಷೀರಸಾಗರದಲ್ಲಿ ಶ್ರೀಹರಿಯೂ, ಹಿಮಾಲಯದಲ್ಲಿ ಶಿವನೂ, ನೆಲೆಗೊಂಡಿರುವಂತೆ ಈ ಅಗ್ನಿಪುರುಷನು ಮಾಹಿಷ್ಮತೀ ನಗರದಲ್ಲಿ ವಾಸಿಸುತ್ತಿರುವನು.

ಎಲೈ ಜನಮೇಜಯರಾಯನೇ ! ಈ ಕಥೆಯನ್ನು ಕೇಳಲು ಆತುರವಾಗಿದ್ದ ನಿನ್ನ ಮನಸ್ಸನ್ನು ಸಮಾಧಾನಪಡಿಸಿಕೊಂಡೆಯಾ ? ಇನ್ನು ಮುಂದಿನ ಕಥೆಯನ್ನು ಹೇಳುವೆನು ಕೇಳು. ಬಳಿಕ ನೀಲಧ್ವಜನು ಹೆಂಡತಿಯ ಮಾತನ್ನು ಮಿಾರಲಾರದೆ ಅರ್ಜುನನೊಡನೆ ಯುದ್ಧಮಾಡುವೆನೇ ಹೊರತು ಕುದುರೆಯನ್ನು ಕೊಡಲೊಲ್ಲೆನೆಂದು ಶಪಥಮಾಡಿದನು. ಅಷ್ಟುಹೊತ್ತಿಗೆ ತನ್ನ ಹಗೆಯಾದ ಕತ್ತಲೆಯು ಆಕಾರವನ್ನು ಹೊಂದಿದ್ದರೆ ಸೂರ್ಯನು ಮುಳುಗುವನೆಂದು ಹೆದರಿ ಕನ್ನೈದಿಲೆಗಳು ಬಾಡಿದವು, ಅದನ್ನು ಕಂಡು ನಗುವಂತೆ ತಾವರೆಗಳು ಅರಳಿ

ದವು, ಜಾರೆಯರ ತಂಡದಲ್ಲಿ ಓಡಾಡುವ ಕುಂಟಣಿಯಂತೆ ಕೋಳಿಗಳು ಕೂಗಿದವು, ಮೊದಲಿನಹಾಗೆ ವಿರಹವ್ಯಥೆಯಿಂದ ಕೊರಗದೆ ಚಕ್ರವಾಕ ಪಕ್ಷಿಗಳು ನೆರೆದವು, ದುಂಬಿಗಳು ಝೇಂಕರಿಸುತ್ತಿದ್ದವು, ಸೂರ್ಯನು ಎಳೆಬಿಸಿಲ ಹೊಂಬಣ್ಣವನ್ನು ಭೂಮಿಗೆ ಚೆಲ್ಲುತ್ತ ಪೂರ್ವಾಚಲದ ಶಿಖರದಲ್ಲಿ ಉದಯಿಸಿದನು. ಇತ್ತಲಾದರೋ ಅರ್ಜುನನು ಸೂರ್ಯೋದಯಕ್ಕೆ ಮುಂಚೆ ತನ್ನ ಚತುರಂಗಸೇನೆಯೊಡನೆ ಮಾಹಿಷ್ಮತೀ ನಗರವನ್ನು ಮುತ್ತಿದನು. ನೀಲಧ್ವಜನು ಸರ್ವಸನ್ನಾಹದಿಂದ ತನ್ನ ಸೇನೆಯೊಡನೆ ಅರ್ಜುನನ್ನು ಮುತ್ತಿದನು. ಸೂರ್ಯನು ಮುಳುಗಿದಮೇಲೆ ಹಾರಾಡುವ ಮಿಂಚುಹುಳುವಿಗೆ ಕತ್ತಲೆಯು ಮಾಯವಾಗುವುದುಂಟೆ? ಅಗ್ನಿಜ್ವಾಲೆಗೆ ಹೆದರದವನಾದ ಅರ್ಜುನನು ನೀಲಧ್ವಜನ ಅಂಗವಣೆಯನ್ನು ಲೆಕ್ಕಿಸುವನೆ? ವೀರಾವೇಶದಿಂದ ಕಾದಿ ಕ್ಷಣಮಾತ್ರದಲ್ಲಿ ನೀಲಧ್ವಜನ ಸುತ ಸಹೋದರ ಬಾಂಧವರಿಂದೊಡಗೂಡಿದ ಸೇನೆಯನ್ನು ಚದರಿಸಿ ನೀಲಧ್ವಜನನ್ನು ಗಾಂಡೀವದಿಂದ ಹೊಡೆದು ದಿಂಡುಗೆಡಹಿ ಅರ್ಜುನನು ಆರ್ಭಟಿಸಿದನು. ಕೂಡಲೆ ಸಾರಥಿಯು ರಥವನ್ನು ನಡೆಸಿಕೊಂಡು ಮಾಹಿಷ್ಮತೀ ನಗರವನ್ನು ಸೇರಿದನು, ಕೋಟೆಕೊತ್ತಳಗಳ ಬಾಗಿಲುಗಳನ್ನು ಹಾಕಿದರು, ವೀರಭಟರೆಲ್ಲರೂ ಕೈಗುಂದಿ ಮರೆಹೊಗಲರಿಯದೆ ಬೆರಗಾದರು, ಪಟ್ಟಣದಲ್ಲಿಯೂ, ಅರಮನೆಯಲ್ಲಿಯೂ, ಗಜಬಜಿಯುಂಟಾಯಿತು. ಬಳಿಕ ಶೈತ್ಯೋಪಚಾರದಿಂದ ಕಣ್ದೆರೆದ ನೀಲಧ್ವಜನು ತನ್ನ ಮಕ್ಕಳು ಅಳಿದ ವ್ಯಸನವನ್ನು ಸಹಿಸಲಾರದೆ ಹೆಂಡತಿಯನ್ನು ನೋಡಿ, ಎಲೈ ಪ್ರತಿಕೂಲೆಯಾದ ಪ್ರಚಂಡಿಯೇ! ನಿನ್ನ ದುಷ್ಟತನದಿಂದ ನಮಗಿಂತಹ ಕಷ್ಟಬಂದಿತು, ಮಕ್ಕಳು ಸತ್ತರು, ಮೈಗುಂದಿತು, ಮಾನಹಾನಿಯಾಯಿತು, ಮಹಾಪರಾಧವು ಕೈಗೂಡಿತು, ನೀನೆ ನನ್ನ ಭಾಗದ ಪ್ರತಿಕೂಲದೇವತೆ ಇನ್ನು ನನ್ನ ಮನೆಯಲ್ಲಿರಬೇಡ ಹೋಗು ಎಂದು ಗದರಿ ಬಹಳವಾಗಿ ಬೈದು ಹೆಂಡತಿಯನ್ನು ಹೊರನೂಕಿ ಅರ್ಜುನನನ್ನು ಕಾಣಲನುವಾಗಿ ಕುದುರೆಸಹಿತ ಧನಕನಕ ವಸ್ತುವಾಹನಗಳನ್ನು ತೆಗೆದುಕೊಂಡು ಬಂದು ಅರ್ಜುನನನ್ನು ಕಾಣಿಸಿಕೊಂಡು ಕುದುರೆಯನ್ನೊಪ್ಪಿಸಿದನು. ನೀಲಧ್ವಜನನ್ನು ಮರ್ಯಾದೆಯಿಂದ ಸತ್ಕರಿಸಿ ಕಿರೀಟಿಯು ಚತುರಂಗಸೇನೆಯೊಡನೆ ದಕ್ಷಿಣಾಭಿಮುಖವಾಗಿ ನಡೆದು ವಿಜಯಯಾತ್ರೆಗೆ ಪ್ರಯಾಣಮಾಡಿದನು, ನೀಲಧ್ವಜನು ಆತನ ಅಂಗರಕ್ಷಕನಾಗಿ ಅರ್ಜುನನ ಬೆಂಬಳಿಯಲ್ಲಿ ನಡೆದು ಬಂದನು. ಜ್ವಾಲೆಯು ಆಹಾ! ಆಳುವ ಗಂಡನೂ, ಅರಸಾಗುವ ಮಕ್ಕಳೂ, ಅಷ್ಟೈಶ್ವರ್ಯದ ಸಂತೋಷವೂ ಇಲ್ಲವಾದಬಳಿಕ ಈಹಾಳು ಅರಮನೆಯಲ್ಲಿದ್ದು ಫಲವೇನು, ನಾನೆಂದಿಗೂ ಇಲ್ಲಿರಲೊಲ್ಲೆನೆಂದು ತನ್ನ ತಮ್ಮನಾದ ಉನ್ಮುಖನ ಬಳಿಗೆ ಬಂದು ತನ್ನ ಕಷ್ಟವನ್ನು ಹೇಳಿಕೊಂಡಳು. ಸತ್ಯವಂತನಾದ ಉನ್ಮು

ಖನು ಅಕ್ಕನನ್ನು ಆದರಿಸಿ ಬಂದಕಾರಣವೇನೆಂದು ಕೇಳಲು, ವತ್ಸ! ಪಾಂಡು ಪುತ್ರನಾದ ಅರ್ಜುನನು ಯುದ್ಧದಲ್ಲಿ ನನ್ನ ಮಕ್ಕಳನ್ನು ಕೊಂದು ನನ್ನ ಗಂಡನನ್ನು ಸೋಲಿಸಿ, ಸರ್ವಸ್ವವನ್ನು ತೆಗೆದುಕೊಂಡು ನೀಲಧ್ವಜನೊಡನೆ ವಿಜಯಯಾತ್ರೆಗೆ ಹೊರಟುಹೋದನು. ಆದಕಾರಣ ಆ ಅರ್ಜುನನನ್ನು ಕೊಲ್ಲುವುದಕ್ಕೆ ಉಪಾಯವನ್ನು ಹುಡುಕಬೇಕೆಂದು ನಾನು ನಿನ್ನ ಬಳಿಗೆ ಬಂದೆನು. ನೀನೆ ಆತನ ತಲೆಯನ್ನು ತೆಗೆಯಲು ತಕ್ಕವನು ನನ್ನನ್ನು ರಕ್ಷಿಸು ಎಂದು ಬೇಡಿಕೊಳ್ಳಲು, ಕೃಷ್ಣಪ್ರಸಾದದಿಂದ ತ್ರಿಲೋಕವೀರನಾಗಿ ಮೆರೆ ಯುವ ಅರ್ಜುನನಲ್ಲಿ ಹಗೆತನವನ್ನು ಮಾಡಬಹುದೆ? ಅರ್ಜುನನು ಅಲ್ಪ ಸಾಹಸಿಗರಾದ ನಮ್ಮಂಥವರಿಗೆ ಸದರವಾಗಿ ಸೋಲುವನೆ? ಹಿಂದೆ ರಾಮನ ಶೌರ್ಯವನ್ನು ಕಂಡು ಹೊಟ್ಟೆಯನ್ನು ಹಿಡಿಯಲಾರದೆ ಅಜ್ಞನಾದ ದಶಕಂಠನಿಗೆ ಉಪಾಯವನ್ನು ಹೇಳಿದ ಶೂರ್ಪಣಖಿಯಂತೆ ನೀನು ನನ್ನೆಡೆಗೆ ಬಂದೆಯಾ? ನಿನ್ನ ಮಾಯದ ಮಾತುಗಳಿಗೆ ನಾನೆಂದಿಗೂ ಮರುಳಾಗುವನಲ್ಲ! ಹೋಗು ಎಂದು ಗರ್ಜಿಸಿದನು, ಜ್ವಾಲೆಯು ಅವನನ್ನು ಬೈದು ಅಧಿಕವಾಗಿ ಶಪಿಸುತ್ತ ಆತನ ಅರಮನೆಯಿಂದ ಹೊರಟುಬರುತ್ತ ಮಧ್ಯಮಾರ್ಗದಲ್ಲಿ ಗಂಗಾನದಿಯನ್ನು ಕಂಡಳು. ಆ ಗಂಗಾನದಿಯ ಸೊಬಗನ್ನು ನೋಡಿ, ಭಕ್ತಿವಾತ್ಸಲ್ಯದಿಂದ ತನ್ನಲ್ಲಿ ಸ್ನಾನಮಾಡಿದ ಮಹನೀಯರಿಗೆ ಇಂದ್ರಪದವಿಯನ್ನು ಕೊಡುವೆನೆಂಬಂತೆ ಮೊರೆಯುತ್ತಿರುವ ಈ ನದಿಯ ನೀರು ನನಗೆ ಸೋಂಕದಂತೆ ನನ್ನನ್ನು ಹೊರ ಹಾಯಿಸುವ ಧರ್ಮಾತ್ಮರು ಯಾರಾದರೂ ಉಂಟೆ ಎಂದು ಬಾಯ್ಬಿಟ್ಟು ಗೋಳಾಡುತ್ತಿರುವ ಜ್ವಾಲೆಯನ್ನು ಕಂಡು ನಾವಿಕರು ಇಂತೆಂದರು.

ಪ್ರಯತ್ನಪೂರ್ವಕವಾಗಲ್ಲದಿದ್ದರೂ ಕದಾಚಿತ್ತಾಗಿ ಒಂದು ತೊಟ್ಟು ನೀರು ಮೈಗೆತಾಕಿದರೆ ಮಹಾಪಾತಕಗಳೂ ಕೂಡ ನಾಶವಾಗುವಂಥ ಈ ಗಂಗೆ ಯಲ್ಲಿ ಸ್ನಾನಮಾಡಿದವನ ಪುಣ್ಯವು ಎಷ್ಟೆಂದು ಹೇಳೋಣ! ಆಹಾ! ಇಂತಪ್ಪ ಗಂಗಾತಟಕ್ಕೆ ಬಂದರೂ ನೀನು ನೀರನ್ನು ಮುಟ್ಟೆನೆಂದು ಹೇಳುವೆಯಲ್ಲ! ಇದಕ್ಕೆ ಕಾರಣವೇನು ಎಂದು ಕೇಳಲು ಜ್ವಾಲೆಯು ಅಯ್ಯಾ! ಲೋಕ ಪಾವನೆಯಾದ ಈ ಗಂಗೆಗೆ ಒಂದಾನೊಂದು ದೋಷ ಉಂಟಾಗಿದೆ. ನಾನು ಅದನ್ನು ನಿಮ್ಮೊಡನೆ ಹೇಳಲಾರೆ, ಗಂಗಾದೇವಿಯು ಪ್ರತ್ಯಕ್ಷವಾಗಿ ಬಂದರೆ ಹೇಳುವೆನು ಎಂದು ನುಡಿದಳು. ಆ ವಾಕ್ಯವನ್ನು ಕೇಳಿ, ಬ್ರಹ್ಮನ ಕಮಂ ಡಲುವಿನ ಅಗ್ರೋದಕವಾಗಿ, ಮಹಾವಿಷ್ಣುವಿನ ಪಾದಜಲವಾಗಿ ಮಹಾದೇವ ನಾದ ಈಶ್ವರನ ತಲೆಯನ್ನು ಆವರಿಸಿಕೊಂಡು ಪರಿಶುದ್ಧೆಯಾಗಿ ಲೋಕಪಾವನೆ ಯಾಗಿದ್ದರೂ, ಗಂಗೆಯು ಮೂರು ಲೋಕಗಳಲ್ಲಿಯೂ ಪ್ರಖ್ಯಾತಳಾಗಿದ್ದರೂ, ಅಪವಾದಕ್ಕೆ ಹೆದರದವರುಂಟೆ? ಎನ್ನುವಂತೆ ಕಮಲದಂತಿರುವ ಮುಖವೂ,

ತುಂಬಿಗಳಂತಿರುವ ಮುಂಗುರುಳೂ, ಮರಿಮೀನುಗಳಂತಿರುವ ಕಣ್ಣುಗಳೂ,
ದಕ್ಷಿಣಾವರ್ತ ಶಂಖದಂತಿರುವ ಕಂಠವೂ, ತಿಳಿನೀರಿನಂತಿರುವ ಲಾವಣ್ಯವೂ,
ಚಕ್ರವಾಕಗಳಂತಿರುವ ಕುಚಯುಗ್ಮಗಳೂ ಶೈವಾಲದಂತೆ ರಾಜಿಸುವ ಮೈ
ಸೊಬಗೂ, ಹಂಸಗಮನವನ್ನು ನಿರಾಕರಿಸುವ ಕಾಲುಗಳೂ ಗಂಭೀರವಾದ
ನಾಭಿಯಿಂದ ಕೂಡಿದ ಬಡನಡುವೂ, ಮಳಲು ದಿಣ್ಣೆಗಳಂತಿರುವ ಪೊರವಾರವೂ,
ತಾವರೆದಂಟಿನಂತೊಪ್ಪುವ ಕೋಮಲವಾದ ತೋಳುಗಳೂ ವಿರಾಜಿಸುತ್ತಿರಲು
ದಿವ್ಯರೂಪವನ್ನು ತಾಳಿ ಗಂಗಾದೇವಿಯು ಪ್ರತ್ಯಕ್ಷಳಾಗಿ ಬಂದು, ದೋಷ
ಗಳನ್ನು ನಾಶಮಾಡುವ ಪಾವನರೂಪೆಯೆಂದು ಮೂರು ಲೋಕದವರೂ ಸೇವಿ
ಸುತ್ತಿರುವಲ್ಲಿ ನನ್ನನ್ನು ದೂಷರೂಪಿಣಿಯೆಂದು ಹೇಳಲು ಕಾರಣವೇನು?
ಎಂದು ಜ್ವಾಲೆಯನ್ನು ಕೇಳಿದಳು. ಅಮ್ಮಾ! ನಾನು ನಿನ್ನನ್ನು ದೂಷಿಸ
ಬೇಕೆಂದು ಬಂದವಳಲ್ಲ. ಮಕ್ಕಳಿಲ್ಲದವಳನ್ನು ಮುಟ್ಟಬಾರದೆಂದು ಹೇಳುವ
ಮಹಾಮಹಿಮರ ನೀತಿಯನ್ನರಿತು ಹೇಳಿದೆನು ಎಂದು ನುಡಿದಳು. ಅದನ್ನು
ಕೇಳಿ ಗಂಗೆಯು ಕೋಪದಿಂದ ಕುದಿಯುತ್ತ ಭಾಗವತಶಿರೋಮಣಿಯಾಗಿ,
ಬಯಸಿದಾಗ ಮರಣವನ್ನು ಹೊಂದುವ ಭಾಗ್ಯವನ್ನು ಪಡೆದು ರಾಜಮಂಡಲಿ
ಯಲ್ಲಿ ಪೂಜ್ಯನಾಗಿ ಲೋಕವಿಖ್ಯಾತವಾದ ಶೌರ್ಯದಿಂದ ಮೆರೆಯುತ್ತಿರುವ
ಭೀಷ್ಮನು ನನ್ನ ಮಗನೆಂಬುದನ್ನು ಕಾಣೆಯಾ? ನನ್ನನ್ನು ಮಕ್ಕಳಿಲ್ಲದವಳು
ಎಂದು ನೀನು ಹೇಳಬಹುದೆ? ಛಿ! ಭ್ರಷ್ಟೆ ದೂರಹೋಗು ಎಂದು ಗದರಿ
ದಳು. ಬಳಿಕ ಜ್ವಾಲೆಯು ಅಮ್ಮಾ! ನೀನು ಹೇಳಿದುದು ನಿಜ. ದಾಯ
ಭಾಗಕ್ಕಾಗಿ ಕೌರವರೊಡನೆ ಯುದ್ಧಮಾಡುವ ಕಾಲದಲ್ಲಿ ಪಾಂಡುಪುತ್ರನಾದ
ಅರ್ಜುನನು ನಿನ್ನ ಮಗನಾದ ಭೀಷ್ಮನನ್ನು ಕೊಂದನಲ್ಲ. ನಿನಗೆ ಬೇರೆ ಮಕ್ಕ
ಳಾರು. ಅರ್ಜುನನು ಕೊಲ್ಲದಿದ್ದರೆ ನಿನ್ನ ಮಗನನ್ನು ಜಯಿಸುವವರಾರಿದ್ದರು.
ಕೋಪಿಸಬೇಡ ಸೈರಿಸು ಎಂದು ನಮಸ್ಕರಿಸಿದಳು

ಎಲೈ ಜನಮೇಜಯನೇ ಲಾಲಿಸು ಹಸಿಯ ಎಲೆಗಳಿಂದ ಕೂಡಿದ ಜೀವ
ವೃಕ್ಷವನ್ನು ನಿರ್ಜೀವವಾದ ಒಣಮರದ ಬೆಂಕಿಯು ಆವರಿಸಿಕೊಂಡು ಸುಡು
ವಂತೆ ಜ್ವಾಲೆಯ ಕೋಪದೊಡನೆ ಗಂಗೆಯ ರೋಷವೂ ಕೂಡಿತು. ಆ
ಗಂಗೆಯು ನನ್ನ ಮಗನಾದ ಭೀಷ್ಮನನ್ನು ಯುದ್ಧದಲ್ಲಿ ಕೊಂದವನು, ಆರು
ತಿಂಗಳೊಳಗಾಗಿ ತನ್ನ ಮಗನಿಂದಲೇ ತಾನು ಮಡಿದುಹೋಗಲಿ! ಎಂದು
ಶಾಪ ಕೊಟ್ಟು ಮಾಯವಾದಳು. ಇಷ್ಟಾದರೂ ಜ್ವಾಲೆಯು ತನ್ನ ಛಲವನ್ನು
ಬಿಡದೆ ಅರ್ಜುನನ ತಲೆಯನ್ನು ಕತ್ತರಿಸುವ ಕೂರಲಗಾಗಬೇಕೆಂದು ಗಂಗಾ
ತಟದಲ್ಲಿ ಅಗ್ನಿಪ್ರವೇಶಮಾಡಿ, ಅರ್ಜುನನ ಮಗನಾದ ಬಭ್ರುವಾಹನನ ಬತ್ತ
ಕೆಯನ್ನು ಸೇರಿ ಕಕ್ಕಸದ ನಿಡುಗಣೆಯಾಗಿ ಇರುತ್ತಿದ್ದಳು. ಲೋಕದಲ್ಲಿ

ಹೆಂಗಸರ ಛಲವು ಇಂಥದೆಂದು ಹೇಳುವುದಕ್ಕೆ ಸಾಧ್ಯವೆ? ಕ್ರೂರವಾದ ಶಾಪವನ್ನು ದೇವಗಂಗೆಯಿಂದ ಕೊಡಿಸಿ ಸಾಲದುದಕ್ಕೆ ತಾನೂ ಕೊಡಂಬಿನ ರೂಪವನ್ನು ವಹಿಸಿ ಜ್ವಾಲೆಯು ಅರ್ಜುನಾತ್ಮಜನಾದ ಬಭ್ರುವಾಹನನ ಬತ್ತಳಿಕೆಯನ್ನು ಸೇರಿದಳೆಂಬಲ್ಲಿ, ಹೆಂಗಸರ ಮಾಯಾಡಂಬರದ ಚಲವನ್ನು ಅರಿಯಬಲ್ಲವರಾರು? ಹೇಳು. ಇನ್ನು ಅರ್ಜುನನಿಗೆ ಶಾಪಬಂದಿತು ಆವನಿಗೆ ಮರಣ ತಪ್ಪದು, ಅವನು ಸತ್ತ ಬಳಿಕ ಚಂದ್ರವಂಶವು ಕೊನೆಗಾಣುವುದು, ಅರ್ಜುನನ ಅಳಿವನ್ನು ಸೈರಿಸದೆ ಪಾಂಡವರೆಲ್ಲರು ಮಡಿದುಹೋಗುವರು, ಮುಂದಿನ ಕಾರ್ಯವು ಹೇಗೆ ಆಗುವುದೋ ಕಾಣೆ, ಆದರೆ ಆಶ್ರಿತವತ್ಸಲನಾದ ನಮ್ಮ ದೇವಪುರದ ಲಕ್ಷ್ಮೀಕಾಂತನು ಹೇಗಾದರೂ ತಕ್ಕ ಉಪಾಯವನ್ನು ಮಾಡಿ, ಅಕ್ಕರೆಯಿಂದ ಸಲಹಿ ತನ್ನ ಭಾವನ್ಮೈದುನನ್ನು ಉಳಿಸದಿರಲಾರನೆಂದು ಇಂದ್ರಾದಿ ದೇವತೆಗಳು ಧೈರ್ಯದಿಂದ ಸಂತೋಷಿಸುತ್ತಿದ್ದರೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿ ಭಾರತ ಕಥಾ ಸಂಗ್ರಹದಲ್ಲಿ ಒಂಭತ್ತನೆಯ ಸಂಧಿ ಸಂಪೂರ್ಣಂ. ಶ್ರೀ. ಶ್ರೀ. ಶ್ರೀ.

## ಹತ್ತನೆಯ ಸಂಧಿ.

ಅಶ್ವವು ಶಿಲೆಯ ಮೇಲೆ ನಡೆತಂದು ನಡೆಗೆಡುವಿಕೆ.

ಕೇಳೈ ಜನಮೇಜಯರಾಯನೇ ಹೀಗೆ ಅರ್ಜುನನು ನೀಲಧ್ವಜನಿಂದ ಸತ್ಕೃತನಾಗಿ ಆತನನ್ನು ಮನ್ನಿಸಿ ತನ್ನ ಸೇನೆಯೊಡನೆ ದಕ್ಷಿಣಮುಖವಾಗಿ ಹೊರಟು ಬರಲು ಮಾರ್ಗದ ಮುಂಭಾಗದಲ್ಲಿ ದೇವತೆಗಳಿಗಾವಾಸಸ್ಥಾನವಾಗಿ ಕಿನ್ನರ ಕಿಂಪುರುಷ ಗಂಧರ್ವರ ವಿಲಾಸ ಮಂದಿರವಾಗಿ ದಿವ್ಯೌಷಧಿಗಳಿಂದ ರಮ್ಯವಾಗಿ, ಅಮೃತದಂತಿರುವ ತಿಳಿನೀರಿನಿಂದ ತೊಳತೊಳಗಿ, ಫಲಪುಷ್ಪ ಭಾರದಿಂದೊಗ್ಗಿ ತಳಿರಿಡಿದ ವೃಕ್ಷಲತಾದಿಗಳಿಂದ ಶೋಭಿಸುತ್ತ ಹುಲಿ, ಕರಡಿ ಸಿಂಹ, ಶಾರ್ದೂಲ, ಹುಲ್ಲೆ, ಶಿವಂಗಿ, ಚಮರಿ, ಕಡವೆ, ಕಾಡುಕೋಣ, ಕಾಳ ರಕ್ಕಸರುಗಳಿಗೆ ನೆಲೆಮನೆಯಾಗಿ ಶೋಭಿಸುವ ವಿಂಧ್ಯಾದ್ರಿಯು ಕಂಗೊಳಿಸಿತು. ಆ ಪರ್ವತದ ದುರ್ಗಮವಾದ ಮಾರ್ಗವು ಹರಿಭಕ್ತರಾದ ಪಾಂಡವರ ಸೈನಿಕರಿಗೆ ದಿವ್ಯಮಾರ್ಗವಾಗಿ ಪರಿಣಮಿಸಿತು. ಆಕಾಶವು ಭೂತಲಕ್ಕೆ ಇಳಿದು ಬಂದಿತೋ ಎನ್ನುವಂತೆ ಚತುರಂಗಸೈನ್ಯವೂ ಬೆಟ್ಟದ ಶಿಖರವನ್ನು ಹತ್ತಿತು. ಸಂದಣಿಯಿಂದ ಸೂರಗೊಂಡು ಬರುತ್ತಿರುವ ಸೇನಾ

ಮಧ್ಯದಲ್ಲಿದ್ದ ಕುದುರೆಯು ಹತ್ತುಯೋಜನ ವಿಸ್ತಾರವಾಗಿ ಬಿದ್ದಿರುವ ಒಂದು ಬಂಡೆಯನ್ನು ಕಂಡು, ಅದರಮೇಲೆ ಹೊರಳಿ ತನ್ನ ಮೈದೀಂಟೆಯನ್ನು ಹೋಗಲಾಡಿಸಿಕೊಳ್ಳಲು ಆ ಶಿಲೆಯಮೇಲೆ ಕಾಲಿಟ್ಟಿತು. ಆಗ ಕುದುರೆಯ ಕಾಲುಗಳು ಬೆಜ್ಜುಗಹಾಕಿದಂತೆ ಶಿಲೆಯಲ್ಲಿ ಹೂತುಕೊಂಡು. ದರಿದ್ರನಮನೋ ರಥದಂತೆ ಮುಂದೆ ನಡೆಯಲಾರದೆ ಹೋಯಿತು, ಸತ್ತವನಂತೆ ಸಕಲ ಲೀಲೆ ಗಳು ಅಡಗಿಹೋಯಿತು, ಆ ಬಂಡೆಯಲ್ಲಿ ಯಜ್ಞಾಶ್ವವು ಚಂದ್ರಮಂಡಲದಲ್ಲಿ ಕಾಣುವ ಕಳಂಕದಂತೆ ಅಡಗಿಹೋಗಲು, ಅದನ್ನು ಕಂಡು ದೂತರೋಡಿಬಂದು ಅರ್ಜುನನಿಗೆ ದೂರಿಕೊಂಡರು. ಅತನು ಕುದುರೆಯನ್ನೇಳಿಸುವುದಕ್ಕೆ ನಾನಾ ಪ್ರಯತ್ನಗಳನ್ನು ಮಾಡಿದರೂ ಸಫಲವಾಗದಿರಲು ಓಹೋ! ಇದು ಏನೋ ವಿಚಿತ್ರವಾಗಿದೆ ಯಾವನೋ ಒಬ್ಬಮಹರ್ಷಿಯ ಶಾಪವಾಗಿರಬೇಕು. ಈ ಶಿಲೆಯ ಸಮೀಪದಲ್ಲಿ ಎಲ್ಲಿಯಾದರೂ ಋಷಿಗಳ ಆಶ್ರಮವಿರಬಹುದು. ಹುಡುಕಿ ನೋಡೋಣ ಎಂದು ಪ್ರದ್ಯುಮ್ನ, ನೀಲಧ್ವಜ, ಯೌವನಾಶ್ವ, ಅನುಸಾಲ್ವಾದಿ ಗಳನ್ನು ಸಂಗಡ ಕರೆದುಕೊಂಡು ಬರಲು ಸೂರ್ಯಚಂದ್ರರೂ, ಅಗ್ನಿ ವಾಯು ಪರ್ಜನ್ಯರೂ ಒಟ್ಟಾಗಿ ಕಟ್ಟಕ್ಕರಿಂದಿರುತ್ತಿರುವ ಮೃಗಪಕ್ಷಿಗಳ ಸಮೂಹಕ್ಕೆ ಕಲ್ಪವೃಕ್ಷದಂತೆ ಹೂ ಕಾಯಿ ಹಣ್ಣುಗಳನ್ನು ಕೊಡುತ್ತಿರುವ ವೃಕ್ಷಲತೆಗಳಿಂದ ರಮ್ಯವಾಗಿರುವ ಷಡೃತುಗಳಿಂದ ಕೂಡಿದ್ದರೂ ಶೀತೋಷ್ಣಭೇದವನ್ನು ಕಾಣ ದಿರುವ ಆಶ್ರಮವು ಕಂಗೊಳಿಸುತ್ತಿದ್ದಿತು. ವೇದಶಾಸ್ತ್ರ ಪುರಾಣಗಳನ್ನು ಓದಿಸುವವರಾಗಿ, ಸಮಿತ್ತು ದರ್ಭೆ ಫಲಪುಷ್ಪ ಪರ್ಣಾದಿಗಳನ್ನು ಸಂಪಾದಿಸ ತಕ್ಕವರೆನಿಸಿ, ಜಪತಪ ಸ್ನಾನ ಆಹ್ನಿಕ ಅಗ್ನಿಹೋತ್ರಾದಿಗಳನ್ನು ಆಚರಿಸತಕ್ಕ ವಿಧಿ ವಿಧಾನವನ್ನು ಸಾಧಿಸುವರೆಂಬ ಖ್ಯಾತಿಯನ್ನು ಪಡೆದು, ಸೂರ್ಯನಮ ಸ್ಕಾರ ವಿಷ್ಣುರುದ್ರಾದಿಗಳ ಪೂಜೆಯನ್ನು ಮಾಡುವ ಅತಿಥಿಗಳನ್ನು ಆದರದಿಂದ ಸತ್ಕರಿಸುತ್ತಿದ್ದ ಯೋಗಿವರ್ಯರು ಆ ಆಶ್ರಮದಲ್ಲಿ ಕಂಗೊಳಿಸುತ್ತಿದ್ದರು.

ಆಶ್ರಮದಲ್ಲಿ ಸುಖಕರವಾದ ದಿವ್ಯಯೋಗಾಸನದಲ್ಲಿ ಕುಳಿತು, ಮಹಾತೇ ಜಸ್ಸಿನಿಂದೊಪ್ಪುತ್ತಿದ್ದ ಸೌಭರಿಮುನಿಯು, ಶೀತಳವಾದ ಅಗ್ನಿಯೋ! ಬಿಸಿಲ ಜಳವನ್ನು ತೊರೆದ ಸೂರ್ಯನೋ ! ತಣ್ಣಸವನ್ನುಬಿಟ್ಟ ಹುಣ್ಣಿಮೆಯ ಚಂ ದ್ರನೋ ! ವಿಷಕಂಠಕನಲ್ಲದ ಶಂಕರನೋ ! ರಜೋಗುಣವನ್ನು ತೊರೆದ ಬ್ರಹ್ಮನೋ ! ಶೇಷಶಾಯಿಯಲ್ಲದ ವಿಷ್ಣುವೋ ! ಅಥವಾ ಬ್ರಹ್ಮತೇಜಸ್ಸಿನ ಓಜೆಯೋ ! ಹೇಳುವುದಕ್ಕಾಗದು ಎಂಬಂತೆ ರಾರಾಜಿಸುತ್ತಿದ್ದನು. ಅರ್ಜುನನು ಅತನನ್ನುಕಂಡು ಸಾಷ್ಟಾಂಗವಾಗಿ ನಮಸ್ಕರಿಸಿ, ಅಂಜಲಿಬದ್ಧನಾಗಿ ನಿಂತು ಕೊಂಡನು. ಕೂಡಲೆ ಮುನಿಪೋತ್ತಮನು ಅತನನ್ನು ಅಕ್ಕರೆಯಿಂದಾದರಿಸಿ ಯೋಗಕ್ಷೇಮವನ್ನು ವಿಚಾರಿಸಿ ಕೇಳಿ, ಅಯ್ಯಾ ! ನೀನು ಯಾರು ? ಇಲ್ಲಿಗೆ

ಬರಲು ಕಾರಣವೇನು ಎಂದು ಕೇಳಿದನು. ಗೋತ್ರವಧೆಯಿಂದ ವುಂಟಾದ ಪಾಪವನ್ನು ಹೋಗಲಾಡಿಸಿಕೊಳ್ಳಬೇಕೆಂದು ಧರ್ಮರಾಯನು ಅಶ್ವಮೇಧಯಾಗವನ್ನು ಮಾಡಲುಪಕ್ರಮಿಸಿ, ಅಶ್ವರಕ್ಷೆಗಾಗಿ ನನ್ನನ್ನು ಕಳುಹಿಸಲು ನಾನು ಅದರೊಡನೆ ವಿಜಯಯಾತ್ರೆಗಾಗಿ ಹೊರಟುಬಂದೆನು ಮಧ್ಯಮಾರ್ಗದಲ್ಲಿ ಕುದುರೆಯು ಕಲ್ಲುಬಂಡೆಯಮೇಲೆ ಕಾಲಿಟ್ಟು ಕದಲದೆ ಕಟ್ಟೆರಕದ ಬೊಂಬೆಯಂತಾಯಿತು ಎಲೈ ಮುನಿಶ್ರೇಷ್ಠನೇ ನಿನ್ನ ಅನುಗ್ರಹದಿಂದಲ್ಲದೆ ಈ ನನ್ನ ಯಜ್ಞಾಶ್ವವು ಪೊರಮಡುವ ವಿಧಾನವನ್ನು ಕಾಣೆ ! ಆದಕಾರಣ ದಯಮಾಡಿ ನನ್ನನ್ನು ಉದ್ಧರಿಸಬೇಕು ಎಂದು ಬೇಡಿಕೊಂಡನು.

ಆಗ ಆ ಮುನೀಶ್ವರನು ಅರ್ಜುನನನ್ನು ಕುರಿತು ಎಲೈ ಮೂಢನೇ ! ಹಿಂದೆ ಶ್ರೀಕೃಷ್ಣಭಗವಂತನು ಆತ್ಮಬೋಧೆಯನ್ನರುಹಿ ಕಾಯುವುದಕ್ಕೂ, ಕೊಲ್ಲುವುದಕ್ಕೂ, ನೀನಲ್ಲವೆಂದು ದೃಢೀಕರಿಸಿದ್ದರೂ ನಿನ್ನ ಅಹಂಕಾರವು ಅಳಿಯಲಿಲ್ಲವಲ್ಲಾ ! ಶ್ರೀಕೃಷ್ಣನ ಸನ್ನಿಧಾನದಲ್ಲಿ ಸಂಚರಿಸುವ ನಿನಗೆ ಗೋತ್ರಹತ್ಯಾದೋಷವೆಲ್ಲಿಂದ ಬಂದಿತು. ದಯಾಸಮುದ್ರನಾದ ಭಗವಂತನ ಕಟಾಕ್ಷಕ್ಕೆ ಪಾತ್ರನಾದಬಳಿಕ ಅಶ್ವಮೇಧ ಯಾಗದಿಂದ ಫಲವೇನು ಎಂಬುದನ್ನು ಧರ್ಮರಾಯನು ತಿಳಿಯದವನಾದನಲ್ಲ ! ಶ್ರೀಹರಿಯು ಮನೆಯಲ್ಲಿದ್ದರೂ ಕತ್ತೆಯ ಆಕಾರದ ಹರಿಯನ್ನು ಹಿಡಿದುಕೊಂಡುಬಂದು ಭ್ರಮಿಸುವ ನೀನು, ಕಲ್ಪವೃಕ್ಷದ ನೆಳಲನ್ನುತೊರೆದು ಬೂರಗದ ನೆಳಲನ್ನು ಸೇರುವ ಮೂಢನನ್ನು ಸರಿಹೋಲುವೆಯಲ್ಲಾ ! ಮೇಲಾಗಿ ಹಾಲನ್ನು ಕರೆಯುವ ಹಸುವು ಮನೆಯಲ್ಲಿದ್ದರೂ, ಅದರ ಶೀಲಸದ್ಗುಣಗಳನ್ನು ನೋಡದೆ ತನ್ನನ್ನು ಕೊಲ್ಲುವ ಹೆಣ್ಣುಹುಲಿಯನ್ನು ತಂದು ಮನೆಯಲ್ಲಿ ಕಟ್ಟಿದವನಹಾಗೆ ಹೀನಕಾರ್ಯವನ್ನು ಮಾಡಿದೆಯಲ್ಲಾ ! ಕೃಷ್ಣನ ಸನ್ನಿಧಾನಕ್ಕಿಂತಲೂ ಅಶ್ವಮೇಧವು ಯಾವ ಫಲವನ್ನು ಕೊಡುವುದು. ಧರ್ಮಪುತ್ರನು ಬುದ್ಧಿಹೀನನಾದನೇ ? ಹೋಗು ಎಂದು ಗದರಿಸಿ ಹಿಯ್ಯಾಳಿಸಲು ಅರ್ಜುನನು ಋಷೀಶ್ವರನನ್ನು ಕುರಿತು ಮತ್ತೆ ಇಂತೆಂದನು.

ಸ್ವಾಮಿ ! ನಾವು ಹರಿಯನ್ನು ಮರೆದು ಬದುಕಲಾರೆವು. ಆ ದಯಾನಿಧಿಯು ಸದಾ ನಮ್ಮ ಹೃದಯಾಂಗಣದಲ್ಲಿ ನೆಲೆಗೊಂಡಿರುವನು. ಧರ್ಮರಾಯನು ಆತನನ್ನುಬಿಟ್ಟು ಅರಗಳಿಗೆಯೂ ಜೀವಿಸಲಾರನು. ಆತನ ನಿರೂಪದಿಂದಲೇ ಈ ಕ್ರತುವನ್ನು ಕೈಕೊಂಡೆವು. ಆದರೆ ಬಾಲಭಾವದಿಂದ ಮಾಡಿದ ಅಪರಾಧವನ್ನು ಕ್ಷಮಿಸಿ, ನೀತಿಬೋಧೆಯನ್ನುಮಾಡಲು ತಾವು ಗುರುಗಳಾಗಿರುವಿರಿ. ನಾನು ನಿಮಗೆ ಶಿಷ್ಯನು ಆದಕಾರಣ ಈ ಶಿಲೆಯಲ್ಲಿ ಸಿಕ್ಕಿದ ಕುದುರೆಯನ್ನು ಬಿಡಿಸಿಕೊಟ್ಟು ಕಾಪಾಡಬೇಕೆಂದು ಬೇಡಿಕೊಳ್ಳಲು, ಸೌಭರಿಯು ಸಂತೋಷದಿಂದ ಶ್ರೀಹರಿಯ ಧ್ಯಾನವನ್ನುಮಾಡುತ್ತ ನಿನ್ನಕೈಯಿಂದ ಮುಟ್ಟ

ದರೆ ಆ ಕುದುರೆಯು ವೇಗದಲಿನಂತೆ ನಡೆದುಬರುವುದೆಂದು ಹೇಳಿದನು. ಅದನ್ನುಕೇಳಿ ಆಶ್ಚರ್ಯಯುಕ್ತನಾದ ಅರ್ಜುನನು ಸ್ವಾಮಿ ! ಹೀಗಾಗಲು ಕಾರಣವೇನೆಂಬುದಕ್ಕೆ ಏನಾದರೂ ಇತಿಹಾಸವಿದ್ದರೆ ಅದನ್ನು ಸವಿಸ್ತಾರವಾಗಿ ನನಗೆ ನಿರೂಪಿಸಬೇಕೆಂದು ಬೇಡಿಕೊಳ್ಳಲು ಸೌಭರಿಯು ಇಂತೆಂದು ನುಡಿಯು ಲಾರಂಭಿಸಿದನು.

ಎಲೈ ಅರ್ಜುನನೇ ! ಹಾಗಾದರೆ ಹೇಳುವೆನು ಕೇಳು. ಪೂರ್ವಕಾಲದಲ್ಲಿ ವೇದವೇದಾಂಗ ಪಾರಂಗತನಾಗಿ ಧರ್ಮಮಾರ್ಗನಿರತನಾಗಿದ್ದ ಉದ್ದಾಲಕನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನು ಗೃಹಸ್ಥನಾಗಬೇಕೆಂದು ಬಯಸಿ ಸತ್ಕುಲ ಪ್ರಸೂತನಾದ ಶ್ರೋತ್ರಿಯ ಬ್ರಾಹ್ಮಣನ ಮಗಳಾದ ಚಂಡಿಯೆಂಬವಳನ್ನು ಮದುವೆಯಾದನು. ಬಳಿಕ ಆ ಹೆಂಡತಿಯೊಡನೆ ಸಂಸಾರಮಾಡತೊಡಗಿ ಪ್ರಿಯೇ ! ನೀನು ಸತ್ಕುಲಜಾತನಾದ ಬ್ರಾಹ್ಮಣನ ಮಗಳಾದುದರಿಂದ ಮೌನಿ ವೃತ್ತಿಯಲ್ಲಿರುವ ನನ್ನ ಜಪತಪಾನುಷ್ಠಾನಗಳಿಗೆ ಸಹಾಯಕಳಾಗಿದ್ದುಕೊಂಡು ಧರ್ಮಮಾರ್ಗದಿಂದ ಅತಿಥಿಶುಶ್ರೂಷೆಯನ್ನು ಪತಿಸೇವೆಯನ್ನು ಮಾಡಿಕೊಂಡಿರಬೇಕೆಂದು ನೇಮಿಸಿದನು. ಅದನ್ನು ಕೇಳಿ ಚಂಡಿಯು ಹಾ ! ಎಳ್ಳಷ್ಟೂ ನಿನ್ನ ಮಾತನ್ನು ಕೇಳುವಳಲ್ಲ. ನಾನು ನಿನ್ನ ಪರಿಚರ್ಯವನ್ನು ಮನೆಗೆಲಸಗಳನ್ನು ಮಾಡಲು ದಾಸಿಯಾದವಳೇ ! ಈ ದುರ್ಬುದ್ಧಿಯನ್ನು ಬಿಡು, ನಾವೇ ನಿನ್ನ ಅರಸಿಯಾದುದರಿಂದ ನೀನು ನಾನು ಹೇಳಿದಂತೆ ಕೇಳಿಕೊಂಡಿರಬೇಕು ಎಂದು ಚಂಡಿಯು ಚಂಡಿ ಮಾಡಿದಳು. ಅದನ್ನು ಕೇಳಿ ಉದ್ದಾಲಕನು ಆಹಾ! ನನ್ನ ಭಾಗ್ಯವನ್ನು ಏನೆಂದು ಹೇಳಲಿ. ಕಳಿವಣ್ಣುಗಳುಳ್ಳ ಮಾವಿನಮರವನ್ನು ತೊರೆದು, ಬಲಿತ ಬೊಬ್ಬುಳಿಯಮರವನ್ನು ಸೇರಿದ ಗಿಳಿಯ ಬಾಳಿನಂತೆ ನನ್ನ ಗತಿಯಾಯಿತು, ಇನ್ನು ನನಗೆ ಇಹಪರಗಳಲ್ಲಿ ಸುಖವುಂಟೆ ? ಎಂದು ಅನುದಿನವೂ ಚಿಂತಿಸುತ್ತಿದ್ದನು.

ಹೀಗಿರುವಲ್ಲಿ ಒಂದಾನೊಂದುದಿನ ಕೌಂಡಿನ್ಯನೆಂಬ ಮುನಿವರ್ಯನು ಉದ್ದಾಲಕನಮನೆಗೆ ಬಂದು ಆತನಿಂದ ಸತ್ಕೃತನಾಗಿ ವಿನಯದಿಂದ ತಲೆವಾಗಿ ಖಿನ್ನನಾಗಿ ತನ್ನೆದುರಿಗೆ ನಿಂತುಕೊಂಡಿರುವ ಉದ್ದಾಲಕನನ್ನು ಕುರಿತು, ಅಯ್ಯಾ ! ನೀನು ಖಿನ್ನನಾಗಿರಲು ಕಾರಣವೇನೆಂದು ಬೆಸಗೊಂಡನು. ಉದ್ದಾಲಕನು ತನ್ನ ಹೆಂಡತಿಯ ಪ್ರತಿಕೂಲಭಾವವನ್ನು ವಿಸ್ತರಿಸಿ ಹೇಳಲು, ಎಲೈ ಉದ್ದಾಲಕನೇ ! ನೀನು ಇದಕ್ಕಾಗಿ ಚಿಂತಿಸುವುದೇತಕ್ಕೆ ? ನಿನಗೆ ಯಾವ ಕಾರ್ಯವು ಅವಶ್ಯಕವಾಗಿ ಆಗಬೇಕೋ ಅದನ್ನು ಮಾಡಬೇಡವೆಂದು ನಿನ್ನ ಹೆಂಡತಿಗೆ ಹೇಳಿದರೆ, ಅವಳು ಆಗತ್ಯವಾಗಿ ಅದನ್ನೇ ಮಾಡುವಳು. ಇದರಿಂದ ನಿನ್ನ ಚಿಂತೆಯು ಪರಿಹಾರವಾಗುವುದೆಂದು ಹೇಳಿ ತನ್ನ ತಪೋವನಕ್ಕೆ ಹೊರಟುಹೋ

ದನು. ಹೀಗೆಯೇ ಉದ್ದಾಲಕನು ಸಂಸಾರಮಾಡುತ್ತಿರುವಲ್ಲಿ ಒಂದಾನೊಂದು ದಿನ ಆತನ ತಂದೆ ಶ್ರಾದ್ಧಬಂದಿತು ಆಗ ಆತನು ತನ್ನ ಹೆಂಡತಿಯನ್ನು ಕರೆದು ಎಲೆ ! ನಾಳೆಯುದಿನ ತನ್ನ ತಂದೆಯ ಶ್ರಾದ್ಧವಾಗಬೇಕು, ನಾನು ಅದನ್ನು ಮಾಡೆನು, ಉತ್ತಮರಾದ ಬ್ರಾಹ್ಮಣರನ್ನು ನಿಮಂತ್ರಣಕ್ಕೆ ಕರೆಯುವುದಿಲ್ಲ, ಶ್ರೇಷ್ಠವಾದ ಧಾನ್ಯಗಳನ್ನು ತಂದು ಭಕ್ಷ್ಯಭೋಜ್ಯಗಳನ್ನು ಮಾಡಿಸುವದಿಲ್ಲ, ಕಾಲಕ್ಕೆ ಸರಿಯಾಗಿ ಬ್ರಾಹ್ಮಣ ಭೋಜನವನ್ನು ಮಾಡಿಸಿ ದಕ್ಷಿಣೆಗಳನ್ನಿತ್ತು ಅವರನ್ನು ಆದರದಿಂದ ಸತ್ಕರಿಸಲೊಲ್ಲೆನೆಂದು ಹೇಳಿದನು. ಅದನ್ನು ಕೇಳಿ ಚಂಡಿಯು ಇದು ಹೀಗೋ ಸರಿ ನಾಳೆಯೇ ನಾನು ಶ್ರಾದ್ಧಕರ್ಮವನ್ನು ಶಾಸ್ತ್ರೋಕ್ತವಾಗಿ ಮಾಡಿಸಿ, ಉತ್ತಮಧಾನ್ಯಗಳಿಂದ ಭಕ್ಷ್ಯಭೋಜ್ಯಗಳನ್ನು ಮಾಡಿ, ಪರಿಶುದ್ಧವಾಗಿ ಮನೆಮಾರುಗಳನ್ನು ತಟ್ಟೆಬಟ್ಟಲುಗಳನ್ನು ಇಟ್ಟು ಕೊಂಡು ಮೊದಲು ರಾತ್ರಿಯೇ ಶ್ರೋತ್ರಿಯಕರ್ಮನಿಷ್ಠರಾದ ಬ್ರಾಹ್ಮಣರಿಗೆ ನಿಮಂತ್ರಣಕ್ಕೆ ಹೇಳಿ ಕುತುಪಕಾಲವನ್ನು ಮೀರದಂತೆ ಶ್ರಾದ್ಧವನ್ನು ಮಾಡಿಸಿ, ಬಂದ ಬ್ರಾಹ್ಮಣರನ್ನು ಬಹುವಿಧದಿಂದ ಆದರಿಸಿ, ದಾನದಕ್ಷಿಣೆಗಳನ್ನು ಉಡು ಗೆರೆಗಳನ್ನು ಕೊಟ್ಟು ಸ್ವಲ್ಪವೂ ಲೋಪವಿಲ್ಲದಂತೆ ಶ್ರಾದ್ಧವನ್ನು ಮಾಡಿಸು ವೆನು. ಇಗೋ ! ನಾಳೆಗೆ ಬೇಕಾದ ವಸ್ತುಗಳನ್ನು ಸಂಗ್ರಹಿಸಿಡುವೆನೆಂದು ಹೇಳಿ ಬೇಕಾದ ಪದಾರ್ಥಗಳನ್ನು ಅಣಿಮಾಡಿಕೊಂಡು, ಅಕ್ಕರೆಯಿಂದಲೂ ಭಕ್ತಿಯಿಂದಲೂ ಶ್ರಾದ್ಧಕರ್ಮವನ್ನು ಸಾಂಗವಾಗಿ ನೆರವೇರಿಸಿದಳು.

ಆಗ ಉದ್ದಾಲಕನು ಅತ್ಯಂತ ಸಂತುಷ್ಟನಾಗಿ ಶ್ರಾದ್ಧಾಂಗವಾದ ಪಿಂಡ ವನ್ನು ಬೀದಿಯಲ್ಲಿ ಬಿಸುಡೆಂದು ಹೇಳದೆ ಮರೆತು ಮಡುವಿನಲ್ಲಿ ಹಾಕಿ ಬಾ ! ಎಂದು ಹೇಳಿದನು. ಕೂಡಲೆ ಚಂಡಿಯು ಉದ್ರೇಕದಿಂದಾಪಿಂಡಗಳನ್ನೆತ್ತಿ ಬೀದಿಗೆ ಬಿಸಾಡಿದಳು. ಅದನ್ನು ಕಂಡು ಕರ್ಮಭಂಗವಾಯಿತೆಂದು ಕುಪಿತ ನಾಗಿ ಉದ್ದಾಲಕನು ಎಲೌ ನೀಚಳೇ ! ನಾನು ನಿನಗೆ ಹಗೆಯಾದವನೆ ? ನನ್ನಲ್ಲಿ ನೀನು ಚಂಡಿತನವನ್ನು ಬೆಳೆಸಿದುದರಿಂದ ನೀನು ಕಾಡಿನಲ್ಲಿ ಕಗ್ಗಲಾಗಿ ಉರುಳಿ ಹೋಗು ಎಂದು ಕ್ರೂರವಾದ ಶಾಪವನ್ನು ಕೊಟ್ಟಬಳಿಕ, ದಯಾ ಭರಿತನಾಗಿ ತನ್ನಲ್ಲಿತಾನೆ ಸಮಾಧಾನ ಮಾಡಿಕೊಂಡು ಕಾಲಾನು ಕಾಲದಲ್ಲಿ ಧರ್ಮಾನುಜನಾದ ಅರ್ಜುನನು ಅಶ್ವದೊಡನೆ ಸಂಚರಿಸುತ್ತ ನಿನ್ನಲ್ಲಿ ಸಿಕ್ಕಿಹೋದ ಕುದುರೆಯನ್ನು ಬಿಡಿಸಿಕೊಂಡ ಬಳಿಕ ನಿನಗೆ ಮೋಕ್ಷವಾಗುವುದೆಂದು ಹೇಳಿ ತಾನು ಸನ್ಯಾಸವನ್ನು ವಹಿಸಿ, ತಪಸ್ಸಿಗೆ ಹೊರಟುಹೋದನು.

ಈಗ ಚಂಡಿಯು ಇಲ್ಲಿ ಅರೆಯಾಗಿ ಬಿದ್ದಳು. ಆದಕಾರಣ ನೀನು ಹೋಗಿ ಆಕುದುರೆಯ ಪಾದಗಳನ್ನು ಮುಟ್ಟಿ ಹರಿಧ್ಯಾನ ಮಾಡಿದರೆ, ಚಂಡಿಗೆ ಶಾಪ ವಿಮೋಚನೆಯಾಗಿ ನಿನ್ನ ಕುದುರೆಯು ನಡೆದು ಬರುವದು ಹೋಗು ! ಇಲ್ಲಿಂದ

ಮುಂದಿನ ರಾಜ್ಯಗಳ ಧೊರೆಗಳು ಬಲಶಾಲಿಗಳು ಆದುದರಿಂದ ಶ್ರೀಹರಿಯನ್ನು ಮರೆಯ ಬಿಡಬೇಡ. ನಾನು ಹೇಳಿದಮಾತು ಮುಂದೆ ನಿನಗೆ ಸಾಕ್ಷಿಯುಂಟಾಗುವುದು ಎಂದು ಬುದ್ಧಿವಾದವನ್ನು ಹೇಳಿ ಬಹಳವಾಗಿ ಆದರಿಸಿ ಸೌಭರಿಯು ಅರ್ಜುನನನ್ನು ಕಳುಹಿಸಿಕೊಟ್ಟನು. ಬಳಿಕ ಅರ್ಜುನನು ಕುದುರೆಯಬಳಿಗೆ ಬಂದು ಹರಿಯನ್ನು ನೆನೆದು ಕುದುರೆಯ ಕಾಲುಗಳನ್ನು ಮುಟ್ಟಲು, ಹರಿಯು ಹರಿದಾಡಿತು, ಚಂಡಿಯು ಮೈಕೊಡವಿಕೊಂಡೆದ್ದು ಅರ್ಜುನನಿಂದ ಆದರಿಸಲ್ಪಟ್ಟು ತಪೋವನಕ್ಕೆ ಹೊರಟುಹೋದಳು, ಅಲ್ಲಿದ್ದವರೆಲ್ಲರೂ ಆಶ್ಚರ್ಯಯುಕ್ತರಾದರು, ಆಕಾಶದಿಂದ ಹೂಮಳೆಯು ಸುರಿಯಿತು, ವಿಸ್ಮಿತರಾದ ಸೇನಾಜನರಿಂದೊಡಗೂಡಿ ಅರ್ಜುನನ ಕುದುರೆಯು ತೆಂಕಮೊಗವಾಗಿ ನಡೆದು ಚಂಪಕಾರಪುರವೆಂಬ ಹಂಸಧ್ವಜನ ರಾಜಧಾನಿಯ ಬಳಿಗೆ ಬಂದಿತು.

ಕ್ಷೀರಸಾಗರವನ್ನೂ, ಕೈಲಾಸವನ್ನೂ, ಸ್ವರ್ಗಲೋಕವನ್ನೂ ತಿರಸ್ಕರಿಸುತ್ತಿರುವ ಆ ನಗರದ ಸುತ್ತಲೂ, ಕೀರ್ತಿಚಂದ್ರನ ಸುತ್ತಲೂ ಆವೃತವಾಗಿ ಹೊಳೆಯುತ್ತಿರುವ ಪರಿವೇಷವೋ ಎನ್ನುವಹಾಗೆ ಕೋಟೆಯು ಕಂಗೊಳಿಸುತ್ತಿದ್ದಿತು. ಅಲ್ಲಿಗೆ ಅರಸಾದ ಹಂಸಧ್ವಜನು ಅರ್ಜುನನು ಅಶ್ವರಕ್ಷೆಯ ಸೈನ್ಯದೊಡನೆ ತನ್ನದೇಶದ ಎಲ್ಲೆಯನ್ನು ಮೀರಿಬಂದನೆಂಬ ವರ್ತಮಾನವನ್ನು ಕೇಳಿ ಸಾವಧಾನದಿಂದ ಸಭೆಯನ್ನು ಸೇರಿಸಿ, ತನ್ನಾಪ್ತಮಂತ್ರಿಗಳಾದ ಸುಮತಿ ಪ್ರಮತಿಗಳೆಂಬವರನ್ನು ಬರಮಾಡಿ, ಅಯ್ಯಾ ! ಈಗ ಬಂದಿರುವ ಅರ್ಜುನನ ಕುದುರೆಯನ್ನು ನಾವು ಕಟ್ಟಿದರೆ ಶ್ರೀಕೃಷ್ಣನು ಬಾರದೆ ಇರುವುದಿಲ್ಲ. ನಾವು ಇದುವರೆಗೂ ಭೂಲೋಕದಲ್ಲಿ ಅಟ್ಟಹಾಸದಿಂದ ಬಾಳಿದರೂ ನಮಗೆ ಶ್ರೀಹರಿಯ ದರ್ಶನವಾಗಲಿಲ್ಲ. ಮುಪ್ಪಿನಿಂದ ಸೊಪ್ಪಾಗಿ ಬಾಡಿ ಕುಸಿದುಹೋಗುವ ಈ ಹಾಳುದೇಹವು ನಾಶವಾಗುವುದೇನಿಜ. ಹೀಗಿರುವಲ್ಲಿ ಶ್ರೀಕೃಷ್ಣನೊಡನೆ ಯುದ್ಧಮಾಡಿ ಆತನ ಬಾಣದಿಂದ ಮುಕ್ತಿಯನ್ನು ಪಡೆಯುವುದೆ ಉತ್ತಮ. ಆದಕಾರಣ ಈತನ ಕುದುರೆಯನ್ನು ಕಟ್ಟುವುದೇ ಸಿದ್ಧವೆಂದು ಕಟ್ಟುಮಾಡಿದನು. ಕೇಳೈ ಜನಮೇಜಯರಾಯನೇ ! ಇಂತೆಂದು ಕಟ್ಟುಮಾಡಿದ ಹಂಸಧ್ವಜನು ತನ್ನ ರಾಜ್ಯದ ಪ್ರಜೆಗಳೂ, ಪರಿವಾರದವರೂ, ಸದಾ ಹರಿಪೂಜೆಯಿಂದ ಪರಿಶುದ್ಧರಾಗಿ, ಧರ್ಮದಾನಾದಿಗಳಿಂದ ಪಾವನರೆನಿಸಿ, ಏಕಪತ್ನಿವ್ರತಸ್ಥರಾಗಿ ಗತಿಹೀನರಾದ ನೀಚರ ಸಹವಾಸವನ್ನು ತೊರೆದು ಶಾಂತಮನಸ್ಕರಾಗಿರಬೇಕೆಂದು, ನೇಮಿಸಿದನು. ಆತನ ನೇಮವನ್ನು ಅನುಸರಿಸಿ ಪ್ರಜಾಪರಿವಾರದ ಜನರೆಲ್ಲರೂ ಏಕಪತ್ನೀವ್ರತ ಅನಂತಪೂಜೆ ಸೌಭಾಗ್ಯಸಂಪತ್ತಿ, ನೀತಿಶಾಸ್ತ್ರವಿಶಾರದತೆ, ವೇದವಿಚಾರಪಾರಾಯಣ, ಅಲಂಕಾರಮಂಡನ ವಿಷಯಸುಖದಲ್ಲಿ ವೈರಾಗ್ಯ, ಲೋಭವಿವರ್ಜಿತತ್ವ, ಸದ್ಗುಣಾಭರಣ, ಸಂತೋಷವಾಕ್ಯಗಳಿಂದ ಭೂಷಿತರಾಗಿ, ಚಿಂತಿತಾರ್ಥಸಂಪಾದಕರಾಗಿ ಸುಮ್ಮಾನದಿಂದ ಇರುತ್ತಿದ್ದರು.

ಇಂತಿರುವ ಆ ರಾಜ್ಯದ ಪ್ರಜೆಗಳು ಉಣ್ಣುವುದಕ್ಕೂ, ಉಡುವುದಕ್ಕೂ, ಕೊಡುವುದಕ್ಕೂ, ಇಲ್ಲದವಸ್ತುವನ್ನು ಸಂಪಾದಿಸುವುದಕ್ಕೂ, ಸೌಭಾಗ್ಯದಿಂದ ಬಾಳುವುದಕ್ಕೂ, ಶ್ರೀಹರಿಭಕ್ತಿಯೇ ಕಾರಣವಾಗಿ ಸದಾ ಸತ್ಪುರುಷರಸೇವೆ ಸಂದರ್ಶನಗಳಿಂದ ಬಗೆಬಗೆಯಾದ ಆನಂದವನ್ನು ವಹಿಸಿ ನಲಿಯುತ್ತಿರುವರು. ರತ್ನಖಚಿತವಾದ ರಥಗಳು ಎಪ್ಪತ್ತೊಂದುಸಾವಿರವೂ, ಇಪ್ಪತ್ತೊಂದುಸಹಸ್ರ ಆನೆಗಳೂ, ಒಂದುಲಕ್ಷ ಕುದುರೆಗಳೂ, ಒಂದುಕೋಟಿ ಕಾಲಾಳುಗಳೂ, ಒಬ್ಬ ದಳಪತಿಯ ಕೈಕೆಳಗಿರುವುದು. ಇಂತಪ್ಪ ದಳಪತಿಗಳು ಎಪ್ಪತ್ತೊಂದುಜನರು ತಂತಮ್ಮ ಸೈನ್ಯಗಳಿಂದೊಡಗೂಡಿ, ಹಂಸಧ್ವಜನ ವಿಜಯಯಾತ್ರೆಯ ನೆರವಿನಲ್ಲಿ ಪೊರಮಟ್ಟು ನಡೆತಂದರು. ಅಲ್ಲದೆ ಈ ಹಂಸಧ್ವಜನಿಗೆ ಧನಬಲನೆಂದೂ, ಚಂದ್ರಸೇನನೆಂದೂ, ಚಂದ್ರಕೇತುವೆಂದೂ, ಚಂದ್ರದೇವನೆಂದೂ, ವಿಡೂರರಥ ನೆಂದೂ, ಧರ್ಮವಾಹನನೆಂದೂ, ನ್ಯಾಯವರ್ತಿಯೆಂದೂ, ಪ್ರಖ್ಯಾತರಾಗಿ ಪರಾಕ್ರಮಿಗಳಾದ ಏಳುಮಂದಿ ತಮ್ಮಂದಿರೂ, ಸುದರ್ಶನ, ಸುಧನ್ವ, ಸುವ್ರ ನಸ, ಸುರಥರೆಂಬ ಶೂರಾಗ್ರಗಣ್ಯರಾದ ನಾಲ್ಕುಜನ ಮಕ್ಕಳೂ ಇರುವರು. ಆಶ್ರಮದಲ್ಲಿ ಮರದಿಂದ ತಾನಾಗಿ ಕಳಿತು ಬಿದ್ದ ಹಣ್ಣನ್ನು ಹೇಳದೆ ತೆಗೆದು ಕೊಂಡನೆಂಬ ತಪ್ಪನ್ನು ಹೊರಿಸಿ, ಶಂಖನೆಂಬವನು ರಾಜನಬಳಿಗೆ ಕರೆದುತರಲು, ಧೊರೆಯು ಆತನ ಕೈಗಳನ್ನು ಕಡಿಸಿಹಾಕಿದನು. ಹೀಗೆ ಕಡಿದು ಹಾಕಿದ ಕೈಗ ಳನ್ನು ಲಿಖಿತನೆಂಬವನು ತನ್ನ ತಪೋಬಲದಿಂದ ತಿರುಗಿ ಬರುವಂತೆ ಮಾಡಿ ಚಿಗುರಿಸಿದನು.

ಇಂತಪ್ಪ ಮಹಾಮಹಿಮರಾದ ಅಣ್ಣತಮ್ಮಂದಿರಾದ ಶಂಖಲಿಖಿತರಿಬ್ಬರೂ ಈ ಹಂಸಧ್ವಜನಿಗೆ ಪುರೋಹಿತರಾಗಿರುವರು. ಧೊರೆಯು ಅವರ ಮಾತನ್ನು ಮೀರದೆ ಅಜ್ಞಾನುವರ್ತಿಯಾಗಿ ನಡೆದುಕೊಳ್ಳುತ್ತಿರುವನು. ಇಂತಪ್ಪ ರಾಯನು ಯುದ್ಧಕ್ಕೆ ಹೊರಡುವಕಾಲದಲ್ಲಿ ಬಾರಿಸುವ ರಣಭೇರಿಯ ಶಬ್ದವನ್ನು ಕೇಳಿ ಹಿಂದುಳಿದ ವೀರನನ್ನು ತನ್ನ ಭಾಷೆಯನ್ನು ಮೀರಿದ ತಪ್ಪಿಗಾಗಿ ಕಾದು ಕುದಿಯುತ್ತಿರುವ ಎಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿಸುವನು. ಇದು ಆ ಶಂಖ ಲಿಖಿತರ ಧರ್ಮಶಾಸ್ತ್ರದ ಮರ್ಮವನ್ನರಿದು ಮಾಡಿದ ಕಟ್ಟಳೆಯಾದುದರಿಂದ ಆತನು ತಪ್ಪದೆ ಆಚರಿಸುತ್ತಿರುವನು. ಬಳಿಕ ಅರ್ಜುನನ ಕುದುರೆಯನ್ನು ತಂದು ಅರಮನೆಯ ಕೊಟ್ಟಿಗೆಯಲ್ಲಿ ಕಟ್ಟಬೇಕೆಂದು ರಾಜನು ಡಂಗುರವನ್ನು ಹೊಯ್ಸಿದನು. ಕೂಡಲೆ ಸಕಲಜನರೂ ವೀರಾವೇಶಯುಕ್ತರಾಗಿ ತಂತಮ್ಮ ಆಯುಧಗಳನ್ನು ತೆಗೆದುಕೊಂಡು ಆನೆ ಕುದುರೆ ತೇರು ಕಾಲಾಳುಗಳ ಸಂದಣಿ ಯಿಂದೊಡಗೂಡಿ ಹೊರಡಲೆಂದು ಎಚ್ಚರಿಸುವಂತೆ, ನಿಸ್ಸಾಳಬೇರಿಗಳು ಮೊಳಗಿ ಮೊರೆಯುತ್ತಿದ್ದವು.

ಬಳಿಕ ಇಂದ್ರಪುತ್ರನೆಂಬ ವೈರದಿಂದ ಸಾಂದ್ರವಾದ ಪರ್ವತಪಙ್ಕ್ತಿಗಳು ಅಟ್ಟಿಕೊಂಡು ದಟ್ಟೈಸಿ ಅರ್ಜುನನಮೇಲೈತಂದವೋ ಮಗನಾದ ಕರ್ಣನನ್ನು ಕೊಂದನೆಂಬ ದ್ವೇಷದಿಂದ ಸೂರ್ಯನು ತನ್ನಾಕಾಶವನ್ನಾಂತ ಒಂದುಕೋಟಿ ರಥಗಳನ್ನು ಕಳುಹಿಸಿದನೋ ಭೂಮಂಡಲವೂ ಸೇನಾಸಹಸ್ರವನ್ನು ಹೆತ್ತು ಕಳುಹಿಸಿತೋ ಎನ್ನುವಹಾಗೆ ಹಂಸಧ್ವಜನ ಸೈನ್ಯವು ನಡೆತಂದುದು. ಅದನ್ನು ಕಂಡು ಆ ನಗರದ ಜನರೆಲ್ಲರೂ ಅಹಾ! ನಮ್ಮ ರಾಜನಾದ ಹಂಸಧ್ವಜನು ಕಂಸಾಂತಕನು ಮೈದೋರಿದಹೊರತೂ, ಪಾರ್ಥಂಗೆ ಸೋಲುವವನಲ್ಲ. ನಾವು ಮಾನುಷಜನ್ಮಗಳಿಂದುದಕ್ಕೆ ಸಫಲವಾಗಿ ಕೃಷ್ಣನ ದರ್ಶನವಾಗುವುದೆಂದು ಸಂತೋಷದಿಂದ ಸಮರಭೂಮಿಗೆ ನಡೆತರುತ್ತಿರಲು, ವೀರಪತ್ನಿಯರಾದ ಸತಿಯರು ನೆಲೆಮಾಡದುಪ್ಪರಿಗೆಗಳಲ್ಲಿ ಕಪ್ಪುರವೀಳೆಯಂಗೊಟ್ಟು, ಅಪ್ಪಿ ಮುದ್ದಾಡಿ ಮೋಹದಾಲಿಂಗನವನ್ನು ಮೈಮರೆದನುಭವಿಸಿ, ಏಕಾಂತಸೇವೆಯಲ್ಲಿ ತಂತಮ್ಮ ಗಂಡಂದಿರನ್ನು ಆದರಿಸಿ ಅಕ್ಕರೆಯಿಂದ ಆರತಿಗಳನ್ನೆತ್ತಿ, ಸೇಸೆದಳೆದು, ಶುಭವಾಗಲೆಂದು ಹರಿಸಿ ಸಂತೋಷದಿಂದ ಕಳುಹಿಸಿಕೊಟ್ಟು ಅಳಿದನೆರಿಗಳನ್ನಳವಡಿಸಿಕೊಂಡು, ಬಳಲಿದಮುಡಿಯನ್ನಿಂಬಾಗಿಕಟ್ಟಿ, ಸೊಪ್ಪಾದತಿಲಕವನ್ನೊಪ್ಪುವಂತೆ ತಿದ್ದಿ, ಬೆವರಿನಿಂದ ಹರಡಿದ ಕಾಡಿಗೆಯನ್ನೊರಸಿಕೊಂಡು, ಪುಳಕಗಳೆದ್ದ ದೇಹವುಳ್ಳವರಾಗಿ, ನಖಕ್ಷತದಿಂದುಂಟಾದ ಕೆಂಬಾಸುಳನ್ನು ನೋಡಿಕೊಳ್ಳುತ್ತ, ತೊಡೆವ ಗಂಧಾನಲೇಪನಂಗಳು ಮೈಸೊವಡಿನೊಡನೆ ಸರಿದುಹೋಗಲು, ಕತ್ತಿನ ಮುತ್ತಿನಹಾರಗಳು ಸಿಕ್ಕಲಾಗಿ ತೊಡರಿಕೊಂಡಿರಲು, ಕೆಂಬಣ್ಣವು ಹರಡಿಕೊಂಡಿರುವ ತುಟಿಯು ತೋರವಾಗಿ ಕಾಣುತಿರಲು ಆಡುವ ಮಾತುಗಳು ಕಳಕಳನೆ ಗಂಟಲಲ್ಲಿಯೆ ಸಿಕ್ಕಿಕೊಳ್ಳುತ್ತಿರಲು, ಕೊನೆಗಣ್ಣಿನ ಕುಡಿನೋಟದ ಕಾಂತಿಯು ಕನ್ನಡಿಯಂತಿರುವ ಕದಪುಗಳಲ್ಲಿ ಪ್ರತಿಫಲಿಸಿ ಹೊಳೆಯುತ್ತಿರಲು, ಕೋಮಲಾಂಗಿಯರಾದ ಕಾಮಿನಿಯರು ಪ್ರಿಯರಾಲಿಂಗನದ ಸುಖದಿಂದ ತೃಪ್ತರಾಗಿ ಕನ್ನೆವಾಡದ ಕೊನೆಯುಪ್ಪರಿಗೆಯನ್ನೇರಿ ಬಗೆಬಗೆಯಾದ ವಿಲಾಸದಿಂದ ಮಾತಾಡಿಕೊಳ್ಳುತ್ತ ತಮ್ಮ ಪ್ರೌಢಿಮೆಗನುಸಾರವಾಗಿ ಸರಸವಾದವನ್ನು ಮಾಡುತ್ತ ದೇವಪುರನಿಲಯನಾದ ಶ್ರೀಹರಿಯ ದರ್ಶನವನ್ನು ಬಯಸುತ್ತಿದ್ದರು ಎಂಬಲ್ಲಿಗೆ–ಶ್ರೀ ಲಕ್ಷ್ಮೀಕಾಂತಲಸದರುಣ ಚರಣಸರೋಜಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿನಾಗೇಶಶರ್ಮಪ್ರಣೀತ ಜೈಮಿನಿ ಭಾರತ ಕಥಾಸಂಗ್ರಹದಲ್ಲಿ ಹತ್ತನೆಯ ಅಧ್ಯಾಯಂ ಸಂಪೂರ್ಣಂ. ಶ್ರೀಶ್ರೀಶ್ರೀ.

# ಹನ್ನೊಂದನೆಯ ಸಂಧಿ.

## ಸುಧನ್ವನ ಕಥೆ ಪ್ರಾರಂಭ.

ಪ್ರಜಾಹಿತೈಷಿಯಾದ ಎಲೈ ಜನಮೇಜಯರಾಯನೇ ಕೇಳು. ಹೀಗೆ ಸಕಲರೂ ಹಂಸಧ್ವಜನ ಅಪ್ಪಣೆಯಂತೆ ಯುದ್ಧಕ್ಕಾಗಿ ಸಮರಭೂಮಿಯನ್ನು ಕುರಿತು ತೆರಳಿದರು. ಆಗ ಹಂಸಧ್ವಜನ ಮೋಹದಮಗನಾದ ಸುಧನ್ವನು ತನ್ನ ತಾಯಿಯಬಳಿಗೆ ಬಂದು ಭಕ್ತಿಯಿಂದ ಮಣಿದೆರಗಿ ಸಾಷ್ಟಾಂಗ ಪ್ರಣಾಮವಂ ಗೈದು ಅಮ್ಮಾ! ಅರ್ಜುನನ ಕುದುರೆಯನ್ನು ಹಿಡಿದುಕಟ್ಟಿ, ಆತನೊಡನೆ ಯುದ್ಧಮಾಡಿ ಅವನನ್ನು ರಣರಂಗದಲ್ಲಿ ಸೋಲಿಸಿಬರುವೆನು, ನನ್ನನ್ನು ಆಶೀರ್ವ ದಿಸಿ ಕಳುಹಿಸಿಕೊಡು ಎಂದು ಬೇಡಿಕೊಳ್ಳಲು, ತಾಯಿ ಮಗನನ್ನು ಕುರಿತು, ಅಪ್ಪಾ! ನನ್ನ ಮಾತನ್ನು ಲಾಲಿಸು. ಅರ್ಜುನನು ನಾಲ್ಕುಕಾಲಿನ ಹರಿಯನ್ನು ಕಾಯುತ್ತಿರುವನು. ನೀನು ಅದನ್ನು ಸರ್ವಥಾ ಹಿಡಿಯಬೇಡ ಆದರೆ ಅರ್ಜುನ ನನ್ನು ಸುಖದಿಂದ ಸರ್ವದಾ ಕಾಪಾಡುತ್ತಿರುವ ಹರಿಯನ್ನು ಮಾತ್ರ ಹಿಡಿಯು ವನಾಗು ಪೂರ್ವದಲ್ಲಿ ನಾರದಮುನಿಯ ಮುಖದಿಂದ ನಾನು ಆತನ ಲೀಲಾಜಾಲ ಗಳನ್ನೂ ವಿಚಿತ್ರ ವಿನೋದಗಳನ್ನು ಕೇಳಿರುವೆನು. ಕೃಷ್ಣನು ಈಗ ಪ್ರತ್ಯಕ್ಷ ನಾದರೆ ಕಣ್ಣಾರೆ ನೋಡಬಹುದೆಂದು ಹೇಳಿದಳು. ಆ ಮಾತನ್ನು ಕೇಳಿ ಸುಧ ನ್ವನು ಅಮ್ಮಾ! ಕೇಳು. ನಾನೆಂದಿಗೂ ಈ ಮಾತಿಗೆ ತಪ್ಪುವನಲ್ಲ, ಕೃಷ್ಣನನ್ನು ನನ್ನಬಳಿಗೆ ಬರಮಾಡಿಕೊಳ್ಳಲು ಒಂದುಪಾಯವಿದೆ ಹೇಗೆಂದರೆ, "ಕೈಹಿಡಿದಬ ಳಿಕ ಮೈಸಿಕ್ಕದೆ" ಇರುವುದೆ ಎನ್ನುವಂತೆ ಅರ್ಜುನನನ್ನು ಸೋಲಿಸಿದರೆ ಭಕ್ತ ವತ್ಸಲನಾದ ಶ್ರೀಹರಿಯು ತನ್ನ ಪ್ರೀತಿಗೆಪಾತ್ರನಾದ ಅರ್ಜುನನ ಶ್ರಮವನ್ನು ಪರಿಹರಿಸಲು ಮೈದೋರುವನು. ಅನಂತರ ಆತನೆದುರಿಗೆ ನನ್ನ ಸಾಹಸವನ್ನು ತೋರಿಸುವೆನು ಎಂದು ಹೇಳಿದನು. ಅದನ್ನು ಕೇಳಿ ಆತನ ತಾಯಿ ಅಪ್ಪಾ! ಎಳೆಗಂದಿಯಾದ ಹಸುವು ಕರುವನ್ನು ನೆನೆದುಕೊಂಡು ಓಡಿಬರುವಂತೆ ಶ್ರೀಕೃ ಷ್ಣನು ಅರ್ಜುನನಬಳಿಗೆ ಬಂದೇಬರುವನು. ಈ ಮಾತು ಸತ್ಯ, ನೀನು ಆತ ನನ್ನು ಕಂಡು ಹಿಮ್ಮೆಟ್ಟಿದರೆ ಬಂಧುಬಳಗದವರು ನನ್ನನ್ನು ಜರಿದು ತಿರಸ್ಕರಿಸು ವರು. ಆದುದರಿಂದ ಆ ಪರಮಾತ್ಮನನ್ನು ಕಂಡಮೇಲೆ ಹಿಮ್ಮೆಟ್ಟಬೇಡ ಹೋಗು ಎಂದು ಹೇಳಿದಳು. ಆಗ ಸುಧನ್ವನು ಅಮ್ಮಾ ಜನನಿ! ನಾನು ರಣಭೂಮಿ ಯಲ್ಲಿ ಇದಿರಾದ ಕೃಷ್ಣನಿಗೆ ವಿಮುಖನಾಗಿ ಬಂದುದೇ ಆದರೆ ನಿನ್ನ ಹೊಟ್ಟೆ ಯಲ್ಲಿ ಹುಟ್ಟಿದವನೇ? ಹಂಸಧ್ವಜನ ಮಗನೆ? ಅಲ್ಲದೆ ವಿಷ್ಣುಭಕ್ತನೆ? ಹಾಗು ಅಲ್ಲದಿದ್ದರೆ ಹೋಗಲಿ, ವೀರನೆಂಬ ಹೆಸರು ನನಗೆ ಸಲ್ಲುವುದೆ? ಅರ್ಜು

ನನ ಸೈನ್ಯವನ್ನು ಸೂರೆಗೊಂಡು, ಆತನ ಪರಾಕ್ರಮವನ್ನು ಕೈಗೆಡಿಸಿ, ಅಚ್ಯುತನಮುಂದೆ ಅಸಾಧ್ಯವಾದ ನನ್ನ ಸಾಹಸವನ್ನು ತೋರಿಸುವೆನು, ಇಷ್ಟರಮೇಲೆ ಸೋಲುಗೆಲುವುಗಳು ಪುಣ್ಯವಶವಾಗಿರುವುದು ಎಂದನು.

ಬಳಿಕ ಕುವಲೆಯೆಂಬ ಹೆಸರುಳ್ಳ ಆ ಸುಧನ್ವನ ತಂಗಿಯು ಮುತ್ತಿನಾರತಿಯನ್ನು ಬೆಳಗಿ ವಿಜಯಿಯಾಗೆಂದು ಹರಸಿ ಸೇಸೆಯನ್ನು ತಳಿದು ಅಣ್ಣಾ! ಯುದ್ಧಭೂಮಿಯಲ್ಲಿ ನೀನು ಹಿಮ್ಮೆಟ್ಟಿಬಂದರೆ ನಾನು ಮಾವನ ಮನೆಯಲ್ಲಿ ತಲೆಯೆತ್ತಿ ಬಾಳುವಹಾಗಿಲ್ಲ. ಅದಕಾರಣ ಸರ್ವಥಾ ನಿನ್ನ ಪರಾಕ್ರಮವನ್ನು ವ್ಯರ್ಥಮಾಡಿಕೊಳ್ಳಬೇಡ ಎಂದು ಹೇಳಿ ಬೀಳ್ಕೊಟ್ಟಳು. ಇಂತು ಸುಧನ್ವನು ತಾಯಿತಂಗಿಯರಿಂದ ಬೀಳ್ಕೊಂಡು ತನ್ನೇಕಾಂತಮಂದಿರಕ್ಕೆ ಬರುತ್ತಿರಲು ಅವನ ಹೆಂಡತಿಯಾದ ಪ್ರಭಾವತಿಯು ಚಿನ್ನದ ತಟ್ಟೆಯಲ್ಲಿ ಸುಗಂಧಪರಿಮಳಯುಕ್ತವಾದ ಕರ್ಪೂರವೀಳಯಗಳನ್ನೂ ಕಂಪೊಗೆದ ಇಂಪುಸೊಂಪಿನ ಸಂಪಿಗೆ ಹೂಗಳನ್ನು ಇಟ್ಟುಕೊಂಡು ಹಾವಭಾವವಿಲಾಸದ ಬೆಡಗಿನಿಂದ ಬಿಂಕವನ್ನು ತೋರುತ್ತ ಓರನೋಟದ ಪ್ರೀತಿಯಿಂದ ಕಟ್ಟಿರಕದ ಕಾಮರಸವನ್ನು ಮದಧಾರೆಯಾಗಿ ಸುರಿಸುತ್ತ ಮನ್ಮಥನ ಮದ್ದಾನೆಯಂತೆ ಮೆಲ್ಲಮೆಲ್ಲನೆ ನಡೆದು ಬರುತ್ತಿದ್ದಳು. ಚಂದ್ರನನ್ನು ಜರಿವಮುಖವೂ, ಬೆಳ್ದಿಂಗಳನ್ನು ತಿರಸ್ಕರಿಸುವ ಮರಹಾಸವೂ, ಅಚ್ಚಬಿಳಿಪಿನ ಮುಂಜರಗೂ, ಚಿತ್ತದನುರಾಗವನ್ನು ಸೂಸುವ ತಿಲಕರೂಪ ಚಂದ್ರಬೊಟ್ಟು, ಇಂದ್ರನೀಲಮಣಿಗಳ ಸುಂದರವಾದ ಕಾಂತಿಯಂತೆ ಹೊಳೆಯುವ ಕೇಶಪಾಶವೂ, ರಂಜಿತ್ತಿರಲು ನೋಟಕರ ಕಣ್ಮನಗಳನ್ನು ಸೂರೆಗೊಳ್ಳುವಂತೆ ರಾಜಿಸುತ್ತಿರುವ ನುಣ್ಬೊಡೆಯಸೊಬಗೂ ಬೆಡಗಿನನಡೆಯೂ ಸಿಂಗರದಿಂದ ಸಂಗಡಿಸಿದನೆರಿಯೂ, ತೆಳುವಾದಬಸುರೂ, ಪೊಗರೊಗುವ ಅಗಲವಾದದೆಯೂ, ಇಂಬಾಗಿ ಬಳೆದು ತೋರುವ ತೋರವಾದ ಬಲ್ಮೊಲೆಗಳೂ, ಥಳಥಳಿಸಿ ಹೊಳೆಯುತ್ತಿರುವ ಕಡೆಗೆಣ್ಣಿನಕಾಂತಿಯೂ, ಅಂದವಾದ ಆಭರಣಗಳಸೊಬಗೂ, ಅರೆಬಿರಿದ ಮಲ್ಲಿಗೆಯನ್ನು ಮುಡಿದ ಕಿರುಜಡೆಯೂ, ಯೌವನದ ಕಳೆಗಳಿಂದ ಸೊಗಸಾಗಿ ತೋರುವ ಅವಯವದಬೆಡಗೂ, ಬೆಡಗಿಗೆತಕ್ಕ ಭೋಗರಸವೂ, ಥಳಥಳಿಸುತ್ತಿರಲು ತನ್ನ ಗಂಡನಾದ ಸುಧನ್ವನಮುಂದೆ ಬೇರೊಂದು ಬಗೆಯ ಮನ್ಮಥನ ಮದ್ದಾನೆಯಂತೆ ಕಂಗೊಳಿಸುತ್ತ ಚಂದ್ರಕಾಂತಶಿಲೆಯಿಂದ ಮಾಡಿದ ಅಂದಚೆಂದದ ಬೊಂಬೆಯಂತೆ ಪ್ರಭಾವತಿಯು ಕಳಕಳಿಸುತ್ತಿದ್ದಳು.

ಇಂತು ಸಂತಸದ ಸಮ್ಮೋಹನಾಸ್ತ್ರದಂತೆ, ನನ್ನ ಮೈಸಿರಿಗೆ ಈ ತಟ್ಟೆಯಲ್ಲಿರುವ ಸಂಪಗೆಯಹೂಗಳು ಸರಿಬರುವುವೇ? ನೋಡು ಎಂದು ಹೇಳುವ ಹಾಗೆ ಕೈಗಳಲ್ಲಿ ಹಿಡಿದುತಂದ ತಟ್ಟೆಯಲ್ಲಿ ಹರಡಿದ್ದ ಸರಸಪರಿಮಳ ಗಂಧಾನುಲೇಪನಗಳನ್ನು ತೆಗೆದುಕೊಂಡು, ಹುಸಿನಗೆಯಿಂದ ಹೆಂಡತಿಯ ಮುಖವನ್ನು

ನೋಡಿ, ಯುದ್ಧಭೂಮಿಗೆ ಹೋಗಬೇಕೆಂಬ ಆತುರದಿಂದ ! ಪ್ರಿಯೆಲಾಲಿಸು. ಈ ದಿನ ನಾನು ಅರ್ಜುನನೊಡನೆ ಯುದ್ಧಮಾಡುವುದಕ್ಕೆ ರಣಭೂಮಿಗೆ ಹೋಗಿ, ಅವನ ಅಂಕಬಿಂಕದ ಗರ್ವವನ್ನು ಮುರಿದು, ಅವನ ಸಹಾಯಕ್ಕೆ ಬಂದ ಬಲ ವೈರಿಯಾದ ಕೃಷ್ಣನಮುಂದೆ ನನ್ನ ಸಾಹಸವನ್ನು ತೋರಿಸುವೆನು, ಅದು ಸಾಗದಿದ್ದರೆ ಎಂದೆಂದಿಗೂ ಜನ್ಮವೆ ಇಲ್ಲದಂತಹ ದಿವ್ಯಮುಕ್ತಿಯನ್ನು ಪಡೆಯು ವೆನುಇದಕ್ಕಾಗಿನೀನು ಚಿಂತಿಸಬೇಡ! ಸಂತೋಷದಿಂದ ನನ್ನನ್ನುಕಳುಹಿಸಿಕೊಡು ಎಂದನು, ಅದನ್ನು ಕೇಳಿ ಪ್ರಭಾವತಿಯು ಓ ಪ್ರಾಣವಲ್ಲಭಾ ! ಯುದ್ಧದಾಸೆ ಯಿಂದ ನೀನು ಶುದ್ಧಚೈತನ್ಯಸ್ವರೂಪನಾದ ಶ್ರೀಹರಿಗೆ ಇದಿರಾದ ಬಳಿಕ ಮುಕ್ತಿಯನ್ನೆ ಹೊಂದುವೆಯಲ್ಲದೆ ಮರಳಿ ಬರುವುದಿಲ್ಲ. ಬಳಿಕನಿನ್ನ ವಿವೇಕ ಸಂತಾನಕ್ಕೆ ಹಾನಿಯಾಗುವುದು. ಸಂತಾನಹೀನನಾದವನಿಗೆ ವೈರಾಗ್ಯದಿಂದಲೂ ಮುಕ್ತಿಯುಂಟಾಗದು. ಯುದ್ಧಕ್ಕೆ ಹೋಗುವವನ ಬಾಳಿನ ಬೆಳವಣಿಗೆಗೆ ಸಂತಾನವಿಲ್ಲದಿದ್ದರೆ ಮುಂದೆ ಅಭಿವೃದ್ಧಿಯುಂಟೆ ? ಆದಕಾರಣ ಜಲವೋದ ಯದ ಋತುಸಮಯವಾದ ಈ ಕಾಲದಲ್ಲಿ ನಿನ್ನ ಭೂಮಿಯಲ್ಲಿ ಸಂತಾನವೆಂಬ ವಿವೇಕ ಬೀಜವನ್ನು ಬಿತ್ತಿದರೆ ಬಾಳಿಕೆಗೆ ಭಂಗವಾಗದು ಮುಂದೆ ಬೆಳೆಯನ್ನು ಬಿತ್ತುವ ಬೆದೆಗಾಲವು ಬರುವುದೆಂದು ಯೋಚಿಸಬೇಡ ತುದಿಯಾಂತು ಮಳೆಗಳು ವಿಶಾಖೆಯನ್ನು ಮೀರಿರುವುವು ಆದಕಾರಣ ಇಲ್ಲಿಂದಮುಂದೆ ಸಂತಾನವೆಂಬ ಬೆಳೆಯು ಉದ್ಭವಿಸಲಾರದೆಂದು ಹೇಳಿದಳು. ಅದನ್ನು ಕೇಳಿ ಸುಧನ್ವನು ಕಾಂತೇ ! ನೀನು ತಿಳಿಯದವಳಲ್ಲ. ನಿನ್ನ ಮಾತುಗಳೆಲ್ಲ ನಿಜ. ಆದರೆ ಇದು ಸಮಯವಲ್ಲ. ರಣರಂಜಿತಗಳಾದ ಬೇರಿಗಳು ಮೊಳಗಿ ಮೊನೆಗಾರರಾದ ತನಿ ವೀರರನ್ನು ಅನುವರಕ್ಕೈತರುವಂತೆ ಕರೆಯುತ್ತಿರುವುವು. ಅರಸನಾದ ತಂದೆಯು ಆಜ್ಞೆಯನ್ನು ಮೀರಿದರೆ ಆತನ ಕಟ್ಟಳೆಗೆ ಒಳಗಾಗದೆ ಬದುಕಲಾರೆನು. ಇದೆಲ್ಲ ವನ್ನೂ ಬಲ್ಲ ನೀನು ಅನುಕೂಲಭಾವದಿಂದ ನನ್ನ ಕಳುಹಿಸಿಕೊಡು ಎಂದು ಮೃದುಮಧುರವಚನಗಳಿಂದ ಸಂತೈಸುತ್ತ ಲಲ್ಲೆವಾತುಗಳ ಬೆಡಗಿನಿಂದ ಗಲ್ಲ ವನ್ನುಹಿಡಿದು ಮುದ್ದಿಸಿ, ಹೊರಡುವುದಕ್ಕುದ್ಯುಕ್ತನಾಗಲು, ಆತುರದಿಂದ ಕಾತ ರಿಸುತ್ತಿರುವ ಆ ರಮಣೀಮಣಿಯು ಆಹಾ ! ಅಸಂಗಸಂಗರಕ್ಕೆ ಅಂಜಿಹೋ ಗುವ ನೀನು ವಿಶ್ರುತಶಾಲಿಯಾದ ವಿಜಯನ ಸಮರಾಂಗಣದಲ್ಲಿ ಕಾದಬಲ್ಲೆಯಾ ನಿನ್ನ ಪರಾಕ್ರಮವನ್ನು ಏನುಹೇಳಲಿ . ಎಂದು ಗರ್ವದಿಂದ ನುಡಿದು, ಮಿಡಿ ದರೆ ಒಡೆದುಹೋಗುವಂತೆ ಅಮೃತರಸದಿಂದ ತುಂಬಿತುಳುಕುತ್ತಿರುವ ಬಟ್ಟೊ ಲೆಗಳನ್ನು ಅವನ ಉರಸ್ಥಲಕ್ಕೊತ್ತಿಗೊಟ್ಟು, ಗಾಢಾಲಿಂಗನದಿಂದ ಬಿಗಿಯಪ್ಪಿ ಕುಡಿನೋಟದಿಂದಾತನ ಮನೋಭಾವವನ್ನು ನೋಡುತ್ತ, ಶೃಂಗಾರರಸಭರಿತ ವಾದ ಕುಂಭಕುಚಗಳೊಡದು ಸೋರುತ್ತಿರುವ ತನಿರಸದಬಿಂದುಗಳೋ ಎನ್ನು

ವಂತೆ ಕತ್ತಿನ ಮುತ್ತಿನಹಾರವು ಹರಿದು ಹರಡುತ್ತಿರಲು, ಸೊಕ್ಕಿಸಿಂದ ತಕ್ಕೈಸಿದವಳಾಗಿ, ಪ್ರಿಯಸಂಗವನ್ನು ಬಳಸಿದ ಬಳ್ಳಿಯಂತೆ ಹೊಳೆಯುತ್ತಿದ್ದಳು. ಆಗ ಕಣ್ಣುಗಳು ಕಾತರಗೊಂಡು, ಮುಡಿದಹೂಗಳು ಹೊರಸೂಸಿ, ಚಂದ್ರನಂತೆ ನುಣುಪಾದ ಮುಖವು ಬೇರೊಂದುಬಗೆಯಾಗಿ ಮಾತುಗಳು ದೈನ್ಯವನ್ನುಹೊಂದಿ ಕೈಗಳು ಕಲಾಸ್ಥಾನಗಳನ್ನು ಸೋಕುತ್ತ ಮೈಪುಳಕದಿಂದೊಡಗೂಡಿ, ಮನ್ಮಥಾತುರವು ಮುಮ್ಮಡಿಯಾಗಿ, ತೋರನೊಲೆಗಳಿಂದ ಓರೆಯಾಗಿ ಸೆರಗು ಜಾರಿ ಹೋಗಿ ನೆರಿಗಳಬಿಗಿಯು ಸಡಿಲವಾಗಿ, ಕಾಮರಸವು ಉಕ್ಕುತ್ತಿರಲು ಬಲಾತ್ಕಾರದಿಂದ ತನ್ನ ಗಂಡನನ್ನು ಬರಸೆಳೆದು ಹಂಸತೂಲಿಕಾತಲ್ಪಕ್ಕೆ ಕರೆದುಕೊಂಡು ಹೋದಳು.

ಆಗ ಸುಧನ್ವನು ತನ್ನ ಮನದಲ್ಲಿ ಹೆಂಡತಿಯಾದವಳು ಋತುಸ್ನಾತೆಯಾಗಿ ಏಕಾದಶೀವ್ರತವು ಬಂದು ಆ ದಿನವೇ ಪಿತೃಶ್ರಾದ್ಧವೂ ಆಗಬೇಕಾದರೆ ಪೈತೃಕದ ಶೇಷಾನ್ನದ ವಾಸನೆಯನ್ನು ಗ್ರಹಿಸಿದರೆ ಪಿತೃಪ್ರಸಾದವನ್ನುಂಡಂತೆ ಆಗುವುದು. ಮಧ್ಯರಾತ್ರಿಯು ಕಳೆದಬಳಿಕ ಹೆಂಡತಿಯನ್ನು ಒಡಗೂಡಬಹುದೆಂದು ಧರ್ಮಶಾಸ್ತ್ರವಿರುವುದು. ಆದುದರಿಂದ ಋತುಸ್ನಾನಮಾಡಿ ಪತಿಯಲ್ಲಿ ರತಿದಾನವನ್ನು ಬೇಡುತ್ತಿರುವ ಈ ಸತಿಯನ್ನು ತಿರಸ್ಕರಿಸುವುದು ಯುಕ್ತವಲ್ಲವೆಂದು ಚಿಂತಿಸಿ, ತಂದೆಯ ಅಪ್ಪಣೆಯನ್ನುಮೀರಿ ಕೃಷ್ಣಸಂದರ್ಶನಕ್ಕೆ ಹೊರಗಾಗಿ, ಈ ತರುಣಿಯಲ್ಲಿ ರಮಿಸಿದರೆ ನನಗೆಂದಿಗೂ ಪಾಪವಿಲ್ಲವೆಂದು ತಿಳಿದು ಧೈರ್ಯವನ್ನವಲಂಬಿಸಿ ಸುಧನ್ವನು ಸರಸ, ಚುಂಬನ, ಲಲ್ಲೆ ಮಾತು ನಖಕ್ಷತ, ಗದ್ಗದಸ್ವರ, ಪ್ರೌಢಬಂಧ, ಸಮ್ಮೋಹನಾಲಿಂಗನ, ಗಾಢತಾಡನಂಗಳೆಂಬ ರತಿಶಾಸ್ತ್ರದ ರಹಸ್ಯಗಳನ್ನು ಬಿಡದೆ ಸಮರತಿಯಲ್ಲಿ ಸುಖವನ್ನು ಅನುಭವಿಸಿದನು.

ಅನಂತರದಲ್ಲಿ ಆ ಕಾಂತಾಮಣಿಯು ಅತಿಶಯವಾದ ಅನಂಗಸಮರದ ಆಪ್ಯಾಯಕರ ಸುಖಸಂತೋಷಗಳಿಂದ ತೃಪ್ತಿಪಟ್ಟು, ಮನುಮಾರ್ಗದಿಂದ ಉಚಿತಕಾರ್ಯವನ್ನು ನೆರವೇರಿಸಿದೆನೆಂಬ ಸಂತೋಷವನ್ನಾಂತು ಅವಳಿಂದ ಬೀಳ್ಕೊಂಡು ಯುದ್ಧಭೂಮಿಗೆ ಹೊರಡಲುದ್ಯುಕ್ತನಾದನು. ಇತ್ತಲಾದರೋ ! ಅರ್ಜುನನ ಕುದುರೆಯನ್ನು ಕಟ್ಟುವಕಾತರದಿಂದ ಕದನಭೂಮಿಗೈ ತರುತ್ತಿರುವ ವೀರಭಟರ ಸಂದಣಿಯಲ್ಲಿ ಶೂರಾಗ್ರಗಣ್ಯನಾದ ತನ್ನ ಕುಮಾರನು ಇಲ್ಲದಿರುವುದನ್ನು ಕಂಡು ಹಂಸಧ್ವಜನು ಕೋಪದಿಂದಕುದಿಯುತ್ತ, ತನ್ನಬಳಿಯಲ್ಲಿದ್ದ ಮಂತ್ರಿಯ ಮುಖವನ್ನು ನೋಡಿದನು. ಕೂಡಲೆ ಆತನು ಕ್ರೂರರಾದ ಚಾರಕರನ್ನೋಡಿಸಲು, ಅವರು ಮಾರ್ಗಮಧ್ಯದಲ್ಲಿ ಬರುತ್ತಿರುವ ಸುಧನ್ವನನ್ನು ಹಿಡಿದು ಹಗ್ಗಗಳಿಂದ ಬಿಗಿದು ತಂದು ತಂದೆಯಮುಂದೆ ನಿಲ್ಲಿಸಿದರು. ಆ ಕಟ್ಟುಸಹಿತನಾಗಿ ಸುಧನ್ವನು ಹಂಸಧ್ವಜನ ಪಾದಗಳಿಗೆ ಪೊಡಮಟ್ಟು ತಲೆವಾಗಿ ನಿಂತುಕೊಂಡನು.

ಅದನ್ನು ಕಂಡು ಮರಾಳಧ್ವಜನು ಎಲಾ ಮೂಢಾಗ್ರಗಣ್ಯ ! ನನ್ನ ಕಟ್ಟಳೆಯನ್ನು ಮೀರಿ, ಶ್ರೀಹರಿಯದೀಕ್ಷೆಗೆ ಸಲ್ಲದೆ ದೂರವಾಗಿರಲು ಕಾರಣವೇನು ಎಂದು ಬೆಸಗೊಂಡನು. ಋತುಸ್ನಾತೆಯಾದ ಸತಿಯು ಸಂತತಿಯನ್ನು ಕೋರಿ ಎಂತಾದರೂ ಬಿಡದಿದ್ದುದರಿಂದ ನಿಂತೆನೆಂದು ಸುಧನ್ವನು ವಿನಯಯುಕ್ತನಾಗಿ ಗಂಭೀರದಿಂದ ನುಡಿಯಲು, ಆಹಾ ! ಇದೆಂದಿಗೂ ನಿಜವಲ್ಲ, ಇವನನ್ನು ಹೊರಕ್ಕೆ ನೂಕು. ಶ್ರೀಕೃಷ್ಣನ ಸಂದರ್ಶನವು ಲಭಿಸುವ ಕಾಲದಲ್ಲಿ ಇತರ ಧರ್ಮಗಳನ್ನು ನೋಡಬಹುದೆ ? ಪುರೋಹಿತರನ್ನು ಬರಮಾಡು, ಈ ತಪ್ಪಿಗೆ ತಕ್ಕಶಿಕ್ಷೆ ಏನುಂಟೋ ಕೇಳೋಣ ! ಎಂದು ಆಜ್ಞಾಪಿಸಿದನು.

ಚಾರರ ಮುಖದಿಂದೀವಾರ್ತೆಯನ್ನು ಕೇಳಿದ ಶಂಖಲಿಖಿತರು ದೊರೆಯ ಬಳಿಗೆ ಬಂದು, ಅಯ್ಯಾ ! ಏತಕ್ಕಾಗಿ ಯೋಚಿಸುತ್ತಿರುವೆ ? ಮಗನಮೇಲಣಾಸೆಯಿಂದ ರಾಜ್ಯದ ಕಟ್ಟಳೆಯನ್ನು ಮೀರಿ ನಡೆದರೆ ನಾವೆಂದಿಗೂ ನಿಮ್ಮ ರಾಜ್ಯದಲ್ಲಿರಲಾರೆವು. ಹಿಂದೆ ಸತ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ರುಕ್ಮಾಂಗದ ಹರಿಶ್ಚಂದ್ರ ಮೊದಲಾದ ರಾಜರು ನಾನಾಶ್ರಮಗಳನ್ನು ಸಹಿಸಲಿಲ್ಲವೆ ? ಯೋಚಿಸು ಎಂದು ಹೇಳಿದರು. ಆಗ ಹಂಸಧ್ವಜನು ತನ್ನ ಮಂತ್ರಿಯಾದ ಸುಮತಿಯನ್ನು ಕರೆದು ಇವನನ್ನು ಕುದಿವೆಣ್ಣೆಯ ಕಟಾಹದಲ್ಲಿ ಹಾಕಿಸು ಎಂದು ನೇಮಿಸಿದನು. ಅದನ್ನು ಮೀರಲಾರದೆ ಮಂತ್ರಿಯು ಸುಧನ್ವನ ಕೈಕಾಲುಗಳನ್ನು ಕಟ್ಟಿಸಿ, ಕುದಿಯುತ್ತಿರುವ ಎಣ್ಣೆಯಿಂದ ತುಂಬಿದ ಕೊಪ್ಪರಿಗೆಯ ಬಳಿಗೆ ಎಳೆತರಿಸಿ, ಆತನ ಮುಖವನ್ನು ನೋಡಿ ಮರುಗುತ್ತ ಅಪ್ಪಾ ! ಲೋಕವಿಖ್ಯಾತನಾಗಿ, ಅಭಿಮಾನಶಾಲಿಯೆನಿಸಿ, ಹರಿಭಕ್ತನಾಗಿ, ಸುಂದರಾಂಗನಾಗಿ, ಶಾಯ್ತಂದೆಗಳ ಸೇವೆಯಲ್ಲಿ ನಿರತನಾಗಿ, ಪಾಪವಿದೂರನೆಂದು ಪ್ರಖ್ಯಾತಿವೆತ್ತು, ಕೋಮಲಾಂಗನಾಗಿ, ಕೋವಿದಾಗ್ರಣಿಯೆನಿಸಿ, ಪಾವನವಾದ ಸುಖವುಳ್ಳವನಾಗಿ ಸರ್ವದಾ ಸಜ್ಜನರ ಸಂಗದಲ್ಲಿರುವ ನಿನ್ನಂತಹ ಸತ್ಪುತ್ರನನ್ನು ಕುದಿವೆಣ್ಣೆಯಕಟಾಹದಲ್ಲಿ ಕೆಡಹಿ ಎಂದು ಆಜ್ಞೆಮಾಡಿದ ಹಂಸಧ್ವಜನು ಇಂತಹ ಕ್ರೂರಿಯಾಗಬಹುದೆ ? ಸುಗುಣಭೂಷಣನಾಗಿ, ನೀತಿನೇತ್ರನೆನಿಸಿ, ಆಚಾರಸಂಪನ್ನತೆಯನ್ನು ಪಡೆದು, ಉತ್ತಮನೆಂಬ ಹೆಸರಾಂತು, ದಾತನೆಂಬ ಖ್ಯಾತಿವೆತ್ತು, ರಂಜಿಸುವ ನಿನ್ನಂತಹ ಪುತ್ರನನ್ನು ಹೇಗೆ ತಪ್ತತೈಲಕಟಾಹದಲ್ಲಿ ಕೆಡಹಿಸಲಿ ಎಂದು ಚಿಂತಿಸುತ್ತಿರಲು, ಎಲೈ ಮಂತ್ರಿಯೇ ! ಏಕೆ ಚಿಂತಿಸುವೆ, ಹೆದರಬೇಡ ನಾನು ಇದುವರಗೂ ಧರ್ಮಮಾರ್ಗವನ್ನು ಮೀರಿ ನಡೆದವನಲ್ಲ. ಹಗೆಗಳೊಡನೆ ಹೊಡೆದಾಡಿ ಯುದ್ಧರಂಗದಲ್ಲಿ ಮಡಿದುಹೋಗುವ ಈ ದೇಹವು ದುಃಖದಿಂದಳಿದುಹೋಗುವುದಲ್ಲಾ ! ಎಂದು ಚಿಂತಿಸುತ್ತಿರುವೆನು. ಆದರೂ ಭಕ್ತವತ್ಸಲನಾದ ಶ್ರೀಹರಿಯನ್ನು ಮರೆಹೊಗುವೆನು ನಿನ್ನ ಕಾರ್ಯವನ್ನು ನೀನು ಮಾಡು ಎಂದು ಹೇಳಲು ಸುಧನ್ವನನ್ನು ಮಂತ್ರಿಯು ಕುದಿಯುತ್ತಿರುವ ಎಣ್ಣೆಯ ಕಟಾಹದಲ್ಲಿ ಕೆಡಹಿಸಿದನು.

ಆಗ ಅಲ್ಲಿದ್ದವರೆಲ್ಲರೂ ಹಾಹಾಕಾರದಿಂದ ಹಲಬುತ್ತ ಹಲವುಬಗೆಯಿಂದ ಹಂಬಲಿಸುತ್ತಿದ್ದರು. ಆದರೆ ಸುಧನ್ವನು ಸರ್ವವಸ್ತುಸ್ವರೂಪನಾಗಿ, ಸುಜನ ಸಂತಾಪಹಾರಕನೆನಿಸಿ, ಎಲ್ಲರಲ್ಲಿಯೂ ಅಡಗಿಕೊಂಡಿರುವ ಅಚ್ಯುತನನ್ನು ಜನಾರ್ದನ, ಮುಕುಂದ, ಮುರಹರ, ವಿಜಯಮಿತ್ರ, ಗೋವಿಂದ, ಪಕ್ಷಿವಾಹನ, ಕಮಲನಯನ, ಪೀತಾಂಬರ, ಅಚ್ಯುತ, ನೀಲಮೇಘಶ್ಯಾಮ, ಹರಿ, ಕೃಷ್ಣ, ವೈಕುಂಠ ಮೊದಲಾದ ದಿವ್ಯನಾಮಗಳಿಂದ ಸ್ತುತಿಸಿ, ಭೋ ದೇವಾ ! ಹಿಂದೆ ಪ್ರಹ್ಲಾದನನ್ನು ಪ್ರಾಣದಿಂದ ಸಂರಕ್ಷಿಸಿದೆ, ಅಬಲೆಯಾದ ದ್ರೌಪದಿಯ ಮಾನವನ್ನು ಪ್ರಬಲತರವಾಗಿ ಕಾಪಾಡಿದೆ, ಆಪದ್ಗತರಾಗಿ ಆರಿಕೆಮಾಡಿಕೊಂಡ ಆರ್ಯಜನರ ಅನಂತಕಷ್ಟಗಳನ್ನು ಅರೆಗಳಿಗೆಯಲ್ಲಿ ನೀಗಾಡಿದೆ, ಎಲೈ ಶ್ರೀಹರಿಯೇ ! ನೀನಲ್ಲದೆ ಸಂರಕ್ಷಿಸುವ ದಾತರನ್ನೂ ನಾನು ಕಾಣೆ ಆದುದರಿಂದ ನಿನ್ನನ್ನೇ ಮರೆವೊಕ್ಕಿರುವೆನು ಸಲಹುಸಲಹು ಎಂದು ಹರಿಯನ್ನು ಧ್ಯಾನಿಸುತ್ತ, ತಣ್ಣಸದಿಂದ ರಾಜಿಸುವ ಹುಣ್ಣಿಮೆಯ ಚಂದ್ರನಂತೆ ಹೊಳೆಯುತ್ತಿದ್ದನು. ಆ ಸುಧನ್ವನಿಗೆ ಕಾದುಕುದಿಯುತ್ತಿರುವ ಎಣ್ಣೆಯು ಹರಿಭಕ್ತಿಪ್ರಭಾವದಿಂದ ಶ್ರೀಗಂಧದಂತೆ ತಂಪಾಗಿರಲು, ಆತನ ದೇಹದಲ್ಲೊಂದು ಕೂದಲೂ ಬಾಡದೆ, ಮುಡಿದ ಹೂ ಕಂದದೆ, ತುಲಸಿಯ ಮಾಲೆಯು ಕಳೆಗುಂದದೆ ಮುಖವು ವಿಕಾರವಾಗದೆ, ಸೂರ್ಯೋದಯದಲ್ಲಿ ಅರಳುವ ಕಮಲದಂತೆ ಅತಿ ಮನೋಹರವಾಗಿ ಕಾಣುತ್ತಿದ್ದಿತು. ಅದನ್ನು ನೋಡಿ ದುರುಳನಾದ ಲಿಖಿತನು ಆಹಾ ! ಇವನು ಅಗ್ನಿಸ್ತಂಭನ ಮಂತ್ರವನ್ನು ತಿಳಿದಿರುವನು, ಬೇಗನೆ ಎಳನೀರುಗಳನ್ನು ತರಿಸಿ ಹೊಯ್ದು ನೋಡಿ ಎಂದು ಹೇಳಿ ಹಾಗೆಯೆ ಮಾಡಿಸಲು, ಮುಗಿಲು ಮುಟ್ಟುವಂತೆ ಭುಗಿಲುಗೊಂಡೆದ್ದ ಉರಿಯು ಹೊರಸೂಸಿ ಲಿಖಿತನ ಗಡ್ಡಮೀಸೆಗಳನ್ನೂ ಮೈಮಾರುಗಳನ್ನು ಸುಟ್ಟುಬಿಟ್ಟಿತು. ಅದನ್ನು ಕಂಡು ಆ ಸುಧನ್ವನು ಹುಸಿನಗೆಯಿಂದ ಉಬ್ಬುತ್ತಿದ್ದನು. ಹರಿಧ್ಯಾನದಿಂದ ನಿಶ್ಚಲಾಂತಃಕರಣನಾಗಿ ಸುಖದಲ್ಲಿ ಕುಳಿತಿರುವ ಸುಧನ್ವನನ್ನು ಕಂಡು, ಪಶ್ಚಾತ್ತಪ್ತನಾಗಿ ವಿವೇಕಿಯಾದ ಲಿಖಿತನು ಆಹಾ ! ವಿಷ್ಣುಭಕ್ತನಿಗೆ ದ್ರೋಹಮಾಡಿದೆನಲ್ಲಾ ? ಇದಕ್ಕೆ ಪರಿಹಾರವೇನು ? ಇವನು ಹರಿಭಕ್ತನೇ ಹೌದು. ಈತನಿಗೆ ಮಾಡಿದ ಅಪಕಾರವು ಮರಣದಿಂದಲ್ಲದೆ ಬೇರೆವಿಧದಿಂದ ನಾಶವಾಗದು ಎಂದು ಚಿಂತಿಸಿ, ತಾನೂ ಆ ತೈಲಕಟಾಹದಲ್ಲಿ ಧುಮುಕಿ, ವಿಷ್ಣುಭಕ್ತರ ಸಹವಾಸದಿಂದ ದೊರೆಯುವ ಸುಖವೆಂಥದೋ ಕಾಣೆನೆಂದು ಹೇಳುವಂತೆ ಶಾಂತಶೀತಳವಾದಂಗದಿಂದ ಹೊಳೆಯುತ್ತಿದ್ದನು. ಹಂಸಧ್ವಜನು ಇದನ್ನು ಕೇಳಿ ಅಲ್ಲಿಗೆಬಂದು ಅವರಿಬ್ಬರನ್ನೂ ಹೊರಕ್ಕೆ ತೆಗೆಯಿಸಿ, ಅಕ್ಕರೆಯಿಂದ ಮಗನನ್ನೂ ಭಕ್ತಿಯಿಂದ ಪುರೋಹಿತನನ್ನೂ ಆಲಿಂಗಿಸಿದನು. ಬಳಿಕ ಪನ್ನೀರಮಿಂದು, ದುಕೂಲವನ್ನುಟ್ಟು, ಚಂದನಗಂಧವಂಪೂಸಿ,

ಕನ್ಮಾಲರಂಮುಡಿದು, ಯಕ್ಷಕರ್ದಮದಿಂದ ಸೊಗಸಿ ಕಸ್ತೂರಿಯತಿಲಕವನ್ನಿಟ್ಟು, ರತ್ನಾಭರಣಗಳನ್ನು ತೊಟ್ಟು, ಕಪ್ಪುರವೀಳೆಯವನ್ನು ಸವಿದು, ತನ್ನನ್ನು ಕಾಯ್ದ ಶ್ರೀಕೃಷ್ಣನನ್ನು ಧ್ಯಾನಮಾಡುತ್ತ ದೇವಪುರನಿಲಯನಾದ ಶ್ರೀರಮಣನನ್ನು ನೋಡಬೇಕೆಂಬ ಹರುಷದಿಂದ ಸುಧನ್ವನು ಕಳೆಯೇರಿದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿನಾಗಶರ್ಮಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಹನ್ನೊಂದನೆಯ ಸಂಧಿ ಸಂಪೂರ್ಣಂ. ಶ್ರೀ. ಶ್ರೀ. ಶ್ರೀ.

## ಹನ್ನೆರಡನೆಯ ಸಂಧಿ.

### ಅರ್ಜುನ ಸುಧನ್ವರ ಕಾಳಗ.

ಚಂದ್ರವಂಶಕ್ಕೆ ಶಿಖಾಮಣಿಯಾದ ಎಲೈ ಜನಮೇಜರಾಯನೇ ! ಮುಂದೆ ನಡೆದ ಕಥೆಯನ್ನು ಲಾಲಿಸು. ಸುಧನ್ವನು ನಾರಸಿಂಹಸ್ಮರಣೆಯಿಂದ ಕಾದೆಣ್ಣೆಯ ಕೊಪ್ಪರಿಗೆಯ ಉರಿಯನ್ನು ಜಯಿಸಿದ ಬಳಿಕ ಪುರೋಹಿತನಾದ ಲಿಖಿತನು ಕೃತ್ರಿಮ ಬುದ್ಧಿಯಿಂದ ವಿಷ್ಣುಭಕ್ತನನ್ನು ನೋಯಿಸಿದ ಮಹಾಪಾತಕಕ್ಕೆ ಹೆದರಿ ತಾನೂ ಆ ತೈಲಕಟಾಹದಲ್ಲಿ ಬಿದ್ದು ಪ್ರಾಣವನ್ನು ಬಿಡುವೆನೆಂದು ಧುಮ್ಮಿಕ್ಕಲು, ತಣ್ಣಸದಿಂದ ನುಣ್ಪಿತ್ತು ಪೂಳೆಯುತ್ತಿರುವ ಅವರಿಬ್ಬರನ್ನು ಹಂಸಧ್ವಜನು ಹೊರಕ್ಕೆ ತೆಗೆಯಿಸಿ ಮನ್ನಿಸಿದ ಬಳಿಕ ಲಿಖಿತನು ಆ ರಾಜನನ್ನು ಕುರಿತು ಇಂತೆಂದನು:—

ಅಯ್ಯಾ ತ್ರಿಲೋಕಮಾನ್ಯನಾದ ಪುತ್ರವಂತನೇ ! ನಿನ್ನ ಮಗನಾದ ಸುಧನ್ವನ ದೆಸೆಯಿಂದ ನಿನ್ನ ಸಂಭಂಧವಾದ ರಾಜ್ಯವೂ, ನಾಡೂಬೀಡೂ, ಊರುಕೇರಿಗಳೂ, ಪ್ರಜಾ ಪರಿವಾರವೂ, ಆನೆ ಕುದುರೆಗಳೂ, ಮಂದಿಮಾರ್ಬಲವೂ, ತರುಗುಲ್ಮಲತೆಗಳೂ, ಅಣುರೇಣುತೃಣಕಾಷ್ಠಂಗಳೂ ಸಹ ಪರಿಶುದ್ಧವಾದುವು ನಾನಾದರೂ ಅಜ್ಞಾನಿಯಾಗಿ ಬ್ರಾಹ್ಮಣಾಧಮನೆನಿಸಿ ಸೂರ್ಯರಶ್ಮಿಯನ್ನು ನೋಡಲರಿಯದ ಗೂಗೆಯಂತೆ ದ್ರೋಹ ಬುದ್ಧಿಯಿಂದ ಹಿಂಸಕನಾದೆನು. ಎಂದು ಮರುಗುತ್ತಿರಲು, ಆತನ ಅಣ್ಣನಾದ ಶಂಖನು ಮುಂದೆ ಬಂದು ಲಿಖಿತನನ್ನು ಸಮಾಧಾನಮಾಡಿ ಎಲೈ ರಾಜ ಮೌಳಿಯೇ ! ಈ ಭೂತಳದಲ್ಲಿ ವಿಷ್ಣುಭಕ್ತರಾದವರಿಗೆ ಎಡರುತೊಡರುಗಳೆಂಬ ಬಂಧ ರೂಪವಾದ ಭಯಶೋಕಗಳೆಲ್ಲಿಂದ ಬಂದಿತು ? ಬೇಸಿಗೆಯಲ್ಲಾದರೂ ಬೆಳದಿಂಗಳು

ಬೆಮರುವುದುಂಟೆ ? ಅರಿಯದೆ ಅಜ್ಞಾನದಿಂದ ಇವನ ನಿಜವನ್ನು ಕಾಣದೆ ಮೂಢರಾಗಿ ಪಾಪ ಬುದ್ಧಿಯನ್ನೆಸಗಿದೆವು, ಇನ್ನು ಚಿಂತಿಸಿ ಫಲವೇನು, ನಿನ್ನ ಮಗನನ್ನು ಯುದ್ಧಕ್ಕೆ ಕಳುಹಿಸು ಎಂದು ಹೇಳಿದನು. ಬಳಿಕ ಹಂಸಧ್ವಜನು ಸುಧನ್ವನನ್ನು ಅಕ್ಕರೆಯಿಂದ ಆಲಿಂಗಿಸಿದನು ಆಗಲಾ ಸುಧನ್ವನು ತಂದೆಯ ಪಾದಗಳಿಗೆರಗಿ ಶಂಖಲಿಖಿತರಿಗೆ ನಮಸ್ಕರಿಸಿ ಸಾರಥಿಯನ್ನು ಆದರಿಸಿ, ಪೊಂದೇರಿಗೆಂದವಾದ ಕುದುರೆಗಳನ್ನು ಹೂಡಿ ಟೆಕ್ಕೆಯಕ್ಕೆ ಸಿಂಧವನ್ನು ಬಿಗಿದು ಬಂಧಿಸಿ, ಕನಕಾಭರಣ ಹೂಮಾಲೆ ಝಲ್ಲರಿಗಳಿಂದ ಅಲಂಕರಿಸಿ, ವಿಜಯಧ್ವನಿಯು ದೆಸೆದೆಸೆಗಳನ್ನು ದಳ್ಳಿಡುತ್ತಿರಲು ರಥವನ್ನು ಹತ್ತಿದನು.

ಕೇಳೈ ಜನಮೇಜಯರಾಯನೇ ಇಂತು ಉಬ್ಬಿದುತ್ಸಾಹದಿಂದಬ್ಬರಿಸಿ ಯುದ್ಧಕ್ಕಾಗಿ ರಥವನ್ನೇರಿದ ತನ್ನ ಮಗನನ್ನು ಕಂಡು ಹಂಸಧ್ವಜನು ಹರ್ಷವಾಂತನು. ಬಳಿಕ ರಣಭೇರಿ ಪಟಹ ನಿಸ್ಸಾಳ ತಮ್ಮಟಾದಿಗಳು ಭೋರ್ಗರೆದವು ಸಂತೋಷದಿಂದ ಬಾಹುಗಳನ್ನು ಬಡಿದಪ್ಪಳಿಸಿ, ಬಿಲ್ಲುಬಾಣಗಳನ್ನು ಹಿಡಿದು ಅರ್ಧಯೋಜನದ ವರೆಗೂ ಅಟ್ಟಹಾಸದಿಂದೊದಗಿ ವೀರರಸವನ್ನು ಚೆಲ್ಲುತ್ತ ಬಿಲ್ಪಡುಕಲೆಳಸುತ್ತಿರುವ ವೀರಭಟರ ಸಂದಣಿಯಿಂದ ಕೂಡಿ ಆನೆ ಕುದುರೆ ರಥ ಪದಾತಿಗಳು ಕಾದುವಾಸೆಯಿಂದ ಕೈಮಾಡತೊಡಗಿ ಅರ್ಜುನನ ಮೇಲೆ ನಡೆತಂದುವು. ಇಂತು ನಡೆದು ಬರುತ್ತಿರುವ ಸೇನೆಗೆ ಭೂಮಂಡಲವೂ, ಗುಂಪಾಗಿ ಮೊಳಗುತ್ತಿರುವ ವಾದ್ಯಗಳ ಧ್ವನಿಗೆ ದಿಙ್ಮಂಡಲವೂ, ಅಸಂಖ್ಯಾತವಾದ ಸಿಂಧ ಸೀಗುರಿ ಧ್ವಜಪಟಗಳಿಗೆ ಗಗನಮಂಡಲವೂ, ಬಹಳವಾಗಿ ಕಡುಗಿ ಕಾದುವ ಬಿಂಕದ ಪರಾಕ್ರಮಕ್ಕೆ ರಣಮಂಡಲವೂ ಸಾಲದಾದುದೆಂಬಂತೆ ಒದಗಿ ಬಂದು ಚದುರಿಂದ ಪಾರ್ಥನ ಕುದುರೆಯನ್ನು ಹಿಡಿದು, ತಮ್ಮ ಸೇನೆಯಿಂದ ಪದ್ಮವನ್ನು ರಚಿಸಿ ಅದರ ನಡುವೆ ಆ ಕುದುರೆಯನ್ನಿರಿಸಿ, ಬಲಿದ ವೀರರನ್ನು ಬೇಂಗಾವಲಿಗೆ ನಿಲ್ಲಿಸಿ ಸಂತೋಷದಿಂದ ನಲಿಯುತ್ತ ಕುದುರೆಯನ್ನು ಬಿಡಿಸಿಕೊಳ್ಳುವ ಕಟ್ಟದಟರಿದ್ದರೆ ಆ ವೀರರನ್ನು ಬರಹೇಳು ಎಂದು ಸುಧನ್ವನು ಗರ್ಜಿಸಿದನು. ಇದನ್ನು ಕಂಡು ಪಾರ್ಥನಚರರು ಭರದಿಂದ ತಮ್ಮೊಡೆಯನ ಬಳಿಗೆ ಹೋಗಿ ನಡೆದ ಸಂಗತಿಯನ್ನು ಬಿನ್ನೈಸಲು ಅರ್ಜುನನು ಪ್ರದ್ಯುಮ್ನನನ್ನು ಬರಮಾಡಿ ಮರಳಿ ನಮ್ಮ ಪಳ್ಳಿಗೆ ವಿಘ್ನಮುಂಟಾಯಿತು. ಇದಕ್ಕೆ ಮಾಡತಕ್ಕ ಉಪಾಯವೇನುಂಟು ? ತಿಳಿದು ಹೇಳು ಎಂದು ಕೇಳಿದನು. ಬಳಿಕ ಪ್ರದ್ಯುಮ್ನನು ಅಯ್ಯಾ ಅರ್ಜುನನ ! ಅಶ್ವರಕ್ಷೆಗೆಂದು ನಿನ್ನನ್ನು ಕಳುಹಿಸುವ ಕಾಲದಲ್ಲಿ ನಮ್ಮ ತಂದೆಯಾದ ಶ್ರೀಹರಿಯು ನನ್ನನ್ನು ನಿನ್ನೊಡನೆ ಕಳುಹಿಸಿದನಲ್ಲವೆ ? ನನ್ನ ಸಾಹಸವನ್ನು ತೋರಿಸುವುದಕ್ಕಿದು ಉತ್ತಮವಾದ ಕಾಲವಾಗಿದೆ, ನೀನು ಹೆದರಬೇಡ ಸಾಹಸದಿಂದ ನಿನ್ನ ಕುದುರೆಯನ್ನು ಬಿಡಿಸಿ ತರುವೆನು

ನೋಡು ಎಂದು ಹೇಳಿ ಆತನಿಂದ ಬೀಳ್ಕೊಂಡು ಮನ್ಮಥನು ಸುಧನ್ವನ ಮೇಲೆ ಯುದ್ಧಮಾಡಲು ಹೊರಟನು. ಕೂಡಲೆ ಸಕಲ ಯಾದವರೂ ತಂತಮ್ಮ ಸೇನೆಗಳೊಡನೆ ಹೊರಟರು. ಸಾತ್ಯಕಿ, ಸಾಂಬ, ಕೃತವರ್ಮ, ಶಠ, ನಿಶಠ, ಅನಿರುದ್ಧ, ಗದ, ಸಾಂಬಮುಖರಾದ ವೀರರು ಜೋಡಣೆಯಿಂದ ಕೈಮಾಡಿದರು.

ಹೀಗೆ ಆವರಿಸಿಕೊಂಡು ಅನುಸಾಲ್ವನ ಸೇನೆಯೂ, ನೀಲಧ್ವಜನ ಮೂಲಬಲವೂ, ಸುಧನ್ವನ ಸೇನೆಯನ್ನು ತಾರುತಟ್ಟಾಗಿ ಹೊಡೆದು ಕೆಡಹುತ್ತ ಪೊರೆಯುಗಿದ ಸರ್ಪಸಂಕುಲದಂತೆಯೂ, ಮೇರೆದಪ್ಪಿದ ಸಮುದ್ರದಂತೆಯೂ, ಮೊರೆದೆದ್ದವು. ಆಗ ವೃಷಕೇತುವು ಅರ್ಜುನನಿಗೆ ನಮಸ್ಕಾರಮಾಡಿ, ಬದ್ಧಾಂಜಲಿಯಾಗಿ ನಿಂತು ಎಲೈ ತಂದೆಯೇ ! ಗೋಷ್ಪದಿಯಷ್ಟು ನೀರುಳ್ಳ ಹಳ್ಳವನ್ನು ದಾಟುವುದಕ್ಕೆ ಹರಿಗೋಲು ಬೇಕೆ ? ಈ ಸುಧನ್ವನ ಸೇನೆಯನ್ನು ಸವರಿ ಕುದುರೆಯನ್ನು ತರುವುದಕ್ಕಾಗಿ, ಮಹತ್ತರವಾದ ನಮ್ಮ ಸೈನ್ಯವನ್ನು ಏಕೆ ನೋಯಿಸಬೇಕು ! ನನಗೆ ಅಪ್ಪಣೆಕೊಟ್ಟರೆ ಕ್ಷಣಮಾತ್ರದಲ್ಲಿ ಸುಧನ್ವನ ಶೌರ್ಯವನ್ನು ಮುರಿದು ಬದುಕಲಾರದಂತೆ ಸೇನಾಮಂಡಲವನ್ನು ಸವರಿ ಕುದುರೆಯನ್ನು ಬಿಡಿಸಿತಂದು ನಿನಗೊಪ್ಪಿಸುವೆನು ಹಾಗೆಮಾಡದೆ ನಾನು ಈ ಪ್ರತಿಜ್ಞೆಗೆ ತಪ್ಪಿದೆನಾದರೆ ಕರ್ಣನ ಮಗನಲ್ಲ ! ನನ್ನ ಸಾಹಸವನ್ನು ನೋಡು ಸುಮ್ಮನೆ ಯೋಚಿಸಬೇಡ ಎಂದು ಒಡಂಬಡಿಸಿ, ಆತನಪ್ಪಣೆಯಂಪಡೆದು ರಥಾರೋಹಣಂಗೈದು ಮೀರಿದ ಶೌರ್ಯದಿಂದ ಮೂರ್ಛಿಲೆಯುತ್ತ, ತಾರಕನಮೇಲೆಗೆರಗಿದ ಕುಮಾರಸ್ವಾಮಿಯಂತೆಯೂ, ಕಾರ್ಮುಗಿಲ ನಡುವಣ ಸಿಳಿಮಿಂಚಿನಂತೆಯೂ, ಗಿರಿಗಣಕೆರಗುವ ವಜ್ರಾಯುಧದಂತೆಯೂ, ಮಹಾರಣ್ಯವನ್ನು ಮುತ್ತುವ ದಾವಾಗ್ನಿಯಂತೆಯೂ, ಪರಬಲವನ್ನು ಮುತ್ತಿದನು. ಅದನ್ನು ಕಂಡು ಸುಧನ್ವನು ಇವನಾರು ವೃಷಧ್ವಜದಿಂದ ಮೆರೆಯುತ್ತಿರುವ ವೀರನು ಇವನು ಅರ್ಜುನನಲ್ಲ ! ಆಗಲಿ. ಈತನ ಪೂರ್ವೋತ್ತರಗಳನ್ನು ತಿಳಿವೆನೆಂದು ಮುಂದೆಬಂದು, ಸೇನಾಜನರನ್ನು ಹಿಂದಿಕ್ಕಿ, ಬಿಲ್ಲಿಗೆ ಹೆದೆಯನ್ನೇರಿಸಿ, ಎಲೈ ವೀರನೇ ! ನೀನು ಯಾರು ? ನಿನ್ನ ಹೆಸರೇನು ? ಗೋತ್ರವಾವುದು ? ನಿಮ್ಮ ತಂದೆ ಯಾರು ? ಎಂಬುದನ್ನು ಬೇಗ ತಿಳಿಸು. ವೀರನಾದ ಹಂಸಧ್ವಜನಿಗೆ ಮಗನಾಗಿ, ಮುಚುಕುಂದಮುನಿಗೋತ್ರದಲ್ಲಿ ಹುಟ್ಟಿ ಲೋಕದಲ್ಲಿ ಸುಧನ್ವನೆಂದು ಪ್ರಖ್ಯಾತನಾದ ನಾನೆ ಕುದುರೆಯನ್ನು ಕಟ್ಟಿದವನೆಂದು ಹೇಳಿದನು ಅದನ್ನು ಕೇಳಿ ವೃಷಕೇತುವು ತನ್ನ ಬಿಲ್ಲನ್ನು ಝಳಪಿಸುತ್ತ, ಎಲೈ ಮೂಢನೆ ! ಗೂಢವಾಗಿ ಹೂವಿನಲ್ಲಡಗಿಕೊಂಡಿರುವ ಪರಿಮಳವು ತಾನಾಗಿ ಹೊರಬೀಳದಿರುವುದೇ ? ಹೇಡಿಯಿಂದ ವಂಶದುನ್ನತಿಯನ್ನು ತಿಳಿಯಲಾಗುವುದೇ ? ರಣಭೂಮಿಯಲ್ಲಿ ನಿಂತು ಕುಲಗೋತ್ರಗಳನ್ನು ಕೇಳಿದುದರಿಂದ ಫಲವೇನು ? ಕಶ್ಯಪಗೋತ್ರದಲ್ಲಿ ಹುಟ್ಟಿ, ಬ್ರಹ್ಮಜ್ಞಾ

ನಿಯಾದ ಸೂರ್ಯದೇವನಿಗೆ ಮಗನಾಗಿ ಲೋಕವಿಖ್ಯಾತನೆನಿಸಿದ ಕರ್ಣರಾಯನಿಗೆ ಮಗನಾದ ವೃಷಕೇತುವೆ ನಾನೆಂದು ತಿಳಿದುಕೊ ಎಂದು ಹೇಳಲು, ಅದರೊಳೃತು ನಿನ್ನಂತೆ ಬಿನ್ನಣದ ಮಾತುಗಳು ನಮಗೆಬಾರದು, ಸೈರಿಸೆಂದು ಕೆಂಗರಿಯ ಕೂರ್ಗಣೆಗಳನ್ನು ಹೊಡೆಯಲು ಪುಂಖಾನುಪುಂಖವಾಗಿ ದಶದಿಕ್ಕುಗಳನ್ನು ಆವರಿಸಿಕೊಂಡು ಬರುತ್ತಿರುವ ಸುಧನ್ವನ ಬಾಣಗಳನ್ನು ಮಧ್ಯಮಾರ್ಗದಲ್ಲಿ ನುಚ್ಚುನೂರಾಗಿಮಾಡಿ ಬಿರುಮಳೆಯ ನಡುವಣ ಮಿಂಚುಬಳ್ಳಿಯೊಡನೆ, ಬರಸಿಡಲಬಳಗಂಗಳು ಬಂದವೊ ಎಂಬಂತೆ ವೃಷಕೇತುವು ಬಾಣಗಳನ್ನು ಹೊಡೆಯಲು, ಕ್ಷಣಮಾತ್ರದಲ್ಲಿ ಸುಧನ್ವನು ಅದನ್ನು ಇಕ್ಕಡಿಗೈದು ವ್ಯರ್ಥಮಾಡಿದನು. ಇಂತು ಆನರಿಬ್ಬರೂ ಸರಿಸಮದಿಂದ ತಂತಮ್ಮ ಸಾಹಸವನ್ನು ತೋರಿಸಿ ಯುದ್ಧಮಾಡುತ್ತಿರಲು, ವೃಷಕೇತುವು ಕಾಲಾಗ್ನಿಯಂತೆ ಕಡಿದ ಕೋಪದಿಂದ ಕುದಿದು ಮೂಡಿಗೆಯಿಂದ ಕೋಲುಗಳನ್ನು ಸೆಳೆಸೆಳೆದು ಹೊಯ್ದು ಸುಧನ್ವನ ಕುದುರೆ, ರಥ, ಟಕ್ಕೆಯದಬಿರುದು, ಕವಚ ಕಿರೀಟಗಳನ್ನು ಸವರಿ ಮುತ್ತಿಬರುವ ಎದುರಂಬುಗಳನ್ನು ತುಂಡುತುಂಡಾಗಿ ಕತ್ತರಿಸಿ, ಆತನ ಕೈಬಿಲ್ಲು ಕಡಿಕಡಿಯಾಗಿ ಪುಡಿಗೊಳ್ಳುವಂತೆ ಮಾಡಿ ಬೊಬ್ಬಿರಿದನು. ಕೂಡಲೆ ಸುಧನ್ವನು ಸಿದ್ಧವಾದ ಹೊಸರಥವನ್ನೇರಿ ನಿಡುಗಣೆಗಳನ್ನು ಬಿಟ್ಟು ಕಡುಕೋಪದಿಂದುರಿಯುವ ಕಾಲಾಗ್ನಿಯಂತೆ ಕುದಿಯುತ್ತ ಕರ್ಣಪುತ್ರನ ರಥ, ಸಾರಥಿ, ಕುದುರೆ, ಕವಚ, ಕಿರೀಟ, ಕೋದಂಡಗಳನ್ನು ನಿಮಿಷಮಾತ್ರದಲ್ಲಿ ಪುಡಿಗೈದನು. ರಥವಿಲ್ಲದಂತಾಗಲು, ವೃಷಕೇತುವು ಕತ್ತಿ, ಗುರಾಣಿ, ಈಟಿ, ಗದೆ, ಕೊಡಲಿ, ತೋಮರ ಸುರಗಿ, ಶೂಲ, ಭಿಂಡಿವಾಳಗಳಿಂದ ಹೊಡೆದಾಡುತ್ತ ತನ್ನ ಸಾರಥಿಯು ಸಜ್ಜುಗೈದುತಂದ ಹೊಸರಥವನ್ನೇರಿ ಕಡುಸಾಹಸದಿಂದ ಕೈಗೆಡದೆ ಕಾದುತ್ತ ಧೈರ್ಯವನ್ನು ದೂರಮಾಡಿ, ವೀರಪುತ್ರನಾದ ಸುಧನ್ವನು ಓಡಿಹೋಗುವಂತೆ ಕಟ್ಟಾಸುರದ ಕೋಲ್ಗಳಿಂದ ಕಾದಾಡಿದನು. ಕಡೆಗೆ ಕರ್ಣನಂದನನ ಶೌರ್ಯವನ್ನು ಕೊಂಡಾಡಿ ಸುಧನ್ವನು ಕಡುಗೋಪದಿಂದ ಕೂರಲಗುಗಳನ್ನು ಮೂಡಿಗೆಯಿಂದ ತೆಗೆದು ತನ್ನೊಡನೆ ಸರಿಸಮದಿಂದ ಯುದ್ಧಮಾಡುತಿರುವ ಕರ್ಣಪುತ್ರನನ್ನು ಕೆಡಹಬೇಕೆಂದು ಆಕರ್ಣಾಂತವಾಗಿ ಸೆಳೆದು ಬಾಣವಂಬಿಡಲು, ವೃಷಕೇತುವು ಸಂಪೂರ್ಣವಾಗಿ ಘಾಯಹೊಂದಿ ಕಣ್ಣೀರಿನಿಂದ ಸ್ನಾನಮಾಡಿ ಕಡೆಗೆ ರಥದಲ್ಲಿ ಮೈಮರೆದು ಮಲಗಿದನು. ಆಗ ಸಾರಥಿಯು ರಥವನ್ನು ಹಿಂದಿರುಗಿಸಿದುದನ್ನು ಕಂಡು ಪ್ರದ್ಯುಮ್ನನು ಮುಂದೆ ಬಂದು ಬಿಲ್ಲುಬಾಣಗಳನ್ನು ಹಿಡಿದು ನಿನಗೆ ಸಹಾಯಕರಾದ ತನಿವೀರರನ್ನು ಕರೆಸಿಕೊ ಎಂದು ಬೊಬ್ಬಿರಿದನು.

ಬಳಿಕ ಸುಧನ್ವನು ಧ್ವಜಾಂಕಿತದಿಂದ ಪ್ರದ್ಯುಮ್ನನೆಂಬುದನ್ನರಿದು ಎಲೈ ಮನ್ಮಥನೇ ! ನಾವು ಬಾಲಕರು, ಇಲ್ಲಿಯಾದರೋ ಹೆಂಗಸರ ಸೆಲೆಯು ಇಲ್ಲ ! ನಿನ್ನ ಬಾಣಗಳು ನನ್ನನ್ನು ಏನುಮಾಡಬಲ್ಲವು ಹೇಳು ಎಂದು ಬಿಲ್ದಿರುವಿ ಬಾಣಗಳನ್ನು ಸುರಿಸಲು, ಅವುಗಳನ್ನು ನಡುದಾರಿಯಲ್ಲಿ ಕತ್ತರಿಸಿ, ಎಲೈ ಮೂಢನೇ ! ಯುದ್ಧಭೂಮಿಯಲ್ಲಿ ಸಂಚರಿಸುವ ವಿಜಯಲಕ್ಷ್ಮಿಯು ನನ್ನ ಬಾಹುಮೂಲದಲ್ಲಿರುವುದನ್ನು ಕಾಣೆಯಾ, ಎಂದು ಕೆಂಗರಿಯ ಕೂರಲುಗುಗಳನ್ನು ಸುರಿಸಿನು. ಆಗಲಾ ಮನ್ಮಥನನ್ನು ಕುರಿತು, ಎಲಾ ! ಕೋವಿದರಾದವರು ಲೋಕದಲ್ಲಿ ನೀನೇಅಸಮಬಾಣನೆಂದು ವರ್ಣಿಸುತ್ತಿರುವರು. ಅಂತಪ್ಪ ಅಸಮಬಾಣನು ನೀನೋ ಅಥವಾ ನಾನೋ, ಈಗ ತಿಳಿಯಬೇಕು ಎಂದು ಅನೋಘವಾದ ಬಾಣಪರಂಪರೆಗಳನ್ನು ಸುಧನ್ವನು ಸುರಿಸುತ್ತಿರಲು, ಅಯ್ಯಾ! ಲೋಕದಲ್ಲಿ ನೀನು ಅಸಮಸಾಯಕನಾದರೆ, ಸಮಸಾಯಕರಾರು ನಿಜವಾಗಿ ಹೇಳು ಎಂದು ಮನ್ಮಥನು ಆತನ ಬಾಣಜಾಲಗಳನ್ನಿಕ್ಕಡಿಗೈದು ಗರ್ಜಿಸಿದನು. ಆಹಾ ! ಕುಸುಮಬಾಣಗಳ ಬೆಸಗೆಯಲ್ಲದೆ ವಿಶಿಖಪ್ರಯೋಗವು ನಿನ್ನೊಳಿರುವುದೇ ? ಭಾಪು ಸ್ಥೈರಿಸು ! ಸ್ಥೈರಿಸು ಎಂದು ನುಡಿದು ಸುಧನ್ವನು ಅಸದೃಶವಾದ ಬಾಣಗಳನ್ನು ಮೂಡಿಗೆಯಿಂದ ಸೆಳೆದು, ಮುಕ್ಕಳಿಸಿ ಹೊಡೆಯಲು, ಅವುಗಳನ್ನು ಮನ್ಮಥನು ಅಂತರಾಳದಲ್ಲಿ ತಂತುಜಾಲದಂತೆ ತೇಲಾಡಿಸುತ್ತ ಎದುರಂಬುಗಳನ್ನು ಎಸೆದು ಮದದಿಂದ ಕಾಯುತ್ತಿರುವ ಸುಧನ್ವನ ಹೃದಯಾಂತರಾಳವನ್ನು ಚದುರಿಂದ ತತ್ತರಗೊಳಿಸಿ, ಮೈಮಾರುಗಳಲ್ಲಿ ರಂಧ್ರೋಪರಂಧ್ರಗಳುಂಟಾಗುವಂತೆ ಮಾಡಿದನು. ಆಹಾ ! ಕೃಷ್ಣತನಯನೆಂದೂ ದಾಕ್ಷಿಣ್ಯದಿಂದ ಕಾದಾಡುತ್ತಿದ್ದರೆ, ನಿನ್ನಪೊಗರು ಹೊಗರಾಯಿತೆ ? ನನ್ನ ಬಾಣಗಳ ಚೂಣಿಯನ್ನು ನಿನ್ನದೇಹಕ್ಕೆ ಔತಣಮಾಡಿ ಉಣ್ಣಿಸದಿರುವೆನೆ ? ನೋಡು ಇನ್ನು ನಿನ್ನಸಹಾಯಕ್ಕೆ ಅರ್ಜುನನನ್ನು ಬರಮಾಡಿಕೋ ಎಂದು ಹೇಳಿ ಕೂರಂಬುಗಳನ್ನು ಹೂಡಿ ಹೊಡೆದು ಮನ್ಮಥನ ಕೋದಂಡವನ್ನು ಕಡಿದನು ಕೂಡಲೆ ಪ್ರದ್ಯುಮ್ನನು ಶಕ್ತಿಯನ್ನು ಗುರಾಣಿಯನ್ನು ಹಿಡಿದು, ಕಾಯುತ್ತಿರುವುದನ್ನು ಕಂಡು ಶತ್ರುಭಯಂಕರನಾದ ಕೃತವರ್ಮನು ಎದುರಾಗಿ ಬಂದು ವೃಷಕೇತು ಪ್ರದ್ಯುಮ್ನರಂತೆ ನಾನು ಸಾಧಾರಣವೀರನಲ್ಲ, ಅವರೊಡನೆ ಕಾದಿದ ನೀನು ನನ್ನ ಬಾಣಗಳ ಶಕ್ತಿಯನ್ನು ನೋಡೆಂದು ಹೊಡೆದು ಗರ್ಜಿಸಿದನು. ಓಹೋ ಯಾದವರಲ್ಲಿ ವೀರನಾದ ಕೃತವರ್ಮನು ನೀನೇ ಹೌದು ಸಮರ್ಥನು, ನಿನ್ನ ಬಿಂಕವನ್ನು ನೋಡಬಹುದೆಂದು ಸುಧನ್ವನು ಹತ್ತುಬಾಣಗಳನ್ನು ಹೊಡೆದನು, ಅದನ್ನು ಖಂಡಿಸಿ ಕೃತವರ್ಮನು ಇಪ್ಪತ್ತುಕಣೆಗಳನ್ನು ಕಸಿದನು. ಇಂತು ಅವರಿಬ್ಬರೂ ಬಹಳವಾದ ಕಡುಗೋಪದಿಂದ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬಾಸೆಯಿಂದ ಹೊಡೆದಾಡಿ ಸರ್ವಾಂಗದಲ್ಲಿಯೂ ಗಾಯಗೊಂಡು ಬೇಸತ್ತರು.

ಬಳಿಕ ಕೃತವರ್ಮನ ಕೈಪೆಟ್ಟಿನಿಂದ ಕಡುನೊಂದು ಸುಧನ್ವನು ಇಪ್ಪತ್ತು ಬಾಣಗಳನ್ನು ಹೊಡದು ರಥ, ಕುದುರೆ, ಸಾರಥಿ, ಬಿಲ್ಲು, ಬತ್ತಳಿಕೆ, ಸೀಸಕ, ಮೂಡಿಗೆ, ಕಿರೀಟ ಮೊದಲಾದವುಗಳನ್ನು ಖಂಡಿಸಿ, ಮಗುಳುಂಬುಗಳನ್ನುಗಿದು ಹಗೆಯನ್ನು ಮೂರ್ಛೆಗೊಳಿಸಿದನು. ಅದನ್ನು ನೋಡಿ ಅತ್ಯಂತ ರೋಷದಿಂದಾರ್ದು ಕುದಿಯುತ್ತಿರುವ ಅನುಸಾಲ್ವನು ಎದುರಾಗಿನಿಂದು ಹಂದೆಯೇ ಇಗೋ ಇಂದ್ರನನ್ನಾದರೂ ಯುದ್ಧದಲ್ಲಿ ತಿರಸ್ಕರಿಸುವ ಪರಾಕ್ರಮವುಳ್ಳ ಅನುಸಾಲ್ವನೇ ನಾನು ನಿನ್ನ ಬಲ್ಮೆಯನ್ನು ತೋರಿಸು, ಸುಮ್ಮನೆ ಗಳಹಬೇಡವೆಂದು ಬೊಬ್ಬಿರಿದು ಬಾಣಗಳನ್ನು ಹೊಡೆಯಲು, ಆಹಾ ! ಅನುಸಾಲ್ವನೆಂದು ಗರ್ವಿಸಬೇಡ. ನಿನ್ನ ಅಸಹಾಯ ಶೂರತನವನ್ನು ಈಗ ತೋರಿಸು, ಇನ್ನು ಮುಂದೆ ತಾನಾಗಿಯೆ ಕಾಣುವುದೆಂದು ಪೊಸಮಸೆಯ ವಿಶಿಖಪರಂಪರೆಗಳನ್ನುಗಿದು ಅವನನ್ನು ಘಾಸಿಮಾಡಿದನು. ಆ ಸುಧನ್ವನೆಸುಗೆಯಿಂದ ಬಹಳವಾಗಿ ನೊಂದು ಕಂಗೆಟ್ಟ ಅನುಸಾಲ್ವನು ಅತ್ಯಂತ ರೋಷದಿಂದ ಕುದಿದು ಕಡೆಗೆ ಕಾಲಮೇಘದಂತೆ ಕವಿದು ಬರುತ್ತಿರುವ ಕೂರಲಗಗಳನ್ನು ಹೊಡೆದು, ಸಾರಥಿ ರಥಾಶ್ವ ಸಾಯಕ ಬತ್ತಳಿಕೆ ಬಾಹುಬಲಗಳಳಿಯುವಂತೆ ಮಾಡಿ ಛಲಬಲಗಳಿಂದ ಬಲುವಾಗಿ ಕಾದುತಿದ್ದ ಸುಧನ್ವನನ್ನು ಬಡಿದು ಮೂರ್ಛೆಗೊಳಿಸಿದನು. ಸುಧಾರಿಸಿಕೊಂಡು ಕಣ್ದೆರೆದು ಸುಧನ್ವನು ಸ್ವಲ್ಪಹೊತ್ತಿನಮೇಲೆ ಕಡುಗೋಪದಿಂದ ಕೆರಳಿ ಅನುಸಾಲ್ವನನ್ನು ಹೊಡೆದು ಕೆಡವಿ, ಎದೆಯನ್ನು ಸೀಳಿ, ಹದನಾದ ಸಾರಥಿ ರಥ ಕುದುರೆಗಳನ್ನು ಕಡಿದು ನ್ಯೆಮರೆದು ಮಲಗಿದ ಅನುಸಾಲ್ವನನ್ನು ಹಿಂಬಾಲಿಸಿ ಅರ್ಜುನನ ಸೈನ್ಯವನ್ನು ಹೊಕ್ಕು ಇಕ್ಕೆಲದಲ್ಲಿರುವ ಸೊಕ್ಕಾನೆಗಳನ್ನು ಸಾಲುಗೊಂಡೆದುರಿಸಿದ ಕಾಲಾಳುಗಳನ್ನು ಹಾವಿನಂತೆ ಮೊರೆದೆರಗುವ ರಾವುತರನ್ನೂ ಮಾರವೈರಿಯಂತೆ ಮುನಿದು ಕಾಯುವ ವೀರರನ್ನೂ ಕಡಿದು ಕತ್ತರಿಸಿ, ಬಡಿದು ಭಂಗಪಡಿಸಿ, ರಥಿಕರನ್ನು ಪಥಿಕರನ್ನಾಗಿಮಾಡುತ್ತಿರುವುದನ್ನು ಕಂಡು ಸೇನಾನಾಯಕನಾದ ಸಾತ್ಯಕಿಯು ತನ್ನ ಸೈನ್ಯದಲ್ಲಿ ಎಲ್ಲಿನೋಡಿದರೂ ಹೆಣಮಯವಾಗಿ ಕಾಗೆಗೂಗೆಗಳೂ ನರಿನಾಯಿಗಳೂ, ಹದ್ದುಗೃಧ್ರಗಳೂ, ಭೂತಭೇತಾಳಗಳೂ ಸಂಚರಿಸುತ್ತ ಬಲುಶೂರರಾದ ಕಲಿಗಳ ತಲೆಯೋಡಿನ ಮಾಂಸಗಳನ್ನು ತಿನ್ನುತ್ತಿರುವುದನ್ನು ನೋಡಿ ಸಹಿಸಲಾರದೆ ಪ್ರಾಣಿಜಾಲವನ್ನುನುಂಗುವ ಕಾಲಯಮನಂತೆ ಕಡುಕೋಪದಿಂದ ತನ್ನ ಕುಲಗೋತ್ರಗಳನ್ನು ಹೇಳಿ, ಬಿಲ್ಲುಬಾಣಗಳನ್ನು ತೆಗೆದುಕೊಂಡು, ಕೇಣಗೊಂಡು ಎದೆಗೆತ್ತಿದ ಬಾಣಗಳನ್ನು ಕಿವಿವರೆಗೆಳೆದು ಮೂವತ್ತು ಬಾಣಗಳನ್ನು ಹೊಡೆದು ನೋಯಿಸಿದನು.

ಅಬಳಿಕವರಿಬ್ಬರೂ ವೀರಾವೇಶದಿಂದ ಒಮ್ಮೊಮ್ಮೆ ಒಬ್ಬರ ತೇರು, ಕುದುರೆ, ಬಿಲ್ಲುಬತ್ತಳಿಕೆ ಸಾರಥಿ, ಸಿಂದಸೀಗರಿಗಳನ್ನು ಕಡಿದು ಇಬ್ಬರೂ ವಿರಥ

ರಾದಬಳಿಕ ಸರಿಸಮದಿಂದ ಕುಂತ ಮುದ್ಗರ ಶೂಲ ಗದೆ ಕರವಾಳಂಗಳಿಂದ ಕಾದಾಡಿ ಮುಷ್ಟಿಯುದ್ಧದಲ್ಲಿ ಬಲವಾದ ಶೌರ್ಯವನ್ನು ತೋರಿ ಹೊಡೆದಾಡುತ್ತಿರಲು ಸುಧನ್ವನು ಸಾತ್ಯಕಿಯನ್ನು ಮೂರ್ಛೆಗೊಳಿಸಿ, ಮಾರ್ಪಟ್ಟನಿಂದ ಮಲಗಿ ನಿದ್ರಿಸುವಂತೆ ಮಾಡಿದನು. ಬಳಿಕ ಸಾತ್ಯಕಿಯು ಸೋತುಹೋದುದನ್ನು ಕಂಡು, ಯೌವನಾಶ್ವ, ನೀಲಧ್ವಜ, ಶಠ, ನಿಶಠ, ವೃಷಕೇತು, ಸಾಂಬ, ಅನುಸಾಲ್ವ, ಪ್ರದ್ಯುಮ್ನ ಮೊದಲಾದವರು ಸುಧನ್ವನಮೇಲೆ ಯುದ್ಧಕ್ಕೆ ಹೊರಡಬೇಕೆಂದಿರುವುದನ್ನು ಕಂಡು ಅರ್ಜುನನು ಅತ್ಯಂತ ರೋಷದಿಂದ ಕುದಿಯುತ್ತ, ಮುಂಜೆರಗನಿಂದ ರಂಜಿಸುವ ನಡುಕಟ್ಟನ್ನು ಬಿಗಿದು ಸೀಸಕವನ್ನು ತೊಟ್ಟು, ಕಿರೀಟವನ್ನಿಟ್ಟು, ದೇವಗಣಕ್ಕೆ ನಮಸ್ಕರಿಸಿ, ರಥವನ್ನು ಬಲವಂದು, ಅಮಲಾಸ್ತ್ರಗಳನ್ನಳವಡಿಸಿ, ಸಮರದಲ್ಲಿ ವಿಜಯವಾಗಲೆಂದು ದೇವಪುರನಿಲಯನಾದ ಲಕ್ಷ್ಮೀಪತಿಯನ್ನು ಧ್ಯಾನಿಸುತ್ತ ಜಯಜಯನಿನಾದದಿಂದ ತೇರನೇರಿದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಹನ್ನೆರಡನೆಯ ಸಂಧಿ ಸಂಪೂರ್ಣಂ.

ಕಂದಂ ‖ ಚಂದಿರನಂದದೆ ಸೊಬಗಾ ।
ನಂದದ ಹರಿಯಂತೆಲೀಲೆ ಪಾರ್ಥನಶೌರ್ಯಂ ‖
ಸುಂದರ ಧರ್ಮ ಕಥಾಮೃತ ।
ಮೊಂದಾಗಿರೆ ಸೊಗಸದಿಹುದೆ ? ಈ ಕಥೆ ಜಗದೊಳ್ ‖





# ಹದಿಮೂರನೆಯ ಸಂಧಿ.

### ಶ್ರೀಕೃಷ್ಣನು ಅರ್ಜುನನಿಗೆ ಸಾರಥಿಯಾಗಿ ಸುಧನ್ವನನ್ನು ಕೊಲ್ಲಿಸಿದುದು.

ಅರಸುಗಳ ಶಿರೋರತ್ನನಾದ ಎಲೈ ಜನಮೇಜಯರಾಯನೇ ಕೇಳು.
ಬಳಿಕ ಅರ್ಜುನನು ಯುದ್ಧಸನ್ನದ್ಧರಾದ ವೀರರನ್ನು ತಡೆದು ನಿಲ್ಲಿಸಿ ಕಡುತವಕ
ದಿಂದ ಎಡೆಹಾಯುವ ಪಡೆಯಪವನ್ನು ಹಿಂದಿಕ್ಕಿ ವಾಯುವೇಗವೂ, ಸಿಡಿಲಗರ್ಜ
ನೆಯೂ, ಸೂರ್ಯನಿಂದೊಡಗೂಡಿದ ದಾವಾಗ್ನಿಯ ಆಟೋಪವೂ, ಯಮನ
ಹಾವಳಿಯೂ, ಕೂಡಿಕೊಂಡು ಏಕರೂಪವಾಯಿತೋ ಎನ್ನುವಂತಿರುವ ತನ್ನ
ರಥವನ್ನು ಸುಧನ್ವನ ಸಮೀಪಕ್ಕೆ ತಂದು ನಿಲ್ಲಿಸಿದನು. ಗಾಲಿಗಳ ಬೋರ್ಗ
ರೆತವೂ, ಕುದುರೆಗಳ ಖುರಪುಟಧ್ವನಿಯೂ, ದೇವದತ್ತದ ಶಂಖಘೋಷವೂ, ಪಳ
ವಿಗೆಯ ತುದಿಯಲ್ಲಿರುವ ಪಳೆಗಪಿಯ ಪೌರುಷದಬ್ಬರಣೆಯೂ, ಧನುಷ್ಟಂಕಾರದ
ನೀನಾದವೂ ಒಬ್ಬುಳಿಯಾಗಿ ಹದಿನಾಲ್ಕು ಲೋಕಗಳನ್ನೂ ಬೆದರಿಸುತ್ತಿರಲು
ಇದು ಅರ್ಜುನನ ಯುದ್ಧಗರ್ಜನೆಯ ಸಾಮರ್ಥ್ಯವೆಂದರಿದು ಬ್ರಹ್ಮಾದಿದೇವತೆ
ಗಳು ತಂತಮ್ಮ ವಿಮಾನಗಳನ್ನೇರಿ ಆಕಾಶದಲ್ಲಿ ನಿಂತು ಆಶ್ಚರ್ಯದಿಂದ ಅವಲೋ
ಕಿಸುತ್ತಿದ್ದರು. ಬಳಿಕ ಸುಧನ್ವನು ಕಪಿಧ್ವಜದಿಂದ ಕೂಡಿದ ರಥವನ್ನೇರಿ
ಆಟೋಪದಿಂದೈತರುತಿರುವ ಅರ್ಜುನನ ಕುಲಗೋತ್ರಗಳನ್ನೂ ನಾಮಕೀರ್ತಿಗ
ಳನ್ನೂ ತನ್ನ ಸಾರಥಿಗೆ ವಿಸ್ತರಿಸಿ ಹೇಳಿ, ದೇವದಾನವ ಮಾನವರ ಗಡಣದಲ್ಲಿ
ಬಲ ಕೂಡದವೆಂದು ಪ್ರಖ್ಯಾತನಾದವನು ನೀನೇ ಹೌದು. ನಿನ್ನೊಡನೆ ಸಂಗಾ

ಮದಾನವನ್ನು ಬಯಸಿ ಬಂದಿರುವೆನು, ಬಗೆಬಗೆಯಾಗಿ ಬಣ್ಣಿಸುವ ನಿನ್ನ ಪರಾಕ್ರಮವನ್ನು ಜನರಿಂದ ನಾನು ಕೇಳಿಬಲ್ಲೆನೆಂದು ಕೂರಂಬುಗಳನ್ನು ಕರೆದನು.

ಬಳಿಕ ರೋಷಭೀಷಣನಾದ ಅರ್ಜುನನು ಶಿವಶಿವಾ ! ನನ್ನೊಡನೆ ಯುದ್ಧ ಮಾಡಲೆಳಸಿಬಂದ ನೀನು ಮೂಢನಲ್ಲವೆ ? ದೇವದಾನವ ಮನುಷ್ಯರಲ್ಲಿ ಎದುರಾಗಿನಿಂತ ಯಾರಾದರೂ ನನ್ನ ಬಾಣದಿಂದ ಬದುಕಿಕೊಂಡವರಿರುವರೆ ? ಲೋಕೈಕವೀರರಾದ ಭೀಷ್ಮ, ದ್ರೋಣ, ಕರ್ಣಾದಿಗಳು ಏನಾದರು ಎಂಬುದನ್ನರಿಯೆಯಾ ? ಎಂದು ಬಾಣಗಳನ್ನು ಪ್ರೋಕ್ಷಿಸಿದನು. ಎಲೆಮರುಳೆ ಸಾರಥಿಯ ಸಹಾಯದಿಂದ ಕೌರವಸೇನೆಯ ಜಟ್ಟ್ಯಾಳುಗಳನ್ನು ಕದನದಲ್ಲಿ ಗೆದ್ದನೆಂದು ಬೆರೆಯಬೇಡ ? ಶ್ರೀಕೃಷ್ಣನಿಲ್ಲದಿದ್ದರೆ ನಿನ್ನ ಪೌರುಷವನ್ನು ಹೊಗಳುತ್ತಿದ್ದವರು ಯಾರು ? ಈಗಲೂ ಆತನನ್ನು ಕರೆಸಿಕೊಂಡು ನಿನ್ನ ಬಲವನ್ನು ತೋರಿಸು ಸುಮ್ಮನೆ ಬಳಲಬೇಡ ನಮ್ಮಲ್ಲಿ ನಿನಗೆಂದಿಗೂ ಜಯವಾಗದು ಎಂದು ಸುಧನ್ವನು ಬಾಣವನ್ನು ಹೊಡೆಯಲು, ಅರ್ಜುನನ ರಥವು ಅಂತರಿಕ್ಷದಲ್ಲಿ ಅದ್ಭುತವಾಗಿ ಬುಗುರಿಯಂತೆ ತಿರುಗುತ್ತಿದ್ದಿತು. ಬಳಿಕ ಆ ಪಾರ್ಥನು ಭಲಭಲಾ ! ಎಲೈ ಸುಧನ್ವನೇ ! ಸುರನರೋರಗ ಯಕ್ಷರಾಕ್ಷಸರುಗಳಲ್ಲಿ ನೀನೇ ವೀರನಹುದು. ನಿನ್ನಂತಹ ಶೂರನನ್ನು ನಾನೆಲ್ಲಿಯೂ ನೋಡಲಿಲ್ಲ, ಅಕಟಾ ! ನೀನು ಇನ್ನೂ ಬಾಲಕನಾಗಿರುವೆ ! ನಿನ್ನನ್ನು ಕಂಡರೆ ನನಗೆ ಕರುಣವುಂಟಾಗುತ್ತಿದೆ, ಒತ್ತಾಸೆಗೆ ನಿನ್ನ ಹೆತ್ತಾತನನ್ನು ಬರಹೇಳು. ನಮ್ಮ ಕುದುರೆಯನ್ನು ಬಿಟ್ಟು ನೆಮ್ಮದಿಯಾಗಿರೆಂದು ಹಮ್ಮಿನಿಂದ ಹರಿತವಾದ ಕೋಲುಗಳನ್ನು ಹೊಡೆದನು, ನಾನು ಕುದುರೆಯನ್ನು ಬಿಡುವುದಿಲ್ಲ ನಮ್ಮ ತಂದೆಯಾದ ಶ್ರೀಹರಿಯ ಸಹಾಯವು ನಿನಗೊದಗಿದ ಹೊರತೂ ನಾನು ಸೋಲುವನಲ್ಲ. ನನ್ನನ್ನು ಹೆದರಿಸಲು ನಿನ್ನ ಶಕ್ತಿಗಳವಲ್ಲ. ಹಿಂದಿರುಗಿ ಹಸ್ತಿನಾವತಿಗೆ ಹೋಗು. ನೀನು ಪರಾಕ್ರಮಿಯಾದರೆ ನಮ್ಮ ತಂದೆಯಾದ ಹಂಸಧ್ವಜನು ಅಶ್ವಮೇಧಕ್ಕೆ ದೀಕ್ಷೆಗೊಂಡಕಾಲದಲ್ಲಿ ಭೂಮಂಡಲವನ್ನು ಜಯಿಸು ಎಂದು ಸುಧನ್ವನು ಗರ್ಜಿಸಿ ಅರ್ಜುನನನ್ನು ಹೊಡೆದನು. ಈ ಸಚರಾಚರಯುಕ್ತವಾದ ಚತುರ್ದಶ ಲೋಕಗಳನ್ನು ಅಣುರೂಪವಾಗಿ ನೋಡುವ ನನಗೆ ನೀನು ಲೆಕ್ಕವೆ ? ಈ ದಿನದ ಯುದ್ಧದಲ್ಲಿ ನಾನು ನಿನ್ನನ್ನು ಗೆಲ್ಲದಿದ್ದರೆ ಈ ರಥವೂ, ಕುದುರೆಗಳೂ, ಈ ಬಾಣವೂ, ಬಿಲ್ಲೂಬತ್ತಳಿಕೆಯೂ, ಈ ಕಪಿಧ್ವಜವೂ, ಸವ್ಯಸಾಚಿತ್ವವೂ, ಈ ದೇವದತ್ತವೆಂಬ ಶಂಖವೂ ನನಗೇಕೆ ? ಇವೆಲ್ಲ ವ್ಯರ್ಥವಲ್ಲವೆ ? ಎಂದು ಅರ್ಜುನನು ಏಳುನೂರು ಬಾಣಗಳನ್ನು ಎಸೆದು ಎಂಟುದಿಕ್ಕುಗಳನ್ನು ನಡುಗಿಸಿದನು. ಆಹಾ ! ಈ ನಿನ್ನ ದಿವ್ಯ ರಥವೂ, ಕುದುರೆಗಳೂ, ಗಾಂಡೀವವೂ, ಅಕ್ಷಯಬಾಣಗಳೂ, ಕಪಿಧ್ವಜವೂ, ದೇವದತ್ತವೆಂಬ ಶಂಖವೂ, ಸವ್ಯಸಾಚಿತನವೂ, ಅವ್ಯಯನಾದ ಶ್ರೀಹರಿಯ

ಸಾರಥ್ಯದಿಂದ ನಿನಗುಂಟಾಯಿತಲ್ಲದೆ ಹುಲುಮನುಜ ಸಾರಥಿಯಾದಬಳಿಕ ನಿನಗೆ
ಜಯವುಂಟೆ ? ಒಡ್ಡುಗೊಂಡ ಕಾಲಮೇಘಗಳನ್ನು ಅಡ್ಡಗಿಸಿ ಓಡುವ ಮಹಾಶ
ಕ್ತಿಯು ಪ್ರಳಯಮಾರುತನಿಗಲ್ಲದೆ ಕರಕೃತಕವಾದ ತಾಲವೃಂತ ಘಾಳಿಯಿಂದಾ
ಗುವುದೆ ಹೇಳು. ಛೀ ಸುಮ್ಮನೆ ಹೋಗು ಎಂದು ಸುಧನ್ವನು ಸವ್ಯಸಾಚಿಯನ್ನು
ಹೊಡೆದನು. ಬಳಿಕ ಫಲ್ಗುಣನು ಫಾಲ್ಗುಣಮಾಸದ ಪಗಲೊಡೆಯನಂತೆ
ಉರಿಯುತ್ತಿರುವ ಸುಧನ್ವನನ್ನು ಕಂಡು ಖಾಂಡವನ ದಹನಕಾಲದಲ್ಲಿ ಅಗ್ನಿದೇವ
ನಿಂದ ದತ್ತವಾಗಿರ್ದ ಆಗ್ನೇಯಾಸ್ತ್ರವನ್ನು ತೆಗೆದು, ಗಾಂಡೀವದಲ್ಲಿ ಹೂಡಿ,
ಝಳಪಿಸಲು, ಕೆಟ್ಬಾಸುರದ ಕಾರ್ಬೊಗೆಯು ಕವಿದು, ಕಡಲೇಳನ್ನೂ ಕುಡಿದು
ನುಂಗುವೆನೆಂದು ಕಡುಕೋಪದಿಂದೆದ್ದ ಬಡಬಾಗ್ನಿಯೋ ಎನ್ನುವಂತಿರುವ ಬಾಣ
ವನ್ನು ಹೊಡೆಯಲು ದಳ್ಳುರಿಯು ಕಡುರಭಸದಿಂದ ಪೊಡವಿಯನ್ನು ಮುತ್ತಿತು.
ಹೊಗೆಯ ಹಗರಣವು ಅಧಿಕವಾಯಿತು, ಕೇಸುರಿಗಳು ಚೂಣಿಗೊಂಡು ಎಣ್ದೆಸೆ
ಗಳನ್ನು ಸುಟ್ಟವು, ತೂರುಗಿಡಿಗಳು ವೀರರನ್ನು ಬೆದರಿಸಿದವು, ತನಿಗೆಂಡಗಳು
ಘನಮಹಿಮರಾದ ಅತಿರಥರನ್ನು ಸುತ್ತಿ ಮುತ್ತಿದವು. ಹಂಸಧ್ವಜನ ಸೇನೆಯ
ಲ್ಲವೂ ಸಂಶಯಾಪನ್ನ ಪ್ರಾಣವಾಯಿತು, ಅದನ್ನು ಕಂಡು ಕುಪಿತನಾಗಿ ಸುಧ
ನ್ವನು ಬೇಗನೆದ್ದು ವಾರುಣಾಸ್ತ್ರವನ್ನು ಹೂಡಿ, ಆಕರ್ಣಾಂತವಾಗಿ ಸೆಳೆದು
ಹೊಡೆಯಲು ಕ್ಷಣಮಾತ್ರದಲ್ಲಿ ಉರಿಯು ಆರಿ ಜಲಮಯವಾಯಿತು. ಸೇನೆಯೆ
ಲ್ಲವೂ ನೆನೆದುಹೋಯಿತು, ವಾದ್ಯರವಗಳು ನಿಂತವು, ಮಿಕ್ಕಾದ ಆನೆಕುದುರೆ
ಗಳು ಏನಾದವೊ ಕಾಣೆ. ಅರ್ಜುನನು ಅದನ್ನು ಕಂಡು ಅಚ್ಚರಿಯಿಂದ ಬೆರಗಾಗಿ
ಓದುಬಾರದ ವಟುವಿನಂತಿರುತಿದ್ದನು. ಈಪರಿಯಿಂದ ಖಾಡಿಖಾಡಿಯಲ್ಲಿ ಕಾದಾ
ಡುವ ವೀರನಾದ ಸುಧನ್ವನು ಹೊಡೆದ ವಾರುಣಾಸ್ತ್ರವನ್ನು ಆಹವಸಮರ್ಥ
ನಾದ ಅರ್ಜುನನು ವಾಯುವ್ಯಾಸ್ತ್ರದಿಂದ ಶೋಷಿಸಿ, ಬೊಬ್ಬಿಡುತ್ತಿರಲು ಸುಧ
ನ್ವನು ಅದ್ರಿಬಾಣವನ್ನು ಹೂಡಿ ಹೊಡೆದನು. ಫಲ್ಗುಣನು ಅದನ್ನು ಇಂದ್ರಾ
ಸ್ತ್ರದಿಂದ ಪಾರುಗಾಣಿಸಿದನು. ಬಳಿಕ ಸುಧನ್ವನು ತಿಮಿರಾಸ್ತ್ರವನ್ನು ತೊಡಲು,
ಪಾರ್ಥನು ಆದಿತ್ಯಾಸ್ತ್ರದಿಂದದನ್ನು ನಿವಾರಿಸಿದನು. ಹಂಸಧ್ವಜಾತ್ಮನು ಸರ್ಪಾ
ಸ್ತ್ರದಿಂದ ವೆಗ್ಗಳಿಸಲು ಕಂಸಾಂತಕನ ಭಾವಮೈದುನನು ಗಾರುಡಾಸ್ತ್ರವನ್ನೆ
ಸೆದು ಗರ್ಜಿಸಿದನು. ಬಳಿಕ ಸಕಲವಿಧವಾದ ಮಂತ್ರಾಸ್ತ್ರಂಗಳು ಕಳೆದುಳಿ
ಯಲು, ಅರ್ಜುನನು ಆಗ್ರಹದಿಂದ ಬ್ರಹ್ಮಾಸ್ತ್ರವನ್ನು ಹೂಡಿ ಹೊಡೆದನು.
ಆ ಬಾಣವನ್ನು ಪ್ರತಿಭಟಿಸಿ ಸೋಲಿಸುವುದಕ್ಕೆ ಸುಧನ್ವನು ಬ್ರಹ್ಮಾಸ್ತ್ರವನ್ನು
ಹೂಡಿ ಹೊಡೆಯಲು ಅವೆರಡೂ ಕಾದಾಡಿ ಕಡೆಗೆ ಅಣಗಿಹೋಗಲು, ಇವನನ್ನು
ಜಯಿಸುವುದು ಅಸಾಧ್ಯವಾಗಿದೆ ಎಂದು ಅರ್ಜುನನು ಅಕ್ಷಯಾಸ್ತ್ರವನ್ನು
ತುಡುಕಿ, ದಿಙ್ಮಂಡಲಗಳೆಲ್ಲವೂ ಬಾಣಮಯವಾಗಿ, ಒಬ್ಬರನ್ನೊಬ್ಬರು ನೋಡ

ಲಾಗದಂತೆ ಮಾಡಲು, ಸುಧನ್ವನು ಸಾಹಸದಿಂದವುಗಳನ್ನು ಕ್ಷಣಮಾತ್ರದಲ್ಲಿ ಕಡಿದು ಪುಡಿಪುಡಿಮಾಡಿ, ಗೌರಿಯರಸನೊಂದಿಗೆ ಕಾದಾಡಿ, ನಿವಾತಕವಚರನ್ನು ಗೆದ್ದು, ಭೀಷ್ಮ ದ್ರೋಣ ಕರ್ಣಾದಿಗಳನ್ನು ತೃಣೀಕರಿಸಿ, ಕೌರವನ ಬಲವನ್ನು ಕವರಿ, ಸಂಪಾದಿಸಿದ ನಿನ್ನ ವೀರತ್ವದ ಬಿರುದು ಹಾರಿಹೋಯಿತೆ ? ಇನ್ನು ವ್ಯರ್ಥವಾಗಿ ಚಿಂತಿಸಬೇಡ ನಿನ್ನ ಸಹಾಯಕ್ಕೆ ಶ್ರೀಕೃಷ್ಣನನ್ನು ಬರಮಾಡಿ ಕೊಂಡು ಬದುಕಿಕೊ ಎಂದು ಸುಧನ್ವನು ಬಾಣವನ್ನು ಹೊಡೆಯಲು, ಅರ್ಜು ನನ ರಥವು ಆಕಾಶದಲ್ಲಿ ತರಗೆಯಂತೆ ಸುತ್ತುತ್ತಿದ್ದಿತು, ಕುದುರೆಗಳು ಕಂಗೆಟ್ಟು ಕಾಲ್ದೊರೆದವು, ಬಿಲ್ಲು ಮುರಿದುಹೋಯಿತು, ಧ್ವಜಾಗ್ರದಲ್ಲಿನ ಕಪಿವೀರನು ಕಟ್ಟುಬ್ಬಸದಿಂದ ಕಳವಳಿಸಿ ಪಲ್ಗಿರಿದನು, ಸಾರಥಿಯು ಸತ್ತನು, ಅರ್ಜುನನ ದೇಹಾದ್ಯಂತದಲ್ಲಿಯೂ, ಕೂರಲಗುಗಳು ಕೀಲಿಸಿದವು, ಬಳಿಕ ತನ್ನ ಆಯಾಸ ವನ್ನು ನೀಗಿಕೊಂಡು ಸಾರಥಿತನವನ್ನು ತಾನೇಮಾಡುತ್ತ ಅರ್ಜುನನು ಸುಧನ್ವ ನನ್ನು ನೋಡಿ, ಈ ದಿನದ ಸಂಗರದಲ್ಲಿ ಇವನನ್ನು ಗೆಲ್ಲದಿದ್ದರೆ ಕುಂತಿಯು ನನ್ನನ್ನು ಪಡೆದು ಫಲವೇನು ? ನಾನು ಭೂಮಿಗೆ ಭಾರವಾದ ವೀರನಲ್ಲವೆ ? ಅಯ್ಯೋ ! ಧರ್ಮರಾಯನ ಯಾಗಕ್ಕೆ ವಿಘ್ನಬಂದಿತಲ್ಲ ? ಎಂದಳವಳಿದು ಶ್ರೀ ಕೃಷ್ಣನನ್ನು ಧ್ಯಾನಿಸಿದನು.

ಎಲೈ ಜನಮೇಜಯರಾಯನೆ ಲಾಲಿಸು. ಅರ್ಜುನನ್ನು ಅಂತರಂಗದಲ್ಲಿ ಧ್ಯಾನಿಸಿದ ಬಗೆಯನ್ನು ತಿಳಿದು ಅಚ್ಯುತನು ಸುಧನ್ವನ ಸಂಗರದಲ್ಲಿ ಸವ್ಯ ಸಾಚಿಗೆ ಬಂದಿರುವ ಭಂಗವನ್ನು ಧರ್ಮರಾಯನಿಗೆಚ್ಚರಿಸಿ ಗರುಡವಾಹನವನ್ನೇರಿ ಕಶ್ಯಪ, ವಶಿಷ್ಠ, ವಾಮನ ಅತ್ರಿ ಭರದ್ವಾಜ ಮೊದಲಾದ ಮಹಾಮುನಿಗಳು ಭಕ್ತಿಯಿಂದ ಸದಾ ಸ್ಮರಿಸುತ್ತಿದ್ದರೂ ಮೈದೋರದೆ ಮರೆಯಾಗಿದ್ದ ತಾನು ಪರಮ ಭಕ್ತರಾದ ಪಾಂಡವರಿಗೆ ಪರಿಚಾರಕನಾಗಿರುವೆನು ಎಂಬುದನ್ನೂ ಭಕ್ತೈಕ ಜೀವನನೆಂಬ ಬಿರುದನ್ನೂ ಲೋಕದವರಿಗೆ ಪ್ರತ್ಯಕ್ಷವಾಗಿ ತೋರಿಸು ವಂತೆ ಬಂದು ಚಂಪಕಾನಗರದ ಯುದ್ಧಭೂಮಿಯನ್ನು ಸೇರಿ ಸುಪರ್ಣಸ್ಕಂದ ದಿಂದಿಳಿದು ಸವ್ಯಸಾಚಿಯ ರಥವನ್ನೇರಿದನು. ಕೂಡಲೆ ಮಂಗಳವಾದ್ಯಗಳು ಬೋರ್ಗರೆದವು, ಸರ್ವರೂ ನಮಸ್ಕರಿಸಿದರು, ಅರ್ಜುನನು ಮಣಿದು ಮುಂಡೆ ಯನ್ನು ಬಾಗಿ ಅಡ್ಡಬಿದ್ದನು. ಅನಂತರದಲ್ಲಿ ಅಕ್ಕರೆಯಿಂದ ಆತನನ್ನು ಬೋಳೈಸಿ ಮೈದಡವಿ ಮೃದುವಚನಗಳಿಂದ ಮನ್ನಿಸಿ, ರಥದಲ್ಲಿ ಕುಳ್ಳಿರಿಸಿ, ಕದುರೆಗಳ ವಾಘೆಯನ್ನು ಹಿಡಿದು ಸಾರಥಿ ತನವಂ ಮಾಡತೊಡಗಿದನು. ಇದೆಲ್ಲವನ್ನೂ ನೋಡುತ್ತಿದ್ದ ಸುಧನ್ವನು ಅನುದಿನವೂ ಅತ್ಯಂತ ಭಕ್ತಿಯಿಂದ ಅಂತರಂಗದಲ್ಲಿ ಧ್ಯಾನಿಸುತ್ತಿದ್ದ ಶ್ಯಾಮಲಾಂಗನೂ, ಕೋಮಲಗಾತ್ರನೂ, ಕೋಮಲನೇತ್ರನೂ, ಶಂಖಚಕ್ರಗದಾ ಪದ್ಮಧಾರಿಯೂ, ಕೌಸ್ತುಭ ತುಲಸೀ

ಮಾಲಾಲಂಕೃತನೂ, ಪೀತಾಂಬರಾವೃತನೂ, ಪುಣ್ಯಚರಣಾರವಿಂದದ್ವಯನೂ, ಆದ ಶ್ರೀಹರಿಯ ದಿವ್ಯ ಮಂಗಳ ಮೂರ್ತಿಯನ್ನು ಅರ್ಜುನನ ರಥಾಗ್ರದಲ್ಲಿ ಕಂಡು ಇಂದಿಗೆ ನನ್ನ ಜನ್ಮವು ಸಫಲವಾಯಿತೆಂದು ಸಂತೋಷದಿಂದ, ಪುಳಕಂಗಳೊಗೆದು ಪರಿಶುದ್ಧವಾದ ಮನಸ್ಸಿನಿಂದ ಆತನನ್ನು ಸ್ತುತಿಸಿ, ಮನದಲ್ಲಿ ನಮಸ್ಕರಿಸಿ ಮಂಡೆಯನ್ನು ಬಾಗಿ ಮಹಾಮಹಿಮನಾಗಿ, ಮೂರುಲೋಕಗಳಿಗೂ ಒಡೆಯನಾಗಿ, ಸೃಷ್ಟಿಸ್ಥಿತಿಸಂಹಾರಂಗಳಿಗೆ ಕರ್ತನಾಗಿ ದೇಶಕಾಲಂಗಳಿಂದ ಚ್ಯುತಿಯಿಲ್ಲದವನಾಗಿ ಅನಂತ ರೂಪನಾಗಿ ಅಂತರಾತ್ಮನಾಗಿ, ಅಖಿಲಾಗಮ ಸನ್ನುತ ಗುಣಾವಳೀ ಸಂಕುಲನಾಗಿ, ಶುಭದಾತನಾಗಿ ಮುಕ್ತಿದಾಯಕನೆಂಬ ಬಿರುದನ್ನು ಪಡೆದಿರುವ ಎಲೈ ಲಕ್ಷ್ಮೀಲೋಲನೆ ನಿನ್ನ ಭಕ್ತನಾದ ನನ್ನನ್ನು ಸಂಸಾರಬಂಧದಿಂದ ಬೇಗನೆ ಬಿಡಿಸಿ ಕಾಪಾಡು.

ಎಲೈ ಜಗನ್ಮಯನೇ ! ನಿನ್ನ ಸರ್ವಜ್ಞತ್ವವನ್ನು ನನ್ನಲ್ಲಿ ತೋರಿಸಿದೆ, ನೀನಿಲ್ಲದಿದ್ದರೆ ಪಾಂಡವರಿಗೆ ಜಯವು ಸ್ವಪ್ನದ ಧನವಾಗುತ್ತಿತ್ತು ವ್ಯರ್ಥವಾದ ಮಾತುಗಳಿಂದ ಫಲವೇನು ? ನಿನ್ನೆದುರಿಗೆ ತನಿವೀರನೆಂಬ ಪೆಸರೆತ್ತಿ ಮೆರೆಯುವ ಈ ಅರ್ಜುನನು ಒಂದು ಪ್ರತಿಜ್ಞೆ ಮಾಡಿದರೆ ಅವನ ಶೌರ್ಯವನ್ನು ನೋಡುವೆನು ಎಂದು ನುಡಿದು ವಿನಯದಿಂದ ವೀರಾಗ್ರಣಿಯಂತೆ ವಂದಿಸಿ ನಿಂದನು ಅದನ್ನು ಕೇಳಿ ಅರ್ಜುನನು ಎಲೈ ಮರುಳೇ ! ನಾನು ಮಾಡುವ ಶಪಥವನ್ನು ಕೇಳು ! ದೇವಗಣಗಳು ನಲಿಯುವಂತೆ ಮೂರುಬಾಣಗಳಿಂದ ನಿನ್ನ ತಲೆಯನ್ನು ಕಡಿದು ಹಾರಿಸದಿದ್ದರೆ ಅಣುಮಾತ್ರವೂ ಪುಣ್ಯಸಂಪಾದನೆಯನ್ನು ಮಾಡದವನಾದ ಪರಮ ನೀಚನ ಗತಿಗೆ ನಾನು ಹೋಗುವೆನೆಂದು ಹೊಡಕರಿಸಿದನು. ಆಹಾ ಈತನು ದುರ್ಜಯನು ನಿನಗೆ ಸೋಲತಕ್ಕವನಲ್ಲ ಎಂಬುದನ್ನು ಅರಿಯದಾದೆಯಾ ? ಎಂದು ಕೃಷ್ಣನು ಗದರಿಸುತ್ತಿರಲು ಸುಧನ್ವನು ಎಲೈ ಮರುಳಾದ ದುರುಳನೆ ! ಅಹಂಕಾರದಿಂದ ಆಳವರಿಯದೆ ಶಪಥವನ್ನು ಮಾಡಿದೆಯಲ್ಲ ! ಶ್ರೀಕೃಷ್ಣನೆದುರಾಗಿ ದೇವಗಣವು ಪರಿಕಿಸುತ್ತಿರಲು ನೀನು ಬಿಡುವ ಮೂರು ಬಾಣಗಳನ್ನು ಮಧ್ಯ ಮಾರ್ಗದಲ್ಲಿ ಕಡಿದು ಕೆಡಹದಿದ್ದರೆ ಹುಟ್ಟಿದುದು ಮೊದಲುಸಾಯುವವರೆಗೂ ಪುಣ್ಯಹೀನನಾಗಿ ಪಾಪಕಾರ್ಯಗಳನ್ನೆ ಮಾಡಿದವನ ಸುಕೃತಕ್ಕೆನಾನು ಭಾಗಿಯಾಗುವೆನೆಂದು ಹೇಳುತ್ತ ಬಾಣವನ್ನು ಹೊಡೆಯಲು ಅರ್ಜುನನ ರಥವು ನಾಲ್ಕುನೂರು ಬಾರುಗಳವರೆಗೂ ಹಾರಿಹೋಯಿತು. ಅದನ್ನು ಕಂಡು ಶ್ರೀಕೃಷ್ಣನು ಸುಧನ್ವನನ್ನು ಕೊಂಡಾಡಿ ಏಕಪತ್ನಿವ್ರತಸ್ಥನಾಗಿ ತಾತನಾಜ್ಞೆಯನ್ನು ಮೀರದವನಾಗಿ ಅಕಳಂಕವಾದ ಭಕ್ತಿಯಿಂದ ನನ್ನನ್ನು ಪೂಜಿಸುವ ಪುಣ್ಯದಿಂದ ಮೂರು ಲೋಕಗಳನ್ನು ಜಯಿಸುವ ವೀರ್ಯವನ್ನಾಂತು ಯಾರು ಮುಳಿದರೂ ಪಾರುಗಾಣದ ಪೌರುಷ

ದಿಂದ ಕಾದಿ ಸೋಲಿಸುವ ಈ ಸುಧನ್ವನ ಸಾಮರ್ಥ್ಯವನ್ನರಿಯದೆ ದುಡುಕಿ ನನ್ನೊಡನೆ ಯೋಚಿಸದೆ ಭಾಷೆಯನ್ನಿಟ್ಟುಕೊಂಡೆಯಲ್ಲಾ ! ಮುಂದೇನುಗತಿ ಎಂದು ಹೇಳಿದನು. ಬಳಿಕ ಸುಧನ್ವನು ಎಲೈ ಶ್ರೀಕೃಷ್ಣನೇ ! ಬಯಲು ಬಿಂಕದ ಮಾತುಗಳೇಕೆ ? ಗೋವರ್ಧನ ಗಿರಿಯನ್ನು ಕೊಡೆಯಾಗಿ ಹಿಡಿದು ಗೊಲ್ಲರ ಬೆಟ್ಟಿಗಳನ್ನು ನೆನೆಯದಂತೆ ಮಾಡಿದ ಹಾಗೆ ನೀನು ಈ ಅರ್ಜುನನನ್ನು ಸಂರಕ್ಷಿಸುವೆ ! ನಾನು ವ್ಯರ್ಥವಾಗಿ ಅಹಂಕಾರಪಟ್ಟರೇನಹುದು. ಇನ್ನು ನನ್ನ ದೇಹವನ್ನು ನಿನ್ನ ಪಾದ ಕಮಲಗಳಿಗೆ ಒಪ್ಪಿಸಿರುವೆನು. ಇನ್ನೊಂದು ಸಾರಿ ಮುಳಿದು ಕಾದಿದುದೇ ಆದರೆ ನಾದು ಅಳುಕಿ ಹೋದರೆ ನಿನ್ನ ಕಿಂಕರ ನಾಗುವೆನೆ ? ಎಂದು ಮುರಳಿ ಬಿರುಸಾದ ಬಾಣವನ್ನು ಹೊಡೆದನು. ಆ ಬಾಣಹತಿಯಿಂದ ಅರ್ಜುನನ ರಥವು ನೆಲದಮೇಲೆ ಸಂಚರಿಸುವ ಸುಂಟರ ಗಾಳಿಯಂತೆ ತಿರುಗುತ್ತಿದ್ದಿತು. ಅದನ್ನು ಕಂಡು ಶ್ರೀಕೃಷ್ಣನು ಸುಧನ್ವ ನನ್ನು ಬಹಳವಾಗಿ ಹೊಗಳಿ ಅರ್ಜುನನ್ನು ಎಚ್ಚರಿಸಿದನು. ಅದನ್ನು ಕಂಡು ಶ್ರೀಕೃಷ್ಣಮೂರ್ತಿಯು ಒಂಭತ್ತನೆಯ ಅವತಾರದಲ್ಲಿ ಗೋವರ್ಧನವನ್ನು ಧರಿಸಿ ಗೋಪಾಲರನ್ನು ಕಾಪಾಡಿದ ಫಲವನ್ನು ಆಬಾಣಕ್ಕೆ ಅಳವಡಿಸಿ, ಬಲ ವಾದ ಸಾಮರ್ಥ್ಯವನ್ನಿಟ್ಟು ಬೇಗದಿಂದ ನಿನ್ನ ಶತ್ರುವಿನ ಶಿರಸ್ಸನ್ನು ತರಿದು ಹಾಕು ಎಂದು ಹೇಳಿದನು.

ಬಳಿಕ ಅರ್ಜುನನು ಆಕರ್ಣಾಂತವಾಗಿ ಸೆಳೆದ ಆ ಬಾಣವನ್ನು ಆಕ್ರೋಶ ದಿಂದೆಸೆದನು. ಆಗ ! ಎಲೈ ಶ್ರೀಕೃಷ್ಣನೇ ! ಶಹಬಾಸ್ ! ನೀನು ಬಹು ಕಷ್ಟದಿಂದ ಸಂಪಾದಿಸಿದ ಪುಣ್ಯಫಲವನ್ನು ನನಗಾಗಿ ಕೊಟ್ಟೆಯಲ್ಲಾ ! ಇದ ರಿಂದ ಹತಿಯಿಲ್ಲ ನೋಡು ಎಂದು ಹೇಳುತ್ತ ಕೊರಲಬಳಿಗೆ ಬರುತ್ತಿರುವ ಸರಳನ್ನು ಪಡಿಯಂಬಿನಿಂದ ಹೊಡೆದು ಕಡಿದು ಹಾಕಿದನು. ಕೂಡಲೆ ಮಂಗ ಳವಾದ್ಯಗಳು ಬೋರ್ಗರೆದವು, ಶ್ರೀಕೃಷ್ಣನು ಆತನ ಶೌರ್ಯವನ್ನು ಮೆಚ್ಚಿ ಕೊಂಡಾಡಿದನು. ಅಕಟಕಟಾ ! ಮೂರುಬಾಣಗಳಿಂದ ಈ ವೀರನನ್ನು ಕೊಲ್ಲು ವೆನೆಂದು ಸರ್ವಜ್ಞನಾದ ಶ್ರೀಕೃಷ್ಣನಮುಂದೆ ಪ್ರತಿಜ್ಞೆಮಾಡಿದೆನು. ಅದರ ಲ್ಲೊಂದು ವ್ಯರ್ಥವಾಯಿತು, ಉಳಿದೆರಡು ಬಾಣಗಳಿಂದ ಈತನನ್ನು ಕೊಲ್ಲದಿ ದ್ದರೆ ನನ್ನ ಶಪಥಕ್ಕೆ ಹಾನಿಬರುವುದು ಎಂದು ಅರ್ಜುನನು ಆರ್ಭಟಿಸುತ್ತ ಅಂತಕೋಪಮವಾದ ಮಹಾಸ್ತ್ರವನ್ನು ತೆಗೆದು ಹೂಡಿದನು. ಆಗ ಶ್ರೀಕೃ ಷ್ಣನು ತಾನು ವರ್ತಮಾನಾವತಾರದಲ್ಲಿ ಭೂರಕ್ಷಣೆಯನ್ನು ಮಾಡಿದ ಪುಣ್ಯ ವನ್ನು ಅದಕ್ಕವಳಿಡಿಸಿ ಎಚ್ಚರಿಸಲು, ಫಲ್ಗುಣನು ಪಂತವನ್ನು ಪ್ರತಿಪಾಲಿಸುವ ಪರಾಕ್ರಮದಿಂದ ಆ ಬಾಣವನ್ನು ಹೊಡೆದನು. ಎಲೈ ಅಚ್ಯುತನೇ ! ಅರ್ಜು ನನ ಬಾಣಕ್ಕೆ ನಿನ್ನ ಪುಣ್ಯವನ್ನು ಆಹುತಿಯಾಗಿ ಕೊಟ್ಟೆಯಲ್ಲಾ ! ಆಗಲಿ.

ಈ ಬಾಣವನ್ನು ನಾನು ಕತ್ತರಿಸದಿದ್ದರೆ ಬೋಗಕಾಲದಲ್ಲಿ ಅರುಂಧತಿಯನ್ನು ಕೂಡಿದ ವಸಿಷ್ಠನನ್ನು ಕೊಂದ ಮಹಾಪಾತಕಕ್ಕೆ ಗುರಿಯಾಗುವೆನೆಂದು ಚೀರಿ, ಹಾರಿಬರುತ್ತಿರುವ ಮಾರ್ಗಣವನ್ನು ಮಧ್ಯಮಾರ್ಗದಲ್ಲಿ ಕತ್ತರಿಸಿ ಕೆಡಹಿದನು, ಬೇರಿನಿಸ್ಸಾಳಗಳು ಪೂರಿತವಾದ ಧ್ವನಿಯಿಂದ ಮೊರೆದವು, ದೇವಗಣಗಳು ಸುಧನ್ವನನ್ನು ಕೊಂಡಾಡಿದರು. ಬಳಿಕ ಶ್ರೀಕೃಷ್ಣನು ಅರ್ಜುನನನ್ನು ನೋಡಿದನು, ಮೂರರಲ್ಲೆರಡು ಮುರಿದುಹೋಯಿತು, ಉಳಿದೊಂದರಿಂದ ಬಲಶಾಲಿಯಾದ ವೀರನನ್ನು ಕೊಲ್ಲದಿದ್ದರೆ ಹರಿಹರವಿಭೇದವನ್ನು ಮಾಡಿದವನ ನೀಚಗತಿಯನ್ನು ಹೊಂದುವೆನೆಂದು ಪಾರ್ಥನು ಮತ್ತೊಂದು ಮಹಾಬಾಣವನ್ನು ಹೊಡೆಯಲುದ್ಯುಕ್ತನಾದನು. ಆಗಲಾ ಶ್ರೀಹರಿಯು ಆ ಬಾಣದ ಮೊದಲಿನಲ್ಲಿ ಬ್ರಹ್ಮನನ್ನೂ, ತುದಿಯಲ್ಲಿ ಹರನನ್ನೂ, ಆವಾಹಸಂಗೈದು ನಡುವಣೆಡೆಯಲ್ಲಿ ತಾನೆ ನಿಂತು ರಾಮಾವತಾರದಲ್ಲಿ ತಾನು ಆದಿಯಿಂದತ್ಯದವರೆಗೂ ಸಂಪಾದಿಸಿದ ಸುಕೃತವನ್ನು ಬಾಣಕ್ಕೆ ಆಹುತಿಯಾಗಿ ಕೊಟ್ಟು ಬಾಹುಗಳನ್ನಪ್ಪಳಿಸಿದನು.

ಬಳಿಕ ಕೋಟಿಸಿಡಿಲಗರ್ಜನೆಯಂತೆ ಅರ್ಜುನನು ದೇವದತ್ತವನ್ನು ಶ್ರೀಕೃಷ್ಣನು ಪಾಂಚಜನ್ಯವನ್ನು ಊದಿದರು. ಧ್ವಜಾಗ್ರದಲ್ಲಿನ ಕಪಿವೀರನು ಕಟ್ಟಾಸುರದ ಕಡುಪಿನಿಂದ ಚೀರಿದನು. ಬೇರಿನಿಸ್ಸಾಳಗಳು ಬಹಳವಾದ ವಾದ್ಯಜಾಲಗಳೂ ಮೊಳಗಿದವು. ಅದನ್ನು ಕಂಡು ಸುಧನ್ವನು ಎಲೈ ಶ್ರೀಕೃಷ್ಣನೇ ಸುಳ್ಳಾಡಬೇಡ, ನಿನ್ನ ಪುಣ್ಯವನ್ನು ಸೂರೆಮಾಡಿದವರು ಯಾರು ? ನಾನೋ ? ಅರ್ಜುನನೋ ? ಈಗ ಬಿಡುವ ಬಾಣವನ್ನು ನಾನು ಕತ್ತರಿಸಿದ್ದರೆ, ನನ್ನ ತಾಯಿ ನನ್ನನ್ನು ಮಗನೆಂದು ಮನ್ನಿಸುವಳೆ ? ಮಡದಿಯು ಮನದನ್ನನೆಂದು ಮೋಹಿಸುವಳೆ ? ಅದುಹಾಗಿರಲಿ ! ಈ ಬಾಣವನಿಕ್ಕಡಿಗೈಯದಿರ್ದೊಡೆ, ಭಕ್ತಿಭಾವನೆಯಿಂದ ಕಾಶಿಗೆಬಂದು ಮಣಿಕರ್ಣಿಕಾ ತೀರದಲ್ಲಿಮಿಂದು ಅಕುಟಿಲಾಂತಃಕರಣದಿಂದ ಅತ್ಯುತ್ತಮವಾದ ಶಿವರಾತ್ರಿಯಲ್ಲಿ ಆದಿಮಧ್ಯಾಂತರಹಿತನಾದ ವಿಶ್ವೇಶನನ್ನು ಪೂಜಿಸಿ, ಅರ್ಚನೆಯನ್ನು ನೋಡಿ ಅಸಹ್ಯಗೊಂಡು ಎಡದ ಕಾಲಿಂದದೊದೆದವನ ಗತಿಗಿಳಿಯುವೆನು. ನನ್ನ ಸಾಹಸವನ್ನು ನೋಡು ಎಂದು ಧನುಷ್ಟಂಕಾರವಂ ಮಾಡಿದನು. ಕೂಡಲೆ ಅರ್ಜುನನು ತ್ರಿಮೂರ್ತಿಗಳಿಂದಾವಾಹಿತವಾಗಿ, ರಾಮಾವತಾರದ ಫಲವನ್ನೊಳಗೊಂಡು, ತನ್ನ ಸಂಪೂರ್ಣವಾದ ಬಲವನ್ನು ಸೆಳೆದುಕೊಂಡ ಬಾಣವನ್ನು ಹೊಡೆದನು ಆಗ ಉಭಯಸೇನೆಗಳೂ ಹೆದರಿದವು, ಭೂಮಿಯು ಅದಿರಿತು, ಮೇರುಮಂದರಗಳು ಕದಲಿದವು, ಸೂರ್ಯಚಂದ್ರರು ಗತಿಗೆಟ್ಟರು, ಆದಿಶೇಷನು ಅಳವಳಿದನು, ಕೂರ್ಮನು ಕೊರಚಾಡಿದನು, ಎಂಟುದಿಕ್ಕುಗಳು ಟೆಂಟಣಿಸಿ ಭಯದಿಂದ ನಡುಗಿದವು ಬಾಣದುರಿಯು ಬ್ರಹ್ಮಾಂಡವನ್ನು ಆವರಿಸಿಕೊಂಡಿತು. ಆದರೂ ಸುಧನ್ವನು ಹೆದರದೆ, ಹಿಮ್ಮೆಟ್ಟದೆ,

ಧೈರ್ಯಗುಂದದೆ, ವಿಾರಿದ ಪರಾಕ್ರಮದಿಂದ ಎದುರಂಬನ್ನು ಹೊಡನು ಆ ಬಾಣ ವನ್ನು ಎರಡುತುಂಡಾಗಿ ಕತ್ತರಿಸಿದನು. ಅದರ ಹಿಂಭಾಗವು ಭೂಮಿಗುರು ಳಿತು, ಉಳಿದ ಮುಂದಿನರ್ಧವು ಮೇಲ್ವಾಯ್ದುಬಂದು ಸುಧನ್ವನ ಶಿರವನ್ನು ಕತ್ತರಿಸಿ ಹಾಯ್ದುಹೋಗಲು, ಆ ತಲೆಯು ಮುರಾರಿ, ಕೃಷ್ಣ, ಜಗನ್ಮಯ, ಜನಾರ್ದನ, ಮುಕುಂದಾ ಎಂದು ಅಂತರಿಕ್ಷದಲ್ಲಿ ಅಲುತ್ತಿದ್ದಿತು. ಕುಂದು ಕೊರತೆಗಳಿಲ್ಲದ ಸಮವೃತ್ತಸುಂದರವಾದ ತನಗಿನ್ನು ಅನ್ಯವೈರವು ತಕ್ಕುದಲ್ಲ ವೆಂದು ಪೂರ್ಣಕಲಾವಿಲೋಲನಾದ ಚಂದಿರನು ಕಮಲಗಳನ್ನು ಸಂತೈಸುತ್ತಿ ರುವನೋ ಎನ್ನುವಂತೆ ಆಸುಧನ್ವನ ಶಿರಸ್ಸು ಶ್ರೀ ಕೃಷ್ಣನ ಪಾದಾರವಿಂದ ಗಳನ್ನು ಪೊರ್ದ್ದಿ ಆತನ ನಾಮಾವಳಿಗಳನ್ನು ಉಚ್ಚರಿಸುತ್ತಿದ್ದಿತು

ಬಳಿಕ ದೇವತೆಗಳು ಆಹಾ ! ಶ್ರೀಕೃಷ್ಣನು ಅನ್ಯಾಯಮಾಡಿದನಲ್ಲಾ ! ಎಂದು ಅಲುತ್ತಿರಲು ಸುಧನ್ವನ ಮುಂಡವು ಮುಂದರಿದುಬಂದು ಮಹತ್ತಾದ ಅರ್ಜುನನ ಸೇನೆಯನ್ನು ಹೊಡೆದು ಹೊಯ್ದು, ಅಪ್ಪಳಿಸಿ, ಸೊಪ್ಪಾಗಿಮಾಡಿ ಸಕಲರನ್ನೂ ನೋಯಿಸಿತು. ಹೊಳೆಹೊಳೆವ ಕುಂಡಲಗಳ ಕಾಂತಿಯುಳ್ಳ ಕದಪೂ, ಪೂರ್ಣಚಂದ್ರನಿಗೆ ಸಮನಾದ ಮುಖವೂ, ಕಸ್ತೂರಿಯತಿಲಕವೂ, ಮುರಿದ ಮಿಾಸೆಗಳೂ, ನಗೆಮೊಗದಲ್ಲಿ ಬೆಳಗುವ ಸೊಗಸಾದ ರದನಪಜ್ತಿಗಳೂ, ಬಿಟ್ಟಕಣ್ಣುಗಳೂ, ಬಿಗಿದ ಬಾಯಿಯೂ, ನವಿಲುಗರಿಗಳಂತೆಸೆಯುವ ಸೌಂದರ್ಯ ವೂಕೂಡಿ ರಾಜಿಸುತ್ತಿರುವ ಆ ಸುಧನ್ವನ ಶಿರಸ್ಸನ್ನು ಶ್ರೀಕೃಷ್ಣನು ಎರಡು ಕೈಗಳಿಂದಲೂ ಹಿಡಿದೆತ್ತಿ ನೋಡುತ್ತ, ನಾಸಾಗ್ರದೆಡೆಗೆ ಎಳೆದು ಆಘ್ರಾಣಿಸಿ, ಬಳಿಕಾತನ ವದನವನ್ನು ತನ್ನ ಮುಖದೆಡೆಗೆ ತಿರುಗಿಸಲು ಸುಧನ್ವನ ಅಂತರಾ ತ್ಮವು ಶ್ರೀಹರಿಯಲ್ಲಿ ಅಡಗಿಹೋಯಿತು. ಬಳಿಕ ದೇವತೆಗಳು ಆ ಶಿರಸ್ಸನ್ನು ಬಹಳವಾಗಿ ಕೊಂಡಾಡಿದರು. ಶ್ರೀಕೃಷ್ಣನು ಆ ಸುಧನ್ವನ ತಲೆಯನ್ನು ಅರ್ಜುನನಿಗೆ ತೋರಿಸಿ, ಹಂಸಧ್ವಜನ ಬಳಿಗೆಸೆಯಲು, ತನ್ನ ಮಗನ ಪರಾಕ್ರಮ ವನ್ನು ಕಂಡುಬ್ಬುತ್ತಿದ್ದ ಹಂಸಧ್ವಜನು ಕವಲಂಬಿನಿಂದ ಕಡಿದು ಹೋದು ದನ್ನು ಕಂಡು ಕಡುದುಗುಡದಿಂದ ಪೊಡವಿಗುರುಳಿ ಹೊರಳಾಡುತ್ತಿದ್ದನು.

ಆಗ ತನ್ನೆಡೆಗೆಬಂದ ಮಗನ ತಲೆಯನ್ನೆತ್ತಿಕೊಂಡು ಹಂಸಧ್ವಜನು ಹಾ! ಮಗನೇ ! ಜಗದೊಡೆಯನೊಡನೆ ಕಾದಿದ ತಪಿವೀರನೆ ಎಂದು ಮೋಹದಿಂದ ಮರುಗುತ್ತ, ಮುಖದಲ್ಲಿ ಮುಖವನ್ನಿಟ್ಟು ಚುಂಬಿಸಿ, ನೆತ್ತಿಯನ್ನಾಘ್ರಾಣಿಸಿ, ಹಾ ! ಈಗ ನಾನೇನುಮಾಡಲಿ ಪರ್ವತಾಗ್ರದಿಂದ ಬೀಳಲೆ ! ನಿನ್ನನ್ನು ನೋ ಡುವ ಈ ಕಣ್ಣುಗಳನ್ನು ಕೀಳಲೆ ? ಹರಕೆಯಿಂದ ಹೆತ್ತ ಈ ದೇಹವನ್ನು ಸೀಳಲೋ ! ನಿನ್ನ ಮಾತುಗಳನ್ನು ಯಾವಾಗ ಕೇಳಲಿ ! ಜನ್ಮಾಂತರದಲ್ಲಿಯಾ ದರೂ ನಿನಗೆ ಆಜ್ಞೆಮಾಡಬಲ್ಲನೆ ? ನಿನ್ನ ಶೋಕವನ್ನು ನಾನೆಂತು ಸಹಿಸಲಿ !

ಇದಕ್ಕೆ ತಕ್ಕ ಉಪಾಯವನ್ನು ಹೇಳದೆ ಮೌನದಿಂದಿರುವೆಯಲ್ಲಾ ! ಕಂದಾ ! ಯುದ್ಧಮಾಡುವೆನೆಂದು ಬಿಲ್ಪಿಡಿದುಬಂದೆ ! ಅರ್ಜುನನೊಡನೆ ಯುದ್ಧಮಾಡಿದ ಬಳಿಕ ನೀನೆ ಗೆಲ್ಲಬೇಡವೆ ತಂದೆ ! ಶೂರರಲ್ಲಿ ಅಗ್ಗಳೆಯನಾದ ನೀನು ಯಾವ ಕಾರಣದಿಂದ ಸತ್ತೆ ನಾನು ನಿನ್ನನ್ನುಬಿಟ್ಟು ಮನೆಗೆಹೋಗುವುದು ಹೇಗೆ ? ಅಣ್ಣನು ಗೆದ್ದುಬರುವೆನೆಂದು ಆನಂದದಿಂದಾರತಿಯನ್ನು ಹಿಡಿದು ಕಾದಿರುವ ನಿನ್ನ ತಂಗಿಗೆ ಏನುಹೇಳಲಿ ! ಈ ವಾರ್ತೆಯನ್ನು ಕೇಳಿ ಅವಳು ಆತ್ಮನನ್ನು ಧರಿಸುವಳೆ ? ಹೆತ್ತತಾಯಿಯು ಮುತ್ತಿನಂತಹ ಮಗನನ್ನು ಏನುಮಾಡಿದೆಯೆಂದು ಕೇಳಿದರೆ ಹೇಳುವ ಉತ್ತರವೇನು ? ತಮ್ಮಂದಿರನ್ನಾದರೂ ಕಣ್ದೆರೆದು ನೋಡಿ ಆದರಿಸು! ಅನುಕೂಲವಾದ ಮಾತುಗಳನ್ನಾಡು ವೀರಗ್ರಣಿಯಾದ ನೀನು ನೀನು ಶೌರ್ಯದಿಂದ ಕಾದಿ ಯುದ್ಧವನ್ನು ಗೆದ್ದು ಬರುವೆ ಎಂದು ಅತ್ಯುತ್ಸಾಹದಿಂದ ಎದುರುನೋಡುತ್ತಿರುವ ಅಂಗನಾಮಣಿಯಾದ ನಿನ್ನ ಹೆಂಡತಿಯನ್ನು ನಾನೆಂತು ನೋಡಲಿ ! ಕಂದಾ ! ಬಹು ತೆರದ ಬಯಲ ಮಾತುಗಳನ್ನಾಡುವ ಕಟ್ಟಾಸುರದ ಕಟುಕನಾದ ನನಗೆ ನಿನ್ನಲ್ಲಿ ಕರುಣವುಂಟಾಗಿದ್ದರೆ, ತುಂಬಿತುಳುಕುವ ಕಾದ ಎಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿಸುತ್ತಿದ್ದೆನೆ ? ಪುತ್ರನಿಗೆ ದ್ರೋಹಮಾಡಿದ ನನ್ನ ಶೋಕವು ವ್ಯರ್ಥವಾದುದೆಂದು ಲೋಕದವರು ನನ್ನನ್ನು ಜರಿಯದಿರುವರೆ ? ಕಾದೆಣ್ಣೆಯಲ್ಲಿ ನಿನ್ನ ದೇಹವನ್ನು ತಣ್ಣಸದಿಂದ ಕಾಪಾಡಿದ ಶ್ರೀಹರಿಯು ರಣರಂಗದಲ್ಲಿ ಹೇಗೆ ಹಗೆಯಾದನು. ಎಂದಿಂತು ಬಗೆಬಗೆಯಾಗಿ ಹಂಬಲಿಸುತ್ತ ಮೋಹದ ಮಗನ ಮುದ್ದುಗೆಯ್ತಗಳನ್ನು ಬಣ್ಣಿಸಿ ತನ್ನೊಡಲೊಳಗಣ ಕಡುಶೋಕವೆಂಬಗ್ನಿಗೆ ದೇಹವನ್ನೊತ್ತೆಗೊಟ್ಟು ಮರುಗಿದನು.

ಬಳಿಕ ಹಂಸಧ್ವಜನ ಪರಿವಾರವು ಸತ್ತುಬಿದ್ದ ಸುಧನ್ವನನ್ನು ಕಂಡು ಹಾ ! ಕಡುಗಲಿಯಾದ ವೀರನೇ ! ನಮ್ಮನ್ನು ಸನ್ಮತವಾದ ಅಪ್ಪಣೆಯಿಂದ ಯುದ್ಧರಂಗದಲ್ಲಿ ನಡೆಸುವವರಾರು ? ಚಂಪಕಾನಗರದ ಭಾಗ್ಯವು ಹಾಳಾಯಿತೆ ? ಶಿವಶಿವಾ ! ನಮ್ಮ ಗತಿ ಏನೆಂದು ಬರುತ್ತಿರಲು, ಆನೆ ಕುದುರೆಗಳು ಕಂಬನಿಗಳನ್ನು ಸುರಿಸುತ್ತಾ ದುಃಖದಿಂದ ಜೋಲುಗಿವಿಗಳನ್ನು ಬಿಟ್ಟಲಳಿದವು. ಅನಂತರದಲ್ಲಿ ಅಣ್ಣನಳಿದ ದುಃಖವನ್ನು ಸಹಿಸಲಾರದೆ ಸುರಥನು ತಂದೆಯ ಬಳಿಗೆ ಬಂದು ತಾತಃ! ಏತಕ್ಕೆ ವ್ಯಸನ ಪಡುವೆ? ಹರಿಯುಮುಂದೆ ಹರುಷದಿಂದ ಮಾಡಿದ ಪಂಥಕ್ಕೆಡೆಯಾಗಿ ಧುರರಲ್ಲಿ ಕಾದಿ ಮಡಿದು ವೀರ ಸ್ವರ್ಗವನ್ನು ಪಡೆದ ಸುಧನ್ವನಿಗಾಗಿ ನೀನು ವ್ಯಸನಪಡಬಾರದು ನನ್ನ ಶೌರ್ಯವನ್ನು ನೋಡು ಎಂದು ಹೇಳಲು, ಅಯ್ಯಾ ನಿನ್ನ ಮಾತು ಸತ್ಯ. ಶ್ರೀಹರಿಯಬಳಿಗೈದಿದ ಶಿರಸ್ಸನ್ನು ಆತನು ನೋಡಿಕೊಂಡಿಲ್ಲಿಗೆ ಬಿಸುಟನಲ್ಲಾ ! ಎಂಬ ಕೊರತೆಯಿಂದ ಮರುಗುವೆನಲ್ಲದೆ ಮತ್ತಾವಚಿಂತೆಯೂ ಇಲ್ಲವೆಂದು ಹೇಳಲು ತಂದೆ

ಯನ್ನು ಕುರತು ಸುರಥನು ನೀನು ಆ ಶಿರಸ್ಸನ್ನು ಮರಳಿ ಅಚ್ಯುತನ ಬಳಿಗೆ ಕಳುಹಿಸೆಂದು ಹೇಳಲು, ಹಂಸಧ್ವಜನು ಶ್ರೀಕೃಷ್ಣನ ಬಳಿಗಾಶಿರವನ್ನೆಸೆದನು. ಆಗಲಾಹರಿಯು ಅಕ್ಕರೆಯಿಂದ ಆ ತಲೆಯನ್ನು ತೆಗೆದುಕೊಂಡು ಗಗನಮಂಡಲಕ್ಕೆಸೆದನು. ಬಳಿಕ ಭವಾನೀ ನಾಥನು ಬಹುಸಂತೋಷದಿಂದ ಅದನ್ನು ತನ್ನ ರುಂಡಮಾಲೆಯಲ್ಲಿ ಸೇರಿಸಿಕೊಂಡನು. ಅನಂತರದಲ್ಲಿ ಸುರಥನು ತನ್ನ ಸೇನೆಯವರನ್ನು ಎಚ್ಚರಿಸಿ ಮಿಡುಕುತ್ತಿರುವ ಕಡುಕೋಪದಿಂದ ಕೆಂಪಾದ ಕಣ್ಣುಗಳನ್ನು ತಿರುಗಿಸುತ್ತ, ಬಿಲ್ಪಿಡಿದು ಯುದ್ಧಾಭಿಮುಖನಾಗಿ ರಥವನ್ನೇರಿದನು. ಅದನ್ನು ಕಂಡು ದೇವಪುರನಿಲಯನಾದ ಲಕ್ಷ್ಮೀರಮಣನು ತನ್ನ ಭಾವಮೈದುನನಾದ ಅರ್ಜುನನೊಡನೆ ಆಲೋಚಿಸುತ್ತಿದ್ದನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿನಾಗಶರ್ಮ ಪ್ರಣೀತಮಾದ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಹದಿಮೂರನೆಯಸಂಧಿ ಸಂಪೂರ್ಣ. ಶ್ರೀ ಶ್ರೀ ಶ್ರೀ.

# ಹದಿನಾಲ್ಕನೆಯ ಸಂಧಿ.

ಗರುಡನು ಸುರಥನ ಶಿರಸ್ಸನ್ನು ಪ್ರಯಾಗಕ್ಕೆ ತೆಗೆದುಕೊಂಡು ಹೋದಾಗ ಈಶ್ವರನು ಅದನ್ನು ರುಂಡಮಾಲೆಗೆ ಸೇರಿಸಿಕೊಂಡುದು.

ಎಲೈ ಜನಮೇಜಯರಾಯನೇ ! ಸುಧನ್ವನ ಸಾಮರ್ಥ್ಯವನ್ನು ಕೇಳಿದೆಯಲ್ಲವೆ ? ಇನ್ನು ಅವನತಮ್ಮನಾದ ಸುರಥನಶಕ್ತಿಯನ್ನು ವಿಸ್ತರಿಸುವೆನು ಲಾಲಿಸು. ಅಣ್ಣನು ಸತ್ತಬಳಿಕ ಅತ್ಯಂತ ಕೋಪವಂತಾಳಿ, ಕೆಂಗಣ್ಣುಗಳಿಂದ ಕಿಡಿಗಳನ್ನುದಿರಿಸುತ್ತ, ಧನುರ್ಬಾಣಗಳನ್ನು ತೆಗದುಕೊಂಡು, ಸುಧನ್ವನನ್ನು ಕೊಂದವನು ಬದುಕುವನೆ ? ಧರ್ಮರಾಯನು ರಾಜ್ಯಭಾರವಂ ಮಾಡುವನೆ ? ಆಗಲಿ ಇನ್ನುಮೇಲೆ ನೋಡಬಹುದು. ನನ್ನ ತೋಳಿನತೀಟೆಯನ್ನು ತೀರಿಸಿಕೊಳ್ಳುವೆನೆಂದು ರಥವನ್ನೇರಿ ರಣೋತ್ಸಾಹದಿಂದ ಬರುತ್ತಿರುವ ಸುರಥನ ಅಂಕವಂ ಪರಿಕಿಸಿ, ಶ್ರೀಹರಿಯು ಎಲೈ ಅರ್ಜುನನೇ! ನೋಡು. ಈಗಯುದ್ಧೋತ್ಸುಕನಾಗಿ ಬರುತ್ತಿರುವ ವೀರನು ಆಚರಿಸದಿರುವ ಧರ್ಮವೆ ಇಲ್ಲ. ಮರೆತಾಗಲೀ ಕನಸಿನಲ್ಲಿಯಾಗಲೀಮಾಡಿದ ಪಾಪಲೇಶವನ್ನು ಕಾಣೆ. ಇವನೆದುರಿಗೆ ನಿಂದು ಯುದ್ಧಮಾಡಿದರೆ ನಮಗೆ ನಿಜವಾಗಿಯೂ ಸೋಲಾಗದಿರುವುದೆ ? ಆದಕಾರಣ ಪ್ರದ್ಯುಮ್ನಮೊದಲಾದ ಯದುವೀರರು ಈತನೊಡನೆ ಸಂಗರದಲ್ಲಿ ಹೊಡ

ದಾಡಲಿ ! ಎಂದು ನುಡಿದು ಅಂಧಕ, ವೃಷ್ಣಿ, ಸಾತ್ಯಕಿ, ಕೃತವರ್ಮ ಮೊದಲಾದವರ ಮೂಲಬಲವನ್ನು ಮುಂದಕ್ಕೆನೂಕಿ, ಮಹಾವೀರನಾದ ಅರ್ಜುನನ ರಥವನ್ನು ಹಿಂದಿರುಗಿಸಲೆಳಸಿ, ಕುದುರೆಗಳ ಕಡಿವಾಣವನ್ನು ಹಿಡಿದು ಹಿಂದಿಕ್ಕಿ ಸೇನಾಮಧ್ಯಕ್ಕೆ ತಂದುನಿಲ್ಲಿಸಿ, ಬಲವಾದ ಕಾಹುರದಿಂದ ಕಾಪಾಡುತ್ತಿದ್ದನು.

ಬಳಿಕ ಪಟುಭಟನಾದ ಪ್ರದ್ಯುಮ್ನನು ಕೂರಂಬುಗಳನುಗಿದು ಕೈಮಾಡುವುದಕ್ಕೆ ನಿಂತಿರುವ ತನಿವೀರನನ್ನು ಕೋಟಲೆಗೊಳಿಸಲು, ಎಲೈ ಮೂಢನೇ ! ಮದ್ದಾನೆಯ ಮೋಹರವು ಪಕ್ಷಿಕಾವಳಿಗೆ ಸಲ್ಲುವುದೆ ? ಸುಮ್ಮನೆ ಆಯಸಗೊಂಡು ಕರಿತುರಗ ರಥಪದಾತಿಗಳನ್ನು ನೋಯಿಸಬೇಡ. ಇದು ಸುಧನ್ವನ ಸಮರವಲ್ಲ ! ಶ್ರೀಕೃಷ್ಣನಿಂದೊಡಗೂಡಿದ ಅರ್ಜುನನು ಎಲ್ಲಿ ಹೋದನು ತೋರಿಸೆಂದು ಮಾರ್ಗಣೆಗಳನ್ನೆಸೆದು ಮಾರದೇವನನ್ನು ಮೈಮುರಿಯುವಂತೆ ಮಾಡಿದನು. ಬಳಿಕ ಸಾತ್ಯಕಿಯನ್ನು ಸೋಲಿಸಿ, ಕೃತವರ್ಮ, ಸಾಂಬ, ಅನುಸಾಲ್ವರನ್ನು ಜವಗೆಡಿಸಿ, ಯೌವನಾಶ್ವನನ್ನು ಸದೆದು, ನೀಲಧ್ವಜನನ್ನು ಕಾಲುಗೆಡಿಸಿ, ವೃಷಕೇತುವನ್ನು ಕಂಗೆಡಿಸಿ, ಉಳಿದ ಯಾದವಸೇನೆಯ ಅತಿರಥ ಮಹಾರಥವನ್ನು ಕ್ಷಣಮಾತ್ರದಲ್ಲಿ ಜಯಿಸಿ, ಮದ್ದಾನೆಯು ಮಹಾಸರೋವರವನ್ನು ಹೊಕ್ಕು ನೈದಿಲೆಯಿಂದ ಕದಡುವಂತೆ, ಸಕಲರಾದ ಸೇನಾಜನರನ್ನು ಕಕ್ಕಸದಿಂದ ಮುಕ್ಕಳಿಸಿ, ಸೊಕ್ಕಿದ ಕಾಡುಹಂದಿಯು ಬೇದಿಗರನ್ನು ಭಯಪಡಿಸಿ ಓಡಿಸುವಂತೆ ಒಂದು ನೊಣವನ್ನೂ ಬಿಡದೆ ಬಡಿವೋಡುವಂತೆಮಾಡಿ, ತೆಕ್ಕೆಗೊಂಡಿದ್ದ ಅಕ್ಕಜದ ಸೊಕ್ಕುಜೋದರನ್ನು ಜವಗೆಡಿಸಿ, ಕೃಷ್ಣಾರ್ಜುನರನ್ನು ಯುದ್ಧರಂಗದಲ್ಲಿ ಹುಡುಕುತ್ತ ಸುರಥನು ಶಂಖನಾದವಂಗೈದನು. ಘೋರರೂಪವಾದ ಸಂಸಾರವನ್ನಾವರಿಸಿರುವ ಮರವೆಯೆಂಬ ಅಜ್ಞಾನವನ್ನು, ಮಹಾಯೋಗಿಯಾದವನು ಜೀವೇಶ್ವರವಿವೇಕದಿಂ ಕಳೆದು, ಆತ್ಮಸತ್ವವನು ವಿಚಾರಿಸುವಂತೆ, ಎಡಬಲದಲ್ಲಿದ್ದು ಕಡುಗೋಪದಿಂದ ಕಾದುತ್ತಿರುವ ತನಿವೀರತನದ ಮೊಂಡಾಟವನ್ನು ಲಕ್ಷಿಸದೆ ಉದಾರವಿಕ್ರಮಯುಕ್ತವಾದ ಪರಿಜ್ಞಾನದಿಂದೆಡಬಲದಲ್ಲಿ ಮನಮಂಪುಗಿಸದೆ ಏಕಾಗ್ರಚಿತ್ತನಾಗಿ ಕೃಷ್ಣಾರ್ಜುನರನ್ನು ಸುರಥನು ಅರಸುತ್ತಿದ್ದನು. ಅದ್ಭುತವಾದ ಶೌರ್ಯದಿಂದ ಅಖಿಲಸೇನೆಯನ್ನು ಸದೆದು, ತನ್ನನ್ನು ಹುಡುಕಿಕೊಂಡು ಬರುತ್ತಿರುವ ವೀರರನ್ನು ಕಂಡು, ಎಲೈ ದೇವದೇವನೇ ! ಈ ವೀರರನ್ನು ಗೆಲ್ಲುವ ವಿಷಯದಲ್ಲಿ ನಿನ್ನ ಅಭಿಮತವೇನು ? ನನ್ನಬಳಿಯಲ್ಲಿ ಆಗ್ನೇಯಾಸ್ತ್ರ ಅಕ್ಷಯತೂಣೀರಗಳಿದ್ದು ಫಲವೇನು ? ಇನ್ನು ನನ್ನ ಸಾಮರ್ಥ್ಯವನ್ನು ನೋಡು ? ಎಂದು ಅರ್ಜುನನು ಬಿಲ್ಲಿರುವಿನಲ್ಲಿ ಹೆದೆಯನ್ನೇರಿಸಿ, ಎಲಾ ! ಅಣ್ಣನಳಿದನೆಂದು ಬಳಲುತ್ತಿರುವ ನಿನ್ನನ್ನು ನೋಯಿಸಬಾರದೆಂದು, ದೂರವಾಗಿದ್ದರೆ ಮೀರಿಬರುವುದು ನ್ಯಾಯವೆ ? ತಲೆ ಬಲಿತಿರುವದೆಂದು ಭಲದಿಂದ ಕಲ್ಲನ್ನು

ಹಾಯಬಹುದೆ ? ರೋಷದಿಂದ ನಿಂತು ಯುದ್ಧಮಾಡಿದರೆ ಗೆಲವಪ್ಪುದೆ ? ಹುಚ್ಚನಾಗಿ ಕೆಡಬೇಡ ಕುದುರೆಯನ್ನೊಪ್ಪಿಸಿ ಧರ್ಮರಾಯನಿಗೆ ಶರಣಾಗತನಾಗಿ ಬಾಳುವುದು ಸುಖವೆಂದು ಹೇಳಿ ಅರ್ಜುನನು ಸುರಥನನ್ನು ಹೊಡೆದನು. ಆಹಾ ! ನಮ್ಮಣ್ಣನಿಗೆ ನೀನು ಸಾಟಿಯೆ ? ಹರಿಹರವಿರಂಚಿಗಳು ಮುಳಿದಿದ್ದರೆ ಅವನು ಅಳಿಯುತ್ತಿದ್ದನೆ ? ಕರುಣಾಮೂರ್ತಿಯಾದ ಈ ಕೃಷ್ಣನು ನಿನ್ನನ್ನು ಉದ್ಧರಿಸಲೆಳಸಿ, ತನ್ನವತಾರಗಳ ಪುಣ್ಯವನ್ನಿತ್ತುದರಿಂದ ತೃಪ್ತನಾಗಿ, ಮುಕ್ತಿಯನ್ನು ಪಡೆದುದನ್ನು ಕಾಣೆಯಾ ? ನಾವೆಂದಿಗೂ ಕುದುರೆಯನ್ನು ಬಿಡಲಾರೆವು, ಕಾದಾಡದೆ ಕಟ್ಟಿದ ಕುದುರೆಯನ್ನು ಬಿಡಲು ನಾವು ಕಾಡುಜನರೆ ? ನಮ್ಮ ಸಾಹಸವನ್ನು ನೋಡೆಂದು ಸುರಥನು ಶಕ್ತಿಯಿಂದೆಳೆದ ಬಾಣವನ್ನು ಸೊಕ್ಕಿನಿಂದೆಸೆದನು ಹಾಗೆ ಹೊಡೆದ ಸುರಥನ ಬಾಣಾಗ್ನಿಯಿಂದ ಕುದಿಯುತ್ತಿರುವ ಅರ್ಜುನನು ಅಗ್ನಿಯಂತಾಗಿ ಅಂಗಾಂಗದಲ್ಲೂ ಉರಿ ಏಳುತ್ತಿರಲು ಕುಪಿತನಾದ ಕುಂತೀಪುತ್ರನು, ಭೂಮಿಯಾಕಾಶಗಳೂ ದೆಸದಿಕ್ಕುಗಳೂ ತಿಳಿಯಬಾರದಂತೆ ಬಲವಾದ ಬಾಣಗಳನ್ನು ಹೊಡೆದು, ಸುರಥನು ವಿರಥನಾಗಿ, ಸಾರಥಿ ಗಜಾಶ್ವರಥಗಳು ಅಳಿಯುವಂತೆ ಮಾಡಿದನು.

ಬಳಿಕಾಸುರಥನು ಹೊಸರಥವನ್ನೇರಿ, ಕವಲಂಬನ್ನು ಹೊಡೆದು ಅರ್ಜುನನ ರಥವನ್ನು ನೂರುಬಾರುದೂರ ಹಿಂದಕ್ಕೋಡಿಸಿ, ಶ್ರೀಕೃಷ್ಣನ ಶರೀರವನ್ನು ಘಾಯಗೊಳಿಸಿ, ಕುದುರೆಗಳ ದೇಹವನ್ನು ಬರಿದಾಗಿಮಾಡಿ, ಅರ್ಜುನನನ್ನು ತಿರಸ್ಕರಿಸಿ, ಬರಿದೆ ಕಾದಿದರೆ ಫಲವೇನು ? ಬಲವುಳ್ಳವನಾದರೆ ಬಂದು ಛಲವನ್ನಾದರೂ ನುಡಿ ಎಂದು ಹೊಡೆದನು. ಎಲೈ ಮರುಳೆ ! ಶಪಥಮೇನುಂಟು ? ಈಬಾಣದಿಂದ ನಾನು ನಿನ್ನನ್ನು ಕೊಲ್ಲದಿದ್ದರೆ ಮಹಾಪಾತಕಂಗಳುಂಟಾಗದಿರುವುವೆ ? ನೋಡೆಂದು ಅರ್ಜುನನು ಬಾಣವನ್ನೆಸೆದನು. ಅದನ್ನು ಅರ್ಧದಾರಿಯಲ್ಲಿಯೇ ಖಂಡಿಸಿ, ಸುರಥನು ನಿನ್ನನ್ನು ನಾನು ಕೊಲ್ಲದಿದ್ದರೆ ಪರಲೋಕದಲ್ಲಿ ನನಗೆ ದುರ್ಗತಿಯಾಗದಿರುವುದೆ ? ಹೇಳು ಎಂದು ಹೊಡೆದು ಬೊಬ್ಬಿರಿದನು. ಆತನ ಬಾಣಹತಿಯಿಂದ ನೊಂದು ಮುಂದುಗಾಣದೆ ಮೈಮರೆದವನಂತೆ, ಮರುಳಾದ ಅರ್ಜುನನ ಪರಿಯನ್ನು ಕಂಡು ಹರಿಯು ಶೀಘ್ರವಾಗಿ ಆತನ ಬಾಹುಗಳನ್ನು ಕತ್ತರಿಸೆಂದು ಹೇಳಿದನು. ಅದಕ್ಕೆ ಮುಂಚೆಯೇ ಅರ್ಜುನನು ಕೂರಂಬುಗಳಿಂದ ಕಟ್ಟಾಳುಗಳ ವೀರನಾದ ಸುರಥನ ತೋಳನ್ನು ಕಡಿದು ಹಾಕಲು, ಆ ಬಾಹುವು ಐದುಹೆಡೆಯ ಸರ್ಪದಂತೆ ಸೇನೆಯನ್ನು ಹೊಡೆದು, ಹೊಯ್ದು, ಅಪ್ಪಳಿಸಿ, ಕಡಿದು, ಕಂಗೆಡಿಸಿತು. ಬಳಿಕ ಒಂದು ತೋಳುಳಿದಿರಲು, ಆದರಿಂದಲೆ ಕಾದುತ್ತಿರುವ ವೀರನನ್ನು ಕಂಡು ಮೊದಲಿಗಿಂತಲೂ ಅಧಿಕವಾದ ರೋಷದಿಂದರ್ಜುನನು ಮತ್ತೊಂದು ಬಾಣವನ್ನು ಸೆಳೆದು, ಆ ಒಂದು ತೋ

ಳನ್ನೂ ಒಬ್ಬುಳಿಯ ಸಾಹಸದಿಂದ ಕಡಿದುಹಾಕಿದನು. ಹೀಗೆರಡು ತೋಳುಗಳೂ ಹೋದಬಳಿಕ ವೀರಾಗ್ರಗಣ್ಯನಾದ ಸುರಥನು ಅರ್ಜುನನನ್ನು ಕಾಲುಗಳಿಂದೊದೆದು ಕೊಲ್ಲುವೆನೆಂದು ಕೆರಳಿ ಮುಂದೈತರುತ್ತಿರಲು ಕೋಲುಗಳಿಂದ ತೊಡೆಗಳನ್ನು ಕತ್ತರಿಸಲು, ಸೋರುವ ರಕ್ತಧಾರೆಯಿಂದ ನೆಲವು ಕೆಸರಾಯಿತು, ಕಾಲುತೋಳುಗಳೆರಡೂ ಕಡಿದುಹೋದಬಳಿಕ ಎದೆಯಿಂದ ತೆವಳಿಕೊಂಡೈದುವ ಹಾವಿನಂತೆ ಅರ್ಜುನನನ್ನು ಕೊಲ್ಲುವೆನೆಂದು ಆತನ ಹತ್ತಿರಕ್ಕೆ ಮುಂಡವು ಬರುತ್ತಿರುವುದನ್ನು ಕಂಡು, ಬೀಭತ್ಸುವು ಭಕ್ತವತ್ಸಲನಾದ ಶ್ರೀಹರಿಯ ಆಜ್ಞೆಯಿಂದವನ ತಲೆಯನ್ನು ಕಡಿದುಹಾಕಿದನು. ಕೂಡಲೆ ಆ ತಲೆಯು ರಭಸದಿಂದೈತಂದು ಅರ್ಜುನನೆದೆಯನ್ನಪ್ಪಳಿಸಿ ರಥದಿಂದ ಕೆಳಕ್ಕೆ ಕೆಡವಿತು. ಪಾರ್ಥನು ನೈಮರೆದು ಭೂಮಿಗುರುಳಿದನು, ಬಳಿಕ ಮೇಲಕ್ಕೆಹಾರಿ ಮುಕುಂದ, ಮುರಮರ್ದನ, ರಮಾರಮಣ, ಮದನಪಿತ, ಮಹಾಮಹಿಮಾ, ರಾಘವಾ ಎಂದು ಹರಿಧ್ಯಾನವಂ ಮಾಡುತ್ತ ಆ ತಲೆಯು ಶ್ರೀಕೃಷ್ಣನಬಳಿಗೈತಂದಿತು.

ಬಳಿಕ ಭಕ್ತಿಯಿಂದದನ್ನೆತ್ತಿಕೊಂಡು ಶ್ರೀಕೃಷ್ಣನು ಆಕಾಶದೆಡೆಯಲ್ಲಿರುವ ಗರುಡನನ್ನು ಕರೆದು ಈ ತಲೆಯನ್ನು ತೆಗೆದುಕೊಂಡುಹೋಗಿ ಪ್ರಯಾಗದಲ್ಲಿ ಹಾಕಿಬಾರೆಂದು ಆಜ್ಞೆಮಾಡಲು ಆ ಗರುಡನದನ್ನು ಕೊಂಡುಹೋಗುತ್ತಿರುವುದನ್ನು ಕಂಡು ಪರಶಿವನು ತನ್ನ ಭಕ್ತನಾದ ಭೃಂಗೀಶನನ್ನು ಕರೆದು ಆ ತಲೆಯನ್ನು ಕೊಂಡುಬರುವಂತೆ ಕಳುಹಿಸಿದನು. ಆತನು ಗರುಡನೊಡನೆ ಹೊಡೆದಾಡಿ ತಲೆಯಂ ತರಲಾರದೆ ಸೋತು ಹಿಂದಕ್ಕೆಬಂದು ಈಶ್ವರನಿಗದಂಬಿನ್ನೈಸಲು ಪುರಹರನು ಹರುಷದಿಂದವನಂ ಮನ್ನಿಸಿ ನಂದೀಶನನ್ನು ಕರೆದು ಸುರಥನ ಶಿರವನ್ನು ತರಹೇಳಿ ಕಳುಹಿಸಿದನು. ಆತನು ಬಹಳವಾಗಿ ಹೊಡೆದಾಡಿದರೂ ಗರುಡನು ತನ್ನೊಡೆಯನಾಜ್ಞೆಯನ್ನು ಮೀರದಂತೆ ಪ್ರಯಾಗದಲ್ಲಿದನ್ನು ಬಿಸುಟನು. ಬಳಿಕಾಮಸ್ತಕವನ್ನೆತ್ತಿಕೊಂಡು ಬಂದು ನಂದೀಶನು ಕಂದುಗೊರಲನಿಗೆ ಕೊಡಲು, ಆತನು ಅತ್ಯುತ್ಸಾಹದಿಂದದನ್ನು ತನ್ನ ರುಂಡಮಾಲೆಯಲ್ಲಿ ಧರಿಸಿದನು. ಕೃಷ್ಣಾರ್ಜುನರಿಂದ ಮಗನು ಮಡಿದನೆಂಬ ವಾರ್ತೆಯನ್ನು ಕೇಳಿ ಹಂಸಧ್ವಜನು ಸಮರಕುದ್ಯುಕ್ತನಾಗಿ, ತನ್ನ ಮರಣವನ್ನು ನಿಶ್ಚಯಿಸಿ ಕಾದಲನುಕೂಲವಾದ ಕೂರಂಬುಗಳ ಬತ್ತಳಿಕೆಯನ್ನೂ, ವೀರನಾದ ಸಾರಥಿಯನ್ನೂ, ತೋರವಾದ ಬಿಲ್ಲನ್ನೂ, ಬಾರಿಯ ವಜ್ರಕವಚ ಕಿರೀಟಗಳನ್ನೂ ಧರಿಸಿ, ತೇರೈಸಿಬರುವ ತೇಜಗಳನ್ನು ಕಟ್ಟಿದ ರಥವನ್ನೇರಿ ಮಾರವೈರಿಯ ಮಹಾರೋಷದ ಮೂಲದೊಬ್ಬುಳಿಯಂತೆ ಬರುತ್ತಿದ್ದನು. ಶ್ರೀಕೃಷ್ಣಾರ್ಜುನರು ಹೆದರಿದರು, ಭೂಮಿಯು ನಡುಗಿತು, ಉಭಯಸೇನೆಗಳೂ ಕಳಕಳಿಸಿದವು, ತಾರೆಗಳುರುಳಿದವು, ಮರಳಿ ಸೃಷ್ಟಿಮಾಡುವ ಸಂಕಟವುಂಟಾಯಿತೆಂದು ಮರಾಳವಾಹನನು ಮರು

ಗುತ್ತಿದ್ದನು. ಬಳಿಕ ಶ್ರೀಕೃಷ್ಣನು ಈಗ ಬರುವ ಹಂಸಧ್ವಜನೊಡನೆ ಯುದ್ಧ ಮಾಡಿದರೆ ಜಯವುಂಟಾಗದೆಂದು ಅರ್ಜುನನನ್ನು ಎಚ್ಚರಿಸಿ ಸುಮ್ಮನಿರುವಂತೆ ಹೇಳಿ, ರಥದಿಂದಿಳಿದು, ಪೀತಾಂಬರವನ್ನು ಹೊದೆದು, ಸೌಮ್ಯಾಕಾರನಾಗಿ ಸರ್ವಾಭರಣರಂಜಿತ ಕಾಂತಿಪುಂಜನಾಗಿ, ಮಂಜರಿಯಮೊನೆಯಲ್ಲಿ ಮಕರಂದ ಭರಿತನಾಗಿ ಮನೋಹರವಾದ ರೂಪದಿಂದ ಕಂಗೊಳಿಸುವ ಮಲ್ಲಿಕಾ ಕುಸುಮ ದಂತೆ, ಹುಸಿನಗೆಯನ್ನು ಬೀರುತ್ತ ಹಂಸಧ್ವಜನ ರಥದಬಳಿಗೈದುತ್ತಿರಲು, ಆತನು ಪರಿಕಿಸಿ, ಹರುಷವಿಮ್ಮಡಿಯಾಗಿ ರಥದಲ್ಲಿ ಬಿಲ್ಲುಬಾಣಗಳನ್ನಿಟ್ಟು, ವೀರ ಬಂಧವನ್ನುಗಿದು, ಸಕಲ ದುಃಖಗಳನ್ನೂ ಮರೆದು, ಲೋಕಪಾಲನಾದ ಶ್ರೀಹ ರಿಯು ತನ್ನಬಳಿಗೆ ಬರುತ್ತಿರುವನೆಂಬ ಆನಂದವನ್ನಾಂತು, ರಥದಿಂದ ದುಮುಕಿ, ಮಧ್ಯದಾರಿಗೆ ಬಂದು, ಮಧುಸೂದನನಿಗೆ ಅಡ್ಡಬಿದ್ದು, ಮಹಾಮಹಿಮರಾದ ತಾವು ಬಿಜಯಮಾಡಿದ ಕಾರ್ಯವೇನೆಂದು ಬೆಸಗೊಂಡನು. ಬಳಿಕಾತನ ಮಾತು ಗಳನ್ನು ಲಾಲಿಸಿ ಶ್ರೀಕೃಷ್ಣನು ನಸುನಗುತ್ತ ಅಯ್ಯಾ ! ಅರ್ಜುನನಿಗೆ ನಾವು ಮಾಡುತ್ತಿರುವ ಸಹಾಯವನ್ನು ಕಂಡೂ, ಕಾದಾಡಿ ಜಯಿಸುವೆನೆಂಬ ಕೋಟಲೆ ಯಿಂದ ಮಕ್ಕಳನ್ನು ಮಾರಿಗೊಪ್ಪಿಸಿದೆ. ಇನ್ನು ಹೀಗೆ ಮಾಡುವುದು ಸರಿಯಲ್ಲ ಬಾ ! ನಮಗನುಕೂಲನಾಗಿ ಸ್ನೇಹದಿಂದಿರು, ಆಲಿಂಗನಸುಖವನ್ನು ಹೊಂದು, ನಿನ್ನ ಸಂಬಂಧವಾದ ಸಕಲ ದುಃಖಗಳೂ ನಾಶವಾಗಿ, ಪುತ್ರಶೋಕದ ಕಾರ ಣವು ಕಾಡುಪಾಲಾಗುವುದು. ಆಹಾ ! ಗಂಗಾಜಲದಲ್ಲಿ ಮಿಂದವನಿಗೆ ಬಾಯಾ ರಿಕೆಯು ಹಂಗುಂಟೆ ? ನಿನ್ನ ಮನಕ್ಕೆ ಹಿತವಾದರೆ ನನ್ನೊಡನೆಯೂ ಅರ್ಜುನನ ಕೂಡೆಯೂ ಸ್ನೇಹವನ್ನು ಬೆಳಸಿ, ಆಲಿಂಗನಸುಖವಂ ಕೊಟ್ಟು, ಆನಂದದಾಯ ಕವಾದ ನಮ್ಮಾಲಿಂಗನಂಗಳನ್ನು ಅಕ್ಕರೆಯಿಂ ಕೈಕೊಂಡು, ಧರ್ಮರಾಯನಿಗೆ ಸಹಾಯಕನಾಗಿರು ಎಂದು ಹೇಳಲು, ಶ್ರೀಹರಿಯ ಆಜ್ಞಾನುಸಾರವಾಗಿ ಹಂಸ ಧ್ವಜನು ಸಮ್ಮತಿಪಟ್ಟನು ಶ್ರೀಕೃಷ್ಣನು ತಾನು ಮೊದಲು ಅವನೊಡನೆ ಸ್ನೇಹವಂ ಕೈಕೊಂಡು, ಬಳಿಕ ಅರ್ಜುನನನ್ನು ಬರಮಾಡಿ ಮೈತ್ರಿಯಂ ಬೆಳೆಯಿಸಿದನು.

ಇಂತು ಬಗೆದವರ ಬಲ್ಗೈಯ ಭಂಟನೆಂಬ ಬಿರುದನ್ನು ವಹಿಸಿದ ಭಗವಂ ತನು, ಸ್ನೇಹವನ್ನುಂಟುಮಾಡಿದಬಳಿಕ ಹಂಸಧ್ವಜನು, ಮಕ್ಕಳು, ಸಹೋದ ರರು, ಬಂಧುಗಳು, ಮಂತ್ರಿಗಳು, ಸಾಮಂತರು, ಸೇನಾಜನರು, ಗುರುಗಳು, ಪುರೋಹಿತರು, ಚತುರಂಗಸೇನೆಯ ಪಟುಭಟರು ಮೊದಲಾದವರಿಗೆಲ್ಲ ಕೃಷ್ಣಾ ರ್ಜುನರ ಸ್ನೇಹಮಾಡಿಸಿ, ತನ್ನೊಳಿಗೆದ ಭಟರಿಂದ ಮೇಲುವಸ್ತುಗಳನ್ನು ತರಿಸಿ, ಭಂಡಾರದ ಭಾಗ್ಯದೇವತೆಯನ್ನು ಭಕ್ತಿಯಿಂದ ಸಮರ್ಪಿಸಿ, ಸಂತೋಷದಿಂದ ತನ್ನ ಸಪ್ತಪ್ರಕೃತಿಗಳೊಡನೆ ಗೋಪಿಸಿಹಿಸಿ, ರಥಪದಾತಿ, ಗಜತುರಗ, ವರವರ್ಣಿ ನಿಯರಂ ಕೊಟ್ಟು, ಐದುದಿನಗಳವರಿಗೆಲ್ಲರನ್ನೂ ತನ್ನ ರಾಜಧಾನಿಯಾದ ಚಂಪ

ಕಾಸಗೆರದಲ್ಲಿ ಸುಖದಿಂದ ಸಂತೈಸಿದನು. ಬಳಿಕ ಅಲ್ಲಿನ ವಸ್ತುಗಳನ್ನು ಸಂಗ್ರಹಿಸಿ, ತನ್ನೊಡನೆ ಹಸ್ತಿನಾವತಿಗೆ ತರುವಂತೆ ಹೇಳಿ, ಹಂಸಧ್ವಜನನ್ನು ಜೊತೆ ಮಾಡಿ, ಕುದುರೆಯನ್ನು ಸಕಲ ಸೇನೆಸಹಿತ ಮುಂದಕ್ಕೆಬಿಟ್ಟು ದೇವಪುರ ನಿಲಯನಾದ ಲಕ್ಷ್ಮೀರಮಣನು ಗಜನಗರಿಗೈತಂದನೆಂಬಲ್ಲಿಗೆ-ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣ ಪುರೀನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಹದಿನಾಲ್ಕನೆಯಸಂಧಿ ಸಂಪೂರ್ಣಂ. ಶ್ರೀ. ಶ್ರೀ. ಶ್ರೀ.

# ಹದಿನೈದನೆಯ ಸಂಧಿ.

## ಯಜ್ಞಾಶ್ವವು ಪೆಣ್ಗುದುರೆಯಾಗಿ ಹುಲಿಯಾದ ಕಥೆ.

ಚಂದ್ರವಂಶ ಶಿಖಾಮಣಿಯಾದ ಎಲೈ ಜನಮೇಜಯರಾಯನೇ ! ಇನ್ನು ಮುಂದಿನ ಕಥೆಯನ್ನು ವಿಸ್ತರಿಸುವೆನು ಕೇಳು. ಬಳಿಕ ಹಂಸಧ್ವಜನ ಪಟ್ಟಣದಿಂದ ಹೊರಟ ಕುದುರೆಯು ಚತುರಂಗ ಬಲದೊಡನೆ ನಡೆದು ಬಡಗಣ ದಿಕ್ಕಿನಲ್ಲಿ ಸಂಚರಿಸುತ್ತ, ಕೆರೆತೊರೆಗಳು ಬತ್ತಿ ಬಾಯಾರಿದ, ಪಥಿಕರು ನೀರುನೆಳಲುಗಳನ್ನು ಅರಸುತ್ತಿರುವ ಉರಿಬೇಸಗೆಯ ಕಾಲದಲ್ಲಿ ಪಾರಿಪ್ಲವದ ಪುಣ್ಯಭೂಮಿಗಾಗಿ ನಡೆತಂದಿತು. ಬಳಿಕ ಆ ಪುಣ್ಯಭೂಮಿಯನ್ನು ಹೊಕ್ಕ ಕುದುರೆಯು ಹೆಣ್ಣಾಗಿ ಹುಲಿಯಂತೆ ಭಯಂಕರವಾದ ಆಕಾರವನ್ನು ಹೊಂದಿ ಅನಂತರದಲ್ಲಿ ಶ್ರೀಹರಿಯ ಕೃಪೆಯಿಂದ ಅಮಲಾಶ್ವವಾಗಿ ನಡೆಗೊಂಡಿತು. ಇಂತೆಂದು ನುಡಿದ ಜೈಮಿನಿಮುನೀಶ್ವರನನ್ನು ಕುರಿತು ಸಂಶಯಾಪನ್ನಚಿತ್ತನಾದ ಜನಮೇಜಯನು ಎಲೈ ಪುರಾಣಪುರುಷನಾದ ಮೌನಿಯೇ ! ಯಜ್ಞಾಶ್ವವು ಹೆಣ್ಣುಕುದುರೆಯಾಗಿ ಹುಲಿಯಾಗಿ, ಕಡೆಗೆ ಮೊದಲಿನಂತೆ ಸದಮಲತುರಂಗವಾದುದಕ್ಕೆ ಕಾರಣವೇನು ಹೇಳು ? ಎಂದು ಬೆಸಗೊಂಡನು. ಎಲೈ ಜನಮೇಜಯರಾಯನೇ ! ಹಾಗಾದರೆ ಹೇಳುವೆನು ಕೇಳು. ಪೂರ್ವದಲ್ಲಿ ಪರ್ವತರಾಜನ ಪುತ್ರಿಯಾದ ಗಿರಿಜೆಯು, ಈಶ್ವರನನ್ನು ಕುರಿತು ತಪಸ್ಸುಮಾಡಬೇಕೆಂದು ಪುಣ್ಯಾರಣ್ಯವನ್ನು ಹುಡುಕುತ್ತಬಂದು, ರತ್ನಖಚಿತವಾದ ಪಾವಟಿಗೆಗಳಿಂದಲೂ ಹಾಸುಗಳ ಬಳಗದಿಂದಲೂ, ಕಮಲನಾಳಗಳನ್ನು ಮೆಲ್ಲುತ್ತಿರುವ ಚಕ್ರವಾಕಗಳ ಗುಂಪಿನಿಂದಲೂ, ನಕ್ರಗಳಿಂದಲೂ ಕೂಡಿ, ದಿಕ್ಕುದಿಕ್ಕಿಗೂ ಪರಿಮಳದ ತನಿರಸವನ್ನು ಬೀರುವ ಸೊಂಪಿನಿಂದ ಕೂಡಿದ ತಣ್ಣಸದ ತಿಳಿನೀರಿನಿಂದ ತುಂಬಿ, ಹಗಲಿರುಳು

ಗಳಲ್ಲಿಯೂ, ಮುಕುಳಿತವಾಗದೆ ಅರಳಿರುವ ಕಮಲಪುಷ್ಪಗಳಿಂದಲೂ, ನಿರ್ವ ಕ್ರಿಗಳ ಸಂಗದಿಂದಿದ್ದು ಚಾರ್ವಂಭೋಜಾತಂಗಳ ರಸವನ್ನು ಸೇವಿಸುತ್ತಿರುವ ಭೃಂಗಾವಳಿಗಳಿಂದಲೂ, ಮನೋಹರವಾಗಿ ಮೂರು ಲೋಕಗಳಿಗೂ ಮೋಹ ದಾಯಕವಾದ ಒಂದಾನೊಂದು ಸರೋವರವನ್ನು ಕಂಡಳು. ಬಳಿಕ ಪರಮ ಪಾವನವಾದ ಆ ಸರೋವರದ ತೀರದಲ್ಲಿ ಆಶ್ರಮವಂಗೈದು ಗಿರಿಜೆಯು ಹರುಷ ದಿಂದ ತಪಸ್ಸುಮಾಡಿ ಪರಶಿವನನ್ನು ಮೆಚ್ಚಿಸಲು, ನಿನ್ನ ತಪೋನಿಯಮಕ್ಕೆ ವಿಘ್ನವುಂಟಾಗದೆ ಇರಲಿ ಎಂದು ಈಶ್ವರನು ವರವನ್ನು ಕೊಟ್ಟನು.

ಹೀಗೆ ವರವನ್ನು ಪಡೆದನಂತರ ಗೌರಿಯು ಉಲ್ಲಾಸಯುಕ್ತಳಾಗಿ, ಪರ ಮಯೋಗಿಣಿಯಂತೆ ಈಶ್ವರನ ಅರ್ಧಾಂಗದಲ್ಲಿ ಸೇರಿರುವ ಸುಖವನ್ನು ಮರೆತು, ಅನುದಿನವೂ ತಿಳಿಗೊಳದಲ್ಲಿ ಮಿಂದು, ಜಪತಪಸಮಾಧಿನಿಷ್ಠಳಾಗಿ ಅಂತರಾತ್ಮ ನಾದ ಪರಶಿವನನ್ನು ಅತಿಶಯವಾದ ಆದರದಿಂದ ಭಜಿಸುತ್ತಿದ್ದಳು. ಇಂತು ಅಸದಳವಾದ ತಪೋಮಹಿಮೆಯಿಂದ ಆ ವನಪ್ರಾಂತದಲ್ಲಿ ಬಿರುಗಾಳಿ ಬೀಸದೆ ಬಿಸಿಲು ಭೂಮಿಯನ್ನು ಕಾಸದೆ, ಅರಣ್ಯವನ್ನು ದಾವಾಗ್ನಿಯು ನೋಯಿಸದೆ, ಪ್ರಚಂಡವಾದ ಗುಡುಗುಮಿಂಚುಗಳಿಂದ ಜಡಿಮಳೆಯು ಸೂಸದೆ, ಗಿಡಮರ ಬಳ್ಳಿಗಳಲ್ಲಿ ಬಿಟ್ಟಿರುವ ಹೂ ಹೀಚು ಕಾಯಿಹಣ್ಣುಗಳ ಸೊಂಪು ಅಳಿಯದೆ ಸಮಸ್ತ ಋತುಗಳಲ್ಲಿಯೂ ಸಮಾನವಾಗಿರುವ ವೈಭವದಿಂದ ಆ ತಪೋವನವು ಕಂಗೊಳಿಸುತ್ತಿದ್ದಿತು. ಅಲ್ಲದೆ ಆ ಸ್ಥಲದಲ್ಲಿ ಮಳೆಗಾಲದಲ್ಲಿ ಮಯೂರಗಳು ನರ್ತಿಸುವುವು, ಮಾಗಿಯಲ್ಲಿ ಕೋಗಿಲೆಗಳು ಧ್ವನಿಗೈವುವು, ಬೇಸಗೆಯಲ್ಲಿಯೂ ಚಿಗುರಿದೆಳೆಹುಲ್ಲುಗಳು ಮೃಗಗಳಿಗೆ ದೊರೆವುವು, ಚಕ್ರವಾಕಗಳು ಹಗಲಿನಲ್ಲಿ ಯೂ ಅಗಲದಿರುವುವು, ಗೂಗೆಗಳು ಗಗನಮಣಿಯ ದರ್ಶನವನ್ನು ತೊರೆಯುವು, ತುಂಬಿಗಳು ಸಂಪಗೆಯ ಸವಿಯನ್ನುಂಡು ಸುಖಿಸುವುವು, ಚಂದ್ರೋದಯದಲ್ಲಿ ಕಮಲವೂ, ಸೂರ್ಯೋದಯದಲ್ಲಿ ನೈದಿಲೆಯೂ ಅರಳಿ ಕಂಗೊಳಿಸುವುವು, ಆನೆ ಗಳ ಮರಿಗಳು ಹೆಣ್ಣುಸಿಂಹಗಳ ಮೊಲೆಯನುಣ್ಣುವುವು, ಹುಲ್ಲೆಗಳು ಹುಲಿ ಯೊಡನೆ ಸರಸವಾಡುವುವು, ಹಾವು ಮುಂಗಸಿಗಳೊಂದಾಗಿ ಆಡುವುವು. ಇಲಿ ಗಳು ಬೆಕ್ಕಿನಮೇಲೆ ಬಿದ್ದು ಚೆಲ್ಲಾಟವಾಡುವುವು, ನರಿಗಳು ತಂದ ಆಹಾರ ವನ್ನು ಮೊಲಗಳು ಭಕ್ಷಿಸುತ್ತಿರುವುವು, ಹದ್ದು ಕಾಗೆಗಳು ಒಂದೇಗೂಡಿನಲ್ಲಿ ವಾಸಮಾಡುವುವು, ಬಹಳವಾಗಿ ಹೇಳಿ ಫಲವೇನು ? ಆ ಗಿರಿಜೆಯ ತಪೋಬಲ ದಿಂದ ಸಮಸ್ತವಾದ ಚರಾಚರವಸ್ತುಗಳೂ ಜಾತಿವೈರವನ್ನು ಬಿಟ್ಟು ಐಕಮತ್ಯ ದಿಂದ ವಾಸಮಾಡುತ್ತಿದ್ದುವು. ಇಂತಪ್ಪ ಪುಣ್ಯಾರಣ್ಯದಲ್ಲಿ ಅಷ್ಟಯೋಗಿಣಿ ಯರೂ, ಅರವತ್ತುನಾಲ್ಕು ವಿದ್ಯೆಗಳೂ, ಸಪ್ತಮಾತೃಕೆಯರೂ ಜಗತ್ಖ್ಯಾತ ವಾದ ನದಿಗಳೂ, ದಿವಾರಾತ್ರಿಗಳೂ, ತಿಥಿತಾರಕಾದಿ ಅಪ್ಸರೋವಿಸರಗಳೂ,

ಆವಾಸಿಸುತ್ತಿರುವಂತೆ ತಂತಮ್ಮ ಅಭಿಮಾನದೇವತೆಗಳನ್ನು ಆದಿಶಕ್ತಿರೂಪೆಯಾದ ಜಗನ್ಮಾತೆಯಾದ ಗಿರಿಜೆಯು ಊಳಿಗಕ್ಕಿತ್ತು ತಾವೂ ಸಂತುಷ್ಟಿಯಿಂದ ಅಲ್ಲೆ ನೆಲೆಗೊಂಡಿರುವುವು.

ಇಂತಪ್ಪ ಮಹಾವನದಲ್ಲಿ ಆಶ್ರಮವಂಗೈದು, ಅತ್ಯಾದರದಿಂದ ಅನುದಿನವೂ ತಪ್ಪದೆ ಅನಾದಿಯಾಗಿ, ನಿರ್ಮಲತರಸ್ವರೂಪನೆನಿಸಿ, ಗಜಾಸುರಧ್ವಂಸಿ ಎಂಬ ಬಿರುದನ್ನು ಪಡೆದು, ಕಾಲಕಾಲನಾಗಿ ಚಂದ್ರಮೌಳಿಯೂ, ಭಕ್ತರಿಗೆ ಭಕ್ತನೂ ತೇಜೋರಾಶಿಯೂ, ಕೃತ್ತಿವಾಸನೂ, ದಿಕ್ಪಾಲಕರೊಡೆಯನೂ, ನಾಗಭೂಷಣನೂ, ಧನದಸಖನೂ, ಸುಜನರಕ್ಷಾಪರನೂ, ದೇವದೇವನೂ ಆದ ಪರಶಿವನನ್ನು ಹೃದಯಾಂತರಾಳದಲ್ಲಿ ಭಾವಿಸುತ್ತ, ಅಗರುಚಂದನ, ಧೂಪ, ದೀಪ, ಗುಗ್ಗುಳ ಬಗೆಬಗೆಯ ಹೂವು, ನಾನಾವಿಧವಾದ ದೀಪಗಳು, ಪಂಚಾರತಿ, ಕರ್ಪೂರನೀರಾಜನ ಮೊದಲಾದ ಬಹುವಿಧವಾದ ಉಪಚಾರಂಗಳಿಂದ ಕೂಡಿ ಫಲಪಾಯಸಾನ್ನಾದಿ ನೈವೇದ್ಯಗಳು ತಾಂಬೂಲ ಮೊದಲಾದ ಪರಿಕರಗಳ ಸೊಗಸಿನಿಂದ ವಿವಿಧೋಪಚಾರಂಗಳಂ ಸಮರ್ಪಿಸಿ, ಮೋಕ್ಷದಾಯಕಿಯಾಗಿ, ಸರ್ವಮಂತ್ರಗಳಿಗೂ ಮೂಲದೇವತೆಯಾಗಿ, ಮಾಯಾರೂಪದಿಂದ ಸಾಕ್ಷಾಜ್ಜಗನ್ಮಾತೆಯಾಗಿ, ಶಕ್ತಿರೂಪಳಾದ ಪಾರ್ವತಿಗೆ ಈವಿಧವಾದ ತಪೋನಿಯಮವೇಕೆಂದು ಬ್ರಹ್ಮಾದಿಗಳು ಕೊಂಡಾಡುತ್ತಿದ್ದರೂ ಬಿಡದೆ, ಗಿರಿಜೆಯು ಪರಮಭಕ್ತಿಯಿಂದ ಈಶ್ವರನನ್ನು ಪೂಜಿಸುತ್ತಿದ್ದಳು.

ಹೀಗಿರುತ್ತಿರಲು ಒಬ್ಬಾನೊಬ್ಬ ರಾಕ್ಷಸನು ಅರಣ್ಯದಲ್ಲಿ ತೊಳಲುತ್ತ ಆ ಪಾರಿಪ್ಲವದ ಭೂಮಿಗೈತಂದು ಸರ್ವಾಂಗಳೆಯನ್ನು ಕಂಡು, ಜಗನ್ಮಾತೆಯ ದರ್ಶನದಿಂದ ಸಂತುಷ್ಟನಾದರೂ ನಮಸ್ಕರಿಸಿ ಬೇಡಿಕೊಳ್ಳದೆ ಕಾಮಬಾಣಪೀಡಿತಾಂತರಂಗನಾಗಿ, ನೊಂದು ಬೆಂಡಾಗಿ, ಕಾತರದಿಂದ ಕಾಮಿಸಿ, ಗಿರಿಜೆಯನ್ನು ಮಾತನಾಡಿಸಿದನು. ಅದಂ ಕಂಡು ಆದಿದೇವನ ರಾಣಿಯು ಅತ್ಯಂತ ಕೋಪದಿಂದ ಮುಳಿದು ಅವನನ್ನು ನೋಡಲು, ಕೂಡಲೆ ಆತನು ಉರಿದು ಬೂದಿಯಾದನು. ಲೋಕಮಾತೆಯಾದ ಕಾತ್ಯಾಯನಿಯ ಕಡುಗೋಪದ ಕಾಹುರಕ್ಕೆ ಸಿಕ್ಕಿ ಬದುಕುವರಾರಾದರೂ ಇರುವರೆ ಕೇಳೈ ಜನಮೇಜಯರಾಯನೇ! ಆಬಳಿಕ ರಕ್ಕಸನು ಮುಕ್ಕುಳಿಸುವ ಮುಳಿಸೆಂಬ ಬೆಂಕಿಯಿಂದುರಿದು ಹೋಗಲು, ಗೌರಿಯು ರೌದ್ರರೂಪವನ್ನು ಪರಿಹರಿಸಿಕೊಂಡು ಇನ್ನುಮುಂದೆ ಈ ವನವನ್ನೈದಿದ ಕಾಮರೂಪಿಗಳಾದ ಪುರುಷಪ್ರಾಣಿಗಳು ಸ್ತ್ರೀತ್ವವನ್ನು ಪಡೆಯಲಿ ಎಂದು ಶಪಿಸಿ, ತನ್ನ ವಾಂಗ್ನಿಯಮವೂ ಎಂದಿಗೂ ಹುಸಿಯಾಗದೆ ನಡೆಯುವಹಾಗೆ ಅದಕ್ಕೆ ಬಲಮಂ ಕೊಟ್ಟು ತನ್ನ ತಪಸ್ಸನ್ನು ಪೂರೈಸಿದಳು. ಆಬಳಿಕ ತನಗೆ ಪ್ರಸನ್ನನಾದ ಶಂಕರನನ್ನು ಮದುವೆಯಾಗಿ ಪರ್ವತದ ಕಂದರದಲ್ಲಿ ವಾಸಿಸುತ್ತಿರುವಳು.

ಅಂದಿನಿಂದಲೂ, ಈಸ್ಥಳಕ್ಕೆ ಬಂದ ಪುರುಷಪ್ರಾಣಿಗಳೆಲ್ಲ ಹೆಣ್ಣಾಗುವುವು. ಆದಕಾರಣ ಅಲೆದಾಡುತ್ತ ಅರಣ್ಯಕ್ಕೆ ಬಂದ ಅರ್ಜುನನ ಕುದುರೆಯು, ಆ ಕೊಳದಲ್ಲಿ ಜಲವನ್ನು ಕುಡಿದಕೂಡಲೆ ಹೆಣ್ಣುಕುದುರೆಯಾಯಿತು. ಅದನ್ನು ಕಂಡು ಸೈನ್ಯದ ಜನರೆಲ್ಲರೂ ಸೈವೆರಗಾಗಿ ಈ ಸಂಗತಿಯನ್ನು ತಮ್ಮೊಡೆಯನಾದ ಅರ್ಜುನನಿಗೆ ತಿಳಿಸಲು, ಆತನು ಪರಮಾಶ್ಚರ್ಯಯುಕ್ತನಾಗಿ ಎಣಿಕೆಗೊಂಡು ಚಿಂತಿಸುತ್ತ ಕೌಸ್ತುಭಮಣಿ ವಿರಾಜಿತ ವಕ್ಷಸ್ಥಲನಾದ ದೇವಶಿಖಾಮಣಿಯನ್ನು ಧ್ಯಾನಿಸುತ್ತಿದ್ದನು.

ಕೃತಯುಗದಲ್ಲಿ ಆದಿಭಾಗದಲ್ಲಿ ಕೃತವ್ರಣಾಖ್ಯನೆಂಬ ಬ್ರಾಹ್ಮಣನೊಬ್ಬನು ಸಕಲ ತೀರ್ಥಗಳಲ್ಲಿಯೂ ಸ್ನಾನಮಂ ಮಾಡಲೆಳಸಿ, ಈ ಸರೋವರಕ್ಕೆ ಬಂದು, ವಾರುಣಮಂತ್ರವನ್ನು ಜಪಿಸುತ್ತ, ನೀರಿಗಿಳಿದು ಸ್ನಾನಮಾಡುತ್ತಿರುವಾಗ, ಒಂದಾನೊಂದು ಮೊಸಳೆಯು ಆತನ ಕಾಲುಗಳನ್ನು ತನ್ನ ಬಲವಾದ ಹಲ್ಲುಗಳ ಪಂಕ್ತಿಯಿಂದ ಬಿಗಿದು ಹಗರಣಗೊಂಡಿತು. ಆಬಳಿಕ ಕೃತವ್ರಣನು ತನ್ನ ಕಾಲನ್ನು ಹಿಡಿದೆಳೆಯುವ ಕ್ರೂರಪ್ರಾಣಿಯು ಯಾವುದೆಂದು ತಿಳಿಯದವನಾಗಿ, ಭಯದಿಂದ ತಡಿಗೆ ಹಾರಿಬಂದು, ಈ ಸರೋವರದ ಜಲವು ನನಗೆ ಭಯಂಕರವಾಗಿ ತೋರಿದುದರಿಂದ ದೇವಯೋಗ್ಯವಲ್ಲ ! ಆದಕಾರಣ ಲೋಕಭಯಂಕರವಾದ ಈ ಸರೋವರದಲ್ಲಿ ನೀರನ್ನು ಕುಡಿದ ಪ್ರಾಣಿಯು ಇನ್ನುಮುಂದೆ ಹುಲಿಯಾಗಿಹೋಗಲಿ ಎಂದು ಶಪಿಸಿದನು. ಆದಕಾರಣದಿಂದ ಆ ಕೃತವ್ರಣನೆಂಬ ಬ್ರಾಹ್ಮಣನು ಶಪಿಸಿದಂದಿನಿಂದಲೂ, ಪುಲಿಯಾಗುವೆನೆಂಬ ಹೆದರಿಕೆಯಿಂದ ಲೋಕದಲ್ಲಿರುವ ಪ್ರಾಣಿಜಾಲಗಳೆಲ್ಲೊಂದು ಆ ಸರಸ್ಸಿನ ನೀರನ್ನು ಕುಡಿಯದೆ ದೂರವಾಗಿದ್ದುವು. ಪಾರಿಪ್ಲವದಲ್ಲಿ ಸಂಚರಿಸಿ ಹೆಣ್ಣಾದ ಅರ್ಜುನನ ಕುದುರೆಯು ಆ ಸರೋವರದಲ್ಲಿ ನೀರನ್ನು ಕುಡಿದು ಹುಲಿಯಾಗಿ ಹೋಯಿತು ಅದನ್ನು ಕಂಡು ಅರ್ಜುನನು ಬಹುಭೀತಿಯಿಂದ ಹೆದರಿದವನಾಗಿ ಶಿವಶಿವಾ ! ಇನ್ನು ಧರ್ಮರಾಯನು ಹೇಗೆ ಅಶ್ವಮೇಧವನ್ನು ಪೂರೈಸುವನು. ಮೂರು ಲೋಕದಲ್ಲಿಯೂ ಅಪಹಾಸಕ್ಕೆಡೆಯಾದ ಕಾರ್ಯವನ್ನು ಮಾಡಿದೆವಲ್ಲಾ ! ಹರಹರಾ ! ಇದು ಯಾವ ಮಹಾತ್ಮನ ಶಾಪವೋ ಕಾಣೆ ! ಎಂದು ಚಿಂತಿಸುತ್ತ ಹಿಂದೆ ಕೌರವಾದಿಗಳಿಂದ ಆ ದುಃಪಹತಿಯನ್ನು ನಿವಾರಣೆಮಾಡಿ, ನಿರಪಾಯದಿಂದ ನಮ್ಮನ್ನು ಸಲಹಿ, ಭಕ್ತವತ್ಸಲನೆಂಬ ಬಿರುದನ್ನುಪಡೆದ ಶ್ರೀಕೃಷ್ಣನೇ ! ಈಗಲೂ ನನ್ನ ಶ್ರಮವನ್ನು ಹೋಗಲಾಡಿಸು, ಹೇ ಭಕ್ತಪರಾಧೀನ ! ಕೃಪೆಮಾಡು ! ಎಂದು ಧ್ಯಾನಿಸುತ್ತಿದ್ದನು. ಆಗ ಶಂಖಚಕ್ರಗದಾಪದ್ಮಂಗಳಿಂದ ಅಲಂಕೃತವಾದ ಕರಚತುಷ್ಟಯನಾಗಿ, ಶ್ರೀವತ್ಸಕೌಸ್ತುಭಮಣಿವಿರಾಜಿತವಕ್ಷನಾಗಿ, ನಿಷ್ಕಳಂಕಚಂದ್ರಮಂಡಲದಂತೆ ಭಾಸಿಸುವ ಮುಖಮಂಡಲನಾಗಿ,

ಪೀತಾಂಬರವನ್ನು ಹೊದೆದು, ಶ್ಯಾಮರೂಪದ ಪುಷ್ಕಲಪ್ರಭೆಯಿಂದೊಪ್ಪುವ
ರಮಣೀಯಕವಾದ ದೇಹದಿಂದೊಡಗೂಡಿ, ಮೆರೆಯುವ ನಿನ್ನಾಕಾರವು ನನ್ನ
ಹೃದಯಕಮಲದೊಳಗಿರುತ್ತಿರಲು, ದುಷ್ಕಂಟಕಂಗಳ ಭೀತಿಯುಂಟೆ ? ಆಹಾ !
ನಿನ್ನ ನಾಮೋಚ್ಚಾರಣೆಯ ಬಲದಿಂದ ಅಜಾಮಿಳನು ಹೇಳಲಾಗದ ತನ್ನ ಪಾಪ
ರಾಶಿಯನ್ನು ನೀಗಿಕೊಂಡು ಪರಿಶುದ್ಧನಾದನು.

ಹೀಗಿರುವಲ್ಲಿ ನೀನೆ ಗತಿಯೆಂದು ನಂಬಿಕೊಂಡಿರುವ ಪಾಂಡುನಂದನರಿಗೆ,
ಅಂಡಲೆವ ಭೀತಿಯು ಆಯಾಸವು ತಲೆದೋರುವುದುಂಟೆ ? ಓ ಮುಕುಂದಾ !
ಇನ್ನು ನನ್ನಲ್ಲಿ ಕರುಣವನ್ನು ತೋರಿಸಿ ಪರಿಹರಿಸಲಸದಳವಾದ ಈ ದುಷ್ಕಂಟಕ
ದೆಸೆಯಿಂದ ನನ್ನನ್ನು ಪಾರುಗಾಣಿಸು, ಪ್ರಸನ್ನನಾಗು, ಅಚ್ಯುತ ! ಆದಿಕೇ
ಶವ ! ಜನಾರ್ದನ ! ಕೃಷ್ಣ ! ಗರುಡವಾಹನ ! ನೃಸಿಂಹ ಎಂದಿತು ಮೊದ
ಲಾಗಿ ಹರಿಯ ದಿವ್ಯನಾಮಂಗಳನ್ನು ಸ್ಮರಿಸಿ ಧ್ಯಾನಿಸುತ್ತಿರಲು, ಭಯಂಕರ
ವಾದ ಘೋರರೂಪವನ್ನು ಹೊಂದಿ ಹುಲಿಯಾಗಿದ್ದ ದಿವ್ಯಾಶ್ವವು ನಿಶ್ಚಲಮ
ನೋಭಾವದಿಂದ ಹರಿಯನ್ನು ಧ್ಯಾನಿಸಿದ ಭಕ್ತಿಭಾವನೆಯ ಮಹಿಮೆಯಿಂದ,
ಮೊದಲಿನಂತೆ ತನ್ನ ಪೂರ್ವರೂಪವನ್ನು ಪಡೆದು, ಪಾಂಡುಪುತ್ರರಿಗೆ ಪರಮಂಡ
ಲದ ಪರಿತಾಪವೆತ್ತಣದು ? ನರಹರಿಯು ತನ್ನ ಭಕ್ತರ ಸಂಕಟಗಳನ್ನು ಸಹಿಸ
ಬಲ್ಲನೆ ? ಎನ್ನುವಂತೆ, ನಾಟಕಜೀವಿಯು ಒಬ್ಬನೇ ರೂಪಾಂತರವನ್ನು ಧರಿಸಿ,
ರಸಭರಿತವಾದ ಚೇಷ್ಟೆಗಳನ್ನು ತೋರಿಸಿದಬಳಿಕ ತನ್ನ ನಿಜರೂಪವನ್ನು ತಾಳಿ
ಹೊಳೆಯುವಂತೆ ಹುಲಿಯು ದಿವ್ಯಾಶ್ವವಾಗಿ ಕಂಗೊಳಿಸುತ್ತಿರಲು, ಸಕಲರೂ
ಆನಂದಭರಿತರಾದರು ದೇವತೆಗಳು ಹೂಮಳೆಯನ್ನು ಕರೆದರು, ಸೇನಾಜನರ
ವಾದ್ಯಘೋಷಗಳೂ ದಿಙ್ಮಂಡಲವನ್ನು ತುಂಬಿದವು, ಸರ್ವರೂ ಸಂತೋಷ
ದಿಂದುಬ್ಬಿ ಶ್ರೀ ಹರಿಯಗುಣಾವಳಿಗಳನ್ನು ಕೊಂಡಾಡಿದರು. ಅನಂತರದಲ್ಲಿ ಆ
ದಿವ್ಯಾಶ್ವವು ವೇಗವಾಗಿ ಸಂಚರಿಸುತ್ತ ನಾನಾದೇಶಗಳನ್ನು ಕಳೆದು ಕಡೆಗೆ
ಅಚ್ಚ ಹೆಂಗಸರಿಂದ ನಿಬಿಡವಾಗಿ, ಸ್ತ್ರೀಪರಿಪಾಲನೆಗೊಳಪಟ್ಟ ಮಲೆಯಾಳ
ದೇಶವನ್ನು ಹೊಕ್ಕು ಸಂಚರಿಸುತ್ತಿದ್ದಿತು.

ಎಲೈ ಜನಮೇಜಯರಾಯನೇ ಲಾಲಿಸು. ಆ ರಾಜ್ಯದಲ್ಲಿ ಗಂಡಸರ
ಹುಟ್ಟೇ ಇಲ್ಲ ಪ್ರಾಯದವರಾಗಿ, ಮಧುಪಾನದಿಂದ ಮದಿಸಿ, ಕಾಮಕೇಳೀಕಲಾ
ಕೋವಿದೆಯರೆನಿಸಿ, ರೂಪಲಾವಣ್ಯ ಲಕ್ಷಣಗಳನ್ನೂ ಸೌಭಾಗ್ಯತೆಯನ್ನು
ಪಡೆದು, ಸಂಗೀತ ನರ್ತನ ವೇಣುವೀಣಾವಿನೋದಗಳನ್ನು ರಮಣೀಯವಾದ
ಭೋಗಭಾಗ್ಯಕ್ಕೆ ನಿಧಿಯಾಗಿ, ತಮ್ಮೆಲ್ಲರಿಗೂ ಅರಸಾದ ಓರ್ವನಾಯಕಿಯಕೈಕೆಳೆ
ಗಿದ್ದು ಬಾಳುವವರಾಗಿ ಸಕಲರೂ ಸ್ತ್ರೀಪ್ರಜೆಗಳೇ ಆಗಿರುವರು. ಆದಕಾರಣವೆ
ಈ ರಾಜ್ಯಕ್ಕೆ ಸ್ತ್ರೀರಾಜ್ಯವೆಂದು ಹೆಸರಾಯಿತು. ಈ ರಾಜ್ಯಕ್ಕೆ ಬಂದ ಪುರು

ಷರು ಬದುಕುವುದೇಇಲ್ಲ ! ಅಲ್ಲಿನ ಸ್ತ್ರೀಯರು ತಮ್ಮ ಶೃಂಗಾರಚೇಷ್ಟೆಗಳನ್ನು ತೋರಿ, ಚೆಲ್ಲೆಗಂಗಳಬಲ್ಲಣ್ಣಿಗೆ ಆ ಪುರುಷನನ್ನು ಸಿಕ್ಕಿಸಿ, ಬಲ್ಮೊಲೆಗಳೊತ್ತಿಗೆಯ ಬಂಧುರತೆಯನ್ನುನೀಡಿ, ಅಧರಪಾನದ ಮಾಧುರ್ಯವನ್ನು ತೋರಿಸಿ ಕೂರುಗುರ ಕೈಗಾಯದ ಕಂಪನ್ನು ಇಂಪುಗೊಳಿಸಿ, ಮೆಲ್ಲಮೆಲ್ಲನಾಡುವ ಲಲ್ಲೆವಾತುಗಳ ಸವಿಯನ್ನು ಸವಿಸಿ, ವಿವಿಧ ಕುಸುಮ ಸುಗಂಧಾನುಲೇಪನ ಮಧುಚಷಕ ಮತ್ತಾಲಿಂಗನ ಮೋಹನಸುಖಂಗಳನ್ನು ಕೈಮಿಾರುವಂತೆ ತೋರಿಸುತ್ತ ಸಮರತಿಯಲ್ಲಿ ಬಹು ವಿನೋದದಿಂದ ರಮಿಸಿ, ಸೋತುಹೋದ ಗಂಡಸನ್ನು ಸರ್ವೋಪಚಾರಂಗಳಿಂದಲೂ ಮನ್ನಿಸಿ, ಮಿಥ್ಯಾಮೋಹದ ಬೆಡಗಿನಿಂದ ಆಸೆಯನ್ನು ತೋರಿಸಿ, ಬಹುಪ್ರಕಾರದಿಂದ ಅವನನ್ನು ಎಡೆಬಿಡದೆ ಕೂಡಿಕೊಂಡು ರಮಿಸುವರು. ಒಂದುವೇಳೆ ಸೋತುಹೋದ ಶೂರನು ಸಾಯುವೆನೆಂಬ ಹೆದರಿಕೆಯಿಂದ ಬೇಡವೆಂದು ಬೆಂಗೊಟ್ಟರೆ ರೋಷದಿಂದ ಚೀರಿ, ಮಿಾರಿದ ಕೋಟಲೆಗಳನ್ನು ತೋರಿಸಿ ಹೆದರಿಸಿ ರಮಿಸುತ್ತ ಕಡೆಗೆ ಆತನಿಗೆ ತಾವೇ ಸರ್ವಸುಖವನ್ನು ಕೊಡುವವರಂತೆ ಕಲಾವಿದೆಯರಾಗಿ ಕ್ರೀಡಿಸಿ ಭೋಗಪಡುವರು.

ಹೀಗೆ ಒಂದು ತಿಂಗಳು ಕಳೆದಬಳಿಕ ಆ ಪುರುಷನು ವಿಷಕನ್ಯೆಯರ ಸಂಪರ್ಕದೋಷದಿಂದ ಸತ್ತುಹೋಗಲು ತಾವು ಪತಿವ್ರತೆಯರಾಗಿ ಆತನೊಡನೆ ಚಿತೆಯಲ್ಲಿ ದೇಹವನ್ನು ಬಿಡುವರು. ಇಲ್ಲದಿದ್ದರೆ ಬಸುರಾಗಿ ಹೆಣ್ಣುಮಗುವನು ಹೆರುವರು ಆದಕಾರಣ ಈ ರಾಜ್ಯದಲ್ಲಿ ಸ್ತ್ರೀಯರು ಬಹಳವಾಗಿ ಹೆಚ್ಚಿರುವರು. ಇಲ್ಲಿಗೈದಿದ ಪುರುಷರು ಸಂಪಗೆಯಬಂಡಿಗೆರಗಿದ ಮರಿದುಂಬಿಗಳಂತೆ ಮರಣವನ್ನು ಹೊಂದುವರು. ಇಂತೆಂಬ ವಾರ್ತೆಯನ್ನು ಅರ್ಜುನನು ತನ್ನ ಮಂತ್ರಬಲದಿಂದರಿತವನಾಗಿ, ಪಾಳಯದ ಪ್ರಮುಖರಾದ ವೀರರನ್ನು ಕರೆಸಿ, ಎಲೈ ಶೂರಾಗ್ರಣಿಗಳಿರಾ ! ಈ ದೇಶದ ಹೆಂಗಸರು ವಿಷಕನ್ನೆಯರು ಪುರುಷರನ್ನು ನೋಡಿದಕೂಡಲೆ ಆಕರ್ಷಣವನ್ನುಮಾಡುವರು ಇವರೊಡನೆ ರಮಿಸಿದುದೇ ಆದರೆ ಎಂಥ ಪುರುಷನಿಗಾದರೂ ಆಯುಸ್ಸು ಅಳಿಯದಿರದು. ಆದಕಾರಣ ನೀವು ಈ ರಾಜ್ಯದಲ್ಲಿ ಮುಟಿತಾದರೂ ವಿಷಯಸುಖವನ್ನು ಬಯಸದೆ ಜಿತೇಂದ್ರಿಯರಾಗಿ ಧೈರ್ಯಸ್ಥೈರ್ಯಗಳಿಂದ ಜಾಗರೂಕರಾಗಿ ಇರಬೇಕು ಎಂದು ದೇವಪುರ ನಿಲಯ ಲಕ್ಷ್ಮೀರಮಣನ ಭಾವಮೈದುನನು ತನ್ನ ಪಾಳಯದಲ್ಲಿ ಪ್ರಕಟಿಸಿದನೆಂಬಲ್ಲಿಗೆ–ಶ್ರೀಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿ ನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಹದಿನೈದನೆಯಸಂಧಿ ಸಂಪೂರ್ಣಂ. ಶ್ರೀ.

# ಹದಿನಾರನೆಯ ಸಂಧಿ.

## ಪ್ರಮೀಳೆಯನ್ನು ಒಡಂಬಡಿಸಿ ಅರ್ಜುನನು ಮುಂದೆಹೊರಟುದು.

ಎಲೈ ಜನಮೇಜಯರಾಯನೇ ಕೇಳು. ಹೀಗೆ ಅರ್ಜುನನು ಕುದುರೆಯೊಡನೆ ನಡೆತಂದು ಪ್ರಮೀಳೆಯ ಪಟ್ಟಣದ ಬಳಿ ಪಾಳಯವನ್ನು ಬಿಡಲು, ಚಂಚಲಾಕ್ಷಿಯರಾದ ಆನಗರದ ಕಾವಲಿನವರು ಕುದುರೆಯನ್ನು ಕಂಡು ಅದರ ಪಟ್ಟಪಾಲದಲ್ಲಿ ಬರೆದಿರುವ ಲೇಖನವನ್ನೋದಿಕೊಂಡು ತಮ್ಮ ರಾಣಿಯಾದ ಪ್ರಮೀಳೆಯ ಬಳಿಗೆ ಬಂದು ವಿನಯದಿಂದ ನಮಸ್ಕರಿಸಿ, ಅಮ್ಮಾ! ನಮ್ಮ ರಾಜ್ಯಕ್ಕೆ ಇದುವರೆಗೂ ಕಾಣದಂತಿದ್ದ ಒಂದಾನೊಂದು ಆಶ್ಚರ್ಯವು ತಲೆದೋರಿತು. ಅದೇನೆನ್ನುವೆಯೋ! ಕುಸುಮಗಂಧಾಕ್ಷತೆಗಳಿಂದ ಪೂಜಿಸಿ, ದಿವ್ಯಾಭರಣಗಳಿಂದಲಂಕೃತವಾಗಿ, ಸ್ವೇಚ್ಛೆಯಿಂದ ಸಂಚರಿಸುವ ಒಂದಾನೊಂದು ಕುದುರೆಯು ಮೂಲಬಲದ ಪಾಳಯದೊಡನೆ ನಡೆದು ನಮ್ಮ ಪಟ್ಟಣಕ್ಕೆ ಬಂದಿರುವುದು. ಅದು ಚಂದ್ರವಂಶೋತ್ಪನ್ನನಾದ ಧರ್ಮರಾಯನದಂತೆ, ಪ್ರಪಂಚದಲ್ಲಿ ಬಲಶಾಲಿಗಳಾದವರು ಅದನ್ನು ಕಟ್ಟಿ ಕಾದಬಹುದಂತೆ, ಲೋಕೈಕವೀರನಾದ ಅರ್ಜುನನ ಕಾವಲು ಅದಕ್ಕುಂಟಂತೆ, ಕಟ್ಟಿಹಾಕಿದ ವೀರರೊಡನೆ ಕಾದಾಡಿ ಕಡುಗಲಿಯಾದ ಆ ವೀರನು ಕುದುರೆಯನ್ನು ಬಿಡಿಸಿಕೊಳ್ಳುವನಂತೆ, ಇದೆಲ್ಲವನ್ನೂ ನೋಡಿದ ನಾವು ನಿನ್ನ ಬಳಿಗೈತಂದು ಬಿನ್ನೈಸಿದೆವು. ಇನ್ನು ಪುರುಷದಳದೊಡನೆ ಕಾದುವ ಕಾರ್ಯವು ನಮಗೆ ಹೊಸದು ಎಂದು ನುಡಿದರು ಅದನ್ನು ಕೇಳಿ ಹುಸಿನಗೆಯನ್ನು ಬೀರುತ್ತ ಆ ಕುದುರೆಯನ್ನು ತನ್ನ ಲಾಯದಲ್ಲಿ ಕಟ್ಟಿಸಿ ಭದ್ರಾಸನದಿಂದಿಳಿದು ಯುದ್ಧಸನ್ನದ್ಧಳಾಗಿ ಆ ಪ್ರಮೀಳೆಯು ಅರ್ಜುನನೊಡನೆ ಹೋರುವುದಕ್ಕೆ ಹೊರಟಳು ಬಳಿಕ ಯುದ್ಧಸನ್ನದ್ಧರಾದ ಚೆಲ್ಲೆಗಂಗಳನಲ್ಲೆಯರೇರಿದ ಒಂದುಲಕ್ಷ ಕುದುರೆಗಳೂ, ಬಲಿಮ್ಮೊಲೆಗಳಭಾರದಿಂದ ಮೆಲ್ಲಮೆಲ್ಲನೆ ನಡೆಯುವ ತರುಣಿಯರು ನಡೆಸುತ್ತಿರುವ ಒಂದು ಲಕ್ಷ ಆನೆಗಳೂ, ಹುಣ್ಣಿಮೆಯ ಚಂದಿರನಂತೆ ಹೊಳೆಯುವ ಒಟ್ಟವೊಗದ ಬಾಲೆಯರಿಂದ ಕೂಡಿದ ಒಂದು ಲಕ್ಷ ರಥಗಳೂ, ಕಳಕಳಿಸುವ ಯೌವನದ ರಾಶಿಯಂತೆ ಹೊಳೆದು, ಸೆಳೆನಡುವಿನ ಸಂಗದಿಂದ ಬಳುಕುತ್ತ ಮಿಸುನಿಯ ಬಣ್ಣದಂತೆ ಮೈಯುಳ್ಳ ವೀರನಾರಿಯರ ಮೂರುಲಕ್ಷ ಪದಾತಿ ಸೈನ್ಯವೂ ಪ್ರಮೀಳೆಯ ಸುತ್ತಲೂ ಆವರಿಸಿಕೊಂಡಿತು. ಚಲ್ಲಣಗಳನ್ನು ತೊಟ್ಟು ಮೊಲೆಗಟ್ಟುಗಳನ್ನು ಕಟ್ಟಿ ಜಡೆಮುಡಿಗಳನ್ನು ಹವಣಿಸಿ ಬಿಗಿದುಕಟ್ಟಿ ಹಣೆಗೆ ಕಸ್ತೂರಿಯತಿಲಕವನ್ನಿಟ್ಟು ಪರಿಮಳ ಸುಗಂಧ ಚಂದನಾದಿ ಅನುಲೇಪನಗಳಿಂದ ಸೊಗಸುಗೊಂಡು, ಜಗಜಗಿಸುತ್ತಿ

ರುವ ಮೈದೊಡವುಗಳನ್ನು ಧರಿಸಿ ಮಂದಹಾಸದಿಂದ ಕಿರುನಗೆಯನ್ನು ಬೀರುತ್ತ ಮಿಂಚಿನಂತೆ ಥಳಥಳಿಸುವ ಚಂಚಲಾಪಾಂಗದ ಕಾಂತಿಯಿಂದೊಡಗೂಡಿ, ಮೃದು ಮಧುರಭಾವದಿಂದ ಹೊಳೆಯುವ ನಳಿತೋಳುಗಳಿಂದ ಪ್ರಕಾಶಿಸುತ್ತ ಮಂದಗ ಮನದಿಂದ ಸೊಂಪುವೆತ್ತು ಕೋಮಲವಾದ ತೋಳುಗಳೂ, ಕುಂಭಕುಚವೂ, ಯೌವನದ ಮದವೂ, ಭದ್ರಾಕೃತಿಯೂ, ಹೊಸ ಮಿಸುನಿಯ ವಾಣಿಕದೊಡ ವುಗಳೂ, ದುಂಬಿಯಂತಿರುವ ಭೃಂಗಾಳಕಗಳೂ, ಕುಂಕುಮಸಿಂಧೂರ ಕಜ್ಜಲ ಗಳೂ, ರಾಜಿಸುತ್ತಿರುವ ಬೈತಲೆಯಭಾಗ್ಯವೂ, ಮನೋಜ್ಞವಾದ ಕಿರುಗೆಜ್ಜೆ ಗಳ ಸ್ವರಯುಕ್ತವಾದ ಕಾಂಚೀಧಾಮವೂ, ಶೋಭಾಯಮಾನವಾಗಿ ಮನ್ಮಥನ ಮೋಹನಾಸ್ತ್ರದ ರಾಶಿಯಂತೆ, ಪೆಣ್ಬಳದ ನಾರಿಯರು ಆನೆಗಳಮೇಲೇರಿ ಹೊರ ಟುಬಂದರು.

ಹೀಗೆ ಬಂದ ಸ್ತ್ರೀಸೈನ್ಯವು ಅರ್ಜುನನ ಸೇನೆಯನ್ನುನೂಕಿ ನಾನಾಬಗೆ ಯಿಂದ ಆನೆ ಕುದುರೆ ಕಾಲಾಳುಗಳನ್ನು ಮುತ್ತಿ ಸುತ್ತಿ ನೋಯಿಸುತ್ತಿರುವ ಸಮಯದಲ್ಲಿ ಬಾಣಗಳ ಮಳೆಯನ್ನು ಸುರಿಸುತ್ತ, ಬಾಲಚಂದ್ರನೂ, ಎಳನೇ ಸರೂ, ಏಕಕಾಲದಲ್ಲಿ ಹುಟ್ಟಬರುತ್ತಿರುವುದೋ ಎನ್ನುವಂತೆ ಪೊಂದೇರನೇರಿ ಉಭಯಸೇನೆಗಳ ಮಧ್ಯದಲ್ಲಿ ನಿಂತು ತನ್ನ ಮುಖಕಾಂತಿಯಿಂದ ರಾಜಿಸುತ್ತ ಅರ್ಜುನನ ಬಳಿಗೈತಂದು, ಕಪಿಧ್ವಜವುಳ್ಳ ರಥದಲ್ಲಿ ಕುಳಿತಿರುವ ವೀರನನ್ನು ಕಂಡು, ಓಹೋ ! ಅರ್ಜುನನೆಂಬವನು ನೀನೆ ? ನಿನ್ನ ಕುದುರೆಯನ್ನು ತಡೆದು ಕಟ್ಟಿದವರು ನಾವೇ ಹೌದು, ಇನ್ನು ಅದನ್ನು ಬಿಡಿಸಿಕೊಳ್ಳಬೇಕಾದರೆ, ನಿನ್ನ ಪಂಥವನ್ನು ವಿನಯವನ್ನು, ಕಾಣಬಹುದು ಎಂದು ಹೇಳುತ್ತ ಬಿಲ್ಲಿನಲ್ಲಿ ಬಾಣ ವನ್ನು ಹೂಡುತ್ತಿರಲು ಅರ್ಜುನನು ಅದನ್ನು ಕಂಡು, ಶಿವಶಿವಾ ಗಂಡುಗಲಿ ಯಾದ ನಾನು ಹೆಂಗಸಿನೊಡನೆ ಯುದ್ಧಮಾಡಬೇಕೆ ? ಲೋಕೇಶನಾದ ಪರಮೇ ಶ್ವರನೊಡನೆ ಹೊಡೆದಾಡಿ ಪಡೆದ ಬಾಣವನ್ನು ಈ ಹೆಣ್ಣುದಳದಮೇಲೆ ಹೇಗೆ ಪ್ರಯೋಗಿಸಲಿ ! ಇದೆಲ್ಲವನ್ನೂ ತೊರೆದು ಅಂಚೆದುಪ್ಪಳಿನಮಂಚದಲ್ಲಿ ಮದನ ಕಲಾವಿಲಾಸವನ್ನು ತೋರುತ್ತ ಕುಸುಮಶರಗಳನ್ನು ತೊಟ್ಟು ಕಾದುವ ಕಡು ಚದುರೆಯಾದ ನೀನು (ಕೈದುಡುಕಿ ಬಿಲ್ಲುಬಾಣಗಳನ್ನು ಹಿಡಿದು ಯುದ್ಧಮಾ ಡಿದರೆ ಸಮರಸವಾಗುವುದೆ? ಹೇಳು ಎಂದು ನುಡಿಯಲು, ಪ್ರಮೀಳೆಯು ನಸು ನಗುತ್ತ, ಎಲೈ ಭೋಗಿಗಳ ರಾಗರಸದೊರೆತೆಗೆ ಗಣಿಯಾದ ವಿಜಯನೆ ! ನೀನ- ನ್ನನ್ನು ವರಿಸಿದೊಡೆ, ಅಂಚೆದುಪ್ಪಳಿನ ಮಂಚದಲ್ಲಿ ಪವಡಿಸಿ, ಬಗೆಬಗೆಯಾದ ಅನಂಗನ ಶರಸಂತತಿಯ ಸುಧಾರಸವನ್ನುಸೂಸುವ ಪ್ರೇಮಕಲಹದ ಪೆಣ್ಬಲ ವನ್ನು ತೋರಿಸುವೆನು; ಹಾಗಿಲ್ಲವಾದರೆ ನಿನ್ನ ಕುದುರೆಯನ್ನು ಎಂದಿಗೂ ಬಿಡ ಲಾರೆನು. ಯುದ್ಧಮಾಡಬೇಕೆಂಬ ಆಸೆಯುಳ್ಳವನಾದರೆ ನನ್ನ ಸಾಹಸವನ್ನು

ಪರೀಕ್ಷಿಸಿನೋಡು ಎಂದು ನುಡಿದು ಕಡುಕೋಪದಿಂದ ಒಂದು ಬಾಣವನ್ನು ಹೊಡೆದಳು. ಆಗ ಅರ್ಜುನನು ವಿಷಯಸುಖಕ್ಕಾಶಿಸಿ ನಾನು ಕೂಡಿದರೆ ವಿಷವೇರದಿರುವುದೆ ? ವಿಷದಿಂದುದ್ಭವಿಸಿದ ಈ ಹೆಂಗಸರೊಡನೆ ಬೆರೆದು ಬಾಳುವ ಗಂಡಸರುಂಟೆ ? ಪುರುಷಶ್ರೇಷ್ಠರಾದ ವೀರರೊಡನೆ ಆಡತಕ್ಕ ವೀರವಾದವನ್ನು ನಿನ್ನೊಡನೆ ಆಡುವುದು ಸರಿಯಲ್ಲ ! ಪೆಣ್ಗೊಲೆಗಾಗಿ ಹೆದರಿ ಸುಮ್ಮನಿರುವೆ ? ಕುದುರೆಯನ್ನು ಬಿಡುವವಳಾಗು ಎಂದು ಪಾರ್ಥನು ಪೇಳಿದನು.

ಆಗ ಪ್ರಮೀಳೆಯು ಅಹಾ ! ಹಾಗೆಯೊ ? ನೀನು ಯುದ್ಧಕ್ಕೆ ನಿಂತರೆ, ಬಾಣದಿಂದ ನಿನ್ನನ್ನು ಕೊಲ್ಲುವೆನು ? ಅಲ್ಲದೆ ಬದ್ಧಮೋಹದಿಂದ ಮುದ್ದುಮೋಹನನಾಗಿ ಮದನಕೇಳಿಗೈದಿ ನನ್ನನ್ನು ವರಿಸಿದೊಡೆ, ಸಕಲ ರಸಂಗಳಿಗೂ ಸಾರಭೂತವಾದ ಶೃಂಗಾರರಸದ ಸೊಂಪಿನಿಂಪಿನಿಂದ ಸಕಲಕಲೆಗಳನ್ನೂ ತೋರಿ ಸಂಪೂರ್ಣವಾದ ಸುಖವನ್ನು ಕೊಡುವೆನು. ಇದು ನಿನ್ನ ಮನಸ್ಸಿಗೆ ಸೊಗಸಾದರೆ ಒಪ್ಪಿಕೊ ಇಲ್ಲವೆ ಕಲಹವೆಬೇಕೆಂದರೆ ಕಾದಿನೋಡೆಂದು ಕೂರಂಬುಗಳನ್ನು ಕರೆದಳು. ಅದನ್ನು ಕಂಡು ಅರ್ಜುನನು ಹಿಂದೆ ಶೂರ್ಪಣಖಿಯ ಸಂಭಾಷಣೆಯಿಂದ ರಾಮಲಕ್ಷ್ಮಣರಿಗೆ ಬಂದ ತೊಂದರೆಯನ್ನು ನೆನೆದು, ಇವಳನ್ನು ಬೇಗನೆ ಸಂಹರಿಸುವುದೆ ಸರಿಯೆಂದು ನಿಶ್ಚಯಿಸಿ, ಗಾಂಡೀವದಲ್ಲಿ ಸಮ್ಮೋಹನಾಸ್ತ್ರವನ್ನು ಹೂಡಿ ಹೊಡೆದನು. ಶಶಿಮುಖಿಯಾದ ಆ ಪ್ರಮೀಳೆಯು ಹುಸಿನಗೆಯಿಂದಾಬಾಣವನ್ನು ನಡುದಾರಿಯಲ್ಲಿ ಕಡಿದುಹಾಕಿ, ಅರ್ಜುನನ ಬಿಲ್ದಿರುವನ್ನು ಹರಿದುಹಾಕಲು, ರೋಷಭೀಷಣನಾದ ಪಾರ್ಥನು ಕ್ರೂರವಾದ ಮತ್ತೊಂದು ಬಾಣವನ್ನು ಸೆಳೆದು ಹೊಸದಾದ ಬಿಲ್ದಿರುವನ್ನು ಸಿಕ್ಕಿಸಿ, ದಿವ್ಯಾಸ್ತ್ರವನ್ನು ಹೂಡಿ ಗುರಿಯಿಟ್ಟನು. ಆಕಾಲದಲ್ಲಿ ಸರ್ವರೂ ಕೇಳುವಂತೆ, ಎಲೈ ಅರ್ಜುನನೇ ಬೇಡ ! ಬೇಡ ! ಹೆಂಗೊಲೆಯನ್ನು ಬಯಸಿ, ಮಹಾಸ್ತ್ರವನ್ನು ತೊಡಬೇಡ ! ಇವಳು ಅಜೇಯಳಾದ ಅಂಗನಾಮಣಿ, ಸಾವಿರವರುಷಕಾಲ ಕಾದಿದರೂ ಸೋಲುವಳಲ್ಲ ? ಇವಳನ್ನು ವರಿಸಿದರೆ ಮುಂದೆ ನಿನಗೆ ಒಳ್ಳೆಯದಾಗುವುದು ಎಂಬ ಅಶರೀರವಾಣಿಯು ಕೇಳಿಸಿತು. ಅದನ್ನಾಲಿಸಿ ಅರ್ಜುನನು ಆದರದಿಂದ ತನ್ನ ಬಾಣವನ್ನಿಳುಹಿ, ತಕ್ಕವರಾದ ಮಂತ್ರಿಗಳೊಡನೆ ವಿಚಾರಮಾಡಿ, ತನ್ನ ಬುದ್ಧಿಯಿಂದಲೂ ಆಲೋಚಿಸಿ, ಆ ಪ್ರಮೀಳೆಯನ್ನು ತನ್ನೆಡೆಗೆ ಬರಮಾಡಿಕೊಂಡು, ಕಾಲೋಚಿತವಾದ ಮಾತುಗಳಿಂದ ಅವಳನ್ನೊಡಂಬಡಿಸಿ, ಕೈಪಿಡಿದು ವಿನಯದಿಂದ ಮಾತನಾಡಿಸುತ್ತ ಹಸನ್ಮುಖಿಯಾಗಿ ಪ್ರಿಯೆ ! ನೀನು ನನಗೆ ಅನುಕೂಲೆಯಾಗಿರು ! ಇದು ಹೋರಾಡುವ ಕಾಲವಲ್ಲ, ನನ್ನ ಅಣ್ಣನು ದೀಕ್ಷೆಯನ್ನು ವಹಿಸಿರುವನು, ಆತನ ದೀಕ್ಷಾನಿಯಮವು ಮುಗಿದಹೊರತು, ನಾನು ಹೆಂಗಸರೊಡನೆ ಬೆರೆಯೆನೆಂದು ಶಪಥಮಾಡಿ, ಅಶ್ವರಕ್ಷೆಗಾಗಿ ಬಂದಿರುವೆನು.

ಆದಕಾರಣ ನೀನು ನಿನ್ನ ಬಲಸಹಿತವಾಗಿ ಹಸ್ತಿನಾವತಿಗೆ ಬಂದು ಶ್ರೀಕೃಷ್ಣನ ದರ್ಶನಮಾಡಿದರೆ ನಿನ್ನ ವಿಷಭಾವವು ಕಳೆದುಹೋಗುವುದು. ಬಳಿಕ ನಾವಿಬ್ಬರೂ ಅನ್ಯೋನ್ಯವಾದ ಅಕ್ಕರೆಯಿಂದೊಬ್ಬರನೊಬ್ಬರು ಆಲಿಂಗಿಸಬಹುದೆಂದು ನುಡಿದು ಸಂತೈಸಿದನು. ಅದನ್ನು ಕೇಳಿ ಪ್ರಮಿಳೆಯು ಕೈನೀಡಿ ಭಾಷೆಯನ್ನು ತೆಗೆದುಕೊಂಡು ಸಮ್ಮತಿಪಟ್ಟವಳಾಗಿ ತನ್ನ ಸರ್ವಸ್ವವನ್ನೂ ಅರ್ಜುನನಿಗೆ ಕೊಟ್ಟು ಕಟ್ಟಿದ ಕುದುರೆಯನ್ನು ಪಟ್ಟಣದಿಂತರಿಸಿ ಅವನ ವಶಮಾಡಿ, ತನ್ನ ರಾಜ್ಯದ ಸಮಸ್ತ ಉತ್ತಮವಸ್ತುಗಳನ್ನು ಕಾಣಿಕೆಯಾಗಿ ಕೊಟ್ಟು, ಮತ್ತ ಕಾಶಿನಿಯರ ಮೂಲದಳದೊಡನೆ ಹೊರಟು ಧರ್ಮರಾಯನನ್ನು ಕಾಣಬೇಕೆಂಬ ಕುತೂಹಲದಿಂದ ಹಸ್ತಿನಾಪುರವನ್ನು ಕುರಿತು ತೆರಳಿದಳು. ಬಳಿಕ ಅರ್ಜುನನು ಕುದುರೆಯೊಡನೆ ಹೊರಟು ನಾನಾದೇಶಗಳನ್ನು ಸಂಚರಿಸಿ, ಆಡು, ಕುರಿ, ಆನೆ, ಕುದುರೆ, ಗೋಮಹಿಷಿಗಳಿಂದ ನಿಬಿಡಮಾಗಿ ನಾನಾವಿಧವಾದ ವೃಕ್ಷಲತೆಗಳ ಪೊದರುಗಳಿಂದ ಪೊಕ್ಕಿ, ಅತ್ಯಂತ ಸೂಕ್ಷ್ಮರೂಪದಿಂದ ಜೀವವನ್ನು ಧರಿಸಿ, ಸೂರ್ಯೋದಯದಲ್ಲಿ ಹುಟ್ಟಿ, ಮಧ್ಯಾಹ್ನದಲ್ಲಿ ಪ್ರಾಯದ ಮಾಯಾಸುಖವನ್ನು ಅನುಭವಿಸಿ, ಸಾಯಂಕಾಲಕ್ಕೆ ಸಕಲವಿಧವಾದ ಬಾಳಿಕೆಯನ್ನು ತೀರಿಸಿಕೊಂಡು ಸಾಯುತ್ತಿರುವ ಜೀವಿಗಳನ್ನು ಕಂಡು ಆಶ್ಚರ್ಯಯುಕ್ತನಾಗಿ, ಮುಂದೆಬರುತ್ತ ಒತ್ತೊಳು, ವಕ್ರವಾದ ದೇಹ, ತೊವಲುಡೆ, ಒಂದುಕಾಲು, ಏಕಾಕ್ಷಿ, ಮೂರು ಪಾದಗಳು, ಉದ್ದವಾದ ಮೂಗು, ನೂರುಕಣ್ಣು, ನೆತ್ತಿಯಲ್ಲಿ ಕೋಡು, ಒಂದುಕೊಂಬು, ಕತ್ತೆಯಮುಖ, ಕುದುರೆಯ ನೋಟಗಳುಳ್ಳ ಜನರನ್ನು ನೋಡುತ್ತ ವಿಸ್ಮಿತನಾಗಿ, ಅಲ್ಲಲ್ಲಿ ಎಂದೂ ಕಾಣದಿದ್ದ ವಿಚಿತ್ರಗಳನ್ನು ಪರಿಕಿಸುತ್ತ, ಮಹಾಕೋಪಿಗಳೂ, ದೀರ್ಘದೇಹಿಗಳೂ, ಪುರುಷಾಧಮರೂ, ಕ್ರೂರವಾದ ಮುಖದವರೂ, ಕೊಲೆಪಾತಕರೂ, ನಿರ್ದಯರೂ, ನಿಷ್ಠುರವಾದಿಗಳೂ, ಮಾಯಾವಿಗಳೂ, ಸಮರಭೀಷಣರೂ, ಮದೋನ್ಮತ್ತರೂ ಆದ ಮೂರುಕೋಟಿ ರಾಕ್ಷಸರಿಗೊಡೆಯನಾದ ಭೀಷಣನೆಂಬ ರಕ್ಕಸನ ರಾಜ್ಯಕ್ಕೆ ಬಂದು ಕುದುರೆಯು ಕೊಂಕಿಲ್ಲದೆ ನಟ್ಟಗೆ ಆ ರಾಕ್ಷಸನ ಸೀಮೆಯಂಪೊಕ್ಕು ನಲಿಯುತ್ತಿದ್ದಿತು. ಆ ಕಾಲದಲ್ಲಿ ತನ್ನಾಹಾರವನ್ನು ಹುಡುಕುತ್ತ ಕಾಡಿನಲ್ಲಿ ಅಲೆಯುತ್ತಿದ್ದ ವೀಧೋಹೋತನೆಂಬ ಬ್ರಹ್ಮರಾಕ್ಷಸನು ಆ ಕುದುರೆಯನ್ನು ಯಜ್ಞಾಶ್ವವೆಂದು ಊಹಿಸಿ, ಅದಕ್ಕೆ ಅತಿರಥನಾದ ಅರ್ಜುನನ ಕಾವಲುಂಟೆಂದು ತಿಳಿದು ಬಾಹುಗಳನ್ನಪ್ಪಳಿಸುತ್ತ ನರಗಳಿಂದಮಾಡಿದ ಜನಿವಾರವೂ, ಕಣ್ಣುಗುಡ್ಡೆಗಳ ಕೊರಲಹಾರವೂ, ತಲೆಬುರುಡೆಗಳ ಜಪಸರವೂ, ಹಸಿತೊಗಲಿನ ದೋತರವೂ, ಒಂಟೆಯ ಮೂಳೆಗಳಿಂದ ಮಾಡಿದ ಕುಂಡಲವೂ, ಆನೆಯ ಕಪಾಲದ ಕಮಂಡಲುವೂ, ಮದ್ದಾನೆಯ

ಬೆನ್ನುಮೂಳೆಯ ದಂಡವೂ, ತನಗೆ ಆಭರಣವಾಗಿರಲು ಭಯಂಕರಕವಾದ
ರೂಪಿನಿಂದ ಭೀಷಣನ ಅರಮನೆಗೆ ನಡೆತಂದನು

ಬಂದ ಪುರೋಹಿತನನ್ನು ಕಂಡು ನಮಸ್ಕರಿಸಿ, ಸ್ವಾಮಿಾ ! ತಾವು
ಏಕಾಂಗಿಗಳಾಗಿ ಹೀಗೆ ಕಾಲುಗಳಿಂದ ನಡೆದುಬರಲು ಕಾರಣವೇನು ಹೇಳಿ
ಎಂದು ಭೀಷಣನು ಕೇಳಲು, ಅಟ್ಟಹಾಸದಿಂದ ಆ ಭೀಷಣನನ್ನು ನೋಡಿ,
ಏತಕ್ಕೆ ನೀನು ಹೀಗೆ ಮೂಢನಾಗಿರುವೆ ? ನಿನ್ನ ತಾತನಾದ ಬಕಾಸುರನನ್ನು
ಕೊಂದ ಭೀಮಸೇನನ ತಮ್ಮನಾದ ಅರ್ಜುನನು ನಿನ್ನ ಸೀಮೆಗೆ ಬಂದಿರುವನು.
ಅತನನ್ನು ಹಿಡಿದು ನರಮೇಧಯಾಗವನ್ನು ಮಾಡು ಎಂದು ಹೇಳಲು, ಫಡ
ಫಡಾ ! ನಮ್ಮ ತಾತನನ್ನು ಕೊಂದವನ ತಮ್ಮನನ್ನು ಕಡುಗದಿಂದ ಬಡಿದು
ಕತ್ತರಿಸದೆ ಬಿಡೆನು ನೀವು ಹೇಳುವ ಯಾಗಕ್ಕೆ ಸತ್ತವನನ್ನು ಪಶುವಾಗಿ
ಮಾಡಬಹುದೆ ? ಹಿಂದೆ ಈ ವಿಧವಾದ ನರಮೇಧವನ್ನು ನಮ್ಮ ರಾಕ್ಷಸರಲ್ಲಿ
ಯಾರಾದರೂ ಮಾಡಿರುವರೆ ? ನೀವು ಹೇಳಿದ ಕೆಲಸಕ್ಕೆ ನಾನೆಂದಿಗೂ ಬೇಸರಪ
ಡತಕ್ಕವನಲ್ಲ. ಆ ನರಮೇಧದ ಪರಿಯನ್ನು ನನಗರುಹಬೇಕು ಎಂದು ವಿಭೀ
ಷಣನು ಬೇಡಿಕೊಂಡನು. ಎಲೈ ಮೂಢರಕ್ಕಸನೇ ! ಹಿಂದೆ ದಾನವಕುಲಶಿ
ರೋಮಣಿಯಾದ ರಾವಣನು ಈ ನರಮೇಧವನ್ನು ಮಾಡಿ ರಾಕ್ಷಸಕೋಟಿಯ
ಸಕಲ ಇಷ್ಟಾರ್ಥವನ್ನು ಸಾಧಿಸಿದನೆಂಬುದನ್ನು ಕಾಣೆಯಾ ? ಈ ನರಮೇಧ
ವನ್ನು ಮಾಡಿದವರಿಗೆ ತೃಪ್ತಿಯುಂಟಾಗುವುದು. ಇದಕ್ಕೆ ಋತ್ವಿಜರಾಗಲು
ತಕ್ಕವರಾಗಿ, ಚಾತುರ್ಮಾಸ್ಯವ್ರತದಲ್ಲಿ ನಾಲ್ಕುತಿಂಗಳೂ, ಸುರಾಪಾನಮಾ
ಡುತ್ತ, ಮಾಸೋಪವಾಸಿಗಳ ತಲೆಯ ಮಾಂಸವನ್ನು ಶ್ರಾವಣದಲ್ಲಿಯೂ, ಯತಿ
ಗಳ ದೇಹಮಾಂಸವನ್ನು ಭಾದ್ರಪದದಲ್ಲಿಯೂ, ಜಟಾಧಾರಿಗಳಾದವರ ಅಡ
ಗನ್ನು ಅಶ್ವಯುಜದಲ್ಲಿಯೂ, ಎಳೆವೆಣ್ಗಳ ಎದೆಯರಕ್ತವನ್ನೂ, ಕಾರ್ತಿಕದಲ್ಲಿ
ಆಹಾರವಾಗಿ ಮಾಡಿಕೊಂಡು ವ್ರತಿಗಳಾಗಿರುವ ಬಹುಮಂದಿ ಬ್ರಹ್ಮರಾಕ್ಷಸರಿರು
ವರು, ನಾನೆ ಆಚಾರ್ಯನಾಗುವೆನು, ಇದಕ್ಕೆ ಸಹಾಯಕರಾಗಿ ದುರ್ದರ್ಶರಾ
ಗಿಯೂ, ಹಿರಿಯವರಾಗಿಯೂ, ಪೂರ್ವಯುಗದ ಆಚಾರವನ್ನು ತಿಳಿದವರಾ
ಗಿಯೂ, ಉನ್ನತಾತದ ವಟವೃಕ್ಷನಿವಾಸಿಗಳಾಗಿಯೂ, ಮಹಾಪುರುಷಾರ್ಥಗ
ಳನ್ನು ಪಡೆದವರಾಗಿಯೂ, ಇರುವ ರಾಕ್ಷಸವೀರರಿರುವರು. ಇವರ ಸಹಾಯ
ದಿಂದ ಯಾಗವನ್ನು ಕೈಕೊಂಡು ಅನುದಿನವೂ ಒಂದು ಸಾವಿರಜನ ರಾಕ್ಷಸದಂಪ
ತಿಗಳನ್ನು ಮನುಷ್ಯರ ಮಾಂಸದಿಂದ ತೃಪ್ತಿಪಡಿಸು. ಯಾಗಶಾಲೆಗೈತಂದವ
ರನ್ನು ನಾನು ಉಪಚರಿಸಿ ನಿನ್ನ ನರಮೇಧಯಾಗವನ್ನು ತೃಪ್ತಿಕರವಾಗಿ ನೆ
ವೇರಿಸುವೆನು. ಕೂಡಲೆ ಯಾಗಶಾಲೆಯನ್ನು ನಿರ್ಮಿಸು. ಸೇನೆಯೊಡನೆ ಅ
ರ್ಜುನನನ್ನು ಹಿಡಿದುತಂದುದೇ ಆದರೆ ನಿನಗೆ ಸಮಾನರಾದ ಶೂರರು ಮೂರ

ಲೋಕದಲ್ಲಿಯೂ ಇಲ್ಲ. ಈ ತೆರದಿಂದ ನರಮೇಧವನ್ನು ಮಾಡಿದರೆ ಅದರ ಉತ್ಸವದ ಅಟ್ಟಹಾಸವನ್ನು ನಾನು ಏನು ಹೇಳಲಿ ! ಬಹು ಅಸದಳವಾದುದಲ್ಲವೆ ? ಎಂದನು. ಅದನ್ನು ಕೇಳಿ ಭೀಷಣನು ಸೇನೆಯನ್ನು ಸವರಿ ಅರ್ಜುನನನ್ನು ಹಿಡಿದು ತರುವೆನು ತಡಮಾಡದೆ ಮಂಟಪವನ್ನು ಕಟ್ಟಿಸು ಎಂದು ಹೇಳಿ, ಭೂಲೋಕವನ್ನು ಏಕಕಾಲದಲ್ಲಿ ನುಂಗಬೇಕೆಂದು ಕಾಲಭೈರವನು ಬಹುಳಾಕಾರವನ್ನು ಕೈಗೊಂಡನೋ ಎನ್ನುವಂತೆ ಅತ್ಯಂತ ಕ್ರೂರರೂಪಿಗಳಾದ ಮೂರು ಕೋಟಿ ದಾನವರ ಸೇನೆಯೊಡನೆ ಹೊರಟು ಮೇರೆದಪ್ಪಿದ ಸಮುದ್ರದ ಪೆರ್ದೆರೆಗಳಂತೆ ಅರ್ಜುನನ ಸೇನೆಯನ್ನು ಕದಡಿ ಕಡಿದು ಹೊಡೆಯಲು ಉದ್ಯುಕ್ತರಾದನು.

ಬಳಿಕ ಆ ರಾಕ್ಷಸ ಸಮೂಹದಲ್ಲಿ ಲಂಬೋದರಿ ಎಂಬುವಳೂ, ಯೋಜನಸ್ತನಿಯೂ ಸೇರಿ ಅರ್ಜುನನ ರಥಾಗ್ರದಲ್ಲಿದ್ದ ಕಪಿವೀರರನ್ನ ಕಂಡು ಗುಡಿಗುಡಿಸಿ, ಆಹಾ ! ಆಕಾಶಕ್ಕೆ ಹಾರಿ, ಸೂರ್ಯನನ್ನು ತುಡುಕಿ, ಸಾಗರವನ್ನು ಹಾರಿ, ಸೀತೆಯನ್ನು ಕಂಡು, ಲಂಕಿಣಿಯನ್ನು ಕೊಂದು, ರಾವಣನನ್ನು ಭಂಗಿಸಿ, ಲಂಕೆಯನ್ನು ಸುಟ್ಟು, ರಾಕ್ಷಸರ ಕುಲವನ್ನು ಸದೆದು, ಪಾತಾಳದವರನ್ನು ಪಥಗೆಡಿಸಿ, ಬೆಟ್ಟಗಳನ್ನು ಬಹಳವಾಗಿ ಹೊತ್ತ ಈ ಕಪಿಯು ಹೆಂಗಸರನ್ನು ಕೊಲ್ಲುವುದು, ಪಟ್ಟಣವನ್ನು ಸುಡುವುದು, ನೀವು ಹೆದರಬೇಡಿ, ಕೈವಿಾರಿದರೆ ಮುದ್ದೆಗೂಳಿನ ಮುರಿದುತ್ತನ್ನು ನುಂಗುವಂತೆ ನೊಣೆದುಬಿಡುವೆನು, ಇಲ್ಲವಾದರೆ ಮೊಲೆದುದಿಗಳಿಂದ ಹೊಡೆದು ಕೆಡಹುವೆನೆಂದು ಚೀರುತ್ತ, ಭಯಂಕರವಾದ ಬಾಯನ್ನು ತೆರೆದು ಬರುತ್ತಿದ್ದರು. ಅದನ್ನು ಕಂಡು ಹನುಮಂತನು ಮೊದಲು ಲಂಕಿಣಿಯನ್ನು ಕೊಂದ ಆನಂದವಾದ ರೋಷವನ್ನುತಾಳಿ ಬಾಲವನ್ನು ಬೆಳೆಯಿಸಿ, ಖೂಳೆಯರಾದ ಆ ಕಾಳರಕ್ಕಸಿಯರನ್ನು ಸುತ್ತಿ ಮೇಲಕ್ಕೆತ್ತಿ ನೆಲಕ್ಕಪ್ಪಳಿಸಿ ಬಡಿದುಬಿಡುತ್ತಿರಲು ಅವರೆಲ್ಲರೂ ಮುಳಿದು ಮಾಯಾರೂಪದಿಂದ ಯುದ್ಧಮಾಡುತ್ತ ಹುಲಿ, ಕರಡಿ, ಸಿಂಹ, ಆನೆ, ಹಂದಿ, ಶರಭ, ಗಂಡಭೇರುಂಡ, ಉರಿ, ಹೊಗೆ, ಕಿಡಿಗಿಚ್ಚುಗಳಾಗಿ ಅರ್ಜುನನ ಸೇನೆಯನ್ನು ನೋಯಿಸುತ್ತಿರಲು ಆ ಭೀಷಣನು ರೋಷದಿಂದ ತನ್ನ ಕಡೆಯವರಿಂದೊಡಗೂಡಿ ಬಾಣಗಳ ಮಳೆಯನ್ನು ಸುರಿಸಿ ಬಹಳವಾಗಿ ಹೊಡೆದು ನೋಯಿಸುತ್ತ ಎಲೈ ನರಾಧಮನೆ ! ನನ್ನ ತಾತನಾದ ಬಕನನ್ನು ಕೊಂದವನ ತಮ್ಮನು ನೀನೇ ಹೌದೋ ಆಗಲಿ ನನ್ನೆಸುಗೆಯನ್ನು ನೋಡು ನಿನ್ನನ್ನು ಸೇನೆಸಹಿತವಾಗಿ ಸೆರೆಹಿಡಿಯದಿದ್ದರೆ ಪರಮದಾರುಣವಾದ ಶೌರ್ಯವಂತನೆಂಬ ಬಿರುದು ನನಗೆ ಸಲ್ಲುವುದೆ ? ಎಂದು ಬಿಲ್ಲಿನ ಬಾಣವನ್ನೇರಿಸಲು, ಅರ್ಜುನನು ಆಶ್ಚರ್ಯಪಡುತ್ತ ರಕ್ಷೋಘ್ನಬಾಣವನ್ನು ಹೂಡಿ ಹೊಡೆದನು. ಕೂಡಲೆ ಭೀಷಣನ ಅಸ್ತ್ರವು ತುಂಡಾಯಿತು

ರಾಕ್ಷಸರಲ್ಲಿ ಅನೇಕರು ಮಡಿದುಹೋದರು, ಕೆಲವರಿಗೆ ಗಾಯಗಳಾದವು, ಹಲವರಿಗೆ ರಕ್ತಮಯವಾದ ದೇಹವು, ಶಕ್ತಿಗುಂದಿದ ಅವಯವವೂ, ಆದವು. ನಿಂತವರು ಇನ್ನು ಬಾಣದ ಬೇಗೆಯನ್ನು ಸಹಿಸಲಾರದೆ ದಿಕ್ಕುಗೆಟ್ಟು ಓಡಿದರು.

ಹೀಗಾಗುತ್ತಿರುವಲ್ಲಿ ಅರ್ಜುನನ ಸೈನಿಕರನ್ನು ಮೊಲೆದೊಟ್ಟುಗಳಿಂದಪ್ಪಳಿಸಿ ಕೊಲ್ಲುತ್ತಿದ್ದ ಯೋಜನಸ್ತನಿಯನ್ನು ಘೋರವಾದ ಬಾಯಬಿಟ್ಟು ನುಂಗುತ್ತಿದ್ದ ಲಂಬೋದರಿಯನ್ನು ವೀರಶಾಳಿಯಾದ ಹನುಮಂತನು ಬಡಿದು ಕೊಂದನು. ಬಳಿಕ ಅರ್ಜುನನ ಬಾಣದಿಂದಾದ ಉಪಹತಿಯೂ, ಹನುಮಂತನ ಬಾಲದ ಬಾಧೆಯೂ, ವೀರರ ಶೌರ್ಯದುಗ್ಗಡಣೆಯೂ, ಬಹಳವಾಗಿ ಹೆಚ್ಚಿ ರಾಕ್ಷಸರೆಲ್ಲರೂ ಸಾಯುತ್ತಿರಲು ಈತನೊಡನೆ ಕಾದಿಗೆಲುವುದಸಾಧ್ಯವೆಂದರಿತು, ತನ್ನ ಮಾಯಾಬಲದಿಂದಲ್ಲಿ, ಗಂಗಾತೀರವನ್ನೂ ಪುಣ್ಯಾಶ್ರಮವನ್ನೂ ನಿರ್ಮಿಸಿ, ಯತಿವೇಷಧಾರಿಯಾಗಿ ಅರ್ಜುನನ ಬಳಿಗೆ ಬಂದು ಅಯ್ಯಾ ! ಉತ್ತಮರಾದ ಜನರು ಪ್ರಾಣಿಹಿಂಸೆಮಾಡಲು ಬಯಸುತ್ತಾರೆಯೆ ? ಈ ರಾಕ್ಷಸರನ್ನು ಕೊಲ್ಲುವುದರಿಂದ ಫಲವೇನು ? ಪುಣ್ಯದಾಯಕವಾದ ಗಂಗಾಸಲಿಲದಲ್ಲಿ ಮಿಂದು ನಿರ್ಮಲಾಂತಃಕರಣನಾಗಿ, ಹರಿಧ್ಯಾನ, ಈಶ್ವರಪೂಜೆ, ಪಂಚಾಕ್ಷರಿ ಮಂತ್ರಾದಿಗಳನ್ನು ಜಪಿಸಿ ಸದ್ಗತಿಯನ್ನು ಹೊಂದಬಾರದೆ ? ಸ್ವಾಧ್ಯಾಯನಿರತರಾಗಲು ತಕ್ಕುದಾದ ದೇವಗಂಗೆಯ ತಡಿಯಲ್ಲವೆ ? ಇದು ನೋಡು ಎಂದು ಹೇಳಿದನು. ಅರ್ಜುನನು ಈ ಮಾತುಗಳನ್ನು ಕೇಳಿ ಬೆರಗಾಗಿ, ಮುನಿರೂಪದಿಂದಿದ್ದವನನ್ನು ಹಿಡಿದುಕೊಂಡನು. ಕೂಡಲೆ ಮಾಯಾರೂಪವಳಿದು ಮೊದಲಿನಂತೆ ರಾಕ್ಷಸರೂಪದಿಂದ ಕಾಣಿಸಿದ ರಾಕ್ಷಸನನ್ನೂ ಹಿಡಿದುಬಡಿದು ಅವನ ರಾಜವನ್ನಾಕ್ರಮಿಸಿ, ಉತ್ತಮವಾದ ಹಯವರೂಥ ಕನಕಾಭರಣ ರತ್ನರಾಜಿಗಳನ್ನು ಸೂರೆಗೊಂಡು, ದೈತ್ಯರೆಲ್ಲರನ್ನು ಸದೆದು, ದಿಕ್ಕುಗೆಡಿಸಿ, ಕೊಳ್ಳೆಯಲ್ಲಿ ಸಿಕ್ಕಿದ ಪದಾರ್ಥಗಳನ್ನು ಹಸ್ತಿನಾಪುರಕ್ಕೆ ಕಳುಹಿಸಿ, ತಾನು ಕುದುರೆಯೊಡನೆ ದಕ್ಷಿಣಾಭಿಮುಖನಾಗಿ ನಡೆತಂದನು.

ಎಲೈ ಜನಮೇಜಯರಾಯನೆ ! ಕೇಳು ಬಳಿಕ ಮಣಿಪುರವೆಂಬ ಪಟ್ಟಣವನ್ನಾಳುವ ಅರ್ಜುನನ ಮಗನಾದ ಬಭ್ರುವಾಹನ ಪಟ್ಟಣಕ್ಕೆ ಕುದುರೆಯು ನಡೆದುಬಂದಿತು. ಇನ್ನು ಇಲ್ಲಿನ ಆಶ್ಚರ್ಯವನ್ನು ಹೇಳುವುದೇನು ? ದೇವಪುರ ನಿಲಯ ಲಕ್ಷ್ಮೀರಮಣನು ತನ್ನ ಭಾವಮೈದನನನ್ನು ಹೇಗೆ ಕಾಪಾಡುವನೋ ನೋಡಬೇಕೆಂದು ಹೇಳಿದನೆಂಬಲ್ಲಿಗೆ-ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿ ನಾಗೇಶರ್ಮ ಪ್ರಣೀತ ಜೈಮಿನೀಭಾರತ ಕಥಾಸಂಗ್ರಹದಲ್ಲಿ ಹದಿನಾರನೆಯಸಂಧಿ ಸಂಪೂರ್ಣಂ. ಶ್ರೀ. ಶ್ರೀ. ಶ್ರೀ.



# ಹದಿನೇಳನೆಯ ಸಂಧಿ.

## ಬಭ್ರುವಾಹನನು ಅರ್ಜುನನ ಕುದುರೆಯನ್ನು ಕಟ್ಟಿದಕಥೆ.

ಎಲೈ ಜನಮೇಜಯರಾಯನೇ ಲಾಲಿಸು. ಅರ್ಜುನನ ಕುದುರೆಯು ಭೀಷಣನೆಂಬ ರಾಕ್ಷಸನ ಸೀಮೆಯನ್ನು ದಾಟಿ ಮುಂದೆ ಬರುತ್ತಿರಲು, ನೆರೆಯವರ ಸಿರಿಯನ್ನು ಸೈರಿಸದ ಕರುಬನಂತೆ ಬೇಸಗೆಯು ದೂರವಾಯಿತು. ಎಂಟು ದಿಕ್ಕುಗಳಲ್ಲಿಯೂ ಮೋಡಗಳು ಹಬ್ಬಿ ಪರ್ವತಗಳಂತೆ ನಾನಾತರವಾಗಿ ಕಂಗೊಳಿಸಿದುವು. ದಿಕ್ಕೆಂಬ ಹೆಂಗಸು ತನ್ನ ಪತಿಯಾದ ಪರ್ಜನ್ಯನನ್ನು ಸೆಣಸಿ ಕೂಡಲೆಂದು ನೋಡುವ ಚಂಚಲವಾದ ಕಟಾಕ್ಷದ ಹೊಳಹಿನಂತೆ ಮಿಂಚುಗಳು ಥಳಥಳಿಸಿದವು, ಸದ್ಧರ್ಮನಿರತನಾಗಿ ತನ್ನಹಾಗೆ ಇರದ ಲೋಭಿಯನ್ನು ಗದರಿಸುವಂತೆ ಮೋಡಗಳು ಮೊಳಗಿದವು. ಈ ತೆರದ ಮಳೆಗಾಲವು ಪ್ರಾಪ್ತವಾಗಲು ಹಂಸೆಗಳು ಅಂತರಿಕ್ಷವನ್ನಡರಿದವು. ಕೂಡಲೆ ಚಾತಕ, ಗಿಳಿ, ಆನೆ, ನವಿಲು, ಬೇಸಾಯಗಾರರಿಗೆ ಆನಂದವುಂಟಾಯಿತು. ಇಂತು ರಾಜಿಸುವ ಸಂತಸಕ್ಕಾಗರವಾದ ಮಳೆಗಾಲದಲ್ಲಿ ಅರ್ಜುನನ ಕುದುರೆಯು ಮಣಿಪುರದ ಸೀಮೆಗೆಬಂದಿತು.

ಎಲೈ ನೃಪಕುಲೋತ್ತಂಸನಾದ ಜನಮೇಜಯನೆ ಲಾಲಿಸು. ಆ ಮಣಿಪುರವು ಚಿನ್ನಬೆಳ್ಳಿಗಳಿಂದ ಮಾಡಿದ ಕೋಟೆಕೊತ್ತಳಗಳಿಂದಲೂ, ನವರತ್ನಗಳಿಂದ ನಿರ್ಮಿಸಿದ ಮುಗಿಲಟ್ಟಳೆಯ ಸಾಲುಗಳಿಂದಲೂ, ಕೆಂಬೆಳಗಸುಗುಳ್ವ ಹವಳಗಳಿಂದ ಮಾಡಿದ ತೋರಣಗಳಿಂದಲೂ, ಮುತ್ತುಗಳ ಗೊಂಚಲುಗಳಿಂದಲಂಕರಿಸಿದ ಲೋವೆಗಳಿಂದಲೂ, ಚಿತ್ರಪತ್ರಗಳಿಂದ ಶೋಭಾಯಮಾನವಾಗಿ ವಿರಚಿಸಿದ ಕುಸುರಿಗುಚ್ಛಗಳುಳ್ಳ ಗೋಪುರದ ಬಾಗಿಲುಗಳಿಂದಲೂ ಕೂಡಿ ರಮ

ಹೀಯುವಾಗಿದ್ದಿತು. ಹಗಲಿಗೆ ಹೆದರಿ ಓಡಿಬಂದ ಬೆಳದಿಂಗಳು ಈ ನಗರವನ್ನು ಹೊಕ್ಕು ಸೂರ್ಯಕಾಂತಿಯೊಡನೆ ಪ್ರತಿಭಟಿಸಿ ಮಾರ್ಮಲೆಯುತ್ತಿರುವುದೋ ಎನ್ನುವಂತೆ ಮುಗಿಲಮುಟ್ಟುವ ಸೌಧಂಗಳ ಕಾಂತಿಯಿಂದ ಪ್ರತಿಫಲಿಸುತ್ತಿರುವ ಹೊನ್ನಿನ ಕೋಂಟೆಗಳ ಕಾಂತಿಯು ಹೊಳೆಯುತ್ತಿದ್ದಿತು. ಕೋಟೆಯನ್ನು ಕಾಯುವ ವೀರರ ಆಯುಧಗಳೂ, ದ್ವಾರಪಾಲಕರ ವೀರಾವೇಶವನ್ನು ತೋರುವ ಕೈದುಗಳೂ, ದುರ್ಗದಭಿಮಾನದೇವತೆಯ ಭಯಂಕರವಾದ ಆಕಾರವನ್ನು ತಾಳಿದ ಆಯುಧಗಳೂ, ಈ ನಗರವನ್ನಾಳುವ ಅರಸನು ಭೂಲೋಕದಲ್ಲಿ ಅಸಮಾನನಾದ ವೀರನೆಂದು ಕೈಯೆತ್ತಿ ತೋರಿಸುವಂತೆ ಡೆಂಕಣಿಯಮೇಲಿರುವ ಪಳಿವಿಗೆಯ ಕೈಗಳು ಹೊಳೆಯುತ್ತಿದ್ದವು. ಗುಂಪುಗುಂಪಾಗಿ ಆ ನಗರವನ್ನು ಹೊಕ್ಕು ಹೊರಕ್ಕೆ ಬರುತ್ತಿರುವ ಆನೆಕುದುರೆಗಳ ಪುರಜನಪರಿಜನಗಳ ಅಲ್ಲದೆ ಬಂಡಿಗಳಲ್ಲಿ ತುಂಬಿದ ಹೊನ್ನನ್ನು ತಂದುಕೊಡುವ ಸಾಮಂತರಾಜರುಗಳ ಸಂದಣಿಯು ಸಾವಿರೋಪಸಾವಿರವಾಗಿ ಇಟ್ಟಣಿಸಿ, ಆ ರಾಜ್ಯದ ವೈಭವವನ್ನು ತೋರಿಸುತ್ತಿದ್ದಿತು.

ಅರ್ಜುನನು ಇಂತಪ್ಪ ನಗರದಬಳಿಯಲ್ಲಿ ಕುದುರೆಯೊಡನೆ ಪಾಳೆಯವನ್ನು ಬೀಡುಗೊಂಡು ನಿಂತು ತನ್ನ ಆಪ್ತಸಚಿವನಾದ ಹಂಸಧ್ವಜನನ್ನು ಕರೆದು, ಮನೋಹರವಾಗಿ ಕಂಗೊಳಿಸುತ್ತಿರುವ ಈ ಪಟ್ಟಣವು ಯಾರದು ? ಇದನ್ನಾಳುವ ಅರಸನಾರು ? ಆತನು ನಮ್ಮ ಕುದುರೆಯನ್ನು ಕಟ್ಟಬಲ್ಲನೆ ? ಹೇಳು ಎಂದು ಕೇಳಿದನು. ಆಗ ಹಂಸಧ್ವಜನು ಎಲೈ ಅರ್ಜುನನೇ ! ಮಣಿಪುರವೆಂದು ಪ್ರಖ್ಯಾತವಾದ ಈ ನಗರವನ್ನು ನೀನು ಕೇಳಿಲ್ಲವೆ? ರಾಜಕುಲಮೌಳಿಯಾಗಿ, ಶೂರರಲ್ಲಿ ಅಗ್ಗಳಿಯೆನಿಸಿಕೊಂಡು, ವರ್ಣಾಶ್ರಮಾಚಾರ ನೀತಿಗಳನ್ನು ಬಿಡದೆ ಹಿತಚಿಂತಕನಾಗಿ ಪ್ರಜೆಗಳನ್ನು ಪಾಲಿಸುತ್ತಿರುವ ಬಭ್ರುವಾಹನನೆಂಬುವನು ಇಲ್ಲಿಗೆ ಧೊರೆಯಾಗಿರುವನು. ಸಕಲ ಮಂತ್ರತಂತ್ರಗಳನ್ನು ಬಲ್ಲವನಾಗಿ, ನೀತಿಖ್ಯಾತಿಗಳಿಂದ ಪ್ರಸಿದ್ಧನಾದ ಸುಬುದ್ಧಿಯೆಂಬುವನು ಇವನಿಗೆ ಮಂತ್ರಿಯಾಗಿರುವನು. ಪೌರಜನಪರಿಜನಂಗಳನ್ನು ಕಟ್ಟೆರಕದಿಂದ ಪರಿಪಾಲಿಸುತ್ತಿರುವ ಕಡುಗಲಿಯಾದ ಈ ಬಭ್ರುವಾಹನನಿಗೆ ಹೆದರಿ ನಾವೆಲ್ಲರೂ ಕಡಿಮೆಯಾದರೆ ದಂಡಿಸುವನೆಂಬ ಭಯದಿಂದ ಕೊರತೆಯಿಲ್ಲದಂತೆ ಒಂದು ಸಾವಿರಬಂಡಿ ಹೊನ್ನನ್ನು ತಂದು ಕಟ್ಟಳೆಯಮೇರೆಗೆ ಗಡುವಿಗೆ ಸರಿಯಾಗಿ ಒಪ್ಪಿಸುತ್ತಿರುವೆವು. ಆತನ ಅಟ್ಟಹಾಸವನ್ನು ಎಷ್ಟು ಹೇಳಲಿ ! ಒಂದೇಕಿವಿಯುಳ್ಳವಾಗಿ ಕಪ್ಪುಕಿವಿಯಿಂದ ರಾಜಿಸುವ ಕುದುರೆಗಳು ಮತ್ತು ನೈಬಣ್ಣದಿಂದ ಮುಗಿಲ್ಗಳನ್ನು ಸೋಲಿಸುವ ಆನೆಗಳೂ ಹಾಗಲ್ಲದೆ ರತ್ನಖಚಿತವಾದ ಛಂದೇರುಗಳೂ ಪರಿಮಿತಿಯಿಲ್ಲದಂತಿವೆ ಆ ಲೆಖ್ಖವನ್ನು ಆತನ ಬಳಿಯಲ್ಲಿರುವ ಕರಣಿಕರೇ

ಕಾಣರು. ಹೀಗಿರುವಲ್ಲಿ ಉಳಿದ ಆನೆ ಕುದುರೆ ರಥಪದಾತಿಗಳ ಪರಿಮಿತಿಯನ್ನು ತಿಳಿದವರಾರು ? ಭೂಪಾಲರಲ್ಲಿ ಅಗ್ರಗಣ್ಯನಾದ ಈ ಬಭ್ರುವಾಹನನು ನಿನ್ನ ಕುದುರೆಯನ್ನು ಕಟ್ಟದಿರುವನೆ ? ನಾನೇನು ಹೇಳಲಿ ! ಈ ಪಟ್ಟಣದಲ್ಲಿರುವ ಜನರೆಲ್ಲರೂ ಶ್ರೀಕಂಠಸ್ಮರಣೆಯನ್ನುಳಿದು ಮತ್ತೊಂದನ್ನು ಕಾಣರು. ಸದಾ ದಯಾಪರರು, ಸತ್ಯವಂತರು, ಆಚಾರಸಂಪನ್ನರು, ವೇದವೇದಾಂಗಗಳಲ್ಲಿ ಪಾರಂಗತರು, ಕೋಪವಿಲ್ಲದವರು, ಪ್ರಾಣಹಿಂಸೆಯನ್ನು ಕನಸಿನಲ್ಲಿಯೂ ಕಾಣರು ಆತ್ಮಸ್ವರೂಪವನ್ನು ತಿಳಿದವರು, ಅತ್ಯಂತ ಬಲಶಾಲಿಗಳು, ದಾನಶೌಂಡರು ಶುಚಿರ್ಭೂತರು, ಪ್ರತಾಪವಂತರು, ವೀರರು, ಹಾಗೂ ಅಲ್ಲದೆ ಕಲಾಕೋವಿದರೂ, ಅಸ್ತ್ರಶಸ್ತ್ರಾದಿ ವಿದ್ಯೆಗಳಲ್ಲಿ ನಿಪುಣರೂ ಆಗಿರುವರು. ಇಂತಿರುವ ಗಂಡು ಹೆಣ್ಣುಗಳಲೊಬ್ಬರೂ ಪಾತಕಿಗಳಲ್ಲ ಆದುದರಿಂದ ಶ್ರೀಹರಿಯು ಲಕ್ಷ್ಮೀ ಸಮೇತನಾಗಿ ಈ ನಗರವನ್ನಗಲದೆ ಎರಡನೆಯ ವೈಕುಂಠದಂತೆ ಅಲ್ಲಿಯೆ ನೆಲಸಿ ಪಾಲಿಸುತ್ತಿರುವನು.

ಎಲೈ ಪಾರ್ಥನೇ ! ನಿನ್ನ ಕುದುರೆಯು ಈ ನಗರವನ್ನು ಹೊಕ್ಕಿತ್ತು ಇದನ್ನು ಬಿಡಿಸುವವರನ್ನು ಈ ಭೂಮಂಡಲದಲ್ಲಿ ಕಾಣೆನು. ನಿನ್ನ ಭಾವನಾದ ಮುರವೈರಿಯ ಕರುಣವು ಹೇಗಿರುವುದೋ ನೋಡಬೇಕೆಂದು ಹೇಳುತಿದ್ದನು. ಎಲೈ ನೃಪವರನೇ ! ಹೀಗೆ ಅರ್ಜುನನು ಹಂಸಧ್ವಜನೊಡನೆ ಮಾತನಾಡುತ್ತಿರುವ ಕಾಲದಲ್ಲಿ ಒಂದಾನೊಂದು ಹದ್ದು ಹಾರಿಬಂದು ಅರ್ಜುನನ ಕಿರೀಟದ ತುದಿಯಲ್ಲಿ ಕಾಲೂರಿ ಕುಳಿತುಕೊಂಡಿತು. ಅದನ್ನು ಕಂಡು ನೀಲಧ್ವಜನೆ ಮೊದಲಾದ ಸಕಲ ವೀರರು ಅಪಜಯ ಸೂಚನೆಯನ್ನು ಕುರಿತು ಅರ್ಜುನನ ಕಾಲಗತಿಯು ಹೇಗಿರುವುದೋ ! ಶಿವಶಿವಾ ! ನಾವು ಕಾಣೆವು. ಮುಂದೆ ತಿಳಿಯಬೇಕಾಗಿದೆ ಎಂದು ಹಂಬಲಿಸುತ್ತಿದ್ದರು. ಇತ್ತಲಾದರೊ ಅರ್ಜುನಪಾಳೆಯದಲ್ಲಿಂತು ಚಿಂತಿಯೆ ಬೀಡುಗೊಂಡಿರಲು ಬಭ್ರುವಾಹನನು ಅರ್ಜುನನು ಕುದುರೆಯೊಡನೆ ಬಂದಿರುವನೆಂಬ ವಾರ್ತೆಯನ್ನು ಕೇಳಿ ತನ್ನ ಆಳುಗಳಮೂಲಕ ಆ ಕುದುರೆಯ ಹಿಡಿತರಿಸಿ, ಅದರ ಹಣೆಗೆ ಕಟ್ಟಿರುವ ಪಟ್ಟದ ಬಿರುದನ್ನೋದಿಕೊಂಡು ಅದನ್ನು ಲಾಯದಲ್ಲಿ ಕಟ್ಟಿಸಿದನು. ಕೇಳೈ ಜನಮೇಜಯರಾಯನೇ ! ಅಷ್ಟುಹೊತ್ತಿಗೆ ಸಂಧ್ಯಾಕಾಲವಾಯಿತು, ಮರಿದುಂಬಿಗಳು ತಾವರೆಗಳಲ್ಲಿ ಸೆರೆಯಾದವು, ಬಿಸಿಲ ಬವಣೆಯು ಬಯಲಾಯಿತು, ಹಕ್ಕಿಪಕ್ಷಿಗಳು ಗೂಡನ್ನು ಸೇರಿದವು, ದೊಡ್ಡದಾದ ಕತ್ತಲೆಯರಾಶಿಯು ಹೊತ್ತಿಕೊಂಡುರಿದಬಳಿಕ ಕಾಣುವ ಕೆಂಪಾದ ಕೆಂಡದ ಹಾಗೆ ಸೂರ್ಯಬಿಂಬವು ಪಶ್ಚಿಮದಿಕ್ಕಿನಲ್ಲಿ ಕಂಗೊಳಿಸಿತು, ಚಕ್ರವಾಕಗಳು ಕೊರಗುತಿದ್ದವು, ಇಂತಿರುತ್ತಿರುವಲ್ಲಿ ಅಂಧಕಾರವು ಅತ್ಯಂತ ಬಲ್ಮೆಯಿಂದ ಕವಿದು ಲೋಕವನ್ನು ಕತ್ತಲೆಯಾಗಿ ಮಾಡಿತು. ಬಳಿಕ ಕತ್ತಲೆಯಲ್ಲಿ ಕಾಣುವ

ಚಂದ್ರಬಿಂಬವನ್ನು ಕಂಡು ಉಕ್ಕುವ ಸಮುದ್ರದಂತೆ ವೀರನಾದದಿಂದ ಸಡಗರ ಪಡುತ್ತಿರುವ ಅರ್ಜುನನ ಸೇನೆಯು ಮಣಿಪುರದ ಹೊರವಳಯದಲ್ಲಿದ್ದಿತು. ಇತ್ತ ಬಭ್ರುವಾಹನನು ಸಂಧ್ಯಾಕರ್ಮವನ್ನು ತೀರಿಸಿ, ಸಂತೋಷದಿಂದ ತನ್ನ ಮಂತ್ರಿಸಾಮಂತ ಪರಿಜನರಿಂದೊಡಗೂಡಿ ಹತ್ತುಸಾವಿರ ಕಂಬಗಳಿಂದ ಹೊಳೆಯುವ ತನ್ನೋಲಗಶಾಲೆಗೆ ಬಂದು ರತ್ನಖಚಿತವಾದ ಸಿಂಹಾಸನದಲ್ಲಿ ಕುಳಿತು ಓಲಗಿಸಿಕೊಳ್ಳುತ್ತಿದ್ದನು.

ಚಂದ್ರಕಾಂತಶಿಲೆಯ ಹಾಸಿಗೆಯೂ, ನೀಲದ ಗೋಡೆಗಳೂ, ಮರಕತದ ಜಗುಲಿಯೂ, ವಜ್ರದ ಕಂಬಗಳೂ, ವೈಡೂರ್ಯದ ಲೋವೆಗಳೂ, ಗೋಮೇಧಿಕದ ಭೋದಿಗೆಗಳೂ, ಪುಷ್ಯರಾಗದ ತೊಲೆಗಳೂ, ಮಾಣಿಕದ ಕುಸುರಿಗಳಿಂದೆಸೆದ ಲೋವೆಮಾಡಗಳೂ, ಹವಳದ ಪುತ್ಥಳಿಗಳೂ, ರಮಣೀಯವಾದ ಜೋಡಣೆಯಿಂದ ಕಟ್ಟಿದ ಹೊನ್ನರನ್ನದ ಹೊದಿಕೆಯಿಂದ ರಾಜಿಸುತ್ತಿದ್ದ ಓಲಗಶಾಲೆಯೂ, ಹೂಮುಡಿವ, ತಿಲಕವನ್ನು ತಿದ್ದುವ, ಮುಖವನ್ನು ಮುರಿದುಕೊಂಡಿರುವ, ಕನ್ನಡಿಯನ್ನು ನಿರುಕಿಸುವ, ಕಾಡಿಗೆಯನ್ನಿಟ್ಟುಕೊಳ್ಳುವ, ಗಾನಮಾಡುತ್ತಿರುವ, ಕುಣಿವ, ತಾಳ ಮರ್ದಳ ವೀಣಾದಿಗಳನ್ನು ಬಾಜಿಸುವ ನಾನಾವಿಧವಾದ ಕಲಾಚಮತ್ಕಾರವನ್ನು ತೋರಿಸುವ ಸಜೀವಭಾವದಿಂದ ಹೊಳೆಯುವ ಪುತ್ಥಳಿಗಳಿಗೆ ಆಕರವಾಗಿ, ಇಂದ್ರನೀಲದ ಕಾಂತಿಯಿಂದಾದ ಕತ್ತಲೆಯೂ ಮುತ್ತುಗಳ ಹೊಳವಿನಿಂದೊಗೆದ ಬೆಳದಿಂಗಳೂ ಮಾಣಿಕ್ಯಗಳ ಕಾಂತಿಯಿಂದಾದ ಎಳವಿಸಿಲೂ, ಹವಳಗಳ ಬೆಳಕಿನಿಂದೆಸೆವ ಸಂಜೆಗೆಂಪೂ, ಒಟ್ಟಾಗಿ ಸೇರಿ ಹಗಲಿರುಳೆರಡೂ ಒಂದೆಕಡೆ ಇರುವಂತೆ ಓಸರಿಸದೆ ಕಾಣುತ್ತಿರುವುವು. ಅಲ್ಲದೆ ದಿವಾರಾತ್ರಿಗಳನ್ನು ಲೆಖ್ಖಿಸುವುದರಿದೆಂಬಂತೆ ದೇವೇಂದ್ರನ ಓಲಗಶಾಲೆಗಿಂತ ಎಂಟುಮಡಿ ಹೆಚ್ಚಾಗಿ ಆ ಸಭಾಮಂಟಪವು ವಿರಾಜಿಸುತ್ತಿದ್ದಿತು. ಅಂತಪ್ಪ ಮಂಟಪವನ್ನು ಕಸ್ತುರಿ ಜವಾಜಿಗಳಿಂದ ಸಾರಿಸಿ, ಕರ್ಪೂರ ಅಗರು ಚಂದನ, ಕುಂಕುಮ ರಜಂಗಳನ್ನು ಚೆಲ್ಲಿ ಧೂಪದೀಪಗಳಿಂದ ವಿರಾಜಿಸುವ ಕರ್ಪೂರತೈಲದ ಕೈದೀವಟಗೆಗಳಿಂದ ಅಲಂಕರಿಸಿ ಉತ್ತಮವಾದ ನವರತ್ನಗಳ ಕಾಂತಿಯಿಂದ ಕಳೆಗೊಂಡು ಸಕಲ ಸೌಭಾಗ್ಯದಿಂದ ಕೂಡಿ ಶೋಭಾಯಮಾನವಾಗಿದ್ದಿತು.

ಹೀಗೆ ಶೋಭಿಸುತ್ತಿರುವ ರಾಜಸಭೆಯಲ್ಲಿ ಕಿಕ್ಕಿರಿದಂತೆ ತುಂಬಿ ಕಪ್ಪಕಾಣಿಕೆಗಳನ್ನು ಒಪ್ಪಿಸಿ ಮುಂದೆ ಬಂದು ನಮಸ್ಕರಿಸುವ ರಾಜಾಧಿರಾಜರೂ ಅವರೊಡನೆ ಬಂದ ಮಂತ್ರಿ ಸಾಮಂತರ ಮಸ್ತಕನ್ಯಸ್ತವಾದ ಕಿರೀಟದಲ್ಲಿ ಕೆತ್ತಿರುವ ರತ್ನಗಳ ಕಾಂತಿಯು ದಿಕ್ಕುಗಳನ್ನು ಬೆಳಗುತ್ತಿರಲು, ಮುಜರೆ ಮಾಡುವ ಸಂದಣಿಯಿಂದ ಘರ್ಷಿಸಿ, ಗಜಬಜಿಯಲ್ಲಿ ಗದ್ದಿಸುವ, ಘರ್ಷಣದಿಂದ

ಮುತ್ತಿನಹಾರಗಳು ಹರಿದುಹೋಗಿ, ಸಭೆಯು ಚೌಸರದಲ್ಲಿಯೂ ಚೆಲ್ಲಿಹೋಗಲು ರಂಗವಲ್ಲಿಗಳನ್ನು ಬರೆದಂತೆ ಮಂಗಳಕರವಾಗಿ ಕಾಣುತ್ತಿದ್ದಿತು. ಈ ಆಸ್ಥಾನ ದಲ್ಲಿ ನೆರೆದ ರಾಜಸಮೂಹವನ್ನು ಕಂಡು ಆಕಾಶದಲ್ಲಿದ್ದ ದ್ವಿಜರಾಜನು ತನಗೆ ಇನ್ನು ವೃತ್ತಸಮರೂಪವು ತಕ್ಕುದಲ್ಲವೆಂದು ನೀಳವಾಗಿ ಚಂಚಲಸ್ಥಿತಿಯನ್ನು ಹೊಂದಿದಂತೆ, ಪದ್ಮಪತ್ರಾಕ್ಷಿಯರಾದ ಸುಂದರಾಂಗಿಯರ ಕರಗತ ಚಾಮರ ದ್ವಯಗಳು ವಿಚಾರಿಸುತ್ತಿದ್ದುವು. ಹೀಗೆ ವೈಭವದಿಂದೋಲಗವನ್ನು ಕೊಟ್ಟ ಬಭ್ರುವಾಹನನು ತನ್ನ ಮಂತ್ರಿ ಸಾಮಂತರನ್ನು ಕುರಿತು, ಅಯ್ಯಾ! ನಾವು ಅರ್ಜುನನ ಕುದುರೆಯನ್ನು ಕಟ್ಟಿದೆವು. ಆದಕಾರಣ ಹಿಂದುಳಿಯದಂತೆ ಕಡುಗಲಿಗಳಾದ ರಣಧೀರರು ಯುದ್ಧಕ್ಕೆ ಹೊರಡಲು ಸಿದ್ಧರಾಗಲಿ! ಎಂದು ಸುಬುದ್ಧಿಯನ್ನೆಚ್ಚರಿಸಿದನು. ಹೀಗಿರುತ್ತಿರಲು, ಅಂತಃಪುರದಲ್ಲಿ ಸಂತೋಷ ಚಿತ್ತಳಾಗಿ ಸದಾ ಅರ್ಜುನನ ಗುಣಾವಳಿಗಳನ್ನು ಧ್ಯಾನಿಸುತ್ತಿದ್ದ ಬಭ್ರು ವಾಹನನ ತಾಯಿ ಚಿತ್ರಾಂಗದೆಯು ತನ್ನ ದಾದಿಯರ ಮುಖದಿಂದೀವರ್ತಮಾನ ವನ್ನು ಕೇಳಿ, ಅಂತಃಪುರದಿಂದ ಹೊರಟು ಮಂದಗಮನದಿಂದ ಸುದ್ದಾನೆಯನ್ನು ಜರಿಯುತ್ತ ತನ್ನ ಮಗನ ಸಭೆಗೆ ಬಂದು ಮರ್ಯಾದೆಯಿಂದಿದಿರೆದ್ದು ನಮಸ್ಕರಿ ಸಿದ ಮಗನನ್ನು ಹರಸಿ ತಕ್ಕೈಸಿ, ಅಕ್ಕರೆಯಿಂದ ಆಲೋಕಿಸಿ, ಕಂದಾ! ನೀನು ಕುಂತೀಕುಮಾರನಾದ ಅರ್ಜುನನ ಕುದುರೆಯನ್ನು ಕಟ್ಟಿದೆಯಲ್ಲಾ! ಲೇಸಾ ಯಿತು. ಆಹಾ! ಈ ವಿಧವಾದ ಗುರುದ್ರೋಹವನ್ನು ಮಾಡುವುದಕ್ಕೆ ನಿನಗೆ ಮನವು ಎಂತು ಒಡಂಬಟ್ಟಿತು. ಈ ಕ್ಷುದ್ರಬುದ್ಧಿಯನ್ನು ಎಲ್ಲಿ ಕಲಿತೆ! ನನ್ನ ಗಂಡನು ನಿನಗೆ ಹಗೆಯಾದನೆ? ಮಗನಾಗಿ ಹುಟ್ಟಿ, ಮಹಿಮಾ ನ್ವಿತನಾದ ತಂದೆಯಮೇಲೆ ಕತ್ತಿಯನ್ನು ಕಟ್ಟಬಹುದೆ? ಇದು ನ್ಯಾಯವೆ? ಆಹಾ! ಅತ್ಯಂತ ರೋಷದಿಂದ ಅರ್ಜುನನ ಕುದುರೆಯನ್ನು ಕಟ್ಟಿದ ನಿನ್ನ ರಾಜಕಾರ್ಯವು ಸರ್ವೋತ್ತಮವಾಯಿತು. ದೇವತೆಗಳು ಅಮೃತಕ್ಕಾಗಿ ಸಮುದ್ರವನ್ನು ಕಡದರೆ ವಿಷವು ಹುಟ್ಟಿದಂತೆ ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದೆ? ಹಾ! ಇನ್ನು ಮಾತನಾಡಿ ಫಲವೇನು? ಮಾತಬಾರದ ಕೆಲಸವನ್ನು ಮಾಡಿದೆ! ಎಂದು ಕೋಪದಿಂದ ಗದರಿಸಿದಳು.

ಜನನಿಯು ಗದರಿಸಿದ ನುಡಿಗಳಿಗೆ ಹೆದರಿ ಬಭ್ರುವಾಹನನು ಅತ್ಯಂತ ಭಯಭಕ್ತಿಯಿಂದ ತಾಯ ಪಾದಗಳಿಗೆರಗಿ, ಅಮ್ಮಾ! ಸೈರಿಸು! ಅರಸುಗಳಿಗೂ ಆಳ್ತನಕ್ಕೂ ಉಚಿತವಾದ ತೆರದಿಂದ ನಾನು ಕುದುರೆಯನ್ನು ಕಟ್ಟಿದೆನು. ಇದು ನಿಮಗೆ ಸಮಾಧಾನವಿಲ್ಲವಾದರೆ, ನಿಮ್ಮ ಚಿತ್ತಾನುಸಾರವಾಗಿ ನಡೆಯು ವುದಕ್ಕೆ ಸಿದ್ಧನಾಗಿರುವೆನು. ಕೋಪಿಸಬೇಡಿ! ಆತುರದಿಂದ ಫಲವೇನು? ಅಂತರಂಗದ ಆಲೋಚನೆ ಏನು? ಹೇಳಿ ಎಂದು ಬೇಡಿಕೊಂಡನು. ಕಂದಾ!

ಅರ್ಜುನನು ನನ್ನನ್ನು ಬಿಟ್ಟುಹೋದಂದಿನಿಂದಲೂ ಆತನಗಲಿಕೆಯಿಂದುಂಟಾದ ಸಂತಾಪದಿಂದ ನಾನು ಕೊರಗುತ್ತಿದ್ದೆನು. ಈಗಲಾದರೊ ದೈವಾಧೀನದಿಂದ ತಾನಾಗಿ ಇಲ್ಲಿಗೆ ಬಂದಿರುವನು ಈ ಕಾಲದಲ್ಲಿ ನಾನು ಹೇಗೆ ನನ್ನ ಸಂಕಟವನ್ನು ಮರೆವಣಾಚಿ ಆತನನ್ನು ಉಪಚರಿಸದಿರಲಿ? ನೀನು ಸತ್ಪುತ್ರನಾದರೆ ಈಗ ನಿನ್ನ ಸಂತೋಷಭಾವದ ಭಕ್ತಿಯಿಂದ ತಂದೆಯಾದ ಅರ್ಜುನನನ್ನು ಕಾಣಿಸಿಕೊಂಡು ಕಪ್ಪಕಾಣಿಕೆಗಳನ್ನು ಕೊಟ್ಟು, ಸರ್ವಸ್ವವನ್ನೂ ಆತನ ಪಾದಗಳಿಗೊಪ್ಪಿಸಿ, ಆತನ ಶತ್ರುಗಳಾದ ಪರರಾಯರಲ್ಲಿ ನಿನ್ನ ಶೌರ್ಯವನ್ನು ತೋರಿಸು. ಧರ್ಮಪುತ್ರನಿಗೆ ಅನುಕೂಲವಾಗಿ ಯಾಗವನ್ನು ಆಗಮಾಡಿಸು. ದುಷ್ಟಸಂತಾನದಂತೆ ದುಃಖವನ್ನು ಬೆಳೆಸಬೇಡ! ದುಂದುಗವಿಲ್ಲದ ಅಂದಿನಿಂದಲೂ ನಡೆದುಬಂದಿರುವ ನನ್ನ ಪತಿವ್ರತಾಧರ್ಮಕ್ಕೆ ಕುಂದಕವನ್ನು ತರಬೇಡ ಎಂದು ಮಗನಿಗೆ ಬುದ್ಧಿಯನ್ನು ಹೇಳಿ, ಅರ್ಜುನನ ಆಗಮನವನ್ನು ಕೇಳಿ ಚಿತ್ರಾಂಗದೆಯು ಆನಂದದಿಂದ ಉಬ್ಬಿದಳು.

ಹೀಗೆ ತನಗೆ ಬುದ್ಧಿಗಲಿಸಿದ ತಾಯನ್ನು ಮರ್ಯಾದೆಯಿಂದ ಮನೆಗೆ ಕಳುಹಿಸಿ, ತನ್ನ ಮಂತ್ರಿಯನ್ನು ಕರೆದು ಅಯ್ಯಾ! ಸುಬುದ್ಧಿ ನಾವು ಅರಿಯದೆ ಅರ್ಜುನನ ಕುದುರೆಯನ್ನು ಕಟ್ಟಿದೆವು, ಈಗ ಆತನನ್ನು ಕಾಣುವುದು ಉಚಿತವೊ! ಅಥವಾ ಅಲ್ಲವೊ? ಹೇಳು ಎಂದು ಬಭ್ರುವಾಹನನು ಕೇಳಿದನು. ಅಯ್ಯಾ! ಧರ್ಮರಾಯನಿಗೆ ನಿಮ್ಮ ತಂದೆಯಾದ ಅರ್ಜುನನು ತಮ್ಮನಾಗಬೇಕು. ಇನ್ನು ಯೋಚಿಸುವುದೇಕೆ? ಆತನೇ ಬೆಂಗಾವಲಾಗಿ ಬಂದಿರುವ ಕುದುರೆಯನ್ನು ಕಟ್ಟುವುದು ನ್ಯಾಯವಲ್ಲ. ಆದಕಾರಣ ಅನುಮಾನವನ್ನು ತೊರೆದು, ಪಟ್ಟಣವನ್ನಲಂಕರಿಸಿ, ಗುಡಿತೋರಣಗಳನ್ನು ಕಟ್ಟಿಸು. ಚತುರಂಗಸೇನೆಯೂ ಪುರಜನರೂ, ಸಾಮಂತರಾಜರೂ, ಸುಂದರೀಮಣಿಯರೂ ಅಲಂಕರಿಸಿಕೊಂಡು ಅರ್ಜುನನನ್ನು ಕಾಣುವುದಕ್ಕೆ ಸಿದ್ಧರಾಗಲಿ. ಕನ್ಯಾಮಣಿಯರು ಮಂಗಳಕರವಾದ ಲಾಜೆದಧಿ ದೂರ್ವಾಕ್ಷತೆಗಳಿಂದ ಒಡಗೂಡಿದ ಆರತಿಗಳನ್ನು ಹಿಡಿದು ನಡೆತರಲಿ, ನಿನ್ನ ಸಕಲ ಸಾಮ್ರಾಜ್ಯವನ್ನೂ ತಂದೆಗೊಪ್ಪಿಸುವನಾಗು ಕನ್ನಡಿ ಕಲಶಗಳನ್ನೂ ಮಂಗಳ ವಾದ್ಯಗಳನ್ನೂ ಮುಂಗುಡಿಯ ಮೇಳದಲ್ಲಿ ನಿಲಿಸು! ಎಂದು ಹೇಳಿದ ಮಂತ್ರಿಯಮಾತಿಗೆ ಒಪ್ಪಿ ಹಸಾದವನ್ನಿತ್ತನು ಬಳಿಕ ಬಭ್ರುವಾಹನನು ತನ್ನ ಭಂಡಾರದ ಸಕಲವಿಧವಾದ ಉತ್ತಮ ವಸ್ತುಗಳನ್ನೂ ತರಿಸಿ, ತರುಣಿ ಗೋವೃಷಭ ಮಹಿಷಿ, ಗಜ, ಅಶ್ವ ಕನಕರಥ ಛತ್ರಚಾಮರಗಳನ್ನು ಸಂಗ್ರಹಿಸಿ, ದಿವ್ಯರತ್ನಗಳನ್ನೂ, ಪಟ್ಟೆಪೀತಾಂಬರಗಳನ್ನೂ, ನಾನಾವಿಧವಾದ ಪರಿಮಳದ್ರವ್ಯಂಗಳನ್ನೂ, ಚಾಮರ ಬೀಸಣಿಗೆ ಬಿಳುಗೊಡೆಗಳನ್ನು ಅರ್ಜುನನ ಕಾಣಿಕೆಗೆ ತರುವಂತೆ ತನ್ನವರಿಗೆ ಗೊತ್ತುಮಾಡಿದನು.

ಎಲೈ ಜನಮೇಜಯರಾಯನೇ ಕೇಳು. ಅಷ್ಟುಹೊತ್ತಿಗೆ ಕೋಳಿಕೂಗಿತು, ಜಾರೆಯರ ಮನಸ್ಸು ಬೆದರಿತು, ಮೂಡದೆಸೆ ಕೆಂಪಗೆ ಹೊಳೆಯಿತು, ತಂಗಾಳಿಯು ಆವರಿಸಿತು, ಹಕ್ಕಿಗಳು ಉಲಿದೆದ್ದವು, ತಾವರೆಗೆಳು ಅರಳಿದವು, ದುಂಬಿಗಳು ಮೊರೆದುವು, ಕತ್ತಲೆಯು ನಾಯವಾಯಿತು, ಕನ್ನೈದಿಲೆ ಕೊರಗಿತು, ಜನರು ಎಚ್ಚರಗೊಂಡರು, ದೇಗುಲದ ವಾದ್ಯಗಳು ಮೊಳಗಿದವು, ಭಗವಂತನಾದ ಸೂರ್ಯನು ಮಿಗಿಲಾದ ತನ್ನ ಕಿರಣಗಳಿಂದ ಜಗನ್ಮಂಡಲವನ್ನು ಶೋಭಾಯಮಾನವಾಗಿ ಮಾಡಿದನು. ಬಳಿಕ ಅರ್ಜುನನು ಪ್ರಾತಃಕಾಲದ ಸಂಧ್ಯಾಕ್ರಿಯೆಗಳನ್ನಾಚರಿಸಿ, ಹರಿಯನ್ನು ಧ್ಯಾನಿಸಿ, ಪರಮಭಕ್ತಿಯಿಂದ ದಿವ್ಯ ಮಂಗಳಮೂರ್ತಿಗೆ ನಮಸ್ಕರಿಸಿ, ತನ್ನ ಸೇನಾಜನರನ್ನು ಸಂಬೋಧಿಸಿ ಕುದುರೆಯನ್ನು ಬಿಡಿಸಿಕೊಳ್ಳುವ ತವಕದಿಂದಿರುತ್ತಿರಲು, ಆತನ ಮನೋಭಿಪ್ರಾಯವನ್ನು ತಿಳಿದು ವೀರರು, ತಂತಮ್ಮ ಸೇನೆಗಳೊಡನೆ ಯುದ್ಧಸನ್ನದ್ಧರಾದರು.

ಕೂಡಲೆ ಅನುಸಾಲ್ವನ ಸೇನೆಯೂ, ಯಾದವರ ಚತುರಂಗಬಲವೂ ವೃಷಕೇತುವಿನ ಪಾಯದಳವೂ, ಯೌವನಾಶ್ವನ ಸೈನ್ಯವೂ, ಹಂಸಧ್ವಜನ ಮೋಹರವೂ, ನೀಲಧ್ವಜನ ಪಡೆಯೂ, ಒಟ್ಟಾಗಿ ಕೂಡಿ ಪ್ರದ್ಯುಮ್ನನ ಅಧಿಪತ್ಯಕ್ಕೊಳಗಾಗಿ ಆತನ ನೇಮದಿಂದ ನಲಿದು ಯುದ್ಧಾಭಿಲಾಷೆಯಿಂದ ಮುಂಕೊಂಡು ನಡೆಯಿತು.

ಇತ್ತ ಬಭ್ರುವಾಹನನು ಸೂರ್ಯೋದಯಕ್ಕೆ ಮೊದಲೆ ಎದ್ದು ನಿತ್ಯಕರ್ಮಂಗಳನ್ನೆಸಗಿ, ತನ್ನ ಮಂತ್ರಿಯಾದ ಸುಬುದ್ಧಿಯಿಂದೊಡಗೂಡಿ, ಅರ್ಜುನನ ಕುದುರೆಯನ್ನು ತೆಗೆದುಕೊಂಡು ಮಂತ್ರಿಪರಿವಾರ ಸೇನಾಸಮೇತನಾಗಿ ಕಪ್ಪಕಾಣಿಕೆಯ ಮುಡುಪುಗಳೂ, ಕೈಗಾಣಿಕೆಯ ಕಮನೀಯ ರಥ ಗಜಾಶ್ವಗಳೂ ವಿಲಾಸಿನೀಜನ ಗೋಮುಹಿಷಿಯರೂ ಪಟ್ಟೆ ಪೀತಾಂಬರ ವ್ಯಜನ ವೈಡೂರ್ಯಗಳೂ, ತನ್ನನ್ನು ಹಿಂಬಾಲಿಸುತ್ತಿರಲು, ಮಂಗಳಾಂಗಿಯರಾದ ಮುತ್ತೈದೆಯರು ಸೇಸೆದಳಿದೆತ್ತುವ ಆರತಿಗಳೊಡನೆ ತೋರಣಸ್ತಬಕಗಳಿಂದ ಅಲಂಕೃತವಾದ ಗುಡಿತೋರಣಗಳೊಡನೆ ನಡೆತಂದು ಅರ್ಜುನನ ಪಾಳಯವನ್ನು ಹೊಕ್ಕು ಬಲವತ್ತರವಾಗಿ ಭುಲ್ಲವಿಸುತ್ತಿರುವ ರೋಮಾಂಚನದಿಂದುಬ್ಬಿ, ಅರ್ಜುನನನ್ನು ಕಾಣಿಸಿಕೊಂಡು ಆತನ ಪಾದದಮೇಲೆ ನವರತ್ನಗಳನ್ನು ರಾಶಿಯಾಗಿ ಸುರಿದು, ಕಪ್ಪಕಾಣಿಕೆಗಳನ್ನೊಪ್ಪಿಸಿ, ಮಣಿದೆರಗಿ, ಭಕ್ತಿಯಿಂದ ಕೈಮುಗಿದು ನಿಂತುಕೊಂಡನು. ಅದನ್ನು ಕಂಡು ಆಶ್ಚರ್ಯಯುಕ್ತನಾಗಿ ಅರ್ಜುನ ಬಭ್ರುವಾಹನನನ್ನು ಕುರಿತು ಎಲೈ ರಾಜನೇ! ನೀನು ಯಾರು? ಇಲ್ಲಿಗೆ ಬರಲು ಕಾರಣವೇನು? ನಿನ್ನ ದೇಶವಾವುದು ಎಂದು ಪ್ರಶ್ನೆಮಾಡಿದನು. ಕೂಡಲೆ ಬಭ್ರುವಾಹನನು ತಂದೆಯೇ ನಾನು ನಿನ್ನ ಮಗನು, ನನ್ನ ತಾಯಿ ಚಿತ್ರಾಂಗದೆ,

ಸಾಕಿದವಳು ಉಲೂಪಿ, ಪೂರ್ವದಲ್ಲಿ ನೀನು ತೀರ್ಥಯಾತ್ರೆಗೆ ಬಂದಿದ್ದು ಹಸ್ತಿನಾವತಿಗೆ ಹೊರಟುಹೋದ ಬಳಿಕ ನಿನ್ನ ಪತ್ನಿಯಾದ ಚಿತ್ರಾಂಗದೆಯ ಬಸುರಿನಲ್ಲಿ ನಾನು ಹುಟ್ಟಿದೆನು. ತಂದೆಯೆಂಬುದನ್ನರಿಯದೆ ಮೂಢಮತಿ ಯಾಗಿ ಹುಡುಗತನದಿಂದ ಕುದುರೆಯನ್ನು ಕಟ್ಟಿದ ಅಪರಾಧವನ್ನು ಕ್ಷಮಿಸಿ ಕಾಪಾಡಬೇಕು. ಎಂದು ಭಯ ಭಕ್ತಿಗಳಿಂದ ಅಡಿಗಡಿಗೂ ನಮಸ್ಕರಿಸು ತ್ತಿದ್ದನು. ಹೀಗೆ ವಿನಯದಿಂದ ತನ್ನನ್ನು ಬೇಡಿಕೊಳ್ಳುತ್ತಿರುವ ಮಗನಾದ ಬಭ್ರುವಾಹನನನ್ನು ನೋಡಿ ಆಕ್ಕರೆಯಿಂದ ಮಾತನಾಡಿಸಿ, ಮನ್ನಿಸದೆ, ದುಗುಡ ದಿಂದ ಬೆಗಡುಗೊಂಡವನಹಾಗೆ ಕುಪಿತವಾಗಿರುವ ಅರ್ಜುನನ ಭಾವವನ್ನು ತಿಳಿದು, ಹಂಸಧ್ವಜ, ನೀಲಕೇತು, ಪ್ರದ್ಯುಮ್ನ ಮೊದಲಾದ ಪಟುಭಟರು ಆಶ್ಚರ್ಯಯುಕ್ತರಾಗಿ, ಅತ್ಯಂತ ಕರುಣಾರಸಯುಕ್ತರಾಗಿ ಮರುಗುತ್ತ ಎಲೈ ಪಾರ್ಥ ! ಇದೇನು ? ನಿನ್ನ ನಡತೆ ವಿಪರೀತವಾಗಿದೆ ? ನಿನಗೆ ಮಗನಾಗಿ ಲೋಕೈಕವೀರನಾಗಿ, ಭೂಪಾಲರಲ್ಲಿ ಅಗ್ಗಳಿಸುನಾಗಿ, ಶ್ಲಾಘ್ಯವಾದ ಗುಣ ಚರಿತ್ರನಾಗಿ ವಿಷ್ಣುಭಕ್ತನೆನಿಸಿ, ಧರ್ಮಜ್ಞನಾದ ಈ ಬಭ್ರುವಾಹನನು ನಿನ್ನ ಪಾದಗಳಿಗೆರಗಿ ಬೇಡಿಕೊಳ್ಳುತ್ತಿದ್ದರೂ ನೀನು ಆತನನ್ನು ಮನ್ನಿಸದಿರುವುದು ನ್ಯಾಯವೆ? ಎಂದು ಸಂತೈಸಿದರು.

ಎಲೈ ಜನಮೇಜಯರಾಯನೇ ಲಾಲಿಸು ಆ ಮಾತುಗಳನ್ನು ಕೇಳಿ, ಅರ್ಜುನನು ಕುಪಿತನಾಗಿ ತನ್ನ ತಲೆ ಹೋಗುವುದಕ್ಕೆ ಕಾಲೆ ಹೊಣೆ ಎಂಬ ನಾಣ್ನುಡಿಯನ್ನರಿಯದೆ ಆ ಮಗನಾದ ಬಭ್ರುವಾಹನನನ್ನು ಒದೆದು, ಎಲಾ ಹಂದೆ ! ನೀಚ ! ನನಗೆ ಹುಟ್ಟಿದವನಾಗಿದ್ದರೆ ಯುದ್ಧಕ್ಕೆ ಹೆದರುತ್ತಿದ್ದೆಯಾ? ಹಿಂದೆ ನನ್ನ ಮಗನಾದ ಅಭಿಮನ್ಯುವು ಅಸಹಾಯನಾಗಿ ಅಸದಳದ ಸಮೂಹ ದಲ್ಲಿ ಕಾದಿ ತನ್ನ ಪ್ರಾಣವನ್ನು ಕಳೆದುಕೊಂಡನಲ್ಲವೆ ? ಅವನನ್ನು ಬಿಟ್ಟರೆ ನನಗೆಬೇರೆ ಮಕ್ಕಳು ಉಂಟೆ?ನೀನು ನನ್ನಮಗನೇ ಸಹಜವಾಗಿದ್ದರೆ ಮೊದಲು ಕುದುರೆಯನ್ನು ಕಟ್ಟಿ ಆಬಳಿಕ ಯುದ್ಧಮಾಡಲು ಹೆದರುತ್ತಿದ್ದೆಯಾ? ಸಿಂಹದ ಹೊಟ್ಟೆಯಲ್ಲಿ ನರಿಯು ಹುಟ್ಟುವುದುಂಟೆ ? ನೀನು ಚಿತ್ರಾಂಗದೆಗೆ ವೈಶ್ಯ ನಿಂದಾದ ಮಗನಲ್ಲದೆ ನನ್ನ ಪುತ್ರನಲ್ಲ! ಎಲಾ! ಕುಲಗೇಡಿ ಹೆಣ್ಣುಹೇಡಿ? ಯುದ್ಧಮಾಡಲಾರದೆ ಕುದುರೆಯನ್ನೇಕೆ ತಂದೆ ? ಇಂಥ ಹಂದೆಯಾದ ನಿನಗೆ ದಂಬದ ಸೈನ್ಯವೂ ವ್ಯರ್ಥವಾದ ಆಯುಧಗಳೂ ಏಕೆ? ಛೀ! ಛೀ!! ನಿನ್ನ ಜೀವದಾಸೆಯನ್ನು ಸುಡು ! ಆಹಾ ! ಆಶ್ಚರ್ಯ. ನಿನ್ನ ತಾಯಿಯಾದ ಚಿತ್ರಾಂಗದೆಯು ಗಂಧರ್ವನಾಯಕನಿಗೆ ಮಗಳಾದರೂ ನರ್ತಕಿಯಾದಳಲ್ಲಾ! ಅವಳ ಹೊಟ್ಟೆಯಲ್ಲಿ ಹುಟ್ಟಿ ರಾಜ ವೇಷವನ್ನು ಹಾಕಿಕೊಂಡ ನಿನಗೆ ಈ ನಾಟಕದ ಚಿತ್ರವು ನ್ಯಾಯವಾಗಿದೆ. ನೀನು ಪೌರುಷದಿಂದ ಕುದುರೆಯನ್ನು

ಕಟ್ಟಿದುದು ಚೆನ್ನಾಯಿತು ಹೋಗು. ಇಲ್ಲಿ ನಿಲ್ಲಬೇಡ ನಡೆ! ನಡೆ!! ಎಂದು ಗರ್ವದಿಂದ ಬೈದು ಭಂಗಿಸಿದನು.

ಆಗಲಾ ಬಭ್ರುವಾಹನನು ಬಿರುನುಡಿಗಳನ್ನಾಡುತ್ತ ದುರದುರನೆ ತನ್ನ ಮುಖವನ್ನು ನೋಡುತ್ತಿರುವ ಅರ್ಜುನನ ಬಗೆಯನ್ನು ಮಂತ್ರಿಯಾದ ಸುಬುದ್ಧಿಗೆ ತೋರಿಸಿ ಆಹಾ! ಅನ್ಯಾಯವಾಗಿ ಗರ್ವದಿಂದ ನನ್ನ ತಾಯಿಯನ್ನು ಜರಿದು, ನನ್ನನ್ನು ಭಂಗಿಸಿ ಕಳುಹಿಸಿದೆಯಲ್ಲಾ! ರಣರಂಗದಲ್ಲಿ ನಿನ್ನ ತಲೆಯನ್ನು ಕೆಡಹದಿದ್ದರೆ ನೀನು ಹೇಳಿದ ಮಾತೆಲ್ಲವೂ ದಿಟವೆ ಹೌದು. ಇನ್ನು ನನ್ನ ಪರಾಕ್ರಮವನ್ನು ನೋಡು ಎಂದು ಹೇಳಿ ತಾನು ತಂದಿದ್ದ ಕಪ್ಪಕಾಣಿಕೆಯ ವಸ್ತುಗಳನ್ನು ತೆಗೆಸಿಕೊಂಡು ಮಂತ್ರಿ ಸಚಿವ ಸಾಮಂತ ಪುರಜನ ಪರಿಜನರನ್ನೂ ತನ್ನೊಡನೆ ಕರೆದುಕೊಂಡು ಕುದುರೆ ಸಹಿತವಾಗಿ ರಾಜಧಾನಿಯಾದ ಮಣಿಪುರಕ್ಕೆ ಬಂದು ಚತುರಂಗ ಸೇನೆಯನ್ನು ಸಮತಳಿಸಿ ಯುದ್ಧಕ್ಕೆ ಸನ್ನಾಹಮಾಡುತ್ತಿದ್ದನು.

ಕೇಳೈ ಜನಮೇಜಯರಾಯನೆ! ಇನ್ನು ಹೇಳುವುದೇನು, ಆಬಳಿಕ ಅರ್ಜುನ ಬಭ್ರುವಾಹನರಿಗೆ ಕಾಳಗವು ಕೈಗಟ್ಟಿತು. ಹಿಂದೆ ರಘುರಾಮನು ಅಶ್ವಮೇಧ ನಿಮಿತ್ತದಿಂದ ತನ್ನ ಮಕ್ಕಳಾದ ಕುಶಲವರಲ್ಲಿ ಮಾಡಿದ ಯುದ್ಧದಂತೆ ಅರ್ಜುನನಿಗೆ ಬಭ್ರುವಾಹನನೊಡನೆ ಯುದ್ಧವು ಕೈಗಣ್ಮಿತು ಎಂದು ಹೇಳಿದನು. ಅದನ್ನು ಕೇಳಿ ಜನಮೇಜಯರಾಯನು ಎಲೈ ಜೈಮಿನಿಋಷಿಯೇ! ಪೂರ್ವದಲ್ಲಿ ದಶರಥ ಪುತ್ರನಾದ ಶ್ರೀರಾಮನು ತನ್ನ ಮಕ್ಕಳಾದ ಲವಕುಶರೊಡನೆ ಏಕೆ ಯುದ್ಧಮಾಡಿದನು. ಅದನ್ನು ಸವಿಸ್ತಾರವಾಗಿ ಮೊದಲಿಂದ ಕೊನೆಯವರಿಗೂ ಹೇಳುವನನಾಗೆಂದು ಬೇಡಿಕೊಂಡನು. ಆಗ ಜೈಮಿನಿಮುನೀಂದ್ರನು ಜನಮೇಜಯರಾಯನ ಪರಿಯನ್ನು ತಿಳಿದು, ಅಕ್ಕರೆಯಿಂದ ಕೇಳುವ ರಸಿಕಜನರಿಗೆ ರೋಮಾಂಚನದಿಂದ ಕೂಡಿದ ಆನಂದವು ಉಕ್ಕುವಂತೆ ಶ್ರೀ ರಾಮಾವತಾರದಲ್ಲಿ ದೇವಪುರನಿಲಯ ಲಕ್ಷ್ಮೀರಮಣನು ತನ್ನ ಮಕ್ಕಳಾದ ಲವಕುಶರೊಡನೆ ಯುದ್ಧಭೂಮಿಯಲ್ಲಿ ಕಾದಾಡಿದ ಕಥೆಯನ್ನು ಕಾರಣ ಸಹಿತವಾಗಿ ವಿಸ್ತರಿಸಿ, ಆಮೂಲಾಗ್ರವಾಗಿ ಹೇಳಿದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿ ನಾಗೆಶರ್ಮಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಹದಿನೇಳನೆಯ ಸಂಧಿ ಸಂಪೂರ್ಣಂ.

ಶ್ರೀ. ಶ್ರೀ. ಶ್ರೀ.

# ಹದಿನೆಂಟನೆಯ ಸಂಧಿ.

## ರಾಮಾಯಣದ ಕುಶಲವರಕಾಳಗದ ಕಥೆ.

ಎಲೈ ಜನಮೇಜಯರಾಯನೇ ! ಇಕ್ಷ್ವಾಕು ಮೊದಲಾದ ಸೂರ್ಯವಂಶದವರ ಏಳಿಗೆಯನ್ನೂ, ಶ್ರೀರಾಮನು ತನ್ನ ಮಕ್ಕಳಾದ ಲವಕುಶರೊಡನೆ ಕಾದಿದ ಕಥೆಯನ್ನೂ, ನನಗೆ ತಿಳಿದಮಟ್ಟಿಗೆ ಹೇಳುವೆನು ಲಾಲಿಸು. ಸಚ್ಚಿದಾನಂದರೂಪನಾದ ಮಹಾವಿಷ್ಣುವು ರಾಮಾಭಿಧಾನದಿಂದ ಪುತ್ರಕಾಮೇಷ್ಟಿಯಲ್ಲಿ ದಶರಥರಾಯನಿಗೆ ಮಗನಾಗಿ, ಸಂಪತ್ಸೌಭಾಗ್ಯಗಳಿಗೆ ತೌರುಮನೆಯಾದ ಅಯೋಧ್ಯಾಪುರದಲ್ಲಿ ಹುಟ್ಟಿದನು. ತಾಯಿಯ ಬಸುರನ್ನು ತೊಳೆದು ನಿರ್ಮಲನಾಗಿ ಹುಟ್ಟಿ, ಭರತ ಶತ್ರುಘ್ನ ಲಕ್ಷ್ಮಣರಿಂದೊಡಗೂಡಿ ಅರಮನೆಯಲ್ಲಿ ಬೆಳೆದು, ವಿಶ್ವಾಮಿತ್ರನ ಯಾಗವನ್ನು ಕಾಯ್ದು ತಾಟಕಿಯೆಂಬ ರಾಕ್ಷಸಿಯನ್ನು ಕೊಂದು, ಅಹಲ್ಯಾದೇವಿಯ ಶಾಪವನ್ನು ಪರಿಹರಿಸಿ, ಮಿಥಿಲಾನಗರಕ್ಕೆ ಬಂದು, ಈಶ್ವರನ ಧನಸ್ಸನ್ನು ಮುರಿದು ಸೀತೆಯನ್ನೊಲಿಸಿ ಮದುವೆಯಾಗಿ, ಅತ್ಯಂತ ಉತ್ಸಾಹಭರಿತನಾಗಿ ಶ್ರೀರಾಮನು ಅಯೋಧ್ಯಾನಗರಕ್ಕೆ ಬಂದನು. ಹೀಗೆ ನವಯೌವನವಿಲಾಸ ಮನೋಜ್ಞನಾಗಿರುವ ಶ್ರೀರಾಮನಿಗೆ ಪಟ್ಟವನ್ನು ಕಟ್ಟಬೇಕೆಂದು ದಶರಥನು ಪ್ರಯತ್ನಮಾಡಿ ಕಿರಿಯ ಹೆಂಡತಿಯಾದ ಕೈಕೇಯಿಯಿಂದ ತಡೆಯಲ್ಪಟ್ಟು ಖಿನ್ನನಾಗಲು ಕೂಡಲೆ ಶ್ರೀರಾಮನು ಪಿತೃವಾಕ್ಯಪರಿಪಾಲನೆಗಾಗಿ ಹನ್ನೆರಡುವರ್ಷ ವನವಾಸಕ್ಕೆ ಹೊರಟುಹೋದನು. ಅದನ್ನು ಕೇಳಿ ಅತ್ಯಂತವಾದ ಪುತ್ರಶೋಕದಿಂದ ದಶರಥನು ಸತ್ತುಹೋದನು. ಆ ವಾರ್ತೆಯನ್ನು ತಮ್ಮನಾದ ಭರತನಿಂದ ಕೇಳಿ ಅವನನ್ನು ಸಂತೈಸಿ, ಹಿಂದಿರುಗಿ ಪಟ್ಟಣಕ್ಕೆ ಕಳುಹಿಸಿ, ಅಸದಳವಾದ ಅರಣ್ಯವನ್ನು ಹೊಕ್ಕು ಅತ್ಯಂತ ಕ್ರೂರರಾದ ರಾಕ್ಷಸರ ಸಮೂಹವನ್ನು ಕೊಂದು, ತಪೋಧನರಾದ ಮುನಿಗಳನ್ನು ಸಂರಕ್ಷಿಸಿ ತನ್ನ ಹೆಂಡತಿಯಾದ ಸೀತೆಯೊಡನೆ ಶ್ರೀರಾಮನು ದಂಡಕಾರಣ್ಯವೆಂಬ ವಿಂಧ್ಯಾಟವಿಯನ್ನು ಸೇರಿದನು. ಅಲ್ಲಿ ತನ್ನನ್ನು ಕಂಡು ಮೋಹಿಸಿ ಮದುವೆಯಾಗೆಂದು ಪೀಡಿಸಿದ ಶೂರ್ಪನಖಿಯನ್ನು ಭಂಗಿಸಿ, ಖರದೂಷಣಾದಿಗಳನ್ನು ಕೊಂದು, ಸ್ವರ್ಣಮೃಗನಿಮಿತ್ತವಾಗಿ ಲಕ್ಷ್ಮಣನು ಅಗಲಿಹೋಗಲು ಮೋಸದಿಂದ ರಾವಣನು ಸೀತೆಯನ್ನು ಕದ್ದುಕೊಂಡು ಹೋದುದನ್ನು ತನ್ನನ್ನು ಕಾಣಬೇಕೆಂಬ ವಿರಹದಿಂದ ಬಿದ್ದಿದ್ದ ಜಟಾಯುವಿನಿಂದ ತಿಳಿದು, ಅವನಿಗೆ ಮುಕ್ತಿಯನ್ನು ಕೊಟ್ಟು, ಲಕ್ಷ್ಮಣನೊಡನೆ ಹೊರಟು ಮುಂದೆಬರುತ್ತ ಕಬಂಧನೆಂಬ ರಾಕ್ಷಸನನ್ನು ಕೊಂದು, ಶಬರಿಯ ಇಷ್ಟಾರ್ಥವನ್ನು ಸಲಿಸಿ, ಕರುಣಾರಸಭರಿತನಾಗಿ

ಮೊದಲು ಆಂಜನೇಯನನ್ನು ಕಂಡು, ಆಬಳಿಕ ಸುಗ್ರೀವನಿಗೆ ಅಭಯವನಿತ್ತು ತನ್ನ ಬಾಣದಿಂದ ವಾಲಿಯನ್ನು ಕೊಂದು, ರಾವಣನ ಗರ್ವಭಂಗ ಮಾಡ ಬೇಕೆಂದು ಯೋಚಿಸಿ ಕಪಿಗಳನ್ನೂ ಕರಡಿಗಳನ್ನೂ ಗುಂಪುಕೂಡಿಸಿ ಸೀತೆಯನ್ನು ಹುಡುಕಿಕೊಂಡು ಬರುವಂತೆ ಶೂರನಾದ ಹನುಮಂತನನ್ನು ಕಳುಹಿಸಿದನು. ಆಂಜನೇಯನು ಸಮುದ್ರವನ್ನು ದಾಟಿ ಸೀತೆಗೆ ಮುದ್ರಿಕಾ ಪ್ರದಾನವಂಗೈದು, ಹಿಂದಿರುಗಿ ಬರುವಾಗ ನಿಶ್ಶಂಕೆಯಿಂದ ಅಶೋಕವನವನ್ನು ಮುರಿದು, ರಾಕ್ಷಸ ರನ್ನು ಕೊಂದು, ಅಕ್ಷಯಕುಮಾರನನ್ನು ಸಂಹರಿಸಿ ಬಿರುದಿನ ಕಟ್ಟಳೆಗಾಗಿ ಇಂದ್ರಜಿತುವಿನ ಬ್ರಹ್ಮಾಸ್ತ್ರಕ್ಕೆ ಸಿಕ್ಕಿಬಿದ್ದು ಆತನ ಆಜ್ಞೆಗೊಳಪಟ್ಟು, ಬಾಲಕ್ಕೆ ಹಚ್ಚಿದ ಬೆಂಕಿಯಿಂದ ಲಂಕಾನಗರವನ್ನು ಸುಟ್ಟು ರಾಮನಬಳಿಗೆ ಬಂದು ಶುಭ ವಾರ್ತೆಯನ್ನು ಹೇಳಿದನು. ಆಗ ಹನುಮಂತನನ್ನು ಶ್ರೀರಾಮನು ಸಂತೈಸಿ ಮನ್ನಣೆಯಿಂದ ಕಂಡು, ಕಪಿಸೈನ್ಯದೊಡನೆ ಕಡಲತಡಿಯನ್ನು ಸೇರಿ ತನ್ನನ್ನು ಮರೆಹೊಕ್ಕುಬಂದ ವಿಭೀಷಣನನ್ನು ಆದರಿಸಿ ಆತನಿಗೆ ಲಂಕಾರಾಜ್ಯದ ಪಟ್ಟವ ನ್ನಿತ್ತು, ಸಮುದ್ರಕ್ಕೆ ಸೇತುವಂ ಕಟ್ಟಿ, ಯುದ್ಧಕ್ಕೆ ಮುಳಿದು ಬಂದ ರಾಕ್ಷಸರ ಕುಲದ ಹೆಸರಿಲ್ಲದಂತೆ ಅಸಾಧ್ಯರಾದ ಅಸುರರನ್ನು ಕೊಂದು ಲಂಕಾನಗರದ ಕೋಟೆಯನ್ನು ಧೂಳೀಪಟಲಮಾಡಿ, ರಾವಣನ ಪದವಿಯನ್ನು ವಿಭೀಷಣನಿಗೆ ಕೊಟ್ಟು, ದೇವಸಮೂಹವನ್ನು ಸಂರಕ್ಷಿಸಿ, ಸೆರೆಯಲ್ಲಿದ್ದ ಸೀತೆಯನ್ನು ಅಗ್ನಿಮು ಖದಿಂದ ಪರೀಕ್ಷಿಸಿ, ಪಾವನೆಯೆಂದು ಪರಿಗ್ರಹಿಸಿ, ಮೂರುಲೋಕಗಳೂ ಮೆಚ್ಚು ವಂತೆ ಉತ್ಸವಯುಕ್ತನಾಗಿ, ಸೀತಾ, ಲಕ್ಷ್ಮಣ, ಸುಗ್ರೀವ, ಹನುಮಂತ, ವಿಭೀ ಷಣರೊಡನೆ ಪುಷ್ಪಕವಿಮಾನದಲ್ಲಿ ಕುಳಿತು, ಭರತನನ್ನು ಬದುಕಿಸುವುದಕ್ಕಾಗಿ ಆತುರದಿಂದ ಅಯೋಧ್ಯಾಪುರವನ್ನು ಸೇರಿ, ವಿಮಾನದಿಂದಿಳಿದು, ಭರತಶತ್ರು ಘ್ನರನ್ನು ಆಲಿಂಗಿಸಿಕೊಂಡು, ಗುರುಗಳಾದ ವಸಿಷ್ಠರಿಗೆ ನಮಸ್ಕರಿಸಿ, ಕೈಕೆಮೊ ದಲಾದ ಮಾತೃವರ್ಗಕ್ಕೆ ಮಣಿದು, ಅರಮನೆಯ ಊಳಿಗದವರನ್ನೂ, ಆಪ್ತಮಂ ತ್ರಿಗಳನ್ನೂ, ಅಖಿಲಪ್ರಜೆಗಳನ್ನೂ, ಪ್ರೀತಿಯಿಂದ ಕಾಣಿಸಿಕೊಂಡು ತನ್ನ ಆಗ ಮನವನ್ನೆ ಎದುರುನೋಡುತ್ತಿದ್ದ ತಾಯಿಯಾದ ಕೌಸಲೆಗೆ ಶ್ರೀರಾಮನು ಪೊಡ ಮಟ್ಟನು. ಬಂದೆರಗಿದ ಕಂದನನ್ನು ಬಾಚಿ ತಬ್ಬಿಕೊಂಡು ಕೈದಳಗಳಿಂದ ಮೈದಡವಿ ಮೋಹದಿಂದಮುದ್ದಿಸಿ ಮೈಯುಲ್ಲಿದ್ದ ಬಾಣದಗಾಯಗಳನ್ನು ಕಂಡು ಮನದಲ್ಲಿ ಮರುಗುತ್ತ ಅಪ್ಪಾ ! ನಿನ್ನ ಕೋಮಲವಾದ ಶರೀರವನ್ನು ಹೊಡೆದು ನೋಯಿಸಿದ ಪಾಪಿಗಳಾರು ? ಅಯ್ಯೋ ! ನನ್ನ ಹೊಟ್ಟೆಯು ದುಃಖಾಗ್ನಿ ಯಿಂದ ಬೇಯುತ್ತಿರುವುದಲ್ಲಾ ಎಂದು ನಿಟ್ಟುಸುರುಬಿಡುತ್ತ ಮುಗ್ಧೆಯಾಗಿ ಮೂಢಭಾವದಿಂದ ತನ್ನ ಸವತಿಯಾದ ಕೈಕೆಯನ್ನು ಬೈದು ದುಃಖಿಸುತ್ತಿರುವ ಕೌಸಲ್ಯೆಯನ್ನು ಸಂತೈಸಿ, ಒಂದಾನೊಂದು ಶುಭಮುಹೂರ್ತವನ್ನು ಗೊತ್ತು

ಮಾಡಿ, ಆ ದಿನದಲ್ಲಿ ಸಕಲ ಸುರನರರೂ ಯಕ್ಷಕಿನ್ನರರೂ ಗರುಡ ಗಂಧರ್ವರೂ ಮುನಿಜನಗಳು ತನ್ನನ್ನು ಸೇವಿಸುತ್ತಿರಲು ಉತ್ಸಾಹದಿಂದ ನಾಲ್ಕು ಸಮುದ್ರಗಳ ನಡುವಣ ಭೂಮಿಯನ್ನು ರಾಜ್ಯಾಭಿಷೇಚನದಮೂಲಕ ವಹಿಸಿ ಪಟ್ಟಾಭಿಷಿಕ್ತನಾಗಿ ಸಕಲ ರಾಜಮಂಡಲಿಯವರಿಂದಲೂ ಕಪ್ಪಕಾಣಿಕೆಗಳನ್ನು ತೆಗೆದುಕೊಳ್ಳುತ್ತ ಒಂಭತ್ತು ಸಾವಿರ ವರ್ಷಗಳು ರಾಜ್ಯವನ್ನಾಳಿದನು. ಬಳಿಕ ಶ್ರೀರಾಮನ ರಾಜ್ಯಭಾರದಲ್ಲಿ ನೆಲವೆಲ್ಲವೂ ಯೂಪಸ್ತಂಭಗಳಿಂದ ತುಂಬಿಕೊಂಡಿತು, ಮನೆಗಳೆಲ್ಲವೂ ಜಾತರೂಪಮಯವಾದವು, ಉದ್ಯಾನವನಗಳೆಲ್ಲವೂ ಅರಗಿಳಿಮರಿ ಕೋಗಿಲೆಗಳ ಕಲರವದಿಂದ ದಟ್ಟವಾಯಿತು, ಪರ್ವತದ ತಪ್ಪಲುಗಳೂ ಶಿಖರಗಳೂ ಸಹ ವಿಹರಿಸುತ್ತಿರುವ ಇಂದ್ರಗೋಪಮಯವಾಯಿತು, ತವೋರಾಶಿಯು ರತ್ನಕಾಂತಿಯಿಂದ ವಿರಾಜಿಸಿತು. ಅದರಂತೆ ಶ್ರೀರಾಮನ ಪ್ರತಾಪವು ಮೂರುಲೋಕಗಳನ್ನು ಆವರಿಸಿತು. ಹಣ್ಣು ಕಾಯಿ ಹೂಗಳಿಂದ ತುಂಬದ ಮರಬಳ್ಳಿಗಳೂ ತಣ್ಣಿತ್ತಾದ ನೀರುಳ್ಳ ಕೆರೆತೊರೆಗಳೂ ಕಾಲುವೆಗಳೂ ಇಲ್ಲದಿರುವ ಭೂಮಿಯೂ, ಹೆಣ್ಣುಗಂಡುಗಳಲ್ಲಿ ನಿಜಾಚಾರವನ್ನು ತಪ್ಪಿನಡೆಯುವ ಜೀವಿಗಳೂ, ಕನಸಿನಲ್ಲಿಯೂ ಆ ರಾಜ್ಯದಲ್ಲಿ ಕಾಣುತ್ತಿರಲಿಲ್ಲ. ಹಸುಗಳಲ್ಲಿ ಹಳಿಗೆಚ್ಚಲಿಕ್ಕಿ ಹದವರಿತು ಕೊಡದತುಂಬ ಹಾಲುಕರೆಯದ ಆಕಳೂ, ಮನೋಹರವಾದ ಗೂಡುಗಳಿಲ್ಲದ ಪಶುಪಕ್ಷಿ ಮೃಗಗಳೂ ಇಲ್ಲವಾದವು. ಅಲ್ಲದೆ ಸರ್ವಸುಖದಾಯಕವಾದ ರಾಮರಾಜ್ಯದಲ್ಲಿ ಅಕಾಲಮರಣವು ಗಗನಕುಸುಮದಂತೆ ನಾಮಮಾತ್ರದಿಂದಿರುತ್ತಿದ್ದಿತು. ದೇವನದಿಗೆ ಯಮುನೆಯೂ, ಕ್ಷೀರಸಾಗರಕ್ಕೆ ಹರಿಯೂ, ಸರಸ್ವತಿಗೆ ಮುಂಗುರಳೂ ಚಂದ್ರಮಂಡಲದಲ್ಲಿ ಕಳಂಕವೂ, ಪರಮೇಶ್ವರನಿಗೆ ಕಾಳಿಕಾಂಬೆಯೂ, ಐರಾವತಕ್ಕೆ ಮದಧಾರೆಯೂ, ಆದಿಶೇಷನಿಗೆ ಹಾಲಾಹಲವೂ, ಆಭರಣವಾಗಿರುವುದನ್ನು ಕಂಡು, ಈ ವಿಧವಾದ ಕ್ಷತಿಯು ತನಗಿಲ್ಲವೆಂದು ಶ್ರೀರಾಮನ ಕೀರ್ತಿಕಾಂತೆಯು ಅತ್ಯಂತ ಶುಭ್ರವಾದ ತನ್ನೊಡಲನ್ನು ಮೂರುಲೋಕಗಳಿಗೂ ತೋರಿಸುತ್ತ ಮೆರೆಯುತ್ತಿದ್ದಳು.

ಇಂತು ಸಕಲಸಂಪತ್ತುಗಳಿಂದ ಕೂಡಿದ ರಾಜ್ಯಪದವಿಯನ್ನು ಪಡೆದು ವರ್ಣಾಶ್ರಮಾಚಾರ ಧರ್ಮವನ್ನು ಬಿಡದೆ ಒಂಭತ್ತುಸಾವಿರ ವರುಷ ಪರಿಪಾಲಿಸಿದರೂ, ಕುಲಾಭಿವೃದ್ಧಿಗೆ ತಕ್ಕುದಾದ ಸಂತಾನವನ್ನು ಕಾಣದೆ, ದುಗುಡದಿಂದ ಮರುಗುತ್ತ ಶ್ರೀರಾಮನು ಒಂದಾನೊಂದುದಿನ ಏಕಾಂತವಾಸದಲ್ಲಿರುವ ತನ್ನ ಹೆಂಡತಿಯಾದ ಸೀತೆಯೊಡನೆ ಇಂತೆಂದನು. ಪ್ರಿಯೆ ! ಸೂರ್ಯವಂಶವು ನನ್ನಲ್ಲಿ ಕೊನೆಗಂಡಿತು. ಇನ್ನುಮುಂದೆ ಸಂತಾನವಾಗದಿದ್ದರೆ ನಾನೇ ಕುಲಗೇಡಿಯಾಗುವೆನು. ಆಹಾ ! ಅದೂ ಹಾಗಿರಲಿ ! ಕಾಲಚಕ್ರದಂತೆ ಅಲೆದಲೆದು ಸುತ್ತುತ್ತಿರುವ ಈ ಸಂಸಾರಚಕ್ರಕ್ಕೆ ಸಿಕ್ಕಿದ ಮಾನವರಿಗೆ, ಸಂಸಾರಭ್ರಾಂತಿಯನ್ನು

ಬಿಡಿಸುವ ಮಕ್ಕಳ ಮುಖದರ್ಶನವೆ ವಿಶ್ರಾಂತಿಕರವಾದ ಸುಖವಲ್ಲವೆ ಅಕಟ ಕಟಾ ? ಸಂತಾನಹೀನನಾಗಿ ನಾನು ಹೇಗೆ ಬಾಳಲಿ ! ಅಯ್ಯೋ ! ತಿಳಿನೀರಿನಿಂದ ತುಂಬಿದ ಕೊಳಕ್ಕೆ ಚೆಲುವಾದ ತಾವರೆಗಳೂ, ನಕ್ಷತ್ರಗಳಿಂದ ವ್ಯಾಪ್ತವಾದ ಗಗನಕ್ಕೆ ಚಂದ್ರಬಿಂಬವೂ, ನವಯೌವನವಿಲಾಸದಿಂದ ಮನೋಜ್ಞೆಯಾದ ಮಾನಿನಿಗೆ ಮದುವೆಯಾದ ಗಂಡನೂ, ಧಾರ್ಮಿಕರಾದ ಪ್ರಜೆಗಳಿರುವ ರಾಜ್ಯಕ್ಕೆ ಧರ್ಮಿಷ್ಠನಾದ ಧೊರೆಯೂ, ಐಶ್ವರ್ಯಸಮೃದ್ಧಿಯಿಂದ ಬಾಳುವನ ವಂಶಕ್ಕೆ ಮುಂಗುಡಿಯಂತಿರುವ ಮುದ್ದುಮಗನೂ ಇಲ್ಲವಾದರೆ ಶೋಭಿಸುವುದೆ ? ಹೇಳು ಎಂದು ಪ್ರಲಾಪಿಸಿದನು. ಆಗ ಸೀತೆಯು ಪ್ರಾಣನಾಥಾ ! ನೀನು ಹೇಳುವುದೆಲ್ಲ ನಿಜ, ಪುತ್ರವತಿಯಾಗುವ ಭಾಗ್ಯವು ಸಾಮಾನ್ಯವಾಗಿ ಎಲ್ಲ ಹೆಂಗಸರಿಗೂ ದೊರೆವುದೆ ? ಪೂರ್ವಜನ್ಮದಲ್ಲಿ ಮಾಡಿದ ಪುಣ್ಯವಿಶೇಷದಿಂದಲ್ಲದೆ ಬರಿಯ ಬಯಕೆಯಿಂದ ಮಕ್ಕಳನ್ನು ಪಡೆಯಲಾಗುವುದೆ ? ಒಳಗಡೆಯಲ್ಲಿ ಚೆಲುವಾದ ಪರಿಮಳವನ್ನು ಹುದುಗಿಸಿಕೊಂಡು ಬಳ್ಳಿಯ ಕೊನೆಯಲ್ಲಿ ಬಳುಕುತ್ತಿರುವ ಕುಟ್ಮಲದಂತೆ ಗರ್ಭಲಾಂಛನವನ್ನು ಹೊಂದುವ ಪುಣ್ಯವು ಎಲ್ಲಹೆಂಗಸರಿಗೂ ಲಭಿಸಲಾರದು ? ಹಾ ! ಆಹಾ ! ಏನು ಹೇಳಲಿ ! ಪ್ರಾಣಕಾಂತ !! ಮಕ್ಕಳಾಡುವ ಬಾಲಲೀಲೆಯನ್ನು ಕಣ್ಣಾರೆನೋಡಿ ತೊದಲುಗೂಡಿದ ಇನಿಮಾತುಗಳನ್ನು ಕಿವಿಗಳಿಂದ ಕೇಳಿ, ಮುದ್ದಿನಮುದ್ದೆಯಂತಿರುವ ಮಗುವನ್ನು ಮೋಹದಿಂದಪ್ಪಿಕೊಂಡು, ಹಾರಾಡುತ್ತಿರುವ ಮುಂಗುರುಳುಗಳ ನರುಗಂಪನ್ನು ಆಘ್ರಾಣಿಸಿ, ಜೊಲ್ಲೊಗುತ್ತಿರುವ ಮೊಲ್ಲುಡಿಗಳನ್ನು ಚುಂಬಿಸಿ, ಪಂಚೇಂದ್ರಿಯ ಸುಖದಿಂದ ಸಂತುಷ್ಟರಾಗಿ, ಪ್ರೀತಿಯಿಂದ ನಲಿಯುವವರು ಮತ್ತೆಂತಹ ಪುಣ್ಯವಂತರೋ ಕಾಣೆ ! ಲೀಲೆಯಿಂದ ತನ್ನಬಳಿಗೆ ಬಂದು, ಮೇಲುಹೊದಿಕೆಯನ್ನು ಸೆಳೆದು, ಕಮಲಕ್ಕೆ ಸಮಾನವಾದ ಕಣ್ಣೊನೆಗಳಿಂದ ತಾಯ ಮೊಗವನ್ನು ನೋಡಿ ಕಾಲತುದಿಗಳನ್ನಗಲಮಾಡಿ ಅಂಬೆಗಾಲಿಕ್ಕಿ, ಅಲಸದಂತೈತಂದು, ಕೈಗಳನ್ನು ಹಿಡಿದುಕೊಳ್ಳುವ ಮುದ್ದುಮಗುವನ್ನು ಮೋಹದಿಂದೆತ್ತಿಕೊಂಡು ಜೋಲಾಡುತ್ತಿರುವ ಮುತ್ತಿನಹಾರವನ್ನು ಓರೆಮಾಡಿ ಮೇಲುದನ್ನು ದೂರತೆಗೆದು, ಹಾಲು ತುಂಬಿ ಹದವಾಗಿರುವ ಎದೆಯನ್ನೂಡಿಸಿ, ಬಳಿಕ ಅಲಂಕೃತವಾದ ಆಂದೋಳನದಲ್ಲಿಟ್ಟು ಸಂತೋಷದಿಂದ ತೂಗಿ ಮಲಗಿಸುವ ತಾಯಿಯು ಲೋಕದಲ್ಲೆಲ್ಲ ಭಾಗ್ಯಶಾಲಿಯೆನಿಸುವಳು ಎಂದು ನಾನಾಬಗೆಯಿಂದ ಬಿಸುಸುಯ್ದು ತಳಮಳಗಾದಳು.

ಎಲೈ ಜನಮೇಜಯರಾಯನೇ ಲಾಲಿಸು ಹೀಗೆ ಸೀತಾರಾಮರಿಬ್ಬರೂ ಮಕ್ಕಳಿಲ್ಲವೆಂದು ಹೆಕ್ಕಳವಾದ ಚಿಂತೆಗೆ ತವರ್ಮಡಲನ್ನು ತೆತ್ತು ನರಳುತ್ತಿರುವಲ್ಲಿ ಕುಲಗುರುವಾದ ವಸಿಷ್ಠಋಷಿಯು ಅವರ ಬಳಿಗೆ ಬಂದು ಅಭ್ಯುತ್ಥಾನ

ಅರ್ಘ್ಯಪಾದ್ಯಾದಿಗಳನ್ನು ಸ್ವೀಕರಿಸಿ ಚಿಂತೆಗೆ ಕಾರಣವನ್ನು ವಿಚಾರಿಸಿ ಇನ್ನು ಮುಂದೆ ನಿಮಗೆ ಸಂತಾನಲಾಭವಾಗುವುದು ಇದಕ್ಕಾಗಿ ಚಿಂತಿಸಬೇಡ ಆನಂದ ದಿಂದಿರಿ ಎಂದು ಹೇಳಿ ಆಶೀರ್ವದಿಸಿ ಹೊರಟುಹೋಗಲು ಸತಿಪತಿಗಳಿಬ್ಬರೂ ಅತುಳಾನಂದದಿಂದ ಇರುತ್ತಿದ್ದರು. ಆಗನಾವಿನ ಮನೋಜ್ಞತೆಯ ಸೊಂಪೊ! ವಿರಹಿಗಳ ಕೈಕದಂಪೊ! ವಸಂತಕಾಲದ ಪೆಂಪೋ! ಹೇಳಲಾಗದೆನ್ನುವಂತೆ ಬೇಸಗೆಯು ತಲೆಹಾಕಿತು. ಆ ವಸಂತಕಾಲದಲ್ಲಿ ಹಂಸಪಕ್ಷಿಗಳು ತಾವರೆ ಗೊಳಗಳನ್ನೂ, ಕೋಗಿಲೆಗಳು ಚಿಗುರಿದ ಮಾವಿನ ಮರನನ್ನೂ, ಚಕೋರ ಸಮೂಹವು ಬೆಳದಿಂಗಳನ್ನೂ, ಮರಿದುಂಬಿಗಳು ಅರೆಬಿರಿದ ತಾವರೆಗಳನ್ನೂ, ಅರಗಿಳಿಗಳುಸರಸತರವಾದ ಫಲಪುಷ್ಪಕಿಸಲಯಗಳಿಂದಿಡಿದ ಉದ್ಯಾನವನವನ್ನೂ ವಿರಹಿತಗಳು ತಂತಮ್ಮ ಪ್ರಿಯರನ್ನೂ, ಅಕ್ಕರೆಯಿಂದ ಹುಡುಕಿಕೊಂಡು ಹೋಗಿ ಆಶ್ರಯಿಸುತ್ತಿದ್ದರು. ಲೋಕದ ಜನಗಳು ಮಂದಮಾರುತನನ್ನೂ ಮೈಸೆಗೆಗೆ ತಣ್ಣಸವನ್ನೀಯುವ ತಿಳಿಗೊಳಗಳನ್ನೂ, ತಳಿರಪಾಸೆಯಲ್ಲಿ ಪೊಳೆವ ನೆಳಲುಗಳನ್ನೂ ಸೇರಲಾರಂಭಿಸಿದರು. ಇಂತು ನಿಬಿಡವಾದ ವಸಂತ ಕಾಲದಲ್ಲಿ ಸೀತಾದೇವಿಯು ಋತುಮತಿಯಾದಳು ಮಲ್ಲಿಗೆಯಂತೆ ಮುಗುಳು ನಗೆ ಕುಂದಕುಟ್ಮಲದಂತೆ ಅಂದವಾದ ದಂತಪಂಕ್ತಿ ತಳಿರ್ದುಟಿ ಮರಿದುಂಬಿ ಗಳಂತಿರುವ ಮುಂಗುರುಳು ಕುಸುಮಗಂಧ ಮನೋಹರವಾದ ಕೋಗಿಲೆಯ ಧ್ವನಿ, ಸಂಪಗೆಯ ಮೈಸೊಂಪು, ಶುಕಸದೃಶವಾದ ವಾಣಿ, ಫುಲ್ಲಲೋಚನ ಚಾಂದ್ರವದನ ಮೊದಲಾದ ಮೈಯ ಅಂಗಗಳಿಂದ ಕೂಡಿ ಹೊಳೆಯುವ ವಸಂತ ಲಕ್ಷ್ಮಿಯಹಾಗೆ ಸೀತಾದೇವಿಯು ಕಂಗೊಳಿಸುತ್ತಿದ್ದಳು ಹೀಗಿರುವ ಸೀತೆಗೆ ಮೊಡವೆಗಳು ಮೂಡಿರುವ ಮುಖವೂ, ಸುಗಂಧಯುಕ್ತವಾದ ಮೈಯಯೂ, ಆಭರಣಗಳ ಅಡ್ಡಿಯನ್ನುಳಿದಿರುವ ಮೈಬೆಡಗೂ ಹೂಗಳಿಲ್ಲದೆ ಹೊಳೆಯು ತ್ತಿರುವ ಬಳಲುಮುಡಿಯೂ, ನಿರ್ಮಲವಾದ ಕಣ್ಣುಗಳೂ, ಹೊಳೆಯುವ ಹಣೆಯೂ, ಕನ್ನಡಿಯಂತಿರುವ ಕೆನ್ನೆಯೂ, ಕಠಿಣವಾದ ಮೊಲೆಗಳೂ, ಮಾಧ ವೀಲತೆಯನ್ನು ಅನುಕರಿಸುವ ತೋಳುಗಳೂ, ನಿರಿಗೆಗಳ ಗುರುತಿಲ್ಲದೆ ಮಾಸಿದ ಹೋದ ವಸ್ತ್ರವೂ, ಮುಂದುವರಿದ ಮೋಹಾಸ್ಪದವಾದ ಲಜ್ಜೆಯೂ, ಋತು ಮತಿಯಾದ ಸೀತಾದೇವಿಗೆ ಆಭರಣಗಳ ಅಂದಕ್ಕಿಂತಲೂ, ಅಧಿಕವಾದ ಕಾಂತಿ ಯನ್ನು ಬೀರುತ್ತಿದ್ದಿತು. ಬಳಿಕ ಸ್ತ್ರೀಧರ್ಮಕ್ಕನುಸಾರವಾಗಿ ನಾಲ್ಕನೆಯ ದಿನ ನಿರ್ಮಲಸ್ನಾನದಿಂದ ಪರಿಶುದ್ಧಳಾಗಿ ಆಭರಣಗಳ ಅಲಂಕಾರದಿಂದ ಅಂದವನ್ನು ಪಡೆದು ಮೂರುಲೋಕಗಳನ್ನು ಅರೆನಿಮಿಷದಲ್ಲಿ ಗೆಲ್ಲುವೆನೆಂದು ಮನ್ಮಥನು ಮಸೆದ ಬಾಣಗಳೆಂಬ ಮಿಂಚಿನಿಂದಲೂ, ಘನಪೀವರಪಯೋಧರ ಗಳೆಂಬ ಮೋಡಗಳಿಂದಲೂ ಅವೃತವಾದ ಬಾಣವೋ! ಎನ್ನುವಹಾಗೆ ಸೀತಾ

ದೇವಿಯು ಕಂಗೊಳಿಸಿದಳು ಹೊಳೆಯುತ್ತಿರುವ ಕುಡಿಗಣ್ಣ ಮೇಖಲಾಕಿಂಕಿಣಿಯ ಘನರವವೆಂಬ ವೊಳಗಿನಿಂದಲೂ, ಹೊಳೆಯುತ್ತಿರುವ ಕಂಕಣಗಳ ಕಾಂತಿಯೆಂಬ ತುಂತುರುಗಳಿಂದಲೂ ಸರಸತನವಾದ ಲಾವಣ್ಯಜಲದಿಂದ ತುಂಬಿ ಹರಿಯುವ ನದಿಗಳಿಂದಲೂ, ಭರಿತಕಬರಿಯ ಬರ್ಹಿಯೇಲಿಯಿಂದಲೂ, ಮಳೆಗಾಲದ ಏಳ್ಗೆಯನ್ನು ಎಚ್ಚರಿಸುವ ಸೀತೆಯ ರೀತಿಯನ್ನು ಕಂಡು ರಾಮನ ಮನಸ್ಸೆಂಬ ಚಾತಕವು ಆನಂದ ಪಡುತ್ತಿದ್ದಿತು. ಆ ಬಳಿಕ ಮನೋಹರವಾದ ರತ್ನದೀಪಿಕೆಗಳಿಂದಲೂ, ವಜ್ರದ ಮಂಚದಿಂದಲೂ, ಹಂಸತೂಲಿಕಾತಲ್ಪಗಳಿಂದಲೂ, ಮೊಗ್ಗು ಮಲ್ಲಿಗೆಯ ಹೂಗಳಿಂದಲೂ, ಬಗೆಬಗೆಯಾದ ರಾಜಯೋಗ ಪದಾರ್ಥಗಳಿಂದ ನಿಬಿಡವಾಗಿ ಸಜ್ಜಿಮನೆಯಲ್ಲಿ, ಮನೋಹರವಾದ ರಾಮಮೂರ್ತಿಯು ಕುಳಿರಲು ನಸುಲಜ್ಜೆಯೂ, ಹುಸಿನಗೆಯೂ, ಕಿರುಬೆಮರೂ, ಆತುರದ ಅತಿಶಯವೂ, ತಲೆದೋರುತ್ತಿರಲು, ಮಂದಗಮನದಿಂದ ಸೀತೆಯು ಶಯನ ಮಂದಿರವನ್ನು ಹೊಕ್ಕು ಗಂಡನ ಬಳಿಯನ್ನು ಸೇರಿದಳು.

ಪಾಲ್ಗಡಲ ಮಧ್ಯದಲ್ಲಿ ಲೀಲೆಯಿಂದೊಪ್ಪಿ ಶೇಷಶಯನದಲ್ಲಿ ಶ್ರೀದೇವಿಯೊಡನೆ ಮಲಗಿ ಶ್ರೀಹರಿಯು ಬೋಗಿಸುವ ರೀತಿಯಿಂದ ಶ್ರೀರಾಮನು ಜಾನಕಿಯಿಂದೊಡಗೂಡಿ ತನ್ನ ಮಾನುಷ ಲೀಲೆಗೆ ಇದು ಸಾರ್ಥಕವೆನ್ನುವಹಾಗೆ ಸಕಲ ವಿಧವಾದ ರತಿಶಾಸ್ತ್ರದ ಮಾರ್ಗಗಳನ್ನರಿದು ಮೈಯುಬ್ಬಿ ಮನವೊಲಿದು, ಕಾಂತಿಗುಂದಿ, ಕಳೆಗೆಟ್ಟು, ಹಿಮ್ಮೆಟ್ಟಿ, ಕೈಮರೆದು ವಿಘಾತಿಯಂ ಪೊಂದಿ, ಸೋತು, ಬೆಂಗೊಡದಂತೆ ಸಮರತಿಯಲ್ಲಿ ನೆರೆದು ಅನುರಾಗರಸವು ಅನ್ಯೋನ್ಯವಾಗಿ ಹರಿದಾಡುತ್ತಿರಲು, ಸರಸವಾದ ಪುಳಕಂಗಳಿಂದ ಉಕ್ಕುವ ಅಂಗಜಶ್ರಮವನ್ನು ಅಲ್ಲೋಲ ಕಲ್ಲೋಲವಾದ ಸಮುದ್ರದಂತೆ ಗಂಭೀರವಾಗಿ ತುಂಬಿಕೊಂಡು ವಿಚಾರರಹಿತರಾಗಿ ಅನ್ಯೋನ್ಯ ಭಾವದಿಂದ ಏಕರೂಪವಾಗಿ ರಮಿಸುತ್ತಿದ್ದರು. ಹೀಗೆ ಸಮರತಿಯಲ್ಲಿ ಸೇರಿರುವ ದಂಪತಿಗಳಲ್ಲಿ ಸೀತೆಗೆ ಶ್ರವಣ ನಕ್ಷತ್ರದ ನಾಲ್ಕನೆಯ ಪಾದದಲ್ಲಿ ಗರ್ಭಾದಾನವಾಯಿತು. ಆದಕಾರಣ ಯಾವುದಾದರೂ ಒಂದು ಕಾರಣದಿಂದಿವಳು ಗಂಡನನ್ನು ತೊರೆದು ಪರಮಂಡಲದಲ್ಲಿ ಪುತ್ರರನ್ನು ಪಡೆಯುವಳೆಂಬುದನ್ನು ಅರಿಯದೆ ಜಾನಕಿಯು ಬಸುರಾದ ಸಂತೋಷದಿಂದ ನಲಿಯುತ್ತಿದ್ದಳು.

ಹೀಗೆ ಬಸುರಾದ ಸೀತೆಗೆ ಸಣ್ಣಗಿದ್ದ ನಡುವು ಬಿಣ್ಪಡರಿತು. ತ್ರಿವಳಿಗಳು ಅಡಗಿದವು. ತೆಳ್ಳಗಿದ್ದ ಬಾಸೆಯು ಹೊಳಪಾಯಿತು. ಮೊಲೆದೊಟ್ಟುಗಳು ಕಪ್ಪಾದವು. ತೋರಮೊಲೆಗಳು ಭಾರವಾಯಿತು. ನಗೆಮೊಗವು ಬಿಳುಪಾಯಿತು. ಕಾಲುಗಳು ಗಮನದಲ್ಲಿ ಮಂದವಾದವು. ಹುಬ್ಬಿನ ಕೂದಲೂ, ಕಣ್ಣಿನ ನಮಿರೂ ಮಿಂಚುವೆತ್ತವು. ತನುವು ಬಡವಾಗಿ ರಾಜಿಸಿತು. ಇಂದುವದನೆಯಾದ

ಸೀತೆಯ ಗರ್ಭವೆಂಬ ಸ್ಫಟಿಕಮಣಿಯ ಮಧ್ಯದಲ್ಲಿ ಸಂಪೂರ್ಣಕಲೆಗಳುಳ್ಳ ಶ್ರೀರಾಮನೆಂಬ ಚಂದ್ರನ ಪ್ರತಿಬಿಂಬವು ಪ್ರತಿಫಲಿಸಿ ಹೊಳೆಯುತ್ತಿರುವುದೊ ಎನ್ನುವಂತೆ, ಗರ್ಭದಲ್ಲಿ ಶಿಶುವು ಬೆಳೆಯುತ್ತಿರಲು, ವಿಸ್ತಾರವಾದ ಚಂದ್ರಿಕೆಯ ಚೆಲುವಿನಂತೆ ಸೀತೆಯ ಮೈಬಣ್ಣವು ಬಿಳುಪಾಯಿತು. ಆಬಳಿಕ ಗರ್ಭಲಾಂಛನವನ್ನು ಧರಿಸಿದ ಸೀತಾದೇವಿಯ ಬಸುರಿಗೆ ನಾಲ್ಕನೆಯ ತಿಂಗಳು ತುಂಬಿತು. ಆನಂದತುಂದಿಲನಾದ ಶ್ರೀರಾಮನು ಮಹಾವಿಭವದಿಂದ ದೇವಬ್ರಾಹ್ಮಣರನ್ನು ಸೇವಿಸಿ, ಯಾಚಕವರ್ಗದವರು ತೃಪ್ತರಾಗುವಂತೆ ಬೇಡಿದ ಪದಾರ್ಥಗಳನ್ನು ಕೊಟ್ಟು, ಸಕಲರನ್ನೂ ಮೃಷ್ಟಾನ್ನ ವಸ್ತ್ರಾಭರಣಗಳಿಂದ ಸನ್ಮಾನಿಸಿ ಅವರವರ ವಾಸಸ್ಥಾನಗಳಿಗೆ ಬೀಳ್ಕೊಟ್ಟನು. ಅನ್ಯೋನ್ಯವಾದ ಸಂತೋಷವು ದಂಪತಿಗಳಿಬ್ಬರಲ್ಲಿಯೂ ದಟ್ಟವಾಗಿ ಕುಡಿಯಿಡುತ್ತಿದ್ದಿತು. ಒಂದಾನೊಂದುದಿನ ಸೀತಾದೇವಿಯು ಶ್ರೀರಾಮನಬಳಿಗೆ ಬಂದು ಏಕಾಂತದಲ್ಲಿ ಕುಳಿತು, ನಿಜನಾಥ ! ಪಾಪಹಾರಕವಾಗಿ ಪರಿಶುದ್ಧವಾದ ವೃತ್ತಿಯಿಂದ ಹೊಳೆದು ಅಡ್ಡಿಯಿಲ್ಲದೆ ಅಂತರಾತ್ಮಸುಖವನ್ನು ಕೊಡುತ್ತಿರುವ ಅಮೂಲ್ಯವಾದ ಮಹರ್ಷಿಗಳ ಆಶ್ರಮದಲ್ಲಿ ಮತ್ತೊಂದುಸಾರಿ ವಾಸಮಾಡಿ ಅಲ್ಲಿನ ಅಂದಚಂದಗಳ ಸೌಂದರ್ಯವನ್ನು ಕಣ್ಣಾರೆನೋಡಿ ಮಹರ್ಷಿಗಳ ಆಶೀರ್ವಚನಗಳನ್ನು ಸ್ವೀಕರಿಸಿ ಬರಬೇಕೆಂದು ಬೇಡಿಕೊಂಡಳು. ಶ್ರೀರಾಮನು ಆಗಲಿ ! ಎಂದೊಪ್ಪಿಕೊಂಡು ಸಂಕ್ಷೇಪದಿಂದವಳನ್ನು ಸಮಾಧಾನಪಡಿಸಿ ಸುಖಶಯನದಲ್ಲಿ ಮಲಗಿ ನಿದ್ರಿಸುತ್ತಿರುವಾಗ, ಸೀತೆಯು ಗಂಗಾನದಿಯನ್ನು ದಾಟಿಹೋಗಿ ಅರಣ್ಯಮಾರ್ಗದಲ್ಲಿ ದಿಕ್ಕಿಲ್ಲದವಳಂತೆ ದಿಗ್ಭ್ರಮೆಯಿಂದಲೆಯುತ್ತ ಗೋಳಿಡುತ್ತಿರುವಂತೆ ಕನಸು ಕಂಡು ಎಚ್ಚೆತ್ತು ಕುಲಗುರುವಾದ ವಸಿಷ್ಠಋಷಿಯನ್ನು ಬರಮಾಡಿ ಆ ಕನಸಿನ ವೃತ್ತಾಂತವನ್ನು ಹೇಳಿ ಇದಕ್ಕೆ ಫಲವೇನೆಂದು ಕೇಳಿದನು. ಆಗ ವಸಿಷ್ಠನು ಈ ಸ್ವಪ್ನವು ಉತ್ತಮವಾದುದಲ್ಲ ಎಂದು ಹೇಳಿ ಅದಕ್ಕೆ ತಕ್ಕಶಾಂತಿಯನ್ನು ಮಾಡಿಸಿ ತನ್ನಾಶ್ರಮಕ್ಕೆ ಹೊರಟುಹೋದನು. ವಸಿಷ್ಠರ ವಚನದಿಂದ ಮನಗುಂದಿದ ಶ್ರೀರಾಮನು ಮೂರುನಾಲ್ಕು ದಿನಗಳವರೆಗೂ ಚಿಂತಿಸುತ್ತಿದ್ದು ರಾಜಕಾರ್ಯಗಳನ್ನು ತೊರೆದು ಕುಳಿತರೆ ಪ್ರಜೆಗಳಿಗೆ ನೋವಾಗುವುದೆಂದು, ಒಂದಾನೊಂದುದಿನ ರಾತ್ರಿಯಕಾಲದಲ್ಲಿ ಗೂಢಚಾರವೇಷಧಾರಿಯಾಗಿ, ನಗರಶೋಧನೆಗಾಗಿ ಹೊರಟು, ಒಬ್ಬನೊಬ್ಬ ಚಾರಕನನ್ನು ಕರೆದು ಎಲೈ ಚಾರಕನೇ ! ಈ ನಮ್ಮ ರಾಜ್ಯದ ಪ್ರಜೆಗಳು ನನ್ನನ್ನು ಏನಾದರೂ ನಿಂದಿಸುವರೆ ? ಸೂರ್ಯವಂಶದ ಪರಿಶುದ್ಧವಾದ ಕೀರ್ತಿಗೆ ಯಾರಾದರೂ ಕಳಂಕವನ್ನು ಕಲ್ಪಿಸುವರೆ ? ನನ್ನ ಭುಜಬಲಪರಾಕ್ರಮವನ್ನು ತಿಳಿದವರು ಯಾರಾದರೂ ಉಂಟೆ ? ನಮ್ಮ ಕುಲವೇಳ್ಗೆಯನ್ನು ಜರಿದು ತಿರಸ್ಕರಿಸಿದವರೂ ಇರುವರೆ ? ಮರೆಮಾಜದೆ ಹೇಳು ಹೆದರಬೇಡ ಎಂದು ಕೇಳಿದನು.

ಎಲೈ ದೇವದೇವನಾದ ಶ್ರೀರಾಮನೇ ! ನಿನ್ನನ್ನು ಧ್ಯಾನಮಾಡಿದರೆ ಪರಮೇಶ್ವರನ ಪದವಿಯೂ ಪೂಜಿಸಿದರೆ ಬ್ರಹ್ಮದೇವನಪಟ್ಟವೂ, ಸಂರಕ್ಷಿಸೆಂದು ಮರೆಪೊಕ್ಕರೆ, ಆಚಂದ್ರಾರ್ಕವಾಗಿ ಬಾಳುವ ಭಾಗ್ಯವೂ, ಬರುವುದು. ಆಬಳಿಕ ದೇವೇಂದ್ರನಂತೆ ವೈಭವದಿಂದ ಬಾಳುವ ಪುಣ್ಯಮುಂಟು. ಆಹಾ! ಪ್ರಪಂಚದಲ್ಲಿ ನಿನ್ನನ್ನು ನಿಂದಿಸುವ ಜನಗಳುಂಟೆ ? ಕತ್ತಲೆಯು ಸೂರ್ಯನನ್ನು ಮುಚ್ಚಿಕೊಂಡಿದ್ದರೆ ಏನು? ನಿಜವಾಗಿಯೂ ಆತನ ಕಾಂತಿಯನ್ನು ಕುಂದಿಸಬಲ್ಲುದೆ? ಎಂದು ಹೇಳಿ ಕೈಮುಗಿದು ಕಾಲ್ಗೆರಗಿ ಬಿನ್ನೈಸಿದನು. ಆಹಾ ! ಸೂರ್ಯನಿಗೆ ಕತ್ತಲೆಯು ಆವರಣ ಉಂಟೆ ? ಹಾಗೆಂದರೇನು ? ಓಹೋ ! ಈ ಮಾತಿನಲ್ಲಿ ಏನೋ ಕೃತ್ರಿಮವಿರಬೇಕು. ನನ್ನ ರಾಜ್ಯಭಾರದ ಕಾರ್ಯಗಳಲ್ಲಿ ಏನೋ ಕುಂದುಕೊರತೆಗಳಿರಬೇಕು! ಇದನ್ನು ಪ್ರಜೆಗಳಾಡಿಕೊಂಡಿರುವುದನ್ನು ನೀನು ಕೇಳಿರಬಹುದು. ಅದನ್ನು ನನ್ನೊಡನೆ ಮರೆಮಾಜದಂತೆ ಹೇಳು ಎಂದು ಶ್ರೀರಾಮನು ದೂತನನ್ನು ಕೇಳಿದನು. ಸ್ವಾಮಿಾ! ಸಕಲ ಜಗತ್ಕಾರಣನಾದ ನಿನ್ನೊಡನೆ ನಾನು ಆ ಮಾತುಗಳನ್ನು ಹೇಳಲಾರೆನೆಂದು ಬಿನ್ನೈಸಿ, ಅಜ್ಞಾನಿಗಳ ನಿಂದೆಯು ಜ್ಞಾನಿಗಳಿಗೆ ಕೈತಟ್ಟುವುದೆ ? ನನ್ನನ್ನು ಮನ್ನಿಸೆಂದು ಆ ದೂತನು ಹೇಳಿದನು. ಬಳಿಕ ಶ್ರೀರಾಮನು ಆತನನ್ನು ಅಕ್ಕರೆಯಿಂದೆತ್ತಿ ತಲೆಯನ್ನು ಸವರಿ! ಬೆನ್ನುತಟ್ಟಿ, ಅಯ್ಯಾ! ಹೆದರಬೇಡ ಹೇಳು. ಅಂಜದಿರು! ನನ್ನಾಣೆಗೂ ನಿಜವಾದ ಸಂಗತಿಯನ್ನು ಹೇಳು. ಯಾರು ಏನಂದರು? ನನ್ನ ರಾಜಕಾರ್ಯಗಳಲ್ಲಿ ಕೊರತೆಯುಂಟೆ? ಎಂದು ಸಂತೈಸಿ ಕೇಳಿದನು. ಸ್ವಾಮಿಾ ನಾನೇನು ಹೇಳಲಿ! ಈ ನಗರದಲ್ಲಿ ಮಲಿನವನ್ನು ತೊಳೆದು ಜೀವಿಸುವ ಒಬ್ಬ ಮಡಿವಾಳನು ಮೂಢತನದಿಂದ ನಿನ್ನನ್ನು ದೂಷಿಸಿದನು. ಅದನ್ನು ಕೇಳ್ವುವುದೂ ಹೇಳುವುದೂ ಬಹು ಕಷ್ಟ. ರಾಜಭಕ್ತಿಗಾಗಿ ಪ್ರಾಣವನ್ನಾದರೂ ಕೊಟ್ಟುಬಿಡಬೇಕು, ಇದು ದೂತನ ಧರ್ಮ. ಎಲೈ ಶ್ರೀರಾಮನೇ! ಆ ಅಗಸನ ಹೆಂಡತಿಯು ಗಂಡನನ್ನು ಕೇಳದೆ ತಂದೆಯಮನೆಗೆಹೋಗಿ ಚಂಡಿತನದಿಂದ ಬಾಳುತ್ತಿರಲು, ಅವಳ ತಂದೆ ತಾಯಿಗಳು ಆ ಹೆಂಗಸನ್ನು ಗಂಡನಬಳಿಗೆ ಕರೆದುಕೊಂಡು ಬಂದುಬಿಟ್ಟು ಒಡಂಬಡಿಸಲು ಛೀ ! ತೆಗೆ ಏನು ಹೇಳುವೆ ಬಿಟ್ಟದ್ದ ಹೆಂಡತಿಯನ್ನು ಕಟ್ಟಿಕೊಂಡು ಮೊದಲಿನಹಾಗೆ ಸಂಸಾರ ಮಾಡುವುದಕ್ಕೆ ನಾನೇನು ರಾಮನೆ? ನಾನು ಈ ಚಂಡಿಯನ್ನು ಸರ್ವಥಾ ಒಲ್ಲೆನೆಂದು ನುಡಿದನು ಕಠೋರವಾಕ್ಯವನ್ನು ಸಹಿಸಲಾರದೆ ಅದನ್ನು ಕೇಳಿ ಕೂಡಲೆ ಕಿವಿಗಳನ್ನು ಮುಚ್ಚಿಕೊಂಡೆನು. ಎಲೈ ಶ್ರೀರಾಮನೇ! ಮಂತ್ರಪೂತವಾದ ಹವಿಸ್ಸನ್ನು ಕಾಗೆಯು ಎಂಜಲಿಸಬಲ್ಲುದೆ? ಎಂದು ಹೇಳಲು ಶ್ರೀರಾಮನು ಆ ದೂತನನ್ನು ಮರ್ಯಾದೆಯಿಂದ ಮನೆಗೆ ಕಳುಹಿಸಿಕೊಟ್ಟು, ಬಂಧನದಲ್ಲಿ ಸಿಕ್ಕಿಬಿದ್ದ

ಮದ್ದಾನೆಯಂತೆ ತಲೆಯನ್ನು ಕೊಡಹಿ, ಮೂಗಿನಮೇಲೆ ಬೆರಳಿಟ್ಟು ಅಪವಾದಕ್ಕೆ ಹೆದರಿ ಅತ್ಯಂತ ಕಾತುರದಿಂದ ಹಲುಬುತ್ತ, ಕಳೆಗುಂದಿ, ಕೈಮರೆದು, ಮೈಕರಗಿ, ಮಹಾ ಸಂಕಟದಿಂದ ಕೊರಗುತ್ತ ಹುತ್ತವನ್ನು ಹೊಗುವ ಕಾಳಸರ್ಪದಂತೆ ಅಂತಃಪುರವನ್ನು ಸೇರಿ, ಓಲಗಕ್ಕೆ ನಡೆತಂದು ಕಪ್ಪ ಕಾಣಿಕೆಗಳನ್ನು ತಂದ ಸಾಮಂತ ನರಪತಿಗಳನ್ನು ಸನ್ಮಾನದಿಂದ ಕಾಣಿಸಿಕೊಳ್ಳದೆ, ಚಿಂತಾಂಗನೆಯ ಕೇಳಿಯಲ್ಲಿ ಸಿಕ್ಕಿ ನರಳುತ್ತಿದ್ದನು. ಅದನ್ನು ಕೇಳಿ ಅತ್ಯಂತ ಭೀತಿಯುಕ್ತರಾದ ಲಕ್ಷ್ಮಣಾದಿಗಳು ಆತುರದಿಂದ ಅಂತಃಪುರಕ್ಕೈತಂದು ಮೈಮರೆದು ಮಲಗಿರುವ ಶ್ರೀರಾಮನನ್ನು ಕಂಡು, ನಮಸ್ಕರಿಸಿ, ಮಾತನಾಡಿಸಲಾರದೆ ಸುಮ್ಮನೆ ನಿಂತುಕೊಂಡಿದ್ದರು. ಸ್ವಲ್ಪ ಹೊತ್ತಿನಮೇಲೆ ಕರುಣಾಸಾಗರನಾದ ರಾಮಮೂರ್ತಿಯು ಎದ್ದು ಕುಳಿತುಕೊಂಡು, ತಮ್ಮಂದಿರನ್ನು ತಕ್ಕೈಸಿ, ಅಕ್ಕರೆಯಿಂದ ಮಾತನಾಡಿಸಿ, ತಮ್ಮಂದಿರಾ! ಈ ಭೂಮಂಡಲದಲ್ಲಿ ಈಗ ನನಗೆ ಬಂದಿರುವ ಅಪವಾದವನ್ನು ನೀವು ಕೇಳಲಿಲ್ಲವೆ ? ಅಯ್ಯೋ! ಈ ಹಾಳು ಅಪವಾದಕ್ಕೆ ಸಿಕ್ಕಿ ಕದ್ದ ಕಳ್ಳನಹಾಗೆ ನುಡಿಸಿಕೊಳ್ಳಲಾರೆನು. ಹಾ! ಈ ಪ್ರಾಣಗಳನ್ನು ಹೇಗೆ ಧರಿಸಿಕೊಂಡಿರಲಿ, ದೇಹಧಾರಿಯಾಗಿ ಅಪವಾದಕ್ಕೆ ಗುರಿಯಾಗಿ ಬಾಳಲಾರೆ. ಈ ದುರಪವಾದವನ್ನು ತಿದ್ದಿ ತೀರಿಸುವುದಕ್ಕಾಗದು. ಆದಕಾರಣ ಸೀತೆಯನ್ನು ತೊರೆಯದೆ ಇರಲಾರೆನು. ಈ ಪತಿವ್ರತೆಯಾದ ಸೀತೆಯು ಅಯೋನಿಜೆ ರೂಪಗುಣಶೀಲಸಂಪನ್ನೆ, ಪುಣ್ಯಚರಿತ್ರೆ, ಲೋಕಪಾವನೆ, ಮಂಗಳಮಹೋತ್ಸವೆ ಎಂಬುದನ್ನು ನಾನು ಚೆನ್ನಾಗಿ ತಿಳಿದಿದ್ದರೂ ನಿಂದೆಗೊಳಗಾದ ಬಳಿಕ ಸೀತೆಯನ್ನು ಬಿಡುವುದೇ ಸರಿ. ಸೂರ್ಯವಂಶದ ರಾಯರು ಅಪಖ್ಯಾತಿಯನ್ನು ಸಹಿಸಬಲ್ಲರೆ ? ಮಗುವಾಗಿದ್ದ ನನ್ನನ್ನು ಸತ್ಯಪರಿಪಾಲನೆಗಾಗಿ ತಂದೆಯಾದ ದಶರಥನು ಉಳಿದು ಅರಣ್ಯಕ್ಕೆ ಕಳುಹಲಿಲ್ಲವೆ ? ಹಲವು ಮಾತುಗಳನ್ನಾಡಿ ಫಲವೇನು ? ಕಲಿಯುಗದ ಬ್ರಾಹ್ಮಣರು ಆಚಾರವನ್ನು ಬಿಟ್ಟು ಬಿಡುವಹಾಗೆ ನಾನು ಸೀತೆಯನ್ನು ಬಿಡುವುದೇ ಸಹಜವೆಂದು ನುಡಿದನು. ಲಕ್ಷ್ಮಣಾದಿಗಳು ಆ ಮಾತುಗಳನ್ನು ಕೇಳಿ ಆಹಾ! ಈತೆರನಾದಕೆಲಸವು ಕರುಣಾನಿಧಿಯಾದ ಶ್ರೀರಾಮನಿಗೆತ್ತಣದಿಂದ ಬಂದುದು. ಹಾ! ಶಿವಶಿವಾ!! ಕಷ್ಟ. ಅಣ್ಣಾ! ನೆಲೆಗೊಂಡಿರುವ ವೇದಮಂತ್ರಗಳನ್ನು ಖಲರಾದ ನೀಚರು ನಿಂದಿಸಿದರೆ ತಿಳಿದವರಾದ ಬ್ರಾಹ್ಮಣರು ಅದನ್ನು ಪರಿಗ್ರಹಿಸದೆ ಬಿಡುವರೆ ? ನೀನು ಕುಲವರ್ಧಿನಿಯಾದ ಸೀತೆಯನ್ನು ಬಿಡುವುದು ನ್ಯಾಯವೆ ಹೇಳು ಎಂದು ಬಿನ್ನೈಸಿದರು.

ಬಳಿಕ ಭರತನು ಭಯದಿಂದ ಕೂಡಿ ಉಕ್ಕುತ್ತಿರುವ ಶೋಕಭಾರದಿಂದ ಕಂಠಮೂಲದಲ್ಲಿ ಗದ್ಗದಗಳು ಹೊರಹೊಮ್ಮುತ್ತಿರಲು, ಮುಂದೆ ಬಂದು ಅಣ್ಣಾ

ಕರೆಯುವ ಕಪಿಲೆಯನ್ನು ಹೊಡೆದು ಅಡವಿಗಟ್ಟುವ ಮೂಢರು ಲೋಕದಲ್ಲಿರುವರೆ? ನೀನು ಪರೀಕ್ಷಾರ್ಥವಾಗಿ ಅಗ್ನಿಯಲ್ಲಿ ಸೀತೆಯನ್ನು ಪುಗಿಸಿದಕಾಲದಲ್ಲಿ, ಮೂರು ಲೋಕಗಳಿಗೂ ತಿಳಿಯುವ ಹಾಗೆ ದೇವಸಮೂಹದೊಡನೆ ನನ್ನ ತಂದೆಯಾದ ದಶರಥನು ಇವಳು ಪರಿಶುದ್ಧೆ, ಕುಲಕ್ಕೆ ಪಾವನೆಯಾದವಳು ನಿನಗೆ ಪ್ರಿಯಳು, ಮಂಗಳೋದಯಕ್ಕೆ ಮೂಲಕಾರಣಳೆಂದು ನುಡಿದು ತನಗೆ ಗತಿಯನ್ನು ಕೊಡುವ ಸೊಸೆಯು ಇವಳೆಂದು ಹೇಳಿಹೋದುದನ್ನು ಮರೆತೆಯಾ ನೀಚಮನುಷ್ಯರಹಾಗೆ ಗುರುಲಘುಗಳ ಅಂತರವನ್ನರಿಯದೆ ಮೂಢ ಭಾವದಿಂದ ಧೈರ್ಯಗುಂದಿ, ಪವಿತ್ರಳಾದ ಸೀತೆಯನ್ನು ದೋಷಿ ಎಂದು ತೊರೆವುದು ನ್ಯಾಯವೆ? ಸ್ವಾಮಿಾ! ಈ ವ್ಯಸನವನ್ನು ಬಿಟ್ಟು ಸುಖವಾಗಿ ಸಂತೋಷದಿಂದ ಇರಿ ಎಂದು ಬಿನ್ನೈಸಿದನು. ತಮ್ಮಾ! ನೀನು ಹೇಳುವುದೆಲ್ಲವೂ ನ್ಯಾಯವೆ! ಹೌದು ಆದರೆ ನಿರ್ಮಲವಾದ ಸೂರ್ಯವಂಶದಲ್ಲಿ ಹುಟ್ಟಿದ ನಾನು ಸಹಿಸಲಸದಳವಾದ ಈ ಅಪವಾದವನ್ನು ತಾಳಲಾರೆ. ಆದಕಾರಣ ಮಹಾಯೋಗಿಯಾದವನು ಮಮಕಾರವನ್ನು ಬಿಡುವ ಹಾಗೆ ನಾನು ಸೀತಾದೇವಿಯನ್ನು ಬಿಡುವುದೇ ನಿಜವೆಂದು ಹೇಳಲು ಲಕ್ಷ್ಮಣನು ಮುಂದೆಬಂದು ಭಯದಿಂದ ನಡುಗುತ್ತ ಕಿವಿಗಳನ್ನು ಮುಚ್ಚಿಕೊಂಡು ಶ್ರೀರಾಮನನ್ನು ಕುರಿತು ಇಂತೆಂದನು.



ಶ್ರೀರಾಮನಿಗೆ ಭರತಲಕ್ಷ್ಮಣರು ನೀತಿಯನ್ನು ಹೇಳಿದುದು.

ಜಗದೀಶನಾದ ಶ್ರೀರಾಮನೇ! ಕಾಯಸುಖವನ್ನು ಬಯಸಿದವನು ಪರಿಶುದ್ಧವಾದ ಧರ್ಮಕಾರ್ಯಗಳನ್ನು ಬಿಡುವಹಾಗೆ ನಿರ್ದೋಷಿಯಾದ ಸೀತೆಯನ್ನು ನಿಷ್ಕರುಣದಿಂದ ಬಿಟ್ಟುಬಿಡುವುದು ನ್ಯಾಯವೆ? ಅಯ್ಯೋ? ಬಸಿರಿ

ಯಾಗಿ ಬೆಸಲಾಗಿರುವ ಈ ಮಂಗಳಮಯೆಯನ್ನು, ಪ್ರೀತಿಯಿಂದ ಸಂರಕ್ಷಿಸದೆ ಕಾಡಿಗಟ್ಟಬೇಡ? ದಯಮಾಡಿ! ನಿನ್ನ ಮನದ ಕಾಠಿಣ್ಯವನ್ನು ಬಿಡು ನನ್ನನ್ನು ನೋಡಿ ಸೀತೆಯನ್ನು ಕಾಪಾಡು ಎಂದು ಬಹುವಿಧವಾಗಿ ಬೇಡಿಕೊಂಡನು. ಬಳಿಕ ಶತ್ರುಘ್ನನು ಕ್ರಮದಿಂದ ತನಗೆ ತಿಳಿದಮಟ್ಟಿಗೆ ಪರಿಪರಿಯಾಗಿ ಬಿನ್ನೈಸಿದರೂ, ರಾಮನು ಚಕಿತಮಾನಸನಾಗಿ ವಿಷಮಭಾವವನ್ನು ಬಿಡದೆ ಪೊರೆಗಳೆದ ಉರಗೇಂದ್ರನಂತೆ ಹಮ್ಮೈಸುತ್ತ, ತಲೆದೂಗಿ ಸುಮ್ಮನಿದ್ದು ತಮ್ಮಂದಿರನ್ನು ಕಳುಹಿಸಿ, ವಿಶ್ರಾಂತಮಂದಿರಕ್ಕೆ ಹೋಗಿ ಲಕ್ಷ್ಮಣನನ್ನು ಬರಮಾಡಿ, ತಮ್ಮಾ! ನೀನು ಎಂದಿಗೂ ಯಾವ ಕಾಲದಲ್ಲಿಯೂ ನನ್ನ ಮಾತಿಗೆ ಬದುಲಾಡಿದವನಲ್ಲಾ! ಇತ್ತಬಾ ನಾನು ಹೇಳುವುದನ್ನು ಕೇಳು. ಇಗೋ ಇಲ್ಲಿರುವ ಕತ್ತಿಯಿಂದ ನನ್ನ ಕುತ್ತಿಗೆಯನ್ನು ಕತ್ತರಿಸು ಇಲ್ಲವಾದರೆ ಸೀತೆಯನ್ನು ಕರೆದುಕೊಂಡು ಹೋಗಿ ಕಾಡಿನಲ್ಲಿ ಬಿಟ್ಟುಬಾ! ಎರಡರಲ್ಲಿ ಯಾವುದು ನಿನಗೆ ಸಮ್ಮತವೊ ಅದನ್ನು ಬೇಗ ಮಾಡು ಮಾನವತಿಯಾದ ಸೀತೆಯು ಮತ್ತೊಂದುಸಾರಿ ಅರಣ್ಯಕ್ಕೆ ಹೋಗಿ ಋಷ್ಯಾಶ್ರಮಗಳನ್ನು ನೋಡಬೇಕೆಂದು ಬೇಡಿಕೊಂಡಿರುವಳು, ಇನ್ನು ಯೋಚಿಸಬೇಡ ಬೇಗಹೊರಡು ಎಂದುಹೇಳಿದನು. ಕೂಡಲೆ ಲಕ್ಷ್ಮಣನು ಅಣ್ಣ! ನಿನ್ನ ಮಾತನ್ನು ಮೀರಿದರೆ ನನಗೆ ಸದ್ಗತಿಯಾಗುವುದುಂಟೆ? ನಾನೆಂದಿಗೂ ಹಾಗೆ ಮಾಡಲಾರೆ. ಒಂದುವೇಳೆ ಹಾಗೆ ಮಾಡಿದರೆ ಹೆತ್ತವಳನ್ನು ಕೊಂದವನ ಪಾಪಕ್ಕೆ ಹೋಗುವೆನು. ನೀನೇ ಸರ್ವಕರ್ತನಾಗಿರುವಲ್ಲಿ ನಾನು ಕಾರಣಾಂತರದಿಂದ ಮಾಡುವ ಕಜ್ಜದುಜ್ಜುಗವು ನನಗುಂಟಾಗುವುದೆ? ಎಂದು ಹೇಳಿ ದುಃಖಭಯಗಳಿಂದ ಕೂಡಿ ಗದ್ಗದಸ್ವರ ರೋಮಾಂಚನಂಗಳಿಂದ ಮೈನುರೆದು ಕಂಪಮಾನಶರೀರನಾಗಿ ಹೊರಟು ಕುದುರೆ ಕಲಶಗಳಿಂದ ಹದವಾಗಿ ಹಣ್ಣಿದ ರಥವನ್ನು ಹೂಡಿ ತಂದು ಸೀತಾದೇವಿಯ ಅಂತಃಪುರದ ಬಾಗಿಲಲ್ಲಿ ನಿಲಿಸಿ, ಮನೆಯನ್ನು ಹೊಕ್ಕು ಅಮ್ಮಾ! ಮತ್ತೊಂದುವೇಳೆ ಮಹಾರಣ್ಯಕ್ಕೆ ಹೋಗಬೇಕೆಂದು ಬಯಸಿದ? ರಾಮನು ನಿನ್ನನ್ನು ಅರಣ್ಯಕ್ಕೆ ಕಳುಹಿಸಿಬಾ! ಎಂದು ಅಜ್ಞೆಮಾಡಿ ನನ್ನನ್ನು ಕಳುಹಿಸಿರುವನು, ರಥವು ಸಿದ್ಧವಾಗಿದೆ, ನಿನಗೆ ಇಷ್ಟವಾದರೆ ಹೊರಡು ಎಂದು ಹೇಳಿದನು. ಅದನ್ನು ಕೇಳಿ ತನ್ನ ಮನೋಭೀಷ್ಟವನ್ನು ನೆರವೇರಿಸಿದುದಕ್ಕಾಗಿ ಸೀತೆಯು ಆನಂದದಿಂದ ರಾಮನನ್ನು ಕೊಂಡಾಡುತ್ತ ಒಳಗುಟ್ಟನ್ನು ತಿಳಿಯದೆ, ತನ್ನತ್ತೆಯರಿಗೆ ಅಕ್ಕರಿಂದ ನಮಸ್ಕರಿಸಿ, ಅವರ ಆಶೀರ್ವಾದವನ್ನು ಪಡೆದು, ಋಷಿಪತ್ನಿಯರಿಗೆ ಬೇಕಾದ ಪರಿಮಳದ್ರವ್ಯ ಗಂಧ ಹರಿದ್ರಾಕುಂಕುಮಾದಿ ಮಂಗಳದ್ರವ್ಯಂಗಳನ್ನು ಗಂಟುಕಟ್ಟಿಕೊಂಡು ರಾಮಚಂದ್ರನ ಪಾದುಕೆಗಳನ್ನು ಸಂಗಡ ತೆಗೆದುಕೊಂಡು ರಥದಲ್ಲಿ ಸೀತಾದೇವಿಯು ಕುಳಿತಳು ಆಗ ಲಕ್ಷ್ಮಣನು ಅಣ್ಣನಾಡಿದ ಅತಿಕ್ರೂರವಾದ ಮಾತನ್ನೂ, ಅರಣ್ಯಕ್ಕೆಹೋಗಲು ಆನಂದಿಸುತ್ತಿರುವ ಸೀತೆಯ ಸುಮ್ಮಾನವನ್ನೂ ಕಂಡು, ಉಕ್ಕಿಬರುತ್ತಿರುವ ದುಃಖಾಶ್ರು

ಗಳನ್ನು ಬಲಾತ್ಕಾರದಿಂದ ಅಡಗಿಸಿಕೊಂಡು ಸಾರಥಿ ಗೆಸೂಚನೆಮಾಡಿ ದೇವಪುರನಿಲಯ ಲಕ್ಷ್ಮೀರಮಣನ ಪಾದಮೂಲದಿಂದೊಗೆದ ಗಂಗಾನದಿಯತಡಿಗೆ ರಥವನ್ನು ಹೊಡೆಸಿದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿನಾಗಶರ್ಮಪ್ರಣೀತವಾದ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಹದಿನೆಂಟನೆಯ ಸಂಧಿ ಸಂಪೂರ್ಣಂ. ಶ್ರೀ. ಶ್ರೀ. ಶ್ರೀ.

## ಹತ್ತೊಂಭತ್ತನೆಯ ಸಂಧಿ.

ವಾಲ್ಮೀಕಿಯು ಸೀತೆಯನ್ನು ಆಶ್ರಮಕ್ಕೆ ಕರೆದುಕೊಂಡು ಹೋದುದು.

ಎಲೈ ಜನಮೇಜಯರಾಯನೇ ಕೇಳು. ಹೀಗೆ ಲಕ್ಷ್ಮಣನು ಸೀತೆಯನ್ನು ಸಾಗಿಸಿಕೊಂಡು ಹೋಗುತ್ತಿದ್ದ ರಥಾಗ್ರದ ಧ್ವಜವು ಆಹಾ ! ರಾಮನು ನಿಷ್ಕರುಣಿಯಾಗಿ ಸೀತೆಯನ್ನು ತೊರೆದನಲ್ಲಾ ಎಂದಲುಗಿತು. ಪುರಜನರು ಪರಿಪರಿಯಾಗಿ ಹಂಬಲಿಸಿ ಕೊರಗಿದರು. ವಾಯುವೇಗದಿಂದ ರಥವು ಅರಣ್ಯಮಾರ್ಗವಾಗಿ ತಿರುಗಿತು. ಬಳಿಕ ಲಕ್ಷ್ಮಣನು ಆಹಾ ! ಯುದ್ಧದಲ್ಲಿ ಇದಿರಾದವರನ್ನು ಗೆಲ್ಲುವ ರಥವು ಸೀತೆಯನ್ನು ಕಾಡಿಗಟ್ಟುವುದಕ್ಕೂ, ಲೋಕದಲ್ಲಿ ದೀನರನ್ನು ಕಾಪಾಡುವ ಬುದ್ಧಿಯು ಹೆಂಗಸಿನ ಕೊಲೆಗೆ ಹೆದರದೆ ಮುಂದರಿವುದಕ್ಕೂ ಆಯಿತು. ಅಯ್ಯೋ ! ಕರುಣಹೀನರಾದ ಜನಗಳನ್ನು ಸುಡಲಿ ! ಅಕಟಕಟಾ ! ನಾನೇಕೆ ಈ ಕ್ರೂರಕೃತ್ಯಕ್ಕೆ ಗುರಿಯಾದೆ. ಶ್ರೀರಾಮನು ಈ ವಿಧವಾದ ಆಜ್ಞೆಯನ್ನು ನನಗೆ ಹೇಗೆ ಮಾಡಿದನು ಎಂದು ವಿಚಾರಯುಕ್ತನಾಗಿ ಬರುತ್ತಿರಲು, ದಾರಿಯಲ್ಲಿ ಅಪಶಕುನಂಗಳು ಅಡ್ಡಿಮಾಡಿದವು. ನರಿಗಳು ಕೂಗಿದವು. ಮೃಗಗಳು ಹಾದಿಗೆ ಅಡ್ಡವಾಗಿಬಂದವು. ಬಲಗಣ್ಣು ಅದುರಲಾರಂಭಿಸಿತು. ಇದನ್ನು ಕಂಡು ಸೀತೆ ಲಕ್ಷ್ಮಣಾ ! ಹೀಗೆ ದುಶ್ಶಕುನಗಳಾಗಲು ಕಾರಣವೇನು ? ಹೇಳಬಲ್ಲೆಯಾ ! ಹೇಗಾದರೂ ಸಕಲ ಸಂಪತ್ತುಗಳಿಂದ ಶ್ರೀರಾಮನು ಸುಖವಾಗಿರಲಿ ! ಆ ರಾಘವನೆ ನಮ್ಮನ್ನು ಸಂರಕ್ಷಿಸಲೆಂದು ಹೇಳುತ್ತಾ ಮುಂದೆ ಬರುತ್ತಿರಲು, ಶ್ರೀರಾಮನ ಕೀರ್ತಿಲತೆಯಂತೆ ಮೂರುಮಾರ್ಗದಲ್ಲಿ ನಡೆದು, ಮುಕ್ಕಣ್ಣನನ್ನು ಸಾರಿ, ಮೂರುಲೋಕಂಗಳ ಪಾಪರಾಶಿಯನ್ನು ಹುರಿದು ಮುಕ್ಕಿ ಸಮುದ್ರವನ್ನು ಸೇರಿ ಸಕಲ ದೇವತೆಗಳ ಬಳಗವನ್ನು ತನ್ನೊಳಗುಮಾಡಿಕೊಂಡು, ತನ್ನಲ್ಲಿ ಮುಳುಗಿದವರನ್ನು ಪಾಪರಹಿತರನ್ನಾಗಿ ಮಾಡುವ ಪೆಂಪಿನಿಂದೊಡಗೂಡಿ ಬಗೆಬಗೆಯಾಗಿ ಬರುತ್ತಿರುವ ತೆರೆಗಳಿಂದಲೂ, ಒಂದರೊಡನೊಂದು ಬೆರೆದು

ಕ್ರೀಡಿಸುವ ರಾಜಹಂಸಗಳಿಂದಲೂ, ಬಗೆಬಗೆಯಾದ ತುಂತುರ್ವನಿಗಳ ಸಮೂ ಹದಿಂದಲೂ, ಗುಳ್ಳೆಗೂಡಿ ಬರುತ್ತಿರುವ ಸುಳಿಗಳಿಂದಲೂ, ಮೊರೆದು ಘರ್ಜಿಸು ತ್ತಿರುವ ತಿರುವುಗಳಿಂದಲೂ ಸುತ್ತಿಸುತ್ತಿ ಅಲೆದಾಡುತ್ತಿರುವ ಜಲಜಂತುಗ ಳಿಂದಲೂ, ಮುನಿಜನಂಗಳ ಸೇವೆಯನ್ನು ಕೈಕೊಂಡ ಗರ್ವದಿಂದಲೂ, ಮನೋ ಹರವಾಗಿ ಎರಡುಕಡೆಯಲ್ಲಿಯೂ ಬೆಳೆದು ಸೊಕ್ಕಿಸೊಂಪಾದ ಫಲಪುಷ್ಪಪತ್ರಾವಳಿ ಗಳಿಂದ ಶೋಭಿಸುತ್ತಿರುವ ತೆಂಗು,, ಅಡಿಕೆ, ಹಲಸು, ದ್ರಾಕ್ಷಿ, ನೇರಿಳೆ, ನಾರಂಗಿ. ನಿಂಬೆ, ಖರ್ಜೂರ, ಕಿತ್ತಳೆ, ಮಾದಳ, ಹುಣಿಸೆ, ಮಾವು, ನೆಲ್ಲಿ, ಬೆಲ್ಲವತ್ತ, ಬೇಲ, ಆಲ, ಅತ್ತಿ, ಮತ್ತಿ ಮೊದಲಾದ ವೃಕ್ಷಗಳು ತಂತಮ್ಮ ಫಲಭಾರವನ್ನು ಭೂಮಿಗಿಳಿಸಬೇಕೆಂದು ಬಾಗಿದುವೊ ಎಂಬಂತೆ ರಾಜಿಸುತ್ತಿದ್ದ ಪ್ರದೇಶವುಳ್ಳ ದೇವಗಂಗೆಯ ದಡವು ಸೀತಾದೇವಿಯ ಕಣ್ಣುಗಳಿಗೆ ಕಾಣ ಬಂದಿತು.

ಬಳಿಕ ಲಕ್ಷ್ಮಣನು ರಥದಿಂದಿಳಿದು ಗಂಗೆಗೆ ನಮಸ್ಕರಿಸಿ, ನಾವಿಕರಮೂಲಕ ನದಿಯನ್ನು ದಾಟಿ ಗಂಗಾತೀರ್ಥದಲ್ಲಿ ಮಿಂದು ಸೀತೆಯಿಂದೊಡಗೂಡಿ ಅಂತ ರಂಗದಲ್ಲಿ ನಿಟ್ಟುಸುರುಬಿಟ್ಟು ಮುಂದೆ ಹೊರಟು ಕಾಡುಮೃಗಂಗಳ ಕ್ರೂರ ಧ್ವನಿಯಿಂದ ನಿಬಿಡವಾದ ಅರಣ್ಯಮಾರ್ಗವನ್ನು ಕುರಿತು ನಡೆತಂದನು. ಆ ಅರಣ್ಯವು ಹಕ್ಕಿಪಕ್ಷಿಗಳ ಕರ್ಕಸವಾದ ಉಲುಹಿನಿಂದಲೂ, ಹುಳುಹಪ್ಪಟೆಗಳ ಹರಹಿನಿಂದಲೂ, ಕಲ್ಲುಮುಳ್ಳುಗಳ ಕಟ್ಟಾಯದೊತ್ತಿನಿಂದಲೂ, ಇಲಿ. ಮೊಲ ಗಳು, ಮಾಡಿರುವ ಬಿಲಗಳಿಂದಲೂ, ಮುಳ್ಗಿಡಗಳ ಒಗ್ಗಿನಿಂದಲೂ, ಮೃಗ ಧ್ವನಿಯ ಹೆದರಿಕೆಯಿಂದಲೂ, ಬಗೆಬಗೆಯ ಕ್ರೂರಜಂತುಗಳ ಕೂಟದಿಂದಲೂ, ಆನೆ, ಹುಲಿ, ಸಿಂಹ, ಮುಂಗಿಸಿ, ಕಾಡಿಲಿ, ಹಾವು ಮೊದಲಾದ ಭಯಂಕರ ಪ್ರಾಣಿಗಳಿಂದಲೂ ಕೂಡಿ, ಅಸಾಧ್ಯವಾಗಿದ್ದಿತು. ಅದನ್ನು ಕಂಡು ಸೀತೆ ಲಕ್ಷ್ಮಣಾ! ಹಾ! ಇದೇನು ಕಟ್ಟಡವಿಯಾಗಿ ಕಾಣುತ್ತಿದೆ. ಇಲ್ಲಿ ಋಷ್ಯಾಶ್ರ ಮಂಗಳೆ ಕಾಣದಿರುವುವಲ್ಲಾ! ಸಂಚರಿಸುವುದಕ್ಕಾಗದ ಇಲ್ಲಿಗೇಕೆ ನನ್ನನ್ನು ಕರೆದುತಂದೆ? ಅಕಟಾ! ಶ್ರೀರಾಮ! ರಾಮಾ! ನನ್ನನ್ನು ಸಂರಕ್ಷಿಸೆಂದು ಬಹಳವಾಗಿ ಬಿಸುಸುಯ್ದಳು. ಆಗ ಲಕ್ಷ್ಮಣನು ಅಯ್ಯೋ! ಈಪರಿಯಿಂದು ಹಂಬಲಿಸುತ್ತಿರುವ ಸೀತಾದೇವಿಗೆ ರಾಮಾಜ್ಞೆಯನ್ನು ಹೇಳಿಬಿಡಲೆ! ಅಥವಾ ಬೇಡವೊ? ಹೇಳಿದರೆ ಮುಂದೇನಾಗುವುದೋ? ಅಯ್ಯೋ! ದೈವವು ನನಗೆ ಎಂತಹ ಕ್ರೂರವಾದ ಕಾರ್ಯವನ್ನು ತಂದೊಡ್ಡಿತು ಎಂದು ಮರುಗಿ, ಬಳಲಿ ಕಂಬನಿದುಂಬಿ, ಕಾತರಿಸುತ್ತ, ಕಳೆಗುಂದಿ ಅವಯವದ ನಡುಕವನ್ನು ತನ್ನಲ್ಲಿ ತಾನೆ ಉಪಸಂಹರಿಸಿಕೊಂಡು ಮೆಲ್ಲಗೆ ಸೀತಾದೇವಿಯನ್ನು ಕುರಿತು ಅಮ್ಮಾ! ಇದುವರೆಗೂ ಅಪವಾದರಹಿತೆಯಾಗಿದ್ದ ನಿನ್ನನ್ನು ಅಕ್ಕರೆಯಿಂದ ಸಲಹಿ

ಈಗಬಂದ ಒಂದಾನೊಂದು ಅಪವಾದಕ್ಕೆಹೆದರಿ ಶ್ರೀರಾಮನು ನಿನ್ನನ್ನು ಅಡವಿಯಲ್ಲಿ ಬಿಟ್ಟುಬಾ ಎಂದು ಹೇಳಿದುದರಿಂದ ನಾನು ಆತನಪ್ಪಣೆಯನ್ನು ಮೀರಲಾರದೆ ಇಲ್ಲಿಗೆ ಕರೆತಂದೆನು ಎಂದು ಹೇಳಿ ಕಣ್ಣೀರು ಸುರಿಸಿ, ಅಳತೊಡಗಿದನು. ಲಕ್ಷ್ಮಣನ ಮಾತುಗಳು ಕಿವಿಗೆ ಬಿದ್ದಕೂಡಲೆ ಬಿರುಗಾಳಿಯಿಂದ ಮುರಿದು ಬೀಳುವ ಮರದಂತೆ ಸೀತೆಯು ಭೂಮಿಯಲ್ಲಿ ಬಿದ್ದು ಮೈಮರೆದಳು.

ಆಗ ಲಕ್ಷ್ಮಣನು ಶೈತ್ಯೋಪಚಾರದಿಂದ ಅವಳನ್ನು ಸಂತೈಸಿ ರೋದಿಸುತ್ತಿದ್ದನು. ಬಳಿಕ ಸೀತೆಯು ಮೆಲ್ಲಮೆಲ್ಲನೆ ಅರಗಳಿಗೆಯಮೇಲೆ ಎಚ್ಚತ್ತು ಅಯ್ಯೋ ! ದಯಾಳುವಾದ ಶ್ರೀರಾಮನು ತನಗೆ ಬೇಡವಾದರೆ ನನ್ನ ಕೊರಲನ್ನು ಕೊಯ್ದುಹಾಕು ಎಂದು ಹೇಳಲಾರದೆ ಇಲ್ಲವೆ ತಾನಾಗಿ ಖಡ್ಗದಿಂದ ಕಡಿದುಹಾಕಲಾರದೆ ಜೀವವಂತಳಾಗಿ ಅರಣ್ಯದಲ್ಲಿ ಬಿಟ್ಟುಬಾ ಎಂದು ಹೇಳಿದನೇ ! ಅಹಾ ! ಇನ್ನು ಸಂಸಾರಕ್ಕೆ ಸಂಚಕಾರವಾಯಿತೆ ? ನನ್ನನ್ನು ರಾಮನು ಪರಿಗ್ರಹಿಸಲೊಲ್ಲನೆ ? ಹಾ ! ಅಹಾ !! ಹಾ !!! ಶ್ರೀರಾಮಾ ! ನಿನ್ನನ್ನು ಅಗಲಿ ನಾನು ಹೇಗೆ ಈ ಅರಣ್ಯದಲ್ಲಿ ಜೀವಿಸಲಿ ! ವಿಶ್ವಾಮಿತ್ರಮುನಿಯೊಡನೆ ಮಿಥಿಳಾಪುರಿಗೆ ಬಂದು, ಶಿವಧನುವನ್ನು ಮುರಿದು ಮದುವೆಯಾದಾದಿನಿಂದಲೂ ಕಟ್ಟಕ್ಕಡದಿಂದ ಕಾಪಾಡಿ ಅಸದಳದ ಕಪಿಸೇನೆಯಿಂದೊಡಗೂಡಿ ನನಗೋಸ್ಕರವಾಗಿ ತೆಂಕಣ ಕಡಲಿಗೆ ಸೇತುವೆಯನ್ನು ಕಟ್ಟಿ, ರಕ್ಕಸರನ್ನೊರಸಿ, ಅಗ್ನಿಮುಖದಿಂದ ಪರೀಕ್ಷಿಸಿದ ಕಾಲದಲ್ಲಿ ನನ್ನಲ್ಲಿ ದೋಷಗಳೇನಾದರೂ ಕಂಡುಬಂದವೆ ? ಮೊದಲು ಮಹಾರಣ್ಯದಲ್ಲಿ ಬಂದ ನಾನಾವಿಪತ್ತುಗಳನ್ನು ಕಣ್ಣಾರೆ ನೋಡಿ ಅದನ್ನು ಪರಿಹರಿಸಿ ಸುಖದಿಂದ ನನ್ನನ್ನು ಸಂರಕ್ಷಿಸಿದ ನಿನ್ನ ಉಪಚಾರವನ್ನು ನಾನು ಮರೆಯುವೆನೆ ? ಲಕ್ಷ್ಮಣಾ ! ನೀನು ನನಗೆ ಲೋಕಿಗರಂತೆ ಸಾಧಾರಣವಾದ ಮೈದುನನೆ ? ಅಯ್ಯೋ ! ನನ್ನನ್ನು ಈ ಕಟ್ಟಡವಿಯಲ್ಲಿ ಬಿಟ್ಟುಹೋಗಲು ನಿನಗೆ ಮನಸ್ಸೊಪ್ಪಿತೆ ? ಎಂದು ಕಂಬನಿದುಂಬಿ, ಕಾತರಿಸುತ್ತ ಮರಳಿ ಶ್ರೀರಾಮನನ್ನು ನೆನೆದು, ಅಕಟಕಟಾ ! ಸುಂದರಾಕಾರನಾಗಿ, ನವಮನ್ಮಥರೂಪನಾಗಿ, ಸುಗುಣಗಂಭೀರನಾಗಿ, ಶಾಂತಮೂರ್ತಿಯಾಗಿ ಸೌಖ್ಯಕ್ಕೆ ನಿಧಿಯಾಗಿದ್ದ ಶ್ರೀರಾಮನ ದಿವ್ಯಮಂಗಳ ವಿಗ್ರಹವನ್ನು ಮರೆತು ನಾನು ಹೇಗೆ ಪ್ರಾಣಗಳನ್ನಿಟ್ಟುಕೊಂಡಿರಲಿ ಎಂದು ಬಗೆಬಗೆಯಾಗಿ ಹಂಬಲಿಸುತ್ತ, ಅಡಿಗಡಿಗೆ ಮೂರ್ಛೆಹೋಗಿ ಎಚ್ಚತ್ತು ತನ್ನನ್ನೇ ನೋಡುತ್ತಿರುವ ಸೀತೆಯನ್ನು ಕಂಡು, ಲಕ್ಷ್ಮಣನು ಅಮ್ಮಾ ! ನಿನ್ನನ್ನು ಬಿಟ್ಟುಹೋಗಲು ನನಗೆ ಮನಸ್ಸುಬಾರದು, ಹೋಗದೆ ಇದ್ದರೆ ಅಣ್ಣನು ಏನುಮಾಡುವನೋ ! ನಾನೇನುಮಾಡಲಿ ಎಂದು ದುಃಖಿಸಿದನು. ಅದನ್ನು ಕಂಡು ಸೀತಾದೇವಿಯು ಅಪ್ಪಾ ! ಲಕ್ಷ್ಮಣಾ ! ನಿನ್ನೊಡನೆ ಮಾತನಾಡಿದರೆ ಫಲವೇನು ? ಮೊದಲು ಜನಸ್ಥಾನದಲ್ಲಿ ನನ್ನನ್ನು ಬಿಟ್ಟು

ಹೋದಂತೆ ಈಗಲೂ ಹೊರಟುಹೋಗು, ಪ್ರಾಣಗಳನ್ನು ಕಳೆದುಕೊಳ್ಳೋಣವೆಂದರೆಹಾಳುಬಸುರೊಂದು ಬೆಸಲಾಗಿರುವುದು. ಅಕಟಾ! ಅಹಾ ! ಈ ಅರಣ್ಯದಲ್ಲಿ ಬಂದುದನೆಲ್ಲ ಅನುಭವಿಸಿಕೊಂಡಿರುವೆನು. ನಮ್ಮತ್ತೆಯಾದ ಕೌಸಲ್ಯೆಗೆ ನನ್ನ ನಮಸ್ಕಾರವನ್ನು ಹೇಳಿ, ನಿರಪರಾಧಿಯಾದ ನನ್ನನ್ನು ಶ್ರೀರಾಮನು ಬಿಟ್ಟನೆಂಬುದನ್ನು ತಿಳಿಸು ! ಲಕ್ಷ್ಮಣಾ ! ಏತಕ್ಕೆ ಸುಮ್ಮನೆ ನಿಂತುಕೊಂಡಿರುವೆ ? ತಡಮಾಡಬೇಡ ! ಹೊರಡು ಬೇಗನೆಹೋಗಿ ಶ್ರೀರಾಮನಿಗೆ ನೆರವಾಗಿರು. ನನಗಾದರೊ ಈ ಅರಣ್ಯಮೃಗಗಳ ಆಶ್ರಯ ಉಂಟು. ರಾಮನು ಏಕಾಂಗಿಯಾಗಿರುವನಲ್ಲಾ ! ಲೋಕದಲ್ಲಿ ದೊರೆಯಾದವನು ಏನುಮಾಡಿದರೂ ಬೇಕು ಬೇಡವೆಂದು ಹೇಳತಕ್ಕವರೆ ಇಲ್ಲವೆ ! ಅಯ್ಯೊ ! ಲಕ್ಷ್ಮಣಾ ! ಭರತಶತ್ರುಘ್ನರು ಇದಕ್ಕೊಪ್ಪಿದರೆ ! ಗುರುಗಳಾದ ವಸಿಷ್ಠರು ಸಮ್ಮತಿಸಿದರೆ ? ಆಂಜನೇಯನು ಬದುಕಿರುವನೆ ? ಯಾರಿದ್ದರೆತಾನೆ ಏನು ? ರಾವಣನ ತಮ್ಮನಾದ ವಿಭೀಷಣನಿಗೆ ಕರುಣವುಂಟೆ ? ಅಣ್ಣನನ್ನು ಕೊಂದ ಸುಗ್ರೀವನು ದಯಾಪರನೆ ? ಧೊರೆಗೆ ಕಾಲೋಚಿತವಾದ ಮಂತ್ರತಂತ್ರವನ್ನು ತಿಳಿಸುವ ಸಚಿವ ಶಿರೋಮಣಿಗಳಿರುವರೆ ? ನೀನು ಈ ಕಾರ್ಯಕ್ಕೊಪ್ಪಿ ಇಲ್ಲಿಗೆ ನನ್ನನ್ನು ಕರತಂದು ಈಗ ಬಿಟ್ಟು ಹೋಗಲಾರೆ ಎಂದು ಅತ್ತರೆ ಫಲವೇನು ? ಆಹಾ ! ದಯಾಪರನಾದ ರಾಮನಲ್ಲಿ ಕೊಂಚವೂ ತಪ್ಪಿಲ್ಲ. ಬಹುಜನ್ಮಾರ್ಜಿತದ ಪಾಪರಾಶಿಗಳ ಫಲದಿಂದ ಹೆಣ್ಣಾಗಿ ಹುಟ್ಟಿದ ನನ್ನಿಂದಲೆ ತಪ್ಪಲ್ಲವೆ ? ಸಾಕು. ಇನ್ನು ಇಲ್ಲಿ ನಿಲ್ಲಬೇಡ. ನಿನಗೆ ಮಾರ್ಗದಲ್ಲಿ ಶುಭವಾಗಲಿ ಅಡಿಗಡಿಗೂ ಶುಭಶಕುನಂಗಳು ತಳೆದೋರಲಿ ಹೋಗು ಎಂದು ಹೇಳಲು ಸೀತಾದೇವಿಯನ್ನು ನೋಡಿ, ಆರ್ತನಾದ ಲಕ್ಷ್ಮಣನು ಆ ವನದೇವತೆಗಳನ್ನು ಕುರಿತು ಹೀಗೆ ಹೇಳಿದನು.

ಎಲೈ ವನದೇವತೆಗಳಿರಾ ! ಎಲೈ ವೃಕ್ಷಲತೆಗಳಿರಾ ! ಓ ಕ್ರಿಮಿಕೀಟ ಪಕ್ಷಿಗಳಿರಾ ! ಲತೆ ತೃಣ ಗುಲ್ಮಗಳಿಂದ ಕೂಡಿದ ಪಂಚಭೂತಂಗಳಿರಾ ! ಅಷ್ಟದಿಗ್ದೇವತೆಗಳಿರಾ ! ಓ ಧರ್ಮದೇವತೆ ! ಎಲೌ ಜಗಜ್ಜನನಿಯಾದ ಗಂಗಾ ಮಾತೆಯೆ ! ನೀವೆಲ್ಲರು ನಮ್ಮ ಅತ್ತಿಗೆಯಾದ ಜಾನಕಿಯನ್ನು ಸುಖದಿಂದ ಸಂರಕ್ಷಿಸಿಕೊಳ್ಳಿ ಅಮ್ಮಾ ! ಭೂದೇವಿ ನಿನ್ನ ಮಗಳು ನಿನ್ನ ಬಳಿಯಲ್ಲಿಯೇ ಇರುವಳು ಇವಳನ್ನು ಸಲಹಿಕೊ ! ಎಂದು ಹೇಳಿ ನಮಸ್ಕರಮಾಡಿ ಅಯ್ಯೋ ಇದೆಂತಹ ಕೆಲಸ ನನ್ನ ಹೃದಯವು ಎರಡಾಗಿ ಬಿರಿದುಹೋಯಿತು ನಿಷ್ಠುರವಾದ ಮನಸ್ಸಿನಿಂದ ಬಾಳುವ ಜನರ ಬಾಳಿಕೆಯನ್ನು ಸುಡಲಿ ! ಹಾ ! ಸೈರಿಸಲಾರೆ ಎಂದು ದುಃಖಿಸುತ್ತ ಹಿಂದುಮುದಾಗಿ ಅಲೆದಾಡುತ್ತಿರುವ ಮನಸ್ಸಿನಿಂದ ಲಕ್ಷ್ಮಣನು ಸೀತೆಗೆ ನಮಸ್ಕರಿಸಿ ಹಿಂದಕ್ಕೆ ಸೀತೆಯ ಕಡೆಗೂ, ಮುಂದೆ ರಾಮನ ಬಳಿಗೂ, ಹೋಗಲೆಳಸಿ ಮನಸ್ಸು ಉಯ್ಯಾಲೆಯಂತೆ ತೂಗುತ್ತಿರಲು, ತನ್ನನ್ನು

ಬಿಟ್ಟುಹೋಗುವನೆಂಬ ಸಂಕಟದಿಂದ ಕಂಬನಿದುಂಬಿ ಕಾತರಗೊಂಡು
ಮೂರ್ಛೆಹೋಗಿ, ನೆಲದಲ್ಲಿ ಹೊರಳಿ ಧೂಳಿನಲ್ಲಿ ಬೆರೆದು ಬಾಯ್ಬಿಟ್ಟು ಗೋಳಿ
ಡುತ್ತಿರುವ ಸೀತೆಯನ್ನು ಕಂಡು ದುಃಖಿಸುತ್ತ ತಾಯಿ ಹಸುವನ್ನು ಬಿಟ್ಟು
ಹೋಗುವ ಎಳೆಗರುವಿನಂತೆ ಆರ್ತನಾಗಿ ಲಕ್ಷ್ಮಣನು ಅಲ್ಲಿಂದ ಹೊರಟು ಮೆಲ್ಲ
ಮೆಲ್ಲನೆ ಗಂಗಾನದಿಯನ್ನು ದಾಂಟಿ ಮುಂದೆ ಹೊರಟು ಹೋಗುತ್ತಿದ್ದನು.



ವಾಲ್ಮೀಕಿಋಷಿಯು ಸೀತೆಯನ್ನು ಕಾಣುವಿಕೆ.

ಇತ್ತ ಲಕ್ಷ್ಮಣನು ಮರೆಯಾದ ಬಳಿಕ ಸೀತೆಯು ಹಾ ! ಎಂದು ಅತ್ತು
ಭಯದಿಂದಲೂ ದುಃಖದಿಂದಲೂ ಕೊರಗಿ ಬುಡವನ್ನು ಕೊಯ್ದ ಎಳೆಯ
ಬಳ್ಳಿಯ ಹಾಗೆ ಮೂರ್ಛೆಹೋಗಿ ಮೈಮರೆದು ಬಿದ್ದಳು. ಎಲೈ ಜನಮೇ
ಜಯರಾಯನೇ ಲಾಲಿಸು. ಆಗ ಅರಣ್ಯದಲ್ಲಿದ್ದ ಸಕಲ ಮೃಗಜೀವಿಗಳೂ,
ದುಃಖದಿಂದ ಕೊರಗುತ್ತ ಅನ್ನಾಹಾರಗಳನ್ನು ತೊರೆದು, ಜಾತಿವೈರವನ್ನು
ಬಿಟ್ಟು ಏಕ ಭಾವದಿಂದ ಕಲ್ಲುಮರಗಳು ಕರಗುವಂತೆ ದುಃಖಿಸುತ್ತಿದ್ದುವು.
ದುಂಬಿಗಳು ಮೊರೆಯದೆ ಹೋದವು. ನವಿಲುಗಳು ಕುಣಿವುದನ್ನು ಬಿಟ್ಟುವು.
ಹಂಸೆಗಳು ನಡೆಯಲಾರದೆ ಹೋದವು. ಚಕ್ರವಾಕಗಳು ಅಗಲಿದವು. ಗಿಳಿ
ಗಳು ಮಾತಾಡದಿದ್ದುವು. ಕೋಗಿಲೆಗಳು ಕಂಠಧ್ವನಿಯನ್ನು ಕಳೆದುವು.
ಹೀಗೆ ಎಲ್ಲಾ ಮೃಗಜೀವಿಗಳೂ ತಂತಮ್ಮ ಆನಂದ ಕ್ರೀಡೆಯನ್ನು ತೊರೆದು
ಸೀತೆಯ ದುಃಖವೆ ತಮ್ಮದೆಂದರಿತು ಮರುಗುತ್ತ ಉಪಚರಿಸತೊಡಗಿ ಚಮರಿ
ಗಳು ಬಾಲದಿಂದ ಗಾಳಿಯನ್ನು ಬೀಸಿದವು ಆನೆಗಳ ಚಿಗುರೆಲೆಗಳು ಹಾಸಿಗೆ

ಯನ್ನು ಹಾಸಿದವು, ಚಕ್ಕವಕ್ಕಿಗಳು ತಣ್ಣೀರಿನಲ್ಲಿ ಮುಳುಗಿ ನೀರನ್ನು ತಂದು ತುಂತುರಾಗಿ ಉದುರಿಸಿದವು, ಹಂಸೆಗಳು ತಮ್ಮ ರೆಕ್ಕೆಗಳನ್ನು ಬಿಚ್ಚಿ ಮುಖ ಮಂಡಲಕ್ಕೆ ಬಿಸಿಲಾಗದಂತೆ ಕೊಡೆಯಾಗಿ ಹಿಡಿದು ಉಪಚಾರಗೈದುವು. ಬಳಿಕ ಗಂಗಾನದಿಯು ಅಲೆಗಳಿಗೆ ಸಿಕ್ಕಿ ಹೊರಕ್ಕೆ ಬರಲಾರದೆ ಎದ್ದುಬಂದು ಆಗತಾನೆ ಅರಳಿದ ಅಲದಾವರೆಯ ನರುಗುಂಪನ್ನು ಹೊತ್ತುಕೊಂಡು ಬರಲಾರದೆ ಇದ್ದರೂ ಸೀತಾದೇವಿಯ ಸಂತಾಪವನ್ನು ಹೋಗಲಾಡಿಸದೆ ಇರಬಾರದೆಂದು ಹಂಬಲಿಸಿ ಆತುರದಿಂದ ಮೆಲ್ಲಮೆಲ್ಲಗೆ ಬಂದು ಪರರಿಗೆ ಉಪಕಾರಿಯಾದ ಸತ್ಪುರುಷನು ತನ್ನ ಕಷ್ಟವನ್ನು ಎಣಿಸುವನೆ ? ಎಂಬಂತೆ ಶೈತ್ಯ ಸೌರಭ ಮಾಂಧ್ಯಗಳಿಂದ ಕೂಡಿದ ತಂಗಾಳಿಯು ಬೀಸಿತು ಆ ಮಂದಮಾರುತನ ಮೈಸೋಂಕಿನಿಂದ ಸೀತೆಯು ಎಚ್ಚತ್ತು ತನಗೆ ಮುಂದೆ ಹೋಗುವುದಕ್ಕೆ ಮಾರ್ಗವಾವುದೆಂದು ದೆಸೆದಿಕ್ಕುಗಳನ್ನು ನೋಡಿ ಧೂಳಿಡಿದ ಮೈ ಘಾಯಗಳಾದ ಅವಯವ ಬಿಚ್ಚಿಹೋದ ಬಳಲ್ದುರುಬುಗಳ ವಿಕಾರಂಗಳನ್ನು ಲೆಕ್ಕಮಾಡದೆ ಅಯ್ಯೋ ಮಿಥಿಳಾಧಿಪತಿಯಾದ ಜನಕನ ವಂಶದಲ್ಲಿ ಹುಟ್ಟಿ ಸೂರ್ಯವಂಶದ ದಶರಥನಿಗೆ ಸೊಸೆಯಾಗಿ ಲೋಕಾಧೀಶನಾದ ರಾಮನನ್ನು ಮದುವೆಯಾಗಿ ಮನ್ನಣೆಯಿಂದ ಬಾಳತಕ್ಕ ಭಾಗ್ಯವನ್ನು ನಾನು ಪಡೆದಿದ್ದರೂ ಭಿನ್ನರೂಪವಾಗಿರುವ ಈ ಅರಣ್ಯದಲ್ಲಿ ದುಃಖದಿಂದ ಕೊರಗುವಂತಾಯಿತೆ ಹಾ ! ನನ್ನ ಅದೃಷ್ಟವನ್ನು ಏನು ಹೇಳಲಿ ಎಂದು ಅಳುತ್ತಿದ್ದಳು. ಆಕಾಲದಲ್ಲಿ ಯಜ್ಞಕ್ಕಾಗಿ ಯೂಪಸ್ತಂಭವನ್ನು ಹುಡುಕುತ್ತ ತನ್ನ ಶಿಷ್ಯರೊಡನೆ ಅಲ್ಲಿಗೆ ಬಂದ ವಾಲ್ಮೀಕಿಯು ಈ ರೋಧನ ಧ್ವನಿಯನ್ನು ಕೇಳಿ ಹುಡುಕುತ್ತ ಬಂದು ಅನಾಥಳಂತೆ ಅರಣ್ಯದಲ್ಲಿ ಏಕಾಕಿಯಾಗಿ ಸರಳುತ್ತ ದುಃಖದಿಂದ ಬಾಡಿದ ಮುಖವುಳ್ಳವಳಾಗಿ, ಗ್ರೀಷ್ಮಕಾಲದ ಬಿಸಿಲಿನಿಂದ ಬಗೆಗೆಟ್ಟ ಆರಣ್ಯಾಭಿಮಾನ ದೇವತೆಯಂತೆ ಕಂಗೆಟ್ಟಿರುವ ಸೀತಾದೇವಿಯನ್ನು ಕಂಡು ಅಮ್ಮಾ ! ನೀನು ಯಾರು ? ಈ ಕಾಡಿನಲ್ಲಿರಲು ಕಾರಣವೇನು? ನಿನ್ನನ್ನು ನೋಡಿದ ಗುರುತಿರುವುದಲ್ಲಾ ! ಅಯ್ಯೋ! ಬಹಳವಾಗಿ ಬೆದರಿಬೆಂಡಾಗಿರುವೆಯಲ್ಲಾ ! ಇದಕ್ಕೆ ಕಾರಣವೇನು ಹೇಳು ಆರ್ತರಾದವರನ್ನು ಕಂಡು ಸುಮ್ಮನೆ ಹೋಗುವುದು ಯತಿಗಳ ಧರ್ಮವಲ್ಲ ಹೆದರಬೇಡ ನಿಜವನ್ನು ಹೇಳು. ನನ್ನ ಹೆಸರು ವಾಲ್ಮೀಕಿ ಧೈರ್ಯದಿಂದ ನಿನ್ನ ಸಂಗತಿಯನ್ನು ಹೇಳು ಎಂದನು. ಅದನ್ನು ಕೇಳಿದ ಕೂಡಲೆ ಸೀತೆಗೆ ಸಂತೋಷ ಉಂಟಾಯಿತು. ದುಃಖವು ಹೆಚ್ಚುತ್ತಲೆ ಬಂದಿತು. ಕೂಡಲೆ ನಾಚಿಕೆಯೂ ತಲೆಹಾಕಿತು. ಬಳಿಕ ಗದ್ಗದಕಂಠಳಾಗಿ ಸೀತೆಯು ನಿರಪರಾಧಿಯಾದ ನನ್ನನ್ನು ಶ್ರೀರಾಮನು ತೊರೆದುಬಿಟ್ಟನೆಂದು ಹೇಳಿ ಲಕ್ಷ್ಮಣನು ಈ ಅರಣ್ಯದಲ್ಲಿ ಬಿಟ್ಟುಹೋದನು. ಅಯ್ಯೋ ! ಪ್ರಾಣತ್ಯಾಗವನ್ನಾದರೂ ಮಾಡಿಕೊಂಡು ಸುಖವಾಗಿರೋಣ

ಎಂದರೆ ದೇಹದಲ್ಲಿ ಬೆಸಲಾದ ಬಸುರೊಂದು ಬಾಧಿಸುತ್ತಿರುವುದು, ನಾನೇನು ಮಾಡಲಿ ? ಎಂದು ವಾಲ್ಮೀಕಿಗೆ ನಮಸ್ಕರಿಸಿದಳು.

ಅಮ್ಮಾ ! ಇನ್ನು ವ್ಯಸನಪಡಬೇಡ, ನಾನು ಜನಕನಿಗೆ ಅನ್ಯನಲ್ಲ. ಅವನಿಗಿಂತಲೂ ಅಧಿಕವಾದ ಪ್ರೀತಿಯಿಂದ ನಿನ್ನನ್ನು ಸಂರಕ್ಷಿಸುವೆನು ಭಯವನ್ನು ಬಿಡು. ಅವಳಿಯು ಮಕ್ಕಳನ್ನು ಪಡೆದು ಸುಖವಾಗಿರುವೆ. ನಾನು ನಿನ್ನ ಬಯಕೆಗಳನ್ನೂ ಸಲಿಸುತ್ತ, ಸುಖವಾಗಿ ಕಾಪಾಡುವೆನು ಎಂದು ಒಡಂಬಡಿಸಿ ಶ್ರೀರಾಮನ ಹೆಂಡತಿಯಾದ ಸೀತೆಯನ್ನು ವಾಲ್ಮೀಕಿಮಹರ್ಷಿಯು ತನ್ನಾಶ್ರಮಕ್ಕೆ ಕರೆದುಕೊಂಡು ಬಂದನು. ಬಳಿಕ ವಾಲ್ಮೀಕಿಋಷಿಯ ಆಜ್ಞೆಯಂತೆ ವಟುಗಳು ವಿಚಿತ್ರವಾದ ಎಲೆವನೆಯನ್ನು ಕಟ್ಟಿದರು. ಜಾತಿವೈರಗಳಿಲ್ಲದ ಪ್ರಾಣಿವರ್ಗದಿಂದಲೂ ವೇದಾಧ್ಯಯನದಿಂದ ಕೂಡಿದ ಹೋಮಧೂಮಗಳ ಸೊಗಸಿನಿಂದಲೂ ಋತುಭೇದವಿಲ್ಲದೆ ತಳಿರಾಂತು ಪೂತುಪರಿಮಳಭಾವದಿಂದಿರುವ ಲತಾವೃಕ್ಷಗಳ ಸೊಬಗಿನಿಂದಲೂ ಸೊಂಪಿನಿಂಪಿನಿಂದ ಆನಂದಳಾಗಿ ಮುನಿವಧುಗಳಿತ್ತ ಆಹಾರವೂ, ವಟುಗಳ ಪರಿಚರ್ಯೆಯೂ ಋಷಿಜನಂಗಳ ಸತ್ಕಾರವೂ, ವಾಲ್ಮೀಕಿಯ ಅನುದಿನದ ಆದರಣೆಯೂ ಅತಿಶಯವಾಗಿರಲು ಜಾನಕಿಯು ಯಾವ ವ್ಯಸನವನ್ನು ಕಾಣದೆ ಸಂತೋಷದಿಂದಿರುತ್ತಿದ್ದಳು. ಬಳಿಕ ಸೀತಾದೇವಿಯ ಬಸುರಿಗೆ ನವಮಾಸ ತುಂಬಿ ಒಂದಾನೊಂದು ದಿನ ಸುಕರವಾದ ಶುಭಲಗ್ನದಲ್ಲಿ ಸೂಳೆರಿದು ಸೇವಿಸುತ್ತಿರುವ ಋಷಿಪತ್ನಿಯರ ನಡುವೆ ಸೀತೆಯು ಅವಳಿ ಮಕ್ಕಳನ್ನು ಹಡೆದಳು. ತನ್ನ ಶಿಷ್ಯರ ಮುಖದಿಂದ ಅದನ್ನು ಕೇಳಿ ವಾಲ್ಮೀಕಿಯು ಹರುಷದಿಂದೈತಂದು ಕುಶಲವಂಗಳಿಂದಭಿಷೇಕಿಸಿ ಆ ಮಕ್ಕಳಿಬ್ಬರಿಗೂ ಕುಶಲವರೆಂದುಹೆಸರಿಟ್ಟನು. ಏಕಕಾಲದಲ್ಲಿಹುಟ್ಟಿದ ಸೂರ್ಯಚಂದ್ರರೋ ಎನ್ನುವಂತಿರುವ ಆ ಮಕ್ಕಳನ್ನು ಕಂಡು ಮೂರು ಲೋಕದ ಜನಗಳು ನಲಿದರು. ಬಳಿಕ ವಾಲ್ಮೀಕಿಯು ಬಾಲದೊಡಿಗೆಗಳನ್ನು ತೊಡಿಸಿ, ಲೀಲೆಯಿಂದ ಮುದ್ದಾಡಿ ಬಾಯಿಗ್ಗಿನಿದಾದ ವಸ್ತುಗಳನ್ನು ತಿನ್ನಿಸುತ್ತ, ಸದಾ ತನ್ನ ಮಡಿಲಲ್ಲಿಟ್ಟು, ಲಾಲಿಸುತ್ತ ಜಪತಪಸಮಾಧಿಗಳ ಕಾಲವನ್ನು ಮರೆದು, ಬ್ರಹ್ಮಾನಂದದ ಬಯಕೆಗೆ ತಕ್ಕ ಬಾಳ್ತೆನದಂತೆ ಬಹಳವಾದ ಹರುಷದಿಂದ ಅವರೊಡನೆ ಕಾಲವನ್ನು ಕಳೆಯುತ್ತಿದ್ದನು. ಹಾಗಿದ್ದರೂ ಶ್ರೀರಾಮನ ಅರಮನೆಯಲ್ಲಿ ಬೆಳೆಯುವ ಈಮಕ್ಕಳಿಗೆ ಹೇಗೆ ಅರಣ್ಯವಾಸ ಉಂಟಾಯಿತೆಂದು ಸೀತೆಯು ಮರುಗದಂತೆ, ವಾಲ್ಮೀಕಿಯು ಬಗೆಬಗೆಯಾದ ಆಟಪಾಟಗಳಿಂದ ಕುಶಲವರನ್ನು ಸಾಕುತ್ತಿದ್ದನು.

ಹೀಗೆ ವಾಲ್ಮೀಕಿಯ ಆದರಣೆಯಿಂದ ಕುಶಲವರಿಬ್ಬರೂ ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ವೃದ್ಧಿಹೊಂದುತ್ತ ಬಂದರು. ಸೌಂದರ್ಯವು ಎರಡು

ಗುರಿಪಾಯಿತೋ ? ನೈರ್ಮಲ್ಯವು ಕವಲೊಡೆಯಿತೋ ? ಅಥವಾ ವಿಜಯ ಧ್ವಜವು, ಎಂಟು ದಿಕ್ಕುಗಳನ್ನೂ ಆವರಿಸಿತೋ ! ಸತ್ಕೀರ್ತಿಯ ಪ್ರವಾಹವು ಇಬ್ಬಗೆಯಾಗಿ ಹಬ್ಬಿದುದೋ ! ಅಲ್ಲದೆ ಸಂತೋಷವೆಂಬ ಬೆಳೆಯಿಂದ ಕೂಡಿದ ಭೂಭಾಗವೊ ! ವಂಶೋದ್ಧಾರಕನಾದ ಚಂದ್ರನಲ್ಲಿ ಕಾಣಬರುವ ಕೊಂಬುಗಳೊ ! ಮೋಹರಸಯಮಳನದಿಯೋ ! ಅಥವಾ ರಸಭರಿತವಾದ ಅವಳಿಯ ಹಣ್ಣೋ ಎನ್ನುವಂತೆ ಆಕುಮಾರರು ವಾಲ್ಮೀಕಿಯ ಆಶ್ರಮದಲ್ಲಿ ಬೆಳೆಯುತ್ತಿದ್ದರು. ಹೀಗಿರುವ ಮಕ್ಕಳಿಗೆ ವಾಲ್ಮೀಕಿಯು ಕಾಲಾನುಸಾರವಾಗಿ ಜಾತಕರ್ಮ, ನಾಮಕರಣ, ಚೌಲ ಉಪನಯನಾದಿಗಳನ್ನು ಮಾಡಿ, ತಕ್ಕಕಾಲದಲ್ಲಿ ಅಕ್ಷರಾಭ್ಯಾಸವಂಗೆಯ್ಸಿ, ಬ್ರಾಹ್ಮಣ ಸಮೂಹಕ್ಕೆ ಭೂರಿ ದಕ್ಷಿಣೆ ಮೃಷ್ಟಾನ್ನ ಭೋಜನಗಳನ್ನು ಮಾಡಿಸಿ ಸರ್ವರನ್ನೂ ಆನಂದಪಡಿಸಿದನು, ಸೀತೆಯು ಬಹಳ ಸಂತೋಷದಿಂದಿದ್ದಳು. ಬಳಿಕ ಸರ್ವಕರ್ಮಗಳ ವಿಧಿಯನ್ನೂ, ವೇದಶಾಸ್ತ್ರಗಳ ಬಗೆಯನ್ನೂ, ಧರ್ಮದ ನೆಲೆಯನ್ನೂ ರಾಜನೀತಿಗಳ ಬೆಸುಗೆಯನ್ನೂ, ಸಾಂಗವಾಗಿ ಬೋಧಿಸಿದ ತರುವಾಯ ವಾಲ್ಮೀಕಿಮಹರ್ಷಿಯು ಆಬಾಲಕರಿಬ್ಬರಿಗೂ ಧನುರ್ವೇದವನ್ನು ಚೆನ್ನಾಗಿ ಕಲಿಸಿ, ಗಾನರಸದುಕ್ಕೆಯನ್ನರಿದು ವೀಣೆಯಲ್ಲಿ ವೇದವನ್ನು ರಾಮಾಯಣವನ್ನು ಸುಬೋಧವಾಗಿ ಬಾರಿಸುವಂತೆ ಬೋಧಿಸಲು ಸೀತೆಯು ನಲಿಯುವಂತೆ, ವಾಲ್ಮೀಕಿಯು ಮೆಚ್ಚುವಹಾಗೆ, ಕುಶಲವರಿಬ್ಬರೂ ರಾಗ ರಸ ತಾಳ ಲಯ ಬದ್ಧವಾಗಿ ಅನುದಿನವೂ ದೇವಪುರನಿಲಯ ಲಕ್ಷ್ಮೀರಮಣ ಚರಿತ್ರೆಯಾದ ರಾಮಾಯಣವನ್ನು ಸುಸ್ವರದಿಂದ ಮಧುರವಾಗಿ ವೀಣೆಯಲ್ಲಿ ಬಾರಿಸುತ್ತಿದ್ದರೆಂಬಲ್ಲಿಗೆ-ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿ ನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಹತ್ತೊಂಬತ್ತನೆಯ ಸಂಧಿ ಸಂಪೂರ್ಣಂ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

# ಇಪ್ಪತ್ತನೆಯ ಸಂಧಿ.

## ಲವನು ರಾಮನ ಅಶ್ವಮೇಧದ ಕುದುರೆಯನ್ನು ಕಟ್ಟಿದುದು.

ಎಲೈ ಜನಮೇಜಯರಾಯನೇ ಕೇಳು. ಹೀಗೆ ಕುಶಲವರಿಬ್ಬರೂ ಸಮಸ್ತ ವಿದ್ಯೆಗಳನ್ನೂ ಕಲಿತು ಕುಶಲಮತಿಗಳಾಗಿ ವಾಲ್ಮೀಕಿಯನ್ನು ಮೆಚ್ಚಿಸಿ, ಸೀತೆಯನ್ನು ಸಂತೋಷಪಡಿಸಿ, ಋಷಿಗಳಿಂದ ಹೊಗಳಿಸಿಕೊಂಡು, ತನ್ನಾಶ್ರಮದಲ್ಲಿ ಸುಖದಿಂದಿರುತ್ತಿರಲು, ಮಹರ್ಷಿಯಾದ ವಾಲ್ಮೀಕಿಯು ತನ್ನ ತಪೋಬಲದಿಂದ ಅವರಿಬ್ಬರಿಗೂ ಬಿಲ್ಲು, ಬಾಣ, ಬತ್ತಳಿಕೆ, ಕತ್ತಿ, ಗುರಾಣಿ ಮೊದಲಾದ ಯುದ್ಧ ಸಾಮುಗ್ರಿಗಳನ್ನೂ ಮನೋಹರವಾದ ವಜ್ರ ಕವಚ, ಕಿರೀಟಕುಂಡಲಗಳನ್ನೂ ತರಿಸಿಕೊಟ್ಟನು.

ಹೀಗೆ ವಾಲ್ಮೀಕಿಯ ಆಶ್ರಮದಲ್ಲಿ ಆ ಯಮಳರು ಆನಂದಭರಿತರಾಗಿ ವರ್ಧಿಸುತ್ತಿರಲು ಅಯೋಧ್ಯಾಪುರಕ್ಕೆ ಅಧಿರಾಜನಾಗಿ ಮೆರೆಯುತ್ತಿದ್ದ ಶ್ರೀರಾಮನು ರಾವಣಾದಿ ರಾಕ್ಷಸರವಧೆಯಿಂದ ತನಗುಂಟಾದ ಬ್ರಹ್ಮಹತ್ಯೆಯನ್ನು ಕಳೆದುಕೊಳ್ಳಲೋಸುಗ ಅಶ್ವಮೇಧಯಾಗವನ್ನು ಮಾಡಬೇಕೆಂದು ನಿಶ್ಚಯಿಸಿ ಗುರುವಾದ ವಸಿಷ್ಠಮುನಿಯ ಮೂಲಕ ವಾಮದೇವ, ಅತ್ರಿ, ಗಾಲವ, ವಿಶ್ವಾಮಿತ್ರ, ಜಾಬಾಲಿ ಮೊದಲಾದ ಋಷಿವರ್ಯರನ್ನು ಕರೆಸಿ, ಅವರಿಂದ ಆ ಯಾಗ ವಿಧಾನವನ್ನು ಕೇಳಿ ತಿಳಿದುಕೊಂಡು, ಈ ಯಾಗವನ್ನು ಮಾಡುವುದಕ್ಕೆ ಪಟ್ಟಮಹಿಷಿಯು ಬೇಕೆಂದು ಹೇಳಿದ ಆ ಋಷೀಶ್ವರ ವಚನವನ್ನು ಅನುಸರಿಸಿ, ಭಂಗಾರದಿಂದ ಮಾಡಿದ ಮಂಗಳಾಂಗಿಯಾದ ಸೀತಾದೇವಿಯ ವಿಗ್ರಹವನ್ನು ತನ್ನೆಡೆಯಲ್ಲಿಟ್ಟುಕೊಂಡು ಯಜ್ಞಮಾಡುವುದಾಗಿ ಗೊತ್ತುಮಾಡಿ, ಋಷಿಮಂಡಲಿಯನೊಡಂಬಡಿಸಿ, ಯಾಗಮಂಟಪವನ್ನು ಸಜ್ಜುಗೈದು ವೇದೋಕ್ತಕ್ರಮದಿಂದ ದೀಕ್ಷೆಯನ್ನು ವಹಿಸಿ, ಕುದುರೆಯನ್ನು ಪೂಜೆಮಾಡಿ ತನ್ನ ಬಿರುದಿನ ಬರಹವನ್ನು ಚಿನ್ನದ ಹಲಗೆಯಲ್ಲಿ ಕೆತ್ತಿಸಿ, ಆ ಕುದುರೆಯ ಹಣೆಗೆ ಕಟ್ಟಿ ಭೂಮಂಡಲವನ್ನು ಸುತ್ತಿಕೊಂಡು ಬರುವಂತೆ ಆ ಕುದುರೆಯನ್ನು ಬಿಟ್ಟು ಅದರ ಬೆಂಗಾವಲಿಗಾಗಿ ಮೂರು ಅಕ್ಷೋಹಿಣಿಯ ಮೂಲಬಲದೊಡನೆ ತಮ್ಮನಾದ ಶತ್ರುಘ್ನನನ್ನು ಕಳುಹಿಸಲು, ಆ ಯಾಗಾಶ್ವವು ಸ್ವೇಚ್ಛೆಯಿಂದ ಭೂಮಿಯಮೇಲೆ ತಿರುಗಾಡುತ್ತಿದ್ದಿತು. ಇಂತಪ್ಪ ಕುದುರೆಯನ್ನು ಕಂಡು ಭೂಲೋಕದ ರಾಜರೆಲ್ಲರು ತಮ್ಮಗ್ಗಳಿಕೆಯನ್ನು ತೃಣವಾಗಿಬಗೆದು ರಾಮನಾಮಂಗಳಿಗೆ ನಮಸ್ಕರಿಸಿ ಕುದುರೆಯನ್ನು ಮರ್ಯಾದೆಯಿಂದ ಪೂಜಿಸಿ, ಭರತನನ್ನು ಸನ್ಮಾನಮಾಡಿ ಕಪ್ಪಕಾಣಿಕೆಗಳನ್ನು ಕೊಟ್ಟು ಕಳುಹಿಸುತ್ತಿದ್ದರು. ಹೀಗಿರುವಲ್ಲಿ ಆ ಕುದುರೆಯು ಒಂದಾನೊಂದು ದಿನ ವಾಲ್ಮೀಕಿಮಹರ್ಷಿಯ ಆಶ್ರಮದಬಳಿಯಲ್ಲಿರುವ ಉಪವನದೆಡೆಗೆ

ಬಂದು ಹಸುರಾಗಿ ಬೆಳೆದಿರುವ ಹೊಸಗರಿಕೆಯ ಹುಲ್ಲನ್ನು ಮೆಲ್ಲುತ್ತ ಲೀಲೆಯಿಂದ ಸಂಚರಿಸುತ್ತಿದ್ದಿತು. ಆಗ ಆ ಉಪವನದಬಳಿಯಲ್ಲಿ ಮುನಿವಟುಗಳೊಡನೆ ಬಿಲ್ಲುಬಾಣಗಳನ್ನು ಹಿಡಿದು, ಆಟವಾಡುತ್ತಿದ್ದ ಲವನು ಈ ಯಾಗದ ಕುದುರೆಯನ್ನು ಕಂಡು, ಇದೇನು ಈ ನಮ್ಮ ಆಶ್ರಮಕ್ಕೆ ಅರಸುಗಳ ಕುದುರೆ ಎಲ್ಲಿಂದ ಬಂದಿತು ? ತೋಟವನ್ನು ತುಳಿದು ಹಾಳುಮಾಡುತ್ತಿರುವದಲ್ಲ ! ನಮ್ಮೊಡೆಯನಾದ ವಾಲ್ಮೀಕಿಯು ಕಾರ್ಯಾಂತರದಿಂದ ವರುಣಲೋಕಕ್ಕೆ ಹೋಗುವಾಗ ಆಶ್ರಮದ ಉಪವನವನ್ನು ಎಚ್ಚರಿಕೆಯಿಂದ ಕಾದುಕೊಂಡಿರು ಎಂದು ನೇಮಿಸಿ ಹೋದನು. ನಾನು ಈಗ ಸುಮ್ಮನಿದ್ದರೆ ಈ ಕುದುರೆಯು ನಮ್ಮ ಉದ್ಯಾನವನ್ನು ಸಂಪೂರ್ಣವಾಗಿ ನಾಶಮಾಡುವುದು, ಮುನಿನಾಥನು ಬಂದ ಮೇಲೆ ನನ್ನಮೇಲೆ ಕೋಪಿಸಿಕೊಂಡಾನು ! ಎಂದು ಹೇಳುತ್ತ ಕುದುರೆಯ ಬಳಿಗೆ ಬಂದು ಅದರ ಹಣೆಯಲ್ಲಿ ಕಟ್ಟಿರುವ ಬಿರುದಾವಳಿಯ ಬರಹವನ್ನೋದಿ, ಆಹಾ ! ಲೋಕದಲ್ಲಿ ಕೌಸಲೆಯ ಮಗನಾದ ರಾಮನೊಬ್ಬನೆ ಶೂರನಂತೆ, ಆತನ ಯಾಗದ ಕುದುರೆಯನ್ನು ಮಿಡಕುಳ್ಳ ಗಂಡುಗಲಿಗಳು ಕಟ್ಟಬಹುದಂತೆ ! ಆಗಲಿ, ಆ ರಾಮನ ಗರ್ವವನ್ನು ಬಿಡಿಸುವೆನು ! ಹಾಗೆ ನಾನು ಆತನ ಬಿಂಕವನ್ನು ಬಿಡಿಸದಿದ್ದರೆ ಲೋಕದವರೆಲ್ಲರು ನಮ್ಮ ತಾಯಿಯನ್ನು ಬಂಜೆಯೆಂದು ಕರೆಯದಿರುವರೆ ? ಅಲ್ಲದೆ ಬಲಯುಕ್ತವಾದ ಈ ಬಾಹುಗಳು ನನಗಿದ್ದು ಫಲವೇನು ? ಎಂದು ಪಂತವಾಡಿ, ತಾನು ಹೊದೆದಿದ್ದ ಉತ್ತರೀಯವನ್ನು ತೆಗೆದು ಹುರಿಯಾಗಿ ಹೊಸೆದು ಕುದುರೆಯಕತ್ತಿಗೆ ಬಿಗಿದು, ಅದನ್ನು ಒಂದಾನೊಂದು ಬಾಳೆಯಗಿಡಕ್ಕೆ ಕಟ್ಟಹಾಕಿದನು. ಆಗ ಆ ವಟುಗಳು ಅಯ್ಯಾ ! ಅರಸುಗಳ ಕುದುರೆಯನ್ನು ಕಟ್ಟಬೇಡ, ಕಾವಲಿನವರು ಬಂದು ಹೊಡೆದಾರು, ಬಿಟ್ಟುಬಿಡು ಎಂದು ಹೇಳುತ್ತಿದ್ದರು. ಆಹಾ ! ಇದೀಗ ಬಹಳ ಚೆನ್ನಾಯಿತು, ನಿಮ್ಮಂತೆ ಹೆದರಿಕೊಳ್ಳುವುದಕ್ಕೆ ನಾನೇನು ಬ್ರಾಹ್ಮಣಕುಮಾರನೆ ? ನೀವು ನಿಮ್ಮ ಆಶ್ರಮಕ್ಕೆ ಹೋಗಿ ಇಲ್ಲಿರಬೇಡಿ. ಯಾರಾದರೂ ಬರಲಿ ಅವರಬಲವನ್ನು ಬಯಲು ಮಾಡುವೆನು ಎಂದು ಹೇಳುತ್ತ ಬಿಲ್ಲಿಗೆ ಹೆದೆಯನ್ನೇರಿಸಿ, ಧನುಷ್ಟಂಕಾರ ಮಾಡಿ, ಕುದುರೆಗೋಸ್ಕರ ಯಾರು ಬರುವರೋ ಎಂದು ಎದುರುನೋಡುತ್ತಿದ್ದನು. ಅಷ್ಟುಹೊತ್ತಿಗೆ ಕುದುರೆಯನ್ನು ಕಾಯುತ್ತಿದ್ದ ವೀರಭಟರು ಓಡಿ ಬಂದು ಬಾಳೆಯಗಿಡಕ್ಕೆ ಬಿಗಿದಿರುವ ಕುದುರೆಯನ್ನು ಕಂಡು ಕಣ್ಗೆರಳಿ ಕೋಪಿಸಿಕೊಂಡು, ಮುನಿಕುಮಾರರನ್ನು ಕುರಿತು ಅಯ್ಯಾ ! ನಮ್ಮ ಕುದುರೆಯನ್ನು ನೀವೇತಕ್ಕೆ ಕಟ್ಟದಿರಿ ಎಂದು ಕೇಳಿದರು. ಸತ್ವಗುಣಪ್ರಧಾನರಾದ ಮುನಿಕುಮಾರರು ವೀರರ ಆರ್ಭಟೆಗೆ ಹೆದರಿ ಅಪ್ಪಾ ! ಈ ಕುದುರೆಯನ್ನು ನಾವು ಕಟ್ಟಲಿಲ್ಲ ! ಅಗೋ ಅಲ್ಲಿ ನಿಂತಿರುವ ಲವಕುಮಾರನು ಬೇಡವೆಂದು ಹೇಳಿದರೂ

ಕೇಳದೆ ಅದನ್ನು ಹಿಡಿದು ಕಟ್ಟಿದನು ಎಂದು ಅವನನ್ನು ಬೆರಲಿಂದಗುರುತಿಸಿ ತೋರಿಸಿದರು. ಬಳಿಕ ಆ ಸೈನಿಕರು ಅಯ್ಯೋ! ಇವನು ಇನ್ನು ಹುಡಗನಾಗಿ ಇರುವನು, ಮಕ್ಕಳಾಟಕೆಯಿಂದ ಕಟ್ಟಿಕೊಂಡಿರಬಹುದು, ಆಗಲಿ ಗದರಿಸಿ ನೋಡೋಣವೆಂದು ಬಗೆದು ಹಾ! ಎಲೈ ಹಸುಮಗುವೆ? ನಮ್ಮ ಕುದುರೆಯನ್ನು ನೀನೇಕೆ ಕಟ್ಟಿಕೊಂಡಿರುವೆ? ಬಿಟ್ಟುಬಿಡು ಎಂದು ಬೆದರಿಸಿದರು. ಅಹಾ! ನಿಮ್ಮ ಗರ್ವಕ್ಕೆ ನಾನು ಹೆದರುವೆನೆ? ಹಮ್ಮುಹೆಮ್ಮೆಗಳನ್ನು ನಮ್ಮೊಡನೆ ತೋರಿಸಬೇಡಿ. ಕುದುರೆಯನ್ನು ನಾನೆಂದಿಗೂ ಬಿಡುವನಲ್ಲ, ಬಿಡುವುದಕ್ಕೆ ಬಂದರೆ ಕೈಕಡಿದು ಕಾಗೆಗಳಿಗೆ ಔತಣಮಾಡಿಸುವೆನು ಎಂದು ಹೇಳಿದನು. ರಾವುತರು ಆಗಲಿ ನೋಡೋಣವೆಂದು ಮುಂದರಿದು ಕುದುರೆಯನ್ನು ಬಿಚ್ಚಲೊಜ್ಜುಗಿಸಲು ಕೈಗಳನ್ನು ಗುರಿಯಿಟ್ಟು ಬಾಣದಿಂದ ಕಡಿದು ಬೆಂಗಾವಲ ಸೇನೆಯನ್ನು ಬೇಗಬೇಗನೆ ಬಾಣಜಾಲದಿಂದ ಮುತ್ತಿದನು. ಕೂಡಲೆ ಅವರು ಹದವಾಗಿ ಮಸೆದ ಕತ್ತಿ, ಕಣೆ, ಗದೆ, ತೋಮರ, ಮುಸಲ, ಶಕ್ತಿ, ಭಿಂಡಿವಾಲ, ಗಂಡುಕೊಡಲಿಗಳಿಂದ ಉಮ್ಮಳಿಸಿ ಮೇಲೆಬಿದ್ದರು. ಲೆಕ್ಕವಿಲ್ಲದೆ ಮೇಲೆಬೀಳುತ್ತಿರುವ ಕಕ್ಕಸದ ಬಾಣಗಳನ್ನು ತನ್ನ ಸಾಹಸದಿಂದ ಕಡಿದು ಹಾಕಿ ಶತ್ರುಸೇನೆಯನ್ನು ನುಚ್ಚುನೂರಾಗಿ ಕತ್ತರಿಸಿ ಕೆಡಹುತ್ತ ವಾಲ್ಮೀಕಿ ತನಗೆ ಕೊಟ್ಟಿದ್ದ ಅಕ್ಷಯತೂಣೀರ ಅಖಂಡ ಕೋದಂಡಗಳನ್ನು ಹಿಡಿದು, ಪುಂಖಾನುಪುಂಖವಾಗಿ ಲೀಲೆಯಿಂದ ಬಾಣವನ್ನು ಹೊಡೆದು ಕಾಲುಬಲವನ್ನು ಸವರುತ್ತಿರುವ ವೀರನಾದ ಲವನ ಪರಾಕ್ರಮವನ್ನು ನೋಡಿ, ಶತ್ರುಘ್ನನು ಕೋಪದಿಂದ ಕುದಿಯುತ್ತ ತನ್ನ ರಥವನ್ನು ಏರಿದನು.

ಎಲೈ ಜನಮೇಜಯರಾಯನೇ ಕೇಳು. ಗಂಗೆಯಲ್ಲಿ ಮಿಂದವನಿಗೆ ಪಾಪಲೇಪ ಉಂಟೆ? ಪರಮ ಯೋಗಿಯಾದವನಿಗೆ ಭವಬಂಧದ ಸೋಂಕಿರುವುದೆ? ಸೂರ್ಯವಂಶದರಸರಿಗೆ ಶತ್ರುಸೇನೆಯ ತೊಡಕೂ ಉಂಟೆ? ಮಗುವಾದರೇನು, ಬಗೆಬಗೆಯ ಜಾಣ್ಮೆಯಿಂದ ಹಗೆಗಳನ್ನು ಕೊಲ್ಲುವ ಚತುರನಾದ ಲವನು ಶತ್ರುಘ್ನಸೇನೆಯನ್ನೂ, ಎದುರಾದ ಶತ್ರುಘ್ನನನ್ನೂ ಸಿಡಲಗರ್ಜನೆಯನ್ನು ಕೇಳಿ ಮೊರೆದೇಳುವ ಮರಿಸಿಂಗದಂತೆ ಹೊಡೆದು ಕೊಂದನು. ಬಳಿಕ ಉರವಣಿಸಿ ಬರುತ್ತಿರುವ ಶತ್ರುಘ್ನನ ಅಬ್ಬರವನ್ನು ಲಕ್ಷ್ಯಮಾಡದೆ ಚಿತ್ತಸ್ಥೈರ್ಯದಿಂದ ಮನಸ್ಸಿನಲ್ಲಿ ಮೃತ್ಯುಂಜಯ ಜಪವನ್ನು ಮಾಡುತ್ತ ಕ್ಷಣಮಾತ್ರದಲ್ಲಿ ಶತ್ರುಘ್ನನ ಬಿಲ್ಲಿನ ಹೆದೆಯನ್ನು ಕಡಿದುಹಾಕಿದನು. ಅದನ್ನು ಕಂಡು ಆ ಮಗುವಿನ ಶೌರ್ಯಕ್ಕೆ ಮೆಚ್ಚಿ ಶತ್ರುಘ್ನನು ಅಪ್ಪಾ ಮಗು? ನಿನ್ನ ತಾಯಿ ಯಾರು, ತಂದೆ ಎಲ್ಲಿರುವನು? ನಮ್ಮೊಡನೆ ಹೊಡೆದಾಡಿ ಸುಮ್ಮನೆ ಸಾಯಬೇಡ! ನಿನ್ನವರ ಬಳಿಗೆ ಹೋಗಿ ಸುಖವಾಗಿರು ಎಂದು ಹೇಳುತ್ತ ಹೆದೆಯನ್ನೆಳೆದು

ಕಟ್ಟಿ ಹದವಾದ ಬಾಣಗಳನ್ನು ಹೂಡಿ, ಲವನ ಹಣೆಗೆ ಗುರಿಯಿಟ್ಟು ಹೊಡೆದನು. ಕೂಡಲೆ ಆ ಬಾಣವು ಲವನನ್ನೂ ಬಹಳವಾಗಿ ನೋಯಿಸಿ ಮೂರ್ಛೆಗೆಡಹಿತು. ಲವನು ಸ್ವಲ್ಪ ಹೊತ್ತಿನಲ್ಲೆ ಎಚ್ಚತ್ತು ನಿಂತು ನಿನ್ನ ಬಾಣಗಳು ವಿರಹಿಗಳನ್ನು ಬೆದರಿಸುವ ಹೂಬಾಣಗಳಲ್ಲಾ! ನನ್ನ ಬಲ್ಮೆಯನ್ನು ಈಗ ನೋಡು ಎಂದು ಒಂದೇಬಾಣವನ್ನೂ ಹೂಡಿಹೊಡೆದು ಸಾರಥಿಯನ್ನೂ ರಥದ ಕುದುರೆಗಳನ್ನೂ ಕೆಡವಿ, ಉಳಿದ ಮೂರು ಬಾಣಗಳಿಂದ ರಥದ ಗಾಲಿಗಳನ್ನು ಮುರಿದು ಧ್ವಜವನ್ನೂ ಕಡಿದು ಕೆಡಹಿದನು. ಬಳಿಕ ಶತ್ರುಘ್ನನು ಕೋಪದಿಂದ ಕುದಿಯುತ್ತ ರಾಜಾಗ್ರಣಿಗಳೇರುವ ದಿವ್ಯ ರಥವನ್ನುಹತ್ತಿ, ಮಂತ್ರಾಸ್ತ್ರಗಳನ್ನು ಬಿಡಲು ಉಪಕ್ರಮಿಸಿದನು. ಆಗಲೂ ಧೈರ್ಯಗೆಡದೆ ಅಣ್ಣನಾದ ಕುಶನನ್ನೂ ತಾಯಿಯಾದ ಸೀತೆಯನ್ನೂ, ಗುರುವಾದ ವಾಲ್ಮೀಕಿಯನ್ನೂ



ಶತ್ರುಘ್ನನು ಲವನಮೇಲೆ ಯುದ್ಧಮಾಡಿ ಗೆದ್ದುದು.

ಮನಸ್ಸಿನಲ್ಲಿ ಧ್ಯಾನಿಸುತ್ತ ದೃಢವಾದ ಸ್ಥೈರ್ಯದಿಂದ ಬಿಲ್ಲುಹಿಡಿದು, ಅದಕೆ ತಕ್ಕ ಮಂತ್ರಾಸ್ತ್ರಗಳನ್ನು ಪ್ರಯೋಗಿಸುತ್ತ ಬೇಸಗೆಯ ಸೂರ್ಯನಂತೆ ಉರಿದ್ದು ಬರುತ್ತಿರುವ ಶತ್ರುಘ್ನನ ಬಾಣವನ್ನು ತನ್ನ ಪ್ರತಾಪದಿಂದ ಕಡಿದು ತುಂಡು ಮಾಡಿದನು. ಅದನ್ನು ಕಂಡು ಆಶ್ಚರ್ಯಪಟ್ಟು ಶತ್ರುಘ್ನನು ಲವನನ್ನು ಹೊಗಳುತ್ತ, ಮರಳಿ ಕಾಲರುದ್ರನ ಫಾಲನೇತ್ರದ ದಳ್ಳುರಿಯಂತೆ ಉರಿಯುತ್ತಿರುವ ಬಾಣವನ್ನು ಹೂಡಿ ಹೊಡೆದನು. ಆದರೇನು ಆ ಶತ್ರುಘ್ನನು ಹೊಡೆದ ಮೃತ್ಯುಂಜಯ ಬಾಣವನ್ನು ಲೆಕ್ಕಿಸದೆ ಲವನು ಮುಗುಳ್ನಗೆಯಿಂದ ಉಬ್ಬಿ ಎರಡು ತುಂಡಾಗಿ ಕತ್ತರಿಸಿದನು. ಎಲೈ ಜನಮೇಜಯರಾಯನೇ ಮುಂದಿನ ಆಶ್ಚರ್ಯವನ್ನು ಕೇಳು. ಹೀಗೆ ಎರಡು ತುಂಡಾದ ಬಾಣದ ಒಂದು ಭಾಗವು ಭೂಮಿಗೆ ಬಿದ್ದಿತು, ಮತ್ತೊಂದುಭಾಗವು ಹಾರಿ ಬಂದು ಲವನ

ಕೋದಂಡವನ್ನು ಕಡಿದು, ಎದೆಯನ್ನು ಸೀಳಿ ಗಾಯಮಾಡಿ ಮೂರ್ಛೆಗೆಡಹಿತು. ಆಗ ಶತ್ರುಘ್ನನು ಕನಿಕರಗೊಂಡು ಆ ಬಾಲಕನ ಬಳಿಗೆ ಬಂದು ನೋಡಿ, ರಾಮಾಕೃತಿಯು ಹಾಗಿದ್ದ ಲವನನ್ನು ತನ್ನ ರಥದಲ್ಲಿರಿಸಿಕೊಂಡು ಹೊರಟು ಹೋದನು. ಬಳಿಕ ಬಾಳೆಯಗಿಡಕ್ಕೆ ಕಟ್ಟಹಾಕಿದ ಕುದುರೆಯನ್ನು ಬಿಚ್ಚಿ ಕೊಂಡು ಬೆಂಗಾವಲಿನ ವೀರರು ಹೊರಟುಹೋದರು. ಇತ್ತ ಮುನಿಕುಮಾರರು ಸೀತಾದೇವಿಯ ಬಳಿಗೆ ಓಡಿಬಂದು ಯುದ್ಧದಲ್ಲಿ ನಡೆದ ಸಮಾಚಾರವನ್ನು ಹೇಳಿ ದರು. ಸೀತೆಯು ಪುತ್ರವ್ಯಾಮೋಹದಿಂದ ಮರುಗುತ್ತ ತನ್ನೆಲೆವನೆಯಿಂದ ಹೊರಗೆಬಂದು ಕೈ ಬೆರಲುಗಳನ್ನು ಹಿಸಿಕಿಕೊಳ್ಳುತ್ತ ತನ್ನಮಗನ ಗುಣಶೀಲ ಗಳನ್ನು ನೆನೆದುಕೊಂಡು ಅಳತೊಡಗಿದಳು. ಕಣ್ಣುಗಳಲ್ಲಿ ನೀರೊಸರಿತು. ಬಳ್ಳಿಯಂತಿರುವ ಮೈಯ್ಯದುರಲಾರಂಭಿಸಿತು. ನಿಟ್ಟುಸುರು ಬಲವಾಯಿತು. ಹಾ ! ನನ್ನ ಮುದ್ದಿನಕಂದನು ಎಲ್ಲಿರುವನು ? ಅಯ್ಯೋ ! ಹಗೆಗಳೊಡನೆ ಹೊಡೆದಾಡಿದನೆ? ಶತ್ರುಗಳನ್ನು ಗೆದ್ದನೆ? ಬಾಣಘಾತಕ್ಕೆ ಸಿಕ್ಕಿ ಮಗುವು ಏನಾಯಿತೋ! ಅಯ್ಯೋ! ಲವನು ಬದುಕಿರುವನೊ ಇಲ್ಲವೊ ಎಂದು ಗೋಳಿಡು ತ್ತಿದ್ದಳು. ಅಷ್ಟುಹೊತ್ತಿಗೆ ಸಮಿತ್ತು ದರ್ಭೆಗಳನ್ನು ತರುವುದಕ್ಕೆ ಹೋಗಿದ್ದ ಕುಶನು ಬಂದು ತಾಯಿ ಅಳುತ್ತಿರುವುದನ್ನು ಕಂಡು ಕಾರಣವೇನು ಎಂದು ಕೇಳಿದನು. ಅಪ್ಪಾ ಕುಶ! ನಾನೇನು ಹೇಳಲಿ. ಯಾವುದೋ ಒಂದು ಕುದುರೆ ನಮ್ಮ ಅಶ್ರಮಕ್ಕೆ ಬಂದಿತಂತೆ, ಅದನ್ನು ಲವನು ಕಟ್ಟಹಾಕಿದನಂತೆ, ಆ ಕುದು ರೆಯ ಪ್ರಭುಗಳು ಲವನನ್ನು ಹಿಡಿದುಕೊಂಡು ಹೋದರಂತೆ, ಇನ್ನೇನು ಹೇಳಲಿ ಎಂದು ದುಃಖದಿಂದ ಕೊರಗುತ್ತಿರಲು, ಅಮ್ಮಾ ! ಇದಕ್ಕೇಕೆ ಇಷ್ಟೊಂದು ಪ್ರಳಾಪ ? ಸಾಕು ಸುಮ್ಮನಿರು. ಪ್ರಾಣವನ್ನು ಕೊಂಡು ಹೋಗಿದ್ದರೆ ಯಮನ ಪಟ್ಟಣವನ್ನು ಸೂರೆಮಾಡುವೆನು? ಅಲ್ಲ ಹೌದು ಎಂದು ಹೇಳಿ ಅಡ್ಡಗಟ್ಟಿದರೆ ಹರಿ ಹರ ಬ್ರಹ್ಮಾದಿಗಳ ಲೋಕಗಳನ್ನು ಸುಡುವೆನು. ಉಳಿದ ಅರಸುಗಳ ಬಲವನ್ನು ಲೆಕ್ಕಮಾಡುವೆನೆ ? ಆಗಲಿ ಅಳಬೇಡ. ಬಿಲ್ಲು ಬಾಣ, ಬತ್ತಳಿಕೆ, ವಜ್ರಕವಚಗಳನ್ನು ಬೇಗಕೊಡು! ನಾನೆ ಹೋಗುವೆನು. ಎಂದನು. ಸೀತೆಯು ಪರ್ಣಶಾಲೆಯೊಳಗಿನಿಂದ ಕವಚ, ಬಿಲ್ಲು, ಬತ್ತಳಿಕೆ ಗಳನ್ನು ತಂದುಕೊಟ್ಟು ಮಗನನ್ನು ಹರಿಸಿ ಬೀಳ್ಕೊಟ್ಟಳು. ಎಲೈ ಜನಮೇ ಜಯನೇ ಲಾಲಿಸು. ನನಗೆ ಈ ಕುಶನ ಪರಾಕ್ರಮವನ್ನು ವರ್ಣಿಸುವುದಕ್ಕೆ ಬ್ರಹ್ಮಾಯುವಾದರೂ ಸಾಲದು? ಬಳಿಕ ಆತನು ತಾಯಿಗೆ ನಮಸ್ಕಾರ ಮಾಡಿ ವಾಯುವೇಗದಿಂದ ಹೊರಟು ತಾರಕಾಸುರನ ಮಹಾಸೈನ್ಯದ ಮೇಲೆ ಬೀಳುವ ಗುಹನಂತೆ ಶತ್ರುಘ್ನನ ಸೇನೆಯನ್ನು ಹೊಕ್ಕು ಹೋಗಬೇಡ, ಹೋಗಬೇಡ, ನಿಲ್ಲು ನಿಲ್ಲು ಎಂದು ಅರ್ಭಟಿಸಿ ಬಾಣದ ಮಳೆಯನ್ನು ಸುರಿಸಿದನು. ಆಗ

ಶತ್ರುಘ್ನನ ಕಿರೀಟಭಾಗದಲ್ಲಿ ಹದ್ದೆರಗಿ ಕುಳಿತುಕೊಂಡಿತು. ಬಿರುಗಾಳಿ ಬೀಸಿತು. ಧೂಳು ಕವಿದುಕೊಂಡಿತು. ಕುದುರೆಗಳು ಕಣ್ಣೀರು ಸುರಿಸಿದವು. ಇಷ್ಟಾದರೂ ಕುಶನು ಅವರನ್ನು ತಡೆದು ನಿಲ್ಲಿಸಿ ವೀರರಾದ ನಿಮಗೆ ಕದ್ದು ಹೋಗುವುದು ನ್ಯಾಯವೆ? ಕುದುರೆಯನ್ನೂ ಲವನನ್ನೂ ಬಿಟ್ಟು ಬದುಕಿಕೊಳ್ಳಿ ಎಂದು ಬಾಣಗಳನ್ನು ಹೊಡೆದನು. ಆತ ಬಾಣಹತಿಯಿಂದ ಅಳವಳಿದ ಶತ್ರುಘ್ನನ ಪಾಯದಳವು ಅಯ್ಯೋ! ಇದೇನು ಉತ್ಪಾತವಾಗಿ ಕಾಣುತ್ತಿದೆ. ಮೊದಲು ಒಬ್ಬನು ಬಂದು ಕುದುರೆಯನ್ನು ಕಟ್ಟಿಕೊಂಡನು. ಅವನೊಡನೆ ಹೋರಾಡಿ ಅದನ್ನು ಬಿಡಿಸಿಕೊಂಡೆವು, ಈಗಲಾದರೋ ಅವನಿಗಿಂತಲೂ ವೀರನಾದವನು ಬರುತ್ತಿರುವನು, ಆಹಾ! ಹುಲ್ಲೆಯ ಮರಿಯು ಹೆಬ್ಬುಲಿಯನ್ನು ಬೆದರಿಸುವಂತೆ ಈ ಬಾಲಕನು ನಮ್ಮನ್ನು ಹೆದರಿಸುತ್ತಿರುವನಲ್ಲಾ! ಎಂದು ಕಳವಳಿಸುತ್ತಿದ್ದರು.

ಬಳಿಕ ಶತ್ರುಘ್ನನು ತನ್ನ ಸೈನ್ಯದೊಡನೆ ಕುಶನಿಗೆ ಇದಿರಾಗಿ ಯುದ್ಧಕ್ಕೆ ನಿಂತನು ಆದರೂ ಕುಶನು ಜಗ್ಗದೆ ಉರುಬಿನಿಂದ ಕಾದುತ್ತಿರುವುದನ್ನು ಕಂಡು ಶತ್ರುಘ್ನನ ಅಪ್ಪಣೆಯಂತೆ ದಳಪತಿಯೂ ಯುದ್ಧಕ್ಕೆ ನಿಂತನು. ವೀರಮಾತೆಯ ಪುತ್ರನಾದ ಲವನು ಕ್ಷಣಮಾತ್ರದಲ್ಲಿ ಆ ದಳಪತಿಯ ಸಾರಥಿ ರಥ ಧ್ವಜ ಗಾಲಿ ಪ್ರಾಣಗಳನ್ನು ಯಮನ ಪಟ್ಟಣಕ್ಕೆ ಕಳುಹಿಸಿದನು. ಅಣ್ಣನನ್ನು ಕೊಂದ ಹಗೆಯನ್ನು ತೀರಿಸಿಕೊಳ್ಳಬೇಕೆಂದು ಬಳಿಕಾತನ ತಮ್ಮನು ಇದಿರಾಗಿ ಕೈಕಾಲುಗಳನ್ನು ಕಳೆದುಕೊಂಡು ಬಹಳ ಹೊತ್ತಿನವರೆಗೂ ಯುದ್ಧದಲ್ಲಿ ಹೆಣಗಾಡಿ ಕಡೆಗೆ ಸತ್ತುಬಿದ್ದ ಅವನ ತಲೆಯು ಈಶ್ವರನ ರುಂಡಮಾಲೆಯ ಸರದಲ್ಲಿ ಒಂದಾಗಿ ಹೊಳೆಯಿತು ಇದೆಲ್ಲವನ್ನು ನೋಡುತ್ತಿದ್ದ ಶತ್ರುಘ್ನನು ಕೋಪದಿಂದ ಬೀಲ್ಗೊಂಡು ಕಡೆಗೆ ತಾನೇ ಕೋಪದಿಂದ ಯುದ್ಧಕ್ಕೆನಿಂತು ಕುಶನನ್ನು ಮೂರು ಬಾಣಗಳಿಂದ ಹೊಡೆದನು. ಅವನು ಅದನ್ನು ಲಕ್ಷ್ಯಮಾಡದೆ, ಆರು ಬಾಣಗಳನ್ನುಹೊಡೆದು ಸಾರಥಿ ಕುದುರೆ ಧ್ವಜಗಳನ್ನು ಉರುಳಿಸಿ ಮತ್ತೊಂದು ಸಾರಿ ಅರು ಬಾಣಗಳನ್ನು ಹೊಡೆದು ಶತ್ರುಘ್ನನ ಎದೆಯನ್ನು ಗಾಯಮಾಡಿ, ಮೂರ್ಛೆಗೆಡಹಿದನು. ಒಂದರೊಡನೊಂದು ಹೊಡೆದಾಡಿ ಮಡಿದು ಬಿದ್ದ ಮದ್ದಾನೆಯಂತೆ ಶತ್ರುಘ್ನನು ಮೂರ್ಛಾಕ್ರಾಂತನಾಗಿ ಮಲಗಿದನು. ಅವನ ಸೈನಿಕರು ಸಂಘದಿಂದ ಯುದ್ಧಮಾಡಿ ಕನ್ಯಾವಿಕ್ರಯ ಮಾಡಿದವನ ಪಿತೃಗಳಂತೆ ಪತಿತರಾಗಿ ಭೂಮಿಗೆ ಬಿದ್ದುಹೋದರು. ಪಾವನವಾದ ಧರ್ಮದಿಂದ ಪಾಪರಾಶಿಯನ್ನು ನಾಶಗೊಳಿಸುವಂತೆ ತನ್ನ ಬಾಹುಬಲದಿಂದ ವೀರನಾದ ಲವನು ಶತ್ರುಸೇನೆಯನ್ನು ತರಿದು ಹಾಕಿದನು. ಅಷ್ಟರಲ್ಲಿ ಮೂರ್ಛೆಹೋಗಿದ್ದ ಲವನು ಎಚ್ಚತ್ತು ಅಣ್ಣನ ಮುಖವನ್ನು ನೋಡಿದನು. ಗಾಳಿಯೂ ಬೆಂಕಿಯೂ

ಒಂದಾಗಿ ಸೇರಿದಂತೆ ಅವರಿಬ್ಬರೂ ಏಕವಾಗಿ ರಾಮನ ಸೇನೆಯನ್ನು ದಳಿದಳಿ ಸುತ್ತಿರಲು ಉಳಿದ ಭಟರು ಈ ಬಾಲಕರು ಯುದ್ಧಕ್ಕೆ ಜಗ್ಗುವರಲ್ಲವೆಂದರಿತು ಶ್ರೀರಾಮರಲ್ಲಿಗೆ ದೂತರನ್ನು ಓಡಿಸಿದರು. ಆ ದೂತರು ಭರದಿಂದ ಅಯೋಧ್ಯೆಗೆ ಬಂದು ಚರುಪುರೋಡಾಶ ತಿಲತಂಡುಲ ವ್ರೀಹಿ ಆಜ್ಯಗಳಿಂದ ಮಾಡುವ ಹೋಮದ ಹೊಗೆಯಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಕಟಿಸೂತ್ರ ಕುರಂಗ ಶೃಂಗಗಳನ್ನು ಧರಿಸಿ ಕೃಷ್ಣಾಜಿನವನ್ನು ಹೊದೆದು ಬೆಣ್ಣೆಯಿಂದ ತಣ್ಣಸವಾದ ದೇಹವುಳ್ಳವನಾಗಿ ಭರತಲಕ್ಷ್ಮಣರಿಂದೊಡಗೂಡಿ ಮುನಿಮಂಡಲಿಯ ಮಧ್ಯದಲ್ಲಿ ಚಿನ್ನದ ಜಾನಕಿಯೊಡನೆ ಕುಳಿತಿರುವ ರಾಮನ ಪಾದಗಳಿಗೆ ನಮಸ್ಕರಿಸಿ ಎಲೈ ರಘುರಾಮನೆ ! ನಿನ್ನ ಯಾಗದ ಕುದುರೆಯು ನಿರ್ವಿಘ್ನವಾಗಿ ಸಕಲ ದೇಶಗಳನ್ನೂ ಸುತ್ತಿಕೊಂಡು ಕಡೆಗೆ ಒಂದಾನೊಂದು ಆಶ್ರಮದ ಬಳಿಗೆ ಬರಲು ಒಬ್ಬ ಬಾಲಕನು ಬಲಗರ್ವಿತನಾಗಿ ಆ ಕುದುರೆಯನ್ನು ಕಟ್ಟಿ ಕಾಲುಬಲವನ್ನು ಸವರಿದನು ವೀರರ ತಲೆಮಣಿಯಾದ ಶತ್ರುಘ್ನನು ಅವನನ್ನು ಸೋಲಿಸಿ ಕುದುರೆಯನ್ನು ಬಿಡಿಸಿಕೊಂಡು ಹಿಂದಿರುಗಿದಾಗ ಮತ್ತೊಬ್ಬನು ಬಂದು ಕುದುರೆಯನ್ನೂ ಮೂರ್ಛೆಹೋದ ಹುಡುಗನನ್ನೂ ತನ್ನ ಸ್ವಾಧೀನ ಪಡಿಸಿಕೊಂಡು ನಮ್ಮ ಸೇನೆಯನ್ನು ಸಂಪೂರ್ಣವಾಗಿ ಸೋಲಿಸಿದನು. ಅವನ ಹಾವಳಿಯನ್ನು ಹೇಳಲಾರೆ. ನಿನ್ನೊಡನೆ ಈ ಸಂಗತಿಯನ್ನು ಹೇಳಲು ಭಯವಾಗುತ್ತಿದೆ ಎಂದರು. ಅದನ್ನು ಕೇಳಿ ಶ್ರೀರಾಮನು ಇದೇನು ಆಶ್ಚರ್ಯ ! ಇವರಿಗೇನು ಹುಚ್ಚುಹಿಡಿಯಿತೆ ? ಅಥವಾ ದೇಶಾಟನದಿಂದ ಪಿತ್ತವೇನಾದರೂ ನೆತ್ತಿಗೇರಿತೆ ? ಆಹಾ! ಯುದ್ಧದಲ್ಲಿ ಶತ್ರುಘ್ನನನ್ನು ಗೆಲ್ಲುವ ವೀರನು ಲೋಕದಲ್ಲಿರುವನೆ ? ತ್ರಿಲೋಕಕಂಟಕಿಯಾದ ಲವಣಾಸುರನನ್ನು ಗೆದ್ದ ಶತ್ರುಘ್ನನು ಈಗ ಸೋತನೆ ! ಇದು ಸುಳ್ಳು ಛೀ ! ಮರುಳಾಗಬೇಡಿ ಹೋಗಿ ಎಂದು ಚಾರಕರನ್ನು ಗದರಿದನು. ಆದರೂ ಆ ದೂತರು ಸ್ವಾಮಿ ನಮ್ಮ ಧರ್ಮವರ್ತನೆಯಿಂದ ದೂತರಾಗಿರುವ ನಾವು ಎಂದಿಗೂ ಸುಳ್ಳು ಹೇಳಲಾರೆವು. ನಿಮ್ಮ ಪಾದ ಸಾಕ್ಷಿಯಾಗಿ ಶತ್ರುಘ್ನನು ಸೋತು ಮೂರ್ಛೆಹೋಗಿರುವನು ಎಂದು ಹೇಳಿದರು ರಾಮನು ಅದನ್ನು ಕೇಳಿ ಬೆರಗಾಗಿ ಆಹಾ ! ಶತ್ರುಘ್ನನನ್ನು ಮುರಿದ ಬಾಲಕರು ಇನ್ನೆಂಥಾ ಶೂರರೋ ಕಾಣೆ. ಲಕ್ಷ್ಮಣಾ ಈಕ್ಷಣನೇ ನೀನು ಸೇನೆಯೊಡನೆ ಹೊರಡು ಎಂದು ಹೇಳಿ ಕಳುಹಿಸಿ ಕೊಟ್ಟನು.

### ಲಕ್ಷ್ಮಣನು ಕುಶಲರಮೇಲೆ ಯುದ್ಧಕ್ಕೆ ಬಂದುದು.

ಬಳಿಕಾಲಕ್ಷ್ಮಣನು ರಾಮನಿಗೆ ನಮಸ್ಕರಿಸಿ ನೇಮದ ಕಟ್ಟಾಳುಗಳ ಸೇನೆಯೊಡನೆ ಆನೆ, ಕುದುರೆ, ತೇರು, ಕಾಲಾಳುಗಳೆಂಬ ಚತುರಂಗಬಲವನ್ನು ಎಂಟು ದಿಕ್ಕುಗಳು ತುಂಬಿ ತುಳುಕಾಡುವಂತೆ ನಡೆಸಿಕೊಂಡು ಆರ್ಭಟದಿಂದ

ನಡೆದು ಯುದ್ಧಭೂಮಿಯ ಸಮೀಪಕ್ಕೆ ಬಂದು ಭೇರೀಪಟಹ ಡಿಂಡಿಮಗಳನ್ನು
ಬಡಿದು ಶಂಖಗಳನ್ನು ಊದಿ ಗರ್ಜಿಸಿ ವೀರಾವೇಶದಿಂದ ಬೊಬ್ಬಿರಿಯುತ್ತಿದ್ದನು.
ಇತ್ತ ಮೂರ್ಛೆಹೋದ ಶತ್ರುಘ್ನನು ಚೇತರಿಸಿಕೊಳ್ಳಲು ಶಕ್ತಿಸಾಲದೆ, ಕೈದು
ಗಳ ಗಾಯದಿಂದ ನೊಂದೇಳಲಾರದೆ, ರಾಹುಗ್ರಸ್ತನಾದ ಚಂದ್ರನಂತೆ ಮಲ
ಗಿರುವುದನ್ನು ಕಂಡು ಲಕ್ಷ್ಮಣನು ಕಾಲಜಿತು ಮುಖ್ಯರಾದ ಸೇನಾಪತಿಗಳನ್ನು
ಕೈಬೀಸಿ ಕರೆದನು. ಇತ್ತಲಾ ಲವಕುಶರು ಎದುರಾಗಿ ನಿಂತು ಯುದ್ಧಕ್ಕೆ
ಕರೆಯುತ್ತಿರುವ ವೀರರಬಗೆಯನ್ನು ಕಂಡು ಆಗಲಿ ಯುದ್ಧಕ್ಕೆಬರಲಿ ಇವರ
ಬಿಂಕವನ್ನು ಮುರಿಯೋಣವೆಂದು ಹೇಳುತ್ತ ಅನ್ಯೋನ್ಯರಾಗಿ ಮಾತನಾಡಿ
ಕೊಳ್ಳುತ್ತಿದ್ದರು. ಆಗ ಲವನು ಕುಶನನ್ನು ಕುರಿತು ಅಣ್ಣಾ ! ಯುದ್ಧದಲ್ಲಿ
ಬಲ್ಮೆಯುಪೆಟ್ಟಿನಿಂದ ನನ್ನ ಬಿಲ್ಲು ಮುರಿದು ಹೋಯಿತು, ಆದಕಾರಣ ವಾಲ್ಮೀಕಿ
ಯ ಉಪದೇಶದಂತೆ ಸೂರ್ಯನನ್ನು ಮೆಚ್ಚಿಸಿ ಮತ್ತೊಂದು ಬಿಲ್ಲನ್ನು ಪಡೆಯು
ವೆನೆಂದು ಹೇಳಿ ನಿಶ್ಚಲ ಚಿತ್ತನಾಗಿ ಜಗಚ್ಚಕ್ಷುವಿಗೆ ಅಭಿಮುಖವಾಗಿ ನಿಂತು
ಎಲೈ ಭಗವಂತನೇ ! ನೀನು ಲೋಕಕ್ಕೆಲ್ಲ ಕಣ್ಣಾಗಿರುವೆ ! ಉತ್ತರಾಯನ
ದಕ್ಷಿಣಾಯನಗಳೆಂಬ ಎರಡು ಬಗೆಯ ಮಾರ್ಗದಲ್ಲಿ ನಡೆವೆ ! ಮೂರು ಮೂರ್ತಿ
ಗಳನ್ನು ಒಳಕೊಂಡಿರುವೆ ! ನಾಲ್ಕು ವೇದಗಳಿಗೂ ಆಕರವಾಗಿರುವೆ ! ಈಶ್ವ
ರನ ಪಂಚದೇಹಗಳಲ್ಲಿಯೂ ಭಾಸಮಾನನಾಗಿ ಹೊಳೆಯುತ್ತಿರುವೆ ! ನಿನ್ನೊಳಗ
ಕ್ಕೆ ಸಾದ ಆರು ಋತುಗಳಲ್ಲಿಯೂ ಸಮನಾಗಿ ವರ್ತಿಸಿಕೊಂಡಿರುವೆ ಏಳು
ಕುದುರೆಗಳನ್ನು ಹೂಡಿದ ಆ ರಥದಲ್ಲಿ ಸಂಚರಿಸುತ್ತಿರುವೆ ! ನಿನ್ನ ಸಮಾನರಾದ
ದೇವತೆಗಳು ಲೋಕದಲ್ಲಿರುವರೆ ? ದಶದಿಕ್ಕುಗಳನ್ನು ಬೆಳಗಿ ದ್ವಾದಶರಾಶಿಗಳಿಗ
ಒಡೆಯನಾಗಿ, ಶತಪತ್ರಮಿತ್ರನಾಗಿ, ಸಾವಿರಕಿರಣಗಳಿಂದ ಕೂಡಿ ಲಕ್ಷಯೋಜನ
ವಿಸ್ತಾರದಿಂದ ಭಾಸಿಸುತ್ತಿರುವೆ, ನಿನ್ನ ವಂಶಾಂಕುರವಾದ ನನಗೊಂದು
ಬಿಲ್ಲನ್ನು ಕೊಟ್ಟು ಕಾಪಾಡು ಎಂದು ಬೇಡಿಕೊಂಡನು.

## ಲವನು ಸೂರ್ಯನನ್ನು ಪ್ರಾರ್ಥಿಸಿ ಬಿಲ್ಲನ್ನು ಪಡೆದುದು.

ಎಲೈ ಜನಮೇಜಯರಾಯನೇ ಕೇಳು. ಆಬಳಿಕ ಲವನ ಸ್ತೋತ್ರ
ದಿಂದ ಸಂತುಷ್ಟನಾದ ಸೂರ್ಯನು ಅಕ್ಕರೆಯಿಂದ ಅವನಿಗೊಂದು ಧನುಸ್ಸನು
ಕೊಟ್ಟು ಹರಿಸಿ ಕಳುಹಿಸಿದನು. ಲವನು ಅದಕ್ಕೆ ಹೆದೆಯನ್ನೇರಿಸಿ, ಬಾ
ವನ್ನುಹೂಡಿ ಹವಣಾಗಿ ಬರುವ ಯುದ್ಧವನ್ನು ಲೀಲೆಯಿಂದ ಗೆಲ್ಲಬೇಕೆಂದ
ಯೋಚಿಸುತ್ತ, ಅಣ್ಣತಮ್ಮಂದಿರಿಬ್ಬರೂ ಒಟ್ಟಾಗಿ ಪವನಪಾವಕರ ಹಾಗೆ ಶತ್ರು
ಬಲವನ್ನು ನುಗ್ಗಿದರು.

ನೂರು ಕಾಲಾಳಿಗೆ ಒಂದು ಕುದುರೆ. ಅಂತಹ ನೂರು ಕುದುರೆಗೆ ಒಂದು ರಥ. ಅಂತಪ್ಪ ನೂರು ತೇರಿಗೆ ಒಂದು ಆನೆ ಇರುವ ಸೇನೆಗೆ ಭ್ರಮಿಯೆಂದು ಹೆಸರು. ಅಂತಹ ಒಂದುಸಾವಿರ ಭ್ರಮಿಗಳು ಇಟ್ಟಣಿಸಿ ಮುತ್ತಿದರೂ ಕ್ಷಣ ಮಾತ್ರದಲ್ಲಿ ಕುಶಲವರಿಬ್ಬರೂ, ಅದನ್ನು ಕಡಿದು ಧೂಳೀಪಟಲ ಮಾಡಿದರು. ಬಳಿಕ ಹೂಣಿಗೊಂಡು ಹೊಡೆಯುವ ಲವನೊಡನೆ ಲಕ್ಷ್ಮಣನು ಯುದ್ಧಮಾಡು ತ್ತಿರಲು, ಅವನ ಚತುರಂಗಸೇನೆಯು ಕುಶನಿಗಿದಿರಾಯಿತು. ಎಷ್ಟುಜನ ವೀರರು ಎಂಥ ಬಾಣಗಳನ್ನು ಹೊಡೆದು ನೋಯಿಸಿದರೂ, ಅದಕ್ಕಿಮ್ಮಡಿಯಾದ ಬಾಣ ಗಳನ್ನು ಹೊಡೆದು ಅಷ್ಟುಜನರನ್ನೂ ನೋಯಿಸುತ್ತ ಧೈರ್ಯಶಾಲಿಗಳಾದ ಕಟ್ಟಾಳುಗಳುಕೂಡ ಮುಂದರಿದು ಬಾರದಂತೆ ಸಂಪೂರ್ಣವಾಗಿ ಅವರ ಬಲ ವನ್ನು ಮುರಿದನು. ಹೀಗೆ ಶತ್ರುಬಲವನ್ನು ಮುರಿದು ಲವನನ್ನು ಕಾಣದೆ ಹುಡುಕುತ್ತಿದ್ದ ಕುಶನ ಕೋದಂಡವನ್ನು ಶ್ರೀರಾಮನ ಭಕ್ತನೂ ಲವಣಾಸು ರನ ಸೋದರಮಾವನನೂ ಆದ ರುಧಿರಾಕ್ಷಸನೆಂಬ ರಕ್ಕಸನು ಕಿತ್ತುಕೊಂಡೋಡು ತ್ತಿದ್ದನು, ಕುಶನು ಅವನನ್ನು ಹಿಂಬಟ್ಟಿಹೋಗಿ ಹೊಡೆದಾಡಿ, ಅವನ ಶೌರ್ಯ ವನ್ನು ಮುರಿದು, ಪ್ರಾಣವನ್ನು ಹುರಿದು, ದೇಹವನ್ನು ಭೂಮಿಗುರುಳಿಸಿ, ತನ್ನ ತಮ್ಮನನ್ನು ಹುಡುಕುತ್ತ ಬಂದನು. ಇತ್ತಕಡೆ ಲವನ ಬಾಣಗಳಿಂದ ಸೇನಾಜನರು ಗಾಯಗೊಂಡು ಸಾಯುತ್ತಿದ್ದರು.

## ಕುಶನೊಡನೆ ಯುದ್ಧಮಾಡಿ ಲಕ್ಷ್ಮಣನು ಮೂರ್ಛೆಹೋದುದು.

ಹೀಗಿರುವಲ್ಲಿ ಲಕ್ಷ್ಮಣನು ಕುಶನಕಡೆಗೆ ತಿರುಗಿ ಬಾಣವನ್ನು ಹೊಡೆ ದನು, ಅದನ್ನು ಕಂಡು ಹುಸಿನಗೆಯನ್ನು ಬೀರುತ್ತ ಕುಶನು ಬಾಣವನ್ನು ಹೂಡಿ, ಕಿವಿವರೆಗೆ ಸೆಳೆದು ಹೊಡೆದನು. ಆ ಪೆಟ್ಟಿನಿಂದ ಲಕ್ಷ್ಮಣನ ರಥವು ತಿರುಬುಗೆರಿಯಂತೆ ಒಂದು ಮುಹೂರ್ತಕಾಲ ಅಂತರಿಕ್ಷದಲ್ಲಿ ತಿರುಗುತ್ತಿದ್ದಿತು. ಲಕ್ಷ್ಮಣನು ಮಗುವಿನ ಪರಾಕ್ರಮಕ್ಕೆ ಮೆಚ್ಚಿ ಬಹಳವಾದ ರೋಷದಿಂದುಬ್ಬಿ ಎರಡು ಬಾಣಗಳನ್ನು ಹೊಡೆದು ಕುಶನ ಬಿಲ್ಲು ಬಾಣ ಕವಚಗಳನ್ನು ಕಡಿದು ಹಾಕಿದನು. ಕೂಡಲೆ ಕುಶನು ರೋಷದಿಂದ ಗರ್ಜಿಸುತ್ತ ಆಗ್ನೇಯಾಸ್ತ್ರ ವನ್ನು ಹೊಡೆದು, ಅಯ್ಯಾ ! ನನಗೆ ಬಿಲ್ಲು ಬಾಣ ಕವಚ ಸೀಸಕಂಗಳ ಭಾರ ವನ್ನು ತೊಲಗಿಸಿದ ನಿನ್ನ ಉಪಕಾರವನ್ನು ಮರೆಯಲಾರೆ, ಇಗೋ ! ಬಹು ಕಷ್ಟದಿಂದ ನೀನು ಕಾಪಾಡುತ್ತಿರುವ ಈ ಸೇನೆಯ ತೊಡಕನ್ನು ನಿನಗೆ ತಪ್ಪಿಸು ವೆನೆಂದು ಸೇನಾಜನರನ್ನು ಸುಟ್ಟು ಬೂದಿಮಾಡಿದನು. ಆಗ ಲಕ್ಷ್ಮಣನು ತನ್ನ ಸೇನೆಯನ್ನು ದಹಿಸುತ್ತಿರುವ ಅಗ್ನಿಯನ್ನು ವಾರುಣಾಸ್ತ್ರದಿಂದ ಪರಿಹರಿಸಿ ಕೊಂಡನು ಕುಶನು ವಾಯುವ್ಯಾಸ್ತ್ರವನ್ನು ಹೂಡಿ ಹೊಡೆದನು. ಹೀಗೆ ಲಕ್ಷ್ಮಣ

ಶತ್ರುಘ್ನರಿಬ್ಬರೂ ಯುದ್ಧಮಾಡುತ್ತಿರುವುದನ್ನು ಕಂಡು ಕಾಲಜಿತುವೆಂಬ ಸೇನಾಪತಿಯು, ಲಕ್ಷ್ಮಣನನ್ನು ಹೊರನೂಕಿ ತಾನು ಲವನಿಗೆದುರಾಗಿ ಯುದ್ಧಕ್ಕೆನಿಂತನು. ಎಲೈ ಕುಶನೆ ! ನೀನು ಇನ್ನೂ ಚಿಕ್ಕವನು ನಿನ್ನಮೇಲೆ ನನ್ನ ಪರಾಕ್ರಮವನ್ನು ತೋರಿಸಬಾರದೆಂದು ಕೇವಲ ಕರುಣದಿಂದ ಯುದ್ಧಮಾಡಿದರೆ ನಿನ್ನ ಶೌರ್ಯವೆ ಹೆಚ್ಚುತ್ತಿದೆ, ಆಗಲಿ ! ಇನ್ನು ನಿನ್ನಗರ್ವವನ್ನು ಬಿಡು. ಹೆಮ್ಮೆಪಡಬೇಡ ಅದರಿಂದ ಫಲವಿಲ್ಲವೆಂದು ಹೇಳಿ ಕಾಲಜಿತುವು ಬಾಣವನ್ನು ಹೊಡೆದನು. ಅಯ್ಯಾ ! ಈಗ ನೀನು ಹೇಳಿದ ಮಾತು ಸತ್ಯವಾದರೆ ಅಜಗಳಸ್ತನದಹಾಗೆ ನಾನು ಸುಮ್ಮನಿರುವೆನು. ಇಲ್ಲವಾದರೆ ನಿನ್ನ ನಾಲಿಗೆಯನ್ನು ಕೊಯ್ಯುವೆನೆಂದು ಹೇಳಿ ಬಾಣಗಳನ್ನು ಹೊಡೆದನು.

ಆಹಾ ! ಕುಶನ ಬಾಣದ ಬಲ್ಮೆಯನ್ನು ಏನು ಹೇಳಲಿ ! ನಿಜವಾಗಿ ಕ್ಷಣಮಾತ್ರದಲ್ಲಿ ಕಾಲಜಿತುವಿನ ನಾಲಿಗೆಯನ್ನು ಕಡಿದು ತುಂಡುಮಾಡಿತು. ಬಳಿಕ ಮೌನದಿಂದ ಕಾದುತ್ತಿದ್ದ ಕಾಲಜಿತುವಿನ ಕೈಕಾಲು ತೊಡೆ ನಡುಗಳನ್ನು ಕಡಿದು ಕಡೆಗೆ ಕಾಲನರಮನೆಯ ದಾರಿಯನ್ನು ತೋರಿಸಿ ಕಲಿಯಾದ ಕುಶನು ಉಬ್ಬುತ್ತಿರಲು, ರೋಷಭೀಷಣನಾದ ಲಕ್ಷ್ಮಣನು ತನ್ನ ಬಾಹುಬಲವನ್ನು ವೆಚ್ಚಮಾಡಿ, ಬಹಳವಾಗಿ ಬಾಲಕರನ್ನು ನೋಯಿಸಿ ಕಾದುತ್ತಿರಲು, ಧೀರನಾದ ಲವನು ವಾಲ್ಮೀಕಿಯು ಕೊಟ್ಟ ದಿವ್ಯಾಸ್ತ್ರಗಳನ್ನೂ, ಸೂರ್ಯನು ಕೊಟ್ಟ ಬಿಲ್ಲಿಗೇರಿಸಿ ಹೊಡೆದು ಮಂತ್ರಾಸ್ತ್ರಂಗಳ ಬಲವನ್ನು ತೋರಿಸಲು, ಲಕ್ಷ್ಮಣನು ಗಾಯವಡೆದು ಆಯತಪ್ಪಿ ಕಂಗೆಟ್ಟು ಮೂರ್ಛೆಹೋಗಿ ಭೂಮಿಗೆ ಬಿದ್ದನು. ಬಳಿಕ ಉಳಿದ ಕುಶಲವರಿಬ್ಬರೂ ಸೇನಾಜನರನ್ನು ಕ್ಷಣಮಾತ್ರದಲ್ಲಿ ಬಡಿದೋಡಿಸಿದರು. ಬಳಿಕ ಲವಕುಶರಿಬ್ಬರೂ, ಶರಚಾಪ ಖಡ್ಗಪಾಣಿಗಳಾಗಿ ನಗುತ್ತ ನಿಂತಿರಲು, ಕಾಳಗದಲ್ಲಿ ಕಳೆದುಳಿದ ಭಟರು ಹೆದರಿ, ಬೇಗನೆ ಹೋಗಿ ರಾಮನಿಗೆ ಈ ವಿಷಯವನ್ನು ತಿಳಿಸುವ ನೆವದಿಂದೆ ದೇವಪುರನಿಲಯ ಲಕ್ಷ್ಮೀರಮಣನ ಸನ್ನಿಧಿಗೈದಿವರೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿನಾಗಶರ್ಮಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಇಪ್ಪತ್ತನೆಯ ಸಂಧಿ ಸಂಪೂರ್ಣಂ. ಶ್ರೀ ಶ್ರೀ ಶ್ರೀ.

# ಇಪ್ಪತ್ತೊಂದನೆಯ ಸಂಧಿ.

ಮಕ್ಕಳಿಂದ ಮೂರ್ಛಿತನಾದ ರಾಮನು ವಾಲ್ಮೀಕಿಯಿಂದ ಸಂತೈಸಲ್ಪಟ್ಟು ಸೀತೆಯೊಡಗೂಡಿ ಅಶ್ವಮೇಧವನ್ನು ಪೂರೈಸಿದುದು.

ಎಲೈ ಜನಮೇಜಯನೇ ಲಾಲಿಸು. ಇತ್ತ ಗಂಗಾತೀರದಲ್ಲಿ ದೀಕ್ಷೆಗೊಂಡಿದ್ದ ಶ್ರೀರಾಮನು ಯುದ್ಧರಂಗದಲ್ಲಿ ಶತ್ರುಘ್ನನು ಏನುಮಾಡಿದನೊ ಬಾಲಕರನ್ನು ಗೆದ್ದನೋ ಅಥವಾ ಅವರ ತೋಳಬಲಕ್ಕೆ ಸೋತು ನೊಂದು ಹೋದನೋ ! ಎಂಬುದನ್ನು ನನಗೆ ಹೇಳುವವರಾರು ಅವರನ್ನು ಗೆಲ್ಲುವನೋ ! ಇಲ್ಲವೆ ತಾನೆ ಸೋಲುವನೋ ! ಕುದುರೆಯನ್ನು ಬಿಡಿಸಿಕೊಳ್ಳುವನೋ ! ಕೈಲಾಗದೆ ಮರುಗುವನೋ ಕಾಣೆನಲ್ಲಾ ಎಂದು ಮರುಗಿ, ಅಕಟ ! ಈ ನಮ್ಮ ಶತ್ರುಘ್ನನೂ ಲಕ್ಷ್ಮಣನೂ ಕನಸ್ಸಿನಲ್ಲಿ ಕೂಡ ಯಾರಿಗೂ ಸೋತವರಲ್ಲ ? ಈಗ ಈ ಬಾಲಕರ ಪೆಟ್ಟಿನಿಂದ ನೊಂದರೆಂಬುವುದನ್ನು ಕೇಳಿದರೆ ಆಶ್ಚರ್ಯವಾಗುವುದಲ್ಲಾ ! ಆಹಾ ! ಆ ಮಕ್ಕಳಿಬ್ಬರೂ ಇನ್ನೆಂಥ ಬಲಶಾಲಿಗಳೋ ಕಾಣೆ. ಎಲೈ ಭರತಾನುಜನೇ ! ಆ ಮಕ್ಕಳಿಬ್ಬರನ್ನೂ ಯುದ್ಧದಲ್ಲಿ ಕೊಲ್ಲದೆ ಸಮ್ಮೋಹನಾಸ್ತ್ರದಿಂದ ಬಂಧಿಸಿ ನನ್ನ ಬಳಿಗೆ ಕರೆತರುವರಂತೆ ಲಕ್ಷ್ಮಣ ಶತ್ರುಘ್ನರಿಗೆ ಹೇಳಿ ಕಳುಹಿಸು ಎಂದು ಹೇಳಲು ಭರತನು ಕೂಡಲೆ ಯೋಗ್ಯರಾದ ಭಟರನ್ನು ಯುದ್ಧರಂಗಕ್ಕೆ ಓಡಿಸಿದನು. ಆ ಚಾರಕರು ಯುದ್ಧರಂಗವನ್ನು ಸೇರಿ ಅಲ್ಲಿನ ಸಂಗತಿಗಳನ್ನು ತಿಳಿದು ಅಯೋಧ್ಯಾನಗರಕ್ಕೆ ಬಂದು ಸ್ವಾಮಿ ! ಇನ್ನು ದೀಕ್ಷೆಯನ್ನು ಬಿಡು, ಲೋಕೈಕವೀರನಾದ ಕುಶಲವರೊಡನೆ ಯುದ್ಧಮಾಡುವುದಕ್ಕೆ ನೀನೆ ಹೊರಡು. ಲಕ್ಷ್ಮಣ ಶತ್ರುಘ್ನರು ಸೇನಾಜನರೊಡನೆ ಜೀವಸಂದೇಹಿಗರಾಗಿ ಯುದ್ಧರಂಗದಲ್ಲಿ ಬಿದ್ದಿರುವರು. ಆ ಮಕ್ಕಳನ್ನು ನೋಡಿದರೆ ನಿನ್ನಂತೆಯೇ ಕಾಣುವರು ಅವರ ಬಾಣದೆಸುಗೆಯಿಂದ ನಿಮ್ಮ ಸೈನ್ಯ ಜಾಲವು ಶ್ರೀ ಕೃಷ್ಣನಿಗೆ ಮೊಲೆಗೊಟ್ಟ ಪೂತನಿಯಹಾಗಿದೆ. ಇನ್ನು ಉಳಿದ ಸಂಗತಿಗಳನ್ನು ನಿನ್ನೊಡನೆ ಹೇಳಲಂಜುವೆವು ಎಂದು ಹೇಳಿದರು. ಅದನ್ನು ಕೇಳಿ ಶ್ರೀರಾಮನು ಹಾ ! ಎಂದು ಹಮ್ಮೈಸಿ ಮೂರ್ಛೆಹೋದನು. ಬಳಿಕ ಪರಿಜನರೂ ಋಷಿವರ್ಯರೂ ಮಾಡಿದ ಶೈತ್ಯೋಪಚಾರ ದಿಂದೆಚ್ಚತ್ತು ಶ್ರೀರಾಮನು ಅಯ್ಯೋ ! ಲಕ್ಷ್ಮಣನು ಎಲ್ಲಿರುವನು ? ಅಕಟಕಟಾ ! ನನಗೋಸ್ಕರವಾಗಿ ಕಗ್ಗಾಡಿನಲ್ಲಿ ಕಷ್ಟಪಟ್ಟು ಕುಗ್ಗಿಹೋದ ತಮ್ಮನು ಎಲ್ಲಿದಾನೆ ಅಯ್ಯೋ ! ಸೌಮಿತ್ರಿಯೇ ಆಹಾ ! ಯುದ್ಧಶ್ರಮದಿಂದ ಮೂರ್ಛೆಹೋದೆಯಾ ಎಂದು ಮರುಗುತ್ತಿದ್ದನು. ಅದನ್ನು ಕಂಡು ಅಲ್ಲಿದ್ದ ಜನರೆಲ್ಲರೂ ಅಯ್ಯೋ ! ಮೊದಲು ಯೋಚಿಸದೆ ಸೀತೆಯನ್ನು

ನಿಷ್ಕರುಣದಿಂದ ತೊರೆದುಬಿಟ್ಟ ಅನ್ಯಾಯದಿಂದ ಶೂರರಾದ ಲಕ್ಷ್ಮಣ ಶತ್ರುಘ್ನರಿಗೆ ಇಂತಹ ಕೇಡುಂಟಾಯಿತು. ಇಲ್ಲವಾದರೆ ಅವರಿಬ್ಬರೂ ಅರಣ್ಯವಾಸಿಗಳಾದ ಬಾಲಕರಿಗೆ ಸೋಲುವದೆಂದರೇನು ? ಲಕ್ಷ್ಮಣ ಶತ್ರುಘ್ನರನ್ನು ಜಯಿಸುವ ವೀರರು ಈ ಲೋಕದಲ್ಲಿರುವರೆ ? ಅರಣ್ಯದಲ್ಲಿರುವ ಋಷಿಕುಮಾರರಿಗೆ ದೊರೆಗಳನ್ನು ಗೆಲ್ಲುವ ಬಲವೆಲ್ಲಿಂದ ಬಂದಿತು. ಯೋಚಿಸಿ ನೋಡಿದರೆ ಆ ಮಕ್ಕಳು ಸೀತೆಯ ಪುತ್ರರೇ ಆಗಿರಬೇಕು ? ಇದಕ್ಕೆ ಅನುಮಾನವಿಲ್ಲವೆಂದು ರಾಮಚಂದ್ರನಿಗೆ ಕೇಳಿಸುವಂತೆ ಹೇಳಿಕೊಳ್ಳುತ್ತಿದ್ದರು. ಸೀತೆಯ ಮುಖಲಕ್ಷಣವೂ ನನ್ನ ಅವಯವಗಳ ಆಕೃತಿಯೂ ಆ ಮಕ್ಕಳಿಗಿರುವದಂತೆ ? ಅಯ್ಯೋ ! ಹಾ !! ಅವನ್ನು ಹೆತ್ತ ತಾಯಿ ಎಲ್ಲಿರುವಳು. ಈ ನಮ್ಮ ಯಾಗದ ಕುದುರೆಯನ್ನು ಕಟ್ಟುವ ಪರಾಕ್ರಮವು ಆ ಬಾಲಕರಿಗೆಲ್ಲಿಂದ ಬಂದಿತು. ಎಂಬುವುದನ್ನು ಕೇಳಿ ತಿಳಿದುಕೊಳ್ಳುವೆನು. ದೂತರನ್ನು ಬರಹೇಳು ! ಕರುಣಾಶಾಲಿಯಾದ ಲಕ್ಷ್ಮಣನು ಮಕ್ಕಳ ಮೇಲಣ ಮೋಹದಿಂದ ದಯೆತೋರಿಸಿ ತಾನು ಗಾಯಪಟ್ಟನೋ ! ಹಾಗಿಲ್ಲವಾದರೆ ಅಹುಡುಗರಿಬ್ಬರೂ ಮಿಡುಕಿನ ಮಿಂಡಾಳುಗಳ ಗಂಡರೋ ಕಾಣೆ ಎಂದು ಬಿಸುಸುಯ್ದು ಶ್ರೀರಾಮನು ತಮ್ಮಂದಿರ ಗುಣಗಳನ್ನು ನೆನೆದು ಚಿಂತಿಸುತ್ತಿರಲು, ಮತ್ತೆ ಮಹಾವೀರನಾದ ಕುಶನ ಬಾಣಗಳ ಬಿರುಹಬೆಯಿಂದ ಬೆಂದು ನೊಂದ ಚಾರಕರು ಬಹಳವಾಗಿ ಹೆದರಿ, ಭಯದಿಂದ ಕುದಿಯುತ್ತ ರಾಮನ ಬಳಿಗೆ ಓಡಿಬಂದು, ಸ್ವಾಮಿ ! ಲಕ್ಷ್ಮಣನ ಶರೀರದಲ್ಲಿ ಪ್ರಾಣಗಳ ಗುರುತೇ ಇಲ್ಲ. ಉಳಿದ ಸೇನೆಗಳು ಮಡಿದುಬಿದ್ದವು. ಶತ್ರುಘ್ನನು ಹೇಗಿರುವನೊ ಕಾಣೆ. ಇನ್ನು ಈ ದೀಕ್ಷೆಯೇಕೆ ? ಶೀಘ್ರವಾಗಿ ಯುದ್ಧಕ್ಕೆ ಹೊರಡು ಎಂದು ಮೊರೆಯಿಟ್ಟರು. ಅದನ್ನು ಕೇಳಿ ಕೋಪದಿಂದ ಗರ್ಜಿಸುತ್ತ ಅಣ್ಣಾ ! ಈ ಚಾರಕರು ಭಯದಿಂದ ಹೆದರಿ ನಡುಗುತ್ತಿರುವರು ಲಕ್ಷ್ಮಣ ಶತೃಘ್ನರು ಯುದ್ಧದಲ್ಲಾದ ಬಳಲಿಕೆಯಿಂದ ಮೈಮರೆದಿರಬಹುದು. ಇಲ್ಲವಾದರೆ ಅವರಿಗೆ ಮರಣವೆಲ್ಲಿಂದ ಬಂದಿತು ! ಸಾಕು. ನೀನು ವ್ಯರ್ಥವಾಗಿ ವ್ಯಥೆಪಡಬೇಡ. ನನ್ನನ್ನು ಕಳುಹಿಸಿನೋಡು ಆ ಮಕ್ಕಳನ್ನು ಬಾಣಜಾಲಗಳಿಂದ ಬಂದಿಸಿ, ಕುದುರೆಯನ್ನು ಬಿಡಿಸಿಕೊಂಡು ಬರುವೆನು ಎಂದು ಹೇಳಿದನು, ಶ್ರೀರಾಮನು ಅದನ್ನು ಕೇಳಿ ಸಮ್ಮತಿಸಿ ಜಾಂಬವ, ಸುಷೇಣ, ಅಂಗದ, ಹನುಮಂತ, ನಳ, ನೀಲ, ಕುಮುದ ಶತಬಲಿ, ಗವಯ, ಗವಾಕ್ಷ ಎಂಬ ಕಪಿಗಳೊಡನೆ ಮೂಲಬಲದ ಸೈನ್ಯದವರನ್ನು ಜೊತೆಮಾಡಿ ಕಳುಹಿಸಿ, ಭರತನನ್ನು ಬೀಳ್ಕೊಟ್ಟನು ಆತನು ಗಂಗಾತಟದ ಆರಣ್ಯಪ್ರಾಂತಕ್ಕೆ ಬಂದು, ಯುದ್ಧರಂಗದ ವೃಂತ್ತಾಂತವನ್ನು ತಿಳಿದುಕೊಂಡು ಬರುವಂತೆ ಹನುಮಂತನನ್ನು ಕಳುಹಿಸಿದನು. ಬಳಿಕ ಭರತನ ಅಪ್ಪಣೆಯಂತೆ ಆಂಜನೇಯನು ಅಲ್ಲಿಂದ ಯುದ್ಧರಂಗಕ್ಕೆ ಹಾರಿ, ಚಂಡವಿಕ್ರಮನಾದ ಕುಶನ

ಬಾಣಗಳ ಸೋಂಕಿನಿಂದ ಸೊಲ್ಲಡಗಿ ವ್ಯ್ಪೆಮರೆದು ಮಲಗಿರುವ ಸೇನಾಜನರನ್ನೂ, ಸೂರ್ಯಕುಲಜನಾದ ರಾಮನು ನಿನ್ನ ಮಗಳಾದ ಸೀತೆಯನ್ನು ನಿಷ್ಕಾರಣವಾಗಿ ತೊರೆದನು ಇದಕ್ಕೆ ಕೋಪಮಾಡದೆ ಸೈರಿಸು ನಾವು ಅಪರಾಧಿಗಳಾಗಿದ್ದರೆ ನಮ್ಮನ್ನು ಕ್ಷಮಿಸು ಎಂದು ಬೇಡಿಕೊಳ್ಳುವಂತೆ ಭೂಮಿಯಮೇಲೆ ಬಿದ್ದಿರುವ ಲಕ್ಷ್ಮಣ ಶತ್ರುಘ್ನರನ್ನು ಕಂಡು, ಅವರಿಬ್ಬರನ್ನು ಎತ್ತಿಕೊಂಡು ಭರತನಬಳಿಗೆ ಬಂದನು. ಆಗ ಭರತನು ಭ್ರಾತೃವಾತ್ಸಲ್ಯದಿಂದ ಮರುಗಿ, ಮನದಲ್ಲಿ ನೊಂದು, ಮೂರ್ಛೆಹೋದ ತಮ್ಮಂದಿರನ್ನು ರಥದಲ್ಲಿ ಮಲಗಿಸಿಕೊಂಡು, ತನ್ನ ಸೇನಾಜನ ರನ್ನು ಹಿಂದಿಕ್ಕಿ, ಪೊರೆಬಿಟ್ಟಹಾವಿನಂತೆ ಉಕ್ಕಿಬರುವ ರೋಷದಿಂದ ಹೂಂಕ ರಿಸಿ, ಮೊರೆಯುತ್ತ ಕುಶಲವರಮೇಲೆ ಕೈಮಾಡಲು ಹೊರಟನು.



ಭರತನು ಕುಶಲವರಮೇಲೆ ಯುದ್ಧಕ್ಕೆ ಬಂದುದು.

ಹಿಡವಾದ ಸೇನೆಯೊಡನೆ ಹೊರಟು ಸನ್ಮೋಹನಾಸ್ತ್ರವೆಂಬ ಬಲೆಯಲ್ಲಿ ಬಂಧಿಸಿ ಹಿಡಿದುಕೊಂಡು ಹೋಗಬೇಕೆಂದು ಬರುತ್ತಿರುವ ಭರತನನ್ನೂ ಆತನ ಸೇನೆಯನ್ನೂ ನೋಡಿ ಕುಶಲವರಿಬ್ಬರೂ ಅಟ್ಟಹಾಸದಿಂದ ಮಾತಾಡಿಕೊಂಡು, ಚಾಪಟಂಕಾರವಂಗೈದು ಹೆದೆಯೇರಿಸಿ ಬಾಣಗಳನ್ನು ಹೂಡಿಹೊಡೆದು, ಅರಗಳಿ ಗೆಯಲ್ಲಿ ಆ ಸೈನ್ಯವೆಲ್ಲವೂ ಸೂರ್ಯನಿಗೆ ಮರೆಯಾದ ಮಧ್ಯಾಹ್ನದ ಮೋಡಗ ಳಂತೆ ಮಾಯವಾಗಿ ಯುದ್ಧರಂಗವೆಲ್ಲ ಮಯೂಖಮಯವಾಗುವಂತೆ ಬರಿಯ ಬಾಣಗಳನ್ನೇ ತುಂಬಿಸಿದರು. ಆಗ ಅಂತರಿಕ್ಷದಲ್ಲಿ ನೆರೆದಿದ್ದ ದೇವತೆಗಳು ಹೂಮಳೆಯನ್ನು ಸುರಿಸಿದರು. ಮಾತಾಡಿ ಫಲವೇನು ? ಲವಕುಶರ ಬಾಣದ ಧ್ವನಿಯನ್ನು ಕೇಳಿ, ದಿಗ್ದಂತಿಗಳ ಕಿವಿ ಕಿವುಡಾಯಿತು. ನೆಲವೂ ನೀರೂ ಒಂದಾಯಿತು. ಕುಲಾಚಲಂಗಳು ಕುಸಿದುವು. ತಾಪವನ್ನು ಸಹಿಸಲಾರದೆ ಆದಿಶೇಷನು ನಡುಗಿದನು. ಕೂರ್ಮನು ತಳಮೇಲಾದನು. ಸೂರ್ಯಚಂದ್ರರ

ಸುಳಿವು ಅಡಗಿಹೋಯಿತು. ಎಲ್ಲಿನೋಡಿದರೂ ಬಾಣಮಯವಾದ ಅಂಧಕಾರವು ಹರಡಿಕೊಂಡಿತು. ಬಾಣಗಳು ತಗಲಿದ ಕೂಡಲೆ ಆನೆಗಳ ಸೊಂಡಿಲೂ, ಕುದುರೆಗಳ ಕಾಲುಗಳೂ, ವೀರರ ತಲೆಗಳೂ, ಬಿಲ್ಲಾಳುಗಳ ಬಿಂಕದ ಬಿಲ್ಲುಬಾಣಗಳೂ ಆಯುಧಗಳನ್ನು ಹಿಡಿದುನಿಂತ ಗಂಡಾಳುಗಳ ಗಂಡಂದಿರೂ ಭೂಮಿಗೆ ಉರುಳಿ ಬೀಳುತ್ತಿದ್ದರು.

ಆಹಾ ! ತ್ರಿಮೂರ್ತಿಗಳಾದರೇನು ? ಕುಶನ ಬಾಣದಮುಂದೆ ನಿಲ್ಲಬಲ್ಲರೆ ! ನಿಜವಾಗಿಯೂ ಸೋತು ಓಡಿಹೋಗುವರು. ಎಂಬಂತೆ ಕ್ಷಣಮಾತ್ರದಲ್ಲಿ ಕುಶನ ಬಾಣಗಳು ಭರತನ ಸೇನೆಯನ್ನು ತಡೆಗಡಿದು ಬಯಲುಮಾಡಿತು. ಆಗ ಹನುಮಂತನು ರಾಮನ ಆಕಾರವನ್ನು ಹೋಲುತ್ತಿರುವ ಮಕ್ಕಳನ್ನು ಭರತನಿಗೆ ತೋರಿಸಲು, ಅವರನ್ನು ಅಕ್ಕರೆಯಿಂದ ನೋಡಿ ಉಬ್ಬುತ್ತಿರುವ ರೋಮಾಂಚನದಿಂದ ಮಗು ನೀನು ಯಾರು ? ಇವನು ನಿನಗೇನಾಗಬೇಕು ? ನನ್ನ ತಮ್ಮಂದಿರನ್ನು ಬಹಳವಾಗಿ ನೋಯಿಸಿದುದೇಕೆ ? ಸೈನ್ಯವನ್ನೆಲ್ಲ ಕೊಂದು ಹಾಕಿದೆಯಲ್ಲಾ ! ಇನ್ನಾದರೂ ಸುಮ್ಮನೆ ನಮ್ಮ ಕುದುರೆಯನ್ನು ಬಿಟ್ಟುಬಿಡು. ವ್ಯರ್ಥವಾದ ಕೋಪದಿಂದ ಫಲವೇನು ? ನಿಮ್ಮ ತಾಯಿಯಬಳಿಗೆ ಹೋಗಿ ಸಂತೋಷದಿಂದ ಸುಖವಾಗಿರು ಎಂದು ಹೇಳಿದನು. ಅದಕ್ಕೆ ಕುಶನು ನಸುನಗುತ್ತ ನಾವು ವಾಲ್ಮೀಕಿಯ ಪೋಷಣೆಗೆ ಸಂದವರು. ಇವನು ನನಗೆ ತಮ್ಮನಾಗಬೇಕು ? ನಾವು ಕಟ್ಟಿದ ಕುದುರೆಯನ್ನು ಎಂದಿಗೂ ಬಿಡಲಾರೆವು. ಯುದ್ಧದಲ್ಲಿ ನಿನ್ನನ್ನೂ ನಿನ್ನ ತಮ್ಮಂದಿರನ್ನೂ ಸದೆದು ನಿಮ್ಮ ಸೇನೆಯನ್ನೂ ಸವರಿದ ಬಳಿಕ ನಾವು ತಾಯಬಳಿಗೆ ಹೋಗಿ ಸಂತೋಷದಿಂದಿರುವೆನು. ನನ್ನ ಹೆಸರು ಕುಶನೆಂದು ರೂಢಿಯಾಗಿದೆ ಎಂದು ಬಾಣಗಳಿಂದ ಭರತನನ್ನು ಹೊಡೆದನು. ಭರತನು ಆ ಬಾಣಘಾತವನ್ನು ತರಹರಿಸಿಕೊಂಡು ನಳ ನೀಲ ಹನುಮರೊಡಗೂಡಿ ಕಾದುತ್ತಿರುವದನ್ನು ಕಂಡು ಕುಶನು ಭರತನಿಗೆ ಹತ್ತು, ನಳನಿಗೆ ಎಂಟು, ಹನುಮಂತನಿಗೆ ಮೂವತ್ತು, ಜಾಂಬವಂತನಿಗೆ ನಲವತ್ತು, ಅಂಗದನಿಗೆ ತೊಂಭತ್ತು, ನೀಲಕುಮುದರಿಗೆ ನೂರು ನೂರು ಬಾಣಗಳನ್ನು ಹೊಡೆದು ಬಾಣದ ಮಳೆಯನ್ನು ಸುರಿಸಿ ಸೇನಾಜಾಲವನ್ನು ತಡೆಗಡಿದನು, ಭರತಾದಿಗಳು ಕುಶನ ಬಾಣವನ್ನು ಸಹಿಸಲಾರದೆ ಮೂರ್ಛೆಹೋದರು. ಆಬಳಿಕ ರಾಮನಸೇನೆಯಲ್ಲಿ ಕಳೆದುಳಿದ ಆಳುಗಳು ಶೀಘ್ರವಾಗಿ ರಾಮನಬಳಿಗೆ ಬಂದು ಯುದ್ಧರಂಗದ ವೃತ್ತಾಂತವನ್ನು ಬಿನ್ನವಿಸಿದರು. ಅದನ್ನು ಕೇಳಿ ಖೇದಯುಕ್ತನಾಗಿ ಶ್ರೀರಾಮನು ಸಂಕಟದಿಂದ ಮರುಗುತ್ತ ಸುಗ್ರೀವ ವಿಭೀಷಣರು ಎಡಬಲಗಳಲ್ಲಿ ನಡೆತರಲು ಮೂಲಬಲದೊಡನೆ ಹೊರಟು ಯುದ್ಧರಂಗಕ್ಕೆ ಬಂದು ನಿಂತುಕೊಂಡು



ಶ್ರೀರಾಮರು ಲವಕುಶರಮೇಲೆ ಯುದ್ಧಮಾಡಿದುದು.

ಮೈಮರೆದು ಮಲಗಿದ ತಮ್ಮಂದಿರನ್ನೂ, ಸತ್ತುಬಿದ್ದಿದ್ದ ಸೇನೆಯನ್ನೂ, ಕುದುರೆಯನ್ನೂ ಕಟ್ಟಿಹಾಕಿ ಯುದ್ಧಕ್ಕೆ ನಿಂತುಕೊಂಡಿರುವ ಬಾಲಕರನ್ನೂ ಕಂಡು ಆಶ್ಚರ್ಯಪಟ್ಟು, ಶ್ರೀರಾಮನು ಆ ಬಾಲಕರನ್ನು ಕುರಿತು, ಗಂಭೀರವಾದ ಸುಸ್ವರದಿಂದ ಎಲೈ ಮಕ್ಕಳಿರಾ ! ನಿಮಗೆ ಯಾರು ಧನುರ್ವಿದ್ಯೆಯನ್ನು ಕಲಿಸಿದರು ನೀವು ವಾಸವಾಗಿರುವುದೆಲ್ಲಿ ನಿಮ್ಮನ್ನು ಹಡೆದ ತಾಯಿಯಾರು ? ನಮ್ಮ ಕುದುರೆಯನ್ನು ಹಿಡಿದು ಕಟ್ಟುವ ಛಲವು ನಿಮಗೇತಕ್ಕೆ ಉಂಟಾಯಿತು ? ನಮ್ಮ ಸೇನೆಯನ್ನು ಸಹ ಜಯಿಸುವ ಬಾಹುಬಲವು ನಿಮಗೆ ಎಲ್ಲಿಂದ ಬಂದಿತು ಎಂದು ಕೇಳಿದನು. ಕುಶನು ಹುಸಿನಗೆಯಿಂದ ರಾಮನನ್ನು ಹಾಸ್ಯಮಾಡುತ್ತ ಅಯ್ಯಾ ! ರಾಜೋತ್ತಮ ! ಕ್ಷತ್ರಿಯಧರ್ಮದಂತೆ ಕಟ್ಟಿದ ಕುದುರೆಯನ್ನು ಬಿಡಿಸಿಕೊಳ್ಳಲಾರದೆ ಸುಮ್ಮನೆ ನಮ್ಮ ಜನನಸ್ಥಿತಿಯನ್ನು ವಿಚಾರಿಸಿ ಫಲವೇನು ? ಲೋಕವು ಈ ಮಾತನ್ನು ಮೆಚ್ಚುವುದೆ ಎಂದು ರಾಮನನ್ನು ತಿರಸ್ಕರಿಸಿದನು. ಆಗ ಕರುಣಾಮೂರ್ತಿಯಾದ ಶ್ರೀರಾಮನು ಅಕಟಕಟಾ ! ಮಕ್ಕಳಾಗಿರುವ ನಿಮ್ಮೊಡನೆ ನಾನು ಯುದ್ಧಮಾಡಬಹುದೆ ? ನಿಮ್ಮ ಬಾಣಘಾತದಿಂದ ಮೂರ್ಛೆಹೊಂದಿ ಮಲಗಿರುವ ತಮ್ಮಂದಿರನ್ನು ಕಂಡು ಕೋಪದಿಂದ ಬಿಲ್ಲಿಗೆ ಬಾಣವನ್ನು ಹೂಡಿದರೂ ಮನಸ್ಸು ಹಿಂದೆಗೆಯುತ್ತಿದೆ. ಆದುದರಿಂದ ನಿಮ್ಮ ಜನನಸ್ಥಿತಿಯನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಷೆಯುಂಟಾಯಿತು. ಹೇಳಿದರೆ ಹೇಳಿ ಬಿಟ್ಟರೆ ಬಿಡಿ ಎನಲು ಕುಶನು ಲೋಕಾನಂದಕರವಾದ ಕೂರ್ನುಡಿಗಳಿಂದ ರಾಮನನ್ನು

ಕುರಿತು ಎಲೈ ರಾಜೇಂದ್ರನೇ ! ಸೀತೆಯೊಬ್ಬಳೇ ಈ ತಪೋವನದಲ್ಲಿ ಅವಳಿಮ
ಕ್ಕಳಾಗಿ ನಮ್ಮಿಬ್ಬರನ್ನು ಹೆತ್ತಳು. ಅನುದಿನವೂ ಅಕ್ಕರೆಯಿಂದಾದರಿಸಿ ಸಕಲ
ವಿದ್ಯೆಗಳನ್ನು ಕಲಿಸಿ, ಜಾತಕರ್ಮ ನಾಮಕರಣ ಉಪನಯನಾದಿಗಳನ್ನು ಮಾಡಿ
ಧನುರ್ವೇದವನ್ನು ಕಲಿಸಿದಮೇಲೆ ಸಕಲ ಶಾಸ್ತ್ರಗಳಲ್ಲಿಯೂ ನಿಪುಣರನ್ನಾಗಿ
ಮಾಡಿ, ರಾಜನೀತಿಗಳನ್ನರಿಪಿ, ವಾಲ್ಮೀಕಿ ಮಹರ್ಷಿಯು ಉತ್ಸಾಹದಿಂದ
ನಮ್ಮನ್ನು ಕಾಪಾಡಿದನು. ಅಲ್ಲದೆ ರಾಮಾಯಣವನ್ನು ಓದಿ ಅಭ್ಯಾಸಿಸಿದ ಬಲ
ದಿಂದ ನಮಗೆ ಕಾಯಪುಷ್ಟಿ, ಬುದ್ಧಿಶಕ್ತಿ, ನಿರಾಲಸ್ಯ, ಚಟುವಟಿಕೆ, ಪೂರ್ಣಾ
ಯುಸ್ಸು ಉಂಟಾಗಿ, ನಿಮ್ಮ ಸೇನೆಯನ್ನು ಗೆಲ್ಲುವ ಧೈರ್ಯ ಶೌರ್ಯಗಳು
ಬಂದವು ಎಂದು ಹೇಳಿದನು. ಬಳಿಕ ಶ್ರೀರಾಮನು ಇವರು ತನ್ನಮಕ್ಕಳೆ ನಿಜ
ವೆಂದರಿತು ಸೀತೆಯೆಂಬ ಮಾತು ಕಿವಿಗೆ ಬಿದ್ದಕೂಡಲೆ ಮೂರ್ಛೆಹೊಂದಿ ಚೇತ
ರಿಸಿಕೊಂಡು ತನ್ನ ಬಲಗಡೆಯಲ್ಲಿ ನಿಂತಿರುವ ಸುಗ್ರೀವನನ್ನು ಕುರಿತು ಅಯ್ಯಾ
ಈ ಪರಾಕ್ರಮಿಗಳಾದ ಬಾಲಕರು ಪ್ರೌಢರಾಗಿ ಕಾಣುತ್ತಿರುವರು. ಇವರಾಡಿದ
ಮಾತುಗಳನ್ನು ಕೇಳಿದೆಯಾ ? ಅರಣ್ಯವಾಸಿಗಳಾದ ಈ ಮಕ್ಕಳು ಯಾರಮ
ಕ್ಕಳು ಎಂಬುದನ್ನು ಇನ್ನೊಂದುಸಾರಿ ವಿಚಾರಿಸುವೆಯಾ ಎನಲು ಸುಗ್ರೀವನು
ನಸುನಗುತ್ತ ಸ್ವಾಮಿ ! ಇವರಿಬ್ಬರೂ ಸೂರ್ಯವಂಶಸಂಜಾತರು. ಪುರಾಣಪುರು
ಷೋತ್ತಮನ ಸಂತತಿಯವರು. ಇವರನ್ನು ಚೆನ್ನಾಗಿ ನೋಡಿದರೆ ನಿನಗೆ ಅನು
ರೂಪವಾದ ಆಕಾರ ಉಳ್ಳವರಾಗಿರುವರು. ಹಾಗಿಲ್ಲದಿದ್ದರೆ ಈ ಮಕ್ಕಳಿಗೆ
ಇಷ್ಟೊಂದು ಶೌರ್ಯ ಧೈರ್ಯಗಳೆಲ್ಲಿಂದಬಂದೀತು ಎಂದು ಹೇಳಿದನು. ರಾಮ
ಸುಗ್ರೀವರು ಹೀಗೆ ಮಾತಾಡಿಕೊಳ್ಳುತ್ತಿರುವಷ್ಟರಲ್ಲಿಯೇ ನೀಲನೆಂಬ ಕಪಿವೀ
ರನು ಬಾಳೆಯಗಂಬಕ್ಕೆ ಕಟ್ಟಿದ ಕುದುರೆಯನ್ನು ಬಿಚ್ಚಿಕೊಂಡುಹೋಗಲು
ಬರುತ್ತಿರುವುದನ್ನು ಕಂಡು ಉಗ್ರಕೋಪಿಯಾದ ಕುಶನು ಕ್ರೂರವಾದ ಬಾಣ
ಗಳನ್ನು ಹೊಡೆದು ಅವನನ್ನು ನೋಯಿಸಿದನು. ರಕ್ತಧಾರೆಯು ನದಿಯಂತೆ
ಹರಿಯತೊಡಗಿತು, ಆ ರಕ್ತಧಾರೆಯಿಂದ ನೀಲನಂಥ ಒಂದುಕೋಟಿ ಕಪಿಗಳು
ಎದ್ದು, ಯುದ್ಧಸನ್ನದ್ಧರಾಗಿ ನಿಂತು, ಬೆಟ್ಟ, ಕಲ್ಲು, ಗುಂಡು ಮರಗಳನ್ನು
ಹಿಡಿದು ಮೇಲೆಬಿದ್ದರು. ಹೀಗೆ ಒತ್ತಾಯದಿಂದ ತನ್ನೆದುರಿಗೆ ನಿಂತಿರು
ನೀಲಸೈನ್ಯವನ್ನು ಗೆಲ್ಲುವುದಕ್ಕಾಗಿ ಕುಶನು ಸೂರ್ಯನನ್ನು ಭಕ್ತಿಯಿಂದಾರಾಧಿಸಿ
ಧ್ಯಾನದಿಂದ ಮೆಚ್ಚಿಸಿ, ಆ ಮಹಾಸೈನ್ಯವನ್ನು ಗೆಲ್ಲುವುದಕ್ಕಾಗಿ ಒಂದುವ
ಯೋಜನ ಅಗಲವುಳ್ಳ ಬಿಲ್ಲನ್ನೂ, ಅವನ ರಕ್ತವು ಹೊರಸೂಸದಂತೆ ತಡೆಯು
ವುದಕ್ಕಾಗಿ ಗುರಾಣಿಯನ್ನೂ, ತಾನು ತೊಡುವುದಕ್ಕೆ ಯೋಗ್ಯವಾಗಿರುವ ಬಾಣ
ಗಳನ್ನು ಪಡೆದುಕೊಂಡನು. ಆ ಬಿಲ್ಬಾಣಗಳ ಬಲ್ಮೆಯಿಂದ ಸೈನ್ಯವನ್ನು
ಸೂರೆಗೊಂಡು ನೀಲನನ್ನು ಹೊಡೆದುಕೆಡಹಿ, ಸುಗ್ರೀವ ಮೊದಲಾದ ಕಪಿ

ರರ ಬಲವನ್ನು ತುಳಿದು ತಲೆಕೆಳಗುಮಾಡಿ, ಸೇನಾಪತಿಗಳ ಸಾಮರ್ಥ್ಯವನ್ನು ಸುಟ್ಟುರುಹಿಸಿ, ವಿಭೀಷಣನ ಶೌರ್ಯವನ್ನು ನೀರಾಗಿಮಾಡಿಸಿ ಆತನ ಸೈನ್ಯವನ್ನು ಹೊಡೆದು ಕೆಡಹಿದನು.

ಬಳಿಕ ತನ್ನ ಸೈನ್ಯದಲ್ಲೊಂದು ಪಿಳ್ಳೆಯೂ ಉಳಿಯದಂತೆ ಹೊಡೆದು ಸೋಲಿಸಿದ ಕುಶನನ್ನು ಕಂಡು, ಶ್ರೀರಾಮನು ಕೋಪಗೊಂಡು, ನಿಶಿತವಾದ ಬಾಣಗಳನ್ನು ಹೂಡಿ ಕುಶನಮೇಲೆ ಬಿಡಲು, ತರಹರಿಸಬಾರದ ರಾಮಬಾಣಗಳು ಕುಶನಮೇಲೆ ಕಾಲಾಗ್ನಿಯಂತೆ ಹಾಯ್ದುಬಂದವು. ಆಹಾ ! ಕ್ಷತ್ರಿಯರ ಕೀರ್ತಿಯೂ, ಮನಸ್ಸೂ ಎಂತಹ ಕ್ರೂರವಾದುವೊ ನಾನುಕಾಣೆ ! ಬಳಿಕ ಎಂದಿಗೂ ಕುಂದದಿದ್ದ ರಾಮಬಾಣಗಳನ್ನು ಅವರೀರ್ವರೂ ಕಟ್ಟಾಯದಿಂದ ಕಡಿದುಹಾಕಿ, ಅದಕ್ಕೀಳ್ಮಡಿಯಾದ ಪ್ರತಿಬಾಣಗಳನ್ನು ಹೊಡೆದು ರಾಮನನ್ನು ನೋಯಿಸಿದರು. ತನ್ನ ದೇಹದಲ್ಲೆಲ್ಲ ಬಾಣಗಳು ನೆಟ್ಟೂರಿಕೊಂಡಿರುವುದನ್ನು ಕಂಡು ಶ್ರೀರಾಮನು ಕೋಪದಿಂದ ಕುದಿಯುತ್ತ ಬಿರುಸರಳುಗಳನ್ನು ಹೂಡಿ ಹೊಡೆದನು. ಅದರೇನು ರಾವಣ ಕುಂಭಕರ್ಣರ ಕಕ್ಕಸದ ಕಡುಬಲ್ಮೆಯನ್ನು ಕವರಿನುಂಗಿದ ಕೂರಂಬುಗಳು, ಕುಶಲವರ ಬಾಣಗಳಿಂದ ಇಕ್ಕಡಿಯಾಗಿ ನೆಲಕ್ಕೆ ಬಿದ್ದುಹೋದುವು. ಆಗ ಶ್ರೀರಾಮನು ಬೆರಗಾಗಿ ದಿಕ್ಕುತೋರದೆ ಸುಮ್ಮನೆ ನಿಂತುಕೊಂಡಿರಲು ತಂದೆಗೆ ಈ ಮಕ್ಕಳಮೇಲೆ ಮೋಹವುಂಟೋ ! ಅಥವಾ ಇಲ್ಲವೊ ! ಎಂಬುದನ್ನು ನೋಡುವಂತೆ ಕುಶಲವರ ಕೂರಲಗುಗಳು ರಾಮನ ಸರ್ವಾಂಗದಲ್ಲೂ ವ್ಯಾಪಿಸಿದವು. ಅಕಟಕಟಾ ! ಬೇಸಗೆ ಬಿರುಜಳವನ್ನು ಸಹಿಸದೆ ಚಿಗುರಿದ ಮಾವಿನಮರವು ಬಸವಳಿದು ಜೋಲುವಂತೆ ಸಾರಥಿಯೊಡನೆ ಕಂಗೆಟ್ಟು, ಕೈಯುಡುಗಿ, ಕೋಮಲಾಂಗದಲ್ಲೆಲ್ಲ ನಟ್ಟುಹೋಗಿರುವ ಬಾಣಗಳ ಬಂಬಲಿಂದ ಶ್ರೀರಾಮನು ನೊಂದು ಮೈಮರೆದು ರಥದಲ್ಲಿ ಮಲಗಿದನು. ಕೂಡಲೆ ದೇವತೆಗಳು ಹೂಮಳೆಯನ್ನು ಸುರಿಸಿದರು. ದೇವದುಂದುಭಿಗಳು ಮೊಳಗಿದವು. ಬಳಿಕ ಲವಕುಶರಿಬ್ಬರೂ ಮೈಮರೆದು ಮಲಗಿದ ಶ್ರೀರಾಮನ ಬಳಿಗೆ ಬಂದು ಆತನ ಕರ್ಣಕುಂಡಲಗಳನ್ನು ಕಳಚಿಕೊಂಡು, ಭರತ ಲಕ್ಷ್ಮಣ ಶತ್ರುಘ್ನರ ಆಭರಣಗಳನ್ನೂ ತೆಗೆದುಕೊಂಡು ವಸ್ತ್ರದ ಸೆರಗಿನಲ್ಲಿ ಗಂಟುಕಟ್ಟಿದರು.

ಬಳಿಕ ಒಬ್ಬರಿಗೊಬ್ಬರೂ ಮಾತನಾಡಿಕೊಂಡು, ರಥಾರೂಢರಾಗಿ ಯುದ್ಧಮಾಡಿದ ಭಟರಲ್ಲಿ ಎಚ್ಚರಾಗಿರುವವರನ್ನು ಮುಡಿವಿಡಿದು ಎಳೆತರುವೆವೆಂದು ಹೆಣದೆಡೆ ಹುಡುಕುತ್ತ ಬರುತ್ತಿರಲು, ಮೋಹನಾಸ್ತ್ರಕ್ಕೊಳಗಾಗಿ ಮೂರ್ಛೆಯಿಲ್ಲದೆ ಮಲಗಿಕೊಂಡಿದ್ದ ಹನುಮಂತನು ಜಾಂಬವಂತರನ್ನು ಕುರಿತು, ಎಲೈ ಜಾಂಬವಂತರೇ ! ಈ ಬಾಲಕರ ಮಹಿಮೆಯನ್ನು ನೋಡಿದಿರಾ ! ರಾಮಾದಿ

ವೀರರನ್ನು ರೋಮಕ್ಕೆಸಮನಾಗಿ ತೂಲಿಸಿದರು. ಬಳಿಕ ಯುದ್ಧದಲ್ಲಿ ಎಚ್ಚರಾಗಿರುವವರನ್ನು ಮುಂಡೆವಿಡಿದು ಎತ್ತಿಕೊಂಡು ಹೋಗುವುದಕ್ಕೆ ಬರುತ್ತಿರುವರು ಇವರಲ್ಲಿ ನಮ್ಮ ಶೌರ್ಯ ಧೈರ್ಯಗಳು ಕೈಸಾಗವು. ಇವರು ನಮ್ಮನ್ನು ಸೀತೆಯ ಬಳಿಗೆ ಎಳೆದುಕೊಂಡು ಹೋಗುವರು. ಆದಕಾರಣ ನಾವು ಇವರಿಗಧೀನರಾಗಿ ಅಲ್ಲಿಗೆ ಹೋಗಿ ಲೋಕವಿಖ್ಯಾತೆಯಾದ ಸೀತಾದೇವಿಯಲ್ಲಿ ನಡೆದ ಸಂಗತಿಯನ್ನು ಹೇಳೋಣ ! ಭಕ್ತವತ್ಸಲೆಯಾದ ಆ ದೇವಿಯು ನಮ್ಮನ್ನು ಸಲಹಿದರೆ ಸಲಹಲಿ ! ಇಲ್ಲವಾದರೆ ಬಿಡಲಿ ! ಎಂದು ಹೇಳಿದನು. ಅಷ್ಟರಲ್ಲಿಯೆ ರಣಾಂಗಣವನ್ನು ಸುತ್ತಿಕೊಂಡು ಧೈರ್ಯದಿಂದ ಮಾತನಾಡುತ್ತಿರುವ ಕಪೀಂದ್ರರಬಳಿಗೆ ಬಂದು ಅವರಿಬ್ಬರನ್ನು ಹಿಡಿದು ಬಂಧಿಸಿ, ಹಾಸ್ಯವಚನಗಳಿಂದ ತಿರಸ್ಕರಿಸುತ್ತ ಆಭರಣಗಳನ್ನು ಆ ಹನುಮ ಜಾಂಬವಂತರನ್ನು ತೆಗೆದುಕೊಂಡು, ಬೇಗಬೇಗನೆ ಬಂದು, ಮಕ್ಕಳೇನಾದರೋ ಎಂದು ಚಿಂತಿಸುತ್ತಿದ್ದ ಜಾನಕಿಯನ್ನು ಕಂಡು, ರಾಮಾದಿಗಳ ಆಭರಣಗಳನ್ನು ಮುಂದಿಟ್ಟು ಮೈಯುಡುಗಿ, ಕೈಗುಂದಿ, ಕಾಂತಿಗೆಟ್ಟ ಹನುಮಂತ ಜಾಂಬವಂತರನ್ನು ಪಾದಮೂಲದಲ್ಲಿ ಕೆಡಹಿ ನಮಸ್ಕರಿಸಿದರು. ಆಗ ಮಕ್ಕಳನ್ನು ನೋಡಿ ಸೀತೆ ಇಂತೆಂದಳು:-ಅಕಟಾ ! ಯಾರಿಗೂ ತಿಳಿಯದಂತೆ ಅರಣ್ಯವಾಸಿಯಾಗಿ ಋಷಿಧರ್ಮದಿಂದ ಕಾಲವನ್ನು ಕಳೆಯುತ್ತಿರುವ ನಮಗೆ ಈ ರಾಜಪುತ್ರರ ಆಭರಣಗಳೇಕೆ ? ಸ್ವಾಮಿಭಕ್ತಿಪರಾಯಣರಾದ ಉತ್ತಮರಾದ ಈ ಭಕ್ತಶಿಖಾಮಣಿಗಳಿಬ್ಬರೂ ಮಹಾಶೂರರು ಇವರನ್ನೇಕೆ ಹೀಗೆ ಭಂಗಪಡಿಸಿದಿರಿ ! ಅಯ್ಯೋ ಮಕ್ಕಳಿರಾ ಮುಂದುಗಾಣದೆ ಮಹಾಪರಾಧವನ್ನು ಮಾಡಿದಿರಿ, ನೀತಿಮಾರ್ಗವನ್ನು ತಪ್ಪಿನಡೆದಿರಿ ! ಹಾ !! ಈಗ ನಾನು ಏನುಮಾಡಲಿ ! ಕರುಣಾನಿಧಿಯಾದ ವಾಲ್ಮೀಕಿಯು ಇನ್ನು ಬರಲಿಲ್ಲವಲ್ಲಾ ! ಅಪ್ಪಾ ಮಗು ! ಈ ಕಪಿವೀರರಿಬ್ಬರನ್ನೂ ಕರೆದೊಯ್ದು ಯುದ್ಧರಂಗದಲ್ಲಿ ಬಿಟ್ಟುಬಾ ಎಂದು ಪ್ರಲಾಪಿಸಿದಳು. ಅದನ್ನುಕೇಳಿ ಲವನು ಕ್ಷಣಮಾತ್ರದಲ್ಲಿ ಅವರಿಬ್ಬರನ್ನೂ ತೆಗೆದುಕೊಂಡುಹೋಗಿ ಯುದ್ಧಭೂಮಿಯಲ್ಲಿ ಮಲಗಿಸಿದನು.

ಬಳಿಕ ತ್ರಿಲೋಕಜ್ಞಾನಿಯಾದ ನಾರದನಮುಖದಿಂದ ಈ ವಾರ್ತೆಯನ್ನು ಕೇಳಿ ವಾಲ್ಮೀಕಿಯು ಅತ್ಯಾತುರದಿಂದ ಹೊರಟು ಆಶ್ರಮದಬಾಗಿಲಿಗೆ ಬರಲು ಸೀತೆಯು ಸಂತೋಷದಿಂದ ನಲಿಯುತ್ತ ವಾಲ್ಮೀಕಿಗೆ ವಂದನೆಗಳನ್ನು ಸಮರ್ಪಿಸಲು, ಕುಶಲವರು ಕುಶಲಾಗಮನವನ್ನು ಬಯಸಿ ಋಷಿಗೆ ನಮಸ್ಕರಿಸಿದರು. ಬಳಿಕ ಧನುರ್ವೇದವೇಮೂರ್ತಿವೆತ್ತಂತೆ ಹೊಳೆಯುತ್ತಿರುವ ಮಕ್ಕಳನ್ನು ಮಣಿದು, ಮೇಲಕ್ಕೆತ್ತಿ ಮಕ್ಕಳಿರಾ ! ನೀವು ಶ್ರೀರಾಮನ ಸೇನೆಯೊಡನೆ, ಯುದ್ಧಮಾಡುವುದಕ್ಕೆ ಕಾರಣವೇನು ? ಯುದ್ಧದಲ್ಲಿ ಹೊಡೆದಾಡಿ ಬಿಟ್ಟುಹೋ

ದವರು ಯಾರು ? ನಿಮ್ಮ ಮೈಯಲ್ಲಿ ಹಗೆಗಳ ಬಾಣಘಾತವೆಲ್ಲಿಯೂ ಕಾಣಿಸ ದಲ್ಲಾ ! ನಿಮಗೆ ಹೇಗೆ ಇಂತಹ ಶೌರ್ಯವು ಉಂಟಾಯಿತು ಎಂದು ಕೇಳಲು ಕುಶನು ಎಲೈ ಗುರುವೆ ! ನಿಮ್ಮ ಕರುಣದಿಂದ ನಮಗೆ ಸದಾ ಶುಭವೇ ಆಗ್ಗು ವುದು. ಇದೇನು ಹೀಗೆ ಕೇಳುವಿರಿ. ನಿಮ್ಮ ಉಪದೇಶಬಲದಿಂದ ಶತ್ರುಗ ಳನ್ನು ಗೆದ್ದು ವಿಜಯರಾದೆವು. ಶಾಂತವಾದ ನಿಮ್ಮ ಈ ಆಶ್ರಮದಲ್ಲಿ ಭೂತ ಹಿಂಸೆಯಾಯಿತು. ಹೇಳಿ ಫಲವೇನು ? ನಮ್ಮಾಶ್ರಮಕ್ಕೆಬಂದ ಒಂದಾನೊಂದು ಕುದುರೆಯನ್ನು ಈ ಲವನು ಕಟ್ಟಿದನು. ಆಬಳಿಕ ಶತ್ರುಸೇನೆಯು ಸುತ್ತು ಗಟ್ಟಿತು ಬಳಿಕ ನಾನು ಶತ್ರುಘ್ನನೊಡನೆ ಕಾದಾಡಿದೆನು. ಆಮೇಲೆ ಭರತ ಲಕ್ಷ್ಮಣ ರಾಮಾದಿಗಳು ನಡೆತಂದರು. ಇನ್ನು ಹೇಳುವುದೇನು ? ಯುದ್ಧಕ್ಕೆ ಬಂದವರೆಲ್ಲರನ್ನುಗೆದ್ದು ಸೇನೆಯಲ್ಲೊಂದು ನೊಣವನ್ನು ಬಿಡದಂತೆ ಕೊಂದು ಹಾಕಿದೆವು ಎಂದು ಹೇಳಿದರು. ಅದನ್ನುಕೇಳಿ ಆನಂದದಿಂದ ಉಬ್ಬಿ ವಾಲ್ಮೀ ಕಿಯು ಆಹಾ ! ತಪ್ಪಾಯಿತು. ತಪ್ಪಾಯಿತು. ಎಂದು ಹಲುಬಿತ್ತಿರುವ ಸೀತೆಯನ್ನು ಸಮಾಧಾನಮಾಡಿ ಋಷಿಕುಮಾರಕರೊಡನೆ ಯುದ್ಧಭೂಮಿಗೆ ಬಂದು ರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟುವಾಗ ಬೆಟ್ಟಗಳನ್ನೆಲ್ಲ ಕಿತ್ತುತರಿಸಿ, ಲೋಕಕ್ಕೆ ಆಧಾರವಿಲ್ಲದಂತೆ ಮಾಡಿದನು.

### ಮಕ್ಕಳಿಂದ ಮೂರ್ಛಿತನಾದ ರಾಮನು ವಾಲ್ಮೀಕಿಯಿಂದ ಎಚ್ಚರಗೊಂಡು ಅಯೋಧ್ಯೆಯನ್ನು ಸೇರಿ ಯಜ್ಞವನ್ನು ಪೂರೈಸುವಿಕೆ.

ಎಂಬ ದೂರನ್ನು ತಪ್ಪಿಸಬೇಕೆಂದು ಕುಶಲವರು ಬೆಟ್ಟಗಳನ್ನು ಭೂಮಿ ಯಮೇಲೆ ಹರಡಿದರೋ ಎನ್ನುವಂತೆ ಆಯುಧಗಳು, ಆನೆ, ಕುದುರೆ, ಅಳಿದು ಬಿದ್ದ ವೀರರು, ಅಂಗಹೀನರಾಗಿ ಅಸುದೊರೆದ ಯೋಧರೇ ಮೊದಲಾದವರ ಮೆದೆಗಳು ಪರ್ವತಪ್ರಾಯವಾಗಿ ಬಿದ್ದಿದ್ದವು. ಅದನ್ನು ಕಂಡು ಆಶ್ಚರ್ಯಪಟ್ಟು ವಾಲ್ಮೀಕಿ ಮುಂದೆ ಹೊರಟು ಮೊದಲು ಇಂದ್ರಜಿತುವಿನ ಸರ್ಪಾಸ್ತ್ರದಿಂದ ಮೂರ್ಛೆಹೋಗಿ ಸಕಲಸೇನಾಸಮೇತನಾಗಿ ನಸುಮುಚ್ಚಿದ ಕಣ್ಣುಗಳೂ ಸಂಜೆ ಯತಾವರೆಯಂತಿರುವ ಮುಖವೂ, ಕಾಂತಿಗುಂದಿದ ಅವಯವಗಳೂ, ಕೈಯಿಂದ ಜಾರಿ ಕೆಳಕ್ಕೆಬಿದ್ದ ಧನುರ್ಬಾಣಗಳೂ, ಬಾಣಹತಿಯಿಂದಾದ ಗಾಯಗಳಿಂದ ಸುರಿಯುತ್ತಿರುವ ರಕ್ತವೂ ರಕ್ತಧಾರೆಯಿಂದ ನೆನೆದುಹೋದ ದೇಹವೂ ಉಳ್ಳ ರಾಮನನ್ನು ಕಂಡು ಆಶ್ಚರ್ಯವನ್ನು ಹೊಂದಿದನು. ಬಳಿಕ ತನ್ನಕೈಲಿದ್ದ ಕಮಂಡಲೋದಕವನ್ನು ಪ್ರೋಕ್ಷಿಸಲು, ಶೇಷಶಾಯಿಯಾಗಿ ಕ್ಷೀರಸಮುದ್ರದಲ್ಲಿ ಮಲಗಿರುವ ಮಹಾವಿಷ್ಣುವು ಎಚ್ಚತ್ತು ಏಳುವಂತೆ ಶ್ರೀರಾಮನು ಎದ್ದು ವಾಲ್ಮೀಕಿಗೆ ನಮಸ್ಕಾರಮಾಡಿದನು. ಆಗ ಆ ಋಷಿವರ್ಯನು ಭಕ್ತವತ್ಸಲ !

ಜಗನ್ನಾಥ ! ಸರ್ವಕಾರಣ ! ಶಾಂತಮೂರ್ತಿ ! ಕೃಪಾನಿಧಿ ! ನಿಷ್ಕಾಮವ್ರತ ! ರಘುರಾಮಾ ! ಲೋಕಾಭಿರಾಮಾ ! ಚಿತ್ತಾವಧಾನ ಚಿತ್ತಾವಧಾನ ಎಂದು ಹೊಗಳಿದನು. ಕೂಡಲೆ ರಾಮನ ಸಿರಿಮುಡಿಯಮೇಲೆ ದೇವತೆಗಳು ಹೂವಿನಮಳೆಯನ್ನು ಸುರಿಸಿದರು ದೇವದುಂದುಭಿಗಳು ಮೊಳಗಿದವು. ವಾಲ್ಮೀಕಿಯು ಮಂತ್ರಬಲದಿಂದ ಭರತ ಲಕ್ಷ್ಮಣ ಶತ್ರುಘ್ನಾದಿಗಳು ಜೀವಿಸಿದರು. ದೇವತೆಗಳು ಅಮೃತಬಿಂದುಗಳನ್ನು ಸೋಕಿಸಲು ಸತ್ತುಬಿದ್ದಿದ್ದವರೆಲ್ಲರೂಮತ್ತೆ ಬದುಕಿಕೊಂಡು ಉತ್ತಮವಾದ ತೇಜಸ್ಸಿನಿಂದ ಹೊಳೆದರು.

ಬಳಿಕ ವಾಲ್ಮೀಕಿಯು ಧ್ಯಾನಮುಖದಿಂದ ಕಾಮಧೇನುವನ್ನು ಬರಿಸಿ ಬೇಕಾದ ವಸ್ತುಗಳನ್ನು ಸಂಗ್ರಹಿಸಿ ಶ್ರೀರಾಮನಿಗೆ ಕ್ಷೀರಾಭಿಷೇಕವಗೆಯ್ಸಿ, ಸಂಭ್ರಮದಿಂದ ಕೊಂಡಾಡಿ, ಸಂತೋಷಚಿತ್ತನಾಗಿ, ಭರತಾದಿಗಳೊಡನೆ ಕುಳಿತುಕೊಂಡಿರುವ ಶ್ರೀರಾಮನನ್ನು ಪೂಜಿಸಿ ದಿವ್ಯವಾದ ಸ್ತೋತ್ರಂಗಳಿಂದ ಹೊಗಳಿ ಕುಶಲವರನ್ನು ಕರೆದು ಪಾದಮೂಲದಲ್ಲಿ ಕೆಡಹಿ, ಎಲೈ ರಾಜೇಂದ್ರನೇ ! ಕೋಪಮಾಡಬೇಡ ! ನಿನ್ನನ್ನು ಕರುಣಾಮೂರ್ತಿಯೆಂದು ಮರೆಹೊಕ್ಕವರನ್ನು ಕಾಯುವ ಧೀರನೆಂದು ವೇದಶಾಸ್ತ್ರಗಳು ಮೊರೆಯಿಡುತ್ತಿರುವವು. ಈಮಕ್ಕಳು ನಿನ್ನ ತನುಜಾತರು. ಸೀತೆಯು ಗರ್ಭದಲ್ಲಿ ಹುಟ್ಟಿದವರು. ಬಾಲಭಾವದಿಂದ ರೀತಿನೀತಿಗಳನ್ನು ನೋಡದೆ ನಡೆದುಕೊಂಡರು ನಾನು ಆಶ್ರಮದಲ್ಲಿರಲಿಲ್ಲ, ವರುಣನು ತಾನು ಮಾಡುವ ಯಜ್ಞಕ್ಕೆ ಬರಬೇಕೆಂದು ಕರೆಸಿದನಾದುದರಿಂದ ಪರ್ಜನ್ಯಲೋಕಕ್ಕೆ ಹೋಗಿದ್ದೆನು. ಹೀಗಾಗುವ ಕಾರ್ಯಕಾರಣಗಳನ್ನು ನಾನು ತಿಳಿದಿರಲಿಲ್ಲ. ಆದಕಾರಣ ಅಪರಾಧವನ್ನು ಮನ್ನಿಸಿ ಕಾಪಾಡಬೇಕು ! ಹುಟ್ಟಿದಮಗನು ವಿನೀತನಾದರೂ, ಧೂರ್ತನಾಗಿದ್ದರೂ, ತಂದೆಯಾದವನಿಗೆ ಎಂದಿಗೂ ವ್ಯಸನವುಂಟಾಗುವುದಿಲ್ಲ. ಆದಕಾರಣ ಈ ಮಕ್ಕಳನ್ನು ಆದರಿಸಿ, ಇವರ ಅಪರಾಧವನ್ನು ಕ್ಷಮಿಸಿ ರಕ್ಷಿಸಬೇಕು ಎಂದು ಹೇಳಿದನು.

ಬಳಿಕ ಶ್ರೀರಾಮನು ಲಕ್ಷ್ಮಣನ ಮುಖವನ್ನು ನೋಡಿ ಅಯ್ಯಾ ! ಸೀತಾದೇವಿಯು ಈ ಮಕ್ಕಳನ್ನು ಹೇಗೆ ಹಡೆದಳು ಬಲ್ಲೆಯಾ ಎಂದು ಕೇಳಲು ಸ್ವಾಮೀ ! ತಮ್ಮ ಆಜ್ಞಾನುಸಾರವಾಗಿ ಗಂಗಾತಟದ ಅರಣ್ಯದಲ್ಲಿ ಜಾನಕಿಯನ್ನು ನಾನು ಬಿಟ್ಟುಬಂದೆನೇಹೊರತು ಅಲ್ಲಿಂದ ಮುಂದಾದುದನ್ನು ಕಾಣೆ ಎಂದು ಹೇಳಿದನು. ಬಳಿಕ ವಾಲ್ಮೀಕಿಯು ತಾನು ಸೀತೆಯು ಏಕಾಕಿನಿಯಾಗಿ ನರಳುವುದನ್ನು ಕಂಡುದು ಮೊದಲು ಅವಳು ಯಮಳರನ್ನು ಹಡೆದು ಆ ಮಕ್ಕಳು ಈವರೆಗೂ ಅಭಿವೃದ್ಧರಾಗಿ ಬೆಳೆದು ತನ್ನಮೂಲಕ ಸಕಲ ವಿದ್ಯೆಗಳನ್ನು ಕಲಿತು, ಶೂರರಾಗಿ ತಂದೆಯಾದ ರಾಮನನ್ನು ಗೆದ್ದು, ರಾಮಾಯಣದ ಮಹಿಮೆಯನ್ನು ತಿಳಿದು ವಾಲ್ಮೀಕಿಯ ಅಪ್ಪಣೆಯಂತೆ ಶ್ರೀರಾಮನಿಗೆ ನಮಸ್ಕ

ರಿಸಿದವರಿಗೂ ನಡೆದ ಕಥೆಯನ್ನು ರಾಮಚಂದ್ರನಿಗೆ ಹೇಳಿದನು. ಕೂಡಲೆ ವಾಲ್ಮೀಕಿಯ ಅಪ್ಪಣೆಯಂತೆ ವಟಗಳು ಋಷಿಪುತ್ರರ ಆಶ್ರಮಕ್ಕೆ ಹೋಗಿ ವೀಣೆಯನ್ನು ತಂದಿತ್ತರು. ಅದನ್ನು ಹಿಡಿದು ಕುಶಲವರಿಬ್ಬರೂ ಎರಡನೆಯ ತುಂಬುರನಾರದರಂತೆ ತಾವು ವಾಲ್ಮೀಕಿಮಹರ್ಷಿಯಲ್ಲಿ ಅಭ್ಯಾಸಮಾಡಿದ ರಾಮಾಯಣವನ್ನು ಸಾವೇರಿ, ಗುಜ್ಜರ, ಗೌಳ, ಪಳಮಂಜರಿ, ಭೈರವಿಗಳೆಂಬ ಶುದ್ಧ ಮತ್ತು ಸಂಕೀರ್ಣ ರಾಗಂಗಳಿಂದ ಸ್ಥಾಯಿ, ಸಂಚಾಲನ, ಆರೋಹಣಾವರೋಹಣ ಲಾಲಿತ್ಯಗತಿಗಳನ್ನನುಸರಿಸಿ ಕಿವಿಗಿಂಪಾಗುವಂತೆ, ಗಾನರಸ ಪ್ರವಾಹವು ಮುಂಬರಿವಂತೆ, ಕೇಳ್ವವರಿಗೆ ಬ್ರಹ್ಮಾನಂದವು ಕೈಗೂಡುವಂತೆ ಮೊದಲಿಂದ ಕಡೆಯವರಿಗೂ ಹಾಡಿದರು. ಅದನ್ನು ಕೇಳಿ ಆನಂದತುಂದಿಲಸ್ವಾಂತನಾಗಿ ಶ್ರೀರಾಮನು ನಸುನಗೆಯಿಂದ ಬಾಲಕರನ್ನು ಕಂಡು ಕೊಂಡಾಡುತ್ತ ಸೌಮಿತ್ರಿಯನ್ನು ಕುರಿತು ಎಲೈ ಲಕ್ಷ್ಮಣ! ಈಮಕ್ಕಳನ್ನುನೋಡು, ಇವರು ಪೂರ್ಣಾನುರಾಗವನ್ನುಂಟುಮಾಡುವ ರೂಪಿದಿಂದಲೂ, ಲಲಿತವಾದ ಕಂಠಸ್ವರದಿಂದಲೂ ಥಳಥಳಿಸುತ್ತಿರುವ ಲಾವಣ್ಯಯುಕ್ತವಾದ ಮುಖಭಾವದಿಂದಲೂ, ಅಂಗಗಳ ಸೌಂದರ್ಯದಿಂದಲೂ, ನಡೆನುಡಿ ಬೆಡಗುಗಳಿಂದಲೂ ಸೀತೆಯನ್ನು ನೆನೆಯುವಂತೆ ಮಾಡುತ್ತಿರುವರು. ಸೀತೆಯನ್ನು ತೊರೆದುಬಿಟ್ಟ ವಿರಹಾಗ್ನಿಯೆಂಬ ಬೆಂಕಿಯು, ಈಮಕ್ಕಳ ಮುಖಸಂದರ್ಶನದಿಂದ ಆದ ಆನಂದಾಶ್ರುಗಳಿಂದ ನಂದಿಹೋಯಿತು. ಆಹಾ ! ನನ್ನ ಮಕ್ಕಳಲ್ಲದ ಅನ್ಯರು ನನ್ನಬಾಣಗಳನ್ನು ವ್ಯರ್ಥಮಾಡಬಲ್ಲರೆ ? ಹೇಳು ಎಂದು ಕೇಳಿದನು.

ಎಲೈ ದೇವನೆ ! ನನ್ನ ವಿಜ್ಞಾಪನೆಯನ್ನು ಲಾಲಿಸು. ನಿನ್ನ ಬಾಣಗಳೆಂದಿಗೂ ಅನ್ಯರಿಂದ ತಡೆಗೆಡೆದು ಬೀಳಲಾರವು ? ಇವರು ನಿನ್ನ ಮಕ್ಕಳಾದ ಕಾರಣ ನಿನ್ನ ಶಕ್ತಿಯು ಇವರಲ್ಲಿ ಅಡಗಿಕೊಂಡಿತು. ಈ ಪುತ್ರರನ್ನು ಪರಿಗ್ರಹಿಸಿ ಆದರಿಸು ಎಂದು ಲಕ್ಷ್ಮಣನು ಹೇಳಲು ರಾಮನು ವಾಲ್ಮೀಕಿಯನ್ನು ಕೊಂಡಾಡಿ, ಅಕ್ಕರೆಯಿಂದ ಆ ಮಕ್ಕಳನ್ನು ತನ್ನಬಳಿಗೆ ಕರೆದು, ಎಲೈ ಮಕ್ಕಳಿರಾ ! ನೀವು ಯಾರಕುವರರು, ನಿಮಗೆ ಇಷ್ಟು ಧೈರ್ಯಶೌರ್ಯಗಳು ಹೇಗೆ ಬಂದುವು ಎಂದು ಕೇಳಿದನು. ಕೂಡಲೆ ಆ ಕುಶಲವರು ರಾಮನಡಿಗೆರಗಿ, ಸ್ವಾಮಿಾ ! ನಾವು ಸೀತಾದೇವಿಯ ಮಕ್ಕಳು, ವಾಲ್ಮೀಕಿ ಮಹರ್ಷಿಯ ಪೋಷಣೆಯಲ್ಲಿ ಬೆಳೆದೆವು ಆತನುಪದೇಶಿಸಿದ ಮಂತ್ರತಂತ್ರ ವಿದ್ಯಾಬಲದಿಂದ ನಮಗಿಂತಹ ಶೌರ್ಯ ಉಂಟಾಯಿತು. ಬಾಲಭಾವದಿಂದ ಅರಿಯದವರಾಗಿ ನಿಮ್ಮ ಪಾದಗಳಿಗೆ ದ್ರೋಹ ಮಾಡಿದೆವು. ನಮ್ಮ ಅಪರಾಧವನ್ನು ಮನ್ನಿಸಿ ರಕ್ಷಿಸಬೇಕೆಂದು ನಮಸ್ಕರಿಸಿದರು. ಬಳಿಕ ಶ್ರೀರಾಮನು ಸಂತೋಷವಿಮ್ಮಡಿಯಾಗೆ ಆ ಮಕ್ಕಳನ್ನು ಮಾಜಿದೆತ್ತಿ, ಬಿಗಿಯಪ್ಪಿ ಮುದ್ದಿಸಿ, ಪುತ್ರವಾತ್ಸಲ್ಯದಿಂದ ಮುಖವನ್ನು ಚುಂಬಿಸಿ ಮುತ್ತಿಟ್ಟು

ನೆತ್ತಿಯನ್ನುವಾಸನಿಸಿ, ಆನಂದಬಾಷ್ಪಗಳಿಂದ ಅವರನ್ನು ಸ್ನಾನಮಾಡಿಸಿ, ವಾಲ್ಮೀಕಿಯನ್ನು ಕೊಂಡಾಡುತ್ತ, ತಮ್ಮಂದಿರೊಡಗೂಡಿ, ಆನಂದಸಾಗರದಲ್ಲಿ ಮುಳುಗಿ ಮಗ್ನನಾದನು ಆ ಮಕ್ಕಳನ್ನು ಕಂಡು ಸೇನಾಜನರ ಸಂತೋಷವು ಅಧಿಕವಾಯಿತು. ಮಂಗಳವಾದ್ಯಗಳು ಭೋರ್ಗರೆದವು. ಆಬಳಿಕ ಶ್ರೀರಾಮನು ವಾಲ್ಮೀಕಿಗೆ ನಮಸ್ಕರಿಸಿ ಎಲೈ ಶಾಂತಮೂರ್ತಿಯೆ! ಲೋಕವಿಖ್ಯಾತಳಾದ ಸೀತೆ ಪರಿಶುದ್ಧೆಯೆಂಬುದನ್ನು ಬಲ್ಲವನಾದರೂ ಲೋಕಾಪವಾದಕ್ಕಾಗಿ ಅವಳನ್ನು ತೊರೆದುಬಿಟ್ಟೆನು. ಹೇಗಾದರೂ ಅವಳು ನಿನ್ನ ದಯದಿಂದ ಪುತ್ರ



ಶ್ರೀರಾಮನು ಸೀತೆಯೊಡನೆ ಕೂಡಿ ಯಜ್ಞ ಮಾಡಿದುದು.

ವತಿಯಾದಳು. ಆದಕಾರಣ ಇನ್ನು ತಡಮಾಡದೆ ಸೀತೆಯನ್ನು ನನ್ನ ಬಳಿಗೆ ಕಳುಹಿಸು ಎಂದು ಹೇಳಿ ಅಣ್ಣತಮ್ಮಂದಿರೊಡಗೂಡಿ ಕುಶಲವರನ್ನು ರಥದಲ್ಲಿ

ಕುಳ್ಳಿರಿಸಿಕೊಂಡು ಅಯೋಧ್ಯೆಗೆ ಬಂದು ಅರ್ಧಾಂತ್ಯವಾಗಿದ್ದ ಯಜ್ಞವನ್ನು ಪೂರ್ತಿಮಾಡಿ, ಮೂರುಲೋಕಗಳೂ ದಣಿದು ಹೊಗಳುವಂತೆ ವಿಜೃಂಭಣೆಯಿಂದ ಸಕಲರನ್ನು ತೃಪ್ತಿಗೊಳಿಸಿ ಅಶ್ವಮೇಧವನ್ನು ಪೂರೈಸಿದನು.

ಇತ್ತ ವಾಲ್ಮೀಕಿಯು ಒಬ್ಬನೇ ಆಶ್ರಮಕ್ಕೆ ಬರುತ್ತಿರುವುದನ್ನು ಕಂಡು ಸೀತೆ ಮನದಲ್ಲಿ ಕೊರಗುತ್ತ ಹಾ ! ನನ್ನ ಮಕ್ಕಳೇನಾದರು, ಎಲ್ಲಿಗೆ ಹೋದರು, ಬದುಕಿರುವರೋ ಇಲ್ಲವೋ ಕಾಣೆನಲ್ಲಾ ಎಲೈ ತಂದೆಯೇ ! ಆ ಮಕ್ಕಳ ಮುಖವನ್ನು ನೋಡಿಕೊಂಡು ಪತಿವಿರಹವನ್ನು ಸೈರಿಸಿಕೊಂಡಿದ್ದೆನಲ್ಲಾ ! ಅಂತವರನ್ನು ಯಾರಿಗೆ ಕೊಟ್ಟುಬಂದೆ ಹೇಳು ಎಂದು ಭೂಮಿಯಲ್ಲಿ ಬಿದ್ದು ಅತ್ತಳು. ಆಗ ವಾಲ್ಮೀಕಿ ಸೀತೆಯನ್ನು ಸಮಾಧಾನಮಾಡಿ, ಅಮ್ಮಾ ! ನಿನ್ನ ಮಕ್ಕಳನ್ನು ಅವರ ತಂದೆಯು ಕರೆದುಕೊಂಡು ಹೋದನು. ನೀನು ಚಿಂತಿಸಬೇಡ ನಿನ್ನನ್ನು ಗಂಡನಬಳಿಗೆ ಕಳುಹಿಸಿಬರುವೆನು ನಡೆ ಎಂದು ನಯವಾದ ಮಾತುಗಳಿಂದವಳನ್ನು ಒಡಂಬಡಿಸಿ, ರಥದಲ್ಲಿ ಕುಳ್ಳಿರಿಸಿಕೊಂಡು ಅಯೋಧ್ಯೆಗೆ ಬಂದು, ಶ್ರೀರಾಮನನ್ನು ಕಾಣಿಸಿಕೊಂಡು ಸೀತೆಯನ್ನೊಪ್ಪಿಸಿದನು. ಆಬಳಿಕ ಶ್ರೀರಾಮನು ಪತ್ನೀಪುತ್ರರಿಂದೊಡಗೂಡಿ ಸುಖದಿಂದ ರಾಜ್ಯವಾಳಿದನು.

ಎಲೈ ಜನಮೇಜಯರಾಯನೇ ! ಶ್ರೀರಾಮನಿಗೂ ಅವನ ಮಕ್ಕಳಾದ ಕುಶಲವರಿಗೂ ನಡೆದ ಕಾಳಗವನ್ನು ಕೇಳಿದೆಯಾ ? ಪುಣ್ಯಕರವಾದ ಈ ಕಥೆಯು ಬಹು ರಮ್ಯವಾಗಿರುವುದಲ್ಲದೆ ಮೂರುಲೋಕಗಳಲ್ಲಿಯೂ ಇದನ್ನು ಕೇಳಿದವರಿಗೆ ಆಯುರಾರೋಗ್ಯ ಐಶ್ವರ್ಯ ಸುಖಸಂತೋಷಗಳು ಹೆಚ್ಚಿ ಸತ್ಸಂತಾನಸುಖ ಸತ್ಕೀರ್ತಿ ಸದ್ಗತಿಗಳುಂಟಾಗುವುವು. ನೀನು ಕೇಳಿದಕಾರಣ ನಾನು ಕಥೆಯನ್ನು ಹೇಳಿಡೆನು. ಇದನ್ನು ಕೇಳಿದಮೇಲೆ ಮತ್ತೊಂದು ಕಾಳಗವು ಇದಕ್ಕೆ ಸಮವಾಗಲಾರದು. ಇನ್ನು ಮುಂದೆ ಬಭ್ರುವಾಹನ ಅರ್ಜುನರ ಕಾಳಗವನ್ನು ವಿಸ್ತರಿಸಿ ಹೇಳುವೆನು ಕೇಳು ಎಂಬದಾಗಿ ತನ್ನ ಚಿತ್ತದಲ್ಲಿ ದೇವಪುರನಿಲಯ ಲಕ್ಷ್ಮೀರಮಣನನ್ನು ಧ್ಯಾನಿಸುತ್ತ ಜನಮೇಜಯನನ್ನು ಎಚ್ಚರಿಸಿದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿನಾಗಶರ್ಮಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಇಪ್ಪತ್ತೊಂದನೆಯಸಂಧಿ ಸಂಪೂರ್ಣಂ. ಮಂಗಳಮಸ್ತು.

# ಇಪ್ಪತ್ತೆರಡನೆಯ ಸಂಧಿ.

## ಬಭ್ರುವಾಹನ ಪ್ರದ್ಯುಮ್ನರ ಯುದ್ಧ.

ಎಲೈ ಜನಮೇಜಯರಾಯನೇ ಕೇಳು. ಅರ್ಜುನನು ತನ್ನನ್ನು ಬೈದು ನೂಕಿದಮೇಲೆ ಬಭ್ರುವಾಹನನು ಕಾಣಿಕೆಗಾಗಿ ತಂದಿದ್ದ ವಸ್ತುಗಳನ್ನು ತೆಗಸಿಕೊಂಡು, ತನ್ನ ರಾಜಧಾನಿಯಾದ ಮಣಿಪುರಕ್ಕೆ ಬಂದು, ಯುದ್ಧಸನ್ನದ್ಧನಾಗಿ ಸೇನೆಯನ್ನು ಸಜ್ಜುಗೊಳಿಸಿದನು. ಭೂಮಂಡಲವು ಚತುರ್ಬಲದಿಂದ ತುಂಬಿಹೋಯಿತು ಸಿಂಧಸೀಗುರಿ ಪತಾಕೆಗಳಿಂದ ನಭೋಮಂಡಲವು ಮುಚ್ಚಿಹೋಯಿತು ಪದಾತಿಗಳ ಧೂಳಿನಿಂದ ಸೂರ್ಯಮಂಡಲವು ಮರೆಯಾಯಿತು. ಹೀಗೆ ಹೆಣ್ಣಿಕೊಂಡಿರುವ ಚತುರಂಗಬಲದಲ್ಲಿ ಅರ್ಬುದ ಆನೆಗಳೂ, ಹತ್ತುಕೋಟಿ ರಥಗಳೂ, ಎರಡರ್ಬುದ ಕುದುರೆಗಳೂ, ಮೂರು ಅರ್ಬುದ ಕಾಲಾಳುಗಳೂ ಸಂಧಿಸಿರಲು, ಯುದ್ಧದಲ್ಲಿ ಸಮರ್ಥರಾದ ಸುಬುದ್ಧಿ ಮೊದಲಾದ ವೀರರು ಒಟ್ಟಾಗಿಸೇರಿ ಬ್ರಹ್ಮಸೃಷ್ಟಿಯಲ್ಲಿ ಕಾಣಿಸದಿರುವ ವಿಚಿತ್ರವಾದ ಸೇನಾಜಾಲದಂತೆ ಕಂಗೊಳಿಸುತ್ತಿದ್ದಿತು. ಬಳಿಕ ಚಿತ್ರಚಮತ್ಕಾರಗಳಿಂದಲಂಕೃತವಾದ ಪೊಂದೇರನ್ನು ಹತ್ತಿ ಚಿತ್ರಾಂಗದೆಯ ಮಗನಾದ ಬಭ್ರುವಾಹನನು ಯುದ್ಧಾಂಗಣಕ್ಕೆ ನಡೆತಂದನು. ಎರಡು ಕಡೆಯ ಸೈನಿಕರೂ ಉರವಣೆಯಿಂದ ಕೈಮಾಡಿದರು. ಬಳಿಕ ಸೂರ್ಯಮಂಡಲವನ್ನು ಭೇದಿಸಿಕೊಂಡು ಸಂಚರಿಸುವ ಸೇನಾವ್ಯೂಹವು ಹಗೆಗಳ ಪಡೆಯಮೇಲೆ ಬಿದ್ದಿತು. ಆಗ ಯುದ್ಧರಂಗವು ತೇರಗಾಲಿಗಳ ಗರ್ಗರಧ್ವನಿಯಿಂದಲೂ, ಆನೆಗಳ ಕೊರಲಗಂಟೆಗಳ ಗಣಗಣಶಬ್ದದಿಂದಲೂ, ಕುದುರೆಗಳ ಹೂಂಕಾರದಿಂದಲೂ, ಕಾಲ್ನಡೆಯಿಂದ ಸಂಚರಿಸುವ ಸೇನೆಗಳ ಕಾಲ್ದನಿಯಿಂದಲೂ, ರಣಭೇರಿ ಮೊದಲಾದ ವಾದ್ಯಗಳ ಮಹಾ ಘೋಷದಿಂದಲೂ, ಕಹಳೆಗಳಿಂದೊಡಗೂಡಿದ ಧನುಷ್ಟಂಕಾರದಿಂದಲೂ, ವೀರಭಟರು ಅಪ್ಪಳಿಸಿಹೊಡೆಯುವ ಬಾಹುಧ್ವನಿಯಿಂದಲೂ, ರಥಿಕರು ಯುದ್ಧಾಭಿಮುಖರಾಗಿ ಊದುವ ಶಂಖಧ್ವನಿಯಿಂದಲೂ, ರಣರಂಗದ ಕಲಕಲನಿನಾದದಿಂದಲೂ, ಪಟಹ ಢಕ್ಕೆಗಳ ರವದಿಂದಲೂ ಕೂಡಿ ರಣಮಂಡಲವನ್ನು ಕಿವುಡಾಗಿ ಮಾಡಿತು.

ಬಳಿಕ ಉಭಯಸೇನೆಯ ವೀರರೂ ಚೂಣಿಯನ್ನು ಹೊಕ್ಕು ಜಾಣತನದಿಂದ ಒಬ್ಬರನ್ನೊಬ್ಬರು ಹೊರಸಾರಿ ಬಾಣ, ಪರಶು, ಗದೆ, ಕುಂತ, ಶಕ್ತಿ ಭಿಂಡಿವಾಳ, ಕತ್ತಿ, ಗುರಾಣಿ, ಕಠಾರಿ, ಈಟಿ ಮೊದಲಾದ ಆಯುಧಗಳನ್ನು ಹಿಡಿದು, ನಾನಾಪ್ರಕಾರವಾದ ಹಸ್ತಲಾಘವವನ್ನು ತೋರಿಸುತ್ತ ಶೌರ್ಯದಿಂದ ಹೊಡೆದಾಡಿದರು. ಮಾವಟಿಗರು ಮದ್ದಾನೆಗಳ ಗುಂಪನ್ನು ವೈರಿಗಳಮೇಲೆ

ನುಗ್ಗಿಸಿದರು. ರಾವುತರು ಕುದುರೆಗಳನ್ನು ಕಟ್ಬಾಯದಿಂದ ಕೆಣಕಿ ಹಗೆಗಳ ಮೇಲೆ ಕೆಡಹಿದರು. ಪಟುಭಟರಾದ ರಥಿಕರು ತಮ್ಮ ತೇರಗಾಲಿಗಳ ನಾಟ್ಯಧ್ವನಿಯನ್ನು ಯುದ್ಧಭೂಮಿಗೆಲ್ಲ ಕೇಳುವಂತೆಮಾಡಿ ಗಂಡಾಳುಗಳ ತಂಡವನ್ನು ಬೀಳಿಸಿದರು. ಪದಾತಿಗಳು ಶತ್ರುಗಳ ಮೂಲಬಲವನ್ನು ಕೆಣಕಿ ಹೊಯ್ದಾಡಿ ತಮ್ಮ ಸ್ವಾಮಿಗೆ ಕೇಳಿಸುವಂತೆ ಹಗೆಗಳ ತಲೆಯನ್ನು ಚಂಡಾಡಿ ಆರ್ಭಟಧ್ವನಿಯನ್ನು ಹಬ್ಬಿಸಿದರು. ಮುಂಗಾರಸಿಡಿಲಂತೆ ಗರ್ಜಿಸುತ್ತಿರುವ ಧನುಷ್ಟಂಕಾರದಿಂದ ಮಿಂಚಿನಂತೆ ಹೊಳೆಯುತ್ತಿರುವ ರಥವನ್ನುಏರಿ ಬಭ್ರುವಾಹನನು ಬಾಣಗಳ ಮಳೆಯನ್ನು ಸುರಿಸುತ್ತ ಅರ್ಜುನನಸಬಳಿಗೆ ಬಂದು ನಿಂತು ತಂದೆಯೊಡನೆ ಪ್ರತಿಭಟಿಸಬಾರದೆಂದು ಭಕ್ತಿಯಿಂದ ಮಣಿದೆರಗಿ ಕಾಲುಹಿಡಿದು ಕೇಳಿಕೊಂಡರೆ ಜರಿದು ನೂಕಿದೆಯಲ್ಲಾ ! ಇನ್ನು ಯುದ್ಧದಲ್ಲಿ ನನ್ನ ಶೌರ್ಯವನ್ನು ನೋಡು ಕ್ಷಣಮಾತ್ರದಲ್ಲಿ ನಿನ್ನನ್ನು ಸೋಲಿಸಿ ನಿನ್ನ ಸೈನ್ಯವನ್ನು ಗೆಲ್ಲದಿದ್ದರೆ ನಾನು ನಿನ್ನ ಮಗನಲ್ಲ ! ಎಂದು ಹೇಳಿ ಪ್ರತಿಭಟಿಸಿ, ಅರ್ಜುನನನ್ನು ಬಾಣದಿಂದ ಹೊಡೆದನು. ಅದನ್ನು ಕಂಡು ಶೂರನಾದ ಅನುಸಾಲ್ವನು ಎಲಾ ನೀಚ ! ನೀನು ಮಾಡಿದ ಕೆಲಸ ಕ್ಷತ್ರಿಯರಿಗೆ ಧರ್ಮವಲ್ಲವೆಂದು ಹೇಳಿದರೆ ತಿಳಿದುಕೊಳ್ಳದೆ ಅಪಾರ್ಥಮಾಡಿಕೊಂಡು ವ್ಯರ್ಥವಾಗಿ ತಂದೆಯಮೇಲೆ ಪರಾಕ್ರಮವನ್ನು ತೋರುತ್ತಿರುವೆಯಲ್ಲ ! ನಿನ್ನಂತಹ ಧೂರ್ತರಾರು ? ಎಂದು ಕೂರಲಗುಗಳ ಕೋಟಲೆಯಿಂದ ಬಭ್ರುವಾಹನನನ್ನು ಹೊಡೆದನು. ಆಹಾ ! ಇದೇನು ಹುಸಿಪೆಟ್ಟುಗಳೊ ! ಹಸಿಯುಗರಿಗಳೊ ಇಲ್ಲದಿದ್ದರೆ ನಿನ್ನಬಲವೆ ಇಷ್ಟೋ ! ತಲೆಯೊಡನೆಕೂಡಿದ ಮುಂಡದಿಂದ ಯುದ್ಧಕ್ಕೆಬಂದುದು ಲೇಸಾಯ್ತು. ಅಹಹ ಆಶ್ಚರ್ಯ ! ಈ ಬಾಣಘಾತವನ್ನು ಸಹಿಸಿಕೊ ಎಂದು ಬಭ್ರುವಾಹನನು ನೂರು ಬಾಣಗಳನ್ನು ಹೊಡೆಯಲು ಅನುಸಾಲ್ವನು ಆ ಬಾಣಗಳನ್ನು ತಡಗಡಿದು ಬರಸಿಡಿಲಗಿಂತಲೂ ಇಮ್ಮಡಿಯಾದ ಬಾಣಗಳನ್ನು ಬಭ್ರುವಾಹನನಮೇಲೆ ಹೊಡೆದು ಕಣೆಗರೆದನು. ಧೈರ್ಯದಲ್ಲಿಯೂ, ಶೌರ್ಯದಲ್ಲಿಯೂ, ಬಾಣಪ್ರಯೋಗದಲ್ಲಿಯೂ, ಬಿಂಕದಲ್ಲಿಯೂ, ಕಾಯಪುಷ್ಟಿಯಲ್ಲಿಯೂ, ಪರಾಕ್ರಮದಲ್ಲಿಯೂ, ಪಂಥದಲ್ಲಿಯೂ, ಕೈಚಳಕದಲ್ಲಿಯೂ ಚಮತ್ಕಾರದಲ್ಲಿಯೂ, ಅಟ್ಟಹಾಸದ ಬಿರುದಿನಲ್ಲಿಯೂ, ಆಬಭ್ರುವಾಹನ ಅನುಸಾಲ್ವರಿಬ್ಬರೂ ಸಮಾನರಾಗಿ ಹೆಚ್ಚುಕಡಿಮೆಯಿಲ್ಲದೆ ಹೊಡೆದಾಡುತ್ತಿದ್ದರು. ಬಳಿಕ ಯುದ್ಧವು ಸಮವಾದುದನ್ನು ಕಂಡು ಅನುಸಾಲ್ವನು ರೋಷದಿಂದುಬ್ಬಿ, ಏಳುಬಾಣಗಳಿಂದ ಬತ್ತಳಿಕೆಯನ್ನೂ ಎಂಟು ಸಾಯಕಗಳಿಂದ ಬಿರುದಿನಟೆಕ್ಕೆಯವನ್ನೂ, ಹತ್ತಲಗುಗಳಿಂದ ಉತ್ತಮವಾದ ಧನಸ್ಸನ್ನೂ ಕಡಿದುಹಾಕಿ, ಸಾವಿರಬಾಣಗಳನ್ನು ಹೊಡೆದು ಕವಚವನ್ನುಹರಿದು ಸಾರಥಿ ರಥಾಶ್ವಗಳನ್ನು ಕೊಂದು ಕಾಲನರಮನೆಗೆ ಕಳುಹಿಸಿದನು. ಬಭ್ರುವಾ

ಹನನು ಕ್ಷಣಮಾತ್ರದಲ್ಲಿ ಮತ್ತೊಂದು ರಥವನ್ನೇರಿ ಶೌರ್ಯದಿಂದ ಯುದ್ಧಮಾಡುತ್ತ ಕೂರ್ಗಣೆಗಳನ್ನು ಹೊಡೆಯಲಾರಂಭಿಸಿದನು. ಆಹಾ ! ಬಭ್ರುವಾಹನನ ಸಾಮರ್ಥ್ಯವನ್ನು ಏನುಹೇಳಲಿ ! ಅತ್ಯಂತ ಪೌರುಷದಿಂದ ಕಾದುತಿದ್ದ ಅನುಸಾಲ್ವನು ನಿಮಿಷಮಾತ್ರದಲ್ಲಿ ವಿರಥನಾಗಿ, ಭೂಮಿಯಮೇಲೆ ನಿಂತು ಆಯುಧಹೀನನಾಗಿ ಬಹಳಹೊತ್ತು ಹೆಣಗಾಡಿ ಗದೆಯನ್ನು ಹಿಡಿದು ಯುದ್ಧಕ್ಕೆ ನಿಂತನು. ಆದರೂ ಅವನ ಸಾಮರ್ಥ್ಯವು ಬಿರುಗಾಳಿಗೊಡ್ಡಿದ ಹುಲ್ಲುಮೆದೆಯಂತೆ ಬಯಲಾಗಿ ಬಭ್ರುವಾಹನನ ಪೆಟ್ಟಿನಿಂದ ಕಂಗೆಟ್ಟು ಪ್ರದ್ಯುಮ್ನನು ಮೂರ್ಛೆಹೋಗಿ ಭೂಮಿಗೆ ಬಿದ್ದನು ಆದರೂ ಎಚ್ಚತ್ತು ಪ್ರದ್ಯುಮ್ನನು ಕೋಪದಿಂದ ಇದಿರಾಗಿ ಬಂದು ಎಲಾ ನಿಲ್ಲು ! ನಿಲ್ಲು ! ನೀನು ನನಗೆ ಮೈದುನನಾಗಬೇಕು ? ವ್ಯರ್ಥವಾಗಿ ಅರ್ಜುನನನ್ನು ಕಂಡು ರಾಜಕಾರ್ಯವನ್ನು ಹಾಳುಮಾಡಿದೆ ! ನಾನು ನಿನ್ನನ್ನು ನೋಯಿಸುವದಿಲ್ಲ ಸರಸವಾಡಿ ಹೊಡೆದಾಡೋಣ ಬಾ ! ಎಂದು ಬಭ್ರುವಾಹನನಮೇಲೆ ಬಾಣಗಳನ್ನು ಬಿಟ್ಟನು. ಅದನ್ನು ನೋಡಿ ಬಭ್ರುವಾಹನನು ಭಾವ ! ಸರಸಕ್ಕಾಗಿ ಮಾಡುವ ಯುದ್ಧವು ವಿರಸವಾಗದೆ ಇರದು ಏಕೆಂದರೆ ! ನಿನ್ನಲ್ಲಿ ರಸವಾದ ಬಾಣವೂ, ಸರಸವಾದಬಿಲ್ಲೂ, ಸುರಸವಾದ ಹದೆಯೂ, ರಸವತ್ತಾದ ನಳಿನಾಕ್ಷಿಯರ ಕುಡಿನೋಟದ ಬೆಡಗೂ ಇದೆ ಅವು ನನ್ನಲ್ಲಿಲ್ಲ ಎಂದು ಹತ್ತುಬಾಣಗಳನ್ನು ಹೊಡೆದು ಮನ್ಮಥನನ್ನು ನಿಜವಾಗಿಯೂ ಅನಂಗನನ್ನಾಗಿ ಮಾಡಿದನು. ಮುತ್ತಿದಬಾಣಗಳನ್ನು ಹತ್ತುನೂರಾಗೆ ಕಡಿದು ಕೋಪದಿಂದ ಕುದಿದು ಆಕಾಶವೆಲ್ಲಿದೆ ? ದಿಕ್ಕುಗಳೆಲ್ಲಿಗೆ ಹೋದವು ? ಸೂರ್ಯಚಂದ್ರರೆಲ್ಲಿ ? ದೇವಮಾನವ ದಾನವರಲ್ಲಿ ಯಾರಾದರೂ ಧೀರರು ತನ್ನೆದುರಿಗೆ ನಿಲ್ಲಬಲ್ಲರೆ ? ಎನ್ನುವಂತೆ ಮನ್ಮಥನು ಶರವರ್ಷವನ್ನು ಸುರಿಸಿದನು

ಬಳಿಕ ಅವರಿಬ್ಬರೂ ಪೌರುಷದಿಂದ ಹೊಡೆದಾಡಿ ಒಬ್ಬರನ್ನೊಬ್ಬರು ಗೆಲ್ಲಬೇಕೆಂದು ಕಾದಾಡುತಿದ್ದರು. ಬಭ್ರುವಾಹನನು ಶರವರ್ಷದಿಂದ ಪ್ರದ್ಯುಮ್ನನ ಸಾರಥಿಯನ್ನೂ ತೇರನ್ನೂ ಕುದುರೆಗಳನ್ನೂ ಕೈಬಿಲ್ಲನ್ನೂ ಮುರಿದು ಹಾಕಿ ಬೊಬ್ಬಿರಿದನು. ಪ್ರದ್ಯುಮ್ನನು ರೋಷದಿಂದ ಬಹಳವಾದ ನಿಡುಗೋಲ್ಗಳನ್ನು ಹೊಡೆದು ಬಭ್ರುವಾಹನನ ರಥವು ಅತ್ತಿತ್ತ ಅಲ್ಲಾಡದೆ ನಿಂತಕಡೆಯಲ್ಲಿಯೆ ನಿಲ್ಲುವಂತೆ ಮಾಡಿ, ಉಳಿದ ಸೈನ್ಯದಮೇಲೆ ಹಿಂಡುಗಣೆಗಳನ್ನು ಸುರಿಸಿ, ಎಲ್ಲರೂ ಕಣ್ಣೆಡುವಂತೆ ಮಾಡಿದನು. ಎಲೈ ಜನಮೇಜಯನೇ ! ಮೂರುಲೋಕಗಳನ್ನೂ ಪೀಡಿಸುವ ಮನ್ಮಥನಿಗೆ ಇದಿರಾರು ? ಹೀಗೆ ಬಭ್ರುವಾಹನ ಪ್ರದ್ಯುಮ್ನರು ಹೊಡೆದಾಡುತ್ತಿದ್ದ ರಣಭೂಮಿಯು ನೆಲಕ್ಕುರುಳಿದ ರಾವುತರ ತಲೆಗಳ, ಸತ್ತುಬಿದ್ದ ಕುದುರೆಗಳ, ಪ್ರಾಣವನ್ನು ಬಿಟ್ಟ ಯೋಧರಶಿರಸ್ಸುಗಳ ಅಸುದೊರೆದಾನೆಗಳ ಮೈಮೆದೆಗಳು ಭೂಮಿಯಲ್ಲಿ ಬಿದ್ದುಹೋದವು.

ತಲೆಗಡಿದುಹೋದ ಸಾರಥಿಗಳ ಮುಂಡರುಂಡಗಳು ರಣರಂಗದಲ್ಲಿ ಹೊರಳಾಡಿದುವು. ಕಡಿದುಹಾಕಿದ ಕೈಕಾಲುಗಳೂ ತಲೆಗಳೂ ಸುತ್ತಲೂ ಹರಿದಾಡಿ, ಶತ್ರುಮಂಡಲಿಗೆ ನುಗ್ಗಿ ರಭಸದಿಂದ ಪರಬಲವನ್ನು ಕೊಲ್ಲುತ್ತ ವಜ್ರಾಯುಧಕ್ಕೆ ಸಮಾನವಾಗಿದ್ದವು, ಆ ಯುದ್ಧಭೂಮಿಯು ಭೂಲೋಕದಂತೆ ನವಖಂಡಮಯವಾಗಿಯೂ, ಯಮನಪಟ್ಟಣದಂತೆ ಬಹುನರಕಪಾಲಮಯವೂ, ಸಮುದ್ರದ ಹಾಗೆ ಬಹುಜೀವನಭಂಗಮಯವೂ, ಸಂಸಾರಚಕ್ರದಹಾಗೆ ಪಾಪಭಂಗಮಯವಾಗಿಯೂ, ಕೈಲಾಸಪರ್ವತದಂತೆ ಶಿವಗಣವಿಲಾಸಮಾಗಿಯೂ ವಿಸ್ತಾರವಾದ ನೈಮಿಶಾರಣ್ಯದಂತೆ ಆವೃತ ವಿರಕ್ತಮಯವಾಗಿ ಹೊಳೆಯುತ್ತಿದ್ದಿತು. ಹೆಣದ ರಾಶಿಗಳೂ ಮೆದೆಯಂತೆ ಬಿದ್ದಿರುವ ಆನೆಕುದುರೆಗಳ ಗುಂಪುಗಳೂ, ಹಾರಾಡುತ್ತಿರುವ ರುಂಡಮುಂಡಗಳೆಂಬ ಕತ್ತಲೆಗಳೂ, ಕರುಳು, ಖಂಡ, ಮೆದುಳು, ಮಾಂಸ, ಮಜ್ಜೆ, ನರ, ಎಲುವು, ರಕ್ತ, ವಸೆ, ಮೊದಲಾದವುಗಳಿಂದ ನೆನೆದು ಭಯಂಕರವಾಗಿ, ಯಕ್ಷರಾಕ್ಷಸ ಭೂತಭೇತಾಳಗಣದಿಂದಕೂಡಿ ಘೋರವಾಗಿ ಕಾಣುತ್ತಿದ್ದಿತು. ಮನ್ಮಥನು ಮಹತ್ತಾದ ಶೌರ್ಯದಿಂದ ತನ್ನ ಬಲವನ್ನು ಕೊಲ್ಲುತ್ತಿರುವುದನ್ನು ಕಂಡು ಬಭ್ರುವಾಹನನು ಬಹಳವಾಗಿ ಕೋಪಿಸಿಗೊಂಡು ಬಾಣಗಳನ್ನು ಹೊಡೆದು ಪರಬಲದ ವೀರರನ್ನು ದಿಕ್ಕುದಿಕ್ಕಿಗೆ ಓಡಿಸುತ್ತಿರಲು ಅರ್ಜುನನ ಸೈನ್ಯದಲ್ಲಿ ರಣಧೀರರಾದ ಶೂರರು ಅಲೆದಾಡಿ ದಿಕ್ಕೆಟ್ಟು ಪಲಾಯನಗೈದರು. ರಕ್ತಪ್ರವಾಹವು ಉಕ್ಕಿಹರಿಯಿತು. ಬಳಿಕ ಬಭ್ರುವಾಹನನು ಉರವಣಿಸಿ ಬರುತ್ತಿರುವುದನ್ನು ಕಂಡು ಪ್ರದ್ಯುಮ್ನನು ಕೋಪದಿಂದ ಆತನ ಕೈಯ ಕೋದಂಡವನ್ನು ಖಂಡಿಸಿದನು. ಕೂಡಲೆ ಬಭ್ರುವಾಹನನು ಹೊಸದಾದ ಮತ್ತೊಂದು ಬಿಲ್ಲನ್ನು ಹಿಡಿದು ಯುದ್ಧಮಾಡುತ್ತ ಮನ್ಮಥನ ಕೋದಂಡವನ್ನೂ, ಬತ್ತಳಿಕೆಯನ್ನೂ, ಬಿನುದಿನ ಟೆಕ್ಕೆಯವನ್ನೂ, ಸಾರಥಿಯನ್ನೂ ಹೊಡೆದುರುಳಿಸಿ ರಥವನ್ನು ಚೂರುಚೂರಾಗಿ ಮಾಡಿ ಕುದುರೆಗಳನ್ನು ಯಮನರಮನೆಯ ಮುಂಬಾಲಿಗೆ ತೋರಣವಾಗಿ ಮಾಡಿದನು. ಮನ್ಮಥನು ಮತ್ತೊಂದು ರಥವನ್ನೇರಿ ಬಿಲ್ಲು ಹಿಡಿದು ಖತಿಯಿಂದ ಯುದ್ಧಮಾಡುತ್ತಿರಲು ಬಭ್ರುವಾಹನನು ಆ ಬಿಲ್ಲನ್ನೂ ಖಂಡಖಂಡವಾಗಿ ಪುಡಿಪುಡಿ ಮಾಡಿದನು. ಬಳಿಕ ಹಗೆಯ ಪರಾಕ್ರಮವನ್ನು ಕುಂದಿಸಬೇಕೆಂದು ಮನ್ಮಥನು ಮತ್ತೊಂದು ರಥವನ್ನು ಹತ್ತಿ ಹತ್ತುಪಾಲಿನಷ್ಟು ಹೆಚ್ಚಾದ ಪೌರುಷದಿಂದ ಹೊಡೆದಾಡಿ ಬಭ್ರುವಾಹನನ ಬಿಲ್ಲು, ಬಾಣ, ಸಾರಥಿ, ಧ್ವಜಾಶ್ವಗಳನ್ನು ಕಡಿದುಹಾಕಿ ಕ್ಷಣಮಾತ್ರದಲ್ಲಿ ಅವನನು ವಿರಥನನ್ನಾಗಿ ಮಾಡಿದನು. ಆದರೇನು, ಶೂರಾಗ್ರಣ್ಯನಾದ ಬಭ್ರುವಾಹನನು ಹೆದರಿದನೆ ? ಭೂಮಿಯಲ್ಲಿ ನಿಂತು, ಬಲವಾದ ಬಾಣವನ್ನು ಇನ್ನೊಂದು ಬಿಲ್ಲಿಗೆಹೂಡಿ ಹೊಡೆದನು. ಆಗ ಪ್ರದ್ಯುಮ್ನನ ರಥವು ಎಪ್ಪತ್ತು

ಮಾರುದೂರ ಹಿಂದಕ್ಕೆ ಹೋಗಿ ಅಂತರಿಕ್ಷದಲ್ಲಿ ತಿರುಬುಗುರಿಯಂತೆ ಗಿರು
ರನೆ ತಿರುಗಲಾರಂಭಿಸಿತು, ಕೂಡಲೆ ಮತ್ತೊಂದು ಬಾಣದಿಂದ ಮನ್ಮಥನನ್ನು
ಬಡಿಯಲು, ಅದನ್ನು ಸಹಿಸಲಾರದೆ ಮನ್ಮಥನು ಮೂರ್ಛೆಹೋಗಿ ಸ್ವಲ್ಪಹೊ
ತ್ತಿನಲ್ಲಿಯೆ ಎಚ್ಚತ್ತು ತನ್ನೆದುರಿಗೆ ನಿಂತಿರುವ ಅಸಮಬಲನಾದ ಬಭ್ರುವಾಹನ
ನೊಡನೆ ಏಳ್ಮಡಿಯಾದ ಶೌರ್ಯದಿಂದ ಕಾದಲನುವಾದನು.

ಹೀಗೆ ಪರಾಕ್ರಮದಿಂದ ಕಾದಾಡುತ್ತಿರುವ ಆ ಮನ್ಮಥ ಬಭ್ರುವಾಹ
ನರು ಬಂದು ಬಾರಿ ಆಕಾಶಕ್ಕೆಹಾರಿ ಮುಗಿಲಮೋಹರದೊಡನೆ ಹೊಡೆದಾ
ಡಿಯೂ, ಮತ್ತೊಂದುವೇಳೆ ಭೂಮಿಯಲ್ಲಿ ನಿಂತು ಜಗಜ್ಜಟ್ಟಿಗಳಂತೆ ಜಗಳವಾ
ಡಿಯೂ, ಚಕ್ರದಂತೆ ಸುತ್ತಿಸುತ್ತಿ ಬರುವ ಅಹಂಕಾರದ ಬಲ್ಮೆಯಿಂದ, ತಗುಳ
ಮುಗುಳಾಗಿ ಹೋರಾಡುತ್ತ ಹೆಚ್ಚು ಕುಂದುಗಳನ್ನು ಸರಿಮಾಡಿಕೊಂಡು
ಒಂದೊಂದುವೇಳೆ ಬಾಣಮಯವಾದ ಸಮುದ್ರದ ತೆರೆಗಳಲ್ಲಿ ಮುಳುಗಿತೇಲುತ್ತ
ಅಡಿಗಡಿಗೆ ಮೂರ್ಛೆಹೊಂದಿ ಮರಳಿ ಚೇತರಿಸಿಕೊಳ್ಳುತ್ತ ಇದ್ದರು. ಹೀಗೆ
ಸರಿಸಮವಾಗಿ ಮಾಡುತ್ತಿದ್ದ ಯುದ್ಧದಲ್ಲಿ ಒಬ್ಬೊಬ್ಬರು ಒಂದುಸಾರಿ ಬೀಳು
ವರು. ಮತ್ತೆ ಎದ್ದು ನಿಲ್ಲುವರು. ಕೋಪದಿಂದ ಮೂದಲಿಸುವರು ಮಾರ್ಮ
ಲೆತು ನುಡಿವ ಮನ್ನೆಯ ಹೇಳನಗಳನ್ನು ಕೇಳುವರು. ಮೈಯಲ್ಲಿ ನಾಟದ
ಬಾಣಗಳನ್ನು ಕೀಳುವರು. ಗಾಯದ ನೋವನ್ನು ಸಹಿಸಿಕೊಂಡು ಪೌರುಷ
ವೆಂಬ ಬೆಂಕಿಯಲ್ಲಿ ಹಗೆಗಳೊಡಲನ್ನು ಹೋಮಮಾಡುವರು. ವೀರಸಿರಿಯನ್ನು
ತಳೆದು ಬಾಳುವರು. ಶತ್ರುರಾಜರನ್ನು ಸೀಳುವರು. ತೂಳುವರು. ಬಾಣಗ
ಳಿಂದ ಹೊಡೆದು ಬಲವಾದ ನೆತ್ತರನ್ನು ಹೊರಡಿಸುವರು. ಇಬ್ಬರೂ ಸಮಾನ
ರಾಗಿ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬ ಕುತೂಹಲದಿಂದ ಯುದ್ಧಮಾಡುವ
ಗರುಡ ಹನುಮಂತರಂತೆ ಆ ಬಭ್ರುವಾಹನ ಪ್ರದ್ಯುಮ್ನರಿಬ್ಬರೂ ಹೊಡೆದಾಡಿ
ದರು. ಬಳಿಕ ಬೇಸರಪಟ್ಟು ಬಭ್ರುವಾಹನನು ಬಲವಾದ ಬಾಣಗಳನ್ನು
ಹೊಡೆದು ಪ್ರದ್ಯುಮ್ನನ ಬಿಲ್ಲಿನಹೆದೆಯನ್ನು ಕಡಿದುಹಾಕಿ ಆತನನ್ನೂ ಅಂತರಿ
ಕ್ಷಕ್ಕೆ ಹಾರಿಸಿ ತಾನೂ ಅವನು ಹೊಡೆದ ಬಾಣದಮಹಿಮೆಯಿಂದ ಮೇಘಮಂಡ
ಲಕ್ಕೆ ಹಾರಿದನು. ಇಬ್ಬರೂ ಒಂದು ಮುಹೂರ್ತಕಾಲ ಅಬ್ಬರದಿಂದ ಅಂತರಿ
ಕ್ಷದಲ್ಲಿಯೆ ಕಾದಾಡುತ್ತಿದ್ದು ಬಳಿಕ ಒಬ್ಬೊಬ್ಬರೊಂದೊಂದುಕಡೆಗೆ ತಿರುಗಿ
ಭೂಮಿಗೆ ಬಿದ್ದರು. ಆಹಾ ! ಲೋಕದಲ್ಲಿ ಬಭ್ರುವಾಹನನಿಗೆ ಸಮಾನರಾದ
ಶೂರರುಂಟೆ ? ಅವನ ಪರಾಕ್ರಮವನ್ನು ಏನು ಹೇಳಲಿ ! ಭೂಮಿಗೆ ಬಿದ್ದರೂ
ಹಗೆ ತೀರಿಸಿಕೊಳ್ಳಬೇಕೆಂದು ಎದುರಾಳಿಯನ್ನು ಹುಡುಕುತ್ತ ಮತ್ತೊಂದು
ರಥವನ್ನು ಹತ್ತಿ ಮನ್ಮಥನನ್ನು ಕಾಣದೆ ಅರ್ಜುನನ ಸೇನೆಯೊಳಕ್ಕೆ ನುಗ್ಗಿ
ಕಾದುತ್ತ ವೀರಾವೇಶದಿಂದ ಪ್ರದ್ಯುಮ್ನನನ್ನು ಹುಡುಕುತ್ತಿದ್ದನು. ಅಗ

ಅರ್ಜುನನಸೈನ್ಯದ ವೀರರು ಬಲವಾಗಿಮುತ್ತಿ ಬಾಹುಗಳನ್ನಪ್ಪಳಿಸಿ ಮೇಲ್ವಾಯ್ದು ಕೈದುಡುಕಿ, ಕಿವಿದು, ಹೊಯ್ದು, ಹೊಡೆದು, ನೂಕಿ, ಒತ್ತಿ, ಬತ್ತಳಿಕೆಯ ಬಾಣಗಳನ್ನು ಸೆಳೆದು ವೀರಾವೇಶದಿಂದ ತಾಗಿ ತೊಡರಿ, ಅಶ್ವಗಟ್ಟಿ, ಮೇಲೆ ಬಿದ್ದು ತವಕದಿಂದ ಕಾದಿ ಚೀರುತ್ತ ರಣಭೇರಿಯೊಡನೆ ಕೂಡಿದ ವೀರನಾದ ದಿಂದ ಆಲಿ ಅಬ್ಬರಿಸಿ ಹೆಬ್ಬುಲಿಯನ್ನು ಹಿಡಿದ ಬೇಡರಪಡೆಯಂತೆ ಮುತ್ತಿ ಕೊಂಡು ಕಾದಲನುವಾಗಿ ಸರ್ವರೂ ಒಟ್ಟಾಗಿ ಸುತ್ತುಗಟ್ಟಿದರು. ಅದನ್ನು ಕಂಡು ಬಾಣಬತ್ತಳಿಗಳ ಬಾಯ್ಘಾತುಗಳ ಬಿನ್ನಣದಿಂದ ತನ್ನನ್ನು ಮುತ್ತಿ ಕೊಂಡಿರುವ ಅರ್ಜುನನ ಸೇನೆಯನ್ನು ಬಭ್ರುವಾಹನನು ಬದ್ಧಭ್ರುಕುಟಿಯಾಗಿ ಕ್ಷಣಮಾತ್ರದಲ್ಲಿ ಚೂರ್ಣಮಾಡಿ ಯಮನ ಪಟ್ಟಣವನ್ನು ತುಂಬಿಸಿ ಬೊಬ್ಬಿರಿ ದನು.

ಎಲೈ ಜನಮೇಜಯರಾಯನೇ ಕೇಳು. ಬಭ್ರುವಾಹನನು ಸುರಿಸಿದ ಬಾಣಗಳ ಮಳೆಯಿಂದ ಆ ಯುದ್ಧಭೂಮಿಯಲ್ಲಿ ನೆನೆಯದವರು ಪಾಂಡವರ ಸೇನೆಯಲ್ಲೊಬ್ಬರೂ ಇಲ್ಲ. ಸರ್ವರೂ ತಂತಮ್ಮ ಶಕ್ತಿಗೆ ಅಳವಡದ ಬಭ್ರುವಾ ಹನನ ಪರಾಕ್ರಮವನ್ನು ತಾಳಲಾರದೆ ಬಲಗುಂದಿ, ಬಣ್ಣಗೆಟ್ಟು, ಬಿಂಕವಡಗಿ, ಚೈತನ್ಯವಿಲ್ಲದೆ, ಚಿಸೆಚಮತ್ಕಾರಂಗಳುಡುಗಿ, ಬಳಲಿ, ಬೇಸತ್ತು, ಬಿಸುಸುಯ್ದು, ಬದ್ದುರುಳಿ ರಣಭೂಮಿಯನ್ನು ರಕ್ತಧಾರೆಯಿಂದ ನೆನೆಯಿಸಿದರು. ಅನುಸಾ ಲ್ವನು ಯುದ್ಧದಲ್ಲಿ ಸೋತನು. ವೃಷಕೇತು ಜಗಳವಾಡಿ ಹಿಂದೆಗೆದನು. ಹಂಸಧ್ವಜನು ಸಂಗರದಲ್ಲಿ ಭಂಗಪಟ್ಟನು. ಯೌವನಾಶ್ವನು ಮಾನಮರ್ಯಾದೆ ಗಳನ್ನು ತೊರೆದು ನಾಚಿಗೆಗೆಟ್ಟನು. ಸುವೇಗನು ಸೊಕ್ಕಡಗಿ ಸುರುಳಿಬಿದ್ದನು. ನೀಲಧ್ವಜನು ಬಾಳುಗಳೆದು ಭೂಮಿಗೆ ಬಾಗಿ ತಲೆಯನ್ನು ಅಲ್ಲಾಡಿದನು. ಅನಿರುದ್ಧನು ಮೂರ್ಛಾಗತನಾಗಿ ಭೂಮಿಗ ಬಿದ್ದನು. ಉಳಿದ ಕೃತವರ್ಮ ಸಾತ್ಯಕಿಗಳು ಇದಿರಾಗಿ ಯುದ್ಧದಲ್ಲಿ ದೆಸೆಗೆಟ್ಟು ನಿಲ್ಲಲಾರದೆ ಓಡಿಹೋದರು.

ಎಲೈ ಜನಮೇಜಯರಾಯನೇ ! ಬಭ್ರುವಾಹನನ ಬಲ್ಮೆಯನ್ನು ಇನ್ನೆ ಷ್ಟುಹೇಳಲಿ ! ಅರ್ಜುನನ ಸೈನ್ಯದವರನ್ನೂ ಸೊಪ್ಪುಗೆಡಹಿ, ಕ್ರೂರವಾದ ಬಾಣಗಳ ಮಳೆಯನ್ನುಸುರಿಸಿ, ಮೂರು ಲೋಕಗಳನ್ನು ಮುಚ್ಚಿ ರಣದಲ್ಲಿ ಕಳೆದುಳಿದವರನ್ನು ತುತ್ತುಗೊಳ್ಳುತ್ತಿದ್ದನು ಅದನ್ನು ಕಂಡು ಅಚ್ಯುತನಿಗೆ ಮೈದುನನಾಗಿ ಆಹವಸಮರ್ಥನಾದ ಅರ್ಜುನನು ಕೋಪದಿಂದ ಕುದಿಯುತ ತನ್ನ ಗಾಂಡೀವವನ್ನು ಕೈಗೆ ತೆಗೆದುಕೊಂಡು, ಧನುಷ್ಟಂಕಾರಮಾಡಿ ತಾಂಡವ ಮೂರ್ತಿಯಾದ ಪರಶಿವನ ಕಣ್ಣುಗಳಂತೆ ಕಿಡಿಕಿಡಿಯಾಗಿ ಕೆಂಪಾದ ನಯನಗ ಳನ್ನು ತಿರುಗಿಸುತ್ತ ಬಾಣಗಳನ್ನು ಬತ್ತಳಿಕೆಯಿಂದ ಹಿರಿದು, ಬಿಲ್ಲಿಗೆಹೂಡಿ, ಪೊಂದೇರಿಗೆಹತ್ತಿ ನಿಂತು, ಮಧ್ಯಾಹ್ನಕಾಲದ ಸೂರ್ಯಮಂಡಲದಂತೆ ಪ್ರಜ್ವಲಿ

ಸುತ್ತ ಹಿಂದೆ ಖಾಂಡವನದಹನಕಾಲದಲ್ಲಿ ತನ್ನಮೇಲೆ ಯುದ್ಧಕ್ಕೆ ಬಂದ ದೇವೇಂದ್ರನಂತೆ ರಣಬೇರಿಯನ್ನು ಪೊಯ್ಸಿ ಬೊಬ್ಬಿರಿದನು. ಕೂಡಲೆ ಹಂಸಧ್ವಜನು ತನ್ನ ಮೂಲಬಲವನ್ನು ಮುಂದಕ್ಕೆ ನೂಕಿದನು. ಆಬಳಿಕವರಿಬ್ಬರೂ ಕೂರ್ಗಣೆಗಳನ್ನು ಸುರಿಸುತ್ತ ಬಾಣದ ಮಳೆಯಿಂದ ಬಭ್ರುವಾಹನನನ್ನು ಮುತ್ತಿ ಅನೂನವಾದ ಶರಜಾಲದಿಂದ ಭಾನುಮಂಡಲ ಭೂಚಕ್ರಗಳು ಕಾಣಿಸದಂತೆ ಹೊಡೆದಾಡಲಾರಂಭಿಸಿದರು.

ಕೇಳೈ ಜನಮೇಜಯರಾಯನೇ ! ಈ ಹೊಸದಾದ ಯುದ್ಧದಬಗೆಯನ್ನು ಏನುಹೇಳಲಿ ? ಹಂಸಧ್ವಜ ಬಭ್ರುವಾಹನರಿಗೆ ಭಯಂಕರವಾದ ಯುದ್ಧವು ಕೈಗಟ್ಟಿತು. ಆಗ ಅವರಿಬ್ಬರೂ ಬಲಕ್ಕೆ ಪರಬಲವೂ, ಧೃತಿಗೆ ಧೈರ್ಯವೂ, ಅಗ್ಗಳಿಕೆಗ ಆಧಿಕ್ಯವೂ ಪೆಟ್ಟಗೆ ಪೆಟ್ಟೂ, ಬಾಣಗಳಿಗೆ ಬಾಣವೂ, ಕೊಲೆಗೆ ಕೊಲೆಯೂ, ಕೋಪಕ್ಕೆ ಕೋಪವೂ, ಗಾಯಕ್ಕೆ ಗಾಯವೂ, ಪರಾಕ್ರಮಕ್ಕೆ ಶೌರ್ಯವೂ, ಮೂರ್ಛೆಗೆ ಮೈಮರೆವುದೂ ಸಮವಾಗಿರಲು, ದೇವಪುರನಿಲಯ ಲಕ್ಷ್ಮೀರಮಣನ ಮೈದುನನು ಮೆಚ್ಚಿ ತಲೆದೂಗಿದನು, ಆಕಾಶದಲ್ಲಿ ನೆರೆದು ನಿಂತಿರುವ ದೇವತೆಗಳು ಆಶ್ಚರ್ಯದಿಂದ ಆಲುತ್ತಿದ್ದರು, ಹೀಗೆ ಅತಿಶಯವಾದ ಬಲ್ಮೆಯಿಂದ ಅವರಿಬ್ಬರೂ ಯುದ್ಧಮಾಡುತ್ತಿದ್ದರೆಂಬಲ್ಲಿಗೆ-ಶ್ರೀಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯ ಮಾನ ಕಲ್ಯಾಣಪುರೀನಿಲಯ ಕವಿ ನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿಇಪ್ಪತ್ತೆರಡನೆಯಸಂಧಿ ಸಂಪೂರ್ಣಂ ಶ್ರೀ. ಶ್ರೀ. ಶ್ರೀ. ಶ್ರೀ.

ಕಂ ॥ ಕಂದರನರಿಯದೆ ರಾಮಂ ।
ಚೆಂದದಿ ಹೊಡೆದಾಡಿ ಸೋತ ಪರಿಯಿಂದೀಗಳ್ ॥
ಸಂದೀ ಕಲಹಂ ನಡೆದುದು ।
ಮುಂದೇನೆಂಬಂತೆ ತಂದೆ ಮಕ್ಕಳಿಗಹಹಾ ! ॥೧॥

# ಇಪ್ಪತ್ತಮೂರನೆಯ ಸಂಧಿ.

## ಬಭ್ರುವಾಹನನು ವೃಷಕೇತುವನ್ನೂ ಅರ್ಜುನನನ್ನೂ ಕೊಂದುದು.

ಎಲೈ ಜನಮೇಜಯರಾಯನೇ ಕೇಳು ಹೀಗೆ ಬಭ್ರುವಾಹನನು ಅರ್ಜುನನ ಸೈನ್ಯದ ಶೂರರನ್ನು ಕೆಡವಿ ಹಂಸಧ್ವಜನೊಡನೆ ಯುದ್ಧಮಾಡಿ, ನೂರು ತೇರುಗಳನ್ನು ನುಚ್ಚುನೂರಾಗಿ ಕತ್ತರಿಸಿ, ಆರುಸಾವಿರ ಗಾಲಿಗಳನ್ನು ಮೆದೆಯಾಗಿ ಒಟ್ಟು, ಮೂಲಬಲದಲ್ಲಿ ಐದು ಅಕ್ಷೋಹಿಣಿ ಕಾಲಾಳುಗಳನ್ನು ಸವರಿ, ಕಡೆಗೆ ಬಿಲ್ಲಾಳುಗಳ ಬಿರುದಿನ ಬಂಟನಾದ ಹಂಸಧ್ವಜನು ಮೈಮರೆದು ಭೂಮಿ ಗುರುಳುವಂತೆ ಮಾಡಿದನು. ಅದನ್ನು ಕಂಡು ಅರ್ಜುನನು ಆಹಾ ! ಅತಿಹಾಯ ಶೂರರಾದ ಇವನ ಮಕ್ಕಳಿಬ್ಬರೂ ಮೊದಲೆ ಸತ್ತರು. ಶೂರನಾದ ಈತನು ಈಗ ಮೈಮರೆದು ಮಲಗಿದನಲ್ಲಾ ಎಂದು ಚಿಂತಿಸುತ್ತ ತನಗೆ ಶ್ರೀಕೃಷ್ಣನು ಹೇಳಿದ ಮಾತುಗಳನ್ನು ಸ್ಮರಿಸಿ, ಹಂಸಧ್ವಜನಿಗಾಗಿ ಚಿಂತಿಸುತ್ತಿದ್ದನು. ಕೂಡಲೆ ಸುವೇಗನು ಶೌರ್ಯದಿಂದಾರ್ಭ ಎದುರಾಗಿಬಂದು ಬಾಣಗಳನ್ನು ಸುರಿಸುತ್ತ ಬಭ್ರುವಾಹನನೊಡನೆ ಕಾದಲನುವಾದನು. ಆಗಲೂ ವೀರನಾದ ಬಭ್ರುವಾಹನನು ಆಸುವೇಗನ ಕಡೆಯ ವೀರರಲ್ಲಿ ಎರಡುಸಾವಿರ ಕಟ್ಟಾಳುಗಳನ್ನು ಕಡಿದು ಹಾಕಿ ಬೊಬ್ಬಿರಿದನು. ಬಳಿಕ ಬಭ್ರುವಾಹನ ಸುವೇಗರಿಬ್ಬರೂ ಬಲವಾದ ಬಲ್ಮೆಯನ್ನು ತೋರಿಸಿ ಕಾದಾಡುತ್ತಿರಲು ಬಭ್ರುವಾಹನನ ಉರುಬೆಗೆ ಸೋತು ಸುವೇಗನು ಮೈಮರೆದು ರಥದಲ್ಲಿ ಮಲಗಿದನು.

ಅನಂತರದಲ್ಲಿ ಬಭ್ರುವಾಹನನು ಪ್ರಳಯಕಾಲದ ರುದ್ರನಂತೆ ಅರ್ಜುನನ ಸೈನ್ಯವನ್ನು ಹೊಕ್ಕು ಶರವರ್ಷವನ್ನು ಕರೆದು ಜೀವರಾಶಿಯನ್ನು ಸೂರೆಗೊಳ್ಳುತ್ತಿದ್ದನು, ಆಗ ಆ ಮಹಾಸೈನ್ಯದಲ್ಲಿ ನಿರಾತಂಕವಾಗಿ ದೇಹದಲ್ಲಿ ಅಡಗಿಕೊಂಡಿರುವ ಜೀವಾತ್ಮ ಪರಮಾತ್ಮರಂತೆ ಅರ್ಜುನ ವೃಷಕೇತುಗಳಿಬ್ಬರೇ ಉಳಿದರು. ಇತ್ತ ಹೀಗಿರುತ್ತಿರಲು, ಅತ್ತ ತೀರ್ಥಯಾತ್ರೆಗೆ ಬಂದಕಾಲದಲ್ಲಿ ಅರ್ಜುನನು ಗುರುಶಾಪವನ್ನು ಬಿಡಿಸಿ, ಅಕ್ಕರೆಯಿಂದ ಪರಿಸಿದ ನಾಗರಾಜನ ಮಗಳಾದ ಉಲೂಪಿಯು ಪಾತಾಳಲೋಕದಿಂದ ಮಣಿಪುರಕ್ಕೆ ಬಂದು, ಯುದ್ಧಭೂಮಿಯಲ್ಲಿ ಮೂರ್ಛಾಕ್ರಾಂತರಾಗಿ ಬಿದ್ದಿದ್ದವರನ್ನು ಕರೆಸಿಕೊಂಡು ಮಣಿಮಂತ್ರೌಷಧಿಗಳಿಂದುಪಚರಿಸುತ್ತ, ಅನಿರುದ್ಧ ಪ್ರದ್ಯುಮ್ನರನ್ನು ಸಂತೈಸಿ, ದಣಿವಾರುವಂತೆ ಉಪಚರಿಸುತ್ತಿದ್ದಳು.

ಇತ್ತಲಾದರೋ ಯುದ್ಧಭೂಮಿಯಲ್ಲಿದ್ದ ಅರ್ಜುನನು ವೃಷಕೇತುವನ್ನು ಕುರಿತು ಅಪ್ಪಾ ಮಗು ! ಸೈನ್ಯವು ಮಡಿದುಹೋಯಿತು. ಅನುಸಾಲ್ವ, ಹಂಸ

ಧ್ವಜ, ನೀಲಕೇತು ಮೊದಲಾದ ವೀರರು ಮೂರ್ಛೆಹೋಗಿ ಬಿದ್ದರು. ಹಗೆಗಳು
ಅನಿರುದ್ಧ ಪ್ರದ್ಯುಮ್ನರನ್ನು ತಮ್ಮೂರಿಗೆ ಕರೆದುಕೊಂಡು ಹೋದರು. ಹಗೆ
ಯನ್ನು ಜಯಿಸುವ ಮಾರ್ಗವನ್ನು ಕಾಣೆ ! ನಾನು ಹೇಗಾದರೂ ಇಲ್ಲಿ ಇದ್ದು
ಯುದ್ಧಮಾಡುವೆನು ನೀನು ಹಸ್ತಿನಾಪುರಿಗೆ ಹೋಗಿ, ನಮ್ಮ ರಾಜಕಾರ್ಯಸ್ಥಿತಿ
ಯನ್ನು ಧರ್ಮರಾಯನಿಗೂ, ಶ್ರೀಕೃಷ್ಣನಿಗೂ, ತಿಳಿಸು ಎಂದು ಹೇಳುತ್ತಿ
ದ್ದನು. ಆಕಾಲದಲ್ಲಿ ಹದ್ದೆರಗಿ ಅರ್ಜುನನ ಕಿರೀಟದಮೇಲೆ ಕೂತುಕೊಂಡಿತು.
ರಥದಲ್ಲಿ ಪಾರಿವಾಳಗಳು ಗೂಡುಕಟ್ಟಿದವು. ತಲೆಯಿಲ್ಲದೆ ನೆಳಲು ಕಾಣಬಂ
ದಿತು. ಇದೆಲ್ಲವನ್ನು ಕಂಡು ಅರ್ಜುನನು ಅಹಾ ! ಇದು ಏನೋ ಉತ್ಪಾತ
ವಿಚಿತ್ರವೆಂದು ಹೆದರಿ, ನನಗೆ ಇನ್ನು ಅಪಜಯ ಉಂಟಾಗದೆ ಇರದು ಅಯ್ಯೋ
ಧರ್ಮರಾಯನು ಭಾಗ್ಯಹೀನನಾದನಲ್ಲ ! ಹರಹರಾ ! ಹೇಗೆ ಶ್ರೀಹರಿಯು ಈ
ಅಶ್ವಮೇಧಯಾಗವನ್ನು ಮಾಡಿಸುವನು ! ಎಲೈ ವೃಷಕೇತುವೇ ! ನಾನು
ಕುದುರೆಯೊಡನೆ ಹಸ್ತಿನಾವತಿಗೆ ಹೋಗಿ ಯಾಗಮಂಟಪದಲ್ಲಿ ನೆರೆದಿರುವ ಋತ್ವಿ
ಜರೊಡನೆ ದೀಕ್ಷೆಗೊಂಡು ಕೃಷ್ಣನ ನೇಮದಂತೆ ನಡೆಯುತ್ತಿರುವ ಧರ್ಮರಾಯ
ನನ್ನೂ ಮಂತ್ರಘೋಷಗಳಿಂದ ಸಂತುಷ್ಟರಾಗಿ ನೆರೆದಿರುವ ಬಂಧುಗಳನ್ನು
ನೋಡುವ ಭಾಗ್ಯವುಳ್ಳವನೆ ಹೇಳು ? ಅಕಟಕಟಾ ! ಹೆಚ್ಚಾಗಿ ಹೇಳಿ ಫಲ
ವೇನು ಬಭ್ರುವಾಹನನೊಡನೆ ನಾನು ಯುದ್ಧಮಾಡುವೆನು. ನಮ್ಮ ವಂಶಕ್ಕೆ
ಶಿಖರಪ್ರಾಯವಾಗಿ ಉಳಿದಿರುವ ಮಗನು ನೀನೊಬ್ಬನೆ ಅಲ್ಲದೆ ಇನ್ನಾರೂ
ಇಲ್ಲ. ಆದಕಾರಣ ನೀನು ಯುದ್ಧಕ್ಕೆ ಹೋಗಿ ನಮ್ಮ ಬಾಳನ್ನು ಕೆಡಿಸಬೇಡ.
ನನ್ನ ಮಾತನ್ನು ಕೇಳು ! ಬೇಗನೆ ಹಸ್ತಿನಾವತಿಗೆ ಹೋಗಿ ದುಸ್ತರವಾಗಿರುವ
ಇಲ್ಲಿನ ಸ್ಥಿತಿಯನ್ನು ಶ್ರೀಕೃಷ್ಣ ಧರ್ಮರಾಯರಿಗೆ ಹೇಳು ನಡೆ ! ತಡಮಾಡ
ಬೇಡ ಎಂದು ಹೇಳಿದನು. ಅದನ್ನು ಕೇಳಿ ವೃಷಕೇತುವು ಸಹಿಸಲಾರದೆ
ಕೋಪದಿಂದ ಕಣ್ಣುಗಳನ್ನು ತಿರುಗಿಸುತ್ತ ಅರ್ಜುನನಿಗೆ ಇಂತೆಂದು ಹೇಳಿದನು.

ಎಲೈ ತಂದೆಯೆ ! ನೀನು ಹೇಳಿದುದು ಬಹಳ ಚೆನ್ನಾಯಿತು. ನಿನ್ನನ್ನು
ಯುದ್ಧಭೂಮಿಯಲ್ಲಿ ಬಿಟ್ಟು ನಾನು ಒಬ್ಬನೆ ಹಸ್ತಿನಾವತಿಗೆ ಹೋಗಲೆ ? ಯುದ್ಧ
ದಲ್ಲಿ ಜೀವದಾಸೆಯಿಂದ ಹೇಡಿಯಾಗಿ ಹಿಮ್ಮೆಟ್ಟಿದರೆ ನಮ್ಮ ತಾತನಾದ ಸೂ
ರ್ಯನು ಆಕಾಶದಿಂದ ಪತಿತನಾಗಿ ಬೀಳದಿರುವನೆ ! ಟೊಳ್ಳೆದೆಯ ಹೇಡಿಗ
ಳೊಡನೆ ಈ ಮಾತುಗಳನ್ನಾಡು. ಮನಸ್ಸಿನಲ್ಲಿ ಭಯಪಟ್ಟುಗೊಂಡು ಬಗೆಬಗೆ
ಯಾಗಿ ಚಿಂತಿಸುವುದೇಕೆ ? ನನ್ನನ್ನು ಯುದ್ಧಕ್ಕೆ ಕಳುಹಿಸು' ಈ ಬಭ್ರುವಾಹ
ನನ ಶೌರ್ಯಧೈರ್ಯಗಳನ್ನು ಕ್ಷಣಮಾತ್ರದಲ್ಲಿ ಮುರಿದುಬಿಡುವೆನು ! ತಂದೆಗೋ
ಸ್ಕರ ಮಾಡುವ ದಾನಕ್ಕೂ, ಗೋವುಗಳನ್ನು ಸಂರಕ್ಷಿಸುವುದಕ್ಕೂ, ದೇವ
ಬ್ರಾಹ್ಮಣರನ್ನು ತೃಪ್ತಿಪಡಿಸುವುದಕ್ಕೂ ಶಾಸ್ತ್ರೋಕ್ತವಾದ ಸದ್ಧರ್ಮಗಳನ್ನು

ಕಾಪಾಡುವುದಕ್ಕೂ ಪ್ರಾಣವನ್ನು ತೆತ್ತವನಿಗೆ ಕೈವಲ್ಯಪದವಿ ಉಂಟಾಗುವು ದೆಂಬ ಶ್ರುತಿಗಳು ಹೇಳುತ್ತಿರುವುದನ್ನು ಕೇಳಿಬಲ್ಲೆಯಾ ? ಅಯ್ಯೋ ! ನನಗೆ ಏಕಪತ್ನಿಯಾದ ಧೈರ್ಯಲಕ್ಷ್ಮಿಯನ್ನು ತೊರೆದು ಹೇಗೆ ಹೋಗಲಿ ! ಕರ್ಣಪುತ್ರ ನೆಂಬ ಖ್ಯಾತಿಯನ್ನು ಹೇಗೆ ಕಳೆದುಕೊಳ್ಳಲಿ ! ಶಿವಶಿವಾ ! ನಾನೆಂದಿಗೂ ಸುಳ್ಳುಹೇಳಲಾರೆನು. ನನ್ನನ್ನು ಯುದ್ಧಕ್ಕೆ ಕಳುಹಿಸು ! ಈ ಬಭ್ರುವಾಹ ನನು ತನ್ನ ಸೇನೆಯೊಡನೆ ಬರಲಿ ! ಅವನನ್ನು ಎದುರಿಸಿ ನಿನ್ನ ಕಣ್ಣುಗಳಿಗೆ ಹಬ್ಬವನ್ನು ಮಾಡದೆ ಇರುವುದಿಲ್ಲ ! ಎಂದು ಒಡಂಬಡಿಸಿ ವೃಷಕೇತುವು ರಥ ವನ್ನು ಹತ್ತಿ ಬಿಲ್ಲನ್ನುಹಿಡಿದು ಹೆದೆಯೇರಿಸಿ ಬಭ್ರುವಾಹನಬಳಿಗೆ ಬಂದು ಎಲೈ ಮೂಢನೇ ! ನೀನು ಅರ್ಜುನನ ಮಗನಾಗಿದ್ದರೆ ನನ್ನೊಡನೆ ಯುದ್ಧಕ್ಕೆನಿಲ್ಲು. ನಾನು ಕರ್ಣನ ಮಗನಾದ ವೃಷಕೇತು ಎಂಬುದನ್ನು ಬಲ್ಲೆಯಾ ಎಂದು ಬಾಣ ಗಳನ್ನು ಹೊಡೆದನು.



ವೃಷಕೇತು ಬಭ್ರುವಾಹನರ ಕಾಳಗ.

ಆಹಾ ! ಚೆನ್ನಾಗಿ ಹೇಳಿದೆ ? ಕರ್ಣಪುತ್ರನಾದರೆ ಒಳ್ಳಿತು. ವೃಷಕೇ ತುವೇ ನೀನೂ ಪ್ರಖ್ಯಾತನಾದ ವೀರನೆ ಹೌದು. ಭಾರತಯುದ್ಧದಲ್ಲಿ ನನ್ನ ತಂದೆಯಾದ ಅರ್ಜುನನು ಕರ್ಣನನ್ನು ಕೊಂದನಲ್ಲವೆ ? ನೀನು ನನಗೆ ಎದು ರಾಗಿ ಬರುವುದು ನ್ಯಾಯವೆ ಹೌದು. ಎಂದು ಬಭ್ರುವಾಹನನು ಬಾಣಗಳ ಮಳೆಯನ್ನು ಸುರಿಸಿದನು. ವೃಷಕೇತು ಪ್ರತಿಬಾಣಗಳನ್ನುಹೂಡಿ ಅವುಗ ಳನ್ನು ಇಕ್ಕಡಿಯಾಗಿ ಕಡಿದು ಬಭ್ರುವಾಹನನನ್ನು ನೋಯಿಸಲು, ಬಭ್ರುವಾ ಹನನು ವೃಷಕೇತುವನ್ನು ಮುತ್ತಿದನು. ಹೀಗೆ ಯುದ್ಧಮಾಡುತ್ತಿರುವ ವೃಷ

ಕೇತು ಬಭ್ರುವಾಹನರು ಬಾಣಗಳನ್ನು ಬಿಡುವರು ಬಿಟ್ಟಬಾಣಗಳನ್ನು ನಡು ದಾರಿಯಲ್ಲಿ ಖಂಡಿಸುವರು. ಒಬ್ಬರನ್ನೊಬ್ಬರನ್ನು ಗಾಯಗೊಳಿಸುವರು. ರೋಷಾವೇಶದಿಂದ ಕೆರಳಿ ಕುದುರೆ ಸಾರಥಿ ಧ್ವಜಪತಾಕೆಗಳನ್ನು ತರಿದುರುಳಿಸಿ, ಬರಿದಾಗಿ ಭೂಮಿಯಲ್ಲಿ ನಿಂತು ಹೊಡೆದಾಡುತ್ತ ಒಂದೊಂದುವೇಳೆ ಮೈಮರೆದುಬಿದ್ದು ಮರಳಿ ಚೇತರಿಸಿಕೊಂಡು ಆಗ್ನೇಯಾದಿ ಮಂತ್ರಾಸ್ತ್ರಗಳನ್ನು ಅವುಗಳಿಗೆ ಸರಿಯಾದ ಪ್ರತ್ಯಸ್ತ್ರಗಳನ್ನು ಬಿಡುತ್ತಿದ್ದರು. ಎಲೈ ಜನಮೇಜಯನೇ ಕೇಳು. ಪೂರ್ವದಲ್ಲಿ ನಡೆದ ಕರ್ಣಾರ್ಜುನರ ಕಾಳಗವನ್ನು ಅವರ ಮಕ್ಕಳು ನಿರ್ಣಯಿಸುತ್ತಿದ್ದರೋ ಎನ್ನುವಂತೆ ಅಸ್ತ್ರಶಸ್ತ್ರಗಳಿಂದಲೂ, ಲಕ್ಷ್ಯ ಲಾಘವ, ಸತ್ವ, ಸಾಹಸ, ಬಿಂಕ, ಬೆಸೆ, ಚಮತ್ಕಾರಗಳಿಂದ ಸಮನಾಗಿ ವೃಷಕೇತುವು ಬಭ್ರುವಾಹನನನ್ನು ಎದುರಿಸಿದನು. ಹೀಗೆ ವೃಷಕೇತುವು ಮಂತ್ರಾಸ್ತ್ರಗಳಿಂದ ಮತ್ತನಾಗಿರುವುದನ್ನು ಕಂಡು ಬಭ್ರುವಾಹನನು ಆಗ್ನೇಯಾಸ್ತ್ರದಿಂದ ಪರಿಹರಿಸಿಕೊಂಡು ಕೋಪದಿಂದ ಕೋಲ್ಗರೆಯಲು, ರಕ್ತದಿಂದಕೂಡಿದ ಖಂಡವನ್ನು ಅಂತರಿಕ್ಷಕ್ಕೆ ಹಾರಿಸಿ, ಆಕಣೆಗಳು ತಮ್ಮಲ್ಲಿ ಅಂಟಿಕೊಂಡ ರಕ್ತವನ್ನು ತೊಳೆಯುವುದಕ್ಕಾಗಿ ಪಾತಾಳಲೋಕದ ಭೋಗವತೀನದಿಗೆ ಇಳಿದುಹೋದವು. ರೋಷದಿಂದ ಕೆರಳಿ ವೃಷಕೇತುವು ಬಭ್ರುವಾಹನನನ್ನು ಹೊಡೆಯಲು, ರಥಸಹಿತವಾಗಿ ಆಕಾಶಕ್ಕೆ ಹಾರಿಸಿ, ಅರ್ಧಘಳಿಗೆಯವರೆಗೂ ಬಭ್ರುವಾಹನನು ಸುಳಿಗಾಳಿಯಂತೆ ಸುತ್ತುತ್ತಿದ್ದನು. ಆಬಳಿಕ ಬಭ್ರುವಾಹನನು ಕೋಪದಿಂದ ಹೊತಹೊಮ್ಮುವ ವೀರರಸವನ್ನು ತೋರಿಸಿ ಹತ್ತಿಉರಿಯುತ್ತಿರುವ ಪೆಂಕಿಯಿಂದ ಹಾರುವ ತೂರುಗಿಡಿಗಳಂತಹ ಬಾಣದ ಕಿಡಿಗಳನ್ನು ಸುರಿಸುತ್ತ ಎಲೈ ವೃಷಕೇತುವೇ ! ನಾನು ನೋಡಿದ ಶೂರರಲ್ಲಿ ನೀನೊಬ್ಬನೆ ಧೀರನು ಚಿತ್ತಚಂಚಲವಿಲ್ಲದೆ ಇದನ್ನು ನೋಡು ಎಂದು ಬಾಣವನ್ನು ಹೊಡೆದನು. ಆ ಬಾಣವು ವೃಷಕೇತುವನ್ನು ಹಿಡಿದು ಆಕಾಶಕ್ಕೆ ಎಳೆದುಕೊಂಡು ಹೋಗಿ ದಿಕ್ಕುದಿಕ್ಕುಗಳಿಗೂ ತಿರುಗಿಸುತ್ತಿದ್ದಿತು. ಆಗ ವೃಷಕೇತು ಅಂತರಿಕ್ಷದಲ್ಲಿದ್ದ ತನ್ನ ಪಿತಾಮಹನಾದ ಸೂರ್ಯನಿಗೆ ನಮಸ್ಕಾರಮಾಡಿ, ಕೆಳಗಡೆ ಬಿಲ್ಲುಹಿಡಿದು ಯುದ್ಧ ಸನ್ನದ್ಧರಾಗಿ ನಿಂತು ಎದುರುನೋಡುತ್ತಿರುವ ಅರ್ಜುನ ಬಭ್ರುವಾಹನರ ಬಳಿಯನ್ನು ಗುರುತಿಟ್ಟುಕೊಂಡು ಮಣಿಪುರಪ್ರಾಂತ್ಯದ ಯುದ್ಧಭೂಮಿಗೆಬಿದ್ದು ಪುಟನೆಗೆದು ಹಾರಿ ನಿಂತು ಬಭ್ರುವಾಹನನನ್ನು ಹೊಡೆಯಲು, ಆ ಬಾಣಗಳು ಅಶ್ವಸಾರಥಿಸಹಿತವಾದ ರಥದೊಡನೆ ಚಿತ್ರಾಂಗದೆಯ ಮಗನನ್ನು ಗಗನಮಂಡಲಕ್ಕೆ ಹಾರಿಸಿದವು.

ಆಗ ಅತ್ಯುಗ್ರಕಿರಣನಾದ ಸೂರ್ಯನಪ್ರಭೆಯಿಂದ ತನ್ನ ರಥವು ಸುಟ್ಟುಹೋಗಲು, ಸಂಭ್ರಮದಿಂದ ಸೂರ್ಯಮಂಡಲದವರೆಗೂ ಹಾರಿ ಗರಿಸೀದು ಭೂಮಿಗೆಬಿದ್ದ

ಸಂಪಾತಿಯಂತೆ ಬಭ್ರುವಾಹನನು ಆಕಾಶದಿಂದ ಭೂಮಿಗೆ ಬಿದ್ದನು. ಬಳಿಕ ಮೂರುಲೋಕಗಳು ಆಶ್ಚರ್ಯಪಡುವಂತೆ ಮೂರುಬಾಣಗಳನ್ನು ಹೊಡೆದು ವೃಷಕೇತುವು ಮತ್ತೆ ಬಭ್ರುವಾಹನನನ್ನು ಸೂರ್ಯಮಂಡಲದಬಳಿಗೈದಿಸಿದನು. ಅದನ್ನು ಕಂಡು ಬಭ್ರುವಾಹನನು ತನ್ನ ರಥವನ್ನು ಅಲ್ಲಿಯೆ ಬಿಟ್ಟು ಬಂದು ಹೆಬ್ಬೆಟ್ಟದಂತೆ ವೃಷಕೇತುವಿನ ತಲೆಯಮೇಲೆ ಬಿದ್ದನು. ಆಗ ವೃಷಕೇತುವು ಫುಟನೆಗೆದು ಮೇಲಕ್ಕೆಹಾರಿ ಬಾಣಗಳಿಂದ ಹೊಡೆದು ಆಕಾಶಕ್ಕೆ ನೂಕಿದನು, ಅದನ್ನು ಕಂಡು ಆನಂದಪುಳುಕಿತನಾಗಿ ಅರ್ಜುನನು ಜೆರಲನ್ನು ಅಲ್ಲಾಡಿಸುತ್ತ ವೃಷಕೇತುವನ್ನು ಹೊಗಳಿದನು.

ಬಳಿಕ ಅವರಿಬ್ಬರೂ ಹೊಸ ರಥಗಳನ್ನು ಹವಣಿಸಿಕೊಂಡು ಮಸೆದು ಹದ ಮಾಡಿದ ಉಕ್ಕಿನ ಬಾಣಗಳನ್ನು ತೊಟ್ಟು ವೀರರಸವು ಉಕ್ಕಿ ಸುರಿಯುತ್ತಿರಲು, ಹೆದರದೆ, ಹಿಮ್ಮೆಟ್ಟದೆ ಅರ್ಭಟದಿಂದ ಅಬ್ಬರಿಸುತ್ತ ಐದುದಿನವರೆಗೆ ಹಮ್ಮು ಹೆಮ್ಮೆಗಳಿಂದ ಕಾದಾಡುತ್ತಿದ್ದರು. ಹೀಗಿರುವಲ್ಲಿ ಬಭ್ರುವಾಹನನು ಎಲೈ ವೃಷ ಕೇತುವೆ ! ಭಾಪು ! ಭಾಪು ನೀನು ಬಿಲ್ಲಾಳುಗಳಲ್ಲಿ ಬಲ್ಲಿದನಾಗಿರುವೆ. ನಾನು ಮೂರುಲೋಕಗಳಲ್ಲಿಯೂ ನಿನ್ನಂಥವರನ್ನು ಕಾಣಲಿಲ್ಲ, ಇನ್ನು ಸಾಕು ನಿನ್ನ ಸಾಹಸವನ್ನು ಬಿಡು, ಧೈರ್ಯದಿಂದ ಶ್ರೀಹರಿಯನ್ನು ಧ್ಯಾನಮಾಡು ! ವ್ಯರ್ಥ ವಾದ ಮಾತುಗಳನ್ನಾಡಬೇಡ, ಈಗಲಾದರೂ ಈ ನನ್ನ ಬಾಣದ ರುಚಿಯನ್ನು ನೋಡು ! ಎಂದು ಮೂದಲಿಸಿ ಹೊಡೆದನು. ವೃಷಕೇತುವು ಆ ಬಾಣವನ್ನು ತನ್ನ ಅಸ್ತ್ರದಿಂದ ಖಂಡಿಸುತ್ತಿರುವಷ್ಟರಲ್ಲಿ ಬಭ್ರುವಾಹನನು ಕವಲಂಬುಗ ಳನ್ನು ಹೊಡೆದು ವೃಷಕೇತುವನ್ನು ಕಡಿದು ನೆಲಕ್ಕೆ ಉರುಳಿಸಿದನು. ಹೀಗೆ ಕವಲಂಬಿನಿಂದ ಕಡಿದುಬಿದ್ದ ತಲೆಯು, ಮುಕುಂದ, ಮಾಧವ, ಲಕ್ಷ್ಮೀರಮಣ, ಪಕ್ಷಿವಾಹನ, ನಾರಾಯಣ ! ಎಂದು ಪರಮಾತ್ಮನನ್ನು ಧ್ಯಾನಿಸುತ್ತ ಅರ್ಜು ನನ ಬಳಿಗೆ ಬಂದು ಬಿದ್ದಿತು. ಬಳಿಕ ಮುಂಡವು ರೋಷದಿಂದ ಬಭ್ರುವಾಹ ನನಮೇಲೆ ಬಿದ್ದು ಅವನನ್ನು ಹೊಡೆದು ಕಡವಿ ಸೇನಾಜನರನ್ನು ನಾಶಮಾಡಿ ಕಡೆಗೆ ಸತ್ತುಬಿದ್ದಿತು. ಆಗ ಅರ್ಜುನನು ವೃಷಕೇತುವಿನ ತಲೆಯನ್ನು ಕೈಗೆ ತೆಗೆದುಕೊಂಡು ಚೆನ್ನಾಗಿನೋಡಿ ಬಿಟ್ಟ ಕಣ್ಣುಗಳೂ, ಬಿಗಿದ ಹುಬ್ಬುಗಳೂ, ಚಂದ್ರನಂತಿರುವ ಮುಖದಲ್ಲಿ ಕದಡಿಹೋಗಿರುವ ತಿಲಕವೂ ಥಳಥಳಿಸುತ್ತಿರುವ ಕರ್ಣಪೂರಗಳೂ, ಕೆದರಿಹೋದ ಮುಂಗುರುಗಳೂ, ಆಗತಾನೆ ಹುಟ್ಟುತ್ತಿರುವ ಮರಿಮೀಸೆಗಳೂ, ಶುಭ್ರವಾದ ಹಲ್ಲುಗಳೂ, ನಸುನಗೆಯಿಂದಕೂಡಿದ ಮುಖವೂ ಇತರರನ್ನು ಕಳಕಳಿಸಿ ನಗುವಂತಿರಲು, ವೀರರಸದ ಮುದ್ದೆಯಂತೆ ಮುದ್ದಾದ ಆ ಮುಖವನ್ನು ಹಣೆಗೊತ್ತಿಕೊಂಡು ಕಣ್ಣೀರಿನಿಂದ ತೊಳೆದು ಸ್ನಾನಮಾಡಿಸಿ ಬಹುದುಃಖದಿಂದ ಅಳುತ್ತ ಹೀಗೆ ಪ್ರಲಾಪಿಸಿದನು.

ಅಪ್ಪಾ ! ಮಗು, ವೃಷಕೇತು ! ಶೂರನಾದ ನೀನು ಈ ಯುದ್ಧದಲ್ಲಿ ಹೇಗೆ ಮಡಿದೆ ? ನಿನ್ನ ಮರಣವು ಶ್ರೀಹರಿಗೆ ಪ್ರಿಯವಾಯಿತೆ ! ನಿನ್ನನ್ನು ಬಿಟ್ಟರೆ ಪಾಂಡವರಿಗೆ ಗತಿಕೊಡುವ ಮಕ್ಕಳಾರು ? ನಿನ್ನ ಮರಣವನ್ನು ಕೇಳಿದರೆ ಕುಂತಿಯು ಪ್ರಾಣವಿಂದಿರುವಳೆ ? ಅಜ್ಞಾನಿಗಳಾಗಿ ರಾಜ್ಯಲೋಭದಿಂದ ನಮಗೆ ಅಣ್ಣನಾದ ನಿಮ್ಮ ತಂದೆಯಾದ ಕರ್ಣನನ್ನು ಕೊಂದೆವು. ಈಗ ನೀನೊಬ್ಬನೇ ! ನಮಗೆ ಗತಿಗೊಡುವ ಮಗನೆಂದು ತಿಳಿದು ಬಹು ಮೋಹದಿಂದ ಸಾಕಿದೆವಲ್ಲಾ ! ಹಾ ! ಸುಪುತ್ರ ! ವೃಷಕೇತು ನಿನ್ನ ಹೊರತು ಪಾಂಡವರಿಗೆ ಬೇರೆ ಮಕ್ಕಳುಂಟೆ ? ಭಾರತಯುದ್ಧದಲ್ಲಿ ಮಗನಾದ ಅಭಿಮನ್ಯುವು ಸತ್ತನಲ್ಲಾ ! ನಿನ್ನನ್ನು ನೋಡಿ ಆ ದುಃಖವನ್ನು ಮರೆದು ನಿನ್ನನ್ನು ಸಲಹುತ್ತಿದ್ದರೆ ದೈವವು ಅದಕ್ಕೆ ಸೈರಿಸಲಾರದೆ ಬಾಳುಗೆಡಿಸತಲ್ಲಾ ! ಇನ್ನು ನಮಗೆ ಗತಿಯಾರು ! ನನ್ನೊಡನೆ ಬಂದು ಮಾತನ್ನಾದರೂ ಆಡು ಏಳು ಕುದುರೆಯನ್ನು ಬಿಡಿಸಿಕೊ, ಸೈನ್ಯದವರೊಂದಿಗೆ ಶೌರ್ಯದಿಂದ ಹೊಡೆದಾಡು, ಬೇಗಏಳು, ಎಷ್ಟು ಬೇಡಿಕೊಂಡರೂ ಕರುಣವಿಲ್ಲದೆ ಮೌನವಾಗಿರುವೆಯಲ್ಲಾ ! ಅಯ್ಯೋ ! ಪಾಪಿಯಾದ ನನ್ನೊಡನೆ ಮಾತಾಡಿದರೆ ಫಲವೇನು ? ನಾನೇನು ಮಾಡಲಿ ! ನಿನ್ನ ಗುಣಶೀಲಗಳನ್ನು ನೆನೆದು ಹಂಬಲಿಸುತ್ತಿರುವ ಧರ್ಮರಾಯನಿಗೆ ಏನುಹೇಳಲಿ ! ಆಹಾ ! ಮೂಗಿಲ್ಲದ ಮುಖವು ಲಿಂಗವಿಲ್ಲದ ಪೀಠದಂತೆ ಅಮಂಗಳಪ್ರದವಾಗುವಂತೆ ನೀನು ಹೋದಮೇಲೆ ಪಾಂಡವರ ಸಂಪತ್ತು ಉಳಿಯುವುದುಂಟೆ ? ನಿನ್ನ ಸಾಹಸದಿಂದ ಯೌವನಾಶ್ವ ಹಂಸಧ್ವಜಾದಿಗಳ ಸ್ನೇಹವುಂಟಾಯಿತು. ಶೂರನಾದ ನೀನು ನನ್ನನ್ನು ಏಕಾಂಗಿಯಾಗಿಮಾಡಿ ಹದ್ದುಕಾಗೆಗಳಿಗೆ ಮೈತೆತ್ತು ಬಿದ್ದುಕೊಂಡೆಯಾ ? ಈ ರಣರಂಗದಲ್ಲಿ ನಾನೊಬ್ಬನೇ ಏನುಮಾಡಲಿ ! ಎಂದು ಬಹುವಿಧವಾಗಿ ಹಂಬಲಿಸಿ ಹಲುಬುತ್ತ ಮೂರ್ಛಾಕ್ರಾಂತನಾಗಿ ಮರಳಿಎಚ್ಚತ್ತು ವೃಷಕೇತುವನ್ನು ನೋಡಿ ಗೋಳಾಡುತ್ತಿದ್ದನು.

ಅಷ್ಟುಹೊತ್ತಿಗೆ ವೃಷಕೇತುವಿನ ಮುಂಡದಿಂದ ಹೊಡೆಯಲ್ಪಟ್ಟು ಮೂರ್ಛೆಹೋಗಿದ್ದ ಬಭ್ರುವಾಹನನು ಚೇತರಿಸಿಕೊಂಡೆದ್ದು, ಪುತ್ರವಾತ್ಸಲ್ಯದಿಂದ ಪ್ರಲಾಪಿಸುತ್ತಿರುವ ಅರ್ಜುನನನ್ನು ನೋಡಿ ಅಯ್ಯಾ ! ನಾವು ಚಿತ್ರಾಂಗದೆಗೆ ವೈಶ್ಯನಿಂದ ಹುಟ್ಟಿದವರು ನಿನ್ನ ಸೇನೆಯ ಮಧ್ಯದಲ್ಲಿ ಬಾಣದ ಅಂಗಡಿಯನ್ನಿಟ್ಟು ಗೆಲುವೆಂಬ ಲಾಭವನ್ನು ಹೊಂದಿ, ತನಿವೀರರ ತಲೆಗಳನ್ನು ಆರಿಸಿಕೊಂಡೆವು. ಲೋಕೈಕವೀರರು ಬಂದುದರಿಂದ ಅವರ ಪ್ರಾಣಗಳಿಗೆ ಸಂಚಕಾರವನ್ನು ಕೊಟ್ಟೆವು. ಇನ್ನೂ ನಿನಗೆ ಬದುಕಬೇಕೆಂಬ ಇಷ್ಟವಿದ್ದರೆ ಹಿಂದಿರುಗು. ಇಲ್ಲದಿದ್ದರೆ ನಿನ್ನ ತಲೆಯನ್ನು ತೆಗೆದುಕೊಳ್ಳುವುದಕ್ಕೆ ಸಾಹಸವೆಂಬ ಹಣವನ್ನು ಸಂಗಡಿಸಿಕೊಂಡಿರುವೆನು. ವ್ಯರ್ಥಾಲಾಪದಿಂದ ಫಲವೇನು. ಈ ವೃಷ

ಕೇತುವು ಶೂರಾಗ್ರಗಣ್ಯನು. ಅವನ ತಲೆಯನ್ನು ಮಹಾದೇವನ ರುಂಡಮಾ ಲೆಯ ತೊಡವಿಗಾಗಿ ಒಪ್ಪಿಸು. ನಿನಗೆ ಪಾಶುಪತಾಸ್ತ್ರವನ್ನು ಕೊಟ್ಟು ಕಾಪಾಡಿದ ಕರುಣಾಮೂರ್ತಿಯನ್ನು ಮರೆಯಬಹುದೆ? ಎಲೈ ಮೂಢನೇ! ಬರಿಯ ಭ್ರಮೆಯಿಂದ ಫಲವೇನು? ಕುದುರೆ ಬೇಕಾದರೆ ಯುದ್ಧಕ್ಕೆನಿಲ್ಲು ಇಲ್ಲವಾದರೆ ತಲೆಯನ್ನು ಮರೆಸಿಕೊಂಡು ಹೊರಟುಹೋಗು ಎಂದನು. ಅದನ್ನು ಕೇಳಿ ಅರ್ಜುನನು ಕಣ್ಣುಗಳಿಂದ ಕೆಂಗಿಡಿಗಳನ್ನು ಸುರಿಸುತ್ತ ದುಃಖವನ್ನು ತೊರೆದು ವೃಷಕೇತುವಿನ ತಲೆಯನ್ನೊಂದೆಡೆಯಲ್ಲಿಟ್ಟು ಬಿಲ್ಲಿಗೆ ಬಾಣವನ್ನು ಹೂಡಿ, ಹೊಡೆದು ಬಭ್ರುವಾಹನನ ಸರ್ವಾಂಗದಲ್ಲಿಯೂ ಕೂರಲಗುಗಳನ್ನು ಕೆತ್ತಿದನು ಆಹಾ! ಬಹುಚೆನ್ನಾಯಿತು. ನಿನ್ನ ಬಾಣಗಳು ನನ್ನ ಮೈಭಾರವನ್ನು ಕಳೆದವು. ಇಂಥ ಹುಸಿಪೆಟ್ಟುಗಳಿಂದ ಫಲವೇನು? ಇಂದ್ರಕೀಲದಲ್ಲಿ ಈಶ್ವರನಿಂದಪಡೆದ ಪಾಶುಪತಾಸ್ತ್ರವನ್ನು ಈಗ ತೆಗೆದುಬಿಡು ಎಂದು ಬಭ್ರುವಾಹನನು ಬಾಣಗಳನ್ನು ಹೊಡೆದನು. ದೇವತೆಗಳು ಬೆರಗಾಗುವಂತೆ ಆ ಬಾಣಗಳು ಅಂತರಿಕ್ಷವನ್ನು ಮುಚ್ಚಿಕೊಂಡವು. ಆ ಬಾಣಗಳನ್ನು ತರಹರಿಸಿಕೊಂಡು ಅರ್ಜುನನು ಬಿರುಸರಳುಗಳನ್ನು ಹೊಡೆಯಲು ಒಂದೊಂದು ಬಾಣವು ಲಕ್ಷರೂಪವಾಗಿ ಶತ್ರುಸೇನೆಯನ್ನುಹೊಕ್ಕು ರಥತುರಗಪದಾತಿಗಳನ್ನು ಪಂಥದಿಂದ ಅಂತರಿಕ್ಷಕ್ಕೆ ಹಾರಿಸಿ ದಿಗಂತವನ್ನು ಸುತ್ತಿ ಶತ್ರುಸೇನೆಯನ್ನು ಮುತ್ತಿ, ವೀರರಬಲ್ಮೆಯನ್ನು ಕೆತ್ತಿ, ಕುಲಗಿರಿಗಳನ್ನು ಅಲ್ಲಾಡಿಸಿ, ಬಭ್ರುವಾಹನನ ಅಂಗೋಪಾಂಗಗಳನ್ನು ಕೊರೆದು ಬಲೆಯಂತೆ ಬಿಲಗಳನ್ನು ಮಾಡಿ, ರಕ್ತಧಾರೆಯಿಂದ ರಣರಂಗವನ್ನು ನೆನಸಿ, ಜನರನ್ನು ಮೂರ್ಛೆಗೊಳಿಸಿದವು. ಬಭ್ರುವಾಹನನು ಅರೆನಿಮಿಷಮಾತ್ರದಲ್ಲಿ ಆ ಮೂರ್ಛೆಯನ್ನು ತರಹರಿಸಿಕೊಂಡೆದ್ದು ಭೀಷ್ಮದ್ರೋಣರನ್ನು ಗೆಲ್ಲುವಬಲವು ಕೃಷ್ಣನಿಂದ ನಿನಗುಂಟಾಯಿತು. ಈಶ್ವರನನ್ನುಗೆದ್ದು ಜಗಜ್ಜೀತನೆಂಬ ಬಿರುದನ್ನು ಪಡೆದೆಯೆಂದು ಅರಿಯದ ಮೂಢರು ನಿನ್ನನ್ನು ಹೊಗಳುವರು. ನಿನ್ನ ಬಲ್ಮೆಯನ್ನು ಅರಿದುಕೊಂಡೆನು. ಇನ್ನು ಕ್ಷಣಮಾತ್ರದಲ್ಲಿ ನಿನ್ನನ್ನು ಗೆಲ್ಲದಿದ್ದರೆ ನಾನು ವೀರನೆ? ನೋಡು ಎಂದು ಬಾಣಗಳನ್ನು ಹೊಡೆಯಲು, ಮೇರೆದಪ್ಪಿದ ಸಮುದ್ರದಂತೆ ಬಾಣಗಳು ಅರ್ಜುನನ ಸೈನ್ಯವನ್ನು ಮುತ್ತಿಕೊಂಡವು. ವೀರರಾದ ಸೈನಿಕರು ಸತ್ತಡಗಿದರು. ಆನೆಕುದುರೆಗಳು ಏನಾದವೋ ಕಾಣೆ. ಆಕಾಶವೂ, ಲೋಕಚಕ್ಷುವೂ, ದಿಙ್ಮಂಡಲಗಳೂ, ಕಾಣದಂತೆ ಕಗ್ಗತ್ತಲೆಯು ಮುಚ್ಚಿಕೊಂಡಿತು. ರಕ್ತಧಾರೆಯು ಹರಿಯಿತು ಕೂರಾಳುಗಳ ಪ್ರಾಣಗಳು ಹರಿದು ಹೋದುವು. ಧ್ವಜಾಗ್ರದಲ್ಲಿನ ಹನುಮಂತನು ಚೀರಿ ಪಲ್ಗಿರಿದನು. ಅರ್ಜುನನೂ ನಡುಗಿ ಹೆದರಿದನು.

ಆಬಳಿಕ ತಂದೆಮಕ್ಕಳಿಬ್ಬರಿಗೂ ಅನ್ಯೋನ್ಯವಾದ ಕ್ಷಾತ್ರದಿಂದ ಯುದ್ಧವು ಕೈಗಟ್ಟಿತು. ಬಿರುಸರಳುಗಳಿಂದ ತುಂಬಿದ ವೈರಿಗಳು ಸಿಂಹದಂತೆ ಕಾಣುತ್ತಿದ್ದಿತು. ದೇಹಾಭ್ಯಂತಗಳಲ್ಲಿಯೂ ವ್ಯಾಪಿಸಿದ ಬಾಣಗಳಿಂದ ಕೂಡಿ ಕಾದಾಡುತ್ತಿರುವ ಅರ್ಜುನ ಬಭ್ರುವಾಹನರು ಚಿಗುರಿದ ಮುಳ್ಳುಮುತ್ತುಗದಂತೆ ಕಾಣಿಸುತ್ತಿದ್ದರು. ಎಲೈ ಜನಮೇಜಯರಾಯನೇ ಕೇಳು ಗಂಗಾಶಾಪದಿಂದ ಅರ್ಜುನಬಲವು ಕಡಿಮೆಯಾಗುತ್ತ ಬರುತ್ತಿರುವುದನ್ನು ನೋಡಿ ಬಭ್ರುವಾಹನನು ಎಲೈ ಅರ್ಜುನನೇ ! ನಿಷ್ಕಾರಣವಾಗಿ ಪತಿವ್ರತೆಯಾದ ಚಿತ್ರಾಂಗದೆಯನ್ನು ಹಳಿದಕಾರಣ ನಿನ್ನ ಬಲವು ಕುಂದಿಹೋಗುತ್ತಿದೆ ನೋಡು ! ಇನ್ನು ಛಲವನ್ನು ಬಿಟ್ಟು ಕೃಷ್ಣನನ್ನು ಧ್ಯಾನಿಸು ಕೃಷ್ಣನ ಸಾರಥ್ಯವಿಲ್ಲದೆ ನೀನು ಯಾರನ್ನು ಗೆದ್ದೆ ಹೇಳು ! ಭೂಲೋಭದಿಂದ ಅಣ್ಣನಾದ ಕರ್ಣನನ್ನು ಕೊಂದೆ. ಅವನ ಮಗನಿದ್ದರೇನಾಗುವುದೋ ಎಂದು ಅವನನ್ನು ನನ್ನ ಕೈಬಿಲ್ಲಿಗೆ ತುತ್ತುಮಾಡಿದೆ ! ಇನ್ನು ನಿನ್ನ ಹಗೆತೀರಿತು. ಇಗೋ ! ನಿನ್ನನ್ನು ಜೀವದಿಂದ ಬಿಟ್ಟರುವೆನು, ಕುದುರೆಯ ಹಂಬಲನ್ನು ಬಿಟ್ಟು ಹೊರಟುಹೋಗು. ಹಾಗೂ ಬಿಲ್ಲುಬಾಣಗಳಲ್ಲಿ ತಿರುಳಿದ್ದರೆ ಪರಮಾತ್ಮನನ್ನು ಹೃದಯಕಮಲದಲ್ಲಿ ಧ್ಯಾನಮಾಡು. ಇನ್ನು ಬಲವು ಹೆಚ್ಚುವುದು ಎಂದನು. ಅದನ್ನು ಕೇಳಿ ಅರ್ಜುನನು ಎಲೈ ಮೂರ್ಖಶಿಖಾಮಣಿಯೇ ! ಕ್ಷತ್ರಿಯರ ಪಂಥದಿಂದ ಕಾದಿ ಹಗೆಯನ್ನು ಗೆದ್ದರೇನು ? ಅವನ ಮಗನು ಸತ್ತರೆ ನಷ್ಟವೇನು ? ಆಹಾ ಯುದ್ಧದಲ್ಲಿ ಮೈಗುಂಡುವ ವೀರನೆ ನಾನು. ಇನ್ನು ನಿನ್ನ ಬಲ್ಮೆಯನ್ನು ನೋಡೋಣ ! ಎಂದು ಬಾಣಗಳನ್ನು ಹೊಡೆಯಲು ಅದನ್ನು ಮಧ್ಯಮಾರ್ಗದಲ್ಲಿ ಖಂಡಿಸುತ್ತ ಬಭ್ರುವಾಹನನು ಬೊಬ್ಬಿರಿದು ಎಲೈ ಮರುಳೇ ! ಶ್ರೀಕೃಷ್ಣಮೂರ್ತಿಯನ್ನು ಮರೆದಕಾರಣ ದ್ರೋಣನಿಂದುಪದೇಶವಾದ ಬಿಲುವಿದ್ಯೆಯೂ ಪರಮೇಶ್ವರನೇ ಮೊದಲಾದ ದೇವತೆಗಳು ಕೊಟ್ಟ ದಿವ್ಯಾಸ್ತ್ರಗಳೂ ವ್ಯರ್ಥವಾದುವು ಎಂದು ಜರಿದನು. ಕೂಡಲೆ ಫಲ್ಗುಣನು ಪಂಥವಿಮ್ಮಡಿಯಾಗಿ ಕೂರಲಗುಗಳನ್ನು ಹೊಡೆಯಲು ಗಂಗಾನದಿಯ ಶಾಪದಿಂದ ಬಾಣಗಳ ಸತ್ವವು ಕಡಿಮೆಯಾಗುತ್ತಬಂದಿತು. ಬಭ್ರುವಾಹನನು ರೋಷಭೀಷಣನಾಗಿ ಅರ್ಜುನನು ಬಿಟ್ಟ ಬಾಣಗಳನ್ನೆಲ್ಲ ಕಡಿದುಹಾಕಿ ಅಗ್ನಿಜ್ವಾಲೆಯನ್ನುಗುಳುತ್ತಿರುವ ಕಾಮರೂಪದ ಕ್ರೂರವಾದ ಬಾಣವನ್ನು ಹೊಡಿದನು. ಆಗ ದೇವತೆಗಳು ನಡುಗಿದರು. ಕುಲಗಿರಿಗಳು ಅಲ್ಲಾಡಿದವು. ಆದಿಶೇಷನು ತಲೆಗೊಡಹಿದನು. ಕೂರ್ಮನು ಕುಗ್ಗಿಹೋದನು. ಮೋಡಗಳು ಕೆನ್ನೀರನ್ನು ಸುರಿಸಿದವು. ಉಲ್ಕಾಪಾತಕಗಳು ರಿದವು. ಮರುಳುಬೆರೆದ ಸುಂಟರಗಾಳಿಯು ಬೀಸಿತು. ಆ ಬಾಣವನ್ನು ಹೊಡೆದಕೂಡಲೆ ಕರ್ಕಶವಾದ ಅಗ್ನಿಜ್ವಾಲೆಯು ದಶದಿಕ್ಕುಗಳನ್ನು ಸುತ್ತಿ

ಆವರಿಸಿಕೊಂಡಿತು. ಆದರ ಜ್ವಾಲೆಯನ್ನು ತರಹರಿಸಿಕೊಂಡು ಶ್ರೀಹರಿಯನ್ನು ಧ್ಯಾನಮಾಡುವಷ್ಟರಲ್ಲಿಯೇ ಭರದಿಂದ ಹಾರಿಬಂದು ಅರ್ಜುನನ ತಲೆಯನ್ನು ಕಡಿದುಹಾಕಿತು. ಆ ತಲೆಯು ಮಾಧವ ! ಮನುಸ್ವಾಮಿ ! ಕೇಶವ ! ಮುನಿಗಣ ಸ್ತುತ್ಯ ಎಂದು ಹೇಳುತ್ತ ವೃಷಕೇತುವಿನ ತಲೆಯಬಳಿಗೈದಿತು. ಮುಂಡವು ಪೌರುಷದಿಂದುರುಳಿಕೊಂಡುಹೋಗಿ ಆ ವೃಷಧ್ವಜನ ಮುಂಡವನ್ನು ಆಲಿಂಗಿಸಿ ಕೊಂಡಿತು. ಇಂತು ಮೂರುಲೋಕಗಳೂ ಮರುಗುವಂತೆ ಕಾರ್ತೀಕ ಶುದ್ಧ ಏಕಾದಶೀ ಮಂಗಳವಾರದಿನ ಸಾಯಂಕಾಲದ ಹೊತ್ತಿನಲ್ಲಿ ಅರ್ಜುನನ ತಲೆಯು ಕೃಷ್ಣಾ ಎಂದು ಭೂಮಿಗೆಬೀಳಲು ಬಭ್ರುವಾಹನನು ವಿಜಯೋತ್ಸವದಿಂದ ಕುದುರೆಯನ್ನು ಹೊಡೆದುಕೊಂಡು ಮಣಿಪುರಕ್ಕೆ ಬಂದನು.



ಉಲೂಪಿ. ಚಿತ್ರಾಂಗದೆ. ದಾದಿ.

ಆ ವಾರ್ತೆಯನ್ನು ಕೇಳಿ ದೂತಿಯರು ಚಿತ್ರಾಂಗದೆಯಬಳಿಗೆ ಹೋಗಿ ಅಮ್ಮಾ ! ನೀನು ಎಂಥ ಪುಣ್ಯಮಾಡಿ ಈಮಗನನ್ನು ಹೆತ್ತಿಯೋ ನಾವುಕಾಣೆವು ! ನಿನ್ನ ಪತಿಯಾದ ಅರ್ಜುನನನ್ನು ಯುದ್ಧದಲ್ಲಿ ಕೊಂದುರುಳಿಸಿ ಸಂತೋಷದಿಂದ ಬರುತ್ತಿರುವನು ನೋಡು ಎಂದು ಹೇಳಿದರು. ಆ ಮಾತನ್ನು ಕೇಳಿ ಪತಿಭಕ್ತಿ ಪರಾಯಣೆಯಾದ ಚಿತ್ರಾಂಗದೆಯು ಹಾ ! ಪ್ರಾಣಕಾಂತ ! ಹೋದೆಯಾ ! ಇನ್ನು ನಾನು ಕೆಟ್ಟೆನಲ್ಲಾ ! ಅಕಟಾ ! ನನ್ನ ಮೋಹನಾಂಗನೇ ಹೋದ ಮೇಲೆ ನಾನು ಹೇಗೆ ಬದುಕಿರಲಿ ! ಎಂದು ರೋದಿಸುತ್ತಿರಲು ಅವಳೊಡನೆ ಅಂತಃಪುರದ ಹೆಂಗಸರೆಲ್ಲರೂ ದುಃಖದಿಂದ ಅಳತೊಡಗಿದರು. ಅರಮನೆಯಲ್ಲಿ ಗೋಳಾಟವು ಬೇರೂರಿತು. ಆಗ ಅರಮನೆಯ ಬಾಗಿಲಿಗೆಬಂದು ಕೇರನಿಳಿದು

ಆರ್ತರಾಗಿ ರೋದಿಸುತ್ತಿರುವ ಜನರನ್ನು ಕಂಡು ಕಾರಣವೇನೆಂದು ವಿಚಾರಿಸಿ ಚಿಂತಾಕ್ರಾಂತನಾಗಿ ಅಂತಃಪುರಕ್ಕೆ ಹೋಗಿ ಬಸವಳಿದು ಬಿದ್ದಿರುವ ತಾಯನ್ನು ಕಂಡು ಅಮ್ಮಾ ಇದೇನು ! ಸಂತೋಷಕರವಾದ ನನ್ನ ಈ ವಿಜಯೋತ್ಸವದಲ್ಲಿ ನೀನು ಹೀಗೆ ರೋದಿಸಬಹುದೆ ? ಕಾಳಗದಲ್ಲಿ ಎದುರಾಗಿ ಬಂದರ ತಲೆಗಳನ್ನು ಕಡಿದು ಅರ್ಜುನನನ್ನು ಕೊಂದು ಬಂದಿರುವೆನು ನಿನ್ನ ದುಃಖವನ್ನು ಸಂತೈಸಿಕೊ ಎಂದು ಹೇಳಿದನು. ಅದನ್ನು ಕೇಳಿ ಚಿತ್ರಾಂಗದೆ ಅಪ್ಪಾಮಗನೆ ! ನೀನು ಬಹಳ ಒಳ್ಳೆಯಕೆಲಸವನ್ನು ಮಾಡಿದೆ ನಿನ್ನ ತಂದೆಯನ್ನು ಕೊಂದೆಯಾ! ನಿನ್ನ ಕೀರ್ತಿಯು ವಿಖ್ಯಾತವಾಯಿತೆ ? ಕೃಷ್ಣನ ಪ್ರಾಣಸಖನು ಸತ್ತನೇ ! ಧರ್ಮಾದಿಗಳು ಬದುಕಿರುವರೆ ? ಹೇಯವಾದ ನಿನ್ನ ಪೌರುಷವು ತಂದೆಯ ಕೊಲೆಗಾಯಿತೇ ? ಹೆತ್ತವಳ ಕಿವಿಯ ಓಲೆಗಳೂ, ಕೊರಲ ಮಾಂಗಲ್ಯವೂ, ಮಂಗಳಕರವಾದ ಅರಶಿನ, ಕುಂಕುಮ, ಗಂಧಮಾಲ್ಯಾದಿಗಳು, ಭಾರವಾಗಿದೆ ಎಂದು ಸೆರೆಬಿಡಿಸಿದೆಯಾ ! ಅಯ್ಯೋ ! ಸಾಕು ! ಸಾಕು !! ಮೊಮ್ಮಗನು ಸತ್ತುದನ್ನು ಕೇಳಿ ಕುಂತಿದೇವಿ ಬದುಕಬಲ್ಲಳೇ ! ತಮ್ಮನ ಮರಣವನ್ನು ಕೇಳಿದರೆ ಧರ್ಮರಾಯನು ಉಳಿಯುವನೆ ಮುಂದೆ ಏನುಮಾಡುವನೋ ಕಾಣೆ ! ವಿವೇಕಹೀನನಾಗಿ ನಮ್ಮ ಬಾಳನ್ನು ಹಾಳುಮಾಡಿದೆ ಎಂದು ಮನ ಮರುಗಿ ಮಗನನ್ನು ಬೈಯ್ಯುತ್ತಿರುವ ಚಿತ್ರಾಂಗದೆಯನ್ನು ಸಂತೈಸಿ, ಉಲೂಪಿಯು ಅಮ್ಮಾ ! ಸೈರಿಸು ಸೈರಿಸು ಅರ್ಜುನನು ಸತ್ತಿರುವುದು ಸುಳ್ಳು ನನಗೆ ಸಂದೇಹಕರವಾಗಿದೆ. ಅವನು ತೀರ್ಥಯಾತ್ರೆಗೆ ಬಂದಕಾಲದಲ್ಲಿ ತನ್ನ ಪ್ರಾಣದ ಕುರುಹಾಗಿ ಐದು ದಾಡಿ ಮದ ಸಸಿಗಳನ್ನುಕೊಟ್ಟು ಇದುಒಣಗಿದಂದುನನಗೆಮರಣ ಉಂಟಾಗುವದೆಂದು ಹೇಳಿದ್ದನು. ನಾನು ಆ ಸಸಿಗಳನ್ನು ಕ್ರಿಡಾವನದಲ್ಲಿ ಬೆಳೆಸಿರುವೆನು ಅದನ್ನು ನೋಡಿ ಬರುವೆನೆಂದು ಹೇಳಿ ಉದ್ಯಾನವನಕ್ಕೆ ಬಂದು ಕಾಳ್ಗಿಚ್ಚಿನಿಂದ ಬೆಂದುಹೋದ ಒಣಮರದಂತಿರುವ ಆ ದಾಳಿಂಬೆಯ ಮರಗಳನ್ನು ಕಂಡು ದುಃಖಾತುರೆಯಾಗಿ ಬಂದು, ಆಹಾ ! ಅರ್ಜುನನು ನಿಜವಾಗಿ ಸತ್ತಿರುವನು. ನಾವೂ ಅಲ್ಲಿಗೆಹೋಗಿ ನೋಡೋಣ ನಡೆ ಎಂದು ಹೇಳಿದಳು. ಕೂಡಲೆ ಶೋಕಾಗ್ನಿಸಂತಪ್ತೆಯರಾಗಿ ಸಕಲರೂ ಯುದ್ಧಭೂಮಿಗೆ ಬಂದು ಅರ್ಜುನ ವೃಷಧ್ವಜರ ರುಂಡಮುಂಡದ ಬಳಿಯಲ್ಲಿ ಬಿದ್ದು ಹೊರಳುತ್ತ ಅತ್ತು ಶೀತೋಷ್ಣ ಕಿರಣಗಳನ್ನು ತೊರೆದು ಆಕಾಶದಿಂದ ಭೂಮಿಗುರುಳಿದ ಸೂರ್ಯಚಂದ್ರರಂತೆ ಹೊಳೆಯುತ್ತಿರುವ ಅರ್ಜುನ ವೃಷಕೇತುಗಳನ್ನು ನೋಡಿ ಮರುಗಿ ಎಲೈ ಪ್ರಾಣಕಾಂತಾ ! ನಿನ್ನನ್ನು ಅಗಲಿದಕಾತುರದಿಂದ ವಿರಹವೇದನೆಯನ್ನು ಸಹಿಸಿಕೊಂಡು ತಪಿಸುತ್ತಿದ್ದೆವು. ಈಗಲಾದರೂ ಕೈವಿಡಿದು ಇನ್ನೊಂದುಸಲ ಅಕ್ಕರೆಯಿಂದ ತಕ್ಕೈಸಬಾರದೆ ? ಭೂಲೋಕದ ಗಂಡುಗಲಿಗಳಲ್ಲಿ ರೂಪ ಗುಣ

ಸಾಹಸಪ್ರೌಢಿಮೆಗಳಲ್ಲಿ ನಿನಗೆ ಸಮಾನರು ಯಾರು ? ಅಯ್ಯೋ ! ಕಲ್ಲೆದೆಯ ಮೂಳಿಯರು ನಾವಿನ್ನೂ ಬದುಕಿರುವೆವಲ್ಲಾ ! ನಿನ್ನ ಮರಣವನ್ನು ಸಹಿಸಿ ಕೊಂಡು ಕುಂತಿಯೂ, ಕಾಂತಾಮಣಿಯರಾದ ದ್ರೌಪದಿ ಸುಭದ್ರೆಯರೂ, ಹೇಗೆ ಬದುಕುವರು ಎಂದು ಪಾದಮೂಲದಲ್ಲಿ ಹೊರಳಾಡಿ ಮುಂಡವನ್ನಪ್ಪಿ ಕೊಂಡು ಕೈಗಳನ್ನೆತ್ತಿಕೊಂಡು ಕಡಿದುಬಿದ್ದಿದ್ದ ತಲೆಯನ್ನು ಕೊರಲಿಗಂಟಿಸಿ, ಮುಖವನ್ನು ಚುಂಬಿಸಿ, ಮುದ್ದಾಡಿಸಿ, ಮೋಹದಿಂದ ಬಿಗಿದಪ್ಪಿ ಸುಗುಣಗಳನ್ನು ವಿವರಿಸಿ ಹಲುಬುತ್ತ ಮಗ್ಗುಲಲ್ಲಿ ಬಿದ್ದಿರುವ ವೃಷಕೇತುವನ್ನು ಕಂಡು, ಹಾ ! ಪುತ್ರಾ ! ಪಿತೃವತ್ಸಲ ಎಂದು ಬಗೆಬಗೆಯಾಗಿ ಪ್ರಲಾಪಿಸಿದರು. ಬಳಿಕ ಚಿತ್ರಾಂಗದೆಯು ಮಗನ ಮುಖವನ್ನು ನೋಡಿ, ಅಯ್ಯಾ ! ತಂದೆಯನ್ನು ಕೊಂದೆಯಲ್ಲಾ ! ವಿರಹವೇದನೆಯಿಂದ ತಪಿಸುತ್ತಿರುವ ನಾವಿಬ್ಬರು ಉಳಿದು ಕೊಂಡಿರುವೆವು. ಪೂರ್ವದಲ್ಲಿ ಪರಶುರಾಮನು ತಾಯಿಯನ್ನು ಕಡಿದುಹಾಕಿ ದಂತೆ ನಿನ್ನ ಕೈಖಡ್ಗದಿಂದ ನಮ್ಮ ಕೊರಲನ್ನು ತರಿದುಹಾಕು ಬೆದರಬೇಡ ? ತಡಮಾಡದೆ ಸಂಹರಿಸು. ತಾಯಿತಂದೆ ದಾಯಾದರನ್ನು ಸದೆವುದು ನಿನಗೆ ಶುಭಕರವಾಗಿದೆಯಲ್ಲವೆ ಎಂದು ಹೇಳಿದಳು. ಆಗ ಬಭ್ರುವಾಹನನು ಅಮ್ಮಾ ! ಚಿಂತೆಯೇತಕ್ಕೆ ? ನನಗೆ ಸಾಸಿರಪಾಲು ದುಃಖವು ಹೆಚ್ಚಾಗಿದೆ ಮೊದಲು ತಂದೆ ಯೆಂಬ ಭಕ್ತಿಯಿಂದ ಕಾಲ್ಗೆರಗಿದಾಗ ನನ್ನನ್ನು ಬೈದು ನೂಕಿದಕಾರಣ ನಾನು ಪಂಥದಿಂದ ಪ್ರಾಣಗಳನ್ನು ಸೂರೆಗೊಂಡೆನು. ಮೀರಿಹೋದಮೇಲೆ ದುಃಖ ಪಟ್ಟು ಫಲವೇನು ? ಹೇಗೂ ಪಿತೃಘಾತಕನಾದ ನನ್ನ ಬಾಳು ಹೇಯವಾ ಯಿತು. ಆದುದರಿಂದ ನೀಚವಾದ ಈ ದೇಹವನ್ನು ಅಗ್ನಿಕುಂಡದಲ್ಲಿ ಹಾಕುವೆ ನೆಂದು ಚಿಂಕಿಯಲ್ಲಿ ಬೀಳಲು ಸಿದ್ಧನಾಗಿ ತಂದೆಯನ್ನುಕೊಂದು ತಾನು ಬಾಳಿದ ನೆಂಬ ಅಪವಾದವು ಬರುವುದು. ಅಲ್ಲದೆ ಲೋಕದಲ್ಲಿ ಮಂತ್ರತೀರ್ಥ ಜಪ ತಪ ದೇವತೆಗಳಲ್ಲಿ ಪಿತೃಹತ್ಯವನ್ನು ಹೋಗಲಾಡಿಸುವವನ್ನು ಕಾಣೆ ! ಆದುದ ರಿಂದ ವೈಷ್ಣವಬಂಧುವಾಗಿ ನನಗೆ ತಂದೆಯಾದ ಅರ್ಜುನನನ್ನು ಕೊಂದ ಪಾತ ಕವು ಮುಕುಂದಸ್ಮರಣೆಯಿಂದ ಅಗ್ನಿಪ್ರವೇಶ ಮಾಡಿದರೆ ಹೋಗುವುದು ಎಂದು ಅಗ್ನಿಪ್ರವೇಶವನ್ನು ನಿಶ್ಚಯಿಸಿ ಅಗರು ಚಂದನದ ಸೌದೆಗಳನೊಟ್ಟಿಸಿ ಚಿಂಕಿಯ ನ್ನು ಪುಟಮಾಡಿ ಬೀಳಲು ಉದ್ಯುಕ್ತನಾದನು. ಆಗ ಎಲೈಮಾಧನೆ! ಅರ್ಜುನನ ಜೀವಕ್ಕೆ ಹೊಣೆಗಾರನಾಗಿ, ಪಾಂಡವಪ್ರಾಣನಾದ ಶ್ರೀಕೃಷ್ಣನು ತನ್ನ ಭಾವ ಮೈದುನನನ್ನು ಬದುಕಿಸುವುದಕ್ಕಾಗಿ ಎಂದಿಗೂ ಬಾರದೆ ಸುಮ್ಮನಿರಲಾರನು. ಆದುದರಿಂದ ದೇವಪುರನಿಲಯ ಲಕ್ಷ್ಮೀರಮಣನು ಬೈದೋರುವ ವರೆಗೂ ಸುಮ್ಮ ನಿರು ಎಂದು ಚಿತ್ರಾಂಗದೆಯು ತನ್ನ ಮಗನನ್ನು ಬೈದು ಗದರಿದಳೆಂಬಲ್ಲಿಗೆ- ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕ

ಮಧುಕ ರಾಯವರಾನ ಕಲ್ಯಾಣಪುರೀನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿ ಭಾರತ ಕಥಾಸಂಗ್ರಹದಲ್ಲಿ ಇಪ್ಪತ್ತಮೂರನೆಯಸಂಧಿ ಸಂಪೂರ್ಣಂ

ಶ್ರೀ. ಶ್ರೀ. ಶ್ರೀ.



# ಇಪ್ಪತ್ತನಾಲ್ಕನೆಯ ಸಂಧಿ.

### ಸಂಜೀವಕದ ಮಣಿಯಿಂದಲೂ ಕೃಷ್ಣಪ್ರಸಾದದಿಂದಲೂ ಸತ್ತುಹೋದ ಅರ್ಜುನಾದಿಗಳು ಬದುಕಿದುದು.

ಎಲೈ ಜನಮೇಜಯರಾಯನೇ ಕೇಳು. ಹಿಂದೆ ಹೇಳಿದಂತೆ ಚಿತ್ರಾಂಗದೆಯು ಅಗ್ನಿಕುಂಡದಲ್ಲಿ ಬೀಳುತ್ತಿದ್ದ ಮಗನನ್ನು ಶ್ರೀಕೃಷ್ಣನು ಬರುವವರೆಗೂ ಸೈರಿಸೆಂದು ತಡೆದು ಹಂಬಲಿಸುತ್ತಿರಲು, ಸಾಗರರಾಜನ ಮಗಳಾದ ಉಲೂಪಿಯು ಒಂದು ಉಪಾಯವನ್ನು ಯೋಚಿಸಿ ಹೀಗೆ ಹೇಳಿದಳು. ಎಲೈ ಬಭ್ರುವಾಹನನೇ ! ಸತ್ತುಬಿದ್ದಿರುವ ಅರ್ಜುನನು ಬದುಕುವ ಉಪಾಯವನ್ನು ಹೇಳುವೆನು ಕೇಳು. ಗರುಡನಿಂದ ಕೊಲ್ಲಲ್ಪಟ್ಟ ಸರ್ಪಗಳನ್ನು ಬದುಕಿಸುವುದಕ್ಕಾಗಿ ಪಾತಾಳಲೋಕಕ್ಕೆ ದೊರೆಯಾದ ವಾಸುಕಿಯಿಂದ ಪ್ರಾರ್ಥಿತನಾಗಿ ಪರಮೇಶ್ವರನು ಅವನಿಗೆ ಮೃತಸಂಜೀವಕಮಣಿಯನ್ನು ಕೊಟ್ಟಿರುವನು. ಆ ಮಣಿಯು ಪಾತಾಳಲೋಕದಲ್ಲಿ ಆದಿಶೇಷನ ವಶದಲ್ಲಿದೆ ಅದನ್ನು ನೀನು ಶೌರ್ಯ

ದಿಂದ ತರಬಲ್ಲವನಾದರೆ ಈಗ ಸತ್ತುಬಿದ್ದಿರುವವರೆಲ್ಲರೂ ಎದ್ದು ಕುಳಿತುಕೊಳ್ಳು ವರು ಎಂದಳು. ಅದನ್ನು ಕೇಳಿ ಬಭ್ರುವಾಹನನು ಅಮ್ಮಾ! ಸಮಯಕ್ಕೆ ಸರಿಯಾದ ಯೋಚನೆಯನ್ನು ಹೇಳಿದೆ! ಆ ಸಂಜೀವಕದ ಮಣಿಯನ್ನು ತಂದು ತಂದೆಯಾದ ಅರ್ಜುನನ ಪ್ರಾಣವನ್ನು ಬದುಕಿಸುವೆನು. ಹಾಗಲ್ಲದೆಹೋದರೆ ನಾನು ಮಗನಾಗಿ ಹುಟ್ಟಿ ಫಲವೇನು? ಆ ಮಣಿಯನ್ನು ಕೊಡಲು ಆದಿಶೇ ಷನು ಅಡ್ಡಿಯಾದರೆ ಪಾತಾಳಲೋಕವನ್ನೆ ಸುಟ್ಟುಬಿಡುವೆನು. ಅವನಿಗೆ ಸಹಾ ಯಕರಾಗಿ ಬ್ರಹ್ಮ ವಿಷ್ಣು ಮಹೇಶ್ವರಾದಿಗಳು ಬಂದರೂ ಅವರನ್ನೂ ಭಂಜಿಸಿ ನೂಕುವೆನು, ಮುನಿಮುನಿಂದರೆ ದಿಕ್ಪಾಲಕರನ್ನು ಸೊಪ್ಪಾಗಿ ಮಾಡುವೆನು. ನಾನು ಮಗನಾದುದಕ್ಕೆ ಸಾರ್ಥಕವಾಯಿತು. ಒಳ್ಳೆಯ ಯೋಚನೆಯನ್ನು ಹೇಳಿದೆ ಎಂದು ಸಂತೋಷದಿಂದ ಬಭ್ರುವಾಹನನು ಉಬ್ಬುತ್ತಿರಲು ಉಲೂ ಪಿಯು ಅಪ್ಪಾ! ಮಗನೇ! ನಿನ್ನ ಶಕ್ತಿ ಸಾಮರ್ಥ್ಯಗಳೊಂದೂ ಅಲ್ಲಿ ನಡೆಯು ವುದಿಲ್ಲ. ನೋಡಿದಕೂಡಲೆ ವಿಷಜ್ವಾಲೆಯಿಂದ ಕಣ್ಣುರೆಪ್ಪೆಗಳು ಸೀದುಹೋ ಗುವುವು, ಆದಿಶೇಷನ ಭಂಡಾರದಲ್ಲಿ ಭದ್ರವಾಗಿರುವ ಆ ಸಂಜೀವಕದ ಮಣಿಗೆ ಗುಳಿಕ, ವಾಸುಕಿ, ತಕ್ಷಕ, ಶಂಖ, ಪದ್ಮ, ಕರ್ಕೋಟಕಾದಿಗಳ ಕಾವಲು ಬಲ ವಾಗಿದೆ. ಹೀಗಿರುವಲ್ಲಿ ಆ ಮಣಿಯನ್ನು ತರಬಲ್ಲ ವೀರನು ಲೋಕದಲ್ಲಿರುವನೆ ಎನಲು ಅಮ್ಮಾ ನಮ್ಮ ಮಾತಾಮಹನಾದ ಆದಿಶೇಷನಿಗೆ ನೋವಾಗುವುದೆಂಬ ಭಯವಂದಲ್ಲದೆ ನಾನು ಆ ವಾಸುಕಿಗೀಸುಕಿಗಳ ವಿಷಗಳಿಗೆ ಹೆದರುವೆನೆ? ಅವರು ಕೊಡದಿದ್ದರೆ ಸಪ್ತಪಾತಾಳಗಳನ್ನು ಭೇದಿಸಿ ರತ್ನವನ್ನು ತಂದು ತಂದೆ ಯನ್ನು ಬದುಕಿಸುವೆನು ನನ್ನ ಪರಾಕ್ರಮವನ್ನು ನೋಡು ಎಂದನು, ಬಳಿಕ ಉಲೂಪಿ ಅಪ್ಪಾ ಮಗು ಒಂದು ಮೊದಲಾಗಿ ಒಂಭತ್ತರಿಂದ ನೂರರವರೆಗೂ ಹೆಡೆಗಳುಳ್ಳ ಸರ್ಪಗಳು, ಸಾಸಿರಮೊಗದೆದ ವಾಸುಕಿಯನ್ನು ಸೇವಿಸುತ್ತಿರುವರು. ಅವರ ವಿಷಜ್ವಾಲೆಯನ್ನು ಸಹಿಸುವುದು ಶಾಂತಿಮೂರ್ತಿಯಾದ ಶಿವನಿಗೂ ಅಸದಳವಾಗಿರುವುದು. ಒಂದೊಂದುವೇಳೆ ಗರುಡನು ಪಾತಾಳಕ್ಕೆ ಬಂದು ಕೊಂದ ಸರ್ಪಸಂಕುಲವನ್ನು ಬದುಕಿಸುವಾಗ್ಗೆಮಾತ್ರ ಆ ರತ್ನವನ್ನು ಹೊರಕ್ಕೆ ತೆಗೆಯುವರೆ ಹೊರತು ಉಳಿದ ಕಾಲದಲ್ಲಿ ಅದನ್ನು ಈಚೆಗೆ ತೆಗೆಯುವದಿಲ್ಲ ಅಂಥ ಮಣಿಯನ್ನು ನೀನು ಹೇಗೆ ತರಬಲ್ಲೆ ಎಂದು ಕೇಳಿದಳು. ಆಗ ಬಭ್ರು ವಾಹನನು ಅಮ್ಮಾ! ಇದಕ್ಕೆ ಯೋಚನೆ ಏಕೆ, ಪಾತಾಳದಲ್ಲಿನ ಹಾವುಗಳನ್ನು ಹಲ್ಲಣಿಸಿ ಹಣಿದವಾಡಿ ಆ ಸಂಜೀವಕದ ಮಣಿಯನ್ನು ತಂದು, ಸತ್ತುಬಿದ್ದಿರುವ ಸೇನೆಯನ್ನೂ, ಅರ್ಜುನ ವೃಷಕೇತುಗಳನ್ನೂ, ಬದುಕಿಸಿದಮೇಲೆ ವಸ್ತುವೆ ವಿಾಸಲಾಗಿ ಅದನ್ನು ತೆಗೆದುಕೊಂಡು ಹೋಗಿ ಸರ್ಪರಾಜನಿಗೆ ನೆರವಾಗಿ ಕೊಡುವೆನು ಎಂದನು. ಉಲೂಪಿಯು ಆ ವಾಕ್ಯವನ್ನು ಕೇಳಿ ಎಲೈ ಮಗನೇ!

ಕೇಳು, ಅನ್ಯರಲ್ಲಿರುವ ವಸ್ತುವನ್ನು ವಿನಯದಿಂದ ತಂದರೆ ಸುಗುಣಸಂತೋಷ ಗಳುಂಟಾಗುವುವು. ಹಾಗಲ್ಲದೆ ಶೌರ್ಯದಿಂದ ತಂದರೆ ಮಹತ್ತರವಾದ ತೊಂದರೆಯುಂಟಾಗುವುದು. ಆದಕಾರಣ ನೀನು ದುಃಖಿಸಬೇಡ. ಪಾತಾಳಲೋಕದಲ್ಲಿರುವ ಪುಂಡರೀಕನಲ್ಲಿ ನನಗೆ ವಿಶ್ವಾಸವಿದೆ ಅವನು ನನಗೆ ಅನುಕೂಲನಾಗಿರುವನು ಆತನಿಂದ ಈ ಕಾರ್ಯವನ್ನು ಸಾಧಿಸಬಹುದೆಂದು ಧ್ಯಾನಮಾಡಲು ಕೂಡಲೆ ಪುಂಡರೀಕನು ಪ್ರತ್ಯಕ್ಷನಾಗಿ ನನ್ನನ್ನು ಕರೆಸಿದಕಾರಣವೇನು ಎಂದು ಕೇಳಿದನು. ಆಗ ಉಲೂಪಿಯು ಎಲೈ ವತ್ಸಲಾನ್ವಿತನೇ ! ನೀನು ಆದಿಶೇಷನ ಬಳಿಗೆ ಹೋಗಿ ನಿನ್ನ ಮಗಳ ಓಲೆಭಾಗ್ಯವನ್ನು ಉಳಿಸುವುದಕ್ಕೂ, ಮಡಿದುಬಿದ್ದಿರುವ ಅರ್ಜುನನು ಬದುಕುವುದಕ್ಕೂ ಅಮೃತಸಂಜೀವಕದ ಮಣಿಯನ್ನು ಕೊಡಬೇಕೆಂದು ಕೇಳಿ ಸ್ವಲ್ಪವೂ ವ್ಯತ್ಯಾಸವಿಲ್ಲದಂತೆ ಇಲ್ಲಿನ ವರ್ತಮಾನವನ್ನು ತಿಳುಹಿಸಿ ಮಣಿಯನ್ನು ತೆಗೆದುಕೊಂಡು ಬಾ ! ಎಂದು ಹೇಳಿದಳು. ಬಳಿಕ ದುಃಖಾರ್ತೆಯಾದ ಉಲೂಪಿಯನ್ನು ಸಂತೈಸಿ ಸತ್ತೊರಗಿದ ವೃಷಕೇತು ಅರ್ಜುನಾದಿಗಳ ದೇಹವು ಕೊಳೆಯದಂತೆ ಕಚ್ಚಿ ವಿಷವೇರುವಂತೆಮಾಡಿ, ಆ ರುಂಡಮುಂಡಗಳನ್ನು ಎಚ್ಚರಿಕೆಯಾಗಿ ಕಾದುಕೊಂಡಿರುವಂತೆ ಎಚ್ಚರಿಸಿ, ಬಭ್ರುವಾಹನನೊಡನೆ ಸ್ನೇಹವಂಬೆಳಸಿ ಸಂತೋಷದಿಂದ ಹೊರಟು ಅತಲ, ವಿತಲ, ಸುತಲ, ತಲಾತಲ, ರಸಾತಲ, ಪಾತಾಳಗಳೆಂಬ ಏಳುಲೋಕಗಳ ಆಶ್ಚರ್ಯವನ್ನು ನೋಡುತ್ತ ಪುಂಡರೀಕನು ಆದಿಶೇಷನಬಳಿಗೆ ಬಂದು ಸೇರಿದನು.

ಎಲ್ಲಿನೋಡಿದರೂ ಫಲಪುಷ್ಪಭರಿತವಾದ ಪೊಂಬಳ್ಳಿ ಮಿಸುನಿಮರಂಗಳಿಂದೊಪ್ಪುವ ಉದ್ಯಾನಗಳಿಂದಲೂ, ರಮ್ಯವಾದ ನವರತ್ನರಾಜಿಗಳಿಂದ ಶೋಭಿಸುವ ಮೇಲುಪ್ಪರಿಗೆಯ ಮನೆಗಳಿಂದಲೂ, ಅಮೃತಸದೃಶವಾದ ಜಲವನ್ನು ತುಂಬಿಕೊಂಡಿರುವ ವಾಪೀಕೂಪತಟಾಕಾದಿಗಳಿಂದಲೂ, ಪೊಂದಾವರೆಯಿಂದ ಕೂಡಿದ ತಿಳಿಗೊಳಗಳಿಂದಲೂ, ಮನೋಹರವಾದ ಲಾವಣ್ಯರಾಶಿಯಿಂದೊಪ್ಪುತ್ತಿರುವ ನಾಗಕನ್ನಿಕೆಯರ ಭೋಗಂಗದ ಬೆಡಗಿನಿಂದಲೂ, ಭೋಗವತಿಯ ಭಾಗ್ಯನಿಧಿಯನ್ನೊಳಕೊಂಡ ಆನಂದದಿಕ್ಕೆಯೆನಿಸಿರ್ದ ಆ ಪಾತಾಳ ಲೋಕದಲ್ಲಿ ರತ್ನಖಚಿತವಾದ ಗೋಪುರದಿಂದೊಪ್ಪುವ ದಿವ್ಯಭವನದಲ್ಲಿ ನಾಗಕನ್ನಿಕೆಯರ ನೃತ್ತಗೀತ ವಾದ್ಯಗಳಿಂದ ಶೋಭಾಯಮಾನವಾಗಿ, ಪುರವನೋದ್ಯಾನಗಳನ್ನು ಭರಿಸಿಕೊಂಡಿರುವ ದಿವ್ಯಪರಿಮಳ ಗಂಧೋತ್ಕರದಿಂದ ಕಣ್ಮನಂಗಳಿಗೆ ಸೊಂಪಾಗಿ ಬಗೆಬಗೆಯಾದ ಪೂಜೋಪಚಾರಗಳ ವೈಭವದಿಂದ ರಾಜಿಸುತ್ತಿರುವ ಮಹಾಹಾಟಕೇಶ್ವರ ದೇವಾಲಯವನ್ನು ಭೋಗವತಿಯತೀರದಲ್ಲಿ ಕಂಡು ಮಹೇಶ್ವರನಿಗೆ ಮಣಿದೆರಗಿ, ಸಕಲ ಸುರಾಸುರ ಸಮೂಹದಿಂದ ಓಲೈಸಿಕೊಂಬವನಾಗಿ, ತನ್ನನ್ನು ಬಳಸಿರುವ ಸರ್ಪಗಳ ಮತ್ತು ಸ್ವಕೀಯವಾದ ಫಣಾಮಣಿಗಳ ಕಾಂತಿ

ಯಿಂದಲೂ, ದೇಹಚ್ಛಾಯೆಯಿಂದಲೂ ದೇದೀಪ್ಯಮಾನನಾಗಿ, ನಿಶ್ಚಲವಾದ ಭಕ್ತಿಯಿಂದ ಅಚ್ಯುತನನ್ನು ಧ್ಯಾನಿಸುತ್ತ, ತನ್ನ ಕರ್ತವ್ಯವೆಂದರಿತು ಭೂಭಾರವನ್ನು ವಹಿಸಿ ಅನರ್ಘ್ಯವಾದ ರತ್ನಧನಕನಕಂಗಳ ನಿಧಿಗೆ ಅಧಿಪತಿಯಾಗಿ ಸರ್ಪರಾಜ್ಯದ ಸಿಂಹಾಸನದಲ್ಲಿ ಮಂಡಿಸಿರುವ ಆದಿಶೇಷನನ್ನು ಕಾಣಲು ಸಮಯವನ್ನು ನೋಡಿ, ಓಲಗವನ್ನು ಒಳಹೊಕ್ಕು ನಮಸ್ಕರಿಸಿ ಎಲೈ ಫಣಿರಾಜನೇ! ಕೇಳು. ಭೂಲೋಕದಲ್ಲಿದ್ದ ಪಾಂಡುಪುತ್ರರಿಗೆ ರಾಜ್ಯನಿಮಿತ್ತವಾಗಿ ದಾಯಾದರಾದ ಕೌರವರೊಡನೆ ಕಲಹ ಉಂಟಾಯಿತು ಆ ಕಲಹದಲ್ಲಿ ಗುರುಗಾಂಗೇಯಾದಿಗಳನ್ನೂ ಉಳಿದ ಬಂಧುಬಳಗದವರನ್ನೂ ಕೊಂದಕಾರಣ ತನಗೆ ಬಂದ ಬ್ರಹ್ಮಹತ್ಯವನ್ನು ಹೋಗಲಾಡಿಸಿಕೊಳ್ಳಲು ಧರ್ಮರಾಯನು ಶ್ರೀಕೃಷ್ಣನ ಅಪ್ಪಣೆಪಡೆದು ಅಶ್ವಮೇಧಯಾಗಮಾಡಲು ಉಪಕ್ರಮಿಸಿದನು.

ಬಳಿಕ ಮಗನಿಂದ ಮರಣ ಉಂಟಾಗುವಂತೆ ಅರ್ಜುನನಿಗೆ ಗಂಗೆಯಿಂದ ಶಾಪವುಂಟಾಯಿತು. ತನ್ನಿಮಿತ್ತವಾಗಿ ಬಭ್ರುವಾಹನನು ಕುದುರೆಯೊಡನೆ ಮಣಿಪುರಕ್ಕೆಬಂದ ಅರ್ಜುನನನ್ನು ಯುದ್ಧದಲ್ಲಿ ಕೊಂದು ಕೆಡಹಿದನು. ಆದುದರಿಂದ ನಿನ್ನ ಮಗಳಾದ ಉಲೂಪಿಗೆ ವೈಧವ್ಯ ಪ್ರಾಪ್ತವಾಯಿತು. ಅವಳು ಪತಿಶೋಕವನ್ನು ತಾಳಲಾರದೆ ಹಂಬಲಿಸಿ, ತನ್ನ ಗಂಡನನ್ನು ಬದುಕಿಸಿಕೊಳ್ಳುವುದಕ್ಕಾಗಿ ನಿನ್ನಬಳಿಯಲ್ಲಿರುವ ಸಂಜೀವಕದಮಣಿಯನ್ನು ತರಬೇಕೆಂದು ಹೇಳಿ ಈ ಕುರುಪನ್ನು ಕೊಟ್ಟು ನನ್ನನ್ನು ಕಳುಹಿಸಿದಳು ಎಂದು ಹೇಳಿ ಕರ್ಣಪೂರಗಳನ್ನು ನಾಗರಾಜನಿಗೆ ಕೊಟ್ಟು ಅಯ್ಯಾ! ನಿನಗೆ ಅಳಿಯನೂ, ಸಜ್ಜನಶಿರೋಮಣಿಯೂ, ಹರಿಭಕ್ತನೂ, ಇಂದ್ರಪುತ್ರನೂ, ಧರ್ಮಾನುಜನೂ ಆಗಿ ಲೋಕೈಕವೀರರಲ್ಲಿ ಅಗ್ಗಳೆಯನಾದ ಅರ್ಜುನನನ್ನು ಬದುಕಿಸುವುದಕ್ಕಾಗಿ ಸಂಜೀವಕದ ಮಣಿಯನ್ನು ಕೊಡು! ಪರೋಪಕಾರಬುದ್ಧಿಯು ಎಂದಿಗೂ ಕೇಡನ್ನುಂಟುಮಾಡದು ಎಂದು ಹೇಳಿದನು. ಅದನ್ನು ಕೇಳಿ ಆದಿಶೇಷನು ಸುಮ್ಮಾನದಿಂದ ತನ್ನಿಜಬಲಗಳಲ್ಲಿರುವ ತಕ್ಷಕಾದಿಗಳನ್ನು ನೋಡಿ, ಅಯ್ಯಾ! ವಿಷ್ಣುಭಕ್ತನಾಗಿ ನನಗೆ ಅಳಿಯನಾಗಿರುವ ಅರ್ಜುನನು ಜೀವಿಸುವುದಕ್ಕಾಗಿ ಸಂಜೀವಕದ ಮಣಿಯನ್ನು ಕೊಟ್ಟರೆ ತಪ್ಪೇನು? ಏಕೆ ಕೊಡಬಾರದು ಎಂದು ಕೇಳಿದನು. ಆ ಮಾತನ್ನು ಕೇಳಿದಕೂಡಲೆ ಸಕಲ ಸರ್ಪಮಂಡಲಿಯು ದುಃಖದಿಂದ ಶೋಕಿಸುತ್ತಿರಲು ಧೃತರಾಷ್ಟ್ರನು ಎದ್ದುನಿಂತು ಮುಂದೆ ಬಂದು ಕೈಮುಗಿದು, ಅಯ್ಯಾ! ತನ್ನ ಸಮಯಕ್ಕೊದಗುವ ಸದ್ವಸ್ತುವನ್ನು ಅನ್ಯರಿಗೆ ಕೊಟ್ಟರೆ ಹಿಂದಿರುಗಿ ಬರಲಾರದು. ಮಾಡಿದುಪಕಾರವನ್ನು ಮರೆವುದರಲ್ಲಿಯೂ, ಮರೆಮೋಸದಿಂದ ಕೊರಲಕುಯ್ಯುವುದರಲ್ಲಿಯೂ ಖಳತನದಲ್ಲಿಯೂ ಮಾನವರು ಜಾಣರಲ್ಲವೆ? ಸುಮ್ಮನೆ ವ್ಯರ್ಥವಾದ ಆಲೋಚನೆಯಿಂದ ಕೆಡಬೇಡ.

ಸಂಜೀವಕದಮಣಿಯನ್ನು ಕೊಡುವ ಯೋಚನೆಯನ್ನು ಸ್ವಪ್ನದಲ್ಲಿಯೂ ಮಾಡ
ಬೇಡ ಸುಮ್ಮನಿರು ಎಂದು ಹೇಳಿದನು.

ಎಲೈ ಧರ್ಮಹೀನನಾದ ಧೃತರಾಷ್ಟ್ರನೆ ದೇಶದೇಶದಲ್ಲಿಯೂ ಊರೂ
ರುಗಳಲ್ಲಿಯೂ ಮನೆಮನೆಯಲ್ಲಿಯೂ ಪರಪೀಡೆಗೆ ಹೆದರದೆ ವಕ್ರಗತಿಯಿಂದ
ನಡೆಯುವ ಕಡುಗೇಡಿಗರಾದ ನಿನ್ನಂಥವರು ಒಬ್ಬೊಬ್ಬರಿರುವರು. ಲೋಕದಲ್ಲಿ
ಅಯ್ಯೋ ! ತನ್ನಲ್ಲಿರುವ ವಸ್ತುವನ್ನು ಕಂಡು ದುಃಖಾರ್ತರಾಗಿ ಬಂದು ಬೇಡಿ
ದರೆ ಕೊಡದವನು ದೊಡ್ಡವನೆ ? ಅಂತಪ್ಪವರನ್ನು ನಾಯಿಗೆಚ್ಚಲಿನ ಹಾಲಿ
ಗಿಂತಲೂ ಕಡೆಯೆಂದು ಹೇಳುವರು. ಅಕಟಕಟಾ ! ಪರೋಪಕಾರನಿರತರಾದ
ದಧೀಚಿ ವಾಮನ ಮೊದಲಾದವರು ಮಾಡಿದ ದಾನವು ಕೆಟ್ಟುದೆ ? ನಿಜವಾಗಿ
ನಾನು ಮಣಿಯನ್ನು ಕೊಟ್ಟೇಕೊಡುವೆನು ಎಂದು ಹೇಳಲು ಆ ಮಾತುಗಳನ್ನು
ಕೇಳಿ ಧೃತರಾಷ್ಟ್ರನು ಸಂಜೀವಕದಮಣಿಯನ್ನು ಕೊಟ್ಟುಬಿಟ್ಟರೆ ನೀನು
ಹೇಳಿದಂತೆ ನಮಗೆಂದಿಗೂ ಪುರುಷಾರ್ಥಗಳು ಲಭಿಸಲಾರವು. ನಾಗಲೋಕದ
ಲ್ಲಿರುವ ಭೋಗಿಗಳ ಭಾಗ್ಯವು ಹಾಳಾಗುವುದು. ಮತಂಗಋಷಿಯ ಶಾಪದಿಂದ
ಗರುಡನು ಈಗ ಪಾತಾಳಲೋಕಕ್ಕೆ ಬಾರದೆ ಇದ್ದರೂ ಭೂಲೋಕಕ್ಕೆ ಸಂಜೀ
ವಕದ ಮಣಿಯು ಬಂದರೆ ಸುಮ್ಮನಿರುವನೆ ? ಮನುಷ್ಯರಿಗಿರುವ ಆಯುಸ್ಸೂ
ಅತ್ಯಲ್ಪವಾದುದು. ಈಗ ಬದುಕಿದರೂ ಅರ್ಜುನನು ಇನ್ನೊಂದುದಿನ ಸತ್ತು
ಸಾಯಬೇಕು. ಹಾಗಲ್ಲದೆ ಶಾಶ್ವತವಾದ ಬಾಳ್ಕೆಯನ್ನು ಈ ಮಣಿಯಿಂದೆಂ
ದಿಗೂ ಹೊಂದಲಾರನು. ಆದಕಾರಣ ಸರ್ವಥಾ ಸಂಜೀವಕದಮಣಿಯನ್ನು
ಕೊಡಕೂಡದು. ನಾವು ಮಣಿಯನ್ನು ಕೊಡದೆಹೋದರೆ ಅರ್ಜುನನಿಗೆ ಪ್ರಾಣ
ನಷ್ಟವಾಗುವುದಿಲ್ಲ ? ಶ್ರೀಕೃಷ್ಣನು ಪಾಂಡವಪ್ರಾಣನಲ್ಲವೆ ? ಲೋಕವರಿ
ಯುವಂತೆ ಭಕ್ತವತ್ಸಲನಾದ ಶ್ರೀಹರಿಯು ಕರುಣಸಂಜೀಕನಾಗಿರುವಾಗ ಈ
ನಿನ್ನ ಶಿಲಾರತ್ನದ ಹಂಗಿನಿಂದೇನು ? ರತ್ನವನ್ನು ಕೊಟ್ಟು ಅನ್ಯಾಯವಾಗಿ
ಕೆಟ್ಟುಹೋಗಬೇಡ ಆಹಾ ! ಚೆನ್ನಾಗಿ ಹೇಳಿದೆ. ಹೇಗಾದರೂ ಅರ್ಜುನನು
ಶ್ರೀಕೃಷ್ಣನ ಕಟಾಕ್ಷದಿಂದ ಬದುಕದೆ ಇರಲಾರನು. ವ್ಯರ್ಥವಾಗಿ ಮಣಿಯನ್ನು
ಕೊಟ್ಟು ನಾಗಲೋಕದ ಬಾಳ್ಕೆಯನ್ನು ನೀಗಬೇಡ. ಗರುಡನ ಹಾವಳಿಗೆ ನೆ
ವಾಗಿ ಈ ರತ್ನವು ನಮ್ಮಲ್ಲೇ ಇರಲಿ, ನಿನ್ನ ಮಗಳಾದ ಉಲೂಪಿಯನ್ನು ಸಂತೈ
ಸುವಂತೆ ಪುಂಡರೀಕನನ್ನು ಭೂಲೋಕಕ್ಕೆ ಕಳುಹಿಸೆಂದು ಹೇಳಿದ ಧೃತರಾ
ಷ್ಟ್ರನ ಮಾತಿಗೆ ಸರ್ಪಸಂಕುಲವೆಲ್ಲವೂ ಸಮ್ಮತಿಸಿತು, ಎಲೈ ಜನಮೇಜಯ
ರಾಯನೇ ಅಕ್ಕರೆಯಿಂದ ರಾಜರು ಕೊಡುವ ದಾನವು ಅವರ ಬಳಿಯಲ್ಲಿರುವ
ಕ್ರೂರರಂತಹ ನೀಚರಾದವರಿಂದ ಕೆಡದಿರುವುದೆ ? ಧೃತರಾಷ್ಟ್ರನ ಮಾತುಗ
ಳನ್ನು ಕೇಳಿ ಆದಿಶೇಷನು ಪುಂಡರೀಕನನ್ನು ಕರೆದು ಅಯ್ಯಾ ! ನಾನೊಪ್ಪಿದರೂ

ನೀಚರಾದ ಈ ಸರ್ಪಗಳು ಪರೋಪಕಾರಕ್ಕಾಗಿ ರತ್ನವನ್ನು ಕೊಡಲೊಲ್ಲವು ಎಂದು ನನ್ನ ಮಗಳಾದ ಉಲೂಪಿಗೆ ಹೇಳಿಬಿಡು ಎಂದಾತನನ್ನು ಭೂಲೋಕಕ್ಕೆ ಕಳುಹಿಸಲು ಅವನು ಅತಿವೇಗದಿಂದ ಬಂದು ರತ್ನಪ್ರದೀಪಗಳ ಕಾಂತಿಯಿಂದ ಸೇನೆಯೊಡನೆ ಕಾದಿರುವ ಬಭ್ರುವಾಹನನ ಬಳಿಯಲ್ಲಿ ಅರ್ಜುನನ ರುಂಡಮುಂಡಗಳನ್ನು ಕಾಯುತ್ತಿದ್ದ ಉಲೂಪಿ ಚಿತ್ರಾಂಗದೆಯರು ಪುಂಡರೀಕನು ಸಂಜೀವಕದಮಣಿಯನ್ನು ತರುವನೆಂದು ಹಂಬಲಿಸುತ್ತ ಕುಳಿತಿದ್ದರು. ಅವರನ್ನು ಕಂಡು ಆದಿಶೇಷನು ಮಣಿಯನ್ನು ಕೊಡಲಿಲ್ಲವೆಂದು ಹೇಳಿದನು. ಬಳಿಕ ವೈಧವ್ಯವನ್ನು ಸಹಿಸಲಾರದೆ ಅಗ್ನಿಪ್ರವೇಶ ಮಾಡುವೆವೆಂದು ನಿಶ್ಚಯಿಸಿದ ತಾಯನ್ನು ಕಂಡು ಬಭ್ರುವಾಹನನು ಕೋಪದಿಂದ ಕುದಿಯುತ್ತ, ಆಹಾ ! ಆದಿಶೇಷನ ಅಹಂಕಾರವನ್ನು ಏನೆಂದು ಹೇಳಲಿ ! ವಿಷ್ಣುಭಕ್ತನಾಗಿ ಇಂದ್ರಸುತನೆನಿಸಿಕೊಂಡು ಧರ್ಮಾನುಜನಾಗಿ, ನನಗೆ ತಂದೆಯಾಗಿರುವ ಅರ್ಜುನನ ಪ್ರಾಣಕ್ಕಾಗಿ ಸಂಜೀವಕದ ಮಣಿಯನ್ನು ಕೊಡದೆಹೋದನೆ ? ಕ್ಷಣಮಾತ್ರದಲ್ಲಿ ಪಾತಾಳಲೋಕವನ್ನು ಸುಟ್ಟು, ಆ ಮಣಿಯನ್ನು ತಂದು ನನ್ನ ತಂದೆಯನ್ನೂ ಅವನ ಪರಿವಾರದವರನ್ನೂ ಬದುಕಿಸುವೆನು. ನಾನು ಬರುವವರೆಗೂ ಎಚ್ಚರಿಕೆಯಾಗಿ ಕಾದುಕೊಂಡಿರಿ ಎಂದು ಹೇಳಿ ತನ್ನ ಮಂತ್ರಿಗಳನ್ನು ಕಾವಲಿಟ್ಟು ಚತುರಂಗಬಲವನ್ನು ಒಡಗೊಂಡು ದಿವ್ಯವಾದ ಧನುಸ್ಸಿಗೆ ಹೆದೆಯೇರಿಸಿ, ಘೋರವಾದ ಬಾಣವನ್ನು ಹೂಡಿ, ಭೂಖಂಡವನ್ನು ಟೊಳ್ಳುಮಾಡಿ, ಸಪ್ತಪಾತಾಳಗಳಿಗೆ ಸುಲಭವಾಗಿ ನಡೆದುಹೋಗುವಂತೆ ದಾರಿಯನ್ನು ಮಾಡಿಕೊಂಡು ಸೇನೆಯೊಡನೆ ನಾಗಲೋಕವನ್ನು ಹೊಕ್ಕು ಬಾಣಜಾಲಗಳಿಂದ ಸರ್ಪಸಂಕುಲವನ್ನು ನೋಯಿಸಿದನು. ಕೂಡಲೆ ಐದುಗಾವುದ ಅಗಲವಾದ ನಾಗಲೋಕದ ಸೇನೆಯು ಕರಿತುರಗರಥಪದಾತಿಗಳೊಡನೆ ವಿಷಜ್ವಾಲೆಯನ್ನು ಕಾರುತ್ತ, ದಶದಿಕ್ಕುಗಳಲ್ಲಿಯೂ ಮುತ್ತಿಕೊಂಡು ಬಭ್ರುವಾಹನನ ಸೇನೆಯನ್ನು ಸುಡುತ್ತಿದ್ದಿತು.

ಬಳಿಕ ಗುಳಿಕ, ತಕ್ಷಕ, ಶಂಖ, ಕರ್ಕೋಟಕಾದಿಗಳು ತಮ್ಮ ಸಾಮರ್ಥ್ಯವನ್ನು ತೋರಿ ಕಾದಲಾರಂಭಿಸಿದರು. ಆಗ ಇಪ್ಪತ್ತೊಂದುಸಾವಿರ ವೀರರು ಮಡಿದುಹೋದರು. ಅದನ್ನು ಕಂಡು ಬಭ್ರುವಾಹನನು ಕೋಪಭೀಷಣನಾಗಿ ಸಹಸ್ರಬಾಣಗಳನ್ನು ಹೊಡೆದು ಉರಗಾವಳಿಯನ್ನು ಪೊರೆಗಡಿದು ಹದ್ದು, ಕಾಗೆ, ನವಿಲು, ಗರುಡ, ಮುಂಗಸಿಗಳ ರೂಪದಿಂದ ಪೀಡಿಸುವ ಮಂತ್ರಾಸ್ತ್ರಗಳನ್ನು ಹೊಡೆದು ಬೊಬ್ಬಿರಿಯಲು ಆ ಬಾಣಗಳು ವೇಗವಾಗಿ ಉರಗಾವಳಿಯನ್ನು ಮುತ್ತಿ ನಿಮಿಷಮಾತ್ರದಲ್ಲಿ ಹಾವುಗಳ ಸತ್ವವನ್ನು ಕುಂದಿಸಿ ಕೊಂದುಹಾಕಿದವು. ಬಳಿಕ ಟೊಳ್ಳುಮರದ ಅಳ್ಳೆಯಂತೆಯೂ, ತಿರುಳಿಲ್ಲದ ತಿಂತಿಣಿ

ಯಂತೆಯೂ, ಸತ್ವಹೀನರಾಗಿ ಕಳೆಗುಂದಿ ಕಾಂತಿಗೆಟ್ಟ, ತಕ್ಷಕ ಧೃತರಾಷ್ಟ್ರಾದಿಗಳು ಆದಿಶೇಷನಬಳಿಗೆ ಬಂದು ಅಯ್ಯಾ ! ಆ ಬಭ್ರುವಾಹನನು ಸರ್ಪಗಳ ವಿಷಕ್ಕೆ ಹೆದರದ ಶೂರನು ನಾಗಲೋಕವು ಹಾಳಾಯಿತು. ನಾವುಗಳು ಬದುಕುವ ಬಗೆಯನ್ನು ಕಾಣೆವು. ನಮ್ಮ ಸರ್ವಸ್ವವೂ ಹೋದರೆ ಹೋಗಲಿ ಪ್ರಾಣವೊಂದುಳಿದರೆ ಸಾಕು. ಬಭ್ರುವಾಹನನಿಗೆ ಬೇಗ ಸಂಜೀವಕದಮಣಿಯನ್ನು ಕೊಟ್ಟು ನಮ್ಮನ್ನು ಸಂರಕ್ಷಿಸು ಎಂದು ಉಳಿದ ಸರ್ಪಸಂಕುಲದೊಡನೆ ಮೊರೆಯಿಟ್ಟರು ಆಬಳಿಕ ಆದಿಶೇಷನು ಅಯ್ಯೋ ! ಇನ್ನು ಮರುಗಿ ಫಲವೇನು. ಹರಿಭಕ್ತನಾದ ಅರ್ಜುನನಿಗಾಗಿ ಮಣಿಯನ್ನು ಮೊದಲೆ ಕೊಡದೆಹೋದಿರಿ. ಅಕಟಕಟಾ ! ದಾನ ಧರ್ಮ ಪರೋಪಕಾರಂಗಳಿಗೆ ಕೊಡದೆ ಇಟ್ಟುಕೊಂಡಿರುವ ಲೋಭಿಯ ಧನವು ಅಡವಿಯಲ್ಲಿ ಬಿದ್ದ ಹೆಣದಂತೆ ಕಡೆಗೆ ಕಾಕಭಾಜನವಾಗದಿರುವುದೆ ಅದು ಹಾಗಿರಲಿ ! ಶ್ರೀಕೃಷ್ಣನ ಕರುಣಾಕಟಾಕ್ಷವೆಂಬ ಸಂಜೀವನ ರತ್ನವನ್ನು ಸಂಪಾದಿಸಿದ ಪಾಂಡವರಿಗೆ ನಾವು ಈ ಮಣಿಯನ್ನು ಕೊಡುವುದರಿಂದ ಕ್ಷೀರಸಮುದ್ರಕ್ಕೆ ಆಡಿನಹಾಲನ್ನು ಬೆರಸಿದಂತೆ ನಿಷ್ಫಲವಲ್ಲವೆ ? ನಮ್ಮ ಉಪಕಾರವು ಎಷ್ಟರದು. ಈ ರತ್ನವನ್ನೂ ಇದರ ಜೊತೆಗೆ ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳನ್ನೂ ಸಹ ಕೊಟ್ಟರೂ ಶ್ರೀಕೃಷ್ಣನ ಕಟಾಕ್ಷವೀಕ್ಷಣವನ್ನು ಪಡೆದು ಭಕ್ತಿಯಿಂದ ಆ ಮಹಾಮಹಿಮನನ್ನು ಪೂಜಿಸುವ ಪಾಂಡವರಿಗೆ ಕೊರತೆ ಏನು ? ಇನ್ನು ಹೇಳಿ ಫಲವೇನು ? ಸದ್ಧ್ಯಾನಕ್ಕೆ ಅಡ್ಡಿಯಾದ ನಿಮ್ಮ ಪಾಪವು ಶ್ರೀಕೃಷ್ಣಮೂರ್ತಿಯ ದರ್ಶನದಿಂದಲ್ಲದೆ ಬಯಲಾಗದು. ಆ ಕಾಲದಲ್ಲಿ ಗರುಡನು ಮುಳಿಯುವುದಿಲ್ಲ, ಆದಕಾರಣ ನನ್ನೊಡನೆ ಕೃಷ್ಣನ ದರುಶನಕ್ಕೆ ಬನ್ನಿ ಎಂದು ಹೇಳಿ ಆ ಸರ್ಪಗಳನ್ನೊಡಂಬಡಿಸಿ, ದಿವ್ಯ ರತ್ನಭೂಷಿತವಾದ ಮಣಿಕುಂಡಲಂಗಳನ್ನು ನೂರು ಸಲಾಕೆಗಳಿಂದ ಮಾಡಿದ ಬಿಳುಗೊಡೆಯನ್ನೂ ಇನ್ನೂ ಇತರ ಉತ್ತಮವಸ್ತುಗಳನ್ನು ಬಭ್ರುವಾಹನನಿಗೆ ಕೊಟ್ಟು ಸನ್ಮಾನಮಾಡಿ ಆತನೊಡನೆ ತಾನೂ ಹೊರಟು ತನ್ನ ಮೂಲಬಲ ಸಹಿತ ಮಣಿಪುರದ ರಣಭೂಮಿಗೆ ಬಂದು ನಿಂತನು.

ಆಗ ಧೃತರಾಷ್ಟ್ರನು ಆಹಾ ! ಬಭ್ರುವಾಹನನಿಗೆ ಸಂಜೀವನ ರತ್ನದ ಜಯವೂ, ಅರ್ಜುನನಿಗೆ ಪ್ರಾಣವೂ, ಧರ್ಮರಾಯನಿಗೆ ತಮ್ಮನ ಪ್ರಾಬಲ್ಯವೂ, ಯಾಗಕ್ಕೆ ಕುದುರೆಯೂ ದೊರೆಕೊಂಡುದು. ನಾನು ಸತ್ಕಾರ್ಯಕ್ಕೆ ವಿಘ್ನಮಾಡಿ ಕೆಟ್ಟೆನು. ಈಗ ಏನು ಮಾಡಲಿ ಎಂದು ಚಿಂತಿಸುತ್ತಿರಲು ಅವನು ಮಕ್ಕಳಾದ ದುರ್ಬುದ್ಧಿ ದುಸ್ವಭಾವರಿಬ್ಬರೂ ತಂದೆಯನ್ನು ನೋಡಿ ಅಪ್ಪಾ ಹೀಗೇಕೆ ಯೋಚಿಸುತ್ತಿರುವೆ. ಆದಿಶೇಷನೊಡನೆ ನೀನೂ ರಣಭೂಮಿಗೆ ಹೋಗು. ನೀವೆಲ್ಲರೂ ಅಲ್ಲಿಗೆ ಬರುವುದಕ್ಕೆ ಮೊದಲು ನಾವಿಬ್ಬರೂ ಯುದ್ಧಭೂಮಿಗೆ

ಹೋಗಿ ಸತ್ತು ಬಿದ್ದಿರುವ ಅರ್ಜುನನ ತಲೆಯನ್ನು ಕದ್ದು ಬಚ್ಚಿಟ್ಟು ಬರುವೆವು. ಇದರಿಂದ ನನಗೆ ಪಾಪವೇನೂ ಇಲ್ಲವೆಂದು ಹೇಳಿ ಕ್ಷಣಮಾತ್ರದಲ್ಲಿ ರಣರಂಗಕ್ಕೆ ಬಂದು ಪಾರ್ಥನ ತಲೆಯನ್ನು ತಂದು ಬಕದಾಲ್ಭ್ಯಮುನಿಯು ಮಹಾರಣ್ಯದಲ್ಲಿ ಬಚ್ಚಿಟ್ಟರು. ಅಷ್ಟು ಹೊತ್ತಿಗೆ ಸರಿಯಾಗಿ ಆದಿಶೇಷನೊಡನೆ ಬಭ್ರುವಾಹನನು ಯುದ್ಧರಂಗಕ್ಕೆ ಬಂದು ಅರ್ಜುನನ ಶಿರಸ್ಸನ್ನು ಕಾಣದೆ ನರಳುತ್ತಿರುವ ತಾಯಿಯರನ್ನು ನೋಡಿ ದಿಕ್ಕುತೋರದವನಾಗಿ ಮೂರ್ಛೆಹೋಗಿ ಮೈಮರೆದನು.

ಕೇಳೈ ಜನಮೇಜಯರಾಯನೇ ! ಹೀಗೆ ರಣಭೂಮಿಯಲ್ಲಿ ಕಳಕಳವು ಅಧಿಕವಾಗುತ್ತಿದ್ದಿತು. ಅತ್ತ ಹಸ್ತಿನಾಪುರದಲ್ಲಿದ್ದ ಕುಂತಿಯು ಅರ್ಜುನನ ತಲೆಯು ಕಡಿದು ಬೀಳುವ ಹಿಂದಿನ ರಾತ್ರಿ ನಿದ್ರಿಸುತ್ತಿರುವಾಗ ಪಾರ್ಥನು ಕೆಂಪು ದಾಸವಾಳದ ಹೂಮಾಲೆಯನ್ನು ಕಟ್ಟಿಕೊಂಡು ಮೈಗೆಲ್ಲ ಗೋಮಯವನ್ನು ಬಳಿದುಕೊಂಡು, ಎಣ್ಣೆಯಲ್ಲಿ ಸ್ನಾನಮಾಡಿ, ಕತ್ತೆಯಮೇಲೆ ಕುಳಿತು ದಕ್ಷಿಣ ದಿಕ್ಕಿಗೆ ಹೋಗುತ್ತಿದ್ದಂತೆ ಕನಸು ಕಂಡು ಭಯಪಟ್ಟು ಧರ್ಮರಾಯ ಶ್ರೀ ಕೃಷ್ಣರಿಗೆ ಅದನ್ನು ವಿವರಿಸಿ ಹೇಳಿ ಅಯ್ಯೋ ! ಅರ್ಜುನನು ಬದುಕಿರುವನೋ ಇಲ್ಲವೊ, ಸುಭದ್ರೆ ದ್ರೌಪದಿಯರ ನಯನ ಸರೋಜಗಳು ಕಂಬನಿಗಳನ್ನು ಕರೆಯುತ್ತಿರುವುವು, ಕೃಷ್ಣಾ ! ನಿನ್ನ ಸಖನಾದ ಅರ್ಜುನನ ಸ್ಥಿತಿಯು ಹೇಗಿರುವುದೋ ಕಾಣೆನೆಂದು ಬಗಬಗೆಯಾಗಿ ಹಂಬಲಿಸಿದಳು. ಬಳಿಕ ಲಕ್ಷ್ಮೀಕಾಂತನು ಕುಂತಿಯನ್ನು ಸಮಾಧಾನ ಪಡಿಸಿ ಭೀಮ, ದ್ರೌಪದಿ ಸುಭದ್ರೆ, ಕುಂತಿ ಮೊದಲಾದ ಸರ್ವರಿಂದೊಡಗೂಡಿ, ಗರುಡನ ಬೆನ್ನ ಮೇಲೆ ಕುಳಿತು ಆಕಾಶ ಮಾರ್ಗದಲ್ಲಿ ಬರುತ್ತ ಯುದ್ಧಭೂಮಿಯ ಸ್ಥಿತಿಯನ್ನು ಭೀಮನಿಗೆ ವಿವರಿಸಿ ಹೇಳಿ ಅಯ್ಯಾ ! ವೃಕೋದರ ನೋಡು ರಣಭೂಮಿಯಲ್ಲಿ ಸತ್ತು ಬಿದ್ದಿರುವ ಅರ್ಜುನನ ಮುಂಡ ಒಂದೆ ಕಾಣಿಸುವುದು. ತಲೆಯು ಎಲ್ಲಿಹೋಯಿತೊ ಕಾಣೆ ! ಎಂದು ಹೇಳಲು, ವೃಕೋದರನು ಸ್ವಾಮಿಾ ! ನಿನ್ನ ಕಟಾಕ್ಷವೆಂಬ ಸೂರ್ಯನು ಉದಯಿಸಿದುದೆ ಆದರೆ ಅರ್ಜುನನ ವದನ ಸರೋಜವು ವಿಕಸಿತವಾಗದೆ ಇರುವುದೆ ? ಹೇಳು ಎಂದನು. ಹೀಗೆ ರಾಜಕಾರ್ಯವನ್ನು ಚಿಂತಿಸುತ್ತ, ಅಟ್ಟಹಾಸದಿಂದೊಪ್ಪುವ ಮಣಿಪುರದ ಮಹಿಮೆಯನ್ನು ಕೊಂಡಾಡಿ ಕಡೆಗೆ ಆನೆ, ಕುದುರೆ, ರಥ, ಪದಾತಿಗಳ ಕಾವಲಿಂದ ಬಿಗಿದು ಲಲನಾಮಣಿಗಳ ರತ್ನಕಾಂತಿಗಳಿಂದ ಹೊಳೆಯುತ್ತಿರುವ ಯುದ್ಧಭೂಮಿಗೆ ಇಳಿದು ಬಂದು ಕುಂತಿಯಶೋದೆ, ಭೀಮ ಸುಭದ್ರೆ, ದ್ರೌಪದಿಯರೊಡನೆ ಅಯ್ಯೋ ! ಅರ್ಜುನನಿಗೂ ಇಂತಹ ಗತಿಯಾಯಿತೆ ಎಂದು ಹಂಬಲಿಸಿ, ಎಲೈ ಅರ್ಜುನನೆ ! ಏಳು ಇಗೋ ಈಗ ಬಂದು ಮಾತಾಡುತ್ತಿರುವ ನಾನೇ ಶ್ರೀಕೃಷ್ಣನು ನಿನ್ನ ತಾಯಿಯಾದ

ಕುಂತಿಗೆ ನಮಸ್ಕಾರ ಮಾಡು. ಅಕ್ಕರೆಯ ಅಳಿಯನೆಂದು ಹರಸುವ ಯಶೋದೆ ದೇವಿಕಿಯರಿಗೆ ನಮಸ್ಕರಿಸಿ ಆದರಿಸು. ಅಣ್ಣನಾದ ಭೀಮನನ್ನು ಕಂಡು ಸುಮ್ಮನಿರುವುದು ನ್ಯಾಯವೆ ? ಸುಮ್ಮನೆ ಹೀಗೆ ಮಲಗಿಕೊಂಡರೆ ಯಾಗವನ್ನು ನಡೆಸುವವರಾರು ? ಎಂದು ನಾನಾವಿಧವಾಗಿ ಪ್ರಲಾಪಿಸಿದನು.

ಬಳಿಕ ಕುಂತಿ ಮೊದಲಾದ ರಾಣಿವಾಸದವರ ರೋದನವು ಅಧಿಕವಾಯಿತು. ಆನಂತರದಲ್ಲಿ ಭೀಮನು ಅಯ್ಯಾ ! ಇದು ಹಾಗಿರಲಿ. ಈ ವೀರನಾದ ವೃಷಕೇತುವನ್ನು ಅರ್ಜುನನೊಡನೆ ಕೆಡಹಿದ ವೀರನಾವನು. ಅವನನ್ನು ನೋಡುವೆನು ತೋರಿಸು. ಕದನ ಮುಖದಲ್ಲಿ ಹೃದಯವನ್ನು ಸೀಳುವೆನು ಎಂದು ಗರ್ಜಿಸುತ್ತಿದ್ದನು. ಆ ಕಾಲಕ್ಕೆ ಸರಿಯಾಗಿ ಮಣಿಪುರದಲ್ಲಿ ಉಲೂಪಿಯ ಪೋಷಣೆಗೆಸಂದು ಶಾಂತಶ್ರಮರಾದ ಸಾತ್ಯಕಿ ಅನಿರುದ್ಧ ಪ್ರದ್ಯುಮ್ನ ಮೊದಲಾದ ವೀರರು ಯುದ್ಧರಂಗಕ್ಕೆ ಬಂದು ಕೃಷ್ಣಭೀಮಸೇನರನ್ನು ಕಂಡು ಯುದ್ಧದಲ್ಲಿ ನಡೆದ ವೃತ್ತಾಂತವನ್ನು ಅರ್ಜುನನ ಮರಣಕಾರಣವನ್ನು ಅವರಿಗೆ ವಿವರಿಸಿಹೇಳಿ ಬಭ್ರುವಾಹನನನ್ನು ಭೇಟಿಮಾಡಿಸಿದರು. ವಿನಯವಂತನಾದ ಬಭ್ರುವಾಹನನು ತಲೆವಾಗಿ ಕಂಬನಿಗಳನ್ನು ಸುರಿಸುತ್ತ ಎಲೈ ಭಕ್ತವತ್ಸಲನೇ ! ಪಿತೃಘಾತಿಯಾಗಿ ವೈಷ್ಣವದ್ರೋಹವನ್ನು ನಡೆಸಿ ಭಾಗವತಶಿರೋಮಣಿಯನ್ನು ಕೊಂದ ಪರಮಪಾಪಿಯಾದ ನನ್ನನ್ನು ನಿಮ್ಮ ಗದಾಚಕ್ರಂಗಳಿಂದ ಸಂಹರಿಸಿ, ಉದ್ಧರಿಸು ಎಂದು ಮನಸ್ಸು ಕರಗುವಂತೆ ಮರುಗಿ, ಬಳಿಕ ತಮ್ಮ ತಾಯಿಯರನ್ನು ಭೇಟಿಮಾಡಿಸಿ, ಕುಂತಿ ಯಶೋದೆಯರಿಗೆ ನಮಸ್ಕರಿಸಿ, ಮಡಿದುಬಿದ್ದರು. ಅರ್ಜುನ ವೃಷಕೇತುಗಳನ್ನು ತೋರಿಸುತ್ತ ಕಾಲ್ಗೆರಗಿ ದೂಳಿನಲ್ಲಿ ಹೊರಳಿ, ಅರ್ಜುನನ ಗುಣಾವಳಿಗಳನ್ನು ನೆನೆದು ಚಿಂತಿಸುತ್ತಿರುವ ತಾಯಿಯೊಡನೆ ತಾನು ನರಳುತ್ತಿದ್ದನು. ಅಷ್ಟುಹೊತ್ತಿಗೆ ಆದಿಶೇಷನು ಸಂಜೀವಕದ ಮಣಿಯನ್ನು ತೆಗೆದುಕೊಂಡು ಯುದ್ಧಭೂಮಿಗೆ ಬಂದು ಕೃಷ್ಣಮೂರ್ತಿಗೆ ನಮಸ್ಕರಿಸಿ, ತಾನು ಬಂದ ವರ್ತಮಾನವನ್ನು ಹೇಳಿ ಎಲೈ ಸ್ವಾಮಿಯೇ ! ಸೂರ್ಯನಿಗೆ ಕತ್ತಲೆಯೇ ಮಾರ್ಗವಲ್ಲವೆ ? ನೀನಿದ್ದಕಡೆಯಲ್ಲಿ ದುಃಖಶೋಕಗಳುಂಟೆ ? ಇನ್ನು ಅರ್ಜುನನ ತಲೆಯನ್ನು ತರಿಸು. ಈ ಸಂಜೀವಕದ ಮಣಿಯನ್ನು ತೆಗೆದುಕೊಂಡು ನಿನ್ನ ಮಹಿಮೆಯಿಂದ ಅರ್ಜುನನನ್ನು ರಕ್ಷಿಸು. ನಿನ್ನ ದರುಶನದಿಂದ ಸತ್ತವರು ಮತ್ತೆ ಬದುಕುವುದು ಆಶ್ಚರ್ಯವೆ ಎಂದು ಬೇಡಿಕೊಂಡನು. ಬಳಿಕ ಶ್ರೀಹರಿಯು ರೋದನಧ್ವನಿಯನ್ನು ನಿಲ್ಲಿಸಿ, ಲಲನಾಮಣಿಯರನ್ನು ಸಂತೈಸಿ, ಇಗೋ ನಾನು ಹೇಳುವ ಮಾತನ್ನು ಸರ್ವರೂ ಲಾಲಿಸಿ ಸಾರಿಹೇಳುವೆನು. ಮೊದಲಿಂದ ಇದುವರೆಗೂ ನಾನು ಬಾಲಬ್ರಹ್ಮಚಾರಿಯಾಗಿದ್ದರೆ ವಿಷ್ಣುಭಕ್ತನಾದ ಅರ್ಜುನನ ತಲೆಯು ಕದ್ದುಕೊಂಡು ಹೋಗಿರುವ ಖೂಳರು ಸತ್ತು

ಹೋಗಲಿ ಈ ಚಕ್ರದ ಮೂಲಕವಾಗಿ ಆ ಶಿರಸ್ಸು ಇಲ್ಲಿಗೆ ಬರಲಿ ! ಎಂದು ಹೇಳಿದನು. ಕೂಡಲೆ ಸುದರ್ಶನವು ಪಾತಾಳಕ್ಕೆ ಹೋಗಿ ದುರ್ಬುದ್ಧಿ ದುಸ್ಸ್ವಭಾವರನ್ನು ಕೊಂದು, ಅರ್ಜುನನ ತಲೆಯನ್ನು ತಂದು ರಣಭೂಮಿಯಲ್ಲಿ ಹಾಕಿತು. ಮೂರುಲೋಕದವರೂ ಆನಂದಭರಿತರಾದರು ಶ್ರೀಕೃಷ್ಣನು ಕರುಣಾಮಯನಾಗಿ ಅರ್ಜುನನ ದೇಹವನ್ನು ನೋಡಿದನು. ಬಳಿಕ ಮೊದಲು ವೃಷಕೇತುವಿನ ತಲೆಯನ್ನು ಮುಂಡಕ್ಕೆ ಸೇರಿಸಿ ಹಿಡಿದು ಎದೆಯಮೇಲೆ ಆ ಮಣಿಯನ್ನಿಟ್ಟು, ಅನಂತರ ಅರ್ಜುನನ ತಲೆಗೆ ಮುಂಡವನ್ನು ಜೋಡಿಸಿ, ಸಂಜೀವಕ ರತ್ನವನ್ನು ಹೃದಯದಲ್ಲಿ ನಿಲ್ಲಿಸಿ, ಈಶ್ವರಪ್ರಸಾದದಿಂದ ಇವರಿಬ್ಬರೂ ಬದುಕಿಕೊಳ್ಳಲಿ ಎಂದು ಆಶೀರ್ವದಿಸಿದನು.

ಎಲೈ ಜನಮೇಜಯರಾಯನೇ ಕೇಳು. ತನ್ನ ಲೀಲೆಯಿಂದ ಬ್ರಹ್ಮಾಂಡಕೋಟಿಗಳನ್ನು ಸೃಷ್ಟಿಸಿ, ನಾಶಗೊಳಿಸುವ ಮಹಾಮಹಿಮನಿಗೆ ಈ ವೈಷ್ಣವ ಶಿಖಾಮಣಿಗಳಿಬ್ಬರನ್ನು ಬದುಕಿಸುವುದು ಕಷ್ಟವೆ ? ಕೃಷ್ಣನು ಆಶೀರ್ವದಿಸಿದ ಕೂಡಲೆ ಅರ್ಜುನನ ವೃಷಕೇತುಗಳ ಮುಖವು ಕಳೆಗಟ್ಟಿತು ಉಸಿರು ಆಡತೊಡಗಿತು. ಮಲಗಿದವರು ಮೈಮುರಿದು ಏಳುವಂತೆ ಅರ್ಜುನ ವೃಷಕೇತುಗಳು ಶ್ರೀಹರಿಯನ್ನು ಧ್ಯಾನಿಸುತ್ತ ಕಣ್ದೆರೆದರು. ಕತ್ತಲೆಯನ್ನೋಡಿಸಿದ ಸರಸಿಜದಂತೆಯೂ, ಮೋಡಗಳ ಮರೆಯನ್ನು ದಾಟಿದ ಸೂರ್ಯನಂತೆಯೂ ನುಂಗಿರ್ದ ರಾಹುವನ್ನು ಬೆಂಗೊಟ್ಟು ಓಡುವಂತೆ ಮಾಡಿದ ಚಂದ್ರನಂತೆಯೂ, ಅರ್ಜುನ ವೃಷಕೇತುಗಳ ಮುಖಕಮಲಗಳು ಕಾಂತಿಯೇರಲು ಕೃಷ್ಣನನ್ನು ಕಂಡು ಅವರಿಬ್ಬರೂ ಭಕ್ತಿಯುಕ್ತರಾಗಿ ಅಕ್ಕರೆಯಿಂದ ನಮಸ್ಕರಿಸಿದರು. ಕೂಡಲೆ ದೇವದುಂಭಿಗಳು ಮೊಳಗಿದವು. ದೇವತೆಗಳು ಹೂಮಳೆಯನ್ನು ಕರೆದರು. ಕುಂತಿ ಮೊದಲಾಗಿ ಸರ್ವರೂ ಆನಂದದಿಂದುಬ್ಬಿದರು. ಅರ್ಜುನನ ವೃಷಕೇತುಗಳು ಸರ್ವರಿಗೂ ನಮಸ್ಕರಿಸಿ ಅವರವರ ಆಶೀರ್ವಾದವನ್ನು ಕೈಕೊಂಡು ಕುಂತಿಯಬಳಿಗೆ ಬಂದು ಕಾಲ್ಗೆರಗಲು ಆಕೆ ಅವರನ್ನು ಆಲಿಂಗಿಸಿಕೊಂಡು ಆನಂದದಿಂದ ಶ್ರೀಹರಿಯನ್ನು ಕೊಂಡಾಡಿದಳು.

ಬಳಿಕ ಶ್ರೀಕೃಷ್ಣನು ಆದಿಶೇಷನನ್ನು ಕಾಣಿಸಿಕೊಂಡು ಆತನೊಡನೆ ಸಂತೋಷದಿಂದ ಸ್ವಲ್ಪಹೊತ್ತು ಮಾತಾಡಿದಬಳಿಕ ಪಾಂಚಜನ್ಯವನ್ನೂದಿದನು. ಆ ಶಂಖಧ್ವನಿಯ ಪ್ರಭಾವದಿಂದ ಮಡಿದೊರಗಿದ್ದ ಅನಿರುದ್ಧ, ಸಾತ್ಯಕಿ, ಪ್ರದ್ಯುಮ್ನ, ಗದ, ಸಾಂಬ, ಕೃತವರ್ಮ, ಶಠ, ನಿಶಠ, ಮೊದಲಾದ ಯದುವೀರರೂ, ಅನುಸಾಲ್ವ, ಯೌವನಾಶ್ವ, ನೀಲಧ್ವಜ, ಹಂಸಕೇತುಗಳೂ, ಮದ್ದಾನೆಯ ಗುಂಪಿನಂತ ಮೈಯುಬ್ಬಿ ಮೇಲಕ್ಕೆದ್ದು ಶ್ರೀಕೃಷ್ಣನಿಗೆ ನಮಸ್ಕರಿಸಿ ಯುದ್ಧದಲ್ಲಿ ತಮಗಾದ ಆಯಾಸವನ್ನು ಕಾಣಿಯಾದ ಉಲೂಪಿಯು ನಗರದಲ್ಲ

ನಡೆಸಿದ ಉಪಚಾರವನ್ನು ವಿವರಿಸಿ ಹೇಳಿದರು. ಬಳಿಕ ಶ್ರೀಕೃಷ್ಣನು ಅರ್ಜುನನನ್ನು ಕುರಿತು ಅಯ್ಯಾ ! ನಿನಗೆ ಈಅಪಮೃತ್ಯುವು ಗಂಗಾಶಾಪದಿಂದ ಉಂಟಾಯಿತೆಂದು ಹೇಳಿದನು. ಆ ಬಳಿಕ ಉಲೂಪಿ ಚಿತ್ರಾಂಗದೆಯರು ಕಪ್ಪಕಾಣಿಕೆಗಳನ್ನೊಪ್ಪಿಸಿ ಶ್ರೀ ಕೃಷ್ಣಮೂರ್ತಿಯನ್ನು ಕಂಡು ಕಾಲ್ಗೆರಗಿದರು. ಆಗ ಉಭಯದಳದವರೂ ಸಂತೋಷದಿಂದುಬ್ಬಿ ಉತ್ಸಾಹಭರಿತರಾದರು. ಬಳಿಕ ಬಭ್ರುವಾಹನನ ಪ್ರಾರ್ಥನೆಯಂತೆ ಆನಂದದಿಂದ ವಿಜಯೋತ್ಸವದೊಡನೆ ಅಟ್ಟಹಾಸದಿಂದ ಮೆರವಣಿಗೆ ಹೊರಟು ಮಣಿಪುರವನ್ನು ಪ್ರವೇಶಮಾಡಿದರು. ವಿಚಿತ್ರತರವಾದ ಗುಡಿತೋರಣಗಳಿಂದ ಮಿಸುನಿವಣ್ಣದ ಕುಸುರಿಗುಚ್ಛಗಳೊಡನೆ ಕಟ್ಟದ ಮುತ್ತಿನಸರಗಳಿಂದ ತಳಿರೆಲೆಗಳ ಸಾಲುಗಳಿಂದ ಮಾವಿನ ತೋರಣಗಳ ನಡುನಡುವೆ ರಾಜಿಸುವ ಕದಳೀಸ್ತಂಭಗಳಿಂದ ಮನೋಹರವಾಗಿ ಅಲಂಕರಿಸಿರುವ ಮಣಿಪುರದ ರಾಜಧಾನಿಯಲ್ಲಿ ಸರ್ವಾಲಂಕಾರವೈಭವದಿಂದ ರಾಜಿಸುತ್ತಿದ್ದ ಅರಮನೆಯ ಸೆಜ್ಜೆಯ ಬಾಗಿಲಬಳಿಯಲ್ಲಿ ಬಭ್ರುವಾಹನನು ಶ್ರೀಕೃಷ್ಣಮೂರ್ತಿ ಮೊದಲಾದವರನ್ನು ಓಲಗ, ತಾಳ, ಮೇಳ, ನೃತ್ತ, ಗೀತ, ವಾದ್ಯವಿಶೇಷಗಳೊಡನೆ ನಡೆತಂದ ಕಡುಚೆಡಗಿನ ನಿಡುಗುರುಳ ನೀಲಾಳಕೆಯರ ಕಟಾಕ್ಷಪ್ರಭೆಯೊಡನೆ ಎದುರುಗೊಂಡು, ಅರಮನೆಯ ಓಲಗಶಾಲೆಗೆ ಕರೆದುಕೊಂಡು ಹೋಗಿ ಶ್ರೀಕೃಷ್ಣನ ಒಡಂಬಡಿಕೆಯಿಂದ ತಂದೆಯಾದ ಅರ್ಜುನನಿಗೆ ಸಿಂಹಾಸನಾಧಿಪತ್ಯವನ್ನು ವಹಿಸಿ ನಾಚಿಕೆಯಿಂದ ತಲೆವಾಗಿ, ತಂದೆಯೇ ! ಹಸಾದವೆಂದು ಹೇಳಿ ಸುಮ್ಮನೆ ನಿಂತುಕೊಂಡನು. ಆದರೂ ಅರ್ಜುನನು ಮಾತಾಡದೆ ಮೌನದಿಂದಿದ್ದುದನ್ನು ಕಂಡು ಭೀಮ, ಕುಂತಿ, ದೇವಕಿ, ಯಶೋದೆ ಮೊದಲಾದ ಸಭಿಕರೆಲ್ಲರೂ ಎಲೈ ಅರ್ಜುನನೇ ! ಶೂರನಾದ ನಿನ್ನ ಮಗನು ಕಾಲ್ಗೆರಗಿ ಹಸಾದವೆಂದು ನಿಂತಿದ್ದರೂ ನೀನು ಮೌನದಿಂದಿರುವ ಬಗೆಯೇನು ! ಗಂಗಾಶಾಪದಿಂದ ಈವಿಧವಾದ ಪರಿಭವವು ಆದುದೆಂದು ಶ್ರೀಕೃಷ್ಣಮೂರ್ತಿಯು ಹೇಳಲಿಲ್ಲವೆ ? ಅಕಟಾ ! ಹೆತ್ತಮಗನನ್ನು ಕಂಡರೂ ಕರುಣಬಾರದೇ ! ಪತಿವ್ರತೆಯರಾಗಿರುವ ಉಲೂಪಿ ಚಿತ್ರಾಂಗದೆಯರನ್ನು ಸಂತೈಸಿ ಆದರಿಸಬಾರದೆ ? ಗಂಗಾಶಾಪದಿಂದ ಮೃತನಾಗಿ ಕೃಷ್ಣಪ್ರಸಾದದಿಂದ ಜೀವಿಸಿದ ನಿನಗೆ ಬಭ್ರುವಾಹನನಲ್ಲಿ ಬೇಸರಗೊಳ್ಳಲು ಕಾರಣವೇನು ? ಮಗನನ್ನು ಮನ್ನಿಸಿ, ಪತ್ನಿಯರನ್ನು ಪತಿಕರಿಸಿ, ಸಂತೋಷವನ್ನು ಹೊಂದು ಎಂದು ಹೇಳಿದರು.

ಬಳಿಕ ಲಜ್ಜಾಯುಕ್ತನಾದ ಬಭ್ರುವಾಹನನು ಸಭಿಕರನ್ನು ಸಂಬೋಧಿಸಿ, ಎಲೈ ಮಹಾಮಹಿಮರಿರಾ ! ನನ್ನ ಪ್ರತಿಜ್ಞೆಯನ್ನು ಪಾಲಿಸಿ, ಈ ನನ್ನ ರಾಜ್ಯವನ್ನು ತಂದೆಯಾದ ಅರ್ಜುನನಿಗೊಪ್ಪಿಸಿ ನಾನು ಹಿಮಾಚಲಪರ್ವತದಲ್ಲಿ

ಪ್ರಾಣವನ್ನುನೀಗಿಕೊಂಡ ಸತ್ಪುರುಷರಿಗಾಗುವ ಸದ್ಗತಿಯನ್ನು ಪಡೆಯುವೆನು. ಇಲ್ಲದಿದ್ದರೆ ಗುರುಭಕ್ತನಾಗಿ ವೈಷ್ಣಶಿರೋಮಣಿಯಾಗಿ ಧರ್ಮಾನುಜನಾದ ನನ್ನ ತಂದೆಯನ್ನು ಘಾತಿಸಿದ ದೋಷವು ಹೋಗುವದಿಲ್ಲ ಆದಕಾರಣ ನಾನು ಆಡಿದ ಮಾತಿಗೆ ತಪ್ಪದೆ ನಡೆದುಕೊಳ್ಳುವೆನು ಎಂದು ಪ್ರತಿಜ್ಞೆಮಾಡಿದನು. ಅದನ್ನು ಕೇಳಿ ಭೀಮಸೇನನು ಬಭ್ರುವಾಹನನ್ನು ಕುರಿತು ಮಗನೇ ! ಅರಿಯದೆ ಮೂಢ ಭಾವದಿಂದ ತಪ್ಪುಮಾತುಗಳನ್ನಾಡಿದೆ. ನಿನ್ನ ಈ ಮೂರ್ಖತನವನ್ನು ಬಿಡು. ಪ್ರತ್ಯಕ್ಷ ದೈವವಾದ ಕೃಷ್ಣಮೂರ್ತಿಯು ನಿನ್ನೆದುರಿಗಿರುವಾಗ ನಿನಗೆ ಪಾಪವೆಲ್ಲಿಂದಬಂದಿತು. ಗುರು ದ್ರೋಣ ಭೀಷ್ಮಾದಿಗಳನ್ನುಕೊಂದ ಮಹಾಪಾತಕಂಗಳಲ್ಲಿ ಲೇಶವಾದರೂ ನಮಗುಂಟಾಯಿತೆ ? ಸೂರ್ಯನನ್ನು ಕಂಡು ಕತ್ತಲೆಯು ಮುತ್ತಬಲ್ಲುದೆ ? ನಿನ್ನ ಮಂಕುಬುದ್ಧಿಗೆ ಏನು ಹೇಳಲಿ ! ಕನಸಿನಲ್ಲಾದರೂ ಕೃಷ್ಣಸಂದರ್ಶನವಂಗೈದವರಿಗೆ ಭಯಶೋಕದುಃಖಗಳು ನಾಶವಾಗದೆ ನಿಲ್ಲುವುದೆ ? ನಿಷ್ಕೃತಿಗಳಿಲ್ಲದ ಪಂಚಮಹಾಪಾತಕಂಗಳನ್ನು ಕಲಿಯುಗದವರ ಪಾಪರಾಶಿಗಳನ್ನೂ ತೊಲಗಿಸಿ, ಸಂಸಾರಚಕ್ರದತೊಡಕನ್ನೆ ಬಿಡಿಸುವ ಶ್ರೀಹರಿಯ ದಿವ್ಯನಾಮಗಳು ಯಾವ ಮನುಷ್ಯನ ನಾಲಿಗೆಯಲ್ಲಿ ನೆಲಸಿರುವುವೋ ಅಂಥವನನ್ನು ಕಂಡಮಾತ್ರದಿಂದ ಎಂಥ ಪಾಪಿಯಾದರೂ ಪರಿಶುದ್ಧನಾಗಿ ಶುಚಿಯೆನಿಸುವನು. ಹೀಗಿರುವಲ್ಲಿ ಪ್ರತ್ಯಕ್ಷವಾಗಿ ಶ್ರೀಹರಿಯ ದರ್ಶನಮಾಡಿ ಶುಚಿಯಾದ ನಿನಗೆ ಪಾಪಸಂಪರ್ಕ ಉಂಟೆ ? ಸುಖಿಯಾಗಿ ಬದುಕು ನಮಗನುಕೂಲನಾಗಿ ಕುದುರೆಯನ್ನು ಪಾಲಿಸೆಂದು ಹೇಳಿದನು. ಸರ್ವರೂ ಅದಕ್ಕೆ ಒಪ್ಪಿದರು. ಬಳಿಕ ಅರ್ಜುನನು ಮಗನನ್ನು ಸಂತೈಸಿ, ಹೆಂಡಿರನ್ನಾದರಿಸಿ, ಭೀಮ ವೃಷಕೇತು ಕೃಷ್ಣಮೂರ್ತಿಗಳೊಡನೆ ಸಿಂಹಾಸನದಲ್ಲಿ ಕುಳಿತು ಆನಂದದಿಂದ ನಲಿದಾಡಿದನು. ಕುಂತಿ ಯಶೋದೆಯರು ಮೊಮ್ಮಕ್ಕಳ ಅಭಿವೃದ್ಧಿಯನ್ನು ಕಂಡು ನಲಿದರು. ಇತ್ತ ಬಭ್ರುವಾಹನನು ಆದಿಶೇಷನನ್ನು ಬಹಳವಾಗಿ ಸತ್ಕರಿಸಿ ಸನ್ಮಾನಮಾಡಿ ಸಂಜೀವಕದಮಣಿಯನ್ನು ಕೊಟ್ಟು ಸಂತೋಷದಿಂದ ಸರ್ಪಸಂಕುಲದೊಡನೆ ಪಾತಾಳಲೋಕಕ್ಕೆ ಕಳುಹಿಸಿದನು.

ಬಳಿಕ ಉಲೂಪಿ ಚಿತ್ರಾಂಗದೆಯರಿಬ್ಬರೂ ಕೃಷ್ಣ, ಅರ್ಜುನ, ವೃಷಕೇತು, ಭೀಮ, ಮನ್ಮಥ ಮೊದಲಾದ ವೀರರನ್ನೂ ಕುಂತಿ ಯಶೋದೆ ಮೊದಲಾದ ರಾಣಿಯರನ್ನೂ, ಅತ್ಯಂತ ವೈಭವದಿಂದ ಉಪಚರಿಸಿ ಸೇವಿಸಿದರು. ಹೀಗೆ ಐದುದಿವಸಗಳು ಕಳೆದಬಳಿಕ ಶ್ರೀಕೃಷ್ಣನು ಹಸ್ತಿನಾವತಿಯಲ್ಲಿ ಧರ್ಮಪುತ್ರನೊಬ್ಬನೇ ಇರುವನೆಂದು ಬಗೆದು ಭೀಮ, ಕುಂತಿ, ಯಶೋದೆ, ದೇವಕಿ ಮೊದಲಾದವರೊಡನೆ ಮಣಿಪುರದ ಬೊಕ್ಕಸದ ಭಾಗ್ಯವನ್ನು ಕಳುಹಿಸಿ ತಾನೆ ಮುಂದಾಗಿ ಹೊರಟು ಕುದುರೆಯನ್ನು ಬಿಡಿಸಿ, ಬಭ್ರುವಾಹನಾರ್ಜುನರೊಡನೆ ಮುಂದಕ್ಕೆ

ಹೊರಟನು. ಸಂಜೀವನರತ್ನದ ಕೃಷ್ಣದೇವನ, ಮತ್ತು ಹರಿಭಕ್ತನಾದ ಅರ್ಜುನನ ಆದಿಶೇಷನ ಪುಣ್ಯಪ್ರಸಂಗದಿಂದ ಕೂಡಿದ ಈ ಕಥೆಯನ್ನು ಭಕ್ತಿಯಿಂದ ಕೇಳಿ ಬರೆದೋದಿದವರಿಗೆ ಅಪಮೃತ್ಯು, ದುಷ್ಕೀರ್ತಿ, ಶತ್ರುಬಾಧೆ, ವಿಷಭಯಂಗಳಂಟದೆ ಆಯುರಾರೋಗ್ಯವೂ, ಮಂಜುಳವಾದ ಸತ್ಕೀರ್ತಿಯೂ, ಸುಖಸಂಪತ್ತುಗಳೂ ಅನುಕೂಲರಾದ ಸತಿಸುತರೂ, ನಿಶ್ಚಲವಾದ ಹರಿಭಕ್ತಿಯೂ, ದೇವಪುರನಿಲಯ ಲಕ್ಷ್ಮೀರಮಣನ ಆಜ್ಞೆಯಂತೆ ಕೈಸೇರುವುದೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿನಾಗಶರ್ಮಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಇಪ್ಪತ್ತನಾಲ್ಕನೆಯಸಂಧಿ ಸಂಪೂರ್ಣಂ. ಶ್ರೀ ಶ್ರೀ ಶ್ರೀ.

# ಇಪ್ಪತ್ತೈದನೆಯ ಸಂಧಿ.

## ಕೃಷ್ಣಾರ್ಜುನರನ್ನು ಗೆದ್ದು ತಾಮ್ರಧ್ವಜನು ಕುದುರೆಯನ್ನು ತಂದೆಗೊಪ್ಪಿಸಿದುದು.

ಎಲೈ ಜೈಮಿನಿ ಋಷೀಶ್ವರನೇ ! ಕ್ಷೀರಸಮುದ್ರದಮೇಲೆ ಮಲಯಮಾರುತನ ಒಲಿದಾಟವೂ, ಬೆಳ್ದಿಂಗಳ ಬೀಡೂ, ಮನೋಹರವಾದ ಸುವಾಸನೆಯೂ ಉಂಟಾದರೆ ನೋಡಲಿಗಿಂತಲೂ ಮಧುರವಾಗುವಂತೆ, ಚದುರನಾದ ನಿನ್ನ ಮೆಲ್ನುಡಿಗಳು ಮನೋಹರವಾಗಿದ್ದರೂ, ಕೃಷ್ಣಚಾರಿತ್ರ ಮಾಧುರ್ಯದಿಂದ ನನಗಿನ್ನು ತೃಪ್ತಿಯಾಗಲಿಲ್ಲ. ಆದಕಾರಣ ಮುಂದಿನ ಕಥೆಯನ್ನು ವಿಸ್ತರಿಸಿ ಹೇಳು ಎಂದು ಕೈಮುಗಿದ ಜನಮೇಜಯರಾಯನನ್ನು ಕುರಿತು, ಜೈಮಿನಿಮುನೀಂದ್ರನು ಇಂತೆಂದನು.

ಭಾಗವತಶಿರೋಮಣಿಯಾದ ಎಲೈ ಜನಮೇಜಯರಾಯನೇ ! ಅರ್ಜುನನ ಕುದುರೆಯು ಮಣಿಪುರದಿಂದ ಹೊರಟು ದೇಶದೇಶಗಳಲ್ಲಿ ಸಂಚರಿಸುತ್ತ ತಿರುಗಲಾರಂಭಿಸಿತು. ಅಷ್ಟರಲ್ಲಿ ಶರತ್ಕಾಲವು ಪ್ರಾಪ್ತವಾಯಿತು. ನದಿಗಳು ಉಬ್ಬರವಿಲ್ಲದೆ ತಿಳಿನೀರ್ಪೂರಸಲಿಂದ ಹರಿದುವು ರಾಜಹಂಸೆಗಳು ಸಂಚರಿಸತೊಡಗಿದವು. ಆಕಾಶವು ನಿರ್ಮಲವಾಯಿತು. ನಕ್ಷತ್ರಗಳು ರಾರಾಜಿಸುತ್ತಿದ್ದವು. ಸೂರ್ಯಚಂದ್ರರ ಕಿರಣಗಳು ನಿರ್ಮಲವಾದುವು. ತುಂಬಿಗಳು ತಾವರೆಯನ್ನು ಹೊಕ್ಕು ಮಧುವನ್ನು ಪಾನಮಾಡಿದವು. ದಿಕ್ಕುಗಳೆಂಬ ಹೆಂಗಸಿನಮೇಲು ಸೆರಗನ್ನು ಎಳೆದಹಾಗೆ ಬೆಟ್ಟಗಳು ರಾಜಿಸಿದವು. ಪುಳಿನವೆಜಘನ ಮತ್ಸ್ಯಗಳೇ ಲೋಚನಹಂಸವೆಗತಿ ಸುಳಿಯೆ ಹೊಕ್ಕುಳುಚಕ್ರವಾಕಗಳೆ ಸ್ತನಗಳು ತಾವರೆಯೆ

ಮುಖ ಸೆಳೆಯೆ ನಡುವು ಶಂಖವೆ ಕಂಠ ತರಂಗಗಳೆ ತ್ರಿವಳಿಗಳು ಶೈವಾಲವೆ ರೋಮ ರಾಜಿಗಳಾಗಿ ಪ್ರಕಾಶಿಸುವ ನದೀ ನಾರಿಯರು ತನ್ನ ಗಂಡನಾದ ಸಮುದ್ರರಾಜನನ್ನು ಸೇರದೆ ಇರಲಾರರು ಎಂತೆ ನದನದಿಗಳು ಕಂಗೊಳಿಸುತ್ತಿದ್ದವು. ಆಗ ಯಜ್ಞಾಶ್ವವು ವಿಟನಂತೆ ಕಾಂತಾರವಸದ್ವಿಲಾಸ ಪರ್ಯಟನದಿಂದಲೂ, ಕವೀಂದ್ರನಂತೆ ಸಂಘಟಿತಪದ ಚಾತುರ್ಯದಿಂದಲೂ, ರಾಜಭಟರಂತೆ ಪ್ರಕಟಿಕ ಸಕಲ ಭೂಭೃತ್ಕಟಕ ಸಂಚಾರದಿಂದಲೂ, ರಮ್ಯವಾಗಿ ತನಗೆ ಕಾವಲಾಗಿ ಬರುತ್ತಿರುವ ಸೇನಾಸಮೂಹದೊಂದಿಗೆ ನಡೆತಂದು ಮಯೂರಧ್ವಜನು ಆಳುತ್ತಿದ್ದ ರತ್ನಪುರವೆಂಬ ರಾಜಧಾನಿಯನ್ನು ಹೊಕ್ಕಿತು.

ಅಲ್ಲಿಗೆ ದೊರೆಯಾದ ಮಯೂರಧ್ವಜನು ಮೊದಲು ಏಳು ಅಶ್ವಮೇಧ ಯಾಗಗಳನ್ನು ಮಾಡಿ, ಈಗ ನರ್ಮದಾತೀರದಲ್ಲಿ ಎಂಟನೆಯ ಅಶ್ವಮೇಧ ಯಾಗಕ್ಕೆ ದೀಕ್ಷಿತನಾಗಿ ಕುದುರೆಯನ್ನು ಬಿಟ್ಟನು, ಆ ಕುದುರೆಯೂ ಬೀದಿಯಲ್ಲಿ ಬರುತ್ತಿದ್ದಿತು. ಎಲೈ ಜನಮೇಜಯರಾಯನೇ ಕೇಳು. ತಾಮ್ರಧ್ವಜನ ಕುದುರೆಯು ಅರ್ಜುನನ ಕುದುರೆಯನ್ನು ಕಂಡು ಓಡಿಬಂದು ಮುಖವನ್ನು ಮೂಸಿ ನೋಡಿ, ಕಿವಿಯನ್ನು ಕೊಡಹಿ ಮುಂಗಾಲುಗಳಿಂದಪ್ಪಳಿಸಿ ಹಿಂಗಾಲುಗಳಿಂದ ನೆಲವನ್ನು ಕೆರೆಯುತ್ತ ಕಡಿದುಕಚ್ಚಿ ಖುರಪುಟಂಗಳಿಂದ ಬಡಿದು ಕಡೆಗೆ ಎರಡು ಕುದುರೆಗಳೂ ತಂತಮ್ಮ ಉಡಿಗೆತೊಡಿಗೆಗಳನ್ನು ಕಳಚಿಕೊಂಡು ಬಿಡುವಾಗಿ ನಿಂತವು. ಅದನ್ನು ಕಂಡು ಬೆರಗಾಗಿ ತಾಮ್ರಧ್ವಜನ ಮಂತ್ರಿಯಾದ ನಕುಲ ಧ್ವಜನು ಹೊರರಾಜ್ಯದಿಂದ ಬಂದಿರುವ ಈ ಕುದುರೆ ಯಾವುದೆಂದು ಭಟರಮೂಲಕ ವಿಚಾರಿಸಿ, ಪಾಂಡವನ ಯಾಗಾಶ್ವದ ಪಾಲಪಟ್ಟದ ಕನಕಲಿಪಿಯನ್ನು ಓದಿಕೊಂಡು ಆ ವಿವರವನ್ನು ತನ್ನ ಸ್ವಾಮಿಗೆ ತಿಳಿಸಿದನು. ಅದನ್ನು ಕೇಳಿ ತಾಮ್ರಧ್ವಜನು ರೋಷಭೀಷಣನಾಗಿ ಪೌರುಷದಿಂದಾಕುದುರೆಯನ್ನು ಹಿಡಿದು ಕಟ್ಟಿ, ತನ್ನ ಸೇನೆಯನ್ನು ಅರ್ಧಚಂದ್ರಾಕೃತಿಯಾಗಿ ನಿಲ್ಲಿಸಿ, ಹಿಂದೆನಡೆದ ಏಳು ಯಾಗಗಳೂ ಕೃಷ್ಣವರ್ಜಿತವಾಗಿದ್ದವು. ಈಗಿನ ಯಾಗವು ಕೃಷ್ಣಸಹಿತವಾಯಿತು. ಮಧ್ಯಪಾಂಡವನು ಯುದ್ಧಕ್ಕೆ ಬರಲಿ ನನ್ನ ಬಲವನ್ನು ತೋರಿಸಿ ಯುದ್ಧಮಾಡಿ ಕೃಷ್ಣನನ್ನು ಹಿಡಿದುಕಟ್ಟಿ ತಂದೆಗೊಪ್ಪಿಸುವೆನೆಂದು ಮಂತ್ರಿಯಾದ ನಕುಲಧ್ವಜನೊಡನೆ ಹೇಳಲು, ಆತನು ಲೋಕೈಕವೀರನಾಗಿ ಚತುರಂಗಬಲಸಮನ್ವಿತನಾದ ನಿನ್ನ ಭಾಗ್ಯದೇವತೆಯ ಕಟ್ಟಳೆಗೆ ಹಂಸಧ್ವಜ ಬಭ್ರುವಾಹನಾದಿಗಳು ಬೆರಗಾಗಿ ಓಲೈಸುತ್ತಿರುವಲ್ಲಿ ನಿನ್ನೊಡನೆ ಯುದ್ಧಕ್ಕೆಬರುವ ಶೂರರು ಯಾರು ಯೋಚಿಸಬೇಡ ಸುಮ್ಮನಿರು ಎನಲು, ಅಯ್ಯಾ! ಹಾಗೆನ್ನಬೇಡ. ಲೋಕದಲ್ಲಿ ನನಗಿಂತಲೂ ವೀರರಾದ ಬಭ್ರುವಾಹನ ವೃಷಕೇತುಗಳು ಬಲಗರ್ವಿತರೆಂದು ನಾರದರು ಹೇಳಿದವಾಕ್ಯವು ನೆನಪಿನಲ್ಲಿದೆ. ನರನಾರಾಯಣಾವ

ತಾರಿಗಳಾದ ಕೃಷ್ಣಾರ್ಜುನರು ಸಾಧಾರಣರಲ್ಲ. ಅನಿರುದ್ಧ ಪ್ರದ್ಯುಮ್ನರು ಆಹವ ಸಮರ್ಥರು ಶ್ರೀಕೃಷ್ಣಮೂರ್ತಿಗೆ ಸದೃಶರು. ಆದಕಾರಣ ನಮ್ಮ ಸೇನೆಯನ್ನು ಅರ್ಧಚಂದ್ರಾಕೃತಿಯಲ್ಲಿ ನಿಲ್ಲಿಸಿ, ಯುದ್ಧಸನ್ನದ್ಧನಾಗಿರು ಎಂದು ತಾಮ್ರಧ್ವಜನು ತನ್ನ ಮಂತ್ರಿಯನ್ನು ಎಚ್ಚರಿಸಿದನು

ತಾಮ್ರಧ್ವಜ ಅನಿರುದ್ಧರ ಯುದ್ಧ.

ಇತ್ತ ಪಾಂಡವರಸೈನ್ಯದ ವೀರರು, ಕುದುರೆಯನ್ನು ಬಿಡಿಸಿಕೊಳ್ಳುವ ಆತುರದಿಂದ ಸೇನೆಯ ಮುಂಭಾಗದಲ್ಲಿ ನಡೆದುಬರುತ್ತಿರುವ ಕೃಷ್ಣನನ್ನು ಹಿಂಬಾಲಿಸಿದರು. ಆಗ ಶ್ರೀಕೃಷ್ಣನು ಅರ್ಜುನನಿಗೆ ತಾಮ್ರಧ್ವಜನನ್ನು ತೋರಿಸಿ ಸತ್ಯವ್ರತನಾಗಿ, ನಿಷ್ಕಾಮಿಯಾಗಿ, ವೈಷ್ಣವಶಿರೋಮಣಿಯಾಗಿರುವ ಇವನನ್ನು ಗೆಲ್ಲುವುದಸಾಧ್ಯ. ಇವನ ತಂದೆ ರೇವಾತೀರದಲ್ಲಿ ಯಜ್ಞದೀಕ್ಷಿತನಾಗಿರುವನು ಎಂದು ಹೇಳಿ ಹದ್ದಿನ ಆಕಾರದಲ್ಲಿ ತನ್ನ ಸೇನೆಯನ್ನು ನಿಲ್ಲಿಸಿ, ಕತ್ತಿನಬಳಿಯಲ್ಲಿ ಅನುಸಾಲ್ವನೂ, ಕಣ್ಣುಗಳೆಡೆಗಳಲ್ಲಿ ಹಂಸಧ್ವಜ ನೀಲಕೇತುಗಳೂ, ರೆಕ್ಕೆಗಳಹತ್ತಿರ ಮನ್ಮಥಾನಿರುದ್ಧರೂ, ಕಾಲುಗಳಬಳಿ ಭೋಜಸಾತ್ಯಕಿಗಳೂ, ಪುಕ್ಕದಕಡೆಗೆ ಮೇಘನಾದ ಯೌವನಾಶ್ವರೂ, ನಿಲ್ಲುವಂತೆ ಕಟ್ಟುಮಾಡಿ, ಕೊಕ್ಕಿಗೆ ಬಭ್ರುವಾಹನ ವೃಷಕೇತುಗಳನ್ನೂ, ಅವಯವಸ್ಥಾನದಲ್ಲಿ ಉಳಿದ ಸೇನೆಯನ್ನು ನಿಲ್ಲಿಸಿ, ಅದರ ಹೃದಯದಲ್ಲಿ ಸೇನಾಸಹಿತನಾದ ಅರ್ಜುನನನ್ನು ನಿಲ್ಲಿಸಿ ತಾನು ಸಾರಥಿಯಾಗಿ ರಥವನ್ನುಹತ್ತಿ ಯುದ್ಧಸನ್ನದ್ಧನಾಗಿ ಪಾಂಚಜನ್ಯವನ್ನೂ ಊದಿದನು. ಆ ಪಾಂಚಜನ್ಯ ಧ್ವನಿಯನ್ನು ಕೇಳಿ ತಾಮ್ರಧ್ವಜನು ಉಬ್ಬಿದ್ದ ರೋಮಾಂಚನದಿಂದ ವೀರಾವೇಶವುಳ್ಳವನಾಗಿ, ಬಿಲ್ದಿರುವಿಗೆ ಬಾಣವನ್ನು ಹೂಡಿ, ಕೃಷ್ಣನಿಗೆದುರಾಗಿ ನಿಂತು ಸ್ವಾಮಿ ! ನಾನು ಅರ್ಜುನನ ಕುದುರೆಯನ್ನು ಕಟ್ಟದೆ ನಿನಗೆ ಅಭಿಮಾನವಿದ್ದರೆ ಅದನ್ನು ಬಿಡಿಸಿ ಅರ್ಜುನನನ್ನು ರಕ್ಷಿಸು, ಇಲ್ಲದಿದ್ದರೆ ನೀನೆ ಚಕ್ರವನ್ನು ಧರಿಸಿ ಯುದ್ಧಕ್ಕೆನಿಲ್ಲು ಇಲ್ಲವೆ ಶಾರ್ಙವನ್ನು ತುಡುಕಿ ಇದಿರಾಗು ನಾನೆಂದಿಗೂ ಹೆದರುವನಲ್ಲ. ನಿನಗೆ ಸಾಹಸವಿದ್ದರೆ ಈ ನನ್ನ ಕುದುರೆಯನ್ನು ಕಟ್ಟು ನೋಡೋಣ ಎಂದು ಅಬ್ಬರಿಸಿ ಮೂರು ಬಾಣಗಳಿಂದ ಕೃಷ್ಣನನ್ನೂ, ಐದು ವಿಶಿಖಗಳಿಂದ ಸಾರಥಿಯನ್ನೂ, ನಾಲ್ಕು ನಾರಾಚಗಳಿಂದ ಕುದುರೆಗಳನ್ನೂ, ಇಪ್ಪತ್ತು ಕೂರ್ಗಣೆಗಳಿಂದ ಅರ್ಜುನನನನ್ನೂ, ಎಂಟು ಕೋಲ್ಗಳಿಂದ ಭೋಜಪತಿಯನ್ನೂ, ಒಂಭತ್ತು ಸರಳುಗಳಿಂದ ಸಾತ್ಯಕಿಯನ್ನೂ, ಎಪ್ಪತ್ತು ಬಾಣಗಳಿಂದ ಹಂಸಧ್ವಜನನ್ನೂ ನೋಯಿಸಿ, ವೃಷಕೇತು, ಬಭ್ರುವಾಹನ, ಅನುಸಾಲ್ವ, ಯೌವನಾಶ್ವ, ಅನಿರುದ್ಧ, ನೀಲಧ್ವಜರಿಗೆ ಎರಡೆರಡು ಬಾಣಗಳನ್ನು ಹೊಡೆದನು. ಕೃಷ್ಣನು ಆತನ ಪರಾಕ್ರಮಕ್ಕೆ ಮೆಚ್ಚಿದನು. ಅರ್ಜುನನು ತಲೆದೂಗಿದನು. ಉಳಿದ ವೀರರು

ಕೋಪಭೀಷಣರಾಗಿ ವಿಹಾರಿದ ಪರಾಕ್ರಮವನ್ನು ತೋರಿಸುತ್ತಿದ್ದರು. ಆಗ ಅನಿರುದ್ಧನು ಇದಿರಾಗಿ ಬಂದು ಎಲೈ ಮೂಢನೇ ! ವಿವೇಕಶೂನ್ಯನಾಗಿ ವಿಚಾರಮಾಡದೆ ಯುದ್ಧಕ್ಕೆ ಬಂದೆಯಲ್ಲಾ ಇಗೋ ನಾನೆ ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನು. ನನ್ನ ಸಾಹಸವನ್ನು ನೋಡು ಎಂದು ನೂರು ಬಾಣಗಳನ್ನು ಹೊಡೆದು ಬೊಬ್ಬಿರಿದನು. ಅನಂಗನಿಗೆ ಮಗನಾಗಿ, ಬಾಣಜಾತೆಯ ಗಂಡನಾಗಿ, ಅಳಿಯನೆಂಬಭಿಮಾನದಿಂದ ಬಾಣಾಸುರನಿಂದ ಸಂರಕ್ಷಿಸಲ್ಪಟ್ಟ ಶೂರನಲ್ಲವೆ ನೀನು ನಿನ್ನ ಬಾಣಜಾಲಗಳು ನನ್ನೆದುರಿಗೆ ನಿಲ್ಲುವುವೆ ? ಹೇಳು ಎಂದು ಸಾವಿರ ಬಾಣಗಳನ್ನು ಸುರಿಸಿದ ತಾಮ್ರಧ್ವಜನ ಬಾಣಗಳನ್ನು ಇಕ್ಕಡಿಯಾಗಿ ಕಡಿದು, ಎಲೈ ಮಂದಮತಿಯೇ ! ಹಿಂದಿಣ ಪ್ರಸಂಗದಿಂದ ಫಲವೇನು ? ಯುದ್ಧದಲ್ಲಿ ತೋರಿಸಬೇಕಾದುದು ಮಾತುಗಳ ಜಾಣತನವೋ, ಮೊನೆಗಾರತನವೋ, ಸುಮ್ಮನೆ ಬೆರೆಯಬೇಡ ಈಗ ನನ್ನ ಸಾಹಸವನ್ನು ನೋಡು. ನಿನ್ನ ಪ್ರಾಣವನ್ನು ಉಳಿಸಿಕೋ ಎಂದು ತಾಮ್ರಧ್ವಜನ ರಥ, ಕುದುರೆ, ಸಾರಥಿ, ಬಿಲ್ಲು, ಬಾಣ, ಬತ್ತಳಿಕೆ, ಕವಚಗಳನ್ನು ಕಡಿದು ನೋಡುವವರ ಕಣ್ಣುಗಳು ಕುರುಡಾಗುವಂತೆ ಬೊಬ್ಬಿರಿದು ಶತ್ರುಸೇನೆಯನ್ನು ಮುತ್ತಿದನು. ಅನಿರುದ್ಧನ ಬಾಣಜಾಲದಿಂದ ತಾಮ್ರಧ್ವಜನ ಸೇನೆಯು ಸೊಕ್ಕಡಗಿತು ಮುಕ್ಕಳಿಸಿ ಸೋರುವ ರಕ್ತಧಾರೆಯಿಂದ ಮೈಮರೆದು ಮಲಗಿದರು. ತಾಮ್ರಧ್ವಜನು ಮತ್ತೊಂದು ಹೊಸರಥವನ್ನೇರಿ ಇಮ್ಮಡಿಯಾದ ಕೋಪವೂ, ಮುಮ್ಮಡಿಯಾದ ಮೂಲಬಲವೂ, ನಾಲ್ವಡಿಯಾದ ಶೌರ್ಯವೂ, ಐವಡಿಯ ಅಗ್ಗಳಿಕೆಯೂ, ಒಟ್ಟಾಗಿ ಸಂದಿರಲು, ಹೊಸದಾದ ಬಿಲ್ಲಿಗೆ ಹೆದೆಯನ್ನೇರಿಸಿ ಕೃಷ್ಣನ ಮೊಮ್ಮಗನೆಂದು ಸ್ಮರಿಸಿ ಸುಮ್ಮನಿದ್ದರೆ ನಿನ್ನ ಪೌರುಷವು ತೌರೂರಿಗೈದಿದ ತರಳೆಯಂತೆ ಬಲವಾಯಿತೆ ಆಗಲಿ ಈ ಬಾಣಘಾತವನ್ನು ಸೈರಿಸು ನೋಡೋಣವೆಂದು ಪ್ರಳಯಾಗ್ನಿಯಂತಹ ಬಾಣವನ್ನು ಹೊಡೆದನು. ಆ ಬಾಣವು ಕಾಲರುದ್ರನ ಫಾಲನೇತ್ರಗಳ ದಳ್ಳುರಿಯಂತೆ ಚತುರಂಗವನ್ನು ಬೆಂಬೂದಿಯಾಗಿ ಸುಟ್ಟು ಅನಿರುದ್ಧನನ್ನು ಮೂರ್ಛೆಗೆಡಹಿತು. ಕೂಡಲೆ ವೀರಾಗ್ರಗಣ್ಯರಾದ ಅನುಸಾಲ್ವ ಮನ್ಮಥ ಸಾತ್ಯಕಿಗಳು ಮುಂದೆಬಂದು ಯುದ್ಧಕ್ಕನುವಾದರು. ಆದರೇನು, ತಾಮ್ರಧ್ವಜನ ಧೈರ್ಯವು ದಟ್ಟವಾಯಿತು. ಶೌರ್ಯವು ಸೂಳೇರಿತು. ಕೋಪವು ಕಡಿಮೆಯಾಯಿತು. ಕೈಗಳು ಬಾಣವನ್ನು ಹೂಡಿದವು. ಭುಜಗಳು ಬಲವನ್ನು ಮೀರಿ ತಮ್ಮ ಸಾಹಸವನ್ನು ವೈರಿವೀರರಿಗೆ ತೋರುವಂತೆ ಕೂರ್ಗಣೆಗಳನ್ನು ಬೀರಿದವು. ಎಲೈ ಜನಮೇಜಯರಾಯನೇ ! ಇನ್ನು ಹೇಳುವುದೇನು ? ತಾಮ್ರಧ್ವಜನ ಬಾಣಗಳು ಹಂಸಧ್ವಜನನ್ನು ಬಡಿದು ಕೃತವರ್ಮ ಸಾತ್ಯಕಿಗಳನ್ನು ಕಡಿದು, ಬಭ್ರುವಾಹನ ಯೌವನಾಶ್ವರನ್ನು ನೋಯಿಸಿ, ನೀಲಧ್ವಜ

ಅನುಸಾಲ್ವರನ್ನು ಗಾಯಗಾಣಿಸಿ, ಮನ್ಮಥನನ್ನು ಮೂರ್ಛೆಗೊಳಿಸಿ, ಕೃಷ್ಣಾರ್ಜುನರಬಳಿಗೈ ಬರುತ್ತಿದ್ದಿತು. ಅದನ್ನು ಕಂಡು ವೃಷಕೇತು ಕೆಂಗಿಡಿಗಳನ್ನು ಕೆದರುವ ಕೂರ್ಗಣ್ಣುಗಳನ್ನು ತಿರುಗಿಸುತ್ತ ತಾಮ್ರಧ್ವಜನ ಮುಂದೆನಿಂತು ಬಾಣಗಳನ್ನು ಹೊಡೆದು ಬೊಬ್ಬಿರಿದನು. ಕ್ಷಣಮಾತ್ರದಲ್ಲಿ ಆತನ ರಥವನ್ನು ಕಡಿದು ತುಂಡುತುಂಡಾಗಿ ಮಾಡಿದನು. ಕೂಡಲೆ ತಾಮ್ರಧ್ವಜನು ಹೊಸರಥವನ್ನು ಹತ್ತಿಬಂದನು, ವೃಷಕೇತುವು ಕೇತು ಸಾರಥಿ ರಥಾಶ್ವಗಳಿಂದ ಕೂಡಿದ ಆ ತೇರನ್ನು ಕೋಲ್ಗರಿಗಳಿಂದ ಸದೆದು, ವೃಷಕೇತುವನ್ನು ಹೊಡೆದು ಮೂರ್ಛೆಗೊಳಿಸಿದನು. ಬಳಿಕ ಪಾಂಡುವ ಸೈನ್ಯದ ಗಂಡುಗಲಿಗಳಾದ ಬಭ್ರುವಾಹನಾದಿಗಳು ಸಾಹಸದಿಂದ ಕಾದಾಡಿ, ಶೌರ್ಯವಡಗಿ, ಸೈಗೆಡೆದು ಭೂಮಿಗುರುಳಿದರು. ಅದನ್ನು ಕಂಡು ಅರ್ಜುನನು ತನ್ನ ಸೈನ್ಯದ ಕಟ್ಟಾಳುಗಳು ಕಡಿವಡುರುಳಿದರೆಂಬ ರೋಷದಿಂದ ಕೆಂಗಿಡಿಗಳನ್ನು ಕಾರುತ್ತಿರುವ ಕಣ್ಣುಗಳನ್ನು ತಿರುವುತ್ತ ಬಿಲ್ಲನ್ನು ತುಡುಕಿ ಕೆಂಗರಿಯ ಬಾಣಗಳನ್ನು ಹೂಡಿ ಭೂಮಿಯೂ ಆಕಾಶವೂ ಒಂದಾಗುವಂತೆ ಬಾಣಗಳನ್ನು ಹೊಡೆದನು.

ಆಗ ತಾಮ್ರಧ್ವಜನು ಓ ಅರ್ಜುನಾ ! ಬಹಳ ಚೆನ್ನಾಯಿತು. ನೀನು ಕೃಷ್ಣನ ಸಹಾಯದಿಂದ ಇದುವರೆಗೆ ಕಾದಿದ ವೀರರನ್ನು ಗೆದ್ದೆಯಲ್ಲಾ ! ನಿನ್ನ ಹೆಮ್ಮೆಯನ್ನು ಬಿಡು ನನ್ನೊಡನೆ ಕಾದುವ ಯೋಚನೆಯನ್ನು ಮಾಡಬೇಡ ! ನಾನು ನಿನ್ನ ಗೋತ್ರಹತ್ಯಾದೋಷವನ್ನು ಹೋಗಲಾಡಿಸಿಕೊಳ್ಳುವುದಕ್ಕೆ ಬೇಕಾದಷ್ಟು ಕುದುರೆಗಳನ್ನು ಕೊಡುವೆನು ಆಹಾ ! ಶ್ರೀಕೃಷ್ಣನು ಪ್ರತ್ಯಕ್ಷವಾಗಿರುವಲ್ಲಿ ಯಜ್ಞವನ್ನು ಮಾಡಲುಜ್ಜುಗಿಸಿ, ಹಣದಾಸೆಯಿಂದ ದಾನಮಾಡದೆ ಹೋದ ಮೂಢನಂತೆ ಆದೆಯಲ್ಲಾ ! ನಿನ್ನ ವಿವೇಕವನ್ನು ಏನು ಹೇಳಲಿ ಎಂದು ಬಾಣವನ್ನು ಹೊಡೆದನು. ಬಳಿಕ ಅರ್ಜುನನು ಎಲವೋ ಮೂಢಮತಿ ! ಸದ್ಧರ್ಮದಿಂದ ಸಂಪಾದಿಸಿದ ಹಣವನ್ನು ದಾನದಲ್ಲಿ ವಿನಿಯೋಗಿಸಬೇಕಲ್ಲದೆ ನಿರರ್ಥಕವಾದ ದ್ರವ್ಯದಿಂದ ದಾನ ಧರ್ಮಗಳನ್ನು ಮಾಡಬಹುದೆ ? ಸತ್ಕರ್ಮ ಸ್ವಾಧೀನನೆನಿಸಿ ಯಜ್ಞಸ್ವರೂಪನಾಗಿರುವ ಶ್ರೀಕೃಷ್ಣನ ಬಗೆಯನ್ನು ನೀನು ಬಲ್ಲೆಯಾ ! ಎಂದು ಗರ್ಜಿಸಿ ಬಾಣಜಾಲಗಳನ್ನು ಹೊಡೆದು ತಾಮ್ರಧ್ವಜನ ಅಶ್ವ ಸಾರಥಿ ಧ್ವಜ ರಥಗಳನ್ನು ಇಕ್ಕಡಿಗೈದನು.

## ಅರ್ಜುನ ತಾಮ್ರಧ್ವಜರ ಯುದ್ಧ.

ರೋಷಭೀಷಣನಾದ ತಾಮ್ರಧ್ವಜನು ಬಳಿಕ ಹೊಸ ರಥವನ್ನೇರಿ ಹೊಯ್ದಾಡಲಾರಂಭಿಸಿದನು. ಅರ್ಜುನನು ಮಸೆದ ಬಾಣಜಾಲಂಗಳಿಂದ ಹೊಡೆದು, ಆ ರಥವನ್ನು ಕೆಡವಿ ಸಾರಥಿ ಕುದುರೆ ಬಿಲ್ಲುಗಳನ್ನು ಕತ್ತರಿಸಿಹಾಕಿ, ಯುದ್ಧರಂಗದಲ್ಲಿ ತಾಮ್ರಧ್ವಜನು ಹತ್ತಿಬಂದ ಒಂದುಸಾವಿರ ರಥಗಳನ್ನು ಕಡಿ

ಮುರುಳಿಸಿದನು. ಅರ್ಜುನನ ಸಾಹಸಕ್ಕೆ ಮೆಚ್ಚಿ ತಲೆದೂಗಿ ತಾಮ್ರಧ್ವಜನು ಅಹಾ ! ನಾನೇನು ಹೇಡಿಯೇ ! ಇವನಿಗೆ ಸೋತುಹೋದಮೇಲೆ ನನ್ನ ಮಾತೆಯು ನನ್ನನ್ನು ಮಗನೆಂದು ಮನ್ನಿಸುವಳೇ ಎಂದು ತನ್ನನ್ನುತಾನೆ ತಿರಸ್ಕರಿಸಿಕೊಂಡು ಸರಳ ಮಳೆಯನ್ನು ಸುರಿಸಿದನು. ಕೂಡಲೆ ಬೆಟ್ಟದಿಂದ ಹರಿದುಬರುವ ಜರಿಯಂತೆ ರಕ್ತಪ್ರವಾಹವು ದೇಹದಿಂದಿಳಿದು ಬರುತ್ತಿರಲು ಅರ್ಜುನನು ಮೂರ್ಛಾಕ್ರಾಂತನಾಗಿ ಭೂಮಿಗೆಬಿದ್ದು ಪುನರ್ಜನ್ಮವನ್ನು ಪಡೆದವನಂತೆ ಮರಳಿ ಎಚ್ಚೆತ್ತು ಎದ್ದುನಿಂತು ತಾಮ್ರಧ್ವಜನ ಧನಸ್ಸನ್ನು ಖಂಡಿಸಿದನು. ಆಗ ತಾಮ್ರಕೇತು ಹೊಸವಾದ ಬಿಲ್ಲನ್ನು ಹಿಡಿದು ಯುದ್ಧದಲ್ಲಿ ಅಸಮಬಲನಾಗಿ ಕಾದುತ್ತ ಕೂರ್ಗಣೆಗಳನ್ನು ಹೊಡೆದು ಅರ್ಜುನನ ರಥವನ್ನು ಒಂದು ಗಾವುದದೂರ ಓಡಿಸಿದನು. ಬಾಣಜಾಲಗಳು ಮೇಘಮಂಡಲವನ್ನು ಮುಚ್ಚಿದವು. ಮುರವೈರಿಯು ಮೆಚ್ಚಿ ತಲೆದೂಗಿದನು. ಇಂತು ವರ್ಣಿಸಲಾಗದ ಪೌರುಷದಿಂದ ಅಜೇಯರಾಗಿ ಅರ್ಜುನ ತಾಮ್ರಧ್ವಜರಿಬ್ಬರೂ, ಏಳುದಿನಗಳವರೆಗೆ ಭಯಂಕರವಾಗಿ ಕಾದಾಡಿದರು. ಆ ಯುದ್ಧದಲ್ಲಿ ತಾಮ್ರಧ್ವಜನು ಅರ್ಜುನನ ನೂರು ರಥಗಳನ್ನು ಕಡಿದು, ಪತಾಕೆಯ ಹನುಮನನ್ನು ಹಲ್ಗಿರಿಯುವಂತೆ ಮಾಡಿ, ಬಲಯುಕ್ತನಾದ ಪಾರ್ಥನನ್ನು ಘಾಸಿಮಾಡಿ ಮೂರ್ಛೆಗೊಳಿಸಿ, ಅರ್ಜುನನ ಕರದಚಾಪವನ್ನೂ ಬಿಲ್ಲಿನ ಹೆದೆಯನ್ನೂ ರಥದ ಕುದುರೆಗಳನ್ನೂ ಕಡಿದು ಕೆಡಹಿ, ಪಾಂಡವಸೇನೆಯಲ್ಲಿ ಶೂರರಾದ ವೃಷಕೇತು ಬಭ್ರುವಾಹನಾದಿಗಳನ್ನು ನೋಡಿ ಮಾರ್ಮಲೆವ ಬಾಣಗಳಿಂದ ಅವರನ್ನೂ ಹೊಡೆದು ಬಹಳಪಾಗಿ ನೋಯಿಸಿದನು. ಉಭಯವೀರರ ಪೌರುಷದಿಂದ ಎರಡು ಸೇನೆಗಳೂ ಬಾಣಮಯವಾಗಿ ಕೆಲಬಲದ ವೀರರೆಲ್ಲರೂ ಬಾಯ್ಬಿಡುವಂತಾಯಿತು.

ಅನಂತರದಲ್ಲಿ ಅತ್ಯಂತ ಕೋಪದಿಂದ ಉಕ್ಕುವ ವೀರರಸದೊಡನೆ ತಾಮ್ರಧ್ವಜನು ಅರ್ಜುನನ ರಥವನ್ನು ಅಂತರಿಕ್ಷಕ್ಕೆ ಹಾರಿಸಿ, ಭೂಮಿಗಪ್ಪಳಿಸಿ, ಪುಟನೆಗೆದು ಹಾರಿ ಆಕಾಶಕ್ಕೆ ಎಸೆದನು. ಕೂಡಲೆ ಭಕ್ತವತ್ಸಲನಾದ ಶ್ರೀಹರಿಯು ತಾನು ಆಗಸಕ್ಕೆಹಾರಿ, ಆ ರಥವನ್ನು ಹಿಡಿದು ನಿಲ್ಲಿಸಿ, ಅರ್ಜುನನಿಗೆ ಅಭಯವನ್ನಿತ್ತು ಸಂತೈಸಿದನು. ಎಲೈ ರಾಜೇಂದ್ರನೇ ! ವಿಷ್ಣುಭಕ್ತರಾದ ಮಹಾತ್ಮರಿಗೆ ಎಂದಿಗಾದರೂ ಪರಿಭವ ಉಂಟಾಗುವುದೆ ? ಎಂದು ದೇವತೆಗಳು ಹೊಗಳುತಿದ್ದರು. ಉಭಯಸೇನೆಗಳೂ ಆಶ್ಚರ್ಯಪಟ್ಟವು ಆಬಳಿಕ ಶ್ರೀಕೃಷ್ಣನು ಅರ್ಜುನನನ್ನು ಕುರಿತು, ಅಯ್ಯಾ ! ಈತನನ್ನು ಗೆಲ್ಲಬೇಕಾದರೆ ನಾವಿಬ್ಬರೂ ಕೈಮಾಡಿದಹೊರತು ನಡೆಯಲಾರದು. ಅಧರ್ಮವೆಂದು ಸುಮ್ಮನಿದ್ದರೆ ನಮಗೆಂದಿಗೂ ಜಯವಾಗಲಾರದು. ಆದಕಾರಣ ನೀನೊಂದು ಕಡೆಯಿಂದ ಬಾಣಗ

ಳನ್ನು ಬಿಡು. ನಾನು ಮತ್ತೊಂದುಕಡೆಯಿಂದ ಕೂರ್ಗಣೆಗಳನ್ನು ಬಿಡುವೆನು ಎಂದುಹೇಳಿ ತಾನು ಹೊಸರಥವನ್ನು ಹತ್ತಿದನು.

ತಾಮ್ರಧ್ವಜನಿಂದ ಕೃಷ್ಣಾರ್ಜುನರು ಮೂರ್ಛೆಹೋದುದು.

ಕೂಡಲೆ ಅರ್ಜುನನೂ ಕೃಷ್ಣನೂ ಬೇರೆಬೇರೆ ರಥಗಳನ್ನು ಹತ್ತಿ ಒಂದೊಂದುಕಡೆಯಿಂದ ಬಾಣಗಳನ್ನು ಹೊಡೆಯುತ್ತಿರಲು, ಬ್ರಹ್ಮಾಂಡವು ಬಾಣಗಳಿಂದ ನಿರ್ಮಿತವಾಯಿತೋ ಎನ್ನುವಂತೆ ಶರಜಾಲಗಳು ತುಂಬಿಕೊಂಡವು. ತಾಮ್ರಧ್ವಜನು ಅವುಗಳನ್ನು ಅರಗಳಿಗೆಯಲ್ಲಿ ಕಡಿದು ಕೃಷ್ಣಾರ್ಜುನರನ್ನು ನೋಯಿಸಿ ಪಾಂಡವರಸೇನೆಯನ್ನು ದಿಂಡುಗೆಡಹಿ ಬೊಬ್ಬಿರಿದು ಎಲೈ ಶ್ರೀಹರಿಯೇ ಬೇರೆಬೇರೆ ಯುದ್ಧಕ್ಕೆ ನಿಂತು ನಿರರ್ಥಕವಾಗಿ ಅರ್ಜುನನನ್ನು ಗಾರುಮಾಡ ನೀನೇ ಆತನಿಗೆ ಸಾರಥಿಯಾಗಿದ್ದರೆ ಸಾಕು ! ನಿನ್ನ ಜಾಣತನವನ್ನು ಬಿಡು ಎಂದು ಕೋಪದಿಂದ ಕಣೆಗಳನ್ನು ಸುರಿಸಿದನು ಬಳಿಕ ಶ್ರೀಕೃಷ್ಣನು ಅರ್ಜುನನ ರಥದಲ್ಲಿ ಕುಳಿತು ಕುದುರೆಗಳ ಕಡಿವಾಣವನ್ನು ಹಿಡಿದು ತೇರನ್ನು ನಡೆಸಿದನು. ಎಡಬಲದ ಶೂರರು ಮೈಯುಡುಗಿ ಬೀಳುವಂತೆ ನಿಡುಗಣೆಗಳನ್ನು ಹೊಡೆದು ಅರ್ಜುನನು ತಾಮ್ರಧ್ವಜನನ್ನು ಅಧಿಕವಾಗಿ ನೋಯಿಸಿದನು. ಆದರೂ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬ ಆಸೆಯಿಂದ ಸಮವಾಗಿ ಕಾದುತ್ತಿರುವ ಆ ಧೀರರಲ್ಲಿ ಅರ್ಜುನನು ಅಂತ್ಯಕಾಲದ ರುದ್ರನಂತೆ ಉಮ್ಮಳಿಸಿ ತಾಮ್ರಧ್ವಜನ ತೇರನ್ನು ಮುರಿದು, ಸಾರಥಿಯನ್ನು ಕೊಂದು, ಕುದುರೆಗಳನ್ನು ಕಡಿದನು. ಆಗ ವಿರಥನಾದ ತಾಮ್ರಧ್ವಜನು ಕೋಪದಿಂದ ಕುದಿಯುತ್ತ ಓಡಿಬಂದು ಅರ್ಜುನನನ್ನು ಹೊಡೆಯುವಷ್ಟರಲ್ಲಿಯೇ ಕೃಷ್ಣನು ಅವನನ್ನು ಒದೆದನು. ಕೂಡಲೆ ಹಳೆಮರವು ಗಾಳಿಯಿಂದ ಭೂಮಿಗೊರಗುವಂತೆ ನೆಲಕ್ಕೆ ಬಿದ್ದು ತಾಮ್ರಧ್ವಜನು ಮರಳಿ ಎಚ್ಚತ್ತು ಹತ್ತುಮಡಿಯಾದ ಕೋಪದಿಂದ ಅಬ್ಬರಿಸಿ, ಮದ್ದಾನೆಯನ್ನು ಏರಿ ಪ್ರಳಯರುದ್ರನಂತೆ ಬಾಣಗಳನ್ನು ಸುರಿಸಿದನು.

ಅನಂತರದಲ್ಲಿ ತಾಮ್ರಧ್ವಜನ ಹಾವಳಿಯನ್ನು ಸಹಿಸಲಾರದೆ ಶ್ರೀಕೃಷ್ಣನು ಮೂರುಲೋಕಗಳೂ ನಡುಗುವಂತೆ ತಾನು ಚಕ್ರವನ್ನು ಧರಿಸಿ ಯುದ್ಧಕ್ಕೆ ನಿಂತನು. ಶ್ರೀಹರಿಯು ಮಾರ್ಮಲೆವ ಮಹಾಸೈನ್ಯದೊಡನೆ ಕಾದುತ್ತಿರುವ ತಾಮ್ರಧ್ವಜನಮೇಲೆ ಚಕ್ರವನ್ನು ತಿರುಗಿಸಿ ಹೊಡೆಯಲು, ಚಕ್ರದಾರೆಗಳ ಸೋಂಕಿನಿಂದ ಅನೇಕ ಅಕ್ಷೋಹಿಣಿಯ ಸೇನೆಯು ಮಡಿದುಬಿದ್ದಿತು. ಅದನ್ನು ಕಂಡು ಕೂರ್ಗಣೆಗಳನ್ನು ಹೊಡೆದು ತಾಮ್ರಧ್ವಜನು ಎಲೈ ಭಕ್ತವತ್ಸಲನೇ ! ವ್ಯರ್ಥವಾಗಿ ಸೇನಾಜನರನ್ನು ಕೊಂದರೆ ಫಲವೇನು ? ಮೊದಲು ಅರ್ಜುನನಿಗಾಗಿ ನಿನ್ನ ಪುಣ್ಯವನ್ನು ದಾನಮಾಡಿದೆ ಈಗ ನಿನ್ನ ಮೈದುನನಿಗಾಗಿ

ನಿನ್ನೊಡಲನ್ನು ನನಗೆ ತೋರಬೇಡ ಸುಮ್ಮನಿರು. ಕ್ಷಣಮಾತ್ರದಲ್ಲಿ ನಿನ್ನೊಡನೆ ಅರ್ಜುನನನ್ನು ಹಿಡಿದುಕಟ್ಟಿ ನನ್ನ ತಂದೆಗೆ ಸಮರ್ಪಿಸಿ ಯಜ್ಞವನ್ನು ಮಾಡಿಸುವೆನು ನನ್ನ ಸಾಹಸವನ್ನು ನೋಡು ಎಂದು ರಭಸದಿಂದೋಡಿಹೋಗಿ ಶ್ರೀಕೃಷ್ಣನನ್ನು ತಬ್ಬಿ ಹಿಡಿದುಕೊಂಡು ಒಂದು ಕೈಯಿಂದವನ ಪಾದಗಳನ್ನು ಹಿಡಿದು ಹಣೆಗೊತ್ತುಗೊಟ್ಟು ಅರ್ಜುನನಕಡೆಗೋಡಿಬಂದನು ಆಗ ತಾಮ್ರಧ್ವಜನ ಹಿಡಿಯಲ್ಲಿ ಅಡಕವಾಗಿರುವ ಕೃಷ್ಣನು ಅರ್ಜುನನನ್ನು ಕುರಿತು ಮಹಾಸ್ತ್ರವನ್ನು ಹೂಡಿ ಹೊಡೆಯೆಂದು ಸೂಚಿಸಲು ಗಾಂಡೀವದಲ್ಲಿ ಬಾಣವನ್ನು ಹೂಡಿ ಬಿಡುವಷ್ಟರಲ್ಲಿಯೇ ವೇಗದಿಂದ ಬಂದು ತೊಡರುಗಾಲಿನಿಂದ ಆವನನ್ನು ಕೆಡವಿ ಕೃಷ್ಣ ಅರ್ಜುನರಿಬ್ಬರನ್ನೂ ಒಂದಾಗಿ ಬಿಗಿದುಕಟ್ಟಿ ಮುರಹರನ ಪಾದಘಾತದಿಂದ ಮೂರ್ಛೆವೋಗಿ ಮೈಮರೆದನು. ಕೃಷ್ಣಾರ್ಜುನರು ದೀರ್ಘನಿದ್ರೆಯನ್ನು ಪಡೆದರು. ಬಳಿಕ ಸ್ವಲ್ಪಹೊತ್ತಿಗೆ ಎಚ್ಚತ್ತು ತಾಮ್ರಧ್ವಜನು ತನ್ನೊಡನೆ ಕಾದುವ ವೀರರಾರೂ ಇಲ್ಲದುದನ್ನು ಕಂಡು, ಎರಡು ಕುದುರೆಗಳನ್ನೂ ತೆಗೆಸಿಕೊಂಡು ಸೇನಾಸಹಿತನಾಗಿ ತನ್ನ ಪಟ್ಟಣಕ್ಕೆ ಬಂದು, ಪುರದ ಬಹಿರುದ್ಯಾನದ ಯಾಗಮಂಟಪದಲ್ಲಿ ದೀಕ್ಷಾಬದ್ಧನಾಗಿ ಬ್ರಾಹ್ಮಣಮಂಡಲಿಯೊಡನೆ ಕುಳಿತಿರುವ ತಂದೆಯನ್ನು ಕಂಡು ನಮಸ್ಕರಿಸಿ, ಎರಡು ಕುದುರೆಗಳನ್ನು ಒಪ್ಪಿಸಿ ನಿಂತುಕೊಂಡಿರಲು ಮಯೂರಧ್ವಜನು ಮಗನನ್ನು ಕುರಿತು ಎಲೈ ವತ್ಸನೇ ! ಕುದುರೆಯನ್ನು ಬಿಟ್ಟು ಒಂದು ವರುಷವಾಗದಿದ್ದರೂ ಹಿಂದಿರುಗಿಬರಲು ಕಾರಣವೇನು ? ನಮ್ಮ ಕುದುರೆಯೊಡನೆ ಬಂದಿರುವ ಮತ್ತೊಂದು ಕುದುರೆಯಾವುದು ? ಯಾವ ರಾಯರೊಡನೆ ನಿನಗೆ ಕಾಳಗವಾಯಿತು ? ಈಗ ನನ್ನಬಳಿಗೆ ಬಂದ ಕಾರಣವೇನು ? ಹೇಳು ಎಂದು ಕೇಳಿದನು. ಅದನ್ನು ಕೇಳಿ ತಾಮ್ರಧ್ವಜನು ಎಲೈ ರಾಜಶಿಖಾಮಣಿಯೇ ! ಈ ಕುದುರೆಯು ಧರ್ಮರಾಯನದು. ಇದರ ಕಾವಲಿಗಾಗಿ ಕೃಷ್ಣಾರ್ಜುನರು ಅಸಮಬಲದೊಡನೆ ನಡೆತಂದರು. ಅವರೊಡನೆ ನನಗೆ ಯುದ್ಧವು ಕೈಗಟ್ಟಿತು ನಾನು ಅವರನ್ನು ಸೋಲಿಸಿ, ಕಟ್ಟಿ ಕೆಡವಿ ನಮ್ಮ ಕುದುರೆಯೊಂದಿಗೆ ಅವರ ಅಶ್ವವನ್ನು ಹಿಡಿದು ತಂದಿರುವೆನೆಂದು ಬಿನ್ನಯಿಸಿದನು. ಕೂಡಲೆ ಮಯೂರಧ್ವಜನು ಶಂಕಯುಚಿತ್ತನಾಗಿ, ಮಂತ್ರಿಯಾದ ನಕುಲಧ್ವಜನನ್ನು ನೋಡಿದನು. ಮಂತ್ರಿವರ್ಯನು ನಡೆದ ಸಂಗತಿಯನ್ನು ವಿಸ್ತರಿಸಿ ಹೇಳಲು ತಾಮ್ರಧ್ವಜನು ಮಾಡಿದ ಮೂಢಕಾರ್ಯವನ್ನು ಕುರಿತು ಚಿಂತಿಸುತ್ತ ಮಯೂರಕೇತುವು ಅಹಾ ! ರಾಜಕಾರ್ಯವನ್ನು ಕೆಡಿಸಿದೆ. ಪ್ರತ್ಯಕ್ಷನಾಗಿ ಬಂದು ಶ್ರೀಹರಿಯು ಮೈದೋರಿದಮೇಲೆ ನಮಗೆ ಯಾಗವೇಕೆ ? ನರನಾರಾಯಣಾವತಾರಿಗಳಾದ ಕೃಷ್ಣಾರ್ಜುನರನ್ನು ನನ್ನ ಬಳಿಗೆ ಕರೆದುತಾರದೆ, ಕತ್ತೆಯರೂಪದ ಕುದುರೆಯನ್ನು ಹಿಡಿದುತಂದು ನೀನು ಮೂಢ

ನಾದೆ ಇಂಥವನು ನನಗೆ ಮಗನಾಗಿದ್ದರೂ ಹಗೆಯೇ ಸರಿ ! ನಿನ್ನ ಮೂಢಬುದ್ಧಿಯನ್ನು ಏನು ಹೇಳಲಿ ! ಕಲಾವಿದನಾಗಿ ಕಾಮಕೇಳಿ ವಿನೋದಚತುರನಾದ ಪತಿಯು ಮಂಚದಲ್ಲಿ ಮಲಗಿರುವಾಗ ಮೈಮರೆದು ನಿದ್ರೆಮಾಡುವ ಅಧಮಾಂಗನೆಯಂತೆ ನಿನ್ನ ಬುದ್ಧಿಯು ತ್ರಿಲೋಕನಿಂದ್ಯವಾಯಿತು ಛೀ! ಛೀ! ನಿನ್ನ ಕಾರ್ಯವು ತುಲಸಿಯನ್ನು ಹಿಡಿದು ತಾವರೆಯನ್ನು ನೂಕಿ ಹೂಮಾಲೆಯನ್ನು ಕಟ್ಟಿದಂತೆ ಆಯಿತಲ್ಲಾ ! ಕೃಷ್ಣಾರ್ಜುನರನ್ನು ಬಿಟ್ಟುಬಂದ ಬಳಿಕ ಈ ಕುದುರೆಯಿಂದಲೂ ಯಜ್ಞದಿಂದಲೂ ಫಲವೇನು ? ಅವರು ಎಲ್ಲಿರುವರು ಅದನ್ನಾದರೂ ಹೇಳು ನೋಡೋಣ ಎಂದು ಬಿಸುಸುಯ್ದು, ಸಾಕು ! ಇನ್ನು ಈ ಕುದುರೆಗಳನ್ನು ಓಡಿಸು ! ಯಾಗವು ಪೂರ್ತಿಯಾಯಿತು. ಕೃಷ್ಣಾರ್ಜುನರನ್ನು ತೋರಿಸು ಎಂದು ಮಗನನ್ನು ಹಗೆಯನ್ನು ಕಂಡಂತೆ ಜಗರಣದ ನುಡಿಗಳಿಂದ ನೋಯಿಸಿ ಕೃಷ್ಣಾರ್ಜುನರನ್ನು ಕಾಣಬೇಕೆಂಬ ಕುತೂಹಲದಿಂದ ಕೂಡಿ ಹೆಂಡತಿಯೊಡನೆ ದೇವಪುರನಿಲಯ ಲಕ್ಷ್ಮೀರಮಣನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ ರಾತ್ರಿಯನ್ನು ಕಳೆದನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿ ನಾಗಶರ್ಮ ಪ್ರಣೀತ ಜೈಮಿನಿ ಭಾರತ ಕಥಾ ಸಂಗ್ರಹದಲ್ಲಿ ಇಪ್ಪತ್ತೈದನೆಯ ಸಂಧಿ ಸಂಪೂರ್ಣಂ ಶ್ರೀ. ಶ್ರೀ. ಶ್ರೀ.

# ಇಪ್ಪತ್ತಾರನೆಯ ಸಂಧಿ.

ಮಯೂರಧ್ವಜನು ವೇಷಧಾರಿಯಾದ ವಿಷ್ಣುವಿಗೆ ತನ್ನ ಅರ್ಧ ದೇಹವನ್ನು ಕೊಯ್ದುಕೊಟ್ಟುದು.

ಎಲೈ ಜನಮೇಜಯರಾಯನೇ ಲಾಲಿಸು. ಹೀಗೆ ಮಯೂರಧ್ವಜನು ಕೃಷ್ಣಸಂದರ್ಶನ ಕುತೂಹಲದಿಂದಿರುತ್ತಿರಲು, ರಣಭೂಮಿಯಲ್ಲಿ ಮೂರ್ಛೆ ಹೋಗಿದ್ದ ಕೃಷ್ಣಾರ್ಜುನರಿಗೂ ಸೇನಾಜನರಿಗೂ, ಎಚ್ಚರವಾಯಿತು. ಕೂಡಲೆ ಕೃಷ್ಣನು ಎಲ್ಲರನ್ನು ಸಂತೈಸಿ, ಚೋರಬುದ್ಧಿಯಿಂದ ಒಂದಾನೊಂದು ಉಪಾಯವನ್ನು ಹುಡುಕಿ ಅರ್ಜುನನನ್ನು ಕುರಿತು ಇಂತೆಂದನು. ವಿಜಯಾ ತಾಮ್ರಧ್ವಜನ ಪರಾಕ್ರಮವನ್ನು ನೋಡಿದೆಯಾ ! ನಮ್ಮಿಬ್ಬರನ್ನು ಸೋಲಿಸಿ ಸೇನೆಯನ್ನು ಸದೆದು ಕುದುರೆಯನ್ನು ತೆಗೆದುಕೊಂಡು ರತ್ನಪುರಿಗೆ ಹೊರಟು ಹೋದನಲ್ಲಾ ! ಇನ್ನು ಅಡಿ ಫಲವೇನು ? ಸೇನೆಯು ಹಿಂದುಳಿದು ಮೆ ಮೆಲ್ಲಗೆ ರತ್ನಪುರಿಗೆ ಬರಲಿ ! ನೀನು ನನ್ನೊಡನೆ ಬಾ ! ಎಂದು ಹೇಳ

ಅರ್ಜುನನು ಅಡಕ್ಕೊಕಪ್ಪಿ ಹಿಂದುಳಿದು ಬರುವಂತೆ ಸೇನಾಜನರಿಗೆ ಆಜ್ಞೆಮಾಡಿ ತಾನು ಶ್ರೀಕೃಷ್ಣನನ್ನು ಹಿಂಬಾಲಿಸಿ ಹೊರಟನು.

ಬಳಿಕ ಕಪಟನಾಟಕ ಸೂತ್ರಧಾರಿಯಾದ ಶ್ರೀಹರಿಯು ರೂಪುಗಾಣಿಸದಂತೆ ತಾನು ವೃದ್ಧಬ್ರಾಹ್ಮಣನಾಗಿ, ಅರ್ಜುನನನ್ನು ತನಗೆ ಕೈಗೊಟ್ಟು ನಡೆಸುವ ಬಾಲಕನನ್ನಾಗಿ ಮಾಡಿಕೊಂಡು ರತ್ನಪುರಿಗೆ ಬರುತ್ತಿರಲು, ಲೋಕವನ್ನೆಲ್ಲ ಆವರಿಸಿಕೊಂಡು ಕೆಡಿಸುತ್ತಿರುವ ಕತ್ತಲೆಯನ್ನು ಒಂದುಕಡೆಯೂ ನಿಲ್ಲಲೀಸದೆ ಅಟ್ಟಾಡಿಸಿ ಬಳಲಿ ಬೆಂಡಾಗಿ, ಸೂರ್ಯನು ಮೆಲ್ಲಮೆಲ್ಲನೆ ಆಕಾಶಮಾರ್ಗದಿಂದಿಳಿದು ಪಶ್ಚಿಮಸಮುದ್ರದ ಅಲೆಗಳ ನಡುವೆ ಅಲೆಯ ತೊಡಗಿದನು. ಹೀಗೆ ಸೂರ್ಯನು ಮುಳುಗಲು ಆಕಾಶದಲ್ಲಿ ಅಲ್ಲಲ್ಲಿ ನಕ್ಷತ್ರಗಳು ಹೊಳೆದುವು. ಕತ್ತಲೆಯು ಲೋಕವನ್ನು ಮುತ್ತಲಾರಂಭಿಸಿತು. ತಾವರೆಗಳು ಮುಗಿದುವು ಪ್ರೇಮಕಲಹದಲ್ಲಿ ಮುನಿದು ಮೊರೆಯುತ್ತಿದ್ದ ವನಿತೆಯರ ಮನವು ಚಲಿಸುವಂತೆ ಮನ್ಮಥನು ಮಂತ್ರವನ್ನು ಹಾಕತೊಡಗಿದನು. ಚಕ್ರವಾಕಗಳು ಕೊರಗಿದವು. ಹೊತ್ತುಹೊತ್ತಿಗೆ ಅಧಿಕವಾಗುತ್ತ ಬಲವಾದ ಕತ್ತಲೆಯು ಲೋಕವನ್ನು ಮುತ್ತಿಕೊಂಡಿತು. ಚಿತ್ತಜನು ಕತ್ತಿಯನ್ನು ಕಿತ್ತು ಹೊಡೆಯಲಾರಂಭಿಸಿದನು. ಮತ್ತೇಭ ಕುಂಭಸ್ತನಿಯರು ತಂತಮ್ಮ ತೆತ್ತಿಗರನ್ನು ಒತ್ತಿಗೆಬರುವಂತೆ ಮೋಹದಿಂದ ಹುಡುಕುತ್ತಿದ್ದರು. ಇಂಥ ಕತ್ತಲೆಯಲ್ಲಿ ಕೃಷ್ಣಾರ್ಜುನರು ರತ್ನಪುರವನ್ನು ಹೊಕ್ಕು ಮಹತ್ತಾದ ನಿದ್ರೆಯಿಂದ, ಊರಿನವರೆಲ್ಲರೂ ಮಲಗಿದಕಾಲದಲ್ಲಿ ಕಾಮಕೇಳಿಯ ಭ್ರಮೆಯಿಂದ ಮನೆಯನ್ನುಬಿಟ್ಟು ಹೊರಗೆ ಬಂದು ಸಂಚರಿಸುತ್ತಿರುವ ಸುಂದರಾಂಗಿಯರ ವಿನೋದವನ್ನು ನೋಡುತ್ತ ಬರುತ್ತಿದ್ದರು. ಅಲ್ಲಿ ಒಂದುಕಡೆ ಒಡವೆಗಳು ಅಲುಗಾಡಿದರೆ ಕಣ್ಣಿನ ಬೆಳಕು ಹೊಳೆದರೆ ಸೊಂಪಾದ ಅವಯವದ ಗಂಧವು ಹೊಮ್ಮಿದರೆ ಮಲಗಿದವರು ಎಚ್ಚೆತ್ತು ತಮ್ಮ ಲೀಲಾಕೇಳಿಯನ್ನು ಕಾಣುವರೆಂಬ ಭಯದಿಂದ ಮೆಲ್ಲಮೆಲ್ಲನೆ ಬರುತ್ತಿರುವ ಒಬ್ಬ ಕಾಮಿನಿಯನ್ನು ಕಂಡು, ಅಭಿಲಾಷೆಯಿಂದಡ್ಡಗಟ್ಟಿದ ವಿಟನು ಮತ್ತೇಭಗಾಮಿನಿ ! ಭೃಂಗನೀಲಕುಂತಳೆ ! ಪನ್ನಗವೇಣಿ ! ಹೆದರಬೇಡ ನಿನ್ನ ಬೇಟದಾಟವು ಬೇರೊಬ್ಬರಿಗೂ ತಿಳಿಯದು. ಸಂತೈಸಿಕೋ ಎಂದು ತಕ್ಕೈಸಿದನು. ಅವನೆಂತಹ ಪ್ರೌಢನೋ ಕಾಣೆ ಮತ್ತೊಬ್ಬಳು ತೋರಮುತ್ತಿನಹಾರವನ್ನು ಕೊಟ್ಟು ಕಗ್ಗತ್ತಲೆಯಲ್ಲಿ ಬರುವುದಕ್ಕಂಜಿ ಚಂದ್ರಮುಖಕ್ಕೆ ಕಸ್ತೂರಿಯನ್ನೂ, ಕಣ್ಣಿಗೆ ಕಾಡಿಗೆಯನ್ನೂ ಕುತ್ತಿಗೆಗೆ ಇಂದ್ರನೀಲದಸರವನ್ನೂ, ಹಾಕಿಕೊಂಡರೂ ಆ ಅಲಂಕಾರವು ತನಗೆ ಅಂದವಾದುದನ್ನು ಕಂಡು ಆಶ್ಚರ್ಯಪಟ್ಟು ತುರುಬನ್ನು ಬಿಚ್ಚಿ ಬಾಚಿ, ಜಡೆಗಟ್ಟಿ ತನ್ನ ಮನೆಯಿಂದ ಹೊರಟು, ಸಂಕೇತಭವನದಲ್ಲಿ ಕಾದಿದ್ದ ಕಾಂತನಬಳಿಗೆ ಹೋಗುತ್ತಿದ್ದಳು

ಸಂಚುಗೆಂಡು ಮೋಹದಿಂದ ಮುಸೆಯುಗೆಂಡನಿಗೆ ಸುಖವನ್ನು ಕೊಟ್ಟು ಹೆದರಿಕೆಯನ್ನು ಬಿಟ್ಟು, ಹೊಳೆಹೊಳೆವ ಆಭರಣಗಳಿಗೆ ಮುಸುಕುಹಾಕಿಕೊಂಡು ಸುಳಿದಾಡುವ ಜನರಿಗೆ ಹೊಂಚುಗಾಣದಂತೆ ಚಮತ್ಕಾರದಿಂದ ಎಲ್ಲರನ್ನೂ ವಂಚಿಸಿ, ಮನೋವೇಗವನ್ನು ಮೀರಿ ನಡೆಯುವ ಜಾರೆಯರು ಜಾಣತನವನ್ನು ನೋಡುತ್ತ, ಕಕ್ಕಸದಬಲ್ಮೊಲೆಗಳಬಿಣ್ಪು, ಸೊಕ್ಕುಜವ್ವನದ ಸೊಗಸು, ಸೆಳೆನಡುವಿನ ಬಳುಕು, ಚಂದ್ರಮುಖದ ಅಂದ, ಅರುಣಾಧರದ ಅಮೃತರಸ, ಉಕ್ಕಿಬರುತ್ತಿರುವ ಅಂಗಸೌಷ್ಠವವುಳ್ಳ ನಾರಿಯೊಬ್ಬಳನ್ನು ಕಂಡು, ಮಾರನಾಟದ ಅಲೆಗಳಲ್ಲಿ ಅಲೆದಾಡಿ, ಪ್ರಿಯಳ ಕೈಯನ್ನು ಹಿಡಿದು ತಕ್ಕೈಸಿ, ಮುಂಗುರುಳುಗಳನ್ನು ತಿದ್ದಿ, ಕುಟಿಗಳ ಸೌಂದರ್ಯವನ್ನು ನಿಟ್ಟಿಸಿ, ಕುಚಯುಗದ ಕೃಷ್ಣಾಂಕವನ್ನು ಕಂಡು ಕರ್ಣಪತ್ರವನ್ನು ತಿದ್ದಿ, ಮುತ್ತಿನಹಾರವನ್ನು ಸರಿಮಾಡಿಕೊಂಡು, ಜಾರುನೆರಿಯನ್ನು ನಡುವಿಗೆಸೇರಿಸಿ ನಖಕ್ಷತ ದಂತಕ್ಷತಗಳನೋವಿಗೆ ಹೆದರದೆ ವಿಟನನ್ನು ಬೈದು, ಸಂತೋಷದಿಂದ ಉಬ್ಬಿ, ಜಾರೆಯರು ತಂತಮ್ಮ ಮನೆಗೆ ಬರುತ್ತಿದ್ದರು.

ಇದೆಲ್ಲವನ್ನು ನೋಡುತ್ತ ಕೃಷ್ಣಾರ್ಜುನರು ಮುಂದೆ ಬರುತ್ತಿದ್ದರು. ಅಷ್ಟುಹೊತ್ತಿಗೆ ಅಗಲಿದ್ದ ಚಕ್ರವಾಕಗಳ ವಿರಹಾಗ್ನಿಯ ಹೊಗೆಯು ಲೋಕವನ್ನು ಮುತ್ತಿ ಕತ್ತಲಾಗಿಸಲು ಮನ್ಮಥನು ಮಂದಮಾರುತನಿಂದೂದಿ ಹೊತ್ತಿಸಿ, ಉರಿಮಾಡಿದ ಬೆಂಕಿಯಂತೆ ಮೂಡಣದಿಕ್ಕಿನಲ್ಲಿ ಚಂದ್ರನು ಹುಟ್ಟಿದನು. ಆಗ ಚಕ್ರವಾಕಗಳು ಕೊರಗಿದವು. ಕನ್ನೈದಿಲೆಗಳು ಅರಳಿದವು ಕತ್ತಲೆಯು ಓಡಿ ಹೋಯಿತು. ಸಮುದ್ರವು ಉಕ್ಕಿತು, ನಕ್ಷತ್ರಗಳು ಹೊಳೆದುವು ಚಂದ್ರಕಾಂತಶಿಲೆಯು ಸ್ರವಿಸಿತು. ಮನ್ಮಥನು ವಿರಹಿಗಳ ಸಂಘವನ್ನು ಉರುಬ ತೊಡಗಿದನು. ಹೀಗೆ ಶೋಭಾಯಮಾನವಾಗಿರುವ ಚಂದ್ರಿಕೆಯಲ್ಲಿ ಸೌಧಾಗ್ರಗಳ ಶಾಲೆಗಳ ನಡುವೆ ರಸಿಕಶಿರೋಮಣಿಗಳಾದ ಸ್ತ್ರೀಪುರುಷರು ಸಮ್ಮೋದದಿಂದೊಬ್ಬರು ಆಲಿಂಗಿಸಿ, ರತಿಕಲಾಪ್ರೌಢಿಮೆಯಿಂದ ಆಶ್ಚರ್ಯಕರವಾಗಿ ಕ್ರೀಡಿಸುತ್ತಿದ್ದರು.

ಆಗೊಬ್ಬ ಪ್ರೌಢೆಯು ಸಮರತಿಯಲ್ಲಿ ಸುಖವಿತ್ತು ತನ್ನ ನಾಯಕನನ್ನು ಮನ್ನಿಸಲು, ಆ ಶೃಂಗಾರಪುರುಷನು ಪ್ರಿಯೆ ! ನಿನ್ನ ಮೊಲೆಗಳಲ್ಲಿಯೂ, ಕಣ್ಣುಗಳ ನಡುವೆಯೂ, ಕೇಶಪಾಶಗಳಲ್ಲಿಯೂ ಇರುವ ಕೃಷ್ಣಾಂಕವು ನನ್ನ ಮನಸ್ಸಿಗೆ ಹಿತಕರವಾಗಿದ್ದರೂ ನಿನ್ನ ಮನೋಭಾವದಲ್ಲಿರುವ ಕೃಷ್ಣಾಂಕವು ವಿರಹವನ್ನುಂಟುಮಾಡುತ್ತಿದೆಂದು ಹೇಳಿದನು. ಅದನ್ನು ಕೇಳಿ ಚತುರೆಯು ಎಲೈ ಮುಗ್ಧನೇ ! ಎಂದಿಗಾದರೂ ಆ ಕೃಷ್ಣಾಂಕದಿಂದ ಕೂಡಿದ ಹೃದಯವು ಚಲಿಸುವುದುಂಟೆ ? ಎಂದು ತಿಳುಪಲು ತನ್ನ ತಪ್ಪನ್ನು ಮನ್ನಿಸೆಂದು

ಬೇಡಿಕೊಳ್ಳುವಹಾಗೆ ನಾಯಕಿಯ ಕಾಲ್ಗೆರಗಿ ಕಟ್ಟಕ್ಕರೆಯಿಂದ ಸಂತೈಸಿದನು. ಮತ್ತೋರ್ವಸುಂದರನು ಸುಂದರಾಂಗಿಯೊಡನೆ ಕ್ರೀಡಿಸಿ ಕಾಂತಾಲಿಂಗನ ಶ್ರಮದಿಂದುಂಟಾದ ಬೆವರಿನಿಂದನೆದ ಕಸ್ತೂರಿಯನ್ನು ತನ್ನೆದೆಗಳೆರಡರಲ್ಲಿಯೂ ಅಳವಡಿಸಿಕೊಂಡು ಆನಂದದಿಂದ ಮಲಗಿರುವುದನ್ನು ಕಂಡು ಪ್ರೌಢೆಯಾದ ನಾಯಕಿಯು ಪ್ರಿಯಾ ! ಇದೇಕೆ ? ಮೊದಲಿನಂತಿಲ್ಲದೆ ನಿನ್ನ ಆಕಾರವು ಬದಲಾಯಿಸಿತಲ್ಲಾ, ಹೀಗೆ ಕೃಷ್ಣರೂಪಾಗುವುದಕ್ಕೆ ಕಾರಣವೇನೆಂದು ಕೇಳಿದಳು. ಅದಕ್ಕೆ ಆ ನಾಯಕನು ಪ್ರಿಯೇ ! ನನಗಿದು ಗೊತ್ತಾಗಲಿಲ್ಲ. ಆಹಾ ! ಏನುಹೇಳಲಿ ! ಪೂರ್ವದಲ್ಲಿ ಶ್ರೀಕೃಷ್ಣನು ಒಂದು ಬೆಟ್ಟವನ್ನು ಹೊತ್ತು ಪ್ರಸಿದ್ಧನಾದನು. ಈಗಲಾದರೋ ನಾನು ಎರಡು ಪರ್ವತಗಳನ್ನು ಹಸ್ತಮಧ್ಯದಲ್ಲಿ ನಿಸ್ತುಲವಾಗಿ ಹಿಡಿದಿದ್ದೇನಲ್ಲಾ ! ನನಗೆ ಕೃಷ್ಣಭಾವವು ಬರುವುದೊಂದಾಶ್ಚರ್ಯವೆ ? ಹೇಳು ಎಂದು ಹಾಸ್ಯಮಾಡಿದನು.

ಹೀಗೆ ಶೃಂಗಾರಚೇಷ್ಟೆಗಳ ಅಂಗನಾಜನರನ್ನೂ ಅವರ ಕಾಮಕ್ರೀಡೆಗಳ ಚಾತುರ್ಯವನ್ನು ನೋಡುತ್ತ ವಂಚನೆಯಿಂದ ಕೃಷ್ಣಾರ್ಜುನರು ಸಂಚರಿಸುತ್ತಿರಲು ಕುವಲಯಬಾಂಧವನಾದ ಚಂದ್ರನು ಕಳಂಕಿಯಾಗಿ ಕುಮುದಪ್ರಿಯನಾದ ರಾಜನ ಐಶ್ವರ್ಯದಂತೆ ತನ್ನ ಸೊಂಪನ್ನು ಅಡಗಿಸಿಕೊಂಡು ಪಡುಗಲಲ್ಲಿ ಮುಳುಗಿದನು. ಗಂಡಂದಿರ ತೋಳತೆಕ್ಕೆಯಲ್ಲಿದ್ದ ಬಾಲೆಯರ ಹೃದಯವು ಧಗ್ಗೆಂದಿತು. ಚಕ್ರವಾಕಗಳು ನಲಿದುವು ತಾವರೆಗಳು ಅರಳಿದವು, ಮಕರಂದ ಸಂಪಾದನೆಯ ಲೋಭದಿಂದ ಭ್ರಮರಗಳು ಹೂಗಳಿಗೆರಗುತ್ತಿದ್ದುವು. ಒಂದೇ ಒಂದು ಚಕ್ರ ಸಮನಾಗಿ ಹೂಡುವುದಕ್ಕೆ ಆಗದ ಕುದುರೆಗಳು ಏಳು ಸಾರಥಿ ಕಾಲಿಲ್ಲದ ಹೆಳವ ಇಂಥ ಕಷ್ಟದಲ್ಲಿಯೂ ಏಕೆ ತಿರುಗಬೇಕು. ಲೋಕದ ಯಾತ್ರೆಯು ಬೇಡವೆಂದರೆ ಬಿಟ್ಟೀತೆ ? ಅಯ್ಯೋ ! ಕಾಲಗತಿಯನ್ನು ಮೀರುವರು ಯಾರು ? ಎಂದು ಲೋಕವನ್ನು ಎಚ್ಚರಿಸುವಂತೆ ಸೂರ್ಯನು ಉದಯಗಿರಿಯ ಶಿಖರವನ್ನು ಹತ್ತಿದನು.

ಎಲೈ ಜನಮೇಜಯರಾಯನೇ ಕೇಳು. ಸೂರ್ಯೋದಯವಾಗಲು ಸಂಧ್ಯಾವಂದನಾದಿಕ್ರಿಯೆಗಳನ್ನಾಚರಿಸಿ, ಪರಿಶುದ್ಧಮನಸ್ಕನಾಗಿ, ಮಯೂರಧ್ವಜನು ಪರಮಾತ್ಮನಾದ ಶ್ರೀಹರಿಯನ್ನು ಕಂಡು, ಕರೆದುಕೊಂಡು ಬರಬೇಕೆಂಬ ಕುತೂಹಲದಿಂದ ಪತ್ನೀ, ಪುತ್ರ, ಮಂತ್ರಿ, ಬಾಂಧವ, ಸೇನಾಜನರಿಂದ ಒಂದುಗೂಡಿ ಸಭಾಮಂದಿರಕ್ಕೆ ನಡೆತಂದು ಒಡೋಲಗದಲ್ಲಿ ಕುಳಿತಿದ್ದನು. ಆಗ ವೃದ್ಧಬ್ರಾಹ್ಮಣ ವೇಷಧಾರಿಯಾದ ಕೃಷ್ಣನು ತನ್ನ ಶಿಷ್ಯನಾದ ಅರ್ಜುನನೊಡನೆ ಸಭಾಮಂಟಪಕ್ಕೆ ಬಂದು ಎಲೈ ರಾಜೇಂದ್ರನೇ ನಿನಗೆ (ಸ್ವಸ್ತ್ಯಸ್ತು) ಉತ್ತರೋತ್ತರ ಉಂಟಾಗಲಿ ! ನೀನು ಮಹಾದಾನಿಯಾದಕಾರಣ ಕೇಳಿ

ದುದನ್ನು ಕೊಡುವೆಯೆಂದುನಂಬಿ, ಈ ಶ್ರೇಷ್ಠವಾದ ನಿನ್ನ ಯಾಗಶಾಲೆಗೈತಂದೆ ನೆಂದು ಹೇಳಿದ ಬ್ರಾಹ್ಮಣನನ್ನು ಕಂಡು ರಾಜನು ದಿಗ್ಗನೆದ್ದು ಅರ್ಘ್ಯಪಾದ್ಯಾ ಚಮನಂಗಳಿಂದ ಸತ್ಕರಿಸಿ, ಪೀಠದಲ್ಲಿ ಕುಳ್ಳಿರಿಸಿ, ಎಲೈ ಬ್ರಾಹ್ಮಣೋತ್ತಮನೇ ! ಲೋಕದಲ್ಲಿ ಯಾವಪರಿಯಂತ ಬ್ರಾಹ್ಮಣರಿಗೆ ಅವಜ್ಞತೆಯುಂಟಾಗುವುದಿಲ್ಲವೋ ಆಪರಿಯಂತವೇ ಅಲ್ಲವೇ ? ಮಾನವರ ಬಾಳು ಉತ್ತಮೋತ್ತಮವಾಗುವುದು ಇದು ನಿಜ. ಎದುರುಗೊಂಡವನು ವಂದಿಸುವುದಕ್ಕಿಂತಲೂ ಮೊದಲೆ ದ್ವಿಜ ರ್‍ಯರು ಹರಿಸಿದುದೇ ಆದರೆ ಉಪಾಯದಿಂದ ಶಾಪವನ್ನಿತ್ತು ತನ್ನ ಭಕ್ತರನ್ನು ಕೊಂದಂತೆ ಆಗುವುದಿಲ್ಲವೆ ? ಹೇಳು ಎಂದನು. ಆ ಮಾತನ್ನು ಕೇಳಿ ಕಪಟ ಬ್ರಾಹ್ಮಣನು ಅಯ್ಯಾ ! ನೀನು ಹೇಳಿದುದು ನಿಜ. ಬ್ರಾಹ್ಮಣನಾದವನು ನಮಸ್ಕಾರಕ್ಕೆ ಮುಂಚೆ ಇತರರನ್ನು ಹರಸಬಾರದು. ತನ್ನ ಕಷ್ಟವನ್ನು ರಾಜ ನಾದ ನಿನಗೆ ಅರಿಕೆಮಾಡಿಕೊಳ್ಳುವ ಆತುರದಲ್ಲಿ ಆಶೀರ್ವದಿಸಿದರೆ ತಪ್ಪೇನು ? ರಾಜನು ಸರ್ವರಿಂದಲೂ ವಂದ್ಯನೆಂದು ವೇದಶಾಸ್ತ್ರಗಳು ಹೊಗಳುವದಲ್ಲವೆ ? ಅತ್ಯಂತ ಸಂಕಟದಿಂದ ನೊಂದು ಆರ್ತನಾಗಿ ನಿನ್ನಬಳಿಗ ಬಂದಿರುವೆನು. ಎಲೈ ರಾಜೇಂದ್ರನೇ ! ಕರುಣಿಸು ಎಂದು ಬೇಡಿಕೊಳ್ಳಲು ರಾಜನು ಎಲೈ ಬ್ರಾಹ್ಮ ಣೋತ್ತಮನೇ ! ನೀನು ಅನುಗ್ರಹಿಸಿದರೆ ನಾನೇ ಧನ್ಯನು. ನೀನು ವೃದ್ಧ ನಾಗಿದ್ದರೂ ಶಿಷ್ಯನನ್ನು ಕರೆದುಕೊಂಡು ಯಾಗಶಾಲೆಗೆ ಬರಲು ಕಾರಣವೇನು? ನನ್ನಿಂದಾಗಬೇಕಾದ ಕಾರ್ಯವೇನು ? ಯಾವ ಪದಾರ್ಥದಲ್ಲಿ ನಿನಗೆ ಆಸೆ ಯುಂಟು ? ನನ್ನೊಡನೆ ಹೇಳಿದರೆ ನಡೆಸುವೆನು ಎಂದು ಮಯೂರಧ್ವಜನು ಹೇಳಿ ಕಪಟದ್ವಿಜನು ಅಯ್ಯಾ ! ಭೂಪಾಲನೇ ! ಆದರೆ ನಾನು ಹೇಳುವು ದನ್ನು ಕೇಳು. ಧರ್ಮಪುರವೆಂಬ ನಗರದ ಕೃಷ್ಣಶರ್ಮನೆಂದು ಪ್ರಸಿದ್ಧನಾದ ನನಗೆ ಒಬ್ಬನೊಬ್ಬ ಮಗನಿದ್ದನು ಅವನಿಗೆ ಮದುವೆಮಾಡಬೇಕೆಂದು ನಿನ್ನ ಪುರೋಹಿತನಾದ ಸತ್ಯಶೀಲನ ಮನೆಯಲ್ಲಿ ಒಂದು ಕನ್ಯೆ ಇರುವುದೆಂದು ಕೇಳಿ, ನನ್ನ ಮಗನನ್ನು ಕರೆದುಕೊಂಡು ನಿನ್ನ ಪಟ್ಟಣಕ್ಕೆ ಬರುತ್ತಿದ್ದೆನು. ಮಧ್ಯ ಮಾರ್ಗದಲ್ಲಿ ಪೊದರಿನಲ್ಲಿ ಅಡಗಿಕೊಂಡಿದ್ದ ಒಂದಾನೊಂದು ಸಿಂಹವು ಮೊರೆದು ಮೇಲೆಬಿದ್ದು ನನ್ನ ಮಗನನ್ನು ಹಿಡಿದುಕೊಂಡಿತು. ಅದನ್ನು ಕಂಡು ಅಯ್ಯೋ ! ಮಗನೆ ! ಮೃಗದಬಾಯಿಗೆ ತುತ್ತಾದೆಯಾ ? ಹಾ ! ಪುತ್ರಾ !! ಹಾ ! ಇನ್ನು ನಾನು ಹೇಗೆ ಜೀವಿಸಲಿ, ಹರಿ ! ಹರಿ !! ನನ್ನ ಬಾಳು ಇಂದಿಗೆ ಮುಗಿ ಯಿತೇ ಎಂದು ಬಗೆಬಗೆಯಾಗಿ ಪ್ರಲಾಪಿಸ ತೊಡಗಿದೆನು.

ಆಗ ಆ ಸಿಂಹವು ತನ್ನ ನಖದಂಷ್ಟ್ರಗಳಿಂದ ನನ್ನ ಮಗನನ್ನು ನೋ ಯಿಸದೆ ಬಲವಾಗಿ ಹಿಡಿದುಕೊಂಡು ಮನುಷ್ಯರು ಮಾತಾಡುವಂತೆ ಆಶ್ಚರ್ಯಕರ ವಾಗಿ ನನ್ನೊಡನೆ ಹೀಗೆ ಹೇಳಿತು:—ಎಲೈ ಬ್ರಾಹ್ಮಣನೇ ! ಸುಮ್ಮನೇ ಹಲು

ಬಿದರೆ ಫಲವೇನು ? ಮಕ್ಕಳಿಲ್ಲದವರಿಗೆ ಗತಿಯಿಲ್ಲವೆಂಬುದು ಶಾಸ್ತ್ರಸಮ್ಮತ ವಾದ ಮಾತು. ನಿನ್ನ ಮಗನು ನನ್ನ ವಶನಾದನು. ಇನ್ನು ಅವನ ಚಿಂತೆ ಯನ್ನು ಬಿಟ್ಟು ಊರಿಗೆಹೋಗಿ ಉಳಿದ ಮಕ್ಕಳನ್ನು ನೋಡಿಕೊಂಡು ಸುಖ ವಾಗಿರು ಎಂದು ಹೇಳಿತು. ಅದರ ಮಾತನ್ನು ಕೇಳಿ, ನಾನು ಮಗನಮೇಲಣ ಆಸೆಯಿಂದ ಮೃಗರಾಜನನ್ನು ಕುರಿತು, ಅಯ್ಯಾ ! ನಾನು ಬಹಳ ಮುದುಕನು. ಹೆಚ್ಚು ದಿನ ಬದುಕಲಾರೆ. ಮಗನು ಹೋದಬಳಿಕ ನಾನಿದ್ದು ಫಲವೇನು ? ಆದ ಕಾರಣ ನನ್ನನ್ನು ತಿಂದು ನನಗೆ ಗತಿಕಾಣಿಸುವ ಮಗನನ್ನು ಬಿಟ್ಟುಬಿಡು ಎಂದು ಬೇಡಿಕೊಂಡೆನು. ಆಗ ಆ ಸಿಂಹವು ಎಲೈ ಬ್ರಾಹ್ಮಣನೇ ! ಸಂಸಾರ ಸಂಕಟದಲ್ಲಿ ನರಳಿ ಸಾಯ ಬಯಸುತ್ತಿರುವ ದುಃಖಿಗೆ ಯಾವ ಕಂಟಕವೂ ಇಲ್ಲ ಸುಖಸಂತೋಷದಿಂದ ಜೀವಿಸುತ್ತ ಬದುಕಬೇಕೆಂದು ಆಸೆಪಡುವವರಿಗೆ ಮಹಾ ಕಷ್ಟಗಳು ಬರುವುವು, ಇದು ಲೋಕಧರ್ಮ ಆದುದರಿಂದ ನಾನು ನಿನ್ನನ್ನು ಒಲ್ಲೆ. ನಿನ್ನ ಮಗನನ್ನೂ ಬಿಡಲಾರೆ ಎಂದು ಹೇಳಿತು.

ಬಳಿಕ ನಾನು ಪುತ್ರವಾತ್ಸಲ್ಯದಿಂದ ಮರುಗುತ್ತ ಎಲೈ ಮೃಗರಾಜನೇ ! ಹಾಗಾದರೆ ಈ ಲೋಕದಲ್ಲಿ ನನ್ನ ಮಗನನ್ನು ಬದುಕಿಸತಕ್ಕ ಪುಣ್ಯಾತ್ಮರು ಯಾರೂ ಇಲ್ಲವೇ ? ಕ್ರೂರವಾದ ತಪಸ್ಸು ದಾನ ಧರ್ಮಗಳಿಂದ ನನ್ನ ಮಗನು ಬದುಕಲಾರನೆ ? ಇದಕ್ಕೇನು ಉಪಾಯ ಮಾಡಲಿ ! ಎಂದು ಮರುಗುತ್ತಿರುವು ದನ್ನು ಕಂಡು, ಸಿಂಹವು ನನಗೆ ಆಸೆಯನ್ನು ಹುಟ್ಟಿಸಿ ನಿನ್ನಬಳಿಗೆ ಕಳುಹಿಸಿತು ಆದಕಾರಣ ನಾನು ಧೀನನಾಗಿ ಶಿಷ್ಯನೊಡನೆ ಇಲ್ಲಿಗೆ ಬಂದನೆಂದು ಹೇಳಲು, ಆ ಮಾತನ್ನು ಕೇಳಿ ಮಯೂರಧ್ವಜನು ಅಯ್ಯಾ ! ವಿಪ್ರಶ್ರೇಷ್ಠನೇ ! ನನ್ನ ರಾಜ್ಯದಲ್ಲೆಲ್ಲಿನೋಡಿದರೂ ನಾರಸಿಂಹ ಪ್ರವರ್ತನೆಯುಂಟಲ್ಲದೆ ನಿನ್ನ ಮಗ ನನ್ನು ಹಿಡಿದು ಕೊಲ್ಲುವಂತಹ ಕ್ಷುದ್ರ ಮೃಗವಿರುವುದೆ ? ಇದು ನಿಜವಲ್ಲ. ಆಗಲಿ ! ಆ ಸಿಂಹಕ್ಕೆ ನನ್ನಿಂದಾಗಬೇಕಾದ ಪ್ರಯೋಜನವೇನು ? ಮರೆಮಾ ಚದೆ ಹೇಳು ಎಂದು ಕೇಳಿದನು. ಬಳಿಕ ಬ್ರಾಹ್ಮಣನು ಅಯ್ಯಾ ! ಆ ಸಿಂಹವು ನನಗೆ ಹೇಳಿದುದನ್ನು ನಾನು ನಿನಗೆ ಹೇಳುವುದು ನ್ಯಾಯವಲ್ಲ ! ಲೋಕದಲ್ಲಿ ಪುತ್ರಶೋಕವೆಂಬುದು ಇನ್ನೆಂತಹ ಕ್ರೂರವಾದುದೋ ಕಾಣೆ ! ಪುತ್ರವಾತ್ಸ ಲ್ಯಕ್ಕಾಗಿ ಆ ಸಿಹಂದ ಮಾತನ್ನು ನಾರಸಿಂಹಭಕ್ತನಾದ ನಿನಗೆ ಹೇಳಬೇಕಾಗಿದೆ. ಎಲೈ ರಾಜಶಿಖಾಮಣಿಯೇ ಕೇಳು. ಮೊದಲೆ ತಪಸ್ಸಿನಿಂದ ಒಣಗಿಹೋಗಿರುವ ನಿನ್ನ ದೇಹವನ್ನು ನಾನು ಒಲ್ಲೆನು. ನಿನಗೆ ಸಾಧ್ಯವಾದರೆ ಯಜ್ಞದೀಕ್ಷಾಸಂಪ ನ್ನನಾಗಿರುವ ಮಯೂರಧ್ವಜನ ದೇಹದ ಅರ್ಧಭಾಗವನ್ನು ತಂದುಕೊಟ್ಟರೆ ನಿನ್ನ ಮಗನನ್ನು ಬಿಡುವೆನು. ನಿನಗೆ ಮಗನಮೇಲೆ ಆಸೆಯುಂಟಾದರೆ ನೀನು ಅವನ ಬಳಿಗೆ ಹೋಗಿ ಬಾ ! ನಾನು ಅದುವರೆಗೂ ಇವನನ್ನು ಕೊಲ್ಲುವುದಿಲ್ಲ

ವೆಂದು ಹೇಳಿತು. ಅದನ್ನು ಕೇಳಿ ಅಯ್ಯೋ ! ರಾಜನಾಗಿ ಭೋಗಭಾಗ್ಯಗಳನ್ನು ಅನುಭವಿಸುತ್ತಿರುವ ಮಯೂರಧ್ವಜನು ಭೋಗಮೂಲವಾದ ದೇಹದಲ್ಲಿ ಅರ್ಧವನ್ನು ಕೊಡುವನೆ ? ಇದು ಎಂದಿಗೂ ಆಗತಕ್ಕದಲ್ಲ ಎಂದು ನಾನು ತಿರಸ್ಕರಿಸಿದೆನು. ಆಗ ಸಿಂಹವು ಎಲೈ ಮೂಢನೇ ! ಗೋಬ್ರಾಹ್ಮಣ ಸಂರಕ್ಷಕನಾದ ಪುರುಷನು ನೆಲದಮೇಲೆ ಬಾಳುವ ತನ್ನ ಶರೀರವನ್ನು ಲಕ್ಷಿಸುವನೆ ? ಕವಚವನ್ನು ಕರ್ಣನೂ, ಬೆನ್ನುಮೂಳೆಗಳನ್ನು ದಧೀಚಿಯೂ ಕೊಟ್ಟು ಪರೋಪಕಾರಿಗಳೆಂಬ ಖ್ಯಾತಿಯನ್ನು ಪಡೆಯಲಿಲ್ಲವೆ ? ಶೂರನೂ, ಉಪಕಾರಿಯೂ, ದಾನಿಯೂ, ವಿಷ್ಣುಭಕ್ತನೂ, ಅಸೂಯಾರಹಿತನೂ, ಕೃಪಾನಿಧಿಯೂ, ಲೋಕಸ್ತುತ್ಯನೂ ಆದ ಮಯೂರಧ್ವಜನು ಕುಲವನ್ನು ಸಂರಕ್ಷಿಸಬೇಕೆಂದು ನೀನು ಬೇಡಿಕೊಂಡರೆ ತನ್ನ ಪ್ರಾಣಗಳನ್ನಾದರೂ ಕೊಟ್ಟು ಸತ್ಕೀರ್ತಿಯನ್ನು ಪಡೆಯುವನಲ್ಲದೆ ಅನಿತ್ಯವಾದ ಈ ಸಂಸಾರದಲ್ಲಿ ಪಾಡಳಿದು ಬಿದ್ದುಹೋಗುವ ದೇಹವನ್ನು ರಕ್ಷಿಸಿಕೊಳ್ಳುವ ಉಪಾಯವನ್ನು ಹುಡುಕಲಾರನು ಇದು ಸತ್ಯವಾದ ಮಾತು, ಶೀಘ್ರವಾಗಿ ನೀನು ಆತನಬಳಿಗೆ ಹೋಗು ಎಂದು ಹೇಳಿದುದರಿಂದ ನಾನು ಇಲ್ಲಿಗೆ ಬಂದೆನು.

ಎಲೈ ರಾಯನೇ ! ಸಮಸ್ತ ಲೋಕಸುಖಗಳನ್ನು ಅನುಭವಿಸುತ್ತ ಅತ್ಯಂತ ವೈಭವಯುಕ್ತವಾಗಿರುವ ನಿನ್ನ ದೇಹವನ್ನು ಕೊಟ್ಟು, ಮಗನನ್ನು ಬದುಕಿಸಿಕೊಳ್ಳಬೇಕೆಂದು ಹೇಳಿದ ಸಿಂಹದ ಮಾತನ್ನು ನಂಬಿ ನಾನು ಇಲ್ಲಿಗೆ ಬಂದೆನು. ಅಯ್ಯೋ ! ಅದು ಹಾಗಿರಲಿ ? ಈಗ ಪ್ರಾಣಾಪತ್ತಿನಿಂದ ನರಳುತ್ತಿರುವ ನನ್ನ ಮಗನನ್ನು ಬದುಕಿಸುವುದಕ್ಕೆ ಯಾವ ಉಪಾಯವನ್ನೂ ಕಾಣೆನಲ್ಲಾ ಎಂದು ಬಿಸುಸುಯ್ಯು ಮೊದಲು ಅಯೋಧ್ಯಾಪತಿಯಾದ ರಾಘವನು ಅಕಾಲಮರಣದಿಂದ ಸತ್ತ ಬ್ರಹ್ಮಚಾರಿಯಾದ ಬಾಲಕನನ್ನು ಬದುಕಿಸಿ ಆತನ ತಾಯ್ತಂದೆಗಳನ್ನು ಸಲಹಲಿಲ್ಲವೆ ? ಶೌರ್ಯ್ಯೌದಾರ್ಯ ಗುಣಂಗಳಲ್ಲಿ ಆತನಿಗೆ ಸಮಾನನಾದ ನೀನು ನನ್ನ ಮಗನನ್ನು ಉಳಿಸಿಕೊಡುವೆಯೆಂದು ನಂಬಿ ನಾನು ಬೇಡಿಕೊಂಡೆನು. ಕೈಲಾದರೆ ಬದುಕಿಸು, ಇಲ್ಲವಾದರೆ ಬಿಡು ಎಂದು ಹೇಳಿದನು.

ಇಂತೆಂದು ಹೇಳಿದ ಕಪಟದ್ವಿಜನ ಮಾತುಗಳನ್ನು ಕೇಳಿ ಕೀರ್ತಿಯು ಶಾಶ್ವತವಾಗಿ ನಿಲ್ಲುವುದರಿಂದ ಈ ಕಾರ್ಯವನ್ನು ಮಾಡಬೇಕೆಂದುಜ್ಜಗಿಸಿ ಆ ಬ್ರಾಹ್ಮಣನಿಗೆ ತನ್ನ ದೇಹವನ್ನು ಕೊಯ್ದುಕೊಡುವುದಾಗಿ ಅಭಯವನ್ನಿತ್ತು ರಾಜ್ಯವನ್ನು ಮಗನಿಗೊಪ್ಪಿಸಿ, ಸಾಲಗ್ರಾಮತೀರ್ಥವನ್ನು ಸೇವಿಸಿ ವಿಷ್ಣುಪ್ರಸಾದವನ್ನು ಮುಡಿದು, ಸಭೆಗೈತಂದು ಸರ್ವರಿಗೂ ನಮಸ್ಕಾರಮಾಡಿ ಎಲೈ ಸಭಿಕರಿರಾ ! ಬಲಿಚಕ್ರವರ್ತಿಯ ಯಾಗಶಾಲೆಗೆ ವಾಮನರೂಪದಿಂದೈತಂದ ವಿಷ್ಣು

ವಿನಂತೆ ಈ ಬ್ರಾಹ್ಮಣನು ನನ್ನ ಯಾಗಮಂಟಪಕ್ಕೆ ಬಂದು, ದೇಹದಾನವನ್ನು ಬೇಡಿದನು. ಆದಕಾರಣ ನಾನು ಸಂತೋಷದಿಂದ ನನ್ನ ದೇಹಾರ್ಧವನ್ನು ಈ ಬ್ರಾಹ್ಮಣನಿಗೆ ಈಶ್ವರಾರ್ಪಿತವಾಗಿ ಕೊಯ್ದುಕೊಡುವೆನು. ಇದರಿಂದ ಇವನ ಮಗನು ಬದುಕಿಕೊಳ್ಳಲಿ ! ಈಬಗೆಯ ದಾನವು ಮೂರುಲೋಕಗಳಿಗೂ ಹೊಸದಾಗಲಿ ! ಎಂದು ಹೇಳಲು ಸಭಿಕರೆಲ್ಲರೂ ಹಾ ! ಇದೆಂತಹ ದಾನ. ಲೋಕದಲ್ಲಿ ಹಣವನ್ನಾಗಲೀ, ರಾಜ್ಯವನ್ನಾಗಲೀ, ವಸ್ತುವಾಹನ ವನಿತಾರತ್ನ ವಸ್ತ್ರ ಭೂಭಾಗಗಳನ್ನಾಗಲೀ ದಾನವಾಗಿ ಬೇಡುವ ಬ್ರಾಹ್ಮಣರುಂಟು ? ಅಯ್ಯೋ ! ಈತನು ಯಮನನ್ನು ಹೋಲುತ್ತಿರುವನು ! ದೇಹವನ್ನು ಕೊಯ್ದು ಕೊಡುವುದುಂಟೆ ? ಎಂದೆಲ್ಲರೂ ಹಾಹಾಕಾರದಿಂದ ಕಂಪಿಸುತ್ತಿದ್ದರು. ಬಳಿಕ ಅವರನ್ನು ಸಂತೈಸಿ, ಈ ಬ್ರಾಹ್ಮಣನು ನನ್ನ ಅರ್ಧಾಂಗವನ್ನು ಕೊಟ್ಟು, ತನ್ನ ಮಗನನ್ನು ಉಳಿಸಬೇಕೆಂದು ಕೇಳಿಕೊಂಡದ್ದರಿಂದ ನಾನು ಆತನಿಗೆ ಅಭಯ ವನ್ನು ಕೊಟ್ಟೆನು. ಇದಕ್ಕೆ ತಪ್ಪಿದರೆ ಲೋಕದ ಜನರು ನನ್ನನ್ನು ನಿಂದಿಸರೆ ? ಯಮದೂತರು ನರಕದಲ್ಲಿ ಹೊರಳಿಸರೆ ? ಹೇಗಾದರೂ ನನ್ನ ದೇಹವನ್ನು ಕೊಯ್ದುಕೊಡುವುದಕ್ಕೊಪ್ಪಿದೆ. ನೀವು ಸುಮ್ಮನಿರಿ ಎಂದು ಒಪ್ಪಿಸಿ, ಧನಕನಕ ವಸ್ತುವಾಹನ ರತ್ನರಾಜಿಗಳನ್ನು ಬ್ರಾಹ್ಮಣರಿಗೆ ದಾನಮಾಡಿ, ಎರಡು ಕಂಬಗ ಳನ್ನು ನೆಡಿಸಿ, ಅದರ ಮಧ್ಯದಲ್ಲಿ ತಾನು ಕುಳಿತುಕೊಂಡು, ನೂಲುಹಗ್ಗಗಳಿಂದ ತೋಳು ತೊಡೆಗಳನ್ನು ಕಟ್ಟಿಕೊಂಡು ವೃದ್ಧಬ್ರಾಹ್ಮಣನ ಪಾದಗಳನ್ನು ತೊಳೆದು, ಎಲೈ ಬ್ರಾಹ್ಮಣೋತ್ತಮನೇ ! ನಾನು ನಿನಗೆ ಕೊಡುವ ಈ ದೇಹಾ ರ್ಧದ ದಾನದಿಂದ ಯಜ್ಞನಾಯಕನಾದ ವಾಸುದೇವನು ತೃಪ್ತನಾಗಲಿ ? ಇನ್ನುಮುಂದೆ ನನ್ನ ವಂಶದಲ್ಲಿ ಹುಟ್ಟಿದವರು ಬ್ರಾಹ್ಮಣರಿಗೆ ತನುಮನ ಧನಗ ಳನ್ನು ತಡೆಯದೆ ಕೊಡುವೆಡೆಯಲ್ಲಿ ಮನೆಗೆಡದೆ ಮತಿವಂತರಾಗಿರಲಿ ! ಎಂದು ಹೇಳಿ ಕ್ರೂರರಾದ ಕೊಯ್ಗಾರರನ್ನು ಕರೆಸಿ ಮಸೆವೆತ್ತ ಕತ್ತಿಗಳನ್ನು ತೆಗೆಸಿ ದನು. ಕೊಡುವ ಪುಣ್ಯಾತ್ಮನಿದ್ದರೆ ಬೇಡುವವನು ತನಗೆ ಬೇಕಾದುದನ್ನು ಬೇಡ ದಿರುವನೆ ? ಯಾಚಕರು ಬಂದರೆ ದಾನಿಯಾದವನು ತನ್ನಲ್ಲಿರುವದನ್ನು ಕೊಡದಿ ರುವನೆ ? ಆಹಾ ! ಲೋಕದಲ್ಲಿ ಕೇಳುವುದರಲ್ಲಿಯೂ ಕೊಡುವುದರಲ್ಲಿಯೂ ಈ ನೃಪ್ರಭೂಪಾಲಕರು ಎಡೆಕಡೆಗಳಲ್ಲಿ ಕರುಣೆಯುಳ್ಳವರೆಂದು ರೋದಿಸುತ್ತಿ ದ್ದರು ಆಗ ಮಯೂರಧ್ವಜನು ಎಲೈ ಪ್ರಜೆಗಳಿರಾ ! ನೀವೇತಕ್ಕೆ ವ್ಯಸನಪ ಡುವಿರಿ ! ನಾನೇ ಧನ್ಯನು. ಕೃಷ್ಣಾರ್ಪಣವಾಗಿ ನನ್ನ ದೇಹವನ್ನು ಈ ಬ್ರಾಹ್ಮ ಣನಿಗೆ ಕೊಟ್ಟು ಈತನ ಮಗನನ್ನು ಬದುಕಿಸುವೆನು. ಪರೋಪಕಾರಿಯಲ್ಲದವನ ಬಾಳು ಲೋಕದಲ್ಲಿ ಉರಿದ ಸಣಬಿನ ಬೂದಿಯಂತೆ ವ್ಯರ್ಥ ? ಚಿಂತೆಯನ್ನು ತೊರೆದು ನನ್ನ ದಾನವನ್ನು ನೋಡಿರೆಂದು ಸಂತೈಸಿ ಕೊಯ್ಗಾರರಿಗೆ ತನ್ನ

ದೇಹವನ್ನು ಸೀಳುವಂತೆ ಆಜ್ಞಾಪಿಸಿ ದಾನವನ್ನು ಪರಿಗ್ರಹಿಸಬೇಕೆಂದು ಬ್ರಾಹ್ಮಣನನ್ನು ಬೇಡಿಕೊಂಡು ಸಿದ್ಧವಾಗಿ ಕುಳಿತಿರುವ ಗಂಡನಬಳಿಗೆ ಬಂದು ಕುಮುದ್ವತಿಯು ಕಾಂತಾ ! ಆ ಸಿಂಹದ ಮಾತಿನರ್ಥವನ್ನು ನೀನು ಕಾಣೆ ! ಈ ಬ್ರಾಹ್ಮಣನೂ ಅರಿಯನು. ಶಾಸ್ತ್ರಸಮ್ಮತವಾಗಿ ಹೆಂಡತಿಯು ಗಂಡನಿಗೆ ಅರ್ಧಾಂಗಿ ಎನ್ನುವುದನ್ನು ತಿಳಿದು ಆ ಸಿಂಹರಾಜನು ನನ್ನನ್ನು ಬೇಡಿದರೆ ನಿನ್ನ ದೇಹವನ್ನು ಕೊಯ್ದುಕೊಡುವ ಮೂಢತನಸರಿಯೆ ! ಭ್ರಾಂತಿಯನ್ನು ಬಿಟ್ಟು ಜೀವಸಹಿತವಾಗಿ ನನ್ನನ್ನು ಆ ಸಿಂಹಕ್ಕೆ ಕೊಟ್ಟುಬಿಡು. ನಾನು ಮುತ್ತೈದೆಯಾಗಿ ಸದ್ಗತಿಯನ್ನು ಪಡೆಯುವೆನು ಎಂದು ಹೇಳಲು ಸರ್ವರೂ ಸಮ್ಮತವೆಂದು ಒಪ್ಪಿದರು. ಅದಕ್ಕೆ ಮಯೂರಧ್ವಜನು ಮಾತನಾಡದಿರಲು ಕಪಟ ಬ್ರಾಹ್ಮಣನು ಅಯ್ಯಾ ! ನಿನ್ನ ಹೆಂಡತಿಯು ಹೇಳಿದುದು ನಿಜ. ಆದರೆ ಆ ಪಾಪಿಯಾದ ಸಿಂಹವು ಮಯೂರಧ್ವಜನ ಬಲಭಾಗದ ಅರ್ಧದೇಹವು ನನಗೆ ಬೇಕು ಎಂದು ಕೇಳಿತಲ್ಲದೆ ವಾಮಾಂಗವೆಂದು ನನ್ನೊಡನೆ ಹೇಳಲಿಲ್ಲ! ಎನಲು, ಮಗನಾದ ತಾಮ್ರಧ್ವಜನು ಮುಂದೆಬಂದು ಎಲೈ ವಿಪ್ರವರ್ಯನೇ! ಪ್ರಸನ್ನನಾಗು. ನಾನು ನಿನ್ನನ್ನು ಬೇಡಿಕೊಳ್ಳುವೆನು. ಪ್ರಾಯದವನಾಗಿ ಕೊಬ್ಬಿದ ಮಾಂಸ ಮಜ್ಜೆಗಳಿಂದ ಕೂಡಿ ಚೆನ್ನಾಗಿ ಬೆಳೆದಿರುವ ನಾನು ಸಿಂಹರಾಜನಿಗೆ ಸಂಪೂರ್ಣವಾದ ತುಷ್ಟಿಯನ್ನುಂಟುಮಾಡುವೆನು. ಅಲ್ಲದೆ ಋಣತ್ರಯವನ್ನು ಹರಿಸಿಕೊಂಡು, ರಾಘವ ಭೀಷ್ಮರಂತೆ ಉತ್ತಮವಾದ ಕೀರ್ತಿಯನ್ನು ಪಡೆಯುವೆನು. ತಂದೆಯೇ ಮಗನಾಗಿ ಹುಟ್ಟುವನೆಂಬ ಶ್ರುತಿಯು ಲೋಕಸಮ್ಮತವಾಗಿದೆ. ಆದ ಕಾರಣ ತಂದೆಮಕ್ಕಳಿಗೆ ಭೇದವಿಲ್ಲವೆಂದು ತಿಳಿದು ನನ್ನನ್ನು ಪರಿಗ್ರಹಿಸು. ತಂದೆಯನ್ನು ಬಿಡು ಎನಲು ಆ ಬ್ರಾಹ್ಮಣನು ಅಯ್ಯಾ ! ನೀನು ಹೇಳಿದ ಮಾತು ಸತ್ಯ! ಆದರೆ ಆ ಪಾಪಿಯಾದ ಸಿಂಹವು ಮಯೂರಧ್ವಜನ ಮಗನನ್ನಾಗಲೀ, ಹೆಂಡತಿಯನ್ನಾಗಲೀ ಕೊಂಡುಬಾ ಎಂದು ನನ್ನೊಡನೆ ಹೇಳದೆ ಆತನ ದೇಹಾರ್ಧವನ್ನು ತಂದುಕೊಟ್ಟರೆ ನಿನ್ನ ಮಗನನ್ನು ಬಿಡುವೆನೆಂದು ಹೇಳಿತಲ್ಲಾ ! ಇದಕ್ಕೇಕೆ ಚಿಂತೆ ? ನೀನು ಕೊಡದಿದ್ದರೆ ಒಳ್ಳೆತಾಯಿತು. ನಾನು ಹೊರಡುವೆನು ಎಂದು ಹೇಳಿದನು. ಆಗ ಮಯೂರಧ್ವಜನು ಎಲೈ ಬ್ರಾಹ್ಮಣನೇ ! ತನ್ನನ್ನುಕೊಡು ಎಂದು ಕೇಳುತ್ತಿರುವ ಈ ಮಗನನ್ನು ಹೆಂಡತಿಯನ್ನು ಕೊಡುವುದಿಲ್ಲ. ನಿನಗಿಷ್ಟವಾದ ದಕ್ಷಿಣಭಾಗದ ದೇಹವನ್ನೇ ಕೊಡುವೆನು ತೆಗೆದುಕೋ ! ಬಾ ಎಂದು ಹೇಳಿ, ಸಾಣೆಹಿಡಿದು ಹರಿತವಾಗಿರುವ ಕತ್ತಿಯನ್ನು ತನ್ನ ಹೆಂಡತಿಯಕೈಗಿತ್ತು, ಪ್ರಿಯೇ ! ಬಾಲಲೀಲೆಗಳಿಂದ ಮಕ್ಕಳೂ, ರತಿಕಾಲದಲ್ಲಿ ಹೆಂಡತಿಯೂ, ನಖಮುಖಗಳಿಂದ ಸೀಳಿದರೆ ಸಂತೋಷವು ಉಕ್ಕುವುದೆ ಹೊರತು ನೋವಾಗುವುದಿಲ್ಲ. ಆದುದರಿಂದ ನನಗೆ ಆನಂದವಾಗು

ವಂತೆ ನೀನೂ ನಿನ್ನ ಮಗನೂ ಈ ಕತ್ತಿಯನ್ನು ಹಿಡಿದು ನನ್ನ ದೇಹವನ್ನು ತಲೆಯಿಂದ ತುದಿಯವರೆಗೂ ಸಮಭಾಗವಾಗಿ ಶ್ರೀಕೃಷ್ಣನು ಗರುಡ ಹನುಮಂತರಿಗೆ ಹಣ್ಣನ್ನು ಹಂಚಿಕೊಟ್ಟ ಹಾಗೆ ಸೀಳಿ ಎಂದು ಹೇಳಿದನು.

ಕೂಡಲೆ ಪತಿವ್ರತೆಯಾದ ಆ ಕುಮುದ್ವತಿಯು ಮಗನೊಡನೆ ಒಂದು ಕಡೆಯಲ್ಲಿಯೂ ತನ್ನ ಕೈಗಳಿಂದ ಮತ್ತೊಂದು ಕಡೆಯಲ್ಲಿಯೂ ಕತ್ತಿಯನ್ನು ಹಿಡಿದು ಕೊಯ್ಯಲಾರಂಭಿಸಿದಳು. ಆಗ ಸಭಿಕರೆಲ್ಲರೂ ಹಿಂದೆ ಕ್ರೂರಾತ್ಮನಾದ ಹಿರಣ್ಯಕಶಿಪುವನ್ನು ನಾರಸಿಂಹಮೂರ್ತಿಯು ಹೀಗೆಯೇ ಸೀಳಿದನೆಂದು ನರಹರಿಯ ಧ್ಯಾನವನ್ನು ಮಾಡುತ್ತಿದ್ದರು. ಬಳಿಕ ಓರೆಕೋರೆಗಳಿಲ್ಲದೆ ಸಮಭಾಗವಾಗಿ ಕೊಯ್ಯಲೆಳಸಿ, ಕೂರ್ಗತ್ತಿಗಳನ್ನು ಹಿಡಿದು ಸೀಳುತ್ತಿರುವ ಕುಮುದ್ವತಿಯಲ್ಲಾಗಲೀ, ಮಗನಾದ ತಾಮ್ರಧ್ವಜನಲ್ಲಾಗಲೀ, ದಾತೃವಾದ ಮಯೂರಧ್ವಜನ ಮನದಲ್ಲಾಗಲೀ, ಯಾವುದೊಂದು ಕೊರತೆಯನ್ನೂ ಕಾಣದೆ ಶ್ರೀಹರಿಯು ಆತನ ಭಕ್ತಿಯನ್ನು ಅರ್ಜುನನಿಗೆ ತೋರಿಸುತ್ತಿದ್ದನು. ಆಗ ಮಯೂರಧ್ವಜನ ಎಡಗಣ್ಣಿಂದೊಂದು ತೊಟ್ಟು ನೀರು ಹೊರಬೀಳಲು, ಅದನ್ನು ಕಂಡು ಆ ಬ್ರಾಹ್ಮಣನು ಆಹಾ ! ಲೋಕದಲ್ಲಿ ಸದ್ಬ್ರಾಹ್ಮಣನಾದವನು ದುಃಖದಿಂದ ಕೊಡುವ ಈ ದಾನವನ್ನು ಸ್ವೀಕರಿಸುವನೆ ? ನನ್ನ ಮಗನು ಬದುಕದಿದ್ದರೆ ಸಾಯಲಿ ! ಅತ್ತು ಕೊಡುವ ಈ ದಾನವನ್ನು ನಾನು ಒಲ್ಲೆ ಎಂದು ಹಿಂದಿರುಗಿದನು. ಆಗ ಕುಮುದ್ವತಿಯು ಬೆರಗಾಗಿ, ಅಯ್ಯೋ ! ವ್ಯರ್ಥವಾಗಿ ನಿನ್ನ ತಲೆಯನ್ನು ಕೊಯಿಸಿದೆಯಲ್ಲಾ ! ಎಡಗಣ್ಣಿನಲ್ಲಿ ಬಿದ್ದ ನೀರಿನ ತೊಟ್ಟನ್ನು ಕಂಡು ಕಷ್ಟದಿಂದ ಕೊಡುವ ದಾನವು ತನಗೆ ಬೇಡವೆಂದು ಆ ಬ್ರಾಹ್ಮಣನು ಹೊರಟುಹೋದನು ! ನನ್ನ ಶ್ರಮವು ವಿಫಲವಾಯಿತು. ನಿನ್ನ ಜನ್ಮವು ಸಾರ್ಥಕವಾಗಲಿಲ್ಲ ಎಂದು ಹೇಳಲು, ಆಹಾ ! ತಲೆಯ ಹೋಳುಗಳನ್ನು ಜೋಡಿಸಿ ಹಿಡಿದುಕೊ ಆ ಬ್ರಾಹ್ಮಣನನ್ನು ಬರಹೇಳು. ಆ ಕಣ್ಣಿನಲ್ಲಿ ನೀರು ಬಿದ್ದ ಕಾರಣವನ್ನು ಅವನಿಗೆ ತಿಳಿಯಹೇಳುವೆನೆಂದು ಆಜ್ಞಾಪಿಸಿದನು. ಕೂಡಲೆ ಕುಮುದ್ವತಿಯು ತಲೆಯ ಹೋಳುಗಳನ್ನು ಜೋಡಿಸಿ ಹಿಡಿದು ಮಗನನ್ನು ಕಳುಹಿಸಿ, ಆ ಕಪಟ ಬ್ರಾಹ್ಮಣನನ್ನು ಕರೆಸಿದಳು. ಆಗ ಮಯೂರಧ್ವಜನು ಎಲೈ ಬ್ರಾಹ್ಮಣೋತ್ತಮನೇ ! ಕತ್ತಿಯ ಪೆಟ್ಟಿಗೆ ಮರುಗಿ ನಾನು ಅಳಲಿಲ್ಲ. ಅಯ್ಯೋ ! ಶ್ರೀಹರಿಪ್ರೀತಿಕರವಾದ ಸದ್ದಾನಕ್ಕೆ ದಕ್ಷಿಣಾರ್ಧವು ಸಂದು ಸಾರ್ಥಕವಾಯಿತು. ಈ ವಾಮಾರ್ಧವು ಯಾವುದಕ್ಕೂ ಬಾರದೆ ನಿಷ್ಫಲವಾಯಿತೆಂದು ಎಡಗಣ್ಣು ನೀರು ಸುರಿಸಿತು ಅದಕ್ಕೆ ಇದು ಸಹಜವೃತ್ತಿ ಎಂದು ಸಕಲರೂ ಒಪ್ಪುವರು ಎಂದು ನುಡಿಯಲು ಕೃಷ್ಣನು ಆತನ ಭಕ್ತಿಗೆ ಮೆಚ್ಚಿ ಹೆಚ್ಚಿದ್ದ ಹೋಳುಗಳನ್ನು ಒಂದಾಗಿ ಹಿಡಿದು ಕರುಣದಿಂದ ಮೈದಡವಿ, ಎಲೈ ರಾಜೇಂದ್ರನೇ ! ನಿನ್ನ

ಭಕ್ತಿಯನ್ನು ಪರೀಕ್ಷಿಸಿ, ನಾನು ತೃಪ್ತನಾದೆನು. ಇನ್ನು ಮುಚ್ಚುಮರೆಯೇತಕ್ಕೆ ? ನಾನೇ ಕೃಷ್ಣನು. ಇವನೇ ಅರ್ಜುನನು. ಎಂದು ಹೇಳಿ ನಿಗಮಾಗಮ ಶ್ರುತಿಯುಕ್ತವಾದ ತನ್ನ ದಿವ್ಯಾಕಾರವನ್ನು ತೋರಿಸಿದನು. ಪ್ರಸನ್ನಮುಖನಾಗಿ ಬಿಸಜಾಕ್ಷಿಗಳಿಂದ ಹೊಳೆದು ಮಕರಕುಂಡಲಗಳನ್ನಾಂತು, ಎಸಳುಮೂಗಿನ ಮೇಲ್ಗಡೆಯಲ್ಲಿ ಹೊಳೆಯುತ್ತಿರುವ ಕಸ್ತೂರಿಯ ತಿಲಕವನ್ನಿಟ್ಟು, ಮುರಿದ ಹುಬ್ಬುಗಳಿಂದಲೂ, ಕೊಂಕುಗುರುಳುಗಳಿಂದಲೂ ಮನೋಹರವಾಗಿ, ಶ್ರೀವತ್ಸಕೌಸ್ತುಭ ತುಲಸೀಮಾಲೆಗಳಿಂದ ಹೊಳೆದು ಅಗರುಚಂದನ, ಕುಂಕುಮಕರ್ಪೂರ ಲೇಪನದಿಂದ ಸೊಗಸಾಗಿ, ಕೋಮಲವಾದ ನಳಿತೋಳುಗಳಿಂದೊಪ್ಪುವ ಘನಾಂಗಸೌಂದರ್ಯದ ದಿವ್ಯಮೂರ್ತಿಯನ್ನು ಕಂಡು ಮಯೂರಧ್ವಜನು ಮಹಾಸಂತೋಷದಿಂದ ಜಯಜಯನಿನಾದ ಪೂರ್ವಕವಾಗಿ ಲಕ್ಷ್ಮೀಪತಿಯನ್ನು ಧ್ಯಾನಮಾಡಿ, ಕಣ್ದಣಿಯುವಂತೆ ನೋಡಿ ಆನಂದಬಾಷ್ಪಗಳಿಂದ ನೆನೆದು, ದೀರ್ಘದಂಡಪ್ರಣಾಮವಂಗೈದು, ನಮಸ್ಕರಿಸಿದನು. ಕೂಡಲೆ ಕುಮುದ್ವತಿ ತಾಮ್ರಧ್ವಜರು ಸಂತೋಷದಿಂದ ಕಾಲ್ಗೆರಗಿ ಬೇಡಿಕೊಂಡರು. ಸಭಿಕರೆಲ್ಲರೂ ಆನಂದದಿಂದ ಜಯಜಯ ಧ್ವನಿಗೈದು ಹಿಗ್ಗಿದರು.

ಬಳಿಕ ಶ್ರೀಹರಿಯು ಅಯ್ಯಾ ! ನೀನು ಧನ್ಯನಾದೆ. ನಿನ್ನ ದೇಹವು ಪವಿತ್ರವಾಯಿತು. ನಿನ್ನೆಯದಿನ ಈ ತಾಮ್ರಧ್ವಜನು ನನ್ನನ್ನೂ ಅರ್ಜುನನನ್ನೂ ಅವನ ಸೇನೆಯನ್ನೂ ಗೆದ್ದು ಕುದುರೆಯೊಡನೆ ನಿನ್ನ ಬಳಿಗೆ ಬಂದನು. ಆದುದರಿಂದ ಸತಿಸುತಯುಕ್ತನಾಗಿ ಸಂತೋಷದಿಂದ ಎರಡು ಯಜ್ಞಗಳನ್ನು ನೀನೇ ಮಾಡು ಎನಲು, ಮಯೂರಧ್ವಜನು ಎಲೈ ಜಗದೀಶನೇ ! ವಿಶ್ವೇಶನಾದ ನಿನ್ನ ದಿವ್ಯಮಂಗಳಮೂರ್ತಿಯನ್ನು ಕಂಡಮೇಲೆ ದುರ್ಮತಿಗಳಾಗಿ, ಚರ್ಮಶೃಂಗವನ್ನು ಧರಿಸಿ ಯಜ್ಞವಂಗೈಯ್ಯುವ ಮೂಢರು ಲೋಕದಲ್ಲುಂಟೆ ? ಅದು ಹಾಗಿರಲಿ ! ಈ ನಶ್ವರವಾದ ದೇಹವನ್ನೂ, ಸತಿಸುತ ಸಾಮ್ರಾಜ್ಯ ಸಂಪತ್ತು ದೇಶಕೋಶಗಳನ್ನೂ ನಿನಗೆ ಸಮರ್ಪಿಸಿದೆನು. ಜಗತ್ಕರ್ತವಾದ ನೀನು ಒಲಿದು ಪ್ರಸನ್ನನಾದ ಬಳಿಕ ಅಶ್ವಮೇಧವನ್ನು ಮಾಡಿದರ ಹತ್ತಿರದಲ್ಲಿರುವ ಅಗ್ನಿಜ್ವಾಲೆಯನ್ನು ಬಿಟ್ಟು, ಹಿಮದ ಬಾಧೆಯನ್ನು ನೀಗಲೆಳಸುವ ಮಂದಮತಿಯಂತೆ ನಾನು ಭಾಗ್ಯಹೀನನಾಗನೆ? ಎಲೈ ಕರುಣಾನಿಧಿಯಾದ ಪರಮಾತ್ಮನೇ ! ನನ್ನ ಮಗನಾದ ತಾಮ್ರಧ್ವಜನು ನಿಮ್ಮನ್ನು ಗೆದ್ದರೂ ಮೂಢಭಾವದಿಂದ ವ್ಯರ್ಥವಾದ ಕುದುರೆಯನ್ನು ಹಿಡಿದುಕೊಂಡು ಬಂದನಲ್ಲದೆ, ಸದ್ಗತಿದಾತನಾದ ನಿನ್ನ ಶಾಶ್ವತಮೂರ್ತಿಯನ್ನು ತರಲಾರದೆ ಹೋದನು. ಆದರೂ ನನ್ನ ಮೇಲಣ ಕರುಣದಿಂದ ಭಕ್ತವತ್ಸಲನಾದ ನೀನೇ ನನ್ನ ಬಳಿಗೆ ಬಂದು ದರ್ಶನವಿತ್ತಮೇಲೆ ನಾನು ಅಶ್ವಮೇಧಯಾಗವನ್ನು ಮಾಡಬಹುದೆ ? ನಿಮ್ಮ

ನರನಾರಾಯಣಾವತಾರವನ್ನು ಕಂಡು ನಾನು ಧನ್ಯನಾದೆನು. ಗಂಗಾಜಲವನ್ನು ತೊರೆದು ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳಲೋಸುಗ ಮತ್ತೊಂದೆಡೆಯನೀರನ್ನು ಬಯಸಬಹುದೆ ? ನಿನ್ನ ದರ್ಶನದಲ್ಲಾದ ಮುಕ್ತಿಗಿಂತಲೂ ಅನ್ಯಕರ್ಮಾಪೇಕ್ಷೆಯಿಂದ ಕೈವಲ್ಯಉಂಟಾಗುವುದೆ ? ಸಾಕು. ನನ್ನ ಸರ್ವಸ್ವವನ್ನೂ ನಿನಗೊಪ್ಪಿಸಿರುವೆನು. ಧರ್ಮರಾಯನೇ ಎರಡು ಯಾಗಗಳನ್ನು ಮಾಡಿ ಮುಕ್ತನಾಗಲಿ ಎಂದು ನಮಸ್ಕರಿಸಿದನು.

ಹೀಗೆ ವಿನಯದಿಂದೆರಗಿದ ಮಯೂರಧ್ವಜನ ಭಕ್ತಿಭಾವವನ್ನು ನೋಡಿ ಭಗವಂತನು ಭಾಗವತಶಿರೋಮಣಿಯಾದ ಅರ್ಜುನನಿಗೆ ತೋರಿಸಿ, ಮಯೂರಧ್ವಜನನ್ನು ಸಂತೈಸಿ, ಮೂರುದಿನಗಳವರೆಗೆ ಅಲ್ಲಿ ಇದ್ದು ಸಂತುಷ್ಟನಾಗಿ, ತಮ್ಮ ಸೇನಾಜನರು ಬಂದಮೇಲೆ ರತ್ನಪುರದ ಉತ್ತಮವಸ್ತುಗಳನ್ನು ಹಸ್ತಿನಾಪುರಕ್ಕೆ ಸಾಗಿಸಿ, ಮಯೂರಧ್ವಜನ ಸೇನೆಯೊಡನೆ ಹೊರಟು ಎರಡು ಕುದುರೆಗಳನ್ನೂ ಬಿಡಿಸಿಕೊಂಡು ಸಂತೋಷದಿಂದ ದೇವಪುರನಿಲಯ ಲಕ್ಷ್ಮೀರಮಣನು ತನ್ನ ಮೈದುನನಾದ ಅರ್ಜುನನೊಡನೆ ಮುಂದೆ ಹೊರಟನೆಂಬಲ್ಲಿಗೆ ಶ್ರೀಲಕ್ಷ್ಮೀಕಾಂತಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿ ನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾ ಸಂಗ್ರಹದಲ್ಲಿ ಇಪ್ಪತ್ತಾರನೆಯಸಂಧಿ ಸಂಪೂರ್ಣಂ ಶ್ರೀ. ಶ್ರೀ. ಶ್ರೀ.

# ಇಪ್ಪತ್ತೇಳನೆಯ ಸಂಧಿ.

ಅರ್ಜುನನು ಕುದುರೆಯೊಡನೆ ಸಾರಸ್ವತಪುರವನ್ನು ಹೊಕ್ಕು
ವೀರವರ್ಮನನ್ನು ಗೆದ್ದುದು.

ಎಲೈ ಜನಮೇಜಯರಾಯನೇ ಕೇಳು. ಬಳಿಕ ಮಯೂರಧ್ವಜನೆ ಮೊದಲಾದ ಮಹಾವೀರರೊಡನೆ ಮುಂದಕ್ಕೆ ನಡೆದು ಕುದುರೆಯು ಸ್ವೇಚ್ಛೆಯಾಗಿ ಸಂಚರಿಸುತ್ತ ಬಂದು, ವೀರವರ್ಮನಾಳುವ ಸಾರಸ್ವತ ಪುರವನ್ನು ಸೇರಿತು. ಆತನ ರಾಜ್ಯದಲ್ಲಿ ಧರ್ಮವು ನಾಲ್ಕುಪಾದಗಳನ್ನೂ ಊರಿ ನೆಲೆಸಿರುವುದು. ಗಂಡಸರು ಹೆಂಗಸರಲ್ಲೊಬ್ಬರೂ ಮರವೆಯಿಂದಲಾದರೂ ಕನಸಿನಲ್ಲಾದರೂ ಪಾಪಕೃತ್ಯವನ್ನು ಮಾಡರು. ಆದಕಾರಣದಿಂದ ದುಃಖ ಶೋಕ ವ್ಯಾಧಿಪೀಡೆಗಳನ್ನೂ ಕಾಣದೆ ಸರ್ವರೂ ಸುಖದಿಂದಿರುವರು. ಆ ಸಾರಸ್ವತಪುರವನ್ನು ಯಮನು ದೊರೆಯಾದ ವೀರವರ್ಮನ ಸೆರೆಗೆ ಸಿಕ್ಕಿ ಕಾದುಕೊಂಡಿರುವನು ಪಾಂಡವರಸೇನೆಯು ಯಾಗಾಶ್ವದೊಡನೆ ತನ್ನಪಟ್ಟಣಕ್ಕೆ ಬಂದ

ವಾರ್ತೆಯನ್ನು ಕೇಳಿ, ವೀರವರ್ಮನು ಕೋಪಗೊಂಡು, ಕೃಷ್ಣಾರ್ಜುನರನ್ನು ಹಿಡಿದುತರುವಂತೆ ಅಜ್ಞೆಮಾಡಿ, ತನ್ನ ಮಕ್ಕಳಾದ ಸುಲಭ, ಸುಲೋಭ, ಕುವಲ, ನೀಲ, ಪರಳರೆಂಬವರನ್ನು ಬಲಸಹಿತವಾಗಿ ಕಳುಹಿಸಿದನು, ಅವರ್ಕೈವರೂ ಅಟ್ಟಹಾಸದಿಂದೈತಂದು, ಅರ್ಜುನನ ಕುದುರೆಯನ್ನು ಹಿಡಿದುತಂದು ತಂದೆಯ ಎದುರಿಗೆ ನಿಲ್ಲಿಸಿದರು. ಕೂಡಲೆ ಪಾಂಡವರ ಸೇನೆಯು ಒದಗಿಬಂದಿತು, ಯುದ್ಧಾಭಿಲಾಷಿಯಾದ ಬಭ್ರುವಾಹನನು ಕೋಪದಿಂದ ಕುದಿಯುತ್ತ ಶಂಖನಾದವನ್ನು ಮಾಡಿದನು. ಆಗ ಉಭಯಸೇನೆಗಳು ಪೌರುಷದಿಂದ ಹೋಡೆದಾಡಿ ಬಿಲ್ಲು, ಬಾಣ, ಕತ್ತಿ, ಕೊಂತ, ಗದೆ, ಶೂಲ, ಮೊದಲಾದ ಆಯುಧಗಳನ್ನು ಪ್ರಯೋಗಿಸುತ್ತ ವಿರಥರಾದವರು ಮುಷ್ಟಿಯುದ್ಧದಿಂದಲೂ ಕೇಶಾಕೇಶಿಯಿಂದಲೂ, ಹಣಾಹಣಿಯಿಂದಲೂ, ಹೊಡೆದಾಡುತ್ತಿದ್ದರು ಶೂರನಾದ ಬಭ್ರುವಾಹನನ ಬಾಣಜಾಲದ ಉರುಬೆಯಿಂದ ವೀರವರ್ಮನ ಸೇನೆಯು ನೊಂದು ನುಚ್ಚುನೂರಾಯಿತು ಹೊಸಹೊಸದಾಗಿ ನಗರದಿಂದ ಯುದ್ಧಾಂಗಣಕ್ಕೆ ಕಳುಹಿಸುತ್ತಿರುವ ಶೂರರೆಲ್ಲರೂ, ಬಭ್ರುವಾಹನನ ಬಾಣಾಗ್ನಿಗೆ ತುತ್ತಾಗುತ್ತಿರುವದನ್ನು ಕಂಡು, ವೀರವರ್ಮನು ಹೆದರಿ ತನ್ನಳಿಯನಾದ ಯಮನಿಗೆ ಹೇಳಿ ಬೇಡಿಕೊಂಡನು. ಆಗ ಯಮನು ತನ್ನ ಮಾವನಿಗೆ ಗೆಲುವಾಗಬೇಕೆಂಬ ಆಶೆಯಿಂದ ಅರ್ಜುನನ ಸೈನ್ಯದವರನ್ನು ಕೊಲ್ಲಲುಜ್ಜುಗಿಸಿದನು. ಆಹಾ ? ಯಮನು ಲೋಕದ ಪ್ರಾಣಿಗಳನ್ನು ಕೊಲ್ಲುವುದಕ್ಕೆ ಹೆದರುವನೆ ? ಎಂದಿದ್ದರೂ ನಾನೇ ಈ ಪ್ರಾಣಿಗಳನ್ನು ಕೊಲ್ಲಬೇಕು. ಅಂದಂದಿಗೆ ಒಂದೊಂದು ಪ್ರಾಣವನ್ನು ಸೆಳೆದು ತರುವಕಷ್ಟವು ತಪ್ಪುವುದು. ಇಂದೇ ಈ ಜೀವಕೋಟಿಯನ್ನು ಕೊಂದು, ಸುಂದರವಾದ ನನ್ನ ಭಂಡಾರವನ್ನು ತುಂಬಿಸುವೆನೆಂದು ಯೋಚಿಸಿ, ಕೊಲ್ಲುತ್ತಿರಲು, ಅರ್ಜುನನ ಸೈನ್ಯವು ನಮೆದು ಬೀಳುತಿದ್ದಿತು. ಆಗ ಅರ್ಜುನನು ಕೃಷ್ಣನನ್ನು ಕುರಿತು, ಎಲೈ ಭಕ್ತವತ್ಸಲನೇ ! ಭಯಂಕರನಾಗಿ ಕಾಣುತ್ತ ನನ್ನ ಸೇನಾಜನರನ್ನು ಕೊಲ್ಲುತ್ತಿರುವ ಈ ವೀರನಾರು ಹೇಳು ಎಂದ್ಬು ಬೇಡಿಕೊಳ್ಳಲು ಶ್ರೀಕೃಷ್ಣನು ಅಪ್ಪಾ ! ಅರ್ಜುನ ಇವನು ನಿನಗೆ ದೊಡ್ಡಪ್ಪನಾಗಬೇಕು. ಧರ್ಮರಾಜನೆಂಬ ಹೆಸರಿನಿಂದ ಪ್ರಖ್ಯಾತನಾದ ಯಮನೇ ಇವನು ಈ ವೀರವರ್ಮನಿಗೆ ಅಳಿಯನಾಗಿ ಸಾರಸ್ವತಪುರದಲ್ಲಿರುವನು. ತನ್ನ ಮಾವನಿಗೆ ಜಯವಾಗಬೇಕೆಂಬಾಸೆಯಿಂದ ನಿನ್ನ ಸೇನೆಯನ್ನು ಕೊಲ್ಲುತ್ತಿರುವನು ಎಂದು ಹೇಳಲು, ಪಾರ್ಥನು ಸ್ವಾಮಿಾ ! ಧರ್ಮಸ್ವರೂಪನಾದ ಯಮನು ಭೂಲೋಕದಲ್ಲಿ ರಾಜನಾಗಿರುವ ಈ ವೀರವರ್ಮನಿಗೆ ಹೇಗೆ ಅಳಿಯನಾದನು ಅದನ್ನು ಹೇಳುವೆಯಾ ? ಎಂದು ಪ್ರಾರ್ಥಿಸಿದನು.



## ಅರ್ಜುನನಿಗೆ ಶ್ರೀಕೃಷ್ಣನು ಯಮುನ ವೃತ್ತಾಂತವನ್ನು ಹೇಳಿದುದು. [೫೭]

ಹಾಗಾದರೆ ಕೇಳು. ಈ ವೀರವರ್ಮನಿಗೆ ಮಾಲಿನಿಯೆಂಬ ತೇಜೋಮಯಳಾದ ಮಗಳೊಬ್ಬಳು ಹುಟ್ಟಿದಳು. ಆ ಕನ್ನೆಯು ಯೌವನಭರದಿಂದೊಪ್ಪುತ್ತಿರುವುದನ್ನು ಕಂಡು ಅವಳಿಗೆ ಮದುವೆಮಾಡಬೇಕೆಂದು ಯೋಚಿಸಿ ಮಗಳ ಅಭಿಪ್ರಾಯವನ್ನು ಕೇಳಲು ಚತುರೆಯಾದ ಆ ಬಾಲೆಯು ಅಪ್ಪಾ! ಈಲೋಕದವರನ್ನು ಮದುವೆಯಾಗುವುದಕ್ಕೆ ನನ್ನ ಮನಸ್ಸು ಒಡಂಬಡುವುದಿಲ್ಲ ಎಂದಳು ಅದನ್ನು ಕೇಳಿ ವೀರವರ್ಮನು ಹಾಗಾದರ ನಿನಗೆ ತಕ್ಕ ವರನು ಯಾರೋ ಅದನ್ನು ಹೇಳಿದರೆ ಅವನಿಗೆಕೊಟ್ಟು ಮದುವೆಮಾಡುವೆನು ಎಂದು ಹೇಳಲು ತಂದೆಯ ಮಾತನ್ನು ಕೇಳಿ ಮಾಲಿನಿಯು ಅಪ್ಪಾ! ಮನುಷ್ಯರು ಎಂದಿದ್ದರೂ ಸಾಯಲೇಬೇಕು. ಆದಕಾರಣ ಮನುಷ್ಯರನ್ನು ಮದುವೆಯಾದ ಬಳಿಕ ಗಂಡಸತ್ತರೆ ಬೆಂಕಿಯಲ್ಲಿ ಬಿದ್ದು ಪ್ರಾಣವನ್ನು ಬಿಡಬೇಕು. ಇಲ್ಲದೆ ಪ್ರಾಣಸಹಿತಳಾಗಿದ್ದರೆ ಮನ್ಮಥನ ಬಾಣದುರುಬೆಯನ್ನು ಸಹಿಸಲಾರದೆ ಅನ್ಯರನ್ನು ಸೇರಬೇಕು ಹೀಗೆ ಸೇರಿದರೆ ನರಕಯಾತನೆಯಲ್ಲಿ ನರಳಬೇಕಾಗುವುದು. ಗಂಡನಿರುವಾಗಲೆ ಸತ್ತ ಹೆಂಡತಿ ಬಹು ಪುಣ್ಯವಂತೆ ಎನಿಸುವಳು. ಅವನೊಡನೆ ತಾನೂ ಸತ್ತರೆ ಲೋಕಸ್ತುತ್ಯೆಯಾಗುವಳು. ಹಾಗಲ್ಲದೆ ಮುಂಡೆಯಾಗಿದ್ದರೆ ಪಾಪಿಯಾಗದೆ ಇರಲಾರಳು. ಇದಾವುದೂ ಇಲ್ಲದಿದ್ದರೆ ಪತಿಸೇವೆಯಿಂದ ಸತ್ಸಂತಾನವನ್ನು ಪಡೆದು ಉತ್ತಮಗತಿಯನ್ನು ಪೊಂದಬೇಕು. ಈ ಕಾರಣಗಳಿಂದ ಮನುಷ್ಯರಸಂಸಾರಧರ್ಮವು ನನಗೆ ಋಜುತರವಾಗಿ ತೋರದು. ಆದಕಾರಣ ಸತ್ತ ಪ್ರಾಣಿಗಳು ಯಾರಬಳಿಗೈದುವವೋ ಯಾವ ದೇವನು ಧರ್ಮ

ಧರ್ಮಪುಣ್ಯಪಾಪಗಳನ್ನು ಚೆನ್ನಾಗಿ ಬಲ್ಲನೋ ಅಂಥ ಯಮನನ್ನೆ ನಾನು ಮದು ವೆಯಾಗುವೆನು. ಅವನಿಗೆ ನನ್ನನ್ನು ಕೊಡು. ವೈವಸ್ವತಪ್ರೀತಿಕರವಾದ ಜಪ ಹೋಮ ದಾನಗಳಿಂದ ಧರ್ಮರಾಜನನ್ನು ಮೆಚ್ಚಿಸಿ ಅವನು ನನ್ನನ್ನು ಮದುವೆಯಾಗುವಂತೆ ಮಾಡು ಎಂದು ಕಾಲ್ಗೆರಗಿ ಬೇಡಿಕೊಂಡಳು. ಆಗ ಅ ಮಗಳನ್ನು ಸಮಾಧಾನಮಾಡಿ, ಅದು ಮೊದಲ್ಗೊಂಡು ಹಗಲಿರುಳೂ ಯಮ ನನ್ನು ನಾನಾವಿಧವಾದ ಪೂಜೆಗಳಿಂದ ಮೆಚ್ಚಿಸುತ್ತಿದ್ದರೂ ಧರ್ಮರಾಯನು ಪ್ರಸನ್ನನಾಗದಿರಲು ಧರ್ಮಕಾರ್ಯಕ್ಕೆ ಮುಂದಾಗಿಬರುವ ಹರಿಭಕ್ತನಾದ ನಾರ ದನು ಈ ವಾರ್ತೆಯನ್ನು ತಿಳಿದು ಯಮನಬಳಿಗೆ ಬಂದು ಅಯ್ಯಾ ! ಅನ್ಯರ ನ್ನಿಲ್ಲದೆ ನಿನ್ನನ್ನೇ ಮದುವೆಯಾಗಬೇಕೆಂದು ಬಯಸಿ, ತಪಸ್ಸುಮಾಡುತ್ತಿ ರುವ ವೀರವರ್ಮನ ಮಗಳಾದ ಮಾಲಿನಿಯನ್ನು ನೀನು ಅನಾದರಿಸಬಹುದೆ ? ಅವಳು ಗುಣಶೀಲ ರೂಪರೇಖಾ ಲಾವಣ್ಯಗಳಿಂದ ಲೋಕಸ್ತುತ್ಯಳಾಗಿರುವಳು. ಆ ವೀರವರ್ಮನ ಪುರದಲ್ಲಿ ಧರ್ಮವು ನಾಲ್ಕು ಕಾಲುಗಳಿಂದ ನೆಲೆಸಿರುವುದು.

ಆ ರಾಜನ ಪ್ರಜೆಗಳು ಪಾಪಪುಣ್ಯವರ್ಜಿತರಾದ ಜೀವನ್ಮುಕ್ತರಂತೆ ಇರು ವರು. ಅಂಥ ಪುಣ್ಯನಗರಿಗೆ ನೀನು ಮನುಷ್ಯವೇಷದಿಂದ ಹೋಗಿ ಮಾಲಿನಿ ಯನ್ನು ವರಿಸು ಎಂದು ಹೇಳಿದನು. ಬಳಿಕ ಧರ್ಮರಾಜನು ನಾರದಋಷಿ ಯನ್ನು ಸತ್ಕರಿಸಿ ಬೀಳ್ಕೊಟ್ಟನು. ಆಗ ಆ ಮಹಾಮುನಿಯು ತನ್ನ ಸ್ವಭಾವ ಸಹಜವಾದ ಗುಣವನ್ನು ಲೋಕದವರಿಗೆ ತೋರಿಸಿಕೊಡುವಂತೆ ಗಗನಮಾರ್ಗ ದಿಂದ ಹೊರಟು ಸಾರಸ್ವತಪುರಕ್ಕೆ ಬಂದು ವೀರವರ್ಮನನ್ನು ಕಂಡು ಅಯ್ಯಾ ! ನಾನು ಯಮನಬಳಿಗೆ ಹೋಗಿದ್ದೆನು. ಅವನು ನಿನ್ನ ಮಗಳನ್ನು ಮದುವೆ ಯಾಗಲು ಒಪ್ಪಿ, ವೈಶಾಖಮಾಸದ ಶುಕ್ಲಪಕ್ಷದಲ್ಲಿ ಭೂಲೋಕಕ್ಕೆ ಬರಲು ಸಿದ್ಧನಾಗಿರುವನು. ಆದಕಾರಣ ನಿನ್ನ ಮಗಳ ಮದುವೆಗಾಗಿ ಬೇಕಾದ ಸಲಕ ರಣೆಗಳನ್ನು ಒದಗಿಸಿಕೊ ಎಂದು ಹೇಳಿ, ಮಾಯವಾದನು.

ಕೂಡಲೆ ವೀರವರ್ಮನು ಉತ್ಸಾಹದಿಂದ ಪುರವನ್ನು ಶೃಂಗರಿಸಿ, ಮದು ವೆಗೆ ಬೇಕಾದ ಉಪಕರಣಗಳನ್ನೊದಗಿಸಿಕೊಂಡು ಆನಂದದಿಂದ ಇರುತ್ತಿದ್ದನು, ಇತ್ತ ಯಮನು ತನ್ನ ಸೇವಕರನ್ನು ಬರಮಾಡಿ, ನನ್ನ ಮದುವೆಗಾಗಿ ನೀವೆ ಲ್ಲರೂ ಭೂಲೋಕಕ್ಕೆ ಬರಬೇಕೆಂದು ಆಜ್ಞೆಮಾಡಿದನು. ಕೂಡಲೆ ಪಾಪಕೋಟಿಗ ಳೊಡನೆ ಪಂಚಮಹಾಪಾತಕಗಳೂ ರಾಜಕ್ಷಯಮೊದಲಾದ ಸಕಲರೋಗಸಂಕುಲ ಗಳೂ ಆಕ್ರೂರರೋಗಗಳ ಹೆಂಡಿರಾದವಿಸೂಚಿಕಾ ಗ್ರಹಣಿ ಮೊದಲಾದ ಭಯಂ ಕರ ಸ್ತ್ರೀಯರು ಒಟ್ಟಾದರು. ಅವರಿಗೊಡೆಯನಾದ ಕ್ಷಯನೆಂಬ ಮಂತ್ರಿಯ ಯಮನನ್ನು ಕುರಿತು, ಸ್ವಾಮಿ ! ನಿನ್ನ ಮದುವೆಗಾಗಿ ನಾವೆಲ್ಲರೂ ಭೂಲೋ ಕಕ್ಕೆ ಬಂದರೆ ನಮಗೆ ಹೋಮಧೂಮಾವಲೇಪನವೂ, ವೇದವಾಕ್ಯಶ್ರವಣವೂ,

ಆಗುವದಲ್ಲದೆ ಪುಣ್ಯಪುರುಷರ ಪಾದರಜಸ್ಸೂ, ಅವರಮೇಲೆ ಬೀಸಿದ ಗಾಳಿಯ ಸೋಂಕೂ ನನಗೆ ತಾಗುವುದು. ಅಲ್ಲದೆ ಆ ವೀರವರ್ಮನಾದರೋ ದೇವಬ್ರಾಹ್ಮಣ ರಕ್ಷಕನಾಗಿ ಮಹಾ ಧರ್ಮಿಕನೆಂದೆನಿಸಿಕೊಂಡಿರುವನು. ಆತನ ಪಟ್ಟಣಕ್ಕೆ ನಾವು ಹೇಗೆ ಬರೋಣ ! ಬಂದರೆ ನಮ್ಮ ಬಾಳಿಗೆ ಸಂಚಕಾರವಾಗುವುದಲ್ಲಾ ! ಎಂದು ಹೇಳಿಕೊಳ್ಳಲು, ಯಮನು ಅಯ್ಯಾ ! ನಾನು ಯಾವಾಗಲೂ ಪಾಪಿಗಳಿಗೆ ಕ್ರೂರನಾಗಿಯೂ, ಪುಣ್ಯಾತ್ಮರಿಗೆ ಸೌಮ್ಯನಾಗಿಯೂ ಕಾಣಿಸುತ್ತಿರುವೆನು. ಆದುದರಿಂದ ನನ್ನ ಶಿಷ್ಯರಾದ ನೀವುಗಳು ನನ್ನಬಳಿಯಲ್ಲಿ ಹೇಗೆ ಸುಂದರಾಕಾರದಿಂದ ಸೌಮ್ಯರಾಗಿರುವಿರೋ ಅದಕ್ಕಿಂತಲೂ ಅಧಿಕವಾದ ಸೌಮ್ಯಭಾವದಿಂದ ಸಾರಸ್ವತಪುರಕ್ಕೆ ಹೊರಡಿ ಎಂದು ಅವರನ್ನು ಒಡಂಬಡಿಸಿ ಸಂಗಡ ಕರೆದುಕೊಂಡು ಹೊರಟುಬಂದನು. ಬಳಿಕ ವೀರವರ್ಮನು ಅಟ್ಟಹಾಸದಿಂದ ಯಮನನ್ನು ಇದಿರ್ಗೊಂಡು ಮೂರುಲೋಕಗಳಿಗೂ ಇದು ಹೊಸದು ಎನ್ನುವಂತೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದನು.

ಹೀಗೆ ಉತ್ಸವಮಹೋತ್ಸವಗಳಿಂದ ಮಾಡಿದ ಮದುವೆಯ ಸಂಭ್ರಮಕ್ಕೆ ಯಮನು ಮೆಚ್ಚಿದವನಾಗಿ ತನ್ನ ಮಾವನನ್ನು ಕುರಿತು, ನಿನಗೆ ಬೇಕಾದ ವರವನ್ನು ಕೇಳಿಕೊ ಕೊಡುವೆನು ಎಂದನು. ಆಗ ವೀರವರ್ಮನು ಆಹಾ ! ಮಗಳನ್ನು ಕೊಟ್ಟುದಕ್ಕೆ ಬದುಲಾಗಿ ತೆಗೆದುಕೊಳ್ಳುವ ಕನ್ಯಾಶುಲ್ಕವು ಬಹು ಪಾಪಕರವಾದುದು ನನಗೇನೂ ಬೇಡ ಎಂದನು. ಬಳಿಕ ಯಮನು ಅಯ್ಯಾ ! ನೀನು ಹೇಳಿದುದು ನಿಜ. ತಾನಾಗಿ ಕೇಳದಿದ್ದವನನ್ನು ಕರೆದು ದಾನಮಾಡಿದ ಪುಣ್ಯಾತ್ಮನನ್ನು ದಾನವನ್ನು ಕೊಂಡವನು ಹರಸದೆ ಇರುವನೆ ? ನನ್ನ ಮಾತನ್ನು ತಿರಸ್ಕರಿಸಬೇಡ ಮುಂದೆ ಸ್ವಲ್ಪಕಾಲದಲ್ಲಿ ನಿನಗೆ ಮರಣವುಂಟಾಗುವುದು ಅದಕ್ಕೆ ಒಂದು ಉಪಾಯವನ್ನು ಚಿಂತಿಸಿ ನಾನು ಹೇಳಿರುವೆನ. ಎಂದು ನುಡಿದ ಯಮನ ವಾಕ್ಯವನ್ನು ಕೇಳಿ ವೀರವರ್ಮನು ಹಾಗಾದರೆ ಯಾವಕಾಲಕ್ಕೆ ಪರಮಾತ್ಮನಾದ ಶ್ರೀಹರಿಯು ನನ್ನ ಪಟ್ಟಣಕ್ಕೆ ಸಂತೋಷಯುಕ್ತನಾಗಿ ಬರುವನೋ ಆಕಾಲದವರೆಗೂ ನನಗೆ ಮರಣವಾಗದಂತೆ ನೀನು ನನ್ನ ಪಟ್ಟಣವನ್ನು ಕಾದುಕೊಂಡಿರಬೇಕು ಎಂದು ಬೇಡಿಕೊಂಡನು. ಆದಕಾರಣ ಯಮನು ಹಾಗೆಯೇ ಆಗಲೆಂದೊಪ್ಪಿ ಆನಂದಭರಿತನಾಗಿ ಮಾಲಿನಿಯೊಡನೆ ಕ್ರೀಡಿಸುತ್ತ ಸುಖದಿಂದಿರುವನು. ಎಲೈ ಅರ್ಜುನನೇ ! ಇದುವರೆಗೂ ಯಮನು ಸಾರಸ್ವತಪುರದಲ್ಲಿ ಸೆರೆಯಾಗಿದ್ದು ತನ್ನ ಮಾವನಿಗೆ ಜಯವಾಗಬೇಕೆಂಬ ಬಯಕೆಯಿಂದ ಕಾದುತ್ತಿರುವುದನ್ನು ನೋಡು. ಇಗೋ ಧರ್ಮಾತ್ಮನಾದ ವೀರವರ್ಮನು ನನ್ನನ್ನು ಎದುರುಗೊಳ್ಳುವ ಆನಂದದಿಂದಿರುತ್ತಿರುವನು. ಆಬಳಿಕ ಕ್ಷತ್ರಿಯೋತ್ತಮನಾದ ವೀರವರ್ಮನು ತಮ್ಮಕಡೆಗೆ ಬರುತ್ತಿರುವುದನ್ನು ಕಂಡು, ವೀರ

ರಾದ ಬಭ್ರುವಾಹನನೂ, ಅನುಸಾಲ್ವ, ಯೌವನಾಶ್ವ, ನೀಲಧ್ವಜ, ಮಯೂರಧ್ವಜ, ಹಂಸಧ್ವಜ, ಅನಿರುದ್ಧ, ಸಾತ್ಯಕಿಗಳು ಕೋಲ್ಗರೆದು ಕೋಲಾಹಲಧ್ವನಿಯನ್ನು ಮಾಡುತ್ತ ಸರಳಮಳೆಯಿಂದ ಸೇನಾಜಾಲವನ್ನು ಕೆಡವುತ್ತಿದ್ದರೂ ಲಕ್ಷ್ಯಮಾಡದೆ, ಅವರನ್ನು ಸೋಲಿಸಿ, ಮುಂದೈತಂದು ಕೃಷ್ಣಾರ್ಜುನರೆದುರಿಗೆ ತನ್ನ ರಥವನ್ನು ನಿಲ್ಲಿಸಿ, ಪರಮಾತ್ಮನಾದ ಭಗವಂತನನ್ನು ಕುರಿತು, ಎಲೈ ಕೃಷ್ಣನೇ ! ಈ ಸೇನಾನಿಗಳು ನನಗೆ ಸರಿಸಮರಲ್ಲ. ಆದಕಾರಣ ವೀರನಾದ ಅರ್ಜುನನೊಡನೆಯೂ, ಕಲಿಯಾದ ಹನುಮನೊಡನೆಯೂ, ಚಕ್ರಾಂಕನಾದ ನಿನ್ನೊಡನೆಯೂ ನನ್ನ ಪೌರುಷವನ್ನು ತೋರಿಸಬೇಕೆಂದಿರುವೆನೆಂದು ಹೇಳಿ, ಬಾಣಗಳನ್ನು ಸುರಿಸಿದನು. ಕೂಡಲೆ ಅರ್ಜುನನು ಆಹಾ ! ಈತನೇ ವೀರವರ್ಮನೆಂಬ ರಾಜನೋ ಯುದ್ಧರಂಗದಲ್ಲಿ ಮದಿಸಿಬಂದು ಯುದ್ಧದಾನವನ್ನು ಬೇಡಿದವನನ್ನು ಕೊಂದರೆ ತಪ್ಪೇನು ? ಆಗಲಿ ! ಇವನೊಡನೆ ಹೊಡೆದಾಡಿ ನನ್ನ ತೋಳತೀಟೆಯನ್ನು ಕಳೆದುಕೊಳ್ಳುವೆನೆಂದು ಅರ್ಜುನನು ಅಪರಿಮಿತವಾದ ಬಾಣಗಳನ್ನು ಸುರಿಸಿದನು. ಶೂರನಾದ ವೀರವರ್ಮನು ಆ ಬಾಣಗಳನ್ನು ಕಡಿದುಹಾಕಿ, ಎಲೈ ವೀರನೇ ! ಸಾಕು ! ಸಾಕು ! ಬರಿಯ ಬಿಂಕದಿಂದ ಬೆರೆಯಬೇಡ. ಕೃಷ್ಣನ ಸಹಾಯದಿಂದ ಲೋಕೈಕವೀರರನ್ನು ಗೆದ್ದೆನೆಂದು ಅಹಂಕಾರಪಡುವೆಯಲ್ಲವೆ ? ಈಗ ನಿನ್ನ ಸಾಹಸವನ್ನು ತೋರಿಸು ಎಂದು ಹೇಳಿ, ಕೂರಲಗುಗಳನ್ನು ಕರೆದನು, ಆ ಪೆಟ್ಟಿಗೆ ಕೃಷ್ಣನೂ, ಅರ್ಜುನನೂ, ಧ್ವಜಾಗ್ರದಲ್ಲಿರುವ ಹನುಮನೂ, ಹಲ್ಗಿರಿದು ಹಮ್ಮೈಸಿ ಮೂರ್ಛಿತರಾದರು. ಬಳಿಕ ಕೃಷ್ಣಮೂರ್ತಿಯು ಎಚ್ಚರಗೊಂಡು ಅರ್ಜುನನನ್ನು ಕುರಿತು ಅಯ್ಯಾ! ಇವನನ್ನು ಗೆಲ್ಲುವುದಕ್ಕೆ ನಮ್ಮಿಂದಾಗದು. ಲೋಕದಲ್ಲಿ ಧಾರ್ಮಿಕನೆಂಬ ಖ್ಯಾತಿಯನ್ನು ಪಡೆದು, ವೀರರಿಗೆಲ್ಲ ವೀರನಾಗಿ, ಪರಮವಿಷ್ಣುಭಕ್ತನಾಗಿರುವ ಇವನನ್ನು ಉಪಾಯಾಂತರದಿಂದಲಾಗಲೀ, ವಿನಯದಿಂದಲಾಗಲೀ ಗೆಲ್ಲಬೇಕೆ ಹೊರತು ಮತ್ತಾವರೀತಿಯಿಂದಲೂ ಆಗುವುದಿಲ್ಲವೆಂದು ಹೇಳಿ, ಹನುಮಂತನನ್ನು ಕರೆದು ಅಯ್ಯಾ ? ನೀನು ಈ ವೀರವರ್ಮನ ರಥವನ್ನು ಬಾಲದಲ್ಲಿ ಸುತ್ತಿ ಆಕಾಶಕ್ಕೆ ಹಾರಿಸಿಬಿಡು ಎಂದು ಹೇಳಲು ಹನುಮಂತನು ಆಹಾ ! ಈ ಪುಣ್ಯಾತ್ಮನ ರಥವನ್ನು ನಾನು ಹೇಗೆ ಎತ್ತಲಿ ! ರಾವಣನಂತೆಯೂ, ಜಂಬುಮಾಲಿಯಂತೆಯೂ, ಇವನು ಕ್ರೂರಿಯಲ್ಲವಲ್ಲಾ ! ಎಂದು ಶಂಕಿಸುತ್ತಿರಲು ಶ್ರೀಹರಿಯು ಎಲೈ ಆಂಜನೇಯನೇ ! ಅನುಮಾನಪಡಬೇಡ ಧರ್ಮಕಾರ್ಯಕ್ಕೆ ನಾನು ಸಹಾಯಕನಾಗಿದೇನೆ ನಿನಗೆ ಬೇಕಾದುದನ್ನು ಒದಗಿಸಿಕೊಡುವೆನು. ಧೈರ್ಯಮಾಡಿಸಾಧಿಸು ಎಂದು ಹೇಳಲು ಹನುಮಂತನು ಘನತರವಾದ ಆ ವೀರವರ್ಮನ ರಥವನ್ನು ತನ್ನ ಬಾಲದ ಕೊನೆಯಿಂದ ಸುತ್ತಿ ಆಕಾಶಕ್ಕೆಎಸೆದನು. ಕಲಿಯಾದ

ವೀರವರ್ಮನು ತನ್ನ ರಥದಿಂದ ಕೃಷ್ಣಾರ್ಜುನರ ತೇರಿಗಿಳಿದು ಅದನ್ನೆತ್ತಿ ಹಿಡಿದು ಕೊಂಡು ಎಲೈ ಹನುಮಂತನೇ ! ಸಮುದ್ರವನ್ನು ದಾಟಿದೆನೆಂಬ ಅಹಂಕಾರ ದಿಂದ ಕೊನೆಯಬೇಡ. ನಿನ್ನ ಕೈಯಲ್ಲಿರುವ ರಥವು ಬರಿದಾಗಿದೆ. ನಿನ್ನ ದಣಿ ಯಾದ ಶ್ರೀಕೃಷ್ಣನಿರುವ ತೇರು ನನ್ನ ಕೈಲಿದೆ. ನೀನು ನನ್ನ ರಥವನೆಲ್ಲಿಗೆ ಹಾಕುವೆಯೋ ಅಲ್ಲಿಗೆ ಈ ತೇರನ್ನು ಬಿಸಾಡುವೆನು. ಇಲ್ಲವಾದರೆ ಪಾಲ್ಗಡಲಿ ಗೊಗೆದು ಬಿಡುವೆನು. ಎಂದು ಹೇಳಿ ಆಕಾಶದಲ್ಲಿ ತಿರುಗುತ್ತಿರುವ ತನ್ನ ರಥ ವನ್ನು ಕಂಡು ಹೆದರದೆ ಕೃಷ್ಣ, ಅರ್ಜುನ, ಹನುಮಂತರನ್ನು ಕುರಿತು ನೀವು ಮೂವರೂ ಲೋಕೈಕವೀರರು ನನ್ನೊಡನೆ ಯುದ್ಧಕ್ಕೆ ಬಂದುದೇ ಆದರೆ ನನ್ನ ಸಾಹಸವನ್ನು ನೋಡಬಹುದೆಂದು ಹೇಳಿ ಹನುಮಂತನನ್ನು ಮುಷ್ಟಿಘಾತದಿಂದ ಹೊಡೆದು ಅಪ್ಪಳಿಸಿ, ನೆಲಕ್ಕೆ ಕೆಡಹಿ, ಕಮಲಾಕ್ಷನನ್ನು ಹಿಡಿದುಕೊಳ್ಳಲು ಕೃಷ್ಣನು ತನ್ನ ಕಾಲಿನಿಂದ ಒದೆದನು. ಆಗ ಮೂರ್ಛೆಗೊಂಡ ವೀರವರ್ಮನು ಎಚ್ಚತ್ತು ಎಲೈ ವೀರಾಗ್ರಗಣ್ಯರಿರಾ ! ನೀವು ಮೂವರು ನಾನೊಬ್ಬ ಗರ್ವ ದಿಂದ ಉರವಣಿಸಿ ನನ್ನಮೇಲೆ ಬೀಳಬೇಡಿ. ಕೃಷ್ಣಸಂದರ್ಶನವಾಗುವವರೆಗೂ ನಿನಗೆ ಮರಣವಿಲ್ಲವೆಂದು ಅಳಿಯನಾದ ಯಮನು ನನ್ನೊಡನೆ ಹೇಳಿರುವನು. ಈಗಲಾದರೋ ಕಲ್ಯಾಣಮೂರ್ತಿಯಾದ ಶ್ರೀಕೃಷ್ಣಭಗವಂತನ ಪಾದಕಮಲ ಗಳು ನನಗೆ ಸೋಕಿದ ಬಳಿಕ ಮರಣ ಉಂಟೆ ? ವಿಷ್ಣುಪಾದ ಸ್ಪರ್ಶನಸುಖ ವನ್ನು ಹೊಂದಿದ ಪ್ರಾಣಿಗಳಿಗೆ ಮೃತ್ಯುಬಾಧೆಯುಂಟೆ ? ಎಂದು ತನ್ನ ರಥ ವನ್ನು ಏರಿ ಬಿಲ್ಲುಬಾಣಗಳನ್ನುಹಿಡಿದು ಯುದ್ಧಸನ್ನದ್ಧನಾಗಿ ನಿಂತ ವೀರವರ್ಮ ನನ್ನು ಕಂಡು ಕೃಷ್ಣನು ಆಶ್ಚರ್ಯಯುಕ್ತನಾಗಿ ಅರ್ಜುನನನ್ನು ಕುರಿತು ಅಯ್ಯಾ! ಇವನು ಲಘುಹಸ್ತನು. ಲೋಕೈಕವೀರರನ್ನು ಗೆದ್ದವನು. ಆದಕಾರಣ ಇವನೊ ಡನೆ ಒಂದು ಸಾವಿರವರುಷ ಕಾದಿದರೂ ಜಯವಾಗಲಾರದು. ಇವನನ್ನು ನಾನು ಸಂತೋಷದಿಂದ ಮನ್ನಿಸುವೆನೆಂದು ಹೇಳಿದನು. ಆ ಮಾತನ್ನು ಕೇಳಿ ಅರ್ಜುನನು ಎಲೈ ಸ್ವಾಮಿ ! ನೀನು ಯಾರನ್ನು ತೋಷಿಸುವೆಯೋ ಲೋಕದಲ್ಲಿ ಆತನೇ ವಿಜಯನು. ಬಲವಂತರಲ್ಲಿ ಬಲವಂತನು. ಇನ್ನು ಈ ರಾಜನು ನನಗೆ ಸೋಲುವನೆ ! ಸಾಕು ಸುಮ್ಮನಿರು ಎನಲು ಆ ವಾಕ್ಯಗಳನ್ನು ಕೇಳಿ ವೀರವರ್ಮನು ಅರ್ಜುನನಂಗಭಿನಮಿಸಿ ಬೆರಳ ಕೊನೆಯನ್ನು ಅಲ್ಲಾಡಿಸುತ್ತ ಹೊಗಳಿ, ಎಲೈ ಪಾರ್ಥನೆ ! ಈ ಲೋಕದ ಚರಾಚರಂಗಳನ್ನೂ ಬಾಹುಬಲ ದಿಂದ ಗೆಲ್ಲುವನೆಂಬ ದುರಭಿಮಾನವನ್ನು ತೊರೆದು ಶ್ರೀಕೃಷ್ಣನಾಡಿದ ಮಾತಿ ಗನುಸಾರವಾಗಿ ಹೇಳಿದುದು ನನಗೆ ಹಿತಕರವಾಯಿತು. ನಾನಿನ್ನು ನಿನ್ನೊಡನೆ ಕಾದಲೊಲ್ಲೆನು ಎಂದು ಹೇಳಿ ಬಿಲ್ಲುಬಾಣಗಳನ್ನು ಬಿಸುಟು ಶ್ರೀಕೃಷ್ಣ ಮೂರ್ತಿಯ ಬಳಿಗೈತಂದು ಪ್ರೀತಿಯಿಂದ ನಮಸ್ಕರಿಸಿದನು. ಬಳಿಕ ಶ್ರೀ

ಹರಿಯು ಪ್ರೇಮದಿಂದ ವೀರವರ್ಮನನ್ನು ತಕ್ಕೈಸಿ ಅಪ್ಪಿಕೊಂಡನು. ಅರ್ಜುನನನು ಅತಿಶಯವಾದ ಗೌರವದಿಂದ ಮನ್ನಿಸಿದನು. ಸೇನಾಜನರು ತಮತಮಗೆ ಒದಗಿಬಂದ ಉತ್ಸಾಹದಿಂದ ವೀರವರ್ಮನನ್ನು ಹೊಗಳಿ ಕೊಂಡಾಡಿದರು. ಅನಂತರದಲ್ಲಿ ಅಳಿಯನಾಗಿದ್ದ ಯಮನು ಅಲ್ಲಿಗೆ ಬಂದು ತನ್ನ ಮಾವನನ್ನು ಶ್ರೀಕೃಷ್ಣನ ಕೈಗೆ ಕೊಟ್ಟು ಅರ್ಜುನಾದಿಗಳನ್ನು ಹರಿಸಿ, ತನ್ನ ಸತಿಯೊಡನೆ ಯಮಲೋಕಕ್ಕೆ ಹೊರಟು ಹೋದನು ಬಳಿಕ ವೀರವರ್ಮನು ತನ್ನ ದೇಶ ಕೋಶ ಮೊದಲಾದ ಸರ್ವಸ್ವವನ್ನು ಶ್ರೀಹರಿಯ ಸ್ವಾಧೀನ ಮಾಡಿ ಅವರೆಲ್ಲರನ್ನು ಆರು ದಿನಗಳವರೆಗೆ ತನ್ನ ರಾಜಧಾನಿಯಲ್ಲಿ ಇಟ್ಟುಕೊಂಡು ಸಂತೋಷದಿಂದ ಆದರಿಸಿ ವಿನಯ ನಮ್ರತಹೃದಯನಾಗಿ ತನ್ನ ರಾಜ್ಯದ ಉತ್ತಮವಸ್ತುಗಳನ್ನು ಕಾಣಿಕೆಯಾಗೊಪ್ಪಿಸಿ ತನ್ನ ಸೇನೆಯನ್ನು ತೆಗೆದುಕೊಂಡು ಕುದುರೆಗಳನ್ನು ಬಿಡಿಸಿ ಮುಂದೆ ಹೊರಟನು. ಆಗ ಅರ್ಜುನನು ದಾರಿಯಲ್ಲಿ ಸಿಕ್ಕಿದ ಅಗಾಧವಾದ ಕ್ರೂರನಕ್ರಕುಲಗಭೀರಹ್ರದಗಳಿಂದ ಕೂಡಿದ ನದೀನದಗಳನ್ನು ದೇವಪುರ ನಿಲಯ ಲಕ್ಷ್ಮೀರಮಣನ ಅನುಜ್ಞೆಯಂತೆ ಸಂತೋಷದಿಂದ ದೋಣಿಗಳಮೂಲಕ ದಾಟಿದನಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿ ಭಾರತ ಕಥಾ ಸಂಗ್ರಹದಲ್ಲಿ ಇಪ್ಪತ್ತೇಳನೆಯ ಸಂಧಿ ಸಂಪೂರ್ಣಂ ಶ್ರೀ. ಶ್ರೀ. ಶ್ರೀ.



# ಇಪ್ಪತ್ತೆಂಟನೆಯ ಸಂಧಿ.

**ಮುಂದೆ ಹೊರಟ ಕುದುರೆಯು ಮಾಗೀಕಾಲದಲ್ಲಿ ಕಾಣಿಸದೆ ಮಾಯವಾಗಲು ನಾರದರು ಅರ್ಜುನನಿಗೆ ಅದನ್ನು ತಿಳಿಸುವಿಕೆ.**

ಎಲೈ ಜನಮೇಜಯರಾಯನೇ ಲಾಲಿಸು ಅರ್ಜುನನ ಕುದುರೆಯು ಸೌರಾಷ್ಟ್ರ ದೇಶದಿಂದ ಹೊರಟಾಗ ಹೇಮಂತಋತುವಿನ ಮಾಗಿಯು ಬಹಳವಾಗಿ ಹೆಚ್ಚಿತು. ಸೂರ್ಯನು ಚಂದ್ರನಂತಿದ್ದನು. ಬಿಸಿಲು ಬೆಳದಿಂಗಳಾಯಿತು. ತಾವರೆಗಳು ನೈದಿಲೆಗಳಂತಾದವು. ಕೋಗಿಲೆಗಳ ಕಂಠಸ್ವರಗಳು ಕುಗ್ಗಿಹೋದುವು. ಹೂಗಳೆ ಇಲ್ಲವಾದುದರಿಂದ ಮನ್ಮಥನು ತನ್ನ ಬಿಲ್ಲಿನಲ್ಲಿ ಬಾಲೆಯರ ಕಡೆಗಣ್ಣಿನ ನೋಟವೆಂಬ ಬಾಣವನ್ನು ಹೂಡಿ ಹೆದೆಯನ್ನೇರಿಸಿ, ಮದ್ದಾನೆಗಳ ಮದಧಾರೆಯಿಂದ ಕಾಲವನ್ನು ಕಳೆಯುತ್ತಿದ್ದನು. ಅಗ್ನಿಜ್ವಾಲೆಯು ತಣ್ಣಗಾದುದರಿಂದ ಸ್ತ್ರೀಪುರುಷರು ಅದನ್ನು ಬಿಟ್ಟು ಆಲಿಂಗನ ಸುಖವನ್ನು ಬಯಸಿದರು. ಮೂರು ಲೋಕಗಳೂ ಹಿಮದಿಂದ ನಡುಗಿತು. ವಿರಕ್ತ ಶಿರೋಮಣಿಯಾದ ಪರಮೇಶ್ವರನು ನೆತ್ತಿಯಲ್ಲಿ ಹೊತ್ತಿದ್ದ ಗಂಗೆಯನು ಮೆತ್ತಗೆ ಕಡಲಿಗೆಸೆದು ತಲೆಯಲ್ಲಿದ್ದ ಚಂದ್ರಕಳೆಯನ್ನು ಆಕಾಶಕ್ಕೆ ಬಿಸುಟು, ಹಣೆಯಲ್ಲೊಂದು ಕಣ್ಣನ್ನು ತಳೆದು ಅಣಿಯಾದ ಅಗ್ನಿಯನ್ನು ಧರಿಸಿದರೂ ಶೀತಬಾಧೆಯನ್ನು ತಾಳಲಾರದೆ ಮೋಹದಿಂದ ಮರುಗಿ ಭಾಮಿನಿಯಾದ ಗೌರಿಗೆ ವಾಮಾಂಗವನ್ನು

ಕೆತ್ತು ಬಿಗಿಯಪ್ಪಿಕೊಂಡನು. ಆಗ ಆಗ ಮತ್ತಕಾಶಿನಿಯರ ಉತ್ತುಂಗ ಕುಚದ್ವಯದ ಗಾಢಾಲಿಂಗನವೇ ಈ ಹಿಮಕ್ಕೆ ಔಷಧವೆಂದು ತಿಳಿದು ವಿರಹಿಗಳು ತಂತಮ್ಮ ಪ್ರಿಯರನ್ನು ಹುಡುಕುತ್ತಿದ್ದರು ಲೋಭಿಯಾದವನು ಧನವನ್ನು ಹೂಳಿಡುವಂತೆ ಕಾಗೆಗಳು ಹೊರಗೆ ಬಾರದೆ ತಮ್ಮ ಗರಿಗಳನ್ನು ಮುಚ್ಚಿ ಕೋಗಿಲೆಯ ಮೊಟ್ಟೆಗಳನ್ನು ಮರಿಮಾಡಲಾರಂಭಿಸಿದುವು.

ಎಲೈ ಜನಮೇಜಯರಾಯನೇ ಕೇಳು. ಇಂತಪ್ಪ ಹಿಮಗಾಲದಲ್ಲಿ ಸೇನೆಯೊಡನೆ ಬರುತ್ತಿದ್ದ ಅರ್ಜುನನ ಕುದುರೆಗಳೆರಡೂ ಮುಂಬರಿದು ಕುಂತಳ ನಗರವನ್ನು ಹೊಗಲು ಅಲ್ಲಿಗೆ ದೊರೆಯಾದ ಚಂದ್ರಹಾಸನು ಆ ಕುದುರೆ ಗಳನ್ನು ಕಟ್ಟಿದನು. ಬಳಿಕ ಕುದುರೆ ಕಾವಲಿನವರು ಒದಗಿ ಬಂದು ತಮ್ಮ ಕುದುರೆಗಳು ಮಾಯವಾಗಿರುವುದನ್ನು ಕಂಡು ಚಿಂತಾಕ್ರಾಂತರಾಗಿ ಅರ್ಜುನನ ಬಳಿಗೆ ಹೋಗಿ ಜೀಯಾ ! ಉಲ್ಲಾಸದಿಂದ ಸಂಚರಿಸುತ್ತಿದ್ದ ನಮ್ಮ ಕುದುರೆ ಗಳು ಇಲ್ಲಿ ಕಾಣಿಸುವುದಿಲ್ಲ ಎಷ್ಟು ಹುಡುಕಿದರೂ ಸಿಕ್ಕದಿರುವುವು. ಮುಂದೆ ಏನು ಮಾಡಬೇಕೊ ನಮಗೆ ತಿಳಿಯದು ಎಂದು ಹೇಳಲು ಅರ್ಜುನನು ಆಶ್ಚರ್ಯ ಯುಕ್ತನಾಗಿ ಶ್ರೀಕೃಷ್ಣನ ಮುಖವನ್ನು ನೋಡುತ್ತಿರುವಾಗ ಗಗನಮಣಿಯಾದ ಸೂರ್ಯನು ಆಕಾಶ ಸಂಚಾರದ ಆಯಾಸವನ್ನು ತೊರೆದು ಭೂಮಿಗಿಳಿದುಬರು ತ್ತಿರುವನೋ ಎನ್ನುವಂತೆ ಕೋಟಿಸೂರ್ಯಪ್ರಕಾಶಮಾನವಾದ ಬ್ರಹ್ಮತೇಜಸ್ಸಿ ನಿಂದೊಪ್ಪುವ ನಾರದನು ಕೆಂಪಾದ ಜಡೆಯೂ ಶುಭ್ರವಾದ ಹಲ್ಲುಗಳೂ, ನಾರುಮಡಿ ಕೃಷ್ಣಾಜಿನಗಳೂ, ಕತ್ತಿನಲ್ಲಿರುವ ತುಲಸಿಯಮಾಲೆಗಳೂ ಮೌಂಜಿ ಯಿಂದ ರಂಜಿಸುವ ನಡುವೂ, ಹೊಳೆಯುತ್ತಿರುವ ಯಜ್ಞೋಪವೀತವೂ, ವಿಷ್ಣು ನಾಮ ಸ್ಮರಣೆಯ ಶಾಂತಸ್ವರದಿಂದ ಸುಖಕರವಾದ ಸಂಗೀತಸಾಗರವೆಂಬ ವೀಣೆಯನ್ನು ಹಿಡಿದು ನಾರಾಯಣ ಧ್ಯಾನತತ್ಪರನಾಗಿ ಭೂಮಿಗಿಳಿದುಬರಲು ಅರ್ಜುನನು ಅತ್ಯಂತ ವಿನಯದಿಂದ ಕಂಡು ಮೂರುಲೋಕಗಳ ಸ್ಥಿತಿಗಳನ್ನು ಚೆನ್ನಾಗಿಬಲ್ಲ ನಾರದನನ್ನು ಪೂಜಿಸಿ ಭಕ್ತಿಭಾವದಿಂದ ಇಂತೆಂದು ಬೆಸ ಗೊಂಡನು.

ಎಲೈ ಬ್ರಹ್ಮರ್ಷಿಯೇ ! ಈ ನಾಡಿನಲ್ಲಿ ಸಂಚರಿಸುತ್ತಿದ್ದ ನನ್ನ ಕುದುರೆ ಅಗೋಚರವಾಗಿರುವುವು. ಎಲ್ಲಿರುವುವೋ, ತಿಳಿಯದು ಇಲ್ಲಿ ಆ ಕುದುರೆಗಳ ನ್ನು ಕಟ್ಟುವಂತಹ ಬಲಶಾಲಿಗಳಿರುವರೆ ? ಹೇಳು ಎಂದು ಪ್ರಾರ್ಥಿಸಿದನು. ಆಗ ನಾರದನು ಅಯ್ಯಾ ! ನಿನ್ನ ಕುದುರೆಗಳು ಕುಂತಳ ನಗರವನ್ನು ಹೊಕ್ಕವು ಅಲ್ಲಿಗೆ ದೊರೆಯಾದ ಚಂದ್ರಹಾಸನು ಅವುಗಳನ್ನು ಹಿಡಿದು ಕಟ್ಟಿರುವನು. ಹಿಂದೆ ನೀನು ಗೆದ್ದ ದೊರೆಗಳಿಗೆ ಇವನ ಬಲದಲ್ಲಿ ಹದಿನಾರರಲ್ಲೊಂದು ಭಾಗ ವಾದರೂ ಶಕ್ತಿ ಇಲ್ಲ. ಇವನು ಅಸಾಧ್ಯನಾದ ವಿಷ್ಣುಭಕ್ತನು. ಯುದ್ಧದಲ್ಲಿ

ಇವನಿಗೆದುರಾಗಿ ನಿಲ್ಲುವ ಶೂರರು ಭೂಮಂಡಲದಲ್ಲಿಯೇ ಇಲ್ಲ. ಇವನ ಚರಿತ್ರೆಯು ಬಹು ಆಶ್ಚರ್ಯಕರವಾದುದು ಎಂದು ಹೇಳಲು, ಅರ್ಜುನನು ಆಶ್ಚರ್ಯಯುಕ್ತನಾಗಿ ಎಲೈ ತಪೋನಿಧಿಯಾದ ನಾರದಋಷಿಯೇ ! ಹಾಗಾದರೆ ಆ ಚಂದ್ರಹಾಸನ ಕಥೆಯನ್ನು ಮೊದಲಿಂದ ತುದಿವರೆಗೂ ನನಗೆ ಹೇಳಬೇಕೆಂದು ಬೇಡಿಕೊಂಡನು. ಆಗ ನಾರದನು ಇದು ಸಮಯವಲ್ಲ. ಕುದುರೆಗಳು ಸೆರೆಸಿಕ್ಕಿದವು. ಧರ್ಮರಾಯನು ನಿನ್ನಬರವನ್ನು ಕಾದುಕೊಂಡಿರುವನು. ಯಜ್ಞಕಾಲ ಸಮೀಪವಾಗುತ್ತ ಬಂದಿದೆ. ಎನಲು ಕುಂತೀಕುಮಾರನು ಎಲೈ ಲೋಕತಂತ್ರಜ್ಞನಾದ ನಾರದಋಷಿಯೇ ! ಲಾಲಿಸು. ಕ್ಷಣಭಂಗುರವಾದ ಈಸಂಸಾರದಲ್ಲಿ ಮನುಷ್ಯರ ಬಾಳು ಶಾಶ್ವತವೆ ? ಎಂದಿಗೂಇಲ್ಲ ಹೀಗಿರುವಲ್ಲಿ ಅಪ್ರಾರ್ಥಿತವಾಗಿದೊರೆದ ವೈಷ್ಣವಕಥಾಪ್ರಸಂಗವನ್ನು ಕೇಳದೆ ಇರಬಹುದೆ ? ಮಹಾಭಾರತಯುದ್ಧದ ಸಮರಾಂಗಣದಲ್ಲಿ ಶ್ರೀಕೃಷ್ಣನು ಸೂಕ್ಷ್ಮವಾಗಿ ಹೇಳಿದ ಗೀತೆಯನ್ನು ಕೇಳಿದ ನನಗೆ ಈ ಚಂದ್ರಹಾಸನ ಕಥೆಯನ್ನು ಕೇಳುವುದಕ್ಕೆ ಎಷ್ಟುಹೊತ್ತುಬೇಕು. ದಯಮಾಡಿ ನನಗೆ ಆ ಕಥೆಯನ್ನು ಹೇಳು ಎಂದು ಬೇಡಿಕೊಳ್ಳಲು ದೇವರ್ಷಿಯಾದ ನಾರದನು ಇಂತೆಂದನು:—



ನಾರದರು ಅರ್ಜುನನಿಗೆ ಚಂದ್ರಹಾಸನ ಕಥೆಯನ್ನು ಹೇಳಿದುದು.

ಎಲೈ ಧನಂಜಯನೇ ಲಾಲಿಸು. ಪೂರ್ವದಲ್ಲಿ ಕೇರಳ ದೇಶಕ್ಕೆ ದೊರೆಯಾಗಿ ಧರ್ಮಿಷ್ಠನೆನಿಸಿಕೊಂಡು, ಸುಗುಣಶಾಲಿಯಾಗಿದ್ದ ಮೇಧಾವಿ ಎಂಬ ಶೂರನಾದ ದೊರೆಯಿದ್ದನು. ಅವನಿಗೆ ಮೂಲಾನಕ್ಷತ್ರದ ಅರಿಷ್ಟಾಂಶದಲ್ಲಿ ಎಡದಕಾಲಿಗೆ ಆರುಬೆರಳುಳ್ಳವನಾಗಿ, ಮೇಧಾವಿಯ ಪಟ್ಟದ ರಾಣಿಯು ಬಸುರಿನಲ್ಲಿ ಒಬ್ಬ ಮಗನು ಹುಟ್ಟಿದನು. ಬಳಿಕ ಆ ಮಗುವಿಗೆ ಜಾತಕರ್ಮವನ್ನು ಮಾಡಿ ಸಂತೋಷದಿಂದ ಕೆಲವು ದಿನಗಳಿದ್ದಬಳಿಕ ಹಗೆಗಳು ಬಂದು ಮುತ್ತಿ

ಕೊಂಡು ಹೊಡೆದಾಡಲು ಶೂರನಾದ ಮೇಧಾವಿಯು ಕ್ಷತ್ರಿಯಧರ್ಮದಿಂದ ಹಗೆಗಳೊಡನೆ ಹೊಡೆದಾಡಿ ರಣರಂಗದಲ್ಲಿ ಸತ್ತುಬಿದ್ದನು. ಅದನ್ನು ಕೇಳಿ ಪತಿವ್ರತೆಯಾದ ರಾಣಿಯು ಅಗ್ನಿಪ್ರವೇಶದಿಂದ ಪ್ರಾಣತ್ಯಾಗ ಮಾಡಿಕೊಂಡಳು. ಬಳಿಕ ಒಬ್ಬ ದಾದಿಯು ಆ ಮಗುವನ್ನೆತ್ತಿಕೊಂಡು ರಕ್ಷಕರಿಲ್ಲದೆ ಮರುಗುತ್ತ, ದೊರೆಯನ್ನು ರಾಣಿಯನ್ನು ನೆನೆನೆನೆದು ಗೋಳಿಡುತ್ತ ದುಃಖವನ್ನು ಸಹಿಸಿಕೊಂಡು ಮೆಲ್ಲಮೆಲ್ಲನೆ ಕುಂತಳನಗರಕ್ಕೆ ಬಂದು ನಡೆನುಡಿಗಳನ್ನು ಕಲಿಯುವವರೆಗೂ, ತಿರಿದು ಹೊರೆದು ನೆರೆಹೊರೆಯವರ ಸಹಾಯದಿಂದ ಆ ಮಗುವನ್ನು ಸಾಕಿ, ಉಡಿಗೆತೊಡಿಗೆಗಳೂ ಎಣ್ಣೆಬೆಣ್ಣೆಗಳೂ ಲಾಲನೆಪಾಲನೆಗಳೂ ಇಲ್ಲವೆಂದು ಮರುಗುತ್ತ ತನ್ನ ಪ್ರಾಣಗಳಿಗಿಂತಲೂ ಹೆಚ್ಚಾದ ಅಕ್ಕರೆಯಿಂದ ಆ ಶಿಶುವನ್ನು ಸಲಹಿ, ಬಳಿಕ ಕಾಲವಶದಿಂದ ರೋಗಪೀಡಿತಳಾಗಿ ಸತ್ತುಹೋದಳು. ಆಬಳಿಕ ದಿಕ್ಕಿಲ್ಲದವನಾದ ಆಮಗುವು ಊರಿನ ಜನಗಳ ದಯೆಗೆ ಪಾತ್ರನಾದನು. ಆ ಮಗುವನ್ನು ನೋಡಿದ ಹೆಂಗಸರೆಲ್ಲರೂ ಅಕ್ಕರೆಯಿಂದ ಎತ್ತಿಕೊಂಡು ಮುದ್ದಾಡಿ ಸಕ್ಕರೆತುಪ್ಪಗಳನ್ನು ತಿನ್ನಿಸಿ ಬಾಲಬಾಷೆಗಳನ್ನಾಡಿಸಿ ಹಾಲೆರೆದು ಹಣ್ಣುಕೊಟ್ಟು, ತಂತಮ್ಮ ಮಕ್ಕಳುಗಳೊಡನೆ ಮಜ್ಜನಂಗೈಸಿ, ಮುಡಿಯುಡಿಸಿ, ಮಧುರಾಹಾರಗಳನ್ನು ತಿನ್ನಿಸಿ, ಮೆಲ್ಪಾಸಿನಲ್ಲಿ ಮಲಗಿಸುತ್ತಿದ್ದರು. ಪರಪುಟ್ಟನಾಗಿ ಪಟ್ಟಣದ ಬೀದಿಬೀದಿಯಲ್ಲಿಯೂ ತಿರುಗುತ್ತಿರುವ ಬಾಲಕನನ್ನು ಕಂಡು ಮೋಹನಾಂಗಿಯರಾದ ಸೂಳೆಯರು ಅವನನ್ನು ತಂತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಮಗುವಿನರೂಪಕ್ಕೆ ಬೆರಗಾಗಿ ಮೋಹಕರವಾದ ಮುದ್ದುಮಾತುಗಳನ್ನಾಡಿಸಿ, ಸರಸ ಪರಿಮಳ ಗಂಧವನ್ನು ಲೇಪಿಸಿ, ಕಸ್ತೂರಿಯ ತಿಲಕವನ್ನಿಟ್ಟು, ಹೂಮುಡಿಸಿ, ಕರ್ಪೂರವೀಳೆಯವನ್ನು ಕೊಟ್ಟು, ಮಡಿಬಟ್ಟೆಗಳಿಂದ ಅಲಂಕರಿಸಿ ಕಳುಹಿಸುತ್ತಿದ್ದರು.

ಇಂತಪ್ಪ ಬಾಲಕನು ಆಡುವ ಮಕ್ಕಳೊಡನೆ ಆಡುತ್ತ ನೋಡತಕ್ಕವರೊಂದಿಗೆ ನೋಟವನ್ನು ನೋಡುತ್ತ, ಮನೆಮನೆಗಳನ್ನು ಸಂಚರಿಸಿ, ಸರ್ವರಿಗೂ ಮೋಹವನ್ನುಂಟುಮಾಡುತ್ತ, ಸರ್ವರೊಡನೆಯೂ ಆನಂದದಿಂದ ಕ್ರೀಡಿಸುತ್ತಿರುವ ಆ ಮಗುವಿಗೆ ಪೂರ್ವಪುಣ್ಯಪರಿಪಾಕದ ದೆಸೆಯಿಂದ ಬೀದಿಯಲ್ಲೊಂದು ಪುಟ್ಟ ಸಾಲಗ್ರಾಮವು ಸಿಕ್ಕಿತು. ಅದನ್ನು ತೆಗೆದುಕೊಂಡು ತನ್ನ ಜೊತೆಯವರಿಗೆ ತೋರಿಸಿ, ಕಲ್ಲನ್ನು ನೋಡಿದಿರಾ ! ಎಷ್ಟು ಚೆನ್ನಾಗಿದೆ. ಇದಕ್ಕೆ ಸಮಾನವಾದ ಕಲ್ಲನ್ನು ಎಲ್ಲಿಯೂ ಕಾಣೆ ಎಂದು ಹೇಳಿ, ಗುಂಡಾಗಿದ್ದುದರಿಂದ ಗೋಲಿಯೆಂದು ತಿಳಿದು, ಅದರಿಂದ ಅಣ್ಣೆಕಲ್ಲು ಗೋಲಿ ಮೊದಲಾದ ಆಟಗಳನ್ನಾಡಿ ಆಟಕ್ಕೆ ಬಂದವರನ್ನು ಗೆದ್ದು, ಹಾಸ್ಯಮಾಡಿ ನಗುತ್ತ ಆ ಸಾಲಗ್ರಾಮವನ್ನು ಇಡುವುದಕ್ಕೆಸ್ಥಳವಿಲ್ಲದೆ ಇದ್ದಕಾರಣಸದಾ ಬಾಯಿಯಲ್ಲಿಟ್ಟು

ಕೊಂಡು ಇದ್ದು ಆಡುವಕಾಲದಲ್ಲಿಮಾತ್ರ ಹೊರಕ್ಕೆ ತೆಗೆಯುತ್ತಿದ್ದನು. ಎಲೈ ಪಾರ್ಥನೇ ಕೇಳು. ಈತರದ ಭಾಗ್ಯವಂತನಾದ ಮಗುವಿಗೆ ಐದುವರ್ಷ ತುಂಬಿತು. ಆಗ ಆನಗರದಲ್ಲಿ ಪ್ರಬಲನಾಗಿದ್ದ ದುಷ್ಟಬುದ್ಧಿಯೆಂಬ ಮಂತ್ರಿಯು ತನ್ನಮನೆಯಲ್ಲಿ ಬ್ರಾಹ್ಮಣಸಂತರ್ಪಣೆಯನ್ನು ಮಾಡಿಸಲು, ದೈವಜ್ಞರಾದ ಬ್ರಾಹ್ಮಣರು ಮೃಷ್ಟಾನ್ನ ಭೋಜನದಿಂದ ಸಂತುಷ್ಟರಾಗಿ, ಸುಖಾಸನದಲ್ಲಿ ಕುಳಿತು ಸ್ವಸ್ತಿವಾಚನಗಳಿಂದ ಮಂತ್ರಿಯನ್ನು ಹರಸುತ್ತಿದ್ದರು.

ಅಲ್ಲಿ ತನ್ನ ಜೊತೆಯವರೊಡನೆ ಆಟವಾಡುತ್ತಿದ್ದ ಈ ಮಗುವನ್ನು ಕಂಡು ಉಲ್ಲಾಸಯುಕ್ತರಾದ ಆ ಬ್ರಾಹ್ಮಣರು ಎಂದಿಗಾದರೂ ಈತನು ನಮ್ಮ ರಾಜ್ಯಕ್ಕೆ ದೊರೆಯಾಗುವನೆಂದರಿತು ಉಕ್ಕಿಬರುವ ಅಕ್ಕರೆಯಿಂದ ಆ ಚಿಕ್ಕ ಮಗುವನ್ನು ನೋಡುತ್ತ, ದುಷ್ಟಬುದ್ಧಿಯನ್ನು ಕುರಿತು ಅಯ್ಯಾ! ಈಮಗುವು ಯಾರು ಎಲ್ಲಿಂದ ಇಲ್ಲಿಗೆ ಬಂದನು ಎಂದು ಕೇಳಿದರು. ಆಗ ದುಷ್ಟಬುದ್ಧಿಯು ಸ್ವಾಮಿ! ಮಹಾನಗರವಾದ ನಮ್ಮೂರಿನಲ್ಲಿ ಹೀಗೆ ಅನಾಥರಾದ ಮಕ್ಕಳು ಎಷ್ಟುಜನರಿಲ್ಲ. ನಾನು ಇವನನ್ನು ಯಾರು ಎಂದು ಹೇಳಲಿ! ರಾಜಕಾರ್ಯದಲ್ಲಿರುವ ನನಗೆ ಈ ಮಗುವಿನ ಗೋಜು ಏತಕ್ಕೆ ಎಂದನು. ಆ ಮಾತನ್ನು ಕೇಳಿ ಅಯ್ಯಾ ಈ ಮಗುವನ್ನು ತಿರಸ್ಕರಿಸಿ ನಿರಾಕರಿಸಬೇಡ. ಒಂದು ದಿನವಲ್ಲವಾದರೆ ಮತ್ತೊಂದು ದಿನವಾದರೂ ನಮ್ಮ ದೊರೆಯಾದ ಕುಂತಳರಾಜನು ಆಳುವ ಈ ಪಟ್ಟಣಕ್ಕೆ ಇವನು ದೊರೆಯಾಗುವನು. ಆದಕಾರಣ ಅನಾಥನಾದ ಇವನನ್ನು ಅಕ್ಕರೆಯಿಂದ ಸಂರಕ್ಷಿಸು ಎಂದು ಹೇಳಲು, ಕ್ರೂರವಾದ ಮೊಸಳೆಗಳಿಂದ ಕೂಡಿದ ಮಡುವು ಆಳವಾಗಿಯೂ ತಿಳಿಯಾಗಿಯೂ ಇರುವ ನೀರಿನಿಂದ ತುಂಬಿರುವಂತೆ ಮನಸ್ಸಿನಲ್ಲಿ ಕಪಟಮೋಹವನ್ನು ತಾಳಿ, ಬಾಹ್ಯದಲ್ಲಿ ಮರುಗುತ್ತ ಆಹಾ! ಬ್ರಾಹ್ಮಣರು ಹೇಳಿದಮಾತು ಎಂದಿಗೂ ಸುಳ್ಳಾಗುವುದಿಲ್ಲ. ಇವನು ದೊರೆಯಾದರೆ ಮಕ್ಕಳಿಲ್ಲದ ಕುಂತಳರಾಜನ ಅಧಿಕಾರವು ನನ್ನ ಮಗನಿಗಾಗದೆ ತಪ್ಪಿಹೋಗುವುದು ಎಂದು ಯೋಚಿಸಿ, ಆ ಬ್ರಾಹ್ಮಣರನ್ನು ಸತ್ಕರಿಸಿ ಅವರವರಮನೆಗೆ ಕಳುಹಿಸಿ ಕ್ರೂರರಾದ ಚಂಡಾಲರನ್ನು ಬರಮಾಡಿ, ಯಾರಿಗೂ ತಿಳಿಯದಂತೆ ಏಕಾಂತದಲ್ಲಿ ಅವರನ್ನು ಕುರಿತು ಇಂತೆಂದನು.

ಎಲೈ ಘಾತುಕರಿರಾ! ಅತ್ಯಂತ ರಹಸ್ಯವಾಗಿ ನಡೆಯಬೇಕಾಗಿರುವ ಒಂದಾನೊಂದು ರಾಜಕಾರ್ಯವುಂಟು ಅದನ್ನು ನೀವು ಭಕ್ತಿಯಿಂದ ಗೋಪ್ಯವಾಗಿ ನೆರವೇರಿಸಬೇಕು. ಏನಂದರೆ:—ಯಾರೂ ಅರಿಯದಂತೆ ಈ ಮಗುವನ್ನು ಅರಣ್ಯಕ್ಕೆ ಕೊಂಡುಹೋಗಿ ಅಲ್ಲಿ ಅವನನ್ನು ಕೊಂದು ಏನಾದರೂ ಗುರುತನ್ನ ತಂದು ನನಗೆ ತೋರಿಸಿದರೆ, ನಿಮಗೆ ಬಹುಮಾನವನ್ನು ಕೊಡುವೆನು ತಡಮಾಡದೆ ಹೊರಡಿ ಎಂದು ಹೇಳಲು ಆ ಘಾತುಕರು ಹಿರಣ್ಯಕಶಿಪುವಿನ ಆಜ್ಞ

ಯಂತೆ ಮಗುವಾದ ಪ್ರಹ್ಲಾದನನ್ನು ಕೊಲ್ಲುವುದಕ್ಕಾಗಿ ಕಾಳರಕ್ಕಸರು ಬಂದು ಕೈದುಡಿಕಿದಂತೆ ನಿಷ್ಕರುಣರಾಗಿ ಹಿಡಿದುಕೊಂಡರು. ಆಗ ವಿಷ್ಣುಭಕ್ತನಾದ ಚಂದ್ರಹಾಸನು ಪಾಪಿಗಳ ದೇಹದಲ್ಲಿರುವ ಪರಮಾತ್ಮನಂತೆಯೂ, ಯಮದೂತರು ಎಳೆದುತಂದ ಅಜಾಮಿಳನಂತೆಯೂ, ಕಾಗೆಗಳ ಗುಂಪಿನಲ್ಲಿ ಸಿಕ್ಕಿದ ಕೋಗಿಲೆಯಂತೆಯೂ, ಕತ್ತಲೆಯಲ್ಲಿ ಕಾಂತಿಗೆಟ್ಟಿರುವ ಚಂದ್ರಬಿಂಬದಂತೆಯೂ, ದಟ್ಟವಾಗಿ ಹಬ್ಬಿರುವ ಸಿಟ್ಟಿನೊಳಗಿರುವ ವಿವೇಕದಂತೆಯೂ, ಬೆದರಿ ಬಿಕ್ಕಳಿಸುತ್ತಿದ್ದನು ಹೀಗೆ ಆ ಚಂಡಾಲರ ಭಯದಿಂದ ನಡುಗುತ್ತಿದ್ದ ಬಾಲಕನಿಗೆ ಬಾಯಿಯಲ್ಲಿದ್ದ ಸಾಲಗ್ರಾಮದ ಪ್ರಭಾವದಿಂದ ಜ್ಞಾನ ಉಂಟಾಗಿ, ಮುರಹರಾ! ಕೃಷ್ಣಾ! ಕಮಲಾಕ್ಷಾ! ಖಗರಾಜಗಮನಾ! ಸಲಹು ಸಲಹು ಎಂದು ಚೀರಿ ಅಳುತ್ತಿರಲು, ಆ ಕಟುಕರ ಹೃದಯವು ಕರಗಿ ನೀರಾಯಿತು. ಬಳಿಕ ಆ ಘಾತುಕರು ಮಗುವನ್ನೆತ್ತಿಕೊಂಡುಹೋಗಿ ಅರಣ್ಯದಲ್ಲಿಟ್ಟು ದುಷ್ಟಬುದ್ಧಿಯನ್ನು ಬಹಳವಾಗಿ ಬೈದು ಕೊಲ್ಲುವುದಕ್ಕೆ ಮನಸ್ಸುಬಾರದೆ, ಶಿಶುವಧೆಯನ್ನು ಮಾಡಿದರೆ ಪಾಪಬರುವುದೆಂಬ ಶಂಕೆಯಿಂದ ನಿಂತು ನೋಡುತ್ತ ಕಾಲಿನಲ್ಲಿದ್ದ ಆರನೆಯಬೆರಳನ್ನು ಕತ್ತರಿಸಿ, ಗುರುತನ್ನು ತಂದು ದುಷ್ಟಬುದ್ಧಿಗೆ ತೋರಿಸಿದರು ಅವನು ಅವರನ್ನು ಅಕ್ಕರೆಯಿಂದ ಮನ್ನಿಸಿ, ಅತಿಶಯವಾದ ಬಹುಮಾನವನ್ನಿತ್ತು ಅವರವರ ಮನೆಗೆ ಕಳುಹಿಸಿದನು.

### ಕುಳಿಂದನು ಚಂದ್ರಹಾಸನನ್ನು ಕಂಡುದು.

ಎಲೈ ಅರ್ಜುನನೇ! ಚಂದ್ರಹಾಸನು ಸಾಲಗ್ರಾಮಶಿಲೆಯಪ್ರಭಾವದಿಂದ ಕಾಲಮೇಘಶ್ಯಾಮನಾದ ಶ್ರೀಹರಿಯನ್ನು ಧ್ಯಾನಿಸಲು, ಕಟುಕರು ಕೊಲ್ಲಲಾರದೆ ಕಾಲುಬೆರಳನ್ನುಕೊಯ್ದು ಜೀವಸಹಿತ ಅವನನ್ನುಬಿಟ್ಟು ಹೊರಟುಹೋದರು. ನಾರಾಯಣಸ್ಮರಣೆಯಿಂದ ಪರಿಶುದ್ಧರಾದ ಪುಣ್ಯಾತ್ಮರಿಗೆ ಲೋಕದ ಜನರಂತೆ ಈತಿಬಾಧೆಗಳು ಕಾಣಬರುವುವೆ? ಕಾಲಬೆರಳಿನಗಾಯದಿಂದ ಸೋರುವ ರಕ್ತಧಾರೆಯ ನೋವನ್ನು ತಾಳಲಾರದೆ ಮಗುವು ಹರಿಹರೀ! ನಾರಾಯಣಾ ಎಂದು ಅಳುತ್ತಿರುವುದನ್ನು ಕಂಡು, ಆ ಕಾಡಿನಲ್ಲಿದ್ದ ಮೃಗಪಕ್ಷಿಗಳು ಹಸಿವಬಾಯಾರಿಕೆಯನ್ನು ಬಿಟ್ಟು ಆ ಮಗುವನ್ನು ಉಪಚರಿಸಲಾರಂಭಿಸಿದವು. ನವಿಲುಗಳು ರೆಕ್ಕೆಯನ್ನುಬಿಚ್ಚಿ ಕೊಡೆಯಾಗಿ ಹಿಡಿದುವು. ಹಂಸೆಗಳು ರೆಕ್ಕೆಯಿಂದ ಸುಳಿಗಾಳಿಯನ್ನು ಬೀಸಿದುವು. ಚಕ್ರವಾಕಗಳು ನೀರಿನಲ್ಲಿ ನೆನೆಸಿದ ತಮ್ಮ ರೆಕ್ಕೆಗಳಿಂದ ತುಂತುರುಹನಿಗಳನ್ನು ಚೆಲ್ಲಿದವು. ಗಿಳಿಗಳು ಕೊರಗಿ ಮರುಗುತ ಮೃದುವಾಕ್ಯಗಳಿಂದ ಸಂತೈಸುತ್ತಿದ್ದುವು. ಚಂದ್ರಹಾಸನನೊಡನೆ ತಾವು ಅಳುವಂತೆ ದುಂಬಿಗಳು ಮೊರೆಯುತ್ತಿದ್ದುವು.

ಎಲೈ ಅರ್ಜುನನೇ ! ಕರುಬುವ ಖೂಳಜನರಿರುವ ಊರಿಗಿಂತಲೂ ಕಾಡೇ ಉತ್ತಮವಲ್ಲವೆ ? ಮಗುವು ಅಳುತ್ತಿರುವುದನ್ನು ಕಂಡು ವನದೇವಿಯು ಸಹಿಸಲಾರದೆ, ಸುಳಿಗಾಳಿ ಬೀಸಿದಾಗ ಭೋರೆನ್ನುವ ಗಿಡಮರಗಳ ಸ್ವರದೊಡನೆ ಅತ್ತಳು. ಅಗ್ನಿ, ಜಲ, ಭೂಮಿ, ಆಕಾಶ, ವಾಯು, ಚಂದ್ರಸೂರ್ಯರು, ದಿಗ್ವನಿತೆಯರು, ಅಯ್ಯೋ ! ಹೆಚ್ಚಾಗಿ ಹೇಳಿ ಫಲವೇನು ? ಕಡೆಗೆ ಆ ಅರಣ್ಯದಲ್ಲಿದ್ದ ಚರಾಚರಗಳು ಬಹಳವಾಗಿ ಚಿಂತಿಸುತ್ತ, ಚಂದ್ರಹಾಸನಿಗಾಗಿ ಮರುಗುತ್ತಿದ್ದುವು. ಅಷ್ಟರಲ್ಲಿಯೇ ಒಂದಾನೊಂದು ಕೋಲಾಹಲಧ್ವನಿಯು ಕೇಳಬಂದಿತು. ಸೂರ್ಯನಬಾಧೆಯಿಂದ ನೆಲೆಗೆಟ್ಟುಹೋಗಿ ನಾನಾರೂಪವನ್ನು ಧರಿಸಿ, ವನವಾಸದ ತಪಸ್ಸೆಂಬ ಸಿದ್ಧಿಯನ್ನುಹೊಂದಿ, ತಮ್ಮ ಹಗೆಯಾದ ಹಗಲನ್ನು ಹೋಗಲಾಡಿಸುವ ಕತ್ತಲೆಯೋ ಎನ್ನುವಂತೆ ಕಪ್ಪನೆಯ ಕಿರಾತಬೇಡರ ಗುಂಪು ಅಬ್ಬರಿಸಿ ಬೊಬ್ಬೆಯಿಟ್ಟು ಕೂಗುತ್ತ, ಜೀವಿಗಳನ್ನು ಕೊಲ್ಲುವುದಕ್ಕೆಬಂದ ಯಮದೂತರಂತೆ ಬೇಟೆಗೆ ಬರುತ್ತಿದ್ದರು. ಬೆಟ್ಟಬೆಟ್ಟಗಳನ್ನು ತಿರುಗಿ, ತಪ್ಪತಪ್ಪಲಿನ ಮಳೆಗಳನ್ನುಸೋವಿ, ಪರ್ವತಾಕಾರದಿಂದ ಬರುವ ನಾಯ್ಗಳನ್ನು ಹಗ್ಗದಿಂದ ಕಟ್ಟಿ ಹಿಡಿದುತರುತ್ತ, ಸಿಕ್ಕಿದ ಗಿಡಮರಬಳ್ಳಿಗಳ ಪೊದರುಗಳನ್ನು ಹುಡುಕಿ ಬಾಣಗಳನ್ನು ಹೊಡೆದು, ಮೃಗಗಳನ್ನು ಕೆಡಹುತ್ತ, ತಮ್ಮ ಬೇಟೆಗೆ ಲಸದ ಬಿರುಬನ್ನು ತೋರಿಸಿ, ಶೌರ್ಯದಿಂದ ಬೇಟೆಯಾಡಿ, ಕಡೆಗೆ ಆನೆಯತಲೆಯಿಂದುರಿದ ಮುತ್ತುಗಳನ್ನೂ, ಹಂಸೆಗಳ ಗರಿಗಳನ್ನೂ, ಚಮರಿಗಳ ಬಾಲಗಳನ್ನೂ, ಆನೆಗಳ ದಂತಗಳನ್ನೂ, ಕಸ್ತೂರಿಮೃಗದ ಸಾರವನ್ನೂ ಎತ್ತಿಕೊಂಡು ಬರುತ್ತಿರುವರೋ ಎನ್ನುವಂತೆ ಹುಸಿನಗೆ, ಕೇಶಪಾತ, ಮುಂಗುಳುಳು, ಮೊಳೆಗವ್ವು, ಸುವಾಸನೆಯಿಂದಕೂಡಿ ಹೆಂಡಿರೊಡನೆ ಲೀಲೆಯಿಂದ ಸಂಚರಿಸುತ್ತಾ ಹುಲಿ, ಕರಡಿ, ಆನೆ, ಸಿಂಹ, ಹುಲ್ಲೆ, ಹಂದಿ, ಮೊಲ, ಕಾಡೆಮ್ಮೆ, ಚಮರಿ, ಕ್ರೌಂಚ, ಹಂಸೆ, ಜಕ್ಕವಕ್ಕಿ ಮೊದಲಾದ ಮೃಗಜಾತಿಗಳನ್ನು ಕೊಂದ್ಯು ತರುತ್ತಿದ್ದರು. ಇಂತಹ ಬೇಡರಿಗೆ ಒಂದಾನೊಂದು ಜಿಂಕೆಯು ಸಿಕ್ಕದೆ ತಪ್ಪಿಸಿಕೊಂಡೋಡುವುದನ್ನು ಕಂಡು, ಆ ಕಿರಾತನಿಗೆ ದೊರೆಯಾದ ಕುಳಿಂದನು ಆ ಜಿಂಕೆಯನ್ನು ಕೊಲ್ಲಬೇಕೆಂದು ಇಚ್ಛಿಸಿ ಬಿಲ್ಲುಬಾಣಗಳನ್ನು ಹಿಡಿದು ಹಿಂಬಾಲಿಸಿ ಹೊರಟನು. ಎಲೈ ಅರ್ಜುನನೇ ಲಾಲಿಸು ಈ ಕುಳಿಂದನು ದುಷ್ಟಬುದ್ಧಿಯ ಇಷ್ಟಾನುಸಾರಿ. ಆ ಅರಣ್ಯಕ್ಕೆ ಸೇರಿದ ದೇಶವನ್ನು ಆಳುತ್ತ ಚಂದನಾವತಿಯೆಂಬ ಪಟ್ಟಣಕ್ಕೆ ಅರಸನಾಗಿರುವನು ಆತನು ತನ್ನ ಬೇಡಪಡೆಯೊಂದಿಗೆ ಬೇಟೆಯಾಡುವನೆವದಿಂದ ಕಾಡಿಗೆ ಬಂದು ಓಡಿಹೋಗುತ್ತಿರುವ ಜಿಂಕೆಯನ್ನಟ್ಟಿಕೊಂಡು ಬಂದು, ಶ್ರೀಹರಿಯನ್ನು ನೆನೆನೆನೆದು ಅಳುತ್ತಿರುವ ಸುಂದರಾಂಗನಾದ ಮಗುವನ್ನು ಕಂಡು ಸಂತೋಷಚಿತ್ತನಾಗಿ ಕುದುರೆಯಿಂದಳಿದು ತಲೆ

ದೂಗಿ, ಆಹಾ ! ಪ್ರಾಣಿಹಿಂಸೆಗಾಗಿ ಬಂದ ನನಗೆ ಮಹಾ ಪುಣ್ಯಮೂರ್ತಿಯಾದ ಈ ಮಗುವು ದೊರೆಯಿತು. ಶಿವಶಿವಾ ! ಇದು ಆಶ್ಚರ್ಯವಲ್ಲವೇ ? ಎಂದು ನಿಧಿಯನ್ನು ಕಂಡ ಬಡವನಂತೆ ಬಹಳವಾಗಿ ಸಂತೋಷಪಟ್ಟು ಮೈದಡವಿ, ಮಗುವನ್ನೆತ್ತಿಕೊಂಡು ಸಗ್ಗಳೆಯನೀರಿನಿಂದ ಕಾಲ ಗಾಯವನ್ನು ತೊಳೆದು ಕಣ್ಣುಗಳನ್ನೊರಸಿ, ಉಕ್ಕಿಬರುವ ಬಿಕ್ಕಳಿಕೆಯನ್ನು ಸಂತೈಸಿ, ಕುಳಿಂದನು ಸೌಭಾಗ್ಯನಿಧಿಗೆ ಮೂಲಕಾರಣನಾದ ಚಂದ್ರಹಾಸನನ್ನು ಲಾಲಿಸಿದನು. ಬಳಿಕ ತನ್ನೊಡನೆ ಬಂದಿದ್ದ ಬೇಡರೆಲ್ಲರನ್ನು ಕರೆದು, ಈ ಮಗು ಇಂತಹ ಕಷ್ಟದಲ್ಲಿಯೂ ತನ್ನ ತಾಯ್ತಂದೆಗಳನ್ನು ನೆನೆಯದೆ ಜಗತ್ಕಾರಣನಾದ ಶ್ರೀಹರಿಯನ್ನು ಸ್ಮರಿಸುತ್ತಿರುವುದು. ಈತನಿಗೆ ತಂದೆಯು ಶ್ರೀಹರಿಯೇ ಆಗಿರಬೇಕು. ನನಗ ಮಕ್ಕಳಿಲ್ಲ ಸರ್ವರಿಗೂ ಮಕ್ಕಳನ್ನು ಕೊಡುವವನು ಶ್ರೀಹರಿಯೇ ಆದಕಾರಣ ಇವನೇ ನನ್ನ ಮಗನು. ಆಹಾ ! ಲೋಕದಲ್ಲಿ ಮಾನವರಿಗೆ ಉಂಟಾಗುವ ಮಕ್ಕಳಲ್ಲಿ ಧರ್ಮಶಾಸ್ತ್ರ ಪ್ರಸಿದ್ಧವಾದ ಔರಸ, ಕ್ಷೇತ್ರಜ, ದತ್ತ, ಕೃತ್ರಿಮ, ಅನ್ಯಜಾತ, ಅಪವಿದ್ಧ, ಕಾನೀನ, ಸಹೋಢಸಂಭವ, ಕ್ರೀತ, ಪೌನರ್ಭವ ಎಂಬ ಹತ್ತುಬಗೆಯುಂಟು. ಆದರಲ್ಲಿ ಹೊಟ್ಟೆಯಲ್ಲಿ ಹುಟ್ಟಿದಮಗನೇ ಮುಖ್ಯನು. (ಔರಸಪುತ್ರ) ಅಂಥವನಿಲ್ಲವಾದರೆ ಉಳಿದ ಒಂಭತ್ತು ವಿಧವಾದವರಲ್ಲಿ ಒಬ್ಬನಾದರು ಇರಬೇಕು. ಅಂಥಾ ಮಕ್ಕಳಲ್ಲಿ ತನಗೆ ತಾನಾಗಿಯೇ ಸಿಕ್ಕಿದವನಾದ ಈ ಮಗನು ನನಗೆ ದತ್ತನು ಎಂದು ಹೇಳಿ ಸಂತೋಷಭರಿತನಾಗಿ ಬೇಟೆಯಲ್ಲಿ ಕೊಂದ ಪ್ರಾಣಿಗಳನ್ನು ಅವರವರಿಗೆ ಹಂಚಿಕೊಟ್ಟು ತಾನೇ ಮಗುವನ್ನೆತ್ತಿಕೊಂಡು ಕುದುರೆಯನ್ನೇರಿ ತನ್ನ ಪಟ್ಟಣಕ್ಕೆ ಬರುತ್ತಿದ್ದನು. ಮೊದಲೇ ಓಡಿಬಂದು ಚಾರರು ಈ ವಾರ್ತೆಯನ್ನು ತಿಳಿಸಿದುದರಿಂದ ಚಂದನಾವತಿಯನ್ನು ಅಂದಚಂದದಿಂದ ಅಲಂಕರಿಸಿದರು. ಬಳಿಕ ಕುಳಿಂದರಾಜನು ಉತ್ಸವಯುಕ್ತನಾಗಿ ಬಂದು ತನ್ನರಮನೆಯನ್ನು ಹೊಗಲು, ಅವನ ಹೆಂಡತಿಯಾದ ಮೇಧಾವಿನಿಯು ಗಂಡನನ್ನು ಎದುರುಗೊಂಡು, ಮಗುವನ್ನೆತ್ತಿಕೊಂಡು ಮುದ್ದಾಡಿ ಇಂದಿಗೆ ತನ್ನ ಬಂಜೆತನವು ನಾಶವಾಯಿತೆಂದು ಸಂತೋಷದಿಂದ ಹಿಗ್ಗಿದಳು. ಆ ಬಳಿಕ ಕುಳಿಂದನು ತನ್ನ ನಗರದಲ್ಲಿ ಸಂತೋಷದಿಂದ ಉತ್ಸವವನ್ನು ಮಾಡಿಸಿ, ಬ್ರಾಹ್ಮಣರನ್ನು ಕರೆಸಿ, ತನ್ನ ಭಂಡಾರದ ವಸ್ತುಗಳೆಲ್ಲೊಂದೂ ಉಳಿಯದಂತೆ ದಾನಮಾಡಿ, ಜಾತಕರ್ಮವನ್ನು ಮಾಡಿದ ಬಳಿಕ ನಿರ್ಮಲವಾದ ತನ್ನ ಮುಖಕಮಲದಿಂದ ಚಂದ್ರನನ್ನು ಗಹಗಹಿಸಿ ನಗುತ್ತಿರುವ ಆ ಮಗುವಿಗೆ ಚಂದ್ರಹಾಸನೆಂದು ಹೆಸರಿಟ್ಟು ನಾಮಕರಣವನ್ನು ಮಾಡಿಸಿದನು. ಬಾಲ್ಯದಿಂದ ಹಿಡಿದು ಮುದುಕರಾಗುವವರೆಗೆ ಎಂದಿಗಾದರೂ ವಿಷ್ಣುಭಕ್ತಿಯುಂಟಾಗದ ನರಾಧಮರನ್ನು ಹಾಸ್ಯಮಾಡುವ ಧವಳಕಾಂತಿಯಿಂದಲೂ, ಸಕಲ ಲೋಕಗಳ

ಲ್ಲಿಯೂ ಹರಡಿಕೊಂಡು ಹೊಳೆಯುತ್ತಿರುವ ಶುಭ್ರವಾದ ಕೀರ್ತಿಯಿಂದಲೂ, ಅಸಮ, ಕ್ಷಯರಹಿತ, ಅಕಳಂಕ ಅತಿಶಾಂತನೆಂಬ ಗುಣಗಳಿಂದಲೂ, ಇವನು ಚಂದ್ರಹಾಸನೇ ಸರಿಯೆಂದು ಬ್ರಾಹ್ಮಣರು ಹೇಳಿ ಆ ಮಗುವನ್ನು ನೋಡಿ ಮೆಚ್ಚಿಕೊಂಡು ಹಿಗ್ಗಿ ಹೋದರು.

ಬಳಿಕ ಕತ್ತಲೆಯಮನೆಗೆ ರತ್ನಕಾಂತಿಯೇ ದೀಪವಾದಹಾಗೆ, ಒಣಗಿದ ಸರೋವರಕ್ಕೆ ಹೊಸನೀರು ಬಂದಹಾಗೆ, ಉತ್ತಮವಾದ ಕಾವ್ಯರಚನೆಗೆ ದೇವತಾ ಸ್ತುತಿಯು ದೊರೆದಹಾಗೆ ಸಂತಾನಹೀನನಾಗಿದ್ದ ಕುಳಿಂದನಬಾಳಿಕೆಗೆ ಉತ್ತಮ ಸುಖವನ್ನು ಕೊಡುವ ಮಗನೇ ಈ ಚಂದ್ರಹಾಸನಾದನು. ಎಲೈ ಪಾರ್ಥನೇ! ದೇವಪುರನಿಲಯನಾದ ಲಕ್ಷ್ಮೀರಮಣನ ಭಕ್ತರಿಗೆ ಮುಂದೆಮುಂದೆ ಅಭಿವೃದ್ಧಿಯಾಗುವುದು ಒಂದು ಆಶ್ಚರ್ಯವೇ? ಎಂದು ನುಡಿದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿ ನಾಗೇಶವರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಇಪ್ಪತ್ತೆಂಟನೆಯಸಂಧಿ ಸಂಪೂರ್ಣಂ ಶ್ರೀ ಶ್ರೀ ಶ್ರೀ.

# ಇಪ್ಪತ್ತೊಂಭತ್ತನೆಯ ಸಂಧಿ.

ದುಷ್ಟಬುದ್ಧಿಯು ಚಂದ್ರಹಾಸನನ್ನು ಕುಂತಳಪುರಕ್ಕೆ ಕಳುಹಿಸಿದುದು.

ಆಕಾಶದಲ್ಲಿ ಧ್ರುವನೂ, ಸತ್ಯಲೋಕದಲ್ಲಿ ಬ್ರಹ್ಮನೂ, ಲಂಕೆಯಲ್ಲಿ ವಿಭೀಷಣನೂ, ಪಾತಾಳದಲ್ಲಿ ಆದಿಶೇಷನೊಡನಿರುವ ಬಲಿಚಕ್ರವರ್ತಿಯೂ, ಪ್ರಖ್ಯಾತರಾದ ವಿಷ್ಣುಭಕ್ತರು. ಆದರೆ ಈ ಭೂಲೋಕದಲ್ಲಿ ಚಂದ್ರಹಾಸನಿಗಿಂತಲೂ ಅಧಿಕರಾದ ವಿಷ್ಣುಭಕ್ತರಾರೂ ಇಲ್ಲವಾದುದರಿಂದ ಅವನ ಕಥೆಯು ಅತ್ಯಂತ ಪರಿಶುದ್ಧವಾದುದು. ಚಂದ್ರಹಾಸನನ್ನು ನೋಡಬೇಕೆಂಬ ಕುತೂಹಲವು ನನಗೆ ಬಹಳವಾಗಿರುವುದು. ಆದಕಾರಣ ಅವನ ಕಥೆಯನ್ನು ವಿಸ್ತರಿಸಿ ಹೇಳು ಎಂದು ಅರ್ಜುನನು ಕೇಳಿಕೊಂಡನು. ಬಳಿಕ ನಾರದನು ಪಾರ್ಥನನ್ನು ಕುರಿತು ಎಲೈ ಧನಂಜಯನೇ ಕೇಳು. ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತಿರುವ ಚಂದ್ರಹಾಸನ ಏಳಿಗೆಯಂತೆ ಆ ಚಂದನಾವತಿ ಪಟ್ಟಣದ ಐಶ್ವರ್ಯವೂ ಬಹಳವಾಗಿ ಹೆಚ್ಚುತ್ತ ಬಂದಿತು. ಭೂಮಿಯು ಹುಲುಸಾಗಿ ಬೆಳೆಯಿತು. ಮಳೆಯು ಕಾಲಕಾಲಕ್ಕೆ ಸರಿಯಾಗಿ ಸುರಿಯಿತು. ಜನರೆಲ್ಲರೂ ಸದ್ಗುಣಶೀಲರಾಗಿ ಕಳೆಗಳಿಂದ ಹೊಳೆಯುತ್ತಿದ್ದರು. ಗೋವುಗಳು ಕೊಡದತುಂಬ ಹಾಲನ್ನು ಕರೆಯುತ್ತಿದ್ದವು. ಹೀಗಿರುವಲ್ಲಿ ತನ್ನ ಪೂರ್ವಪುಣ್ಯದ ಫಲವೆಂದು ತೋರಿಸುವಂತೆ ಶ್ರೀಹರಿಯು ತನಗೆ ಕರುಣಿಸಿದ ಮಗು

ವನ್ನು ನೋಡಿನೋಡಿ ಕುಳಿಂದನೂ ಅವನ ಹೆಂಡತಿಯೂ ಬಹಳವಾಗಿ ಅಲೆಗಳಿಂದೊಲಿದಾಡುವ ಆನಂದಸಾಗರದಲ್ಲಿ ಮುಳುಗಿ ತೇಲುತ್ತ ಉಚಿತಕಾಲದಲ್ಲಿ ಅಕ್ಷರಾಭ್ಯಾಸವಂಗೈಯ್ಸಿ ಉತ್ತಮವಾದ ಉಪಾಧ್ಯಾಯನ ಬಳಿಯಲ್ಲಿ ಓದುವುದಕ್ಕೆ ಬಿಟ್ಟರು. ಆದರೆ ಚಂದ್ರಹಾಸನು ಶ್ರೀಹರಿಯೆಂಬ ಮೂರು ಅಕ್ಷರಗಳನ್ನು ಹೊರತು ಉಳಿದ ಅಕ್ಷರಗಳನ್ನು ಕಣ್ಣೆತ್ತಿಯೂ ನೋಡದಿರುವುದನ್ನು ಕಂಡು ಉಪಾಧ್ಯಾಯನು ಸಿಟ್ಟುಗೊಂಡು ಕುಳಿಂದನ ಬಳಿಗೆ ಬಂದು ಚಂದ್ರಹಾಸನ ಚರ್ಯವನ್ನು ಹೇಳಿದನು. ಅದನ್ನು ಕೇಳಿ ಕುಳಿಂದನು ಅಯ್ಯಾ! ಇವನು ಪರಮಪವಿತ್ರನಾದ ವಿಷ್ಣುಭಕ್ತನು ಏಕಾದಶಿಯಲ್ಲಿ ಉಪವಾಸ ಮಾಡುವನು. ಇವನನ್ನು ನೋಡಿ ನಾವು ಏಕಾದಶಿವ್ರತವನ್ನು ಕೈಗೊಂಡೆವು. ಇವನಿಂದಲೇ ನನಗೆ ಉತ್ತರೋತ್ತರ ಉಂಟಾಗುತ್ತದೆ. ಇವನ ಹೊರತಾಗಿ ನನಗೆ ಮಕ್ಕಳಿಲ್ಲವಾದುದರಿಂದ ನನಗೆ ಇವನಲ್ಲಿಯೇ ಪ್ರಾಣವಿದೆ. ಆದಕಾರಣ ಇವನು ಹೇಗಾದರೂ ಇರಲಿ ಇವನನ್ನು ಶಿಕ್ಷಿಸಬೇಡಿ ಎಂದು ಹೇಳಿದನು. ಅಂದಿನಿಂದಲೂ ಚಂದ್ರಹಾಸನು ತನ್ನೊಡನಾಡಿಗಳೊಡನೆ ಬಾಲಲೀಲೆಯನ್ನಾಡುತ್ತ ಫಲಪುಷ್ಪಗಳನ್ನು ತಂದು, ಶ್ರೀಹರಿಯನ್ನು ತ್ರಿಕಾಲದಲ್ಲೂ ಪೂಜಿಸುತ್ತ ಲೋಕನಾಯಕನಾದ ಶ್ರೀಕಾಂತನ ಮಹಿಮೆಯನ್ನು ತನ್ನವರಿಗೆ ಬೋಧಿಸುವಂತೆ ಹರಿಪೂಜೆಯನ್ನು ಪರಮಭಕ್ತಿಯಿಂದ ಮಾಡುತ್ತಿದ್ದನು.

ಹೀಗಿರುವ ಮಗುವಿಗೆ ಎಂಟು ವರ್ಷ ತುಂಬಿತು ಕುಳಿಂದನು ಶಾಸ್ತ್ರೋಕ್ತವಾಗಿ ಉಪನಯನವನ್ನು ಮಾಡಿಸಿದನು. ಬಳಿಕ ಚಂದ್ರಹಾಸನು ಸಾಂಗವಾಗಿ ಸಕಲ ವೇದಗಳನ್ನು ಕಲಿತು, ಕರಿತುರಗದೇರಾಟದಲ್ಲಿ ಜಾಣನಾಗಿ, ಬಿಲ್ಲುವಿದ್ಯೆಯಲ್ಲಿ ಚತುರನೆನಿಸಿಕೊಂಡು, ವೇದಾರ್ಥಸ್ವರೂಪನಾದ ಶ್ರೀಹರಿಯ ಭಾವವನ್ನು ತಿಳಿದು ತನ್ನ ಭಕ್ತಿಯೆಂಬ ಬಿಲ್ಲಿಗೆ ಸತ್ವಗುಣವೆಂಬ ಹೆದೆಯನ್ನೇರಿಸಿ, ವಿವೇಕವೆಂಬ ಬಾಣವನ್ನು ಹೂಡಿ, ಪರಮಾತ್ಮನಾದ ಶ್ರೀಹರಿಯನ್ನೆ ಗುರಿಗಟ್ಟಿಕೊಂಡು ಅನುಪಮವಾದ ಧನುರ್ವಿದ್ಯೆಯನ್ನು ಕಲಿತು ಶೂರನೆನಿಸಿಕೊಂಡು ಪರಮಭಾಗವತೋತ್ತಮರಂತೆ ತಿಳಿಕಳೆಗಳಿಂದಕೂಡಿ ಹೊಳೆಯುತ್ತಿದ್ದನು.

### ಚಂದ್ರಹಾಸನ ದಿಗ್ವಿಜಯ.

ಬಳಿಕ ಹದಿನಾರನೆಯ ವರ್ಷದಲ್ಲಿ ಬಲಾಧಿಕನಾಗಿ ಚಂದ್ರಹಾಸನು ತನ್ನೊಡನೆ ಶೂರರಾದ ಸೇನಾನಿಗಳನ್ನು ಕರೆದುಕೊಂಡು ಹೋಗಿ, ಕುಳಿಂದನಿಗೆ ಹಗೆಗಳಾದ ರಾಯರನ್ನು ಗೆದ್ದು ಅವರ ಸೊಕ್ಕನ್ನು ಅಡಗಿಸಿ ಅಲ್ಲಿನ ವಸ್ತುಜಾಲಗಳನ್ನು ತನ್ನ ಪಟ್ಟಣಕ್ಕೆ ತಂದನು. ಹರಿಯನ್ನು ಪೂಜಿಸದೆ, ಗರ್ವದಿಂದ ಮದಿಸಿ, ಉನ್ಮತ್ತರಾಗಿದ್ದ ರಾಜರನ್ನು ಗೆದ್ದು ಅವರೈಸಿರಿಯನ್ನು ಸೂರೆಗೊಂಡು ತಂದು ತಂದೆತಾಯಿಗಳ ಮುಂದಿಡಲು ಕುಳಿಂದನ ರಾಜ್ಯದ ಸುಂದರಿಯರು

ಆರತಿಗಳನ್ನೆತ್ತಿ ಅಕ್ಕರೆಯಿಂದ ಉಕ್ಕುವ ಉತ್ಸಾಹದೊಡನೆ ಕಡೆಗಣ್ಣಿನ ಕುಡಿ ನೋಟದಿಂದ ಚಂದ್ರಹಾಸನನ್ನು ನೋಡುತ್ತ ಮುತ್ತಿನ ಸೇಸೆಯನ್ನು ತಳಿದರು. ಬಳಿಕ ಲಕ್ಷ್ಮೀನಾರಾಯಣರೆ ತನಗೆ ತಾಯ್ತಂದೆಗಳು ಎಂದು ಭಾವಿಸಿ, ಚಂದ್ರಹಾಸನು ಕುಳಿಂದನಿಗೂ ಅವನ ರಾಣಿಗೂ ನಮಸ್ಕರಿಸಲು, ಅವರೀರ್ವರೂ ಮಗನನ್ನು ಆಲಿಂಗಿಸಿಕೊಂಡು, ಶೂರನಾದ ಮಗನಿಗೆ ತಮ್ಮ ರಾಜ್ಯಾಧಿಕಾರದ ಪಟ್ಟವನ್ನು ಕಟ್ಟಿದರು, ಚಂದ್ರಹಾಸನು ಸುಖಸಂತೋಷದಿಂದ ರಾಜ್ಯವನ್ನಾಳತೊಡಗಿದನು. ಆ ದೇಶದಲ್ಲಿ ಐಶ್ವರ್ಯವು ತುಂಬಿತುಳುಕಾಡುತಿದ್ದಿತು. ಚಂದನಾವತಿಯ ಸೊಬಗು ಹೆಚ್ಚಾಯಿತು ಸಕಲ ಜನಗಳು ಆಚಾರಗುಣಶೀಲಯುಕ್ತರಾದರು. ವಿಷ್ಣುಭಕ್ತಿಯು ಬಹಳ ಅಭಿವೃದ್ಧಿಯಾಯಿತು ದಶಮಿಯಲ್ಲಿ ಸಂತೋಷಕರವಾದ ದಾಮೋದರವ್ರತವೂ, ಏಕಾದಶಿಯ ಹರಿವಾಸರದಲ್ಲಿ ಜಾಗರಣೆಯೊಡನೆ ಮಾಡುವ ಉಪವಾಸವೂ, ದ್ವಾದಶಿಯಲ್ಲಿ ಹರಿಪೂಜೆಯುಂಗೈದು ತೀರ್ಥಪ್ರಾಸನ ಪುರಸ್ಸರವಾಗಿ ನೆರವೇರಿಸುವ ಪಾರಣೆಯೂ ನೆಲೆಗೊಂಡಿತು. ಚಂದ್ರಹಾಸನ ರಾಜ್ಯದಲ್ಲಿ ದಿನದಿನಕ್ಕೆ ವಿಷ್ಣುಭಕ್ತಿಯು ಅಭಿವೃದ್ಧಿಯಾಗುತ್ತ ಬಂದಿತು. ವಿಷ್ಣುಭಕ್ತಿಯಲ್ಲಿ ಪ್ರಹ್ಲಾದನೂ ಸ್ಥಿರವಾದ ಹರಿಧ್ಯಾನದಲ್ಲಿ ಧ್ರುವನೂ ಸತ್ವಗುಣದಲ್ಲಿ ಬಲಿಯೂ ಶಾಂತಿಯಲ್ಲಿ ವಿಭೀಷಣನೂ ವೈಷ್ಣವಾಭರಣವೆಂಬ ಕಲೆಯಿಂದ ರುಕ್ಮಾಂಗದನೂ, ಸತ್ಕೀರ್ತಿಯಿಂದ ಪುಂಡರೀಕನೂ ಆಗಿ ಭಾಗವತಶಿರೋಮಣಿಯಾದ ಚಂದ್ರಹಾಸನು ಭೂಮಂಡಲವನ್ನಾಳುತ್ತ ಲೋಕಸ್ತುತ್ಯನಾಗಿ ಹೊಳೆಯುತ್ತಿದ್ದನು.

ಹೀಗೆ ವೃದ್ಧಿಕಲಾವಿನೋದನಾಗಿ ರಾಜ್ಯಭಾರ ಮಾಡುತ್ತಿರುವ ಮಗನನ್ನು ಕರೆದು ಕುಳಿಂದನು ಕಂದಾ! ಕೇಳು. ಇಲ್ಲಿಗೆ ಆರುಗಾವುದ ದೂರದಲ್ಲಿ ಕುಂತಳ ನಗರವೆಂಬ ರಾಜಧಾನಿಯೊಂದುಂಟು. ಈ ನಮ್ಮ ರಾಜ್ಯವು ಅಲ್ಲಿನ ದೊರೆಗೆ ಸೇರಿದುದು. ಅವನೇ ನಮಗೊಡೆಯನಾಗಿರುವನು. ಅವನ ಮುಖ್ಯಮಂತ್ರಿಯಾದ ದುಷ್ಟಬುದ್ಧಿಯು ನಮಗೆ ಅಧ್ಯಕ್ಷನಾಗಿರುವನು. ಅವನಿಗೆ ನಮ್ಮ ದೇಶದ ಉತ್ಪತ್ತಿಯಲ್ಲಿ ಸಿದ್ಧಾಯವನ್ನು ಕೊಡಬೇಕು. ದೊರೆಗೆ ಕಪ್ಪವನ್ನೂ ದುಷ್ಟಬುದ್ಧಿಗೆ ಲಂಚವನ್ನೂ, ಕುಂತಳರಾಜನ ರಾಣಿಗೆ ಪುರೋಹಿತನಾದ ಗಾಲವಂಗೆ ಕೊಡಬೇಕಾದ ಅರ್ಚನಾದ್ರವ್ಯವನ್ನು ಸಂಪಾದಿಸಿ ಬೇಗ ಕಳುಹಿಸು. ಈ ವಿಷಯದಲ್ಲಿ ಅಸೂಯೆಪಡಬೇಡ ಎಂದು ಹೇಳಿದನು. ಆ ಮಾತುಗಳನ್ನು ಕೇಳಿ ಚಂದ್ರಹಾಸನು ತನ್ನ ದಿಗ್ವಿಜಯದಲ್ಲಿ ದೊರೆತ ಉತ್ತಮ ವಸ್ತುಗಳನ್ನು ತರಿಸಿ ಇದು ರಾಜನಿಗೆ. ಇದು ರಾಣಿಗೆ. ಇದು ದುಷ್ಟಬುದ್ಧಿಗೆ. ಇದು ಪುರೋಹಿತನಾದ ಗಾಲವಂಗೆ ಎಂದು ಹೇಳಿ ಬೇರೆಬೇರೆಯಾಗಿ ಧನಕನಕ ವಸ್ತುವಾಹನಗಳನ್ನು ಕೊಟ್ಟು ಧೀರರಾದ ಚಾರಕರೊಡನೆ ಕುಂತಳನಗರಕ್ಕೆ ಕಳುಹಿಸಿದನು.

ಆ ಚಾರರು ಅತ್ಯಂತ ಹರುಷಿತರಾಗಿ ಆನೆ, ಕುದುರೆ, ರಥ, ರತ್ನ, ವಸ್ತ್ರಾಭರಣ, ಕಸ್ತೂರಿ, ಕರ್ಪೂರಗಳನ್ನು ತೆಗೆದುಕೊಂಡು ಬೇಗಬೇಗನೆ ನಡೆತಂದು ಕುಂತಳ ಪುರದ ಬಹಿರುದ್ಯಾನದಲ್ಲಿದ್ದ ಸರೋವರದಲ್ಲಿಮಿಂದು, ಶುಚಿರ್ಭೂತರಾಗಿ, ಹಣೆ ಯಲ್ಲಿ ಊರ್ಧ್ವಪುಂಡ್ರವನ್ನು ಇಟ್ಟು, ಕೊರಲಿಗೆ ತುಲಸಿಯಮಾಲೆಯನ್ನಿಕ್ಕಿ, ಶುಭ್ರವಾದ ದಂತಪಂಕ್ತಿಗಳಿಂದ ಶೋಭಾಯಮಾನರಾಗಿ, ತುಲಸಿ ಮೊದಲಾದ ಕುಸುಮದಳಗಳನ್ನು ತಂದು ಸಾತ್ವಿಕಸ್ವಭಾವವುಳ್ಳವರಾಗಿ, ತತ್ವಮೂರ್ತಿ ಯಾದ ಶ್ರೀಹರಿಯನ್ನು ಪೂಜಿಸಿ, ಉತ್ಸಾಹಭರಿತರಾದಬಳಿಕ ಕುಂತಳನಗರ ವನ್ನು ಹೊಕ್ಕು, ದುಷ್ಟಬುದ್ಧಿಯನ್ನು ಕಂಡು, ವಿನಯದಿಂದ ಮಣಿದು ಭಕ್ತಿ ಯಿಂದ ತಾವುತಂದಿದ್ದ ಕಪ್ಪಕಾಣಿಕೆಗಳನ್ನು ಆತನಿಗೊಪ್ಪಿಸಿ ನಿಂತುಕೊಂಡರು. ಅದನ್ನು ಕಂಡು ದುಷ್ಟಬುದ್ಧಿಯು ಎಲೈ ರಾಜಭಕ್ತಿಪರಾಯಣರಾದ ಚಾರಕ ರಿರಾ ! ಇದೇನು ನಿಮ್ಮಲ್ಲಿ ಹೊಸ ಆಚರಣೆಯೊಂದು ಕಾಣುತ್ತಿರುವುದು ? ಸಂಧ್ಯಾಕಾಲದಲ್ಲಿ ನಿಮಗೆ ಶುದ್ಧಸ್ನಾನವಾಗಲು ಕಾರಣವೇನು ? ಕುಳಿಂದರಾ ಜನು ಸುಖದಿಂದಿರುವನೆ ? ಎಂದು ಅನುಮಾನದಿಂದ ಕೇಳಿದನು. ಆಗ ರಾಜಭ ಟರು ಸ್ವಾಮಿಾ ! ಕುಶಲದಿಂದ ಬಾಳುತ್ತಿರುವ ಕುಳಿಂದಮಹಾರಾಜನಿಗೆ ಅಶುಭ ವುಂಟೆ ? ಕಲ್ಮಷನಾಶಕರವಾದ ಏಕಾದಶೀವ್ರತದನಿಮಿತ್ತವಾಗಿ ನಮಗೆ ಸಂಧ್ಯಾ ಕಾಲದಲ್ಲಿ ಸ್ನಾನವಾಯಿತು. ಅವನ ಮಗನಾದ ಚಂದ್ರಹಾಸನು ಹರಿಭಕ್ತಿ ಸಂಪನ್ನನಾಗಿ ತನ್ನ ರಾಜ್ಯದ ಜನರೆಲ್ಲರೂ ಏಕಾದಶೀವ್ರತವನ್ನು ಆಚರಿಸು ವಂತೆ ಉಪದೇಶಿಸಿ, ತತ್ವಮೂರ್ತಿಯಾದ ಶ್ರೀಹರಿಯ ಚರಣಾರವಿಂದದ ಬಲ್ಮೆ ಯಿಂದ ಸಕಲಪ್ರಜೆಗಳನ್ನು ಸುಖದಿಂದ ಪಾಲಿಸುತ್ತ ಶಾಂತಮೂರ್ತಿಯಾಗಿ, ಮಲೆತುಮೆರೆಯುವ ಹಗೆಗಳಬಗೆಯನ್ನು ಸೀಳಿ, ದಿಗ್ವಿಜಯಂಗೈದು, ಪಾಷಂ ಡರಾದ ರಾಯರ ಪೂರ್ಣಾಯುವನ್ನು ಸೂರೆಗೊಂಡು, ಬಹಳವಾದ ಐಶ್ವರ್ಯ ವನ್ನು ಸಂಪಾದಿಸಿ, ನಿಮಗೆ ಕಳುಹಬೇಕಾದ ಕಾಣಿಕೆಗೆ ಸಲ್ಲಬೇಕಾದ ಉತ್ತಮ ವಸ್ತುಗಳನ್ನು ಕೊಟ್ಟು ಕಳುಹಿಸಿದುದರಿಂದ ನಾವುಗಳು ಆ ದಿವ್ಯಾಭರಣಗ ಳನ್ನು ಹೊತ್ತುಕೊಂಡು ಇಲ್ಲಿಗೆಬಂದೆವು ಎಂದು ಹೇಳಿದರು. ಬಳಿಕ ಆಶ್ಚರ್ಯ ದಿಂದ ಉಮ್ಮಳಿಸುತ್ತ ದುಷ್ಟಬುದ್ಧಿಯು ಕಪ್ಪಕಾಣಿಕೆಯ ವಸ್ತುಗಳನ್ನು ತೆಗೆ ದುಕೊಂಡು ತನ್ನ ಭಂಡಾರಕ್ಕೆ ಕಳುಹಿಸಿ, ಅವರನ್ನು ಸಂತೈಸಿ, ಕುತೂಹಲ ಯುಕ್ತನಾಗಿ ಮರಳಿ ಚಂದ್ರಹಾಸನ ದೂತರನ್ನು ಕುರಿತು ಇಂತೆಂದನು:— ಎಲೈ ದೂತರಿರಾ ! ಇದೇನು ಆಶ್ಚರ್ಯ ನೀವು ಹೊಸಮಾತುಗಳನ್ನಾಡುತ್ತಿರುವಿ ರಲ್ಲಾ ! ಕುಳಿಂದನ ಹೆಂಡತಿ ಬಂಜೆ ಎಂಬುದನ್ನು ಲೋಕದವರೆಲ್ಲರೂ ಬಲ್ಲರು ಹೀಗಿರುವಲ್ಲಿ ಆತನಿಗೆ ಮಕ್ಕಳು ಹೇಗೆ ಆದುವು. ಆಹಾ ! ಏನುವಿಚಿತ್ರ. ನಿಜ ವಾಗಿಯೂ ಕುಳಿಂದನಿಗೆ ಮಗನಿರುವನೆ ? ಹೇಳಿ ಎನಲು, ಆ ಭಟರು ಸ್ವಾಮಿಾ !

ಸುಳ್ಳಲ್ಲ. ನಮ್ಮ ರಾಯನು ಬೇಟೆಗಾಗಿ ಕಾಡಿಗೆಹೋಗಿದ್ದ ಕಾಲದಲ್ಲಿ ಅಲ್ಲಿ ಅನಾಥನಾಗಿ ಶ್ರೀಹರಿಧ್ಯಾನದಿಂದ ಕೊರಗುತ್ತಿದ್ದ ಒಬ್ಬ ಮಗನು ದೊರೆದನು. ಅವನನ್ನು ಕರೆದುಕೊಂಡು ಬಂದು ಪುತ್ರವಾತ್ಸಲ್ಯದಿಂದ ಜಾತಕರ್ಮ ನಾಮಕರಣಗಳನ್ನು ಮಾಡಿ, ಸಲಹುತ್ತಿರುವನು. ಆ ಮಗನೇ ಈಗ ಪ್ರಾಪ್ತವಯಸ್ಕನಾಗಿ, ರಾಜ್ಯಭಾರ ಮಾಡುತ್ತ ವಿಷ್ಣುಭಕ್ತರಲ್ಲಿ ಅಸಮಾನನಾಗಿರುವನು. ಆತನಪ್ಪಣೆಯಂತೆಯೇ ನಾವು ಇಲ್ಲಿಗೆ ಬಂದೆವು ಎಂದು ಹೇಳಿದರು. ಆ ಮಾತುಗಳನ್ನು ಕೇಳಿ ದುಷ್ಟಬುದ್ಧಿಯು ಆಹಾ ! ದೈವವಿಲಾಸವನ್ನು ಏನೆಂದು ಹೇಳಲಿ ! ಖೂಳರಾದ ಕಟುಕರನ್ನು ಕರೆದು ಹಾಳಡವಿಯಲ್ಲಿ ಈ ಮಗುವನ್ನು ಕೊಂದು ಬನ್ನಿ ಎಂದು ನಾನು ನೇಮಿಸಿದ್ದರೂ ಆ ಚಂಡಾಲರು ಸ್ವಾಮಿದ್ರೋಹಿಗಳಾಗಿ ಮಗುವನ್ನು ಕೊಲ್ಲದೆ ಉಳಿಸಿ ಬಂದಿರಬಹುದು ಎಂದು ಚಿಂತಿಸಿ, ಹೊರಗೆ ಕರುಣವನ್ನುಬೀರುತ್ತ ಅಂತರಂಗದಲ್ಲಿ ಪರಮದಾರುಣವಾದ ದ್ವೇಷವನ್ನುತಾಳಿ, ಸಾಯಂಕಾಲದಲ್ಲಿ ಬಂದ ಚಾರಕರಿಗೆ ಉಚಿತವಾದ ರುಚಿರಾಹಾರಗಳನ್ನು ಸಿದ್ಧಮಾಡಿಸಿ, ಊಟಮಾಡಿ ಎಂದು ಹೇಳಿದನು. ಏಕಾದಶೀವ್ರತಸಂಪನ್ನರಾದ ಆ ಚಾರಕರು ಈ ದಿನ ನಾವು ಊಟಮಾಡುವುದಿಲ್ಲ ಎಂದು ಹೇಳಲು ದುಷ್ಟಬುದ್ಧಿಯು ಕೋಪಗೊಂಡು, ಓಹೋ ಕುಳಿಂದನು ಮೊದಲಿನಂತಿಲ್ಲ ! ಬಹಳವಾಗಿ ಕೊಬ್ಬಿರುವನು ಅವನ ಚಾರಕರು ದುರಹಂಕಾರಿಗಳಾಗಿರುವರು ಆಗಲಿ. ಇವರ ಸೊಕ್ಕನ್ನು ಮುರಿವುದಕ್ಕಾಗಿ ಇವರನ್ನು ಸೆರೆಯಲ್ಲಿ ಹಾಕಿಸುವೆನು ಎಂದು ಗರ್ಜಿಸಿದನು. ಆಗ ಚಂದ್ರಹಾಸನ ಚಾರರು ಸ್ವಾಮಿ ! ಕೋಪವೇತಕ್ಕೆ ? ನಿಮ್ಮ ಸೇವಕರಾದ ನಮಗೆ ಗರ್ವವೆತ್ತಣದು ? ಏಕಾದಶೀವ್ರತಭಂಗವಾಗುವುದೆಂಬ ಭಯದಿಂದ ನಾವು ಈ ದಿನ ಊಟಮಾಡಲೊಲ್ಲೆವು. ನಾಳೆಯ ಪಾರಣೆಗೆ ನೀವು ಇಕ್ಕುವ ಮೃಷ್ಟಾನ್ನವನ್ನುಂಡು ತೃಪ್ತರಾಗುವೆವು ಎಂದು ಸಮಾಧಾನಪಡಿಸಲು, ದುಷ್ಟಬುದ್ಧಿಯು ಅವರ ಇಷ್ಟಾನುಸಾರವಾಗಿ ಆ ಚಾರಕರಿಗೆ ಪಾರಣೆಯದಿನ ಮೃಷ್ಟಾನ್ನಭೋಜನವಂಗೆಯ್ಸಿ ಮನ್ನಣೆಯಿಂದ ಬೀಳ್ಕೊಡಲು, ಚಂದ್ರಹಾಸನ ದೂತರು ಸುಮ್ಮಾನದಿಂದ ನಲಿಯುತ್ತ ಚಂದನಾವತಿಯ ಕಡೆಗೆ ತಿರುಗಿದರು.

### ದುಷ್ಟಬುದ್ಧಿಯು ಚಂದನಾವತಿಗೆ ಬಂದುದು.

ಬಳಿಕ ಆ ದುಷ್ಟಬುದ್ಧಿಯು ಮತ್ತೊಂದು ಉಪಾಯವನ್ನು ಯೋಚಿಸಿ, ಕುಂತಳೇಂದ್ರನಿಂದ ಅಪ್ಪಣೆಯನ್ನು ಪಡೆದು ತನ್ನ ರಾಜಕಾರ್ಯವನ್ನು ಮಗನಾದ ಮದನನಿಗೆ ಒಪ್ಪಿಸಿ, ಕುಳಿಂದನ ರಾಜಧಾನಿಯಾದ ಚಂದನಾವತಿಗೆ ಹೊರಡಲು ಸಿದ್ಧನಾದನು. ಆಗ ಅಂಕುರಿಸಿದ ಯೌವನವಿಲಾಸದಿಂದ ಶೋಭಾಯಮಾನವಾಗಿರುವ ದೇಹಕಾಂತಿಯೂ, ಅಂಗಸೌಷ್ಠವವೂ, ಲಾವಣ್ಯದಲಹ

. ರಿಯೂ ಉಕ್ಕುತ್ತಿರಲು ಸೊಂಪಾಗಿ ಬೆಳೆದು ಇಂಪುದೋರುವ ಮೈಯೂ, ಕಣ್ಣೆಳಗಿನೊಡನೆಬೆರೆತ ಕದಪುಗಳ ಕಾಂತಿಯೂ, ನಗೆಮೊಗದಲ್ಲಿ ತಲೆದೋರುವ ಹುಸಿ



ನಾಚಿಕೆಯೂ ದೇಹವೆಂಬ ತಾವರೆಯಲ್ಲಿ ಮೂಡಿದ ಅರವಿಂದಕುಟ್ಮಲದಂತೆ ಹೊಳೆಯುವ ನೆಲೆಮೊಲೆಗಳೂ ಬಡವಾಗಿ ಬಳುಕುತ್ತಿರುವ ನಡುವೂ ಶೋಭಿಸುತ್ತಿರಲು, ಬೆಡಗಿನಿಂವ ನಡೆತಂದ ವಿಷಯೆ ಎಂಬ ಆ ದುಷ್ಟಬುದ್ಧಿಯ ಮಗಳು ತನ್ನ ತಂದೆಯಬಳಿಗೆ ಬಂದಳು. ಅವಳನ್ನು ಕಂಡು ನವಯೌವನದಿಂದ ಉಬ್ಬುತ್ತಿರುವ ಈ ಮಗಳಿಗೆ ನವಮನ್ಮಥಾಕಾರನಾದ ಒಬ್ಬ ಗಂಡನಾಗಬೇಕೆಂದು ಯೋಚಿಸಿ, ಮಗಳನ್ನು ತಕ್ಕೈಸಿ, ಮೈದಡವಿ, ಮುದ್ದುಗೈದು, ಅಮ್ಮಾ ! ನಾಳೆ ನಿನ್ನ ಅಂತಃಪುರಕ್ಕೆ ಬರುವೆನು, ಆಗ ನಿನಗೆ ಬೇಕಾದ ವಿಷಯವನ್ನು ಮಾತನಾಡು ಹೋಗು. ಈಗ ನನಗೆ ರಾಜಕಾರ್ಯವಿರುವುದರಿಂದ ನೀನು ನಿನ್ನ ಅಂತಃಪುರವನ್ನು ಸೇರು ಎಂದು ಹೇಳಲು, ವಸಂತಕಾಲದಲ್ಲಿ ಕೂಗುವ ಕೋಗಿಲೆಯ ಮರಿಯಹಾಗೆ ಆ ವಿಷಯೆಯು ತನ್ನ ತಂದೆಯನ್ನು ಕುರಿತು ಅಪ್ಪಾ ! ನಮ್ಮ ತೋಟದಲ್ಲಿ ನಾನೇ ನೀರುಹೊಯ್ದು ಸಾಕಿದ ಮಾವಿನಮರವು ಕಾಯಿಬಿಡುಂಬಿರುವುದು ಇನ್ನೂ ಉದ್ಯಾಪನೆಯನ್ನು ಮಾಡಿಸದಿರುವುದಕ್ಕೆ ಕಾರಣವೇನು ? ಅಂತಹ ತ್ವರೆಯಾದ ರಾಜಕಾರ್ಯವೇನುಂಟು ಎಂದು ತಲೆವಾಗಿ ಲಜ್ಜೆಯಿಂದ ಮಾತನಾಡುತ್ತಿರುವ ಮಗಳ ಭಾವವನ್ನು ತಿಳಿದು ಅವಳ ಅಭೀಷ್ಟವನ್ನು ನೆರವೇರಿಸುವಂತೆ ಮದನನಿಗೆ ಆಜ್ಞೆಮಾಡಿ, ಮಗಳನ್ನು ಸಂತೈಸಿ, ಮನೆಗೆ ಕಳುಹಿಸಿ ತನ್ನಾಪ್ತಚಾರಕರೊಡನೆ ಹೊರಟುಬರುತ್ತ ಮೊದಲು ಕಾಡಾಗಿದ್ದ ಭಾಗವೆಲ್ಲವೂ ಈಗ ನಾಡಾಗಿರುವುದನ್ನು ಕಂಡು, ಮನಸ್ಸಿನಲ್ಲಿ ಕರುಬುತ್ತ, ಹೊರಗೆ ತೃಪ್ತನಾಗಿ, ಚಂದನಾವತಿಗೆ ಬಂದನು, ಕುಳಿಂದನು ಆ ದುಷ್ಟಬುದ್ಧಿಯನ್ನು ಇದಿರ್ಗೊಂಡು ಸತ್ಕರಿಸಿದಬಳಿಕ ಚಂದ್ರಹಾಸನನ್ನು ಕರೆದು ಮಂತ್ರಿಗೆ ತೋರಿಸಿ, ಸ್ವಾಮಿ ! ನನ್ನ ಪೂರ್ವಪುಣ್ಯಫಲದಿಂದ ಈ ಮಗನು ಅರಣ್ಯದಲ್ಲಿ ನನಗೆ

ದೊರೆತನು. ಇವನನ್ನು ತಾವು ದಯಮಾಡಿ ಸಂರಕ್ಷಿಸಬೇಕು ಎಂದು ಬೇಡಿಕೊಂಡು ಚಂದ್ರಹಾಸನನ್ನು ಅವನಕೈಗೆಕೊಟ್ಟು ನಮಸ್ಕರಿಸಿದನು. ರಾಜಲಕ್ಷಣದಿಂದ ಹೊಳೆಯುತ್ತಿರುವ ಆ ಮಗನನ್ನು ನೋಡಿ, ದುಷ್ಟಬುದ್ಧಿಯು ತಾನು ಮೊದಲುಮಾಡಿದ ಅಕೃತ್ಯವನ್ನು ನೆನೆದು ಅಯ್ಯೋ ! ಚಂಡಾಲರು ನನ್ನನ್ನು ವಂಚಿಸಿದರೇ ಎಂದು ಮನಸ್ಸಿನಲ್ಲಿ ಮರುಗಿ, ಬಾಹ್ಯದಲ್ಲಿ ಹುಸಿನಗೆಯಿಂದ ಚಂದ್ರಹಾಸನ ಮುಖವನ್ನು ನೋಡುತ್ತ ಅವನನ್ನು ಮನ್ನಿಸಿ, ಕುಳಿಂದನನ್ನು ಕುರಿತು ಅಯ್ಯಾ ! ನಿನ್ನ ಮಗನನ್ನು ಕಂಡು ನನಗೆ ಬಹಳ ಸಂತೋಷವಾಯಿತು ಎಂದು ಹೇಳಿದನು.

ಎಲೈ ಅರ್ಜುನನೇ ! ಆ ದುಷ್ಟಬುದ್ಧಿಯು ಮನದಲ್ಲಿ ಘಾತಕಳಿಕೆಯನ್ನು ಹೊಂದಿ, ಬಹಿರಂಗದಲ್ಲಿ ಸಂತೋಷವನ್ನು ಸೂಚಿಸಿದಮಾತು ಹಾವುಗಳ ಮೈಮೇಲಿನ ನಯನದಂತೆಯೂ, ಅಗಾಧವಾದ ಹಳ್ಳವನ್ನು ಮುಚ್ಚಿಕೊಂಡು ಬೆಳೆದಿರುವ ಹುಲ್ಲಿನಂತೆಯೂ ಮೊಸಳೆಗಳಿಗಾಕರವಾದ ಮಡುವಿನಲ್ಲಿ ಬೆಳೆದ ತಾವರೆಯಂತೆಯೂ, ಕತ್ತಿಯಬಾಯಿಗೆ ಸವರಿದ ಜೇನಿನಂತೆಯೂ, ವಿಷಮಿಶ್ರವಾದ ಅಮೃತಾನ್ನದಂತೆಯೂ ಕಾಮಿನಿಯ ಕಪಟಮೋಹದ ಬೆಡಗಿನಂತೆಯೂ ಬಹು ಕ್ರೂರವಾಗಿ ಕಾಣಿಸಿತು. ಆಹಾ ! ಸತ್ಪುರುಷರಾದವರು ನೀಚರಾದ ಕಪಟಿಗಳು ಮಾಡುವ ದುರಾಲೋಚನೆಯನ್ನು ಬಲ್ಲರೇ ? ದುಷ್ಟಬುದ್ಧಿಯು ಚಂದ್ರಹಾಸನನ್ನು ಮನ್ನಿಸಿ, ಅಕ್ಕರೆಯಿಂದ ಕರೆದು ಕುಳ್ಳಿರಿಸಿಕೊಂಡು, ಹಿಂದೆ ಬ್ರಾಹ್ಮಣರು ಹೇಳಿದಮಾತು ಎಂದಿಗೂ ಸುಳ್ಳಾಗದು ನನ್ನ ಮಕ್ಕಳ ಏಳಿಗೆಗೆ ಇವನೊಬ್ಬನು ಕಂಟಕಿಯಾದನು ಏನಾದರೂ ಉಪಾಯವನ್ನು ಹುಡುಕಿ ಇವನನ್ನು ಈಗಲೇ ಸಂಹರಿಸದಿದ್ದರೆ ನನ್ನ ಮಕ್ಕಳಿಗೆ ದೊರೆತನ ಉಳಿಯಲಾರದು ಬಲಯುಕ್ತನಾಗಿ ಇವನನ್ನು ಸಂಹರಿಸುವೆನೆಂದರೆ ನನ್ನ ಶಕ್ತಿಗೆಂದಿಗೂ ಇವನು ಹೆದರುವವನಲ್ಲ. ಆದುದರಿಂದ ಇವನಿಗೆ ವಿಷವನ್ನು ಕೊಟ್ಟು ಕೊಲ್ಲಿಸುವ ಉಪಾಯವನ್ನು ಮಾಡಬೇಕೆಂದು ಚಿಂತಿಸಿ, ಹುಣ್ಣಿಮೆಯ ಚಂದ್ರನ ಬಲವನ್ನು ಮುರಿದು, ತನ್ನಗ್ಗಳಿಕೆಯಿಂದ ರಾಜಿಸುವನೆಂಬ ಕತ್ತಲೆಯಂತೆ ವಿಷ್ಣುಭಕ್ತನಾದ ಚಂದ್ರಹಾಸನನ್ನು ಕೊಲ್ಲಿಸಿ, ತಾನು ಬಾಳುವೆನೆಂಬ ಯೋಚನೆಯಿಂದ ಒಂದು ಕಾಗದವನ್ನು ಬರೆದು ಅದಕ್ಕೆ ಮುದ್ರೆಯನ್ನು ಮುದ್ರಿಸಿ, ಭದ್ರಮಾಡಿ ನಸುನಗುತ್ತ ಚಂದ್ರಹಾಸನನ್ನು ಕುರಿತು, ಎಲೈ ಚಂದ್ರಹಾಸನೇ ! ಇದು ಬಹಳ ಏಕಾಂತವಾದುದು. ನೀನೊಬ್ಬನೇ ಇಲ್ಲಿಂದ ಹೊರಟು ಈ ಕಾಗದವನ್ನು ತೆಗೆದುಕೊಂಡು ನಾಲ್ಕುಜನ ಪರಿವಾರದವರೊಡನೆ ನಮ್ಮೂರಿಗೆ ಹೋಗಿ, ನನ್ನ ಮಗನಾದಮದನನಿಗೆ ಕೊಟ್ಟುಬಾ ! ಈ ವಿಷಯವು ಗೋಪ್ಯವಾಗಿರಲಿ ಎಂದು ಹೇಳಿ ಚಂದ್ರಹಾಸನಕೈಗೆ ಆಕಾಗದವನ್ನು ಕೊಟ್ಟನು. ಬಳಿಕ ಚಂದ್ರಹಾಸನು ತ

ದುಷ್ಟಬುದ್ಧಿಯ ಮಾತು ನಿಜವೆಂದರಿತು ಭಕ್ತಿಯಿಂದೆರಗಿ ಅವನಾಶೀರ್ವಾದವನ್ನು ಕೈಕೊಂಡು, ಅಲ್ಲಿಂದ ಬಂದು ತನ್ನ ತಾಯಿಯಾದ ಮೇಧಾವಿನಿಯನ್ನು ಕಂಡು ನಮಸ್ಕರಿಸಿದನು. ಬಳಿಕ ಆ ಮೇಧಾವಿನಿಯು ಚಂದ್ರಹಾಸನನ್ನು ಮುದ್ದಿಸಿ ಮಣಿದೆತ್ತಿ ಮುತ್ತಿನಸೇಸೆಯನ್ನು ತಳಿದು ಕಸ್ತೂರಿಯತಿಲಕವನ್ನಿಟ್ಟು, ಲಾಜೆದದೂರ್ವಾಕ್ಷತೆಗಳೊಡನೆ ತಾಂಬೂಲವನ್ನು ಕೊಟ್ಟು, ನಿನಗೆ ಮಾರ್ಗದಲ್ಲಿ ಮಂಗಳವಾಗಲಿ ! ನಿನ್ನಂಗವನ್ನು ಸನ್ನುತಾಂಗನಾದ ಶ್ರೀಹರಿಯು ಸಂರಕ್ಷಿಸಲಿ ! ಅನುಕೂಲೆಯಾದ ಹೆಂಡತಿಯನ್ನು ಮದುವೆಯಾಗಿ, ರಾಜ್ಯಾಧಿಕಾರವನ್ನು ವಹಿಸು ಎಂದು ಹರಸಿ ಬೀಳ್ಕೊಟ್ಟಳು.

ಅಲ್ಲಿಂದ ಹೊರಟುಬರುವ ಮಾರ್ಗದಲ್ಲಿ ಹರಿಭಕ್ತನಾದ ಚಂದ್ರಹಾಸನು ಹರಿದ್ರಾಕುಂಕುಮಶೋಭಿತರಾಗಿ ಉತ್ಸವದಿಂದೈತರುತ್ತಿರುವ ಹೊಸಮದವಣಿಗೆರನ್ನೂ, ಸಮವಾಗಿ ಸದಾಚಾರದಿಂದ ಬರುತ್ತಿರುವ ಬ್ರಾಹ್ಮಣದ್ವಯವನ್ನೂ, ಎಳೆಗರುವಿನೊಡನೆ ಬರುವ ಹಸುವನ್ನೂ, ಹೂಹಣ್ಣು ಕಾಯಿಗಳನ್ನೂ ತಟ್ಟೆಯಲ್ಲಿಟ್ಟುಕೊಂಡು ತನ್ನೆಡೆಗೆ ಬರುತ್ತಿರುವ ರಾಜರನ್ನು ಕಂಡು, ಅವರಿಂದ ಸತ್ಕೃತನಾಗಿ, ಅಕ್ಕರೆಯಿಂದ ಅವರು ಕೊಟ್ಟ ಫಲಪುಷ್ಪಗಳನ್ನು ತೆಗೆದುಕೊಂಡು, ಶ್ರೇಷ್ಠವಾದ ಕುದುರೆಯನ್ನೇರಿ, ಬೆಂಗಾವಲಿಗಾಗಿ ಬರುವ ನಾಲ್ಕು ಜನ ರಾವುತರೊಡನೆ ಜಾಗ್ರತೆಯಾಗಿ ನಡೆದುಬಂದು ಕುಂತಳನಗರದ ಉದ್ಯಾನದ ಸೊಬಗನ್ನು ನೋಡಿ ಗಿಳಿಗಳ ಮೆಲ್ನುಡಿಯೂ, ಕೋಗಿಲೆಗಳ ಇಂಚರವೂ ಕುಸುಮಫಲಭರಿತವಾದ ನಂದನವನದ ಆನಂದವೂ ತಿಳಿಗೊಳದ ತಾವರೆಗೆ ಎರಗಿಬಂದ ಮಂದಮಾರುತನ ಒಲಿದಾಟವೂ ಆನಂದದಾಯಕವಾಗಿರಲು ಅಲ್ಲಿಳಿದು ಶುಚಿರ್ಭೂತನಾಗಿ ಶ್ರೀಹರಿಯನ್ನು ಧ್ಯಾನಿಸಿ ಕುದುರೆಯನ್ನು ಒಂದು ಮರಕ್ಕೆ ಕಟ್ಟಿ, ಎಳೆಹುಲ್ಲನ್ನು ತಂದು ಅದರಮುಂದೆ ಹಾಕಿ, ಕುದುರೆಯಬಳಿಯಲ್ಲಿ ತನ್ನ ಸೇವಕರನ್ನು ಬಿಟ್ಟು, ತಾನು ಉದ್ಯಾನವನ್ನು ಹೊಕ್ಕು ಮಿಂದು ಮಡಿಯುಟ್ಟು ಕೃಷ್ಣನನ್ನು ಪೂಜಿಸಿ ತಂದಿದ್ದ ಬುತ್ತಿಯನ್ನುಂಡು, ಸಂತೋಷದಿಂದ ತಡಿಗೆಬಂದು, ಚಿಗುರಿಡಿದು ಸೊಂಪಾಗಿ ಬೆಳೆದಿರುವ ಒಂದಾನೊಂದು ಮಾವಿನಮರದ ಬುಡವನ್ನು ಸೇರಿ, ಎಳೆಚಿಗುರುಗಳನ್ನು ಕೊಯ್ದು ಹಾಸಿಕೊಂಡು ಮಲಗಿಕೊಳ್ಳಲು, ಮಧ್ಯಾಹ್ನದ ಬಿಸಿಲಿನಿಂದ ಬಳಲಿ ಬೆಂಡಾಗಿದ್ದ ಚಂದ್ರಹಾಸನಿಗೆ, ಆ ನಂದನವನದ ತಂಗಾಳಿಯ ಮೈಸೋಂಕಿನಿಂದ ಕಣ್ಣುರೆಪ್ಪೆಗಳು ಮುಚ್ಚಿಕೊಂಡವು. ಬಳಿಕ ಶೋಭಾಯಮಾನವಾದ ಶೇಷಶಯನದಲ್ಲಿ ದೇವಪುರನಿಲಯನಾದ ಲಕ್ಷ್ಮೀರಮಣನು ಮಲಗುವಂತೆ ಚಂದ್ರಹಾಸನು ತನ್ನ ಆತ್ಮೀಯವಾದ ಕಾರ್ಯವನ್ನು ಮರೆದು ನಿದ್ರಾಂಗನೆಗೆ ವಶನಾಗಿ ಮಲಗಿದನೆಂಬ

ಲ್ಲಿಗೆ-ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿ ನಾಗಶರ್ಮಪ್ರಣೀತ ಜೈಮಿನಿ ಭಾರತ ಕಥಾಸಂಗ್ರಹದಲ್ಲಿ ಇಪ್ಪತ್ತೊಂಭತ್ತನೆಯ ಸಂಧಿ ಸಂಪೂರ್ಣಂ.

ಶ್ರೀ ಶ್ರೀ ಶ್ರೀ.

# ಮೂವತ್ತನೆಯ ಸಂಧಿ.

ವಿಷಯೆ ಚಂದ್ರಹಾಸನ ಸೆರಗಿನಲ್ಲಿದ್ದ ಪತ್ರವನ್ನು ತಿದ್ದಿದ ಕಥೆ.

ಎಲೈ ಅರ್ಜುನನೇ ಕೇಳು. ಹೀಗೆ ಚಂದ್ರಹಾಸನು ಮಲಗಿರುವಾಗೆ ಕುಂತಳರಾಜನ ಮಗಳಾದ ಚಂಪಕಮಾಲಿನಿಯು ತನ್ನ ಸಖಿಯಾದ ವಿಷಯೆ ಯೆಂಬ ದುಷ್ಟಬುದ್ಧಿಯ ಮಗಳನ್ನು ಕರೆದುಕೊಂಡು, ವಸಂತಕಾಲದ ಜಲ ಕ್ರೀಡೆಗಾಗಿ, ಹೆಂಗಸರೊಡನೆ ಆ ಉದ್ಯಾನವನಕ್ಕೆ ಬಂದಳು. ಆ ಚಂಪಕಮಾ ಲಿನಿ ಮತ್ತು ವಿಷಯೆಯುರೊಡನೆ ಬಡನಡುವಿನ ಬೆಡಗಿಯರೂ, ಕನ್ನಡಿಕದಪಿನ ಚೆನ್ನೆಯರೂ, ಬಚ್ಚೋರೆಗಣ್ಣಿನ ಕೋಮಲೆಯರೂ, ಸುಲಿಪಲ್ಲುಗಳ ಸುದತಿ ಯರೂ, ಒಮ್ಮಾರುವೇಣಿಯ ನಿತಂಬಿನಿಯರೂ, ಸುಂದರವಾದ ಎಳೆವಣ್ಣು ಗಳೂ, ಬಟ್ಟಮೊಲೆಗಳ ಬಾಲೆಯರು ಹೊಸ ಪ್ರಾಯದನೀರೆಯರೂ ಕಾಂತಿ ಸಂಪನ್ನೆಯರೂ ಕಲೆವೆತ್ತ ಕಾಮಿನಿಯರೂ ಒಲುಪುಗಾರ್ತಿಯರಾದ ಕನ್ನೆ ಯರೂ, ಒಟ್ಟಾಗಿಸೇರಿ ಸುಮ್ಮಾನದಿಂದ ನಲಿದು ನೋಟಕರ ಚಿತ್ತಸ್ಥೈರ್ಯವನ್ನು ಸೂರೆಗೊಳ್ಳುತ್ತ ನಂದನವನಕ್ಕೆ ಬಂದರು. ಬಗೆಬಗೆಯಾದ ಹೂಗಳನ್ನು ಕೊಯ್ದು ವಿನೋದಕರವಾದ ಆಟಗಳನ್ನಾಡುತ್ತ ಒಬ್ಬೊಬ್ಬರೊಂದಾಗಿ ನೆರೆದು ಲೀಲೆಯಿಂದ ಕೈಕೋಲು ಜಡೆಯಾಟಗಳನ್ನಾಡಿ, ಬಳಿಕ ಬೇಸತ್ತು ದಣಿವಾರ ಲೆಂದು ತಿಳಿಗೊಳದ ನೀರಿಗಿಳಿದು ಜಲಕ್ರೀಡೆಯನ್ನಾಡಿ, ಸಂತುಷ್ಟರಾಗಿ, ತಣ್ಣು ದೋರಿದ ಬಳಿಕ ತಡಿಗೆ ಬಂದು ಮಡಿವರ್ಗಗಳನ್ನು ತೆಗೆದುಟ್ಟುಕೊಂಡು ಕಕ್ಕ ಸದ ಬಟ್ಟಮೊಲೆಗೆ ತಕ್ಕ ಬಗೆಬಗೆಯ ಬಣ್ಣದ ಕುಪ್ಪಸಗಳನ್ನು ತೊಟ್ಟು, ಹಣೆಗೆ ತಿಲಕವನ್ನು ತಿದ್ದಿ, ಮುಡಿಗೆ ಹೂಗಳನ್ನು ಮುಡಿದು ಕಂಠಾಭರಣ ಕರ್ಣಭೂಷಣಗಳನ್ನು ಧರಿಸಿ, ಸ್ವಭಾವಸಹಜವಾದ ತಮ್ಮ ಸೌಂದರ್ಯಕ್ಕೆ ಮತ್ತೊಂದು ಬಗೆಯ ಸೌಂದರ್ಯವನ್ನಿತ್ತು ಗುಂಪುಗುಂಪಾಗಿ ನೆರೆದು ಒಬ್ಬರೊ ಡನೊಬ್ಬರು ಮಾತನಾಡುತ್ತಲು, ನೃತ್ಯಗೀತಾದಿಗಳಿಂದ ವಿನೋದವಾಗಿ ಸಂಚ ರಿಸುತ್ತಲೂ, ಸಖಿಯರೊಡನೆ ಗಾನಮಾಡಿ, ಚಷಕಪಾತ್ರೆಯನ್ನು ಕೊಡು

ತ್ತಬಲೂ, ಕೊಳ್ಳುತ್ತಲೂ, ನಗೆಮೊಗದ ಕಾಂತಿಯನ್ನು ಬೀರಿ ದಿಶಾಮಂಡಲವನ್ನು ಬೆಳಗುತ್ತ ಹೂಗಳನ್ನು ಕೊಯ್ದು ಒಬ್ಬರಿಗೊಬ್ಬರು ಮುಡಿಸುತ್ತ ಸರಸವಾದ ಸಲ್ಲಾಪ ಸಂಭಾಷಣೆಗಳಿಂದ ಅನ್ಯೋನ್ಯವಾಗಿ ವಿಹರಿಸುತ್ತ ಸ್ವೇಚ್ಛೆಯಾಗಿ ತಿರುಗುತ್ತಿದ್ದರು.





ಹೀಗೆ ವಿನೋದವಾಗಿ ತಿರುಗುತ್ತ ಚಂಪಕಮಾಲಿಯು ತನ್ನ ಸಖಿಯರೊಡನೆ ಮುಂದೆ ಹೊರಟಳು. ಬಳಿಕ ವಿಷಯೆಯು ಆ ಗುಂಪಿನಿಂದ ತಪ್ಪಿಸಿಕೊಂಡು ಮೆಲ್ಲಮೆಲ್ಲನೆ ಹೂಗೊಯ್ಯುವ ನೆವದಿಂದ ಹಾರಿಬಂದು ಚಂದ್ರಹಾಸನು ಮಲಗಿರುವ ಮಾವಿನಮರದ ಬಳಿಯಲ್ಲಿ ನಿಂತು ಎಳೆಚಿಗುರಿನ ಹಾಸಿಗೆ ಮೇಲೆ ಮಲಗಿ, ತಂಗಾಳಿಗೆ ಮೈಯಿತ್ತು ಮಲಗಿರುವ ಸುಂದರಾಂಗನನ್ನು ಕಂಡು ಬೆರಗಾಗಿ, ಹೀಗೆ ಚಿಂತಿಸುತ್ತಿದ್ದಳು. ತನಗೆದುರಾಗಿ ನಿಂತು ಮಲೆತು ಪಾರ್ವಲೆವರಿಲ್ಲದೆ ಮೂರುಲೋಕಗಳೂ ತನ್ನ ವಶವರ್ತಿಯಾದಬಳಿಕ ಪುರುಷಸ್ತ್ರೀಯರನ್ನು ಪೀಡಿಸುವ ಆಯಾಸ ನನಗೇಕೆ ? ಎಂದು ಚಿಂತಿಸಿ ಮನ್ಮಥನು ಮೈಮರೆದು ಮಲಗಿರುವನೋ ! ಆಕಾಶದಲ್ಲಿ ಅಲೆದಾಡಿ ಆಗಾಗ್ಗೆ ಕಂದಿಕುಂದುವ ಆಯಾಸವು ತನಗೆ ಬೇಡವೆಂದು ಭೂಮಿಗೆ ಬಂದು ನಿದ್ರೆಮಾಡುತ್ತಿರುವ ಚಂದ್ರನೋ ! ಇಲ್ಲವೆ ವನಲಕ್ಷ್ಮಿಯೆಂಬ ಇನಿಯಳೊಡನೆ ಬೆರೆದು ತನಿರಸದ ಸೊಂಪೊಗದ ರತಿಕ್ರೀಡೆಯಲ್ಲಿ ಮೈಝೊಂಪಿಸಲು ಘನತರವಾದ ವಿಶ್ರಾಂತಿಯನ್ನು ಪಡೆದು ಮಲಗಿರುವ ವಸಂತನೋ ಎಂಬಂತೆ ಆಶ್ಚರ್ಯವನ್ನುಂಟುಮಾಡುತ್ತಿರುವ ಈ ಸುಂದರಾಂಗನು ಯಾರು ? ಒಬ್ಬರನ್ನಗಲಿ ಮತ್ತೊಬ್ಬರು ಬೇರೆಯಾಗಿ ಬಂದ ಅಶ್ವಿನೀದೇವತೆಗಳೋ, ನಳನೋ, ಕೂಬರನೋ, ಜಯಂತನೋ ! ಇಂದ್ರಸೂನುವೋ ! ಆಹಾ ! ಹಾಗಿದ್ದರೆ ಏಕಾಂಗಿಯಾಗಿ ಇಲ್ಲಿಗೇಕೆ

ಬಂದಾನು. ಚಂದ್ರಸೂರ್ಯರಾಗಿದ್ದರೆ ಶೀತೋಷ್ಣಕಾಂತಿಗಳಿರಬೇಕು. ಓಹೋ ! ಜಗನ್ಮೋಹನಾಕಾರನಾದ ಈತನು ಯಕ್ಷ, ಕಿನ್ನರ, ಗೀರ್ವಾಣ, ಸಿದ್ಧ, ಗಂಧರ್ವಗರುಡರಲ್ಲಿ ಒಬ್ಬನಾಗಿರಬೇಕೇ ಹೊರತು, ಮಾನವಸಂಭವನಲ್ಲ ಎಂದು ವಿಷಯಾಶಕ್ತಿಯಿಂದವನ ಮುಖವನ್ನು ನಿಟ್ಟಿಸಿ ನೋಡಿ, ವಿಷಯಾಂತರಂಗವಿದಾರಕನಾದ ಮನ್ಮಥನು ಪೂಶಮುಸೆಯು ಬಾಣಗಳನ್ನು ಹೂಡಿ, ವಿಷಯೆಯು ಕಣ್ಮನಗಳನ್ನು ಗುರಿಗುಟ್ಟಿ ಎದೆಗೆತ್ತಿ ಹೊಡೆಯಲು ಕಾಮಿನಿಯು ಕಾಮಪರವಶಳಾಗಿ ಕಾಮದೇವನ ಬಿಲ್ಲಿನಂಬುಗಳಿಗೆ ನಮಸ್ಕರಿಸಿ, ತಾಳು ! ತಾಳು !! ಅಬಲಾಗಣರಕ್ಷಕನಾದ ಈ ಸುಂದರಾಂಗನನ್ನು ಮರೆಹೋಗುವವರೆಗೂ ನನ್ನನ್ನು ಪೀಡಿಸಬೇಡವೆಂದು ಬೇಡಿಕೊಳ್ಳುವಳೋ ಎನ್ನುವಂತೆ ಮುಂದರಿದು ಬಂದು, ಸುತ್ತಲೂ ನೋಡಿ ಕಾಲ್ಕಡಗಗಳಲುಗದಂತೆ ಮೇಲೆಮೇಲೆ ಹೆಜ್ಜೆಯಿಟ್ಟು ಮುಟ್ಟದರೆ ಮುಂದೇನಾಗುವುದೋ ಎಂಬ ಭಯದಿಂದ ನಡುಗುತ್ತ ಇಟ್ಟ ಅಡಿಯನ್ನು ಹಿಂದೆಗೆಯಲಾರದೆ ಹೆಜ್ಜೆಯಮೇಲೆನಿಂತು, ಆದುದಾಗಲಿ ಇವನೊಡನೆ ಬೆರೆದು ಶೋಕವನ್ನು ಪೀಡಿಸುವ ಮನ್ಮಥನನ್ನು ಧಿಕ್ಕರಿಸುವೆನು ಎಂದು ನಿಶ್ಚಯಿಸಿ, ಅಯ್ಯೋ ! ನೆರೆದರೆ ಸುಖವುಂಟು. ಕೂಡುವುದಕ್ಕೆ ಮನಸ್ಸೂ ಉಂಟು. ಕ್ರೀಡಾಸುಖಕ್ಕೆ ಇದು ಕಾಲವಲ್ಲ ! ನನ್ನೊಡನೆ ಬಂದಿರುವ ಸುದತಿಯರು ಸೂಕ್ಷ್ಮಬುದ್ಧಿಯುಳ್ಳವರು. ಸೂರ್ಯರಶ್ಮಿಯು ಸುಂದರವಾಗಿರುವುದು. ಹಗಲೇ ರಾತ್ರಿಯಾಗಬಾರದೇ ! ಶಿವಶಿವಾ ! ಏನುಮಾಡಲಿ, ನನ್ನ ಕಾಮವು ಪೂರ್ತಿಯಾಗಲು ಹಲವು ವಿಘ್ನಗಳಿವೆಯಲ್ಲಾ ಎಂದು ತತ್ತರಿಸುತ್ತ ಹಿಂದಿರುಗಿ, ಬೇಟದನೋಟದಿಂದ ನಿಟ್ಟಿಸುತ್ತ ಬೆದರಿ ಬೆಂಡಾಗಿ, ಆ ಚಂದ್ರಹಾಸನ ಬಳಿಯಲ್ಲಿಯೇ ನಿಂತು ನೋಡುತ್ತ ಆತನ ವಸ್ತ್ರದ ತುದಿಯಲ್ಲಿ ಕಟ್ಟಿಕೊಂಡಿದ್ದ ಗಂಟನ್ನು ನೋಡಿ ಅದನ್ನು ಬಿಚ್ಚಿ, ಮೆಲ್ಲಗೆ ಮುದ್ರೆಯನ್ನೋರೆಮಾಡಿ ಕಾಗದವನ್ನು ತೆಗೆದುಕೊಂಡು, ತನ್ನ ಕಾಮವಿಕಾರದ ಆತುರವನ್ನು ತೋರಿದು ಆನಂದ ಪುಳಕಗಳು ಹೊರಹೊಮ್ಮುತ್ತಿರಲು, ತಮ್ಮ ತಂದೆಯ ಕೈಬರಹವನ್ನು ಕಂಡು, ಚಟುವಟಿಕೆಯಿಂದ ಓದಲಾರಂಭಿಸಿದಳು.

ಶ್ರೀಮಂತನಾದ ಸಚಿವಶಿರೋಮಣಿ ದುಷ್ಟಬುದ್ಧಿ ತನ್ನ ಮಗನಾದ ಮದನನಿಗೆ ಪ್ರೇಮದಿಂದ ಆಶೀರ್ವದಿಸಿ, ಅಜ್ಞಾಪಿಸಿದ ಕಾರ್ಯವೇನೆಂದರೆ:—ಈ ಕಾಗದವನ್ನು ತರುವ ಚಂದ್ರಹಾಸನು ನಮಗೆ ಮಹಾಹಿತನು. ಅಲ್ಲದೆ ನಮ್ಮ ರಾಜ್ಯಕ್ಕೆ ದೊರೆಯಾಗುವನು ಇದಕ್ಕೆ ಅನುಮಾನವಿಲ್ಲ. ಇವನು ಸಾಮಾನ್ಯನಲ್ಲ. ಮುಂದೆ ನಮಗೆ ಸರ್ವದಾ ಮಿತ್ರನೇ ಆಗುವನು. ಅದಕಾರಣ ಇವನು ನಿನ್ನ ಬಳಿಗೆ ಬಂದಮೇಲೆ ತಡಮಾಡದೆ ಕುಲಶೀಲರೂಪಗಳನ್ನು ನೋಡದೆ ವಿಷವ ನೀಕುಸುವಂತೆ ಕೊಡುವುದು. ಇದರಿಂದ ನಮಗೆ ಉತ್ತರೋತ್ತರಾಭಿವೃದ್ಧಿ

ಯುಂಟು ಎಂದು ಬರೆದಿರುವ ಲೇಖನವನ್ನೋದಿಕೊಂಡು ತರಳೆಯಾದ ಆ ವಿ
ಯೆಯು ಅದಕ್ಕೆ ಮತ್ತೊಂದು ಅಭಿಪ್ರಾಯವನ್ನು ತಿಳಿದುಕೊಂಡಳು. ಎ
ಅರ್ಜುನನೇ ಲೋಕತ್ರಯದಲ್ಲಿ ವಿಧಿವಶನನ್ನು ಮೀರಿ ನಡೆಯುವರಾರು
ಇವನು ನಮಗೆ ಮಹಾಹಿತನು. ನಮ್ಮ ದೇಶಕ್ಕೆ ದೊರೆಯಾಗುವನು. ಮುಂ
ಸರ್ವದಾ ಮಿತ್ರನೇ ಆಗುವನು. ಇವನ ಕುಲಶೀಲ ರೂಪಗಳನ್ನು ನೋ
ಬೇಡ ಬಂದಕೂಡಲೆ ವಿಷಯೆ ಮೋಹಿಸುವಂತೆ ಕೊಡು ಎಂದು ನವ
ತಂದೆಯು ಅಣ್ಣನಾದ ಮದನನಿಗೆ ಬರೆದ ಕಾಗದವೇ ಇದು ಎಂದು ತಿಳಿದ
ಆ ಸುಂದರಾಂಗಿಯು ಹತ್ತಿರದ ಮಾವಿನಮರದ ನಿರ್ಯಾಸವನ್ನು ತೆಗೆದುಕೊಂ
ಕಿರುವೆರಲ ಉಗುರ್ಗೊನೆಯನ್ನು ಲೇಖಣಿಯಾಗಿ ಮಾಡಿಕೊಂಡು ವಕಾರವ
ಕಡೆಯಲ್ಲಿ ಯಕಾರವನ್ನು ತಿದ್ದಿ, ಮುದ್ರೆಯನ್ನಳವಡಿಸಿ, ಮೊದಲಿನಂತೆ ಕಂ
ಕದ ತುದಿಯಲ್ಲದನ್ನು ಕಟ್ಟಿ, ತನ್ನ ಮನದಣಿಕೆಯು ಕೈಗೂಡುವುದೆಂಬ ಬ
ಕೆಯಿಂದ ಸಂತುಷ್ಟಳಾಗಿ, ಸದ್ದಾಗದಂತೆ ಅಲ್ಲಿಂದ ಹೊರಟು ತನ್ನ ಸಖಿಯ
ಗುಂಪಿಗೆ ಬರುವದಕ್ಕನುವಾದಳು. ಆದರೇನು ಮಂತ್ರಿಪುತ್ರಿಯಾದರೆ ಮ
ಥನಿಗೇನು ? ವಿಷಯೆಯಾದರೆ ಮೋಹಕ್ಕೇನು ? ಅಕಟಕಟಾ ! ಮನ್ಮಥನ
ಜಯಿಸಿದ ಮೃತ್ಯುಂಜಯನೂ ಕೂಡ ಮೋಹಕ್ಕೊಳಗಾಗಿ ಮಂಗಳಾಂಗಿಯಾ
ಗೌರಿಯನ್ನು ಮೈಯಲ್ಲೇ ಅಪ್ಪಿಕೊಂಡಿರುವನಲ್ಲಾ ! ನಿತ್ಯಾನಂದ ಸ್ವರೂ
ನಾದ ಪರಶಿವನಿಗೆ ಹಾಗಾದಮೇಲೆ ಉಳಿದವರ ಪಾಡೇನು ? ವಿಷಯೆಂ
ಮುಂದಮುಂದಕ್ಕೆ ಬರುವುದಕ್ಕೆ ಯತ್ನಮಾಡಿದಹಾಗೆಲ್ಲ ಅವಳ ಅವಯವಗ
ಹಿಂದಹಿಂದಕ್ಕೆ ಸೆಳೆಯುತ್ತೊಡಗಿದವು. ಕಣ್ಣುಗಳು ತಿರುಗದೆ ಹೋದು
ಕಾಲುಗಳು ಹಿಂಜರಿದವು. ಮನಸ್ಸು ಮೋಹಸಾಂಗನಲ್ಲಿ ನಾಟಹೋಯಿ
ಮನ್ಮಥನ ಬಾಣಗಳು ಬಹಳವಾಗಿ ನಟ್ಟುಹೋಗಿ ಗಾಯವು ದೇಹಾದ್ಯ
ವನ್ನೂ ವ್ಯಾಪಿಸಿಕೊಂಡಿತು. ಮೈವಳ್ಳಿಯು ಬಾಡಿತು. ಇಷ್ಟಾದಮೇಲೆ
ಹಾಗ್ನಿ ಹೊತ್ತಿ ಉರಿಯದಿರುವುದೆ ? ಅಯ್ಯೋ ! ಅದರ ಕಷ್ಟವನ್ನೆ
ಹೇಳಲಿ ? ಲೋಕದಲ್ಲಿ ಬೆಂಕಿಯು ಸುಟ್ಟು ಬೂದಿ ಮಾಡಿದಮೇಲೆ ತಾನ
ಆರಿಹೋಗುವುದು. ಅಲ್ಲದೆ ಮುಚ್ಚುಮರೆ ಇಲ್ಲದೆ ಎಚ್ಚರದಿಂದ ಸಕಲ
ನೋಡುವಂತೆ ಕೊಲ್ಲುವುದು. ಹರಿಹರೀ ! ಈ ವಿರಹಾಗ್ನಿಯ ಮಹಿಮೆ
ನ್ನೇನು ಹೇಳಲಿ ! ಹೊಗೆ ಮಾಗುವುದಿಲ್ಲ. ಹೆರವರಿಗೆ ತಿಳಿವುದೂ ಇಲ್ಲ. ಅ
ಯೇರುವುದು ಮೊದಲೇ ಇಲ್ಲ. ಇದರ ಪರಿಯನ್ನು ಕಂಡು ಔಷಧಮಾಡ
ವೈದ್ಯರು ಲೋಕದಲ್ಲೆಲ್ಲಿಯೂ ಇಲ್ಲ. ಯಾರಿಗೂ ತಿಳಿಯದಂತೆ ಶರೀರರ
ನಾರಿಯರನ್ನೂ ಕ್ರೂರವಾದ ಉರಿಯಿಂದ ಕೊಲ್ಲುತ್ತಿರುವುದು. ಇದಕ್ಕೇ
ಉಪಾಯವಿಲ್ಲವೆ ? ಇಬ್ಬರೊಂದಾಗುವುದೇ ಯುಕ್ತಿ ! ಹಾಗೆ ಮಾಡುವು

ಇಲ್ಲಿ ನನಗಾರು ಹೊಣೆ ! ತೆಗೆ ! ದೇವರು ಮಾಡಿದುದಾಗಲಿ ಎಂದು ಧೈರ್ಯ
ಮಾಡಿ, ಸಿಡಿದೋಡಿ ಬಂದು ತಮ್ಮ ಸಖಿಯರ ಸಂಘದಲ್ಲಿ ಸೇರಿಕೊಂಡಳು.

ಬಳಿಕ ಹರುಷರಸದಿಂದೊಡಗೂಡಿದ ಭಯವೆಂಬ ಪ್ರವಾಹವು ವಿಷ
ಯೆಯ ಮುಖವೆಂಬ ಭೂಮಿಯಲ್ಲಿ ಮೂಡಿ ಹರಿಯುತ್ತಿರುವುದನ್ನು ಕಂಡು,
ಸಖಿಯರು ಇದೇನು ಆಶ್ಚರ್ಯ, ಎಲೈ ಶೋಭನಾಂಗಿಯೇ ! ನಮ್ಮನ್ನು ಬಿಟ್ಟು
ಗಳಿಗೆಹೊತ್ತು ಹೊರಗಾಡಿಕೊಂಡಿದ್ದು ಪರಿಪರಿಯಬಗೆಯಿಂದ ಉಕ್ಕುತ್ತಿರುವ
ಮನಸ್ಸನ್ನು ಬಲಾತ್ಕಾರವಾಗಿ ಮರೆಮಾಚುತ್ತ ಬಂದಿರುವೆಯಲ್ಲ. ಗಾಳಿಯಲ್ಲಿ
ತೆರೆದ ಪರಿಮಳವು ಮರೆಯಾಗುವುದುಂಟೆ ? ದೇಹವು ಮನೋಭಾವವನ್ನು
ಮುಚ್ಚಿಡಬಲ್ಲುದೆ ? ಇಷ್ಟವಾದರೆ ಹೇಳು. ಇಲ್ಲದಿದ್ದರೆ ಬಿಡು. ತಾನಾ
ಗಿಯೇ ತಿಳಿಯುವುದು ? ಎಂದು ಹಾಸ್ಯಮಾಡಿ ನಕ್ಕರು. ಅದನ್ನು ಕಂಡು
ರಸವಚನಗಳಿಂದ ತನ್ನ ಸಖಿಯರನ್ನು ಹಾಸ್ಯಮಾಡುತ್ತ ತನ್ನ ಭಾವವು
ಅನ್ಯರಿಗೆ ತಿಳಿಯದಂತೆ ಅಡಗಿಸಿಕೊಂಡು ಹುಸಿನಗೆಯಿಂದ ನಲಿಯುತ್ತಿರುವ ವಿಷ
ಯೆಯೊಡನೆ ಚಂಪಕಮಾಲಿನಿಯು ಆ ಉದ್ಯಾನವನದಿಂದ ಹೊರಟು ನಗರಕ್ಕೆಬ
ರಲು ಅಲ್ಲಿ ಮದುವೆಯ ಮಂಗಳಕಾರ್ಯದ ನೃತ್ಯಗೀತವಾದ್ಯಗಳು ಬೋರ್ಗರೆ
ಯುತ್ತಿದ್ದವು. ಬಳಿಕ ಚಂಪಕಮಾಲಿನಿಯು ತಾನು ಅರಮನೆಯನ್ನು ಹೊಕ್ಕು
ಯಾಸಖಿಯರನ್ನು ಅವರವರ ಮನೆಗಳಿಗೆ ಕಳುಹಿಸಿಕೊಟ್ಟಳು. ವಿವಾಹನಿ
ಮಿತ್ತದಿಂದ ಪಟ್ಟಣದಲ್ಲಿ ನಡೆಯುವ ಶುಭಶಕುನಗಳನ್ನು ಕಂಡು, ವಿಷಯೆಯು
ತನ್ನು ಮನಸ್ಸಿನ ಕೆಯು ಎಂದಿಗೂ ಕೈಗೂಡದಿರಲಾರದು. ಶುಭಕರವಾದ ಈ
ಶಕುನಂಗಳಿಂದ ನನ್ನ ಮನಸ್ಸಿಗೆ ಮದುವೆಯು ದೃಢವಾಯಿತೆಂದು ಹಂಬಲಿ
ಸುತ್ತ ಕಾಮಬಾಣಪೀಡಿತಾಂತರಂಗಳಾಗಿ ತನ್ನ ಮನೆಗೆಬಂದು ನಿಮಿಷವನ್ನು
ಯುಗವಾಗಿ ಕಳೆಯುತ್ತ ನಿಂತಕಡೆ ನಿಲ್ಲಲಾರದೆ ಸಖಿಯರನ್ನು ಮಾತನಾಡಿಸ
ದಲ್ಲದೆ ಅಲಂಕಾರಕ್ಕೆ ಆಶಿಸದೆ ಸಾಕಿಬೆಳಸಿದ ಮೃಗಪಕ್ಷಿಗಳನ್ನು ಕಣ್ಣೆತ್ತಿ
ನೋಡದೆ ಊಟವನ್ನು ತೊರೆದು, ಮಾತನ್ನು ಬಿಟ್ಟು ಮಲಗಿರಲಾರದೆ ವಿರ
ಹದುರಿಯನ್ನು ಸೈರಿಸಲಾರದ ಸಂಕಟದಿಂದ ಪರಿಪರಿಯಾಗಿ ಹೊರಳುತ್ತ
ಕೋಮಲವಾದ ದೇಹವು ಭಾರವಾಯಿತೆಂದು ವಿರಹತಾಪವು ಅಧಿಕವಾಯಿ
ತೆಂದು, ತಣ್ಣಸದ ಬೆಣ್ಣೆಯನ್ನೆಂದಿಗೆ ಅಪ್ಪುವೆನೋ ಕಾಣೆನಲ್ಲಾ ! ಶಿವಶಿವಾ !
ನನ್ನ ದುರವಸ್ಥೆಯನ್ನು ಎಂದಿಗೆ ನಾಶಮಾಡುವೆ ಎಂದು ಮೊದಲಾಗಿ ಹಂಬ
ಲಿಸುತ್ತಿರುವಳನ್ನು ಕಂಡು ಹತ್ತಿರಕ್ಕೆಬಂದು ಹದವಾದ ಶೈತ್ಯೋಪಚಾರಂಗ
ಳಿಂದ ಉಪಚರಿಸಿ, ನಿನ್ನ ದೇಹಕ್ಕೆ ಆಲಸ್ಯವಾಗಲು ಕಾರಣವೇನೆಂದು ಕೇಳುವ
ಸಖಿಯರನ್ನು ನೋಡದೆ ಕಣ್ಣುವೆಗಳನ್ನು ಮುಚ್ಚಿಕೊಳ್ಳುವಳು. ಹೇಗಾದರೂ
ಇವಳ ವಿರಹವು ಕ್ಷಣಕ್ಷಣದಲ್ಲಿ ಹೆಚ್ಚುತ್ತಿರುವುದನ್ನು ಕಂಡು ಅಲ್ಲಿಂದಹೊರಟು

ಜಲಯಂತ್ರದಿಂದ ಹಾರುವ ತಣ್ಣೀರಿನಸೊಂಪೂ, ಶ್ರೀಗಂಧದಿಂದ ನಿರ್ಮಿಸಿ ಉಪ್ಪರಿಗೆಯ ಇಂಪೂ, ಚಂದ್ರಕಾಂತಶಿಲಾನಿರ್ಮಿತವಾದ ಜಗುಲಿಯತಂಪೂ ಕುಳಿರ್ವಲ್ಲತಿಳಿನೀರಿನಿಂದೆಸೆವ ತಿಳಿನೀರಿನಪೆಂಪೂ, ಪುಳಿನಸ್ಥಳಗಳಲ್ಲಿ ಸಂಚರಿಸಿ ಬರುವ ಸುಳಿಗಾಳಿಯಗುಂಪೂ ಮತ್ತು ಮರಿದುಂಬಿಗಳ ಬಳಗದೊಡನೆ ಬೆರೆದ ಹೂಮಾಲೆಗಳನರುಗುಂಪೂ, ಹಂಸ ಮತ್ತು ಅರೆಗಿಳಿಗಳಸಂಗಡ ಆಡುತ್ತಿರುವ ಕೋಗಿಲೆಯದನಿಯನುಣ್ಪೂ, ಒಟ್ಟುಗೂಡಿರುವ ಚಂದ್ರಶಾಲೆಗೆ ಮಂದಗಮನ ದಿಂದ ನಡೆತಂದಳು. ಅಲ್ಲಿಗೆ ತನ್ನೊಡನೆ ಬಂದು ಶೈತ್ಯೋಪಚಾರಗಳಿಂದ ಉಪ ಚರಿಸುತ್ತ ಇರುವ ಸಖಿಯರನ್ನು ನೋಡಿ ಮುಖವನ್ನು ಚಂದ್ರನೆಂದೂ ಮಾತುಗಳನ್ನು ಅರೆಗಿಳಿಗಳೆಂದೂ ಕಣ್ಣುಗಳನ್ನು ಕಾಮಬಾಣವೆಂದೂ ಹುಬ್ಬು ಳನ್ನು ಕಬ್ಬಿನಬಿಲ್ಲೆಂದೂ, ಕುರುಳುಗಳನ್ನು ತುಂಬಿವಿಂಡೆಂದೂ ಭ್ರಾಂ ಯಿಂದ ಭಾವಿಸಿ, ಮುಮ್ಮುರಿಹೋಗಿ ಮರುಗುತ್ತ ಅಯ್ಯೋ ! ರಾಹುನುಂಗಿ ಮೇಲೆ ಬದುಕಿದವನಾರು ? ಈಶ್ವರನ ಕೋಪಕ್ಕೆ ಉರಿದುಹೋದರೂ ಬದು ದವರುಂಟೆ ? ಕಾಡುಕಿಚ್ಚನ್ನು ಪ್ರೀತಿಯಿಂದ ಅಪ್ಪಿ ಬದುಕಬಹುದೆ ಅಯ್ಯೋ ಈ ಚಂದ್ರನೂ, ಈ ಮನ್ಮಥನೂ, ಈ ಮಂದಮಾರುತನೂ, ಅಬಲೆಯರ ಗು ಪನ್ನು ಇಲ್ಲಸಲ್ಲದ ಕಾರಣಗಳಿಂದ ನೋಯಿಸಿ ಕೊಲ್ಲುವುದಕ್ಕಾಗಿ ಬದುಕಿದರಲ್ಲ ಇವರಿಂದ ಮತ್ತಾವ ಪರೋಪಕಾರವೂ ಇಲ್ಲ. ಇವರಕಿವ ದಯಾವಂತರು ಹ ಹರಾ ! ಈ ಮೂವರಿಂದ ಹಾವಳಿಗೊಂಡು ಕಾವಳದಲ್ಲಿ ಕೊರಗದಿರುವ ಪ್ರಾ ಜಾಲವೇ ಇಲ್ಲ ! ಎಂದು ಬಗೆಬಗೆಯಾದ ಕಾಮವಿಕಾರದ ಮಾತುಗಳನ್ನಾ ಡುವ ತವೆಮ್ಮಡತಿಯಾದ ವಿಷಯೆಯುಬಗೆಯನ್ನು ತಿಳಿದು, ಇನ ಮನೋರಥವು ಸಫಲವಾದರೆ ನಾವೆಲ್ಲರೂ ನಿನಗೆ ಬಗೆಬಗೆಯಾದ ಹೂಮಾ ಯನ್ನು ಸೂಡಿ, ಸುಗಂಧಾಕ್ಷತೆಗಳೊಡನೆ ಕಳಿವಣ್ಣುಗಳನ್ನು ನೀವೇದನಮಾಡಿ ಮೋದಕಭಕ್ಷ್ಯವನ್ನು ಸಮರ್ಪಿಸಿ, ಧೂಪದೀಪಾದಿಗಳಿಂದ ಸತ್ಕರಿಸಿ, ವರು ವರುಷವೂ ನೋಂಪಿಯನ್ನೆಸಗುವೆವೆಂದು ಸರ್ವಮಂಗಳೆಯಾದ ಗೌರಿಯನ್ನು ಬೇಡಿಕೊಂಡರು. ಅದನ್ನು ಕೇಳಿ ವಿಷಯೆಯು ಸಂಭ್ರಾಂತಳಾಗಿ, ಏಳನೆಯ ಉಪ್ಪರಿಗೆಯ ಕೊನೆಯಲ್ಲಿ ಮಲಗಿ ಹೇಗಾದರೂ ತನ್ನ ಮನದೆಣಿಕೆಯನ ಕೈಗೂಡಿಸಿದರೆ ನಿನ್ನ ಪಾದಪೂಜೆಯನ್ನು ಮಾಡಿ ತಣಿಸುವೆನೆಂದು ನನ್ನ ಕೋ ಕೆಯನ್ನು ಅಣ್ಣನಾದಮದನನು ಪರಿಪಾಲಿಸುವಂತೆ ಅವನಿಗೆ ಬುದ್ಧಿಯನ ಕೊಡು ಎಂದು ಗೌರಿದೇವಿಯನ್ನು ಪ್ರಾರ್ಥಿಸುತ್ತ ಚಂದ್ರಹಾಸನು ಬರು ಮಾರ್ಗವನ್ನು ಎದುರುನೋಡುತ್ತಿದ್ದಳು.



ಚಂದ್ರಹಾಸನು ಕುಂತಳಪುರಕ್ಕೆ ಬಂದುದು.

ಎಲೈ ಅರ್ಜುನನೇ ಲಾಲಿಸು. ಹೀಗೆ ವಿಷಯೆ ತನ್ನರಮನೆಯಲ್ಲಿ ವಿರಹ ತಾಪದಿಂದ ತಪಿಸುತ್ತಿರಲು, ಆ ನಂದನವನದಲ್ಲಿ ಮೈಮರೆದು ಮಲಗಿದ್ದ ಚಂದ್ರಹಾಸನು ಸಂಜೆಗೆ ಮುಂಚೆ ಎಚ್ಚತ್ತು ತಿಳಿಗೊಳದಲ್ಲಿ ಕೈಕಾಲುಗಳನ್ನು ತೊಳೆದು, ಬಾಯಮುಕ್ಕಳಿಸಿ, ಕಪ್ಪುರವೀಳೆಯವನ್ನು ಸವಿದು, ಚಾರಕರನ್ನೆಬ್ಬಿಸಿ, ಕುದುರೆಗೆ ತಡಿಕಡಿವಾಣಗಳನ್ನು ಬಿಗಿಸಿ, ಸೇವಕರೊಡನೆ ಕುದುರೆಯನ್ನೇರಿ, ಋಜುವಾದ ಶುಭಶಕುನಗಳನ್ನು ನೋಡುತ್ತ ಕುಂತಳನಗರಕ್ಕೆ ಬಂದನು. ಅಲ್ಲಿಗೆ ದೊರೆಯಾದ ಕುಂತಳರಾಜನು ತನ್ನ ಪುರೋಹಿತನಾದ ಗಾಲವನ ಅನುಮತಿಯಂತೆ ದುಷ್ಟಬುದ್ಧಿಗೆ ರಾಜ್ಯಭಾರವನ್ನು ವಹಿಸಿ, ತಾನು ಯೋಗಾರೂಢನಾಗಿ ದೇವರ ಧ್ಯಾನದಲ್ಲಿ ಕುಳಿತುಕೊಂಡಿದ್ದನು. ಆದುದರಿಂದ ದುಷ್ಟಬುದ್ಧಿಯು ಚಂದನಾವತಿಗೆ ಹೊರಡುವಾಗ ತನ್ನ ಅಧಿಕಾರವನ್ನು ಮಗನಾದ ಮದನನಿಗೆ ಒಪ್ಪಿಸಿದ್ದನು. ಆ ಕಾರಣದಿಂದ ಮಂತ್ರಿಯ ಮಗನಾದ ಮದನನು ಓಲಗಶಾಲೆಯಲ್ಲಿ ಕುಳಿತು, ಛತ್ರಚಾಮರ ಮಂದಿಮಾರ್ಬಲಗಳೊಡನೆ ರಾಜಠೀವಿಯಿಂದ ಮೆರೆಯುತ್ತಿದ್ದನು.

ಬಳಿಕ ಚಂದ್ರಹಾಸನು ಮಂತ್ರಿಯ ಮನೆಯಬಳಿಗೆ ಬಂದು ಕುದುರೆಯನ್ನಿಳಿದು, ದ್ವಾರಪಾಲಕರಿಗೆ ತಾನು ಬಂದಿರುವ ಸುದ್ಧಿಯನ್ನು ತಿಳಿಸಿದನು. ಅವರು ಒಬ್ಬರಿಂದೊಬ್ಬರಿಗೆ ಎಚ್ಚರಿಸಲು, ಏಳನೆಯ ಬಾಗಿಲಲ್ಲಿ ನಿಂತಿದ್ದ ವಿವೇಕನೆಂಬವನು ವಿನಯದಿಂದ ಮದನನ ಬಳಿಗೆ ಬಂದು ಪರಾಕು ಮಹಾರಾಜಾ ! ನಿಮ್ಮಯ್ಯನಿಗೆ ಇಷ್ಟನಾದ ಕ್ರೋಧನೆಂಬ ಸೇವಕನಂತೆ ನಾನು ನಿನಗೆ

ಹಿತಚಿಂತಕನಲ್ಲವೇ ? ಲೋಕಾಧಿಪತಿಯೂ, ವಿಷ್ಣುಭಕ್ತನೂ, ಜನಾನಂದಕರನೂ ಆದ ಚಂದ್ರಹಾಸನು ನಿನ್ನ ಬಳಿಗೆ ಬಂದಿರುವನು. ಅವನನ್ನು ಮರ್ಯಾದೆಯಿಂದ ಇದಿರೆದ್ದು ಸತ್ಕರಿಸಡಿರಬಹುದೆ ಎಂದು ಎಚ್ಚರಿಸಿದನು. ಆಗ ಮದನನು ತನ್ನ ಸಿಂಹಾಸನದಿಂದಿಳಿದು ಚಂದ್ರಹಾಸನನ್ನು ಇದಿರ್ಗೊಂಡು ಕರೆತಂದು ಭದ್ರಾಸನದಲ್ಲಿ ಕುಳ್ಳಿರಿಸಿ ಚಂದನಾವತಿಯ ಯೋಗಕ್ಷೇಮವನ್ನು ವಿಚಾರಿಸಿ ತಿಳಿದುಕೊಂಡು ಅಯ್ಯಾ ನಿನ್ನ ದರ್ಶನದಿಂದ ನನಗೆ ಬಹಳ ಆನಂದ ಉಂಟಾಗಿದೆ. ನೀನು ಇಲ್ಲಿಗೆ ಬರಲು ಕಾರಣವೇನು ಎನಲು, ಚಂದ್ರಹಾಸನು ಆರ್ಯಾ ! ನಿನ್ನ ತಂದೆ ನನಗೆ ರಹಸ್ಯವಾದೊಂದು ಕಾರ್ಯವನ್ನುಹೆಸಹಿ, ನಿನ್ನ ಬಳಿಗೆ ಕಳುಹಿಸಲು ನಾನು ಇಲ್ಲಿಗೆ ಬಂದೆನು ಎಂದು ಹೇಳಿ, ಮುದ್ರೆಯಿಂದ ಭದ್ರವಾಗಿದ್ದ ಕಾಗದವನ್ನು ಅವನಕೈಗೆ ಕೊಟ್ಟನು. ಬಳಿಕ ಮದನನು ಸಭಿಕರನ್ನು ಆಸ್ಥಾನದಲ್ಲಿಯೇ ಇರುವಂತೆ ಹೇಳಿ, ಚಂದ್ರಹಾಸನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ತನ್ನ ತಮ್ಮನಾದ ಅಮಲನನ್ನು ಕರೆದುಕೊಂಡು, ಏಕಾಂತ ಮಂದಿರಕ್ಕೆ ಹೋಗಿ, ಮುದ್ರೆಯನ್ನೊಡೆದು ಕಾಗದವನ್ನೋದಿಕೊಂಡು, ತಿದ್ದಿರುವ ಅಕ್ಷರದ ಭೇದವನ್ನು ತಿಳಿಯದೆ, ಬಹಳವಾದ ಸಂತೋಷದಲ್ಲಿ ಮುಳುಗಿ ತೇಲುತ್ತ ಆಹಾ ! ನಮ್ಮ ತಂದೆ ಬರೆದ ಈ ಕಾಗದವು ಚೆನ್ನಾಗಿದೆ. ಇವನು ಮಹಾಹಿತನೂ, ನಮ್ಮ ರಾಜ್ಯಕ್ಕೆ ದೊರೆಯೂ ಲೋಕದಲ್ಲಿ ಅಸಮಾನ್ಯನೂ, ಸರ್ವದಾ ಮಿತ್ರನೂ ಆಗುವನೆಂಬಲ್ಲಿ ನನ್ನ ತಂಗಿಯಾದ ವಿಷಯೆಗೆ ತಕ್ಕವರನಲ್ಲವೇ ? ಹಾಗೂ ಅಲ್ಲದೆ ತಂದೆಯ ಆಜ್ಞೆಯನ್ನು ಎಂದಿಗೂ ಮೀರಬಾರದು. ನನಗೂ ಇವನಲ್ಲಿ ಬಹಳವಾದ ಪ್ರೀತಿಯುಂಟಾಗುತ್ತಿದೆ. ಇದೂ ಅಲ್ಲದೆ ಇವನು ಲೋಕದಲ್ಲಿ ದೀರನಾದ ವಿಷ್ಣುಭಕ್ತನು. ಆದಕಾರಣ ಪದ್ಮಾಕ್ಷಿಯಾದ ನನ್ನ ತಂಗಿಯನ್ನು ಇವನಿಗೆ ಕೊಡುವುದೇ ಸರಿ ಎಂದು ನಿಶ್ಚಯಿಸಿ, ಜೋಯಿಸರನ್ನು ಕರೆಯಿಸಿ, ಬ್ರಹ್ಮಾನುಕೂಲವನ್ನೂ ರಾಶಿಕೂಟವನ್ನೂ ವಿಚಾರಿಸಿ, ಪಟ್ಟಣದಲ್ಲೆಲ್ಲ ಒಸಗೆಯನ್ನು ವಿಸ್ತರಿಸಿ, ಕ್ಷಣಮಾತ್ರದಲ್ಲಿ ಮುಗಿಲಮುಟ್ಟುವಂತಿರುವ ಮನೋಹರವಾದ ಗುಡಿತೋರಣ ಮದುವೆಮಂಟಪಗಳು ಸಿದ್ಧವಾಗಲು ವಿವಾಹಕ್ಕೆ ಆಗಬೇಕಾದ ಮಂಗಳದ್ರವ್ಯಗಳು ಸಂಪೂಣಿಯಿಂದ ಸಂಗ್ರಹಿಸಲ್ಪಟ್ಟುವು. ರತ್ನಖಚಿತವಾಗಿ ರಂಜಿಸುವ ನೂತನವಾದ ಮದುವೆಯ ಜಗುಲಿಯೂ ಹದವಾಯಿತು. ಬಳಿಕ ಮದನನ ಆಜ್ಞೆಯಂತೆ ಬ್ರಾಹ್ಮಣರು ದಿನವೇ ವಿವಾಹಯೋಗ್ಯವಾದ ಮಂಗಳಸ್ನಾನಗಳನ್ನು ಮಾಡಿಸಿದರು. ಮುತ್ತೈದೆಯರು ಸಂತೋಷದಿಂದ ಮದವಣಿಗನನ್ನು ಮಂಗಳಕರವಾಗಿ ಅಲಂಕರಿಸಿದರು. ಆಗ ಕುಳಿಂದನ ಮಗನಾದ ಚಂದ್ರಹಾಸನು ಹಣೆಯಲ್ಲಿ ಶೋಭಾಯಮಾನವಾಗಿ ಹೊಳೆಯುತ್ತಿರುವ ಬಾಸಿಗನನ್ನು ಕಟ್ಟಿಕೊಂಡು ಮದುವಣಿಗನಾಗಿ ಹೊಳೆಯು

ತ್ತಿದ್ದನು. ಎಲೈ ಪಾರ್ಥನೇ ! ದೇವಪುರನಿಲಯನಾದ ನಮ್ಮ ಲಕ್ಷ್ಮೀಕಾಂತನ ಕರುಣಾಕಟಾಕ್ಷದಿಂದ ವಿಷವು ಅಮೃತವಾಗುವುದೊಂದು ಆಶ್ಚರ್ಯವೇ ಹೇಳು ಎಂದು ನಾರದನು ಅರ್ಜುನನಿಗೆ ಹೇಳಿದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣ ಪುರೀನಿಲಯ ಕವಿಸಾಗರಸರ್ವಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಮೂವತ್ತನೆಯಸಂಧಿ ಸಂಪೂರ್ಣಂ. ಶ್ರೀ ಶ್ರೀ ಶ್ರೀ.



# ಮೂವತ್ತೊಂದನೆಯ ಸಂಧಿ.

ಚಂದ್ರಹಾಸನು ವಿಷಯೆಯನ್ನು ವರಿಸಿದಮೇಲೆ
ಮಡಿದ ಮೈದುನನನ್ನೂ ಮಾವನನ್ನೂ ಬದುಕಿಸಿದುದು.

ಎಲೈ ಅರ್ಜುನನೇ ಲಾಲಿಸು. ಇತ್ತ ಚಂದ್ರಹಾಸನನ್ನು ಮಂಗಳಸ್ನಾನದಿಂದ ಅಲಂಕರಿಸಿರುವುದನ್ನು ಕಂಡು, ಮುಂಬೆಳಗಿನಲ್ಲಿ ಬೀಸುವ ಮಂದಮಾರುತನಂತೆ, ಸುಂದರಾಂಗಿಯರಾದ ಸಖಿಯರು ವಿರಹತಾಪದಿಂದ ಸಂತಪಿಸುತ್ತಿರುವ ವಿಷಯೆಯ ಬಳಿಗೆ ಬಂದು ಅಮ್ಮಾ ! ಇನ್ನು ಚಿಂತಿಸಬೇಡ. ನಿನ್ನ ಇಷ್ಟಾರ್ಥವು ಕೈಗೂಡಿತು. ಆ ಚಂದ್ರಹಾಸನು ನವಮನ್ಮಥನ ಹಾಗಿರುವನು. ನೀನು ಪೂರ್ವದಲ್ಲಿ ಒಳ್ಳೆಯಪುಣ್ಯವನ್ನು ಮಾಡಿದ್ದು ನಂದನವನದಲ್ಲಿ ಚಂಪಕಮಾಲಿನಿಯು ಹಾಸ್ಯಮಾಡಿ ನಕ್ಕಹಾಗೆಯೇ ಆಯಿತು ಅಲ್ಲವೆ ? ತಂದೆಯಾದ

ದುಷ್ಟಬುದ್ಧಿಯು ಕಳುಹಿಸಿದ ಕಾಗದವನ್ನು ಓದಿಕೊಂಡು ಮದನನು ಸಂತೋಷಭರಿತನಾಗಿ ಈ ದಿನ ನಿನ್ನನ್ನು ಚಂದ್ರಹಾಸನಿಗೆ ಕೊಟ್ಟು ಮದುವೆಮಾಡುವನು ಎಂದು ಹೇಳಿದರು. ಅದನ್ನು ಕೇಳಿ ಕಟ್ಟುಬಿಚ್ಚಿ ಹೊರಕ್ಕೆಬಿಟ್ಟ ಹುಲ್ಲೆಯಹಾಗೆ ನಲಿಯುತ್ತ ತನ್ನ ಮನೋರಥವು ನೆರವೇರಿತೆಂಬ ಆನಂದದಿಂದ ವಿಷಯೆಯ ಮುಖಕಮಲವು ಅರಳಿತು. ಲಜ್ಜೆಯು ತಲೆಹಾಕಿತು. ನಾಚಿಕೆಯಿಂದ ಪ್ರತ್ಯುತ್ತರವನ್ನು ಹೇಳದೆ ಕಾಲಬೆರಲಿಂದ ನೆಲವನ್ನು ಕೆರೆಯುತ್ತಿದ್ದಳು. ಅದನ್ನು ಕಂಡು, ದಾದಿಯರು ಇದೇನು ? ಮದುವೆಯ ಸಂಭ್ರಮದಲ್ಲಿ ಮೌನವಾಗಿರುವೆಯಲ್ಲಾ ಬಾ ! ನಡೆ. ಮಂಗಳಸ್ನಾನಕ್ಕೆ ಸಿದ್ಧವಾಗು ಎಂದು ಹೇಳಿ, ಉಪ್ಪರಿಗೆಯಿಂದ ಕರೆತಂದು ಮಜ್ಜನಶಾಲೆಯಲ್ಲಿ ಸುವರ್ಣಕಲಶಗಳಿಂದ ತುಂಬಿ ಪಲ್ಲವಾಲಂಕೃತವಾದ ಹಸೆಯಲ್ಲಿ ಕುಳ್ಳಿರಿಸಿ, ಅಗಿಲುಚಂದನ ಪಚ್ಚಕರ್ಪೂರ ಪರಿಮಳಪೂರಿತವಾದ ಜಲವನ್ನು ಹರಿದ್ರಾಕುಂಕುಮಗಳೊಡನೆ ಬೆರಸಿ, ಸುವಾಸಿನಿಯರು ಸ್ನಾನಮಾಡಿಸಿದರು. ಪುರಂಧ್ರಿಯರು ಶೋಭನಾಂಗಿಯಾದ ವಿಷಯೆಗೆ ಮಡಿಯನ್ನುಡಿಸಿ, ಕಡುಚೆಲ್ವಿನ ಕುಪ್ಪಸವನ್ನು ತೊಡಿಸಿ, ಜಡೆಗುರುಳುಗಳನ್ನು ತಿದ್ದಿ, ಬಾಚಿ ಕಟ್ಟಿದ ಜಡೆಗೆ ಹೂಮಾಲೆಯನ್ನು ಸೂಡಿ, ನಗೆಮೊಗಕ್ಕೆ ತಿಲಕವನ್ನುತಿದ್ದಿ, ಕರ್ಣಪತ್ರಗಳನ್ನು ಅಳವಡಿಸಿ, ಮೂಗಿಗೆ ಮೂಗುತಿಯನ್ನೂ, ಕಿವಿಗೆ ಓಲೆಯನ್ನೂ, ಕೈಗೆ ಕಂಕಣಗಳನ್ನೂ, ಕೊರಳಿಗೆ ಕಂಠಮಾಲೆಯನ್ನೂ, ನಡುವಿಗೆ ಒಡ್ಯಾಣವನ್ನೂ, ಸೇರಿಸಿ ಅಲಂಕರಿಸಿದರು. ಸ್ವಭಾವಸಿದ್ಧವಾದ ಸೌಂದರ್ಯಕ್ಕೆ ಶ್ರೀಗಂಧದಕೆಸರನ್ನೂ, ಪಚ್ಚಕಪ್ಪುರದ ಪುಡಿಯನ್ನೂ, ಕುಂಕುಮದ ಧೂಳಿಯನ್ನೂ, ಕುಸುಮರಜದ ಕಂಪನ್ನೂ ಒಂದುಗೂಡಿಸಿ, ಅಮಲಾಂಗವನ್ನು ನಿರ್ಮಲವಾಗಿ ಮಾಡುವಂತೆ ಲೇಪನಂಗೈದು ಅಟ್ಟಹಾಸದಿಂದ ಮದವಣಿಗಿಯಾದ ವಿಷಯೆಯನ್ನು ಹೊನ್ನಂದಣದಲ್ಲಿ ಕುಳ್ಳಿರಿಸಿ ವಾದ್ಯವಿಶೇಷಗಳ ಸಂಭ್ರಮದೊಡನೆ ಮಂಗಳಗೀತೆಗಳನ್ನು ಹಾಡುತ್ತ ಮುತ್ತೈದೆಯರು ಹಸೆಯಬಳಿಗೆ ಕರೆತಂದರು. ಸುತ್ತಲೂ ನೆರೆದಿದ್ದ ವೈದಿಕರ ಮಂತ್ರಘೋಷದಿಂದಲೂ, ಸಾಲುದೀವಿಗೆಗಳ ಸೊಂಪಿನಿಂದಲೂ, ಕನ್ನಡಿ ಕಲಶವನ್ನು ಹಿಡಿದು ಪಾಡುತ್ತಿರುವ ಪುರಂಧ್ರಿಯರ ಕಂಠಸ್ವರದಿಂದಲೂ ಮಂಗಳದ್ರವ್ಯಗಳ ಸಮೂಹದ ಸಂಭ್ರಮದಿಂದಲೂ, ವಾದ್ಯ, ತಾಳ, ಮೇಳ, ನೃತ್ತಗೀತಗಳ ವಿಲಾಸದಿಂದಲೂ ಚಂದ್ರಹಾಸನು ನಡೆತಂದು ಆರತಿಯನ್ನೆತ್ತಿದಬಳಿಕ, ಮದುವೆಯ ಜಗಲಿಯನ್ನುಸೇರಿ ಹಸೆಯಮೇಲೆ ಕುಳಿತಿದ್ದನು. ಆಗ ಮಂತ್ರಿಪತ್ನಿಯಾದ ತಾರಕಾಕ್ಷಿಯು ವರನನ್ನು ಪೂಜಿಸಿ ಪಾದಪ್ರಕ್ಷಾಳನಂಗೈದು ಸತ್ಕರಿಸಿ, ಮಧುಪರ್ಕವನ್ನು ಕೊಟ್ಟು, ಕುಲಪರಂಪರೆಯನ್ನು ಹೇಳುವ ಕನ್ಯಾವರಣವನ್ನು ನುಡಿ ಎನಲು, ಚಂದ್ರಹಾಸನು ಕಮಲನಾಭನೆ ತಂದೆ, ಶ್ರೀಹರಿಯೇ ತಾತ,

ಮುರವೈರಿಯೇ ಮುತ್ತಾತನು, ನಮ್ಮ ಗೋತ್ರವೇ ವಾಮನಗೋತ್ರ, ಕುಳಿಂದನೂ ಅವನ ಹೆಂಡತಿಯೂ ನನ್ನ ಗುರುಗಳು ಎಂದು ಹೇಳಿದನು. ಅದನ್ನು ಕೇಳಿ ಆನಂದತುಂದಿಲಸ್ವಾಂತನಾದ ಮದನನು ಮನದಲ್ಲಿ ಹಿಗ್ಗುತ್ತ ಮುಹೂರ್ತನಿರ್ಣಯಕಾಲವನ್ನು ಸಾಧಿಸಿ, ಬ್ರಾಹ್ಮಣರ ಆಶೀರ್ವಚನವನ್ನಾಂತು, ಮೆಟ್ಟಕ್ಕಿಯು ಗೂಡೆಯಲ್ಲಿ ವಧೂವರರನ್ನು ನಿಲ್ಲಿಸಿ, ಜೀರಿಗೆಬೆಲ್ಲವನ್ನು ತಳಿಸಿ, ಸುತ್ತುನೂಲಿನನಡುವೆ ಸಂಭ್ರಮದಿಂದ ನಿಂತಿರುವ ಚಂದ್ರಹಾಸನಿಗೆ ಶ್ರೀಮಹಾವಿಷ್ಣುವಿನ ಸನ್ನಿಧಿಯಲ್ಲಿ ಕೃಷ್ಣಾರ್ಪಣವಾಗಲಿ ಎಂದು ಧಾರೆಯನ್ನೆರದನು. ಬಳಿಕ ವಧೂವರರು ಅನ್ಯೋನ್ಯವಾಗಿ ನವಪರಿಜಾತ ಕುಂದಮಂದಾರಗಳ ಹೂಮಾಲೆಯನ್ನು ಸೂಡಿಸಿದರು. ಆಬಳಿಕ ಅಗ್ನಿಹೋತ್ರವಿಧಾನವನ್ನು ಮುಗಿಸಿ, ಪಾಣಿಗ್ರಹಣ ಸಪ್ತಪದಿ ಲಾಜಾಹ್ಮ ಹೋಮಗಳನ್ನು ಮಾಡಿ, ಬ್ರಾಹ್ಮಣ ಆಶೀರ್ವಾದವನ್ನು ಶಿರದಲ್ಲಿ ಧರಿಸಿ ಸುಖದಿಂದ ಕುಳ್ಳಿರಲು, ಮುತ್ತೈದೆಯರು ಗುಂಪುಗುಂಪಾಗಿ ಬಂದು, ಫಲಪುಷ್ಪ ತಾಂಬೂಲಗಳನ್ನು ಕೊಟ್ಟು ಹರಸಿ ಹರುಷದಿಂದ ಆರತಿಯನ್ನೆತ್ತಿದರು.

ಹೀಗೆ ಆದ ವಿವಾಹವು ರತಿಮನ್ಮಥರ ಮದುವೆಯಹಾಗೆ ಬಹು ಮನೋಹರವಾಗಿದ್ದಿತು. ಆಕಾಲದಲ್ಲಿ ಮದನನು ಅಳಿಯನಾದ ಚಂದ್ರಹಾಸನಿಗೆ ಬಲವಳಿಯಾಗಿ ಬೇಕಾದವಸ್ತುಗಳನ್ನು ಕೊಟ್ಟು, ಪುರೋಹಿತನಾದ ಗಾಲವನಿಗೂ, ಬ್ರಾಹ್ಮಣರಿಗೂ ತೃಪ್ತಿಯುಂಟಾಗುವಂತೆ ಧನಕನಕ ವಸ್ತುವಾಹನಗಳನ್ನು ಕೊಟ್ಟು, ನೆರೆದ ಜನರೆಲ್ಲರನ್ನೂ ಪರಿಪರಿಯ ದಾನಧರ್ಮ ಭೋಜನಾದಿಗಳಿಂದ ಸತ್ಕರಿಸಿ, ಸಂತೋಷಯುಕ್ತನಾಗಿ, ಎಲ್ಲರನ್ನು ಅವರವರ ಮನೆಗೆ ಕಳುಹಿಸಿದ ಬಳಿಕ ಬಂಧುಮಿತ್ರ ಪರಿವಾರಯುಕ್ತನಾಗಿ ವಧೂವರರಿಗೆ ಮೃಷ್ಟಾನ್ನ ಭೋಜನವನ್ನು ಮಾಡಿಸಿ ಪರಮಾನಂದಭರಿತನಾಗಿ, ಪೂರ್ವಜನ್ಮದ ಪುಣ್ಯಪರಿಪಾಕದಿಂದ ಶ್ರೀವಿಷ್ಣುಭಕ್ತನಾದ ಚಂದ್ರಹಾಸನ ಸೇವೆಯು ನನಗೆ ದೊರೆಯಿತು. ನಾನು ಧನ್ಯನಾದೆನು. ಕುಲವು ಪವಿತ್ರವಾಯಿತು, ಗೃಹವು ಪರಿಪೂರ್ಣವಾಯಿತು. ಪಿತೃದೇವತೆಗಳು ಮುಕ್ತರಾದರು. ಲೋಕವು ಆನಂದದಲ್ಲಿ ಮುಳುಗಿತು. ಎಂದು ಸಂಭ್ರಮದಿಂದ ಆನಂದಸಾಗರದಲ್ಲಿ ಮುಳುಗಿ ತೇಲುತ್ತಿದ್ದನು. ಹೀಗೆ ಮೂರುದಿನಗಳವರೆಗೆ ಮಹೋತ್ಸವದಿಂದ ಮದುವೆಯನ್ನು ಮಾಡಿ ಆದಿನ ರಾತ್ರಿಯಲ್ಲಿ ಸರ್ವಾಲಂಕರಣ ಸಂಪನ್ನರಾದ ವಧೂವರರನ್ನು ಆನೆಗಳಮೇಲೆ ಕುಳ್ಳಿರಿಸಿ, ಮಂಗಳವಾದ್ಯ ಸಹಿತ ಸುವಾಸಿನಿಯರೊಡನೆ ಶೋತ್ರಿಯರ ವೇದವಾಚನದ ಸ್ವಸ್ತಿಮಂತ್ರಧ್ವನಿಯು ಸುತ್ತಲೂ ಹರಡುತ್ತಿರಲು ಮೆರವಣಿಗೆಯಂಗೆಯ್ಸಿ, ಸಕಲ ಪರಿವಾರದವರಿಗೆ ಬೇಡಿದುದನ್ನಿತ್ತು ತನ್ನ ತಂದೆಯ ಭಂಡಾರವೆಲ್ಲವೂ ಬರಿದಾಗುವಂತೆ ದಾನಮಾಡಿ, ಲೋಕೋಪಕಾರಕ್ಕಾಗಿ ತನ್ನಾಯುಸ

ವನ್ನು ನೋಡದೆ ಸುತ್ತಿಸುತ್ತಿ ಅಲೆದರೂ ಕ್ರಮಗಾಣದ ಸೂರ್ಯನಂತೆ ಸಕಲ ತೇಜೋಮಯವಾದ ಅನಂತ ಐಶ್ವರ್ಯವನ್ನು ದಾನಮಾಡಿದನು, ದುಷ್ಟಬುದ್ಧಿಯ ಭಂಡಾರವು ಬರಿದಾಯಿತು. ಎಲೈ ಅರ್ಜುನನೇ ! ವಿಷ್ಣುಭಕ್ತರಾದವರಿಗೆ ವಿಷವೂ ಅಮೃತವಾಗದಿರುವುದೆ ? ಇತ್ತ ಚಂದನಾವತಿಯಲ್ಲಿ ದುಷ್ಟಬುದ್ಧಿಯು ಕುಳಿಂದನನ್ನು ಬಹಳವಾಗಿ ಬೈದು ಭಂಗಿಸಿ, ಸೆರೆಯಲ್ಲಿಟ್ಟು ನಿನಗಾಗಿ ರಾಜ್ಯವನ್ನು ಕೊಟ್ಟನನ್ನನ್ನು ಮರೆತು, ಮೈಸೊಕ್ಕಿನಿಂದೊಬ್ಬ ಮಗನನ್ನು ಮಾಡಿಕೊಂಡೆ. ನಿನಗೆ ಈ ತಂತ್ರವೇ ತಿಳಿಯದು. ಕೋಟೆಕೊತ್ತಳಗಳೂ, ದುರ್ಗರಾಷ್ಟ್ರಗಳೂ, ದೇಶಕೋಶಗಳೂ ಹಾಳಾದವು. ನಿನಗಿನ್ನು ಈ ರಾಜ್ಯವೆ ಸಲ್ಲದೆಂದು ಅವಗಡಿಸಿ ಅಲ್ಲಿಂದ ಹೊರಟು ವಾಹಕರನ್ನು ಬೈದು ಬಹಳ ತ್ವರೆಯಿಂದ ನಡೆದುಬರುತ್ತ, ಮಗನಾದ ಮದನನು ವಿಷವನ್ನು ಹಾಕಿ ಚಂದ್ರಹಾಸನನ್ನು ಕೊಲ್ಲುವನೋ ! ಅಥವಾ ಬುದ್ಧಿಹೀನನಾಗಿ ನನ್ನಭಿಮತವನ್ನು ತಿಳಿಯದೆ ಸುಮ್ಮನಿರುವನೋ ! ಎಂಬ ಅನುಮಾನದಿಂದ ನಿಂತಕಡೆನಿಲ್ಲದೆ ಬರುತ್ತಿರಲು ಮಧ್ಯಮಾರ್ಗದಲ್ಲಿ ಒಂದು ಸರ್ಪವು ಎದುರಿಗೆ ಬಂದು ಅಯ್ಯಾ ! ಇದುವರೆಗೂ ನಿನ್ನ ಭಂಡಾರದ ಹಣವನ್ನು ಕಾದುಕೊಂಡಿದ್ದೆನು. ಈಗ ನಿನ್ನ ಮಗನಿಂದ ಈ ಭಂಡಾರವು ನಾಶವಾಯಿತು. ಇನ್ನು ನಾನು ಹೊರಡುತ್ತೇನೆ ಎಂದು ಹೇಳಿತು. ಅದನ್ನು ಕೇಳಿ ಜಾಗ್ರತೆಯಾಗಿ ಊರಿಗೆ ಬರುತ್ತ ಭೋರ್ಗರೆಯುತ್ತಿರುವ ಮಂಗಳ ವಾದ್ಯಗಳನ್ನು ಕೇಳಿ, ಇದೇನು ? ಕುಂತಳನಗರದಲ್ಲಿ ಉತ್ಸವದ ಸಂಭ್ರಮವು ಕೇಳಿಬರುತ್ತಿದೆ. ಎಂದು ದಾರಿಗರನ್ನು ಕೇಳಿದನು. ಅವರು ಅಯ್ಯಾ ! ಮಂತ್ರಿಪುತ್ರನಾದ ಮದನನು ತನ್ನ ತಂಗಿಯಾದ ವಿಷಯೆಯನ್ನು ಚಂದ್ರಹಾಸನಿಗೆಕೊಟ್ಟು ಮದುವೆ ಮಾಡಿದನು. ಅದಕಾರಣ ಒಸಗೆ ವಾದ್ಯಗಳು ಮೊಳಗುತ್ತಿರುವುವು ಎಂದು ಹೇಳಿದರು. ಆ ಮಾತನ್ನು ಕೇಳಿದ ಕೂಡಲೆ ದುಷ್ಟಬುದ್ಧಿಗೆ ಕಿವಿಗೆ ಶೂಲವಿಕ್ಕಿದಂತಾಯಿತು. ಕಣ್ಣುಗಳಲ್ಲಿ ನೀರು ಸೋರಿತು. ಕೋಪವು ಹೊರಹೊಮ್ಮಿತು. ಆಹಾ ! ಮಗನಾದ ಮದನನು ನನ್ನ ಮಾತನ್ನು ಮೀರಿದನೇ ! ಎಂದು ಔಡುಕಚ್ಚಿ ಹಲ್ಲುಕಡಿಯುತ್ತ ಅರಮನೆಗೆ ಬರಲು ತಂದೆಯನ್ನು ಕಂಡು ನಮಸ್ಕರಿಸಿದ ಮಗನನ್ನು ಕೆಂಗಿಡಿಯ ಕೋಪದುರಿಯು ಕಣ್ಣುಗಳಿಂದ ನೋಡಿ, ಹರಸಿ ಆಶೀರ್ವದಿಸುವ ಮುತ್ತೈದೆಯರ ಮತ್ತು ಬ್ರಾಹ್ಮಣರನ್ನು ಸತ್ಕರಿಸದೆ ದುಮ್ಮಾನಯುಕ್ತನಾಗಿ ಹೊರಡಲು, ಸರ್ವಾಲಂಕಾರಸುಂದರರಾದ ಮದುವಕ್ಕಳು ಮಣಿದೆರಗಿ ಮುಂಡೆಯಂಬಾಗಿ ನಿಂದಿರುವುದನ್ನು ಕಂಡು ದುಷ್ಟಬುದ್ಧಿಯು ಮನಸ್ಸಿನಲ್ಲಿ ಕೊರಗುತ್ತ ತನ್ನ ಮಗನಾದ ಮದನನ್ನು ಕುರಿತು ಇಂತೆಂದನು:—

ಮದನಾ ! ನೀನು ನನಗೆ ಮಗನಾಗಿ ಹುಟ್ಟಬಹುದೆ ? ನಿನಗಿಂತಲೂ ಮೂಢರಾದವರು ಇನ್ನಾರು ! ಅಯ್ಯೋ ! ನಾನು ರಾಜ್ಯಕಾರ್ಯವನ್ನು ಕುರಿತು ಗೂಢಾರ್ಥದೊಡನೆ ಬರೆದು ಕಳುಹಿಸಿದ ಕಾಗದದ ಮರ್ಯಾದೆಯನ್ನು ತಿಳಿಯದೆ ರೂಢಿಯಾದ ಅರ್ಥವನ್ನು ಮಾಡಿಕೊಂಡು ಕೆಲಸವನ್ನು ಕೆಡಿಸಿದೆಯಲ್ಲಾ ! ಅಸಂಖ್ಯಾತವಾದ ಐಶ್ವರ್ಯವನ್ನು ಕಾಪಾಡಿಕೊಂಡು ಸುಖವಾಗಿ ಬಾಳಲಾರದೆ ದುರ್ಬುದ್ಧಿಯಿಂದ ದುಂದುಗಾರಿಕೆಗೆ ಕೈನೀಡಿ ಕೇಳಿದವರಿಗೆ ಕೋಲಾಹಲವಾಗಿ ದಾನಮಾಡಿ ಬಂಡಾರವನ್ನೆ ಬರಿದುಮಾಡಿದೆಯಲ್ಲ ! ಇನ್ನು ನಿನಗೆ ರಾಜ್ಯವೇ ತಕ್ಕ ? ನೀನು ನಾಡಿಗೊಡೆಯನಾಗಲಾರೆ ! ಕಾಡೇ ನಿನ್ನಭಾಗದ ರಾಜ್ಯ ! ಛೀ ! ಭ್ರಷ್ಟ ನಿನ್ನಮುಖವನ್ನು ನೋಡಲಾರೆ ಹೋಗು ಎಂದು ಗದರಿಸಿದನು. ಆಗ ಮದನನು ಓಹೊ ! ನಮ್ಮತಂದೆಗೆ ಏನೊ ! ಹುಚ್ಚು ಹಿಡಿದಿರಬಹುದು ಆಗಲಿ ! ನಾನು ದುಡುಕಬಾರದು ಎಂದು ಸೈರಿಸಿಕೊಂಡು ಕೈಮುಗಿದು ವಿನಯವಂತನಾಗಿ ಜನಕ ನಿನ್ನ ಅಪ್ಪಣೆಯಂತೆ ನಾನು ಕಾರ್ಯವನ್ನು ಸಾಧಿಸಿದೆನೆಹೊರತು ನಿನ್ನ ಆಜ್ಞೆಯನ್ನೆಂದಿಗೂ ಮೀರಲಿಲ್ಲ. ಪೂರ್ವಕಾಲದಲ್ಲಿ ರಾಮಾದಿಗಳು ತಂದೆಯ ಆಜ್ಞೆಗಾಗಿ ತಮ್ಮ ಸರ್ವಸ್ವವನ್ನು ವೆಚ್ಚಮಾಡಲಿಲ್ಲವೆ ? ಹೀಗಿದ್ದರೂ ಇಂಥ ಉತ್ಸವಕಾಲದಲ್ಲಿ ಸಂತೋಷಭಂಗಕರವಾದ ಇಷ್ಟು ಕೋಪವೇ ತಕ್ಕೆ ? ಕಾರಣವೇನು ? ಇಗೋ ನೀನು ಕಳುಹಿಸಿದ ನಿರೂಪವನ್ನು ನೋಡು ! ಎಂದು ಚಂದ್ರಹಾಸನು ತನ್ನ ಕೈಗೆ ತಂದುಕೊಟ್ಟಿದ್ದ ಕಾಗದವನ್ನು ಮುಂದಿಡಲು ದುಷ್ಟಬುದ್ಧಿಯು ಅದನ್ನು ತೆಗೆದುಕೊಂಡು ಓದಿನೋಡಿ ಅದರಲ್ಲಿ "ವಿಷವನೋಹಿಸುವಂತೆ" ಎಂದಿದ್ದಕಡೆ "ವಿಷಯೆ ಮೋಹಿಸುವಂತೆ ಕೊಡುವುದು" ಎಂದು ತಿದ್ದಿ ಬರೆದಿದ್ದ ಲಿಪಿಯನ್ನು ಕಂಡು ಆಶ್ಚರ್ಯಯುಕ್ತನಾಗಿ ಆಹಾ ! ಲೋಕದಲ್ಲಿ ವಿಧಿವಿಲಾಸವನ್ನು ಮೀರುವುದಕ್ಕೆ ಯಾರಿಂದಲೂ ಆಗದು ಆಹಾ ! ಈ ಒಕ್ಕಣೆಯು ನಾನು ಹೇಳಿದಂತಿಲ್ಲ ಇದು ದೈವವಿಲಾಸವೊ ಅಥವಾ ನನ್ನ ಮರವೆಯೊ ! ಇಲ್ಲದಿದ್ದರೆ ಬರೆದವನ ತಪ್ಪೋ ! ಅಥವಾ ಚಂದ್ರಹಾಸನ ಕೃತಕವೊ ! ಕಾಣೆ ! ಬ್ರಾಹ್ಮಣರ ಮಾತು ಎಂದಿಗೂ ಸುಳ್ಳಾಗಲಾರದು. ಮದನನಲ್ಲಿ ಸ್ವಲ್ಪವೂ ಅಪರಾಧವಿಲ್ಲ ದೈವವಿಲಾಸಕ್ಕೆ ಮರುಗಿ ಪ್ರಯೋಜನವಿಲ್ಲ ! ಈ ಚಂದ್ರಹಾಸನು ಅದೃಷ್ಟಶಾಲಿ ಆದರೂ ನಮ್ಮ ಭಾಗ್ಯಕ್ಕೆ ಹಗೆಯಾದಕಾರಣ ಹೇಗಾದರೂ ಇವನನ್ನು ಕೊಲ್ಲಿಸುವುದೇ ! ಸರಿ ! ಮಗಳು ಮುಂಡೆಯಾದರೆ ಆಗಲಿ ! ಅವಳ ಅದೃಷ್ಟಕ್ಕೆ ನಾವು ಹೊಣೆಯಲ್ಲ ! ನನ್ನ ಗಂಡುಮಕ್ಕಳಿಗೆ ಬರತಕ್ಕ ಭಾಗ್ಯ ಮಾತ್ರ ತಪ್ಪದೆ ಬಂದರೆ ಸಾಕು ! ಅದುವರೆಗೆ ನನಗೆ ಸಮಾಧಾನವೇ ಇಲ್ಲ, ಎಂದು ಅಂದುಕೊಂಡು ಕಪಟಸಂತೋಷದಿಂದ ವಿಷಯೆಯನ್ನೂ ಚಂದ್ರಹಾಸನನ್ನೂ ಆದರಿಸಿ ಅರಮನೆಗೆ ಕಳುಹಿಸಿದನು. ಬಳಿಕ

ಮದುವೆಯ ಕೆಲಸವೆಲ್ಲ ಮುಗಿದು ಉತ್ಸವವಾದ್ಯಗಳು ಒಸಗೆಯೊಡನೆ ಪೂರೈಸಿದಮೇಲೆ ಒಂದಾನೊಂದು ಕಪಟೋಪಾಯವನ್ನು ಯೋಚಿಸಿ ಅಕ್ಕರೆಯಿಂದ ಚಂದ್ರಹಾಸನನ್ನು ಕರೆದು ಎಲೈ ರಾಜೇಂದ್ರನೇ ಇಲ್ಲಿ ಬಾ ! ಇದುವರೆಗೂ ನೀನು ನಮಗೆ ದೂರವಾಗಿದ್ದೆ ಈಗ ನನ್ನ ಮಗಳನ್ನು ಮದುವೆಯಾದಮೇಲೆ ನೀನೂ ನಮ್ಮ ಮನೆಯವನೆ ! ಆದೆ ! ಆದರೆ ನಮ್ಮ ಮನೆತನದ ಹೆಣ್ಣನ್ನು ಮದುವೆಯಾದವನು ಮದುವೆಯ ನಾಲ್ಕನೆಯದಿನ ಸಾಯಂಕಾಲಕ್ಕೆ ಸರಿಯಾಗಿ ಏಕಾಂಗಿಯಾಗಿ ಹೊರಟು ಈ ಊರಿನ ಹೊರವಳಯದಲ್ಲಿರುವ ಕಾಳಿಕಾಂಬೆಯ ದೇವಾಲಯಕ್ಕೆ ಹೋಗಿ ಪೂಜೆಮಾಡಿಸಿಕೊಂಡು ಬರತಕ್ಕ ಪದ್ಧತಿಯುಂಟು ಆದರಂತೆ ನಿನ್ನ ಮದುವೆಯಾಗಿ ಇಂದಿಗೆ ನಾಲ್ಕುದಿನವಾಯಿತು. ಈದಿನ ಸೂರ್ಯ್ಯಾಸ್ತಮಯದೊಳಗಾಗಿ ನೀನು ಕಾಳಿಕಾಲಯಕ್ಕೆ ಹೋಗಿ ಬರಬೇಕು ಎಂದು ಹೇಳಿದನು. ಆದರಂತೆ ಚಂದ್ರಹಾಸನು ಭಕ್ತಿಯುಕ್ತನಾಗಿ ಪೂಜಾಸಾಮಗ್ರಿಗಳನ್ನು ಹವಣಿಸಿಕೊಳ್ಳುತ್ತಿರಲು ದುಷ್ಟಬುದ್ಧಿಯು ಕ್ರೂರರಾದ ಕಟುಕರನ್ನು ಕರೆಸಿ ಅವರಿಗೆ ಬಹುಮಾನವನ್ನು ಕೊಟ್ಟು ನೀವು ಈದಿನಸಾಯಂಕಾಲ ಸೂರ್ಯ್ಯಾಸ್ತಮಯಕ್ಕೆ ಸರಿಯಾಗಿ ನೀವು ಕಾಳಿಕಾಲಯಕ್ಕೆ ಹೋಗಿ ಕಾದುಕೊಂಡಿದ್ದು ಅಲ್ಲಿಗೆ ಬಂದವನನ್ನು ಕೊಂದುಹಾಕಬೇಕು ಇಲ್ಲವಾದರೆ ನಿಮಗೆ ಯಮದಂಡನೆಯಾದೀತು ಎಂದು ಹೇಳಿದನು.

ಚಂಡಾಲರು ಚಂಡಿಕಾಲಯದಲ್ಲಿ ಮದನನನ್ನು ಕೊಂದುದು

ಎಲೈ ಅರ್ಜುನನೆ ! ಮುಂದೆನಡೆದ ಆಶ್ಚರ್‍ಯವನ್ನು ಕೇಳು. ಆಸೆಗೆದಾಸನಾದವನು ಮೋಸದಿಂದ ಮಡಿದು ಬೀಳುವನು. ಕೇಶವನಿಗೆ ದಾಸನಾದವನು ಬಂದ ಕಷ್ಟಗಳನ್ನೆಲ್ಲ ಪರಿಹರಿಸಿಕೊಂಡು ಸುಖವಾಗಿ ಬಾಳುವನು ಎಂಬ ನಾಣ್ಣುಡಿಯು ಲೋಕಪ್ರಸಿದ್ಧವಾಗಿದೆಯಷ್ಟೆ ಈಗ ಹೇಳುವ ಕಥೆಯು ಇದಕ್ಕೆ ನಿದರ್ಶನವಾಗಿದೆ. ಹೇಗೆಂದರೆ ಒಂದಾನೊಂದುದಿನ ಹಠಾತ್ತಾಗಿ ಕುಂತಳರಾಜನು ತನ್ನ ನೆಳಲನ್ನು ತಾನೇ ನೋಡಿದನು ಆಗ ಅವನಿಗೆ ತಲೆಕಾಣಿಸಲಿಲ್ಲ ಮುಂಡಮಾತ್ರ ಕಾಣಿಸಿತು. ಅದನ್ನು ಕಂಡು ಆಶ್ಚರ್‍ಯಯುಕ್ತನಾಗಿ ಗಾಲವನನ್ನು ಕರೆಸಿ, ಎಲೈ ದೈವಜ್ಞನೆ ! ಈದಿನ ನನ್ನ ನೆಳಲು ತಲೆಯಿಲ್ಲದೆ ನನಗೆ ಕಾಣಿಸಿತು. ಇದಕ್ಕೆ ಕಾರಣವೇನು ಎನಲು ಪುರೋಹಿತನು ಸ್ವಾಮಿಾ ! ಇದು ಅಪಶಕುನ ಮರಣಸೂಚಕವಾದ ಚಿಹ್ನೆ ಇನ್ನು ಒಂದು ತಿಂಗಳೊಳಗಾಗಿ ತಮ್ಮ ಆಯುಸ್ಸು ಪೂರ್ಣವಾಗುವುದು ಎಂದನು. ಬಳಿಕ ಕುಂತಳರಾಜನು ! ಹಾಗಾದರೆ ರೋಗರುಜಿನಗಳಿಗೆ ಸಿಕ್ಕಿ ನರಳಿ ಸಾಯುವುದಕ್ಕಿಂತ ಮೊದಲೆ ಜಾಗ್ರತೆಯಾಗಿ ಯೋಗಾಭ್ಯಾಸವನ್ನು ಮಾಡಿ ಪ್ರಾಣವನ್ನು ಬಿಡುವುದೇ ಲೇಸು ! ಅಯ್ಯೋ ! ಹದವಾಗಿ ಹೊಂದಿಕೊಂಡಿರುವ ಈ ರಾಜ್ಯವನ್ನೂ ಮದುವೆಯಿಲ್ಲದ

ನಿಂತಿರುವ ಈ ಮಗಳನ್ನೂ ಯಾರಿಗೆ ಕೊಟ್ಟು ನಾನು ಯೋಗನಿರತನಾಗಿ ಮುಕ್ತನಾಗಲಿ ಹೇಳುವೆಯಾ! ಎಂದು ಕೇಳಿದನು. ಅದಕ್ಕೆ ಗಾಲವನು ಸ್ವಾಮಿ! ವಿಷ್ಣುಭಕ್ತನಾಗಿ ಮಹಾತೇಜಸ್ವಿಯಾಗಿ ಸಚ್ಚಿದಾನಂದವಿಗ್ರಹನಂತೆ ಸುಂದರನಾದ ಚಂದ್ರಹಾಸನಿಗೆ ನಿನ್ನಮಗಳನ್ನೂ ರಾಜ್ಯವನ್ನೂ ಕೊಟ್ಟು ನೀನು ಮುಕ್ತನಾಗಬಹುದು. ಇದಕ್ಕಾಗಿ ಇಷ್ಟೊಂದು ಚಿಂತೆಯೇಕೆ ಎಂದು ಹೇಳಲು ಕುಂತಳರಾಜನು ಪುರೋಹಿತನ ಮಾತಿಗೆ ಸಮ್ಮತಿಸಿ ಹತ್ತಿರದಲ್ಲಿದ್ದ ಮದನನನ್ನು ಕರೆದು ಅಯ್ಯಾ ! ನೀನು ಈಗಲೆ ಹೋಗಿ ಚಂದ್ರಹಾಸನನ್ನು ಕಂಡು ಅವಸರವಾದ ರಾಜಕಾರ್ಯದ ನಿಮಿತ್ತವಾಗಿ ಕುಂತಳರಾಜನು ಈಕ್ಷಣವೆ ನಿನ್ನನ್ನು ಅರಮನೆಗೆ ಬರಹೇಳಿದನು ಎಂದು ಹೇಳಿ ಅವನನ್ನು ಇಲ್ಲಿಗೆ ಕಳುಹಿಸು ಎಂದು ಅಪ್ಪಣೆ ಮಾಡಿದನು. ಬಳಿಕ ರಾಜಾಜ್ಞೆಯಂತೆ ಮದನನು ಕುದುರೆಯನ್ನೇರಿ ಚಂದ್ರಹಾಸನನ್ನು ಹುಡುಕುತ್ತ ಕೋಟೆಯ ಬಾಗಿಲಿಗೆ ಬಂದನು. ಅಷ್ಟುಹೊತ್ತಿಗೆ ಸಾಯಂಕಾಲವಾಗುತ್ತಿರಲು ಚಂದ್ರಹಾಸನು ಕಾಳಿಕಾಂಬೆಯ ಪೂಜೆಗಾಗಿ ಅಣಿಮಾಡಿದ ಮಂಗಳದ್ರವ್ಯ ಫಲಪುಷ್ಪ ತಾಂಬೂಲಗಳಿಂದ ಕೂಡಿದ ತಟ್ಟೆಯನ್ನು ಕೈಲಿ ಹಿಡಿದು ಊರಿನ ಹೊರವಳೆಯದಲ್ಲಿರುವ ಕಾಳಿಕಾಲಯಕ್ಕೆ ಹೊರಡುತ್ತಿದ್ದನು. ಅದನ್ನು ಕಂಡು ಮದನನು ಇದೇನು ! ಭಾವಾ ! ಎಲ್ಲಿಗೆ ಹೊರಟೆ ಸಂಧ್ಯಾಕಾಲವಾಯಿತಲ್ಲ! ಇಷ್ಟುಹೊತ್ತಿನಲ್ಲಿ ಎಲ್ಲಿಗೆ ಪ್ರಯಾಣ ಎಂದು ಕೇಳಲು ಚಂದ್ರಹಾಸನು ಮದನಾ! ನಿಮ್ಮತಂದೆಯ ಅಪ್ಪಣೆಯಂತೆ ನಾನು ಕಾಳಿಕಾಲಯಕ್ಕೆ ಹೊರಟಿರುವೆನು, ವರನಾದವನು ಮದುವೆಯ ನಾಲ್ಕನೆಯದಿನ ಕಾಳಿಕಾಂಬೆಯನ್ನು ಪೂಜಿಸಿಕೊಂಡು ಬರಬೇಕಂತೆ ಇದು ನಿಮ್ಮ ಮನೆತನದ ಪದ್ಧತಿಯಂತೆ ! ಅದಕ್ಕಾಗಿ ನಾನು ಹೋಗುತ್ತಿದೇನೆ ಎನಲು ಮದನನು ಹಾಗೆಮಾಡಬೇಡ ! ರಾಜಕಾರ್ಯವು ಕೆಟ್ಟುಹೋದೀತು, ಕುಂತಳರಾಜನು ಈ ಕ್ಷಣವೇ ನಿನ್ನನ್ನು ಅರಮನೆಗೆ ಬರಹೇಳಿದನು ನಿನ್ನನ್ನು ಅರಮನೆಗೆ ಕಳುಹಿಸುವುದಕ್ಕಾಗಿ ನಾನು ಹುಡುಕಿಕೊಂಡುಬಂದೆ ನೀನುಬೇಗಹೋಗಿ ಕುಂತಳರಾಜನನ್ನು ಕಾಣು! ನಾನು ಈಪೂಜಾದ್ರವ್ಯಗಳನ್ನು ತೆಗೆದುಕೊಂಡು ಕಾಳಿಕಾಲಯಕ್ಕೆ ಹೋಗಿ ದೇವಿಯನ್ನು ಪೂಜಿಸಿ ಬರುತ್ತೇನೆ, ಇಗೋ ! ನನ್ನ ಕುದುರೆಯನ್ನು ತೆಗೆದುಕೊ ! ನಿನ್ನ ಕೈಯಲ್ಲಿರುವ ತಟ್ಟೆಯನ್ನು ಇಲ್ಲಿಕೊಡು ಎಂದು ಹೇಳಿ ಚಂದ್ರಹಾಸನಿಗೆ ಕುದುರೆಯನ್ನೊಪ್ಪಿಸಿ ತಾನು ತಟ್ಟೆಯನ್ನು ತೆಗೆದುಕೊಂಡು ಕಾಳಿಕಾಲಯದಕಡೆಗೆ ಹೊರಟುಬರುತ್ತಿದ್ದನು. ಮುಂದೆ ಸ್ವಲ್ಪ ಹೋಗುವಷ್ಟರಲ್ಲಿಯೇ ತಟ್ಟೆಯು ಉರುಳಿಹೋಯಿತು. ಬೆಕ್ಕುಗಳು ಅಡ್ಡವಾಗಿ ಬಂದವು ಗೂಬೆಗಳು ವಿಕಾರಸ್ವರದಿಂದ ಕೂಗಿದವು, ಕಾಗೆಗಳು ರಕ್ತವನ್ನು ಕಾರಿದವು ಈ ಅಪಶಕುನಗಳನ್ನು ನೋಡಿ ಮದನನು ಮನಸ್ಸಿನಲ್ಲಿ ಭಯಪಟ್ಟು ಕೊರಗುತ್ತ ಹೇಗಾದರೂ ಆಪ್ತಬಂಧುವಾದ ನಮ್ಮ

ಚಂದ್ರಹಾಸನಿಗೆ ಶುಭವಾಗಲಿ ಎಂದು ಹರಸುತ್ತ ಬೇಗಬೇಗನೆ ಬಂದು ಕಾಳಿಕಾಲಯವನ್ನು ಹೊಕ್ಕನು. ಆಗ ಮಂತ್ರಿಯಿಂದಾಜ್ಞಪ್ತರಾಗಿ ಮೊದಲೆ ಅಲ್ಲಿಗೆ ಬಂದುಅಡಗಿಕೊಂಡಿದ್ದ ಕಟುಕರು ನೀಚರಾದ ಪಾಪಾತ್ಮರ ಹೃದಯಾಂತರಾಳದಲ್ಲಿರುವ ವಿವೇಕವನ್ನು ಬಲವಾದ ಅರಿಷಡ್ವರ್ಗಗಳು ಆವರಿಸಿಕೊಂಡು ಮುರಿಯುವಂತೆ ಕಪಟತಂತ್ರವನ್ನರಿಯದೆ ಒಳಹೊಕ್ಕ ಮದನನನ್ನು ಎಡಬಲಗಳಲ್ಲಿ ನಿಂತು ಬೀಸಿದ ಕತ್ತಿಗಳಿಂದ ದಾರುಣವಾಗಿ ಕಡಿದು ಕೆಡವಿದರು. ಮದನನು ಪ್ರಾಣಹೀನನಾಗಿ ಕಡಿವಡೆದು ಭೂಮಿಗೆಬಿದ್ದನು. ಆಗ ಕಟುಕರು ತಮ್ಮ ಕೆಲಸವಾಯಿತೆಂದು ಸಂತೋಷಿಸುತ್ತ ಅಲ್ಲಿ ನಿಲ್ಲದೆ ಪಟ್ಟಕ್ಕೆ ಹೊರಟು ಬಂದರು.

ಚಂದ್ರಹಾಸನಿಗೂ ಚಂಪಕಮಾಲಿನಿಗೂ ಮದುವೆ ಮತ್ತು
ಕುಂತಳರಾಜ್ಯದ ಪಟ್ಟಾಭಿಷೇಕ.

ಇತ್ತ ಚಂದ್ರಹಾಸನು ರಾಜಾಜ್ಞೆಯನ್ನು ನೆನೆದು ಕುದುರೆಯನ್ನೇರಿ ಬೇಗನೆ ಬಂದು ಅರಮನೆಯನ್ನು ಹೊಕ್ಕು ರಾಜನನ್ನು ಕಂಡು ಕೈಮುಗಿದು ನಿಂತುಕೊಂಡನು ! ಆಗ ಕುಂತಳರಾಜನು ಅವನ ವಿನಯಾದಿ ಸದ್ಗುಣಗಳಿಗೂ ರೂಪರೇಖಾಲಾವಣ್ಯಗಳಿಗೂ ಮೆಚ್ಚಿ ತಲೆದೂಗಿ ಅಯ್ಯಾ ! ರಾಜೇಂದ್ರ ನನಗೆ ವಯಸ್ಸಾಯಿತು, ನಾನು ಹೆಚ್ಚುದಿನ ಬದುಕಲಾರೆ, ಮೋಕ್ಷದಾಯಕವಾದ ಯೋಗಮಾರ್ಗವನ್ನು ಅವಲಂಬಿಸಿ ನಾನು ಮುಕ್ತನಾಗಬೇಕಾಗಿದೆ ಆದಕಾರಣ ನೀನು ಪ್ರೌಢೆಯಾಗಿ ಪ್ರಾಪ್ತವಯಸ್ಕಳಾಗಿರುವ ನನ್ನ ಮಗಳು ಚಂಪಕಮಾಲಿನಿಯನ್ನು ಮದುವೆಯಾಗಿ ಈ ರಾಜ್ಯಕ್ಕೆ ಅಧಿಪತಿಯಾಗಿ ನನ್ನ ಅಧಿಕಾರವನ್ನು ನಡೆಸಿಕೊಂಡು ಬರುತ್ತ ಸಂತೋಷದಿಂದ ಸುಖವಾಗಿ ಬಾಳು ! ಎಂದು ಹೇಳಿ ಗಾಂಧರ್ವವಿವಾಹಕ್ರಮದಿಂದ ಚಂಪಕಮಾಲಿನಿಗೂ ಚಂದ್ರಹಾಸನಿಗೂ ಮದುವೆಯನ್ನು ಮಾಡಿಸಿ ಅವರಿಬ್ಬರನ್ನೂ ಸಿಂಹಾಸನದಮೇಲೆ ಕುಳ್ಳಿರಿಸಿ ಗಾಲವನ ಅನುಜ್ಞೆಯಂತೆ ಪಟ್ಟಾಭಿಷೇಕವನ್ನು ಮಾಡಿದನು. ಕೂಡಲೆ ಸಕಲರಾಜ್ಯಾಧಿಕಾರವೂ ಚಂದ್ರಹಾಸನ ವಶವಾಯಿತು ಇದು ಜನರಿಗೆಲ್ಲ ತಿಳಿದು ಲೋಕಪ್ರಸಿದ್ಧವಾಗಲಿ ! ಎಂದು ಗಾಲವನು ಚಂದ್ರಹಾಸನನ್ನೂ ಚಂಪಕಮಾಲಿನಿಯನ್ನು ಆನೆಯಮೇಲೆ ಕುಳ್ಳಿರಿಸಿ ರಾಜಮರ್ಯಾದೆಯೊಡನೆ ಪಟ್ಟಣದಲ್ಲೆಲ್ಲ ಉತ್ಸವಮಾಡಿಕೊಂಡು ಬರಲು ಚಂದ್ರಹಾಸನು ದುಷ್ಟಬುದ್ಧಿಯ ಅರಮನೆಯ ಬಳಿಗೆ ಬಂದು ಆನೆಯಿಂದಿಳಿದು ತನ್ನ ಹೆಂಡತಿಯೊಡನೆ ಮನೆಯನ್ನು ಹೊಕ್ಕು ದುಷ್ಟಬುದ್ಧಿಗೆ ನಮಸ್ಕರಿಸಿ ನಿಂತುಕೊಂಡನು. ಆಗ ದುಷ್ಟಬುದ್ಧಿಯು ಕೋಪದಿಂದ ಕುದಿಯುತ್ತ ಚಂದ್ರಹಾಸನನ್ನು ನೋಡಿ ! ಆಹಾ ! ಚಂದ್ರಹಾಸ ! ನೀನು ಎಂಥ ಕೆಲಸಮಾಡಿದೆ ವಂಶಾಚಾರವನ್ನು ಬಿಡಬಾರದೆಂದು ನಾನು ನಿನ್ನನ್ನು ಕಾಳಿಕಾಲಯಕ್ಕೆ ಕಳುಹಿಸಿದರೆ ನೀನು ಮಾಡಿದ ಕೆಲಸವೇನು ?

ಇದುಸರಿಯೆ ! ಎಂದು ಗರ್ಜಿಸಿದನು, ಅದಕ್ಕೆ ಚಂದ್ರಹಾಸನು ಸ್ವಾಮಿಾ ! ತಮ್ಮ ಅಪ್ಪಣೆಯಂತೆ ನಾನು ಕಾಳಿಕಾಂಬೆಯ ದೇವಸ್ಥಾನಕ್ಕೆ ಹೋಗುತ್ತಿದ್ದೆ ಮಧ್ಯಮಾರ್ಗದಲ್ಲಿ ಮದನನು ನನಗೆ ಅಡ್ಡವಾಗಿ ಬಂದು ಅಯ್ಯಾ! ಚಂದ್ರಹಾಸ! ನಿನ್ನನ್ನು ಅವಸರವಾದ ರಾಜ್ಯಕಾರ್ಯಕ್ಕಾಗಿ ಕುಂತಳರಾಜನು ಈಕ್ಷಣವೆ ಬರಹೇಳಿ ದನು ನೀನು ತಡಮಾಡದೆ ರಾಜನಬಳಿಗೆ ಹೋಗು ! ನಾನು ಕಾಳಿಕಾಲಯಕ್ಕೆ ಹೋಗಿ ಪೂಜೆಮಾಡಿಸಿಕೊಂಡು ಬರುತ್ತೇನೆ, ಎಂದು ಹೇಳಿ ತನ್ನ ಕುದುರೆಯನ್ನು ನನಗೆ ಕೊಟ್ಟು ನನ್ನಕೈಯಲ್ಲಿದ್ದ ಪೂಜೆಯತಟ್ಟೆಯನ್ನು ತಾನು ತೆಗೆದುಕೊಂಡು ಏಕಾಂಗಿಯಾಗಿ ಕಾಳಿಕಾಲಯಕ್ಕೆ ಹೊರಟುಹೋದನು. ಬಳಿಕ ನಾನು ತ್ವರೆ ಯಿಂದ ಅರಮನೆಗೆ ಹೋಗಲು ರಾಜಾಜ್ಞೆಯಂತೆ ನನಗೆ ಈಸ್ಥಿತಿಯುಂಟಾ ಯಿತು, ಬಹಳಹೊತ್ತಾಗಿದ್ದರೂ ಇನ್ನು ಮದನನು ಮನೆಗೆ ಬರಲಿಲ್ಲವೆ ? ಎಂದು ಕೇಳಲು ದುಷ್ಟಬುದ್ಧಿಯ ಧೈರ್ಯವು ಹಾರಿಹೋಗಿ ಎದೆಯೊಡೆದು ಬಾಯಾರಿ ಬಗೆ ಬಗೆಯಾದ ತೊಂದರೆ ಪಡುತ್ತಿದ್ದರೂ ಅದನ್ನು ಹೊರಗೆ ತೋರ್ಪಡಿಸದೆ ಮನಸ್ಸಿ ನಲ್ಲಿಯೆಕೊರಗುತ್ತ ಚಂದ್ರಹಾಸ ಚಂಪಕಮಾಲಿನಿಯರನ್ನು ಸತ್ಕರಿಸಿ ಅರಮನೆಗೆ ಕಳುಹಿಸಿಕೊಟ್ಟು ತನ್ನಲ್ಲಿ ತಾನೇ ಹೀಗೆ ಯೋಚಿಸತೊಡಗಿದನು.

ಆಹಾ! ಪರೋಪಕಾರ ಮಾಡುವುದಕ್ಕೆ ಆಗದಿದ್ದರೂ ಇತರರಿಗೆ ಅಪಕಾರಮಾ ಡಲು ಪ್ರಯತ್ನಿಸುವ ಪ್ರಾಣಹಿಂಸಕರಾದ ಜೀವಿಗಳಿಗೆ ಸುಖವುಂಟೆ ? ಅಯ್ಯೋ ! ದುರ್ಯೋಚನೆಯಿಂದ ನಾನು ಮಾಡಿದ ಉಪಾಯಗಳೇ ನನಗೆ ಅಪಾಯವನ್ನು ತಂದೊಡ್ಡಿದವು ? ಅನ್ಯರನ್ನು ಕೊಲ್ಲಿಸಿ ನನ್ನ ಮಗನನ್ನು ಸುರಕ್ಷಿತವಾಗಿಟ್ಟು ಕೊಂಡು ಬಾಳಬೇಕೆಂಬ ದುರಾಸೆಯಿಂದ ನಾನು ಮಾಡಿದ ಕಾರ್ಯವು ನನ್ನ ಮಗನಿಗೆ ಮೃತ್ಯುವಾಯಿತು. ಚಂದ್ರಹಾಸನಿಗೆ ಮರಣಕ್ಕೆ ಬದಲಾಗಿ ಧರಣಿಯ ಪಟ್ಟವುದೊರೆದು ರಾಜಪುತ್ರಿಯ ಗಂಡನಾಗುವ ಗತಿಯಾಯಿತು ಆಹಾ ! ದೈವವೇ ! ನಿನ್ನ ವಿಲಾಸವನ್ನು ಎಷ್ಟು ಹೇಳಿದರೂ ತೀರದು ? ನಿನ್ನ ಮಹಿ ಮೆಗೆ ಒಳಗಾಗದವರು ಲೋಕದಲ್ಲಿ ಇಲ್ಲ. ನನ್ನ ದುರ್ಬುದ್ಧಿಯಿಂದ ನಾನು ಕೆಟ್ಟೆ. ರಾಜ್ಯಭಾರವಿಲ್ಲದಿದ್ದರೆ ಹೋಗಲಿ ! ಇದ್ದುದನ್ನು ಉಂಡು ಉರುಳಾಡು ವುದಕ್ಕೆ ಮಗನಾದರೂ ಉಳಿದನೆ ? ಅದೂ ಇಲ್ಲ ಇನ್ನು ನನ್ನ ಈ ಹಾಳು ಜನ್ಮ ವನ್ನು ಇಟ್ಟುಕೊಂಡು ಫಲವಿಲ್ಲ ಆಗಲಿ ಕಾಳಿಕಾಲಯಕ್ಕೆ ಹೋಗಿ ನೋಡಿದ ಮೇಲೆ ಮುಂದಿನ ಕೆಲಸವನ್ನು ಯೋಚಿಸುವೆನು ಎಂದು ಹಲವುಬಗೆಯಾಗಿ ಹಂಬ ಲಿಸುತ್ತ ಅರ್ಧರಾತ್ರಿಯಲ್ಲಿ ಯಾರಿಗೂತಿಳಿಯದಂತೆ ಕೋಟೆಯನ್ನುಹತ್ತಿ ಇಳಿದು ಹಳ್ಳಕೊಳ್ಳಗಳನ್ನುಕಾಣದೆ ಕಗ್ಗತ್ತಲೆಯಲ್ಲಿಎಡವಿಬಿದ್ದು ಮುಗ್ಗರಿಸುತ್ತ ಕಲ್ಲುಮು ಳ್ಳುಗಳಿಂದ ಆದ ಗಾಯದಿಂದ ರಕ್ತಸೋರುತ್ತಿದ್ದರೂ ಲಕ್ಷ್ಯಮಾಡದೆ ದುಃಖಭರ ದಿಂದ ಅಬ್ಬರಿಸಿ ಅತ್ತು ಹೊರಳಾಡುತ್ತ ಮೆಲ್ಲಮೆಲ್ಲಗೆ ಕಾಳಿಕಾಲಯದ ಮಾರ್ಗ

ವನ್ನು ಹಿಡಿದುನಡೆದುಕೊಂಡು ಬಂದು ಹತ್ತಿರದಲ್ಲಿದ್ದ ಸ್ಮಶಾನವನ್ನು ಹೊಕ್ಕನು. ಅಲ್ಲಿ ಉರಿಯುತ್ತಿದ್ದ ಒಂದುಕೊಳ್ಳಿಯನ್ನು ಹಿಡಿದುಕೊಂಡು ಅದರ ಬೆಳಕಿನಿಂದ ಅಲ್ಲಿರುವ ಭೂತಭೇತಾಳಾದಿ ಪಿಶಾಚಗಣಗಳಿಗೂ ಕೂಡ ಭಯಂಕರನಾಗಿ ಕಾಣುತ್ತ ಕಡೆಗೆ ಕಾಳಿಕಾಂಬೆಯು ದೇವಸ್ಥಾನವನ್ನು ಪ್ರವೇಶಿಸಿ ಮುಚ್ಚಿದ ಕಣ್ಣುಗಳೂ, ಬಾಡಿದ ಮುಖವೂ, ಬಿಟ್ಟಬಾಯ್ ಮುರಿದ ಮೀಸೆಗಳೂ, ಕತ್ತರಿಸಿದ ಕುತ್ತಿಗೆಯೂ, ರಕ್ತಧಾರೆಯಿಂದ ನೆನೆದುಹೋದ ಉಡಿಗೆಯೂ ಉಳ್ಳವನಾಗಿ ಕಡಿವಡೆದು ಕಾಳಿಕಾಂಬೆಯ ಮುಂದೆ ಬಿದ್ದಿರುವ ಮಗನನ್ನು ಕಂಡು ದುಷ್ಟಬುದ್ಧಿಯು ತನ್ನನ್ನುತಾನೇ ನಿಂದಿಸಿಕೊಳ್ಳುತ್ತ ಹಾ ! ಪುತ್ರ ತಂದೆಯಾದ ನಾನೇ ನಿನಗೆ ಮೃತ್ಯುವಾದೆನೆ ? ಇನ್ನು ನನ್ನ ವಂಶಕ್ಕೆ ದಿಕ್ಕಾರು ? ನನ್ನ ಗತಿಯೇನು ? ತಂದೆ ಬಂದರೂ ಒಂದು ಮಾತನ್ನಾದರೂ ಆಡದೆ ಸುಮ್ಮನಿರಬಹುದೆ ? ಏಳು ಎಂದು ಮೈದಡವಿ ಮುಂಡವನ್ನು ರುಂಡವನ್ನು ಒಟ್ಟಾಗಿ ಸೇರಿಸಿ ಹಿಡಿದು ಮುಖವನ್ನು ಮುದ್ದಿಸಿ ಅಪ್ಪಿ ಆಲಿಂಗಿಸಿಕೊಂಡು ಹಾ ! ಕಂದಾ ! ನನ್ನನ್ನು ಬಿಟ್ಟುಹೋದೆಯಾ ! ಎಂದು ಹಂಬಲಿಸುತ್ತ ಇಗೊ ! ಚಂದ್ರಹಾಸನು ಬಂದನು ಏಳು ತಂಗಿಯನ್ನು ಕೊಟ್ಟು ಮದುವೆಮಾಡು ! ಬ್ರಾಹ್ಮಣರಿಗೆ ಬೇಕಾದ ಹಣವನ್ನು ದಾನಮಾಡಿ ವೈಭವದಿಂದ ಉತ್ಸವವನ್ನು ನೆರವೇರಿಸು ನಾನೇ ದುಷ್ಟಬುದ್ಧಿ ನನ್ನ ಕುತಂತ್ರದಿಂದಲೆ ನೀನು ಸತ್ತೆ ನಿನಗೆನಾನೆ ಮೃತ್ಯುವಾದೆ ! ಅಹಾ ! ಮದನ ನನ್ನಿಂದ ನೀನು ಮಡಿದಕಾರಣ ನೀನಿಲ್ಲದೆ ನಾನು ಬದುಕಿರಬಾರದು ಇದು ನ್ಯಾಯವಲ್ಲ ಎಂದು ಮತ್ತೆ ಹಂಬಲಿಸಿಕೊಂಡು ಅಳುತ್ತ ಕಾಳಿಕಾಲಯದ ಕಲ್ಲುಕಂಬಗಳಿಗೆ ತನ್ನ ತಲೆಯನ್ನು ಬಲವಾಗಿ ಅಪ್ಪಳಿಸಿ ಹೊಡೆಯಲು ತೆಂಗಿನ ಹೋಳಿನಂತೆ ತಲೆಯ ಚಿಪ್ಪು ಒಡೆದು ರಕ್ತ ಸುರಿದು ಪ್ರಾಣವು ಹಾರಿಹೋಯಿತು. ಹೀಗೆ ದುಷ್ಟಬುದ್ಧಿಯುತಾನು ಮಾಡಿದ ಕುತಂತ್ರದಿಂದ ತನ್ನ ಮಗನನ್ನು ಕಳೆದುಕೊಂಡು ಅವನೊಡನೆತಾನೂ ಸತ್ತು ಕಾಳಿಕಾದೇವಿಯ ಮುಂಭಾಗದಲ್ಲಿ ಬಿದ್ದಿದ್ದನು. ಇಂತು ತಂದೆಮಕ್ಕಳಿಬ್ಬರೂ ಕಾಳಿಕಾಲಯದಲ್ಲಿ ಮಡಿದುಬಿದ್ದಿರುವುದು ಪಟ್ಟಣವಾಸಿಗಳಲ್ಲಿ ಯಾರಿಗೂ ತಿಳಿಯದು. ಅಷ್ಟುಹೊತ್ತಿಗೆ ಲೋಕಲೋಚನನಾದ ಸೂರ್ಯನು ಅಧರ್ಮವೆಂಬ ಕತ್ತಲೆಯನ್ನು ಹೊರನೂಂಕಿ ಧರ್ಮವೆಂಬ ಜ್ಯೋತಿಯನ್ನು ಬೆಳಗುತ್ತ ಲೋಕವನ್ನು ಎಚ್ಚರಿಸುವುದಕ್ಕಾಗಿ ಬಂದನೊ ! ಎಂಬಂತೆ ಉದಯರಾಗವು ತಲೆದೋರಿತು. ನಕ್ಷತ್ರಗಳು ಕಂಗೆಟ್ಟವು. ತಾವರೆಗಳಲ್ಲಿ ಸೆರೆಯಾಗಿದ್ದ ಮರಿದುಂಬಿಗಳು ನೆರೆದು ಝೇಂಕರಿಸುತ್ತ ಹೊರಗೆಬಂದವು. ಜನರೆಲ್ಲರೂ ಎಚ್ಚತ್ತು ತಂತಮ್ಮ ನಿತ್ಯಕರ್ಮಗಳನ್ನಾಚರಿಸಲು ಹೊರಟರು. ಆಗ ಕಾಳಿಕಾದೇವಿಯಅರ್ಚಕನು ಪ್ರಾತಃಕಾಲದಲ್ಲಿ ಸ್ನಾನಮಾಡಿ ಶುಚಿರ್ಭೂತನಾಗಿ ಮಡಿಯ

ವಸ್ತ್ರವನ್ನುಟ್ಟು ಆಗತಾನೆ ಅರಳಿದ ಹೊಸಹೂಗಳನ್ನು ತಿರಿದುತಂದು ಪೂಜಾ ದ್ರವ್ಯಗಳನ್ನು ಅಣಿಮಾಡಿಕೊಂಡು ಮನೆಯಿಂದ ಹೊರಟು ಮಂತ್ರವನ್ನು ಜಪಿಸುತ್ತ ಗುಡಿಗೆ ಬಂದು ಬಾಗಿಲನ್ನು ತೆಗೆದು ಒಳಹೊಕ್ಕು ಕಡಿದುಬಿದ್ದಿರುವ ಮದನನನ್ನೂ ಸತ್ತೊರಗಿದ ಮಂತ್ರಿಯನ್ನೂ ಕಂಡು ದಿಗ್ಭ್ರಾಂತನಾಗಿ ಆಹಾ! ಇದೇನು ಆಶ್ಚರ್ಯ! ಇಂಥ ಪಾಪಕಾರ್ಯವೂ ಉಂಟೆ? ನಿನ್ನೆಯರಾತ್ರಿ ಪಟ್ಟಣದಲ್ಲೆಲ್ಲ ಅಧಿಕವಾದ ಮಹೋತ್ಸವವಾಯಿತು! ಚಂಪಕಮಾಲಿನಿ ಚಂದ್ರಹಾಸರಿಗೆ ಮದುವೆಯಾಗಿ ಮೆರವಣಿಗೆಯೂ ನಡೆಯಿತು. ಚಂದ್ರಹಾಸನು ರಾಜ್ಯಕ್ಕೆ ದೊರೆಯಾದನು. ಕುಂತಳರಾಜನು ರಾಜ್ಯವನ್ನು ಅಳಿಯನಿಗೆ ಒಪ್ಪಿಸಿ ತಾನು ವಾನಪ್ರಸ್ಥಾಶ್ರಮಕ್ಕೆ ತೆರಳಿದನು. ಇಂಥ ಸಂತೋಷಕಾಲದಲ್ಲಿ ಯಾರೊ! ದುಷ್ಟರು ಈ ಮಂತ್ರಿಗೂ ಅವನ ಕುಮಾರನಿಗೂ ಎರಡೆಣಿಸಿ ಹೀಗೆ ಕೊಲೆಮಾಡಿದಾರೆ! ಶಿವಶಿವಾ! ಇದನ್ನು ನಾನು ನೋಡಲಾರೆ! ಇನ್ನೇನುಗತಿ ಎಂದು ಭಯದಿಂದ ನಡುಗುತ್ತ ಓಡಿಬಂದು ದೊರೆಯಾದ ಚಂದ್ರಹಾಸನನ್ನು ಕಂಡು ಅವನಿಗೆ ನಡೆದ ಸಂಗತಿಯನ್ನು ಹೇಳಿ ಗಡಗಡನೆ ನಡುಗುತ್ತ ನಿಂತುಕೊಂಡನು. ಚಂದ್ರಹಾಸನು ದುಷ್ಟಬುದ್ಧಿ ಮದನರ ಮರಣವಾರ್ತೆಯನ್ನು ಕೇಳಿ ಥಟ್ಟನೆ ಸಿಂಹಾಸನದಿಂದೆದ್ದು ಮುಂದಿನಾರ್ಬಲದೊಡನೆ ಕಾಳಿಕಾಲಯಕ್ಕೆ ಬಂದು ಅಲ್ಲಿ ಕತ್ತಿಯಗಾಯದಿಂದ ಕಡಿವಡೆದು ಬಿದ್ದಿರುವ ಮದನನನ್ನೂ ಕಲ್ಲುಹಾಯ್ದು ತಲೆಯೊಡೆದು ಬಿದ್ದಿರುವ ಮಂತ್ರಿಯನ್ನು ಕಂಡು ಮರುಗುತ್ತ ಹಾಹಾಕಾರದಿಂದ ಅಳುತ್ತಿರುವ ಅವನ ಬಂಧುಗಳಿಗೆ ಅಭಯವನಿತ್ತು ಓಹೊ! ಸುಮ್ಮನಿರಿ ಹೆದರಬೇಡಿ ಹೇಗಾದರೂಮಾಡಿ ಕಾಳಿಕಾಂಬೆಯ ಪ್ರಸಾದದಿಂದ ಇವರಿಬ್ಬರನ್ನೂ ಬದುಕಿಸಿಕೊಳ್ಳುತ್ತೇನೆ ಹಾಗಿಲ್ಲವಾದರೆ ವಿಷ್ಣುಸಾಯುಜ್ಯವನ್ನು ಪಡೆದ ಮಹಾಭಕ್ತರರೀತಿಯಿಂದ ನಾನೂ ಭಕ್ತಿವಂತನಾಗಿ ಮುಕ್ತಿಯನ್ನು ಸಂಪಾದಿಸುತ್ತೇನೆ ಎಂದು ಸಮಾಧಾನಪಡಿಸಿ, ಪುರೋಹಿತನನ್ನು ಕರೆಸಿಕೊಂಡು ಬ್ರಾಹ್ಮಣಸಮೂಹದೊಡನೆ ಸೇರಿ ಮುಂದಿನ ಕಾರ್ಯವನ್ನು ಮಾಡತೊಡಗಿದನು.

ಬಳಿಕ ಕಾಳಿಕಾಂಬೆಯ ಮುಂಭಾಗದಲ್ಲಿ ವೇದೋಕ್ತಕ್ರಮದಿಂದ ಬಹಿರ್ಯಾಗವಿಧಾನದಲ್ಲಿ ಚತುರಸ್ರವಾದ ವೇದಿಕೆಯನ್ನು ಕಲ್ಪಿಸಿ ಆ ಅಗ್ನಿಕುಂಡದಲ್ಲಿ ವೇದಮಂತ್ರಪುರಸ್ಸರವಾದ ಋಕ್ಕುಗಳಿಂದ ಶೋಭಾಯಮಾನವಾಗಿ ಉರಿಯುವ ಅಗ್ನಿಯನ್ನು ಪ್ರತಿಷ್ಠಿಸಿ ಬಲಿದೀಪಗಳನ್ನು ಸುತ್ತಲೂ ಹಾಕಿ ಮಂತ್ರವನ್ನು ಜಪಿಸುತ್ತ ಆಜ್ಯ ಪಾಯಸ ತಿಲರಾಶಿಗಳಿಂದ ಹೋಮವನ್ನು ಮಾಡುತ್ತ ದೇವಿಯನ್ನು ಮೆಚ್ಚಿಸುವುದಕ್ಕಾಗಿ ಪೂರ್ಣಾಹುತಿಯ ಕಾಲದಲ್ಲಿ ತನ್ನ ಖಡ್ಗದಿಂದ ದೇಹದ ಒಂದೊಂದು ಅಂಗವನ್ನು ಕತ್ತರಿಸಿ "ಕೃಷ್ಣಾರ್ಪಣಮಸ್ತು" ಎಂದು ಹೇಳುತ್ತ ಕಡೆಗೆ ತಲೆಯನ್ನೆ ಕರೆದು ಹೋಮಮಾಡಿ ಪೂರ್ಣಾಹುತಿಗೊಡಬೇ

ಕೆಂದು ತನ್ನ ಶಿರಸ್ಸಿಗೆ ಖಡ್ಗವನ್ನು ಹಾಕಿದನು. ಆಗ ದೇವಿಯು ಇನ್ನು ನಾನು ಸುಮ್ಮನಿದ್ದರೆ ಲೋಕವೆ ಹಾಳಾದೀತು ಕೆಲಸವೂ ಕೆಡುವುದು ಎಂದು ಹೆದರಿ ಜಗ್ಗನೆ ಪೀಠದಿಂದಿಳಿದು ಹಾರಿಬಂದು ಚಂದ್ರಹಾಸನ ಕೈಯನ್ನು ಹಿಡಿದು ಕೊಂಡು ಅಯ್ಯಾ ! ದುಡುಕಬೇಡ ಸ್ವಲ್ಪತಾಳು ನೀನು ಭಕ್ತಾಗ್ರಗಣ್ಯನೇ ಸರಿ! ನಿನ್ನ ಭಕ್ತಿಗೆ ನಾನು ಮೆಚ್ಚಿದೆನು. ಈ ದುಷ್ಟಬುದ್ಧಿಯು ತನ್ನ ಕುತಂತ್ರ ದಿಂದ ತಾನಾಗಿ ಮಡಿದುಬಿದ್ದನು. ಮದನನು ನಿನಗೋಸ್ಕರವಾಗಿ ತನ್ನ ಪ್ರಾಣವನ್ನು ಬಲಿಯಾಗಿ ಕೊಟ್ಟನು. ಇವೆರಡೂ ಸುಳ್ಳಲ್ಲ ! ನಿನ್ನ ಭಕ್ತಿಭಾವಕ್ಕೆ ನಾನು ಮೆಚ್ಚಿ ಪ್ರಸನ್ನಳಾದೆನು. ಇನ್ನು ನಿನಗೆ ಬೇಕಾದ ಎರಡು ವರಗಳನ್ನು ಕೇಳು ನಾನು ಕೊಡಲು ಸಿದ್ಧಳಾಗಿದ್ದೇನೆ ಈ ನಿನ್ನ ಖಡ್ಗವನ್ನು ತೆಗೆ ಎಂದು ಹೇಳಿ ಚಂದ್ರಹಾಸನನ್ನು ಮೈದಡವಿ ಮನ್ನಿಸಿ ಸಮಾಧಾನಪಡಿಸಿದಳು.

ಆಗ ಚಂದ್ರಹಾಸನು ಕಾಳಿಕಾಂಬೆಗೆ ಕೈಮುಗಿದು ಕಾಲ್ಗೆರಗಿ ನಿಂತು ಕೊಂಡು ಅಮ್ಮಾ ! ಸರ್ವಮಂಗಳೆ ! ನೀನು ತ್ರಿಲೋಕಜನನಿ ! ನಿನಗೆಮಿಂಚಿದ ದೈವವೇ ಇಲ್ಲ ! ನಿನ್ನ ಕಟಾಕ್ಷವೊಂದಿದ್ದರೆ ಲೋಕದಲ್ಲಿ ಸರ್ವಸ್ವವೂ ಕೈಗೂಡಿದಂತೆಯೆ ! ಸರಿ ಭಕ್ತವತ್ಸಲೆಯಾದ ನಿನಗೆ ನಾನು ಹೆಚ್ಚಾಗಿ ಹೇಳಬೇಕಾದುದೇನಿದೆ ? ನನ್ನಲ್ಲಿ ನಿನಗೆ ಕರುಣವುಂಟಾಗಿದ್ದರೆ ಜನ್ಮಜನ್ಮಾಂತರದಲ್ಲಿಯೂ ವಿಷ್ಣುಭಕ್ತಿಯು ಅಚ್ಚಳಿಯದಂತೆ ನೆಲೆಯಾಗಿ ನಿಲ್ಲುವುದು ಒಂದು. ನನಗೋಸ್ಕರವಾಗಿ ಪ್ರಾಣವನ್ನು ಅರ್ಪಿಸಿ ಸತ್ತುಬಿದ್ದಿರುವ ಮದನನೂ ಅವನ ತಂದೆಯಾದ ದುಷ್ಟಬುದ್ಧಿಯೂ ಪ್ರಾಣಸಹಿತರಾಗಿ ಬದುಕುವುದು ಮತ್ತೊಂದು ಈ ಎರಡು ವರಗಳನ್ನು ಕೊಟ್ಟರೆ ಸಾಕು ! ಎಂದು ನಮಸ್ಕರಿಸಿದನು. ಬಳಿಕ ಕಾಳಿಕಾಂಬೆಯು ಚಂದ್ರಹಾಸನ ಮನಸ್ಥೈರ್ಯಕ್ಕೆಮೆಚ್ಚಿ ಮೈದಡವಿ ಮುದ್ದಿಸಿ ಅಯ್ಯಾ ! ಲೋಕದಲ್ಲಿ ನಿಶ್ಚಲವಾದ ವಿಷ್ಣುಭಕ್ತಿಯುಳ್ಳವರು ಯಾರೋ ! ಅವರೇ ನನ್ನ ಭಕ್ತರು ನಾನು ಅವರನ್ನು ಪ್ರೀತಿಸುತ್ತೇನೆ ನೀನು ಬಾಲ್ಯದಿಂದಲೂ ವಿಷ್ಣುಭಕ್ತಿಪರಾಯಣನಾಗಿರುವೆ ನಿನ್ನ ಭಕ್ತಿಗೆ ನಾನು ಬಹಳವಾಗಿ ಮೆಚ್ಚಿದೆನು. ಕಲಿಯುಗದಲ್ಲಿ ಭಕ್ತಶಿರೋಮಣಿಯಾದ ನಿನ್ನ ಕಥೆಯನ್ನು ಭಕ್ತಿವಿಶ್ವಾಸಗಳಿಂದ ಯಾರು ಬರೆದು ಓದಿ ಹೇಳಿ ಕೇಳುವರೋ ಅವರಿಗೆ ಸ್ಥಿರವಾದ ವಿಷ್ಣುಭಕ್ತಿಯುಂಟಾಗುವುದು ? ಅಂಥವರೇ ನನ್ನ ಭಕ್ತರು ಅವರಿಗೆ ಕೋರಿದ ಕೋರಿಕೆಗಳೆಲ್ಲ ಕೈಗೂಡುವುವು. ಹೀಗಿರುವಲ್ಲಿ ನಿನ್ನ ಜಯಕೆಗೆ ಬದಲುಂಟೆ ? ಎಂದು ಹೇಳುತ್ತ ಸ್ವಲ್ಪಹೊತ್ತು ಧ್ಯಾನಾರೂಢಳಾಗಿ ಮೌನದಿಂದಿದ್ದು ಕಣ್ದೆರೆಯಲು ಅವಳ ಎದುರಿಗೆ ಶುಭ್ರವಾದ ಕಾಂತಿಯಿಂದ ಶೋಭಿಸುತ್ತಿದ್ದ ವಿಷ್ಣುಶಕ್ತಿಯೊಂದು ಆವಿರ್ಭವಿಸಿತು. ಆಗ ಕಾಳಿಕಾಂಬೆಯು ಚಂದ್ರಹಾಸನನ್ನು ಕರೆದು ಅವನ ಮಸ್ತಕದಮೇಲೆ ತನ್ನ ಹಸ್ತವನ್ನಿಟ್ಟು

ಕರುಣಾಕಟಾಕ್ಷದಿಂದನೋಡಿ ವಿಷ್ಣುಮಂತ್ರವನ್ನು ಅವನಕಿವಿಯಲ್ಲಿ ಉಪದೇಶಿಸಿ ಆ ಶಕ್ತಿಯನ್ನು ಅವನಿಗೆ ಕೊಟ್ಟು ಇನ್ನು ನಿನ್ನ ಕೋರಿಕೆಯು ಕೈಗೂಡಿತು ತ್ರಿಲೋಕವೀರನಾಗಿ ಕೀರ್ತಿಶಾಲಿಯಾಗಿ ಬಾಳು ! ಎಂದು ಹರಿಸಿದಳು.


ಚಂದ್ರಹಾಸ.


ಅರ್ಚಕ.


ಕಾಳಿಕಾದೇವಿ.

ಆಗ ಚಂದ್ರಹಾಸನ ಮುಖವು ಕಳೆಯೇರಿ ಪ್ರಕಾಶಿಸಿತು ಬುದ್ಧಿಯು ಚುರುಕಾಯಿತು ಸಂತೋಷವು ಉಕ್ಕಿ ಹೊರಹೊಮ್ಮಿತು. ಇದರಿಂದ ಸಂತುಷ್ಟನಾಗಿ ಅವನು ಅಂಬೆಯನ್ನು ಕುರಿತು ! ಕೈಮುಗಿದು ಶಾಂಭವಿ ಶಂಭುಮಾಯಾವಿಲಾಸಿನಿ ವಿಷ್ಣುವಕ್ಷಸ್ಥಳನಿವಾಸೆ ಕಾತ್ಯಾಯನಿ ಕಮಲಾಕ್ಷಿ ಕಾಳಿ ಚಂಡಿ ಚಾಮುಂಡೆ ಮಂತ್ರಮೂಲೆ ಸಂಧ್ಯಾಸ್ವರೂಪೆ ಗಾಯತ್ರಿ ನಿಗಮವಂದಿತೆ ಆಗಮಪೂಜಿತೆ ಆರ್ಯೆ ಅನಂತಗುಣಭರಿತೆ ವರದೆ ಕಲ್ಯಾಣಿ ಭಕ್ತವತ್ಸಲೆ ಬ್ರಾಹ್ಮಿ ಮಾಹೇಶ್ವರಿ ಮಹಾಲಕ್ಷ್ಮಿ ಸಾವಿತ್ರಿ ಸತ್ಯಸ್ವರೂಪೆ ನಿರುಪಮಫಲದಾಯಕಿ ದುರಿತವನಕುಠಾರೆ ದುರ್ಜನವಿದಾರೆ ಪುಣ್ಯರೂಪೆ ಪೂರ್ಣಾನಂದೆ ಪರಮಪಾವನೆ ಕವಿಜನಸ್ತುತ್ಯೆ ಕಾಮರೂಪಪ್ರಿಯೆ ಕಲ್ಯಾಣಗುಣಾಭರಣೆ ಕರುಣಾಮಯೆ ಶರಣಾಗತರಕ್ಷಕಿ ಸಲಹುಸಲಹುಎಂದು ಹೊಗಳಿದನು. ಕೂಡಲೆ ದೇವದುಂದುಭಿಗಳು ಮೊಳಗಿದುವು ದೇವತೆಗಳು ಗಗನತಳದಿಂದ ಹೂಮಳೆಯನ್ನು ಕರೆದರು ಮಂಗಳವಾದ್ಯಗಳು ಭೋರ್ಗರೆದುವು. ಆ ಧ್ವನಿಯನ್ನು ಕೇಳಿ ಮದನನೂ ದುಷ್ಟಬುದ್ಧಿಯು ಮಲಗಿದ್ದವರು ಏಳುವಹಾಗೆ ಹೊರಳಾಡಿ ಮೈಮುರಿದರು. ಅವರ ಮುಖದಲ್ಲಿ ಕಾಂತಿಯೇರಿತು ಅಂಗಗಳಲ್ಲಿ ಶಕ್ತಿಯು ಕೂಡಿಕೊಂಡಿತು ಹುಸಿನಗೆಯನ್ನು ಬೀರುತ್ತ ಇಬ್ಬರೂ ಮೇಲಕ್ಕೆ ಎದ್ದು ನಿಂತುಕೊಳ್ಳಲು ಚಂದ್ರಹಾಸನು ದುಷ್ಟಬುದ್ಧಿಗೆ ನಮಸ್ಕರಿಸಿ ಮದನನನ್ನು ಆಲಿಂಗಿಸಿಕೊಂಡು ಸಂತೋಷಭರಿತನಾದನು. ಇದನ್ನು ಕಂಡು ಅಲ್ಲಿದ್ದವರೆಲ್ಲರೂ ಆಹಾ ! ಚಂದ್ರಹಾಸನ ಮಹಿ

ಮೆಯನ್ನು ಏನುಹೇಳಲೀ(ರಾ! ಈ ಗೆಈಕಲಿಯುಗದಲ್ಲಿ ಸತ್ತವರನ್ನು ಮತ್ತೆ ಬದುಕಿಸಿದ ಮಹಿಮರುಂಟೆ ? ಇದು ಹೊಸದು ಇವನು ಲೋಕಪೂಜ್ಯನಾದ ರಾಜನೇ! ಸರಿಎಂದು ಹೊಗಳುತ್ತಿರಲು ತಂತ್ರಜ್ಞನೂ ಮಂತ್ರಶಕ್ತಿವಿಶಾರದನೂ ಆದ ದುಷ್ಟಬುದ್ಧಿಯು ತನ್ನಷ್ಟಕ್ಕೆತಾನೆ ನಾಚಿಕೆಪಟ್ಟು ವಿಷ್ಣುಮಾಯಾವಿಲಾಸವನ್ನು ನೆನೆದು ಸಂತೋಷದಿಂದ ನಲಿಯುತ್ತಿರಲು ಅವರೆಲ್ಲರನ್ನೂ ಕರೆದುಕೊಂಡು ಆನಂದಭರಿತನಾಗಿ ಮಾವಭಾವಂದಿರೊಡನೆ ಪಟ್ಟಣವನ್ನು ಪ್ರವೇಶಿಸಿ ಊರಿಗೆಲ್ಲ ಒಸಗೆಯ ವೈಭವವನ್ನು ವಿಸ್ತರಿಸಿ ತಾನು ಅರಮನೆಯನ್ನು ಹೊಕ್ಕು ತನ್ನ ಮಂತ್ರಿಗಳನ್ನು ಕಳುಹಿಸಿ ಚಂದನಾವತಿಯಲ್ಲಿದ್ದ ಕುಳಿಂದನನ್ನು ಅವನ ಹೆಂಡತಿಯನ್ನೂ ತನ್ನಬಳಿಗೆ ಬರಮಾಡಿಕೊಂಡು, ಸುಖದಿಂದ ಎರಡು ರಾಜ್ಯಗಳನ್ನು ಒಟ್ಟಾಗಿ ಸೇರಿಸಿ ಚಂಪಕಮಾಲಿನಿ ವಿಷಯೆಯರನ್ನು ಲೀಲೆಯಿಂದ ಆಳುತ್ತ ಶ್ರೀದೇವಿ ಭೂದೇವಿಯರ ಸೇವೆಯಿಂದ ಶೋಭಿಸುತ್ತಿರುವ ಮಹಾವಿಷ್ಣುವಿನಂತೆ ತೇಜೋಮಯನಾಗಿ ಆ ಪತ್ನಿಯರಲ್ಲಿ ಪರಮಸಂತೋಷದಿಂದ ವರ್ತಿಸುತ್ತ ರಾಜ್ಯಭಾರ ಮಾಡುತ್ತಿದ್ದನು. ಹೀಗಿರುವಲ್ಲಿ ಕೆಲವುಕಾಲದಮೇಲೆ ಚಂಪಕಮಾಲಿನಿಯ ಬಸುರಿನಲ್ಲಿ ಪದ್ಮಾಕ್ಷನೆಂಬ ಮಗನೂ, ವಿಷಯೆಯ ಬಸುರಿನಲ್ಲಿ ಮಕರಧ್ವಜನೆಂಬ ಮಗನೂ ಹುಟ್ಟಿ ತಂದೆಗಿಂತ ನೂರ್ಮಡಿಯಾದ ಶೌರ್ಯಧೈರ್ಯಗಳುಳ್ಳವರಾಗಿ ವಿಷ್ಣುಭಕ್ತಿಪರಾಯಣರಾಗಿ ಕೀರ್ತಿಯಿಂದ ಬಾಳುತ್ತ ವಿನಯದಿಂದ ತಂದೆತಾಯಿಗಳ ಸೇವೆಯಲ್ಲಿ ನಿರತರಾಗಿ ಪ್ರಖ್ಯಾತರಾಗಿರುವರು. ಇವರಿಗೆ ತಂದೆಯಾದ ಚಂದ್ರಹಾಸನಿಗೆ ಮುನ್ನೂರುವರ್ಷ ವಯಸ್ಸಾಗಿದೆ. ಆದರೂ ಭಕ್ತಿಶ್ರದ್ಧೆಗಳಿಗೆ ಕೊರತೆಯಿಲ್ಲದೆ ಅವನು ಈಗಲೂ ವಿಷ್ಣುಭಕ್ತನಾಗಿಯೆ ರಂಜಿಸುತ್ತಿರುವನು. ಎಲೈ ಅರ್ಜುನನೆ ! ಕೇಳು ಬುದ್ಧಿಯಿಲ್ಲದ ಮಗುವು ಸಾಲಗ್ರಾಮವನ್ನು ಬಾಯಿಯಲ್ಲಿಟ್ಟು ಭಕ್ತಿಯಿಂದ ವಿಷ್ಣುವನ್ನು ಧ್ಯಾನಿಸುತ್ತಿದ್ದ ಮಾತ್ರಕ್ಕೆ ಬಂದ ಕಷ್ಟಗಳೆಲ್ಲ ಬಯಲಾಗಿ ಕಡೆಗೆ ಉತ್ತರೋತ್ತರವಾದ ರಾಜ್ಯಲಾಭವೂ ಶ್ರೇಯಃಪರಂಪರೆಯೂ ಕೈಗೂಡಿತೆನ್ನುವಲ್ಲಿ ಇನ್ನು ಬುದ್ಧಿಪೂರ್ವಕವಾಗಿ ಭಕ್ತಿಯಿಂದ ಪ್ರತಿದಿನವೂ ತಪ್ಪದೆ ಸಾಲಗ್ರಾಮವನ್ನು ಪೂಜಿಸಿ ತೀರ್ಥಪ್ರಾಶನ ಬಲದಿಂದ ವಿಷ್ಣುಕಥಾಲಾಪದಲ್ಲಿ ಕಾಲವನ್ನು ಕಳೆಯುವ ಪುಣ್ಯಾತ್ಮರಿಗೆ ಇನ್ನೆಂಥ ಸುಕೃತಪರಿಪಾಕವುಂಟಾಗುವುದೊ! ಹೇಳಲಾರೆ ! ಅವರಿಗೆ ಸಿದ್ಧಿಸದ ಕಾರ್ಯಗಳೇ ! ಇಲ್ಲವೆಂದು ತ್ರಿಕಾಲಜ್ಞಾನಿಯಾಗಿ ತ್ರಿಲೋಕಸಂಚಾರನಿರತನಾಗಿ, ದೇವರ್ಷಿಗಣಸಂಸ್ತುತನಾಗಿ, ತ್ರಿಗುಣಾತೀತನಾಗಿ ಬ್ರಹ್ಮನ ಮಾನಸಪುತ್ರನೆಂಬ ಪ್ರಖ್ಯಾತಿಯನ್ನು ಪಡೆದಿರುವ ನಾರದಮಹಾಮುನಿಯು ಗಗನತಳದಿಂದವತರಿಸಿ ಕುಂತಳನಗರದ ಬಹಿರುದ್ಯಾನದಲ್ಲಿ ಕುದುರೆಯನ್ನು ಕಾಣದೆ ಹಂಬಲಿಸುತ್ತಿದ್ದ ದೇವಪುರನಿಲಯ ಲಕ್ಷ್ಮೀರಮಣ ಮೈದುನನಾದ ಮಧ್ಯ ಪಾಂಡವನಿಗೆ ಪರಮಭಾಗವತ

ಪುಣ್ಯಾತ್ಮನಾದ ಪುರುಷಶ್ರೇಷ್ಠನಾದ ಪಂಡಿತಪಾಮರ ಪೋಷಕನಾದ ಚಂದ್ರಹಾಸನ ಕಥೆಯನ್ನು ವಿವರಿಸಿ ಹೇಳಲು ಭಕ್ತಶಿರೋಮಣಿಯು ಕಥಾಮೃತವನ್ನು ಪಾನಮಾಡಿ ಅರ್ಜುನನು ಆನಂದಭರಿತನಾದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿನಾಗಶರ್ಮ ಪ್ರಣೀತವಾದ ಜೈಮಿನಿಭಾರತ ಕಥಾ ಸಂಗ್ರಹದಲ್ಲಿ ಮೂವತ್ತೊಂದನೆಯ ಸಂಧಿ ಸಂಪೂರ್ಣಂ. ಶ್ರೀ ಶ್ರೀ ಶ್ರೀ

## ಮೂವತ್ತೆರಡನೆಯ ಸಂಧಿ.

## ಬಕದಾಲ್ಭ್ಯರ ಕಥೆ.

ಕೃಷ್ಣಾರ್ಜುನರು ಬಕದಾಲ್ಭ್ಯರೊಡನೆ ಹಸ್ತಿನಾಪುರಕ್ಕೆ ಬಂದುದು.

ಎಲೈ ಜನಮೇಜಯರಾಯನೇ ಕೇಳು ! ಹೀಗೆ ನಾರದಋಷಿಯು ಅರ್ಜುನನಿಗೆ ಹೇಳಿದ ಕಥೆಯನ್ನು ಕೇಳಿದೆಯಲ್ಲಾ ! ಅನಂತರದಲ್ಲಿ ಸೇನೆಯೊಡನೆ ಕೂಡಿದ ಅರ್ಜುನನ ಯಾಗಾಶ್ವಗಳು ಕುಂತಳನಗರದ ಅಭಿಮುಖವಾಗಿ ನಡೆಯುತ್ತಿರಲು ಮೂರುಲೋಕಗಳನ್ನು ಮುತ್ತುವಂತೆ ಸೇನೆಗಳ ಪದಹತಿಯಿಂದೆದ್ದ ಕೆಂದೂಳಿಯು ಆಗಸವನ್ನು ಮುಚ್ಚಿ ಆವರಿಸಕೊಂಡಿತು. ಬಳಿಕ ತಮ್ಮೂರಿನ ಹೊರವಳಯದಲ್ಲಿ ಸ್ವೇಚ್ಛೆಯಾಗಿ ಸಂಚರಿಸುತ್ತಿರುವ ಕುದುರೆಯನ್ನು ಕಂಡು, ಅದರ ಪಟ್ಟದಲಿಪಿಯನ್ನು ಓದಿಕೊಂಡು ಚರರು ತಮ್ಮ ದೊರೆಗೆ ಹೇಳಲು ಆ ಚಾರಕರ ಮಾತನ್ನು ಲಾಲಿಸಿ, ಚಂದ್ರಹಾಸನ ಮಕ್ಕಳಾದ ಪದ್ಮಾಕ್ಷ ಮಕರಧ್ವಜರಿಬ್ಬರೂ ಆ ಕುದುರೆಗಳನ್ನು ಹಿಡಿದುಕಟ್ಟಿ ತಮ್ಮ ತಂದೆಗೆ ಒಪ್ಪಿಸಿ ನಮಸ್ಕರಮಾಡಿ ಇಂತೆಂದರು:—ಜೀಯಾ ! ಕುಂತೀಪುತ್ರನ ಯಾಗಾಶ್ವಗಳಾದ ಈ ಕುದುರೆಗಳು ಲೋಕಲೋಕಗಳಲ್ಲಿಯೂ ತಿರುಗಿಕೊಂಡು ನಮ್ಮೂರಿಗೆ ಬಂದವು. ನಾವು ಅದನ್ನು ಹಿಡಿದು ಕಟ್ಟಿದೆವು. ಇನ್ನು ಬಿಡಿಸಿಕೊಳ್ಳುವುದಕ್ಕೆ ಬರುವವರನ್ನು ಯುದ್ಧಾಂಗಣದಲ್ಲಿ ನೋಡಬಹುದು ಎನಲು, ಸಂತುಷ್ಟಚಿತ್ತನಾದ ಚಂದ್ರಹಾಸನು ಮಕ್ಕಳನ್ನು ಬಿಗಿದಪ್ಪಿ, ಅಯ್ಯಾ ! ನಾನು ಚಿಕ್ಕಂದಿನಿಂದಲೂ ಯಾವ ದೇವನನ್ನು ಅಕ್ಕರೆಯಿಂದ ಧ್ಯಾನಿಸುತ್ತಿದ್ದೆನೋ ಆ ದೇವದೇವನು ಈದಿನ ಅರ್ಜುನನ ಸಹಾಯಕ್ಕಾಗಿಬಂದು ನಮಗೆ ಪ್ರತ್ಯಕ್ಷನಾಗುವನು. ನಾವು ಪುಣ್ಯವಂತರಾದರೆ ಶ್ರೀಕೃಷ್ಣನ ಸಂದರ್ಶನವು ನಮಗುಂಟಾಗುವುದು. ಹಾಗಾದರೆ ನಮಗೆ ಅದೇ ಸರ್ವಾರ್ಥಸ್ವರೂಪವಾದುದು. ಉಳಿದ ಪುಣ್ಯಕೆಲಸಗಳಿಂದ ಫಲವೇನು ? ಧರ್ಮರಾಯನ ಯಾಗದ ಕುದುರೆಗಳನ್ನು ಕಟ್ಟಿದುದ

ಲಿಂದ ನಮಗಾಗುವ ಪ್ರಯೋಜನವೇನು ? ಹತ್ತುವರೆ ತಿಂಗಳಿಂದಲೂ ಪಾರಿ ಪಾಲಿಸಿರುವ ಈ ಕುದುರೆಗಳನ್ನು ನಾವು ಕಟ್ಟಿಕೊಂಡರೆ ಧರ್ಮಸ್ವರೂಪನಾದ ಯುಧಿಷ್ಠಿರನ ಯಾಗವು ಕೊನೆಗಾಣಲಾರದು. ಯಜ್ಞಾರಂಭಕ್ಕೆ ಇನ್ನು ಮೂರೇ ಪಕ್ಷಗಳು ಉಳಿದಿರುವುವು. ಆದಕಾರಣ ನೀವು ವಿನಯದಿಂದ ಈ ಕುದುರೆಗಳನ್ನು ಅರ್ಜುನನಿಗೊಪ್ಪಿಸಿ, ಯಾಗವು ಪೂರ್ತಿಯಾಗುವವರೆಗೂ ಕುದುರೆಗೆ ಕಾವಲಾಗಿದ್ದು ಧರ್ಮಕಾರ್ಯಕ್ಕೆ ಸಹಾಯಕರಾಗಿರಿ ಎಂದು ಹೇಳಲು ತಂದೆಯ ಅಪ್ಪಣೆಯಂತೆ ಪದ್ಮಾಕ್ಷ ಮಕರಧ್ವಜರಿಬ್ಬರೂ, ಕುದುರೆಗಳನ್ನು ತೆಗೆದುಕೊಂಡು ಅರ್ಜುನನಿಗೆ ಒಪ್ಪಿಸುವುದಕ್ಕಾಗಿ ಚತುರಂಗಬಲದೊಡನೆ ಹೊರಟರು.

ಇತ್ತ ಚಂದ್ರಹಾಸನು ತನ್ನ ಮಕ್ಕಳನ್ನು ಕಳುಹಿಸಿದಬಳಿಕ ತನ್ನ ಮೂಲಬಲದ ಪರಿವಾರದೊಡನೆ ಶ್ರೀಕೃಷ್ಣನ ಸಂದರ್ಶನ ಲೋಲುಪನಾಗಿ ಪುರದ ಬಹಿರುದ್ಯಾನದಲ್ಲಿ ಕಾದುಕೊಂಡಿರಲು ಮೇರೆದಪ್ಪಿದ ಮಹಾಸಮುದ್ರದಂತೆ ಅರ್ಜುನಸೇನೆಯು ಇದಿರಾಗಿ ಬಂದಿತು. ಅದನ್ನು ಕಂಡು ಚಂದ್ರಹಾಸನು ಯುದ್ಧಾಭಿಮುಖನಾಗಿ ನಿಲ್ಲಲು, ಶ್ರೀಹರಿಯು ತನ್ನ ಸೇನಾಜನರನ್ನು ಚಕ್ರವ್ಯೂಹರೂಪದಲ್ಲಿ ನಿಲ್ಲಿಸಿ, ತಾನು ಅರ್ಜುನನಿಗೆ ಸಾರಥಿಯಾಗಿ ಶಂಖಚಕ್ರ ಗದಾಪದ್ಮಶೋಭಿತವಾದ ಚತುರ್ಭುಜಗಳಿಂದೊಪ್ಪುವ ಕಮನೀಯಾಕಾರವನ್ನು ಧರಿಸಿ ಚಂದ್ರಹಾಸನಿಗೆ ಅಭಿಮುಖವಾಗಿ ರಥವನ್ನು ತಂದು ನಿಲ್ಲಿಸಿ ಎಲೈ ಅರ್ಜುನನೇ ! ಭಾಗವತಶಿರೋಮಣಿಯಾದ ಚಂದ್ರಹಾಸನನ್ನು ನೋಡಿದೆಯಾ ? ಎಂದು ಕೇಳಿದನು. ಕೂಡಲೇ ಅರ್ಜುನನು ಮಾಧವಧ್ಯಾನ ಪರಾಯಣತೆಯ ಸಂತೋಷದಿಂದುಬ್ಬುವ ಮುಗುಳ್ನಗೆಯಿಂದಲೂ, ಶ್ರೀವಿಷ್ಣು ಪ್ರಸಾದ ತುಲಸೀಮಾಲೆಯನ್ನು ಮುಡಿದ ವೈಭವದಿಂದಲೂ, ಪರಿಶುದ್ಧವಾದ ಶಿರಸ್ಸಿನೊಡನೊಪ್ಪುವ ಸತ್ವಗುಣದಬೀಡೋ ! ಎನ್ನುವಂತಿರುವ ವಿಷ್ಣುಭಕ್ತನಾದ ಆ ಚಂದ್ರಹಾಸನನ್ನು ಕಣ್ಣಾರೆಕಂಡು ತಾನು ಮಾಡಿದ ಪೂರ್ವಪುಣ್ಯದ ಸುಕೃತದಿಂದೀತನ ದರ್ಶನವಾಯಿತು. ಎಲೈ ದೇವದೇವನೇ ! ಅದು ಹಾಗಿರಲಿ ! ನನ್ನ ವಿಜ್ಞಾಪನೆಯನ್ನು ಲಾಲಿಸು. ಜ್ಞಾನವೃದ್ಧನೂ, ವಯೋವೃದ್ಧನೂ, ತಪೋವೃದ್ಧನೂ ಆದ ಈ ದೊರೆಯನ್ನು ಜಯಿಸುವ ಬಗೆಹೇಗೆ ? ದಯಮಾಡಿ ಹೇಳು ! ಎಂದು ಬೇಡಿಕೊಂಡನು. ಆ ಮಾತನ್ನು ಕೇಳಿ ಶ್ರೀಹರಿಯು ಎಲೈ ಪಾರ್ಥನೇ ! ಇವನು ಬಾಲ್ಯದಿಂದಲೂ ಭಕ್ತಿಯಿಂದ ನನ್ನನ್ನೇ ಧ್ಯಾನಿಸುತ್ತಿರುವುದರಿಂದ ನಾನು ಇವನಿಗೊಲಿದಿರುವೆನು. ಆದಕಾರಣ ನನ್ನ ದಿವ್ಯರೂಪವನ್ನೀತನಿಗೆ ತೋರಿಸುವೆನು ಎಂದು ಹೇಳಿ ವಿರಾಟ್ಸ್ವರೂಪವನ್ನು ಧರಿಸಿ ಶಂಖಚಕ್ರಕೌಮೋದಕೀ ಪದ್ಮಗಳನ್ನು ಕೈಗಳಲ್ಲಿಹಿಡಿದು ಪೀತಾಂಬರವನ್ನುಟ್ಟು ಕೌಸ್ತುಭರತ್ನದೊಡನೆ ಹೊಳೆಯುತ್ತಿರುವ ಆಭರಣಗಳನ್ನು ತಾಳಿ, ಲಾವಣ್ಯ

ಪ್ರವಾಹದಿಂದುಕ್ಕಿ ಹರಿಯುತ್ತಿರುವ ಸರ್ವಾಂಗಸುಂದರವಾದ ನಗೆಮೊಗದ ಹೊಂಗರಿವಿಂದ ಮೂಜಗವನ್ನು ಬೆಳಗುತ್ತ ಅರ್ಜುನನ ರಥಾಗ್ರದಲ್ಲಿ ಕುಳಿತಿದ್ದನು ಶ್ರೀಕೃಷ್ಣನನ್ನು ಕಂಡು ಚಂದ್ರಹಾಸನು ಪುಳಕಿತಸರ್ವಾಂಗಸಂಭ್ರಮನಾಗಿ, ಭಕ್ತಿರಸಪ್ರವಾಹ ಮಧ್ಯದಲ್ಲಿ ತೇಲಾಡುತ್ತ ತನ್ನ ತೇರನ್ನಿಳಿದು ಬೇಗಬೇಗನೆ ಬಂದು, ಕೋಮಲಪದಯುಗಳನಾದ ಶ್ರೀಹರಿಯ ಕಾಲುಗಳನ್ನು ಹಿಡಿದು, ಸಾಷ್ಟಾಂಗಪ್ರಣಾಮವಂಗೈದು, ವಿಧಿಪುರಸ್ಸರವಾಗಿ ಮಣಿಮಣಿದು ನಮಸ್ಕರಿಸುತ್ತಿರಲು, ಭಕ್ತವತ್ಸಲನಾದ ಶ್ರೀಹರಿಯು ಆತನನ್ನು ತೆಗೆದು ಬಿಗಿಯಪ್ಪಿ ಮೈದಡವಿ ಆಲಿಂಗಿಸಿಕೊಂಡು, ಅರ್ಜುನನ ಮುಖವನ್ನು ನೋಡಿ, ಎಲೈ ಪಾರ್ಥನೆ ನನ್ನ ಭಕ್ತನಾಗಿ ಧರ್ಮಮೂರ್ತಿಯೆನಿಸಿಕೊಂಡು, ಧ್ರುವನಿಗೆ ಸಮಾನನಾಗಿ, ಪಾಂಡಿತ್ಯಮಂಡನನನಾಗಿ, ಅತಿಬಲರಲ್ಲಿ ಅಗ್ಗಳೆಯನೆನಿಸಿ, ಧರ್ಮಿಯಾಗಿರುವ ಈ ಚಂದ್ರಹಾಸನನ್ನು ಕಂಡು ಆಲಿಂಗಿಸದೆ ಸುಮ್ಮನಿರಬಹುದೆ ! ಬೇಗನೆ ತಕ್ಕೈಸಿ ತಬ್ಬಿಕೋ ಎಂದನು. ಆ ಮಾತನ್ನು ಕೇಳಿ ಅರ್ಜುನನು ಸ್ವಾಮಿಾ ! ಮನ್ನಿಸಬೇಕು. ನನಗೆ ಭಯವಾಗುತ್ತಿದೆ, ಅನ್ಯರು ಆಲಿಂಗಿಸುವಂತೆ ನಾನೆಂದಿಗೂ ಆಲಿಂಗಿಸಿಕೊಳ್ಳಲಾರೆನು. ನನ್ನ ಮಾರ್ಗವೆ ಬೇರೆ ಭಾರತಯುದ್ಧದಲ್ಲಿ ಆಲಿಂಗನವು ಭಯಾವಹವೆಂದು ಭೀಷ್ಮರು ನನ್ನೊಡನಾಡಿದುದು ಸಹಜವಾಗಿರುವುದು. ಆದಕಾರಣ ಯುದ್ಧವೇ ನನಗೆ ಮುಖ್ಯ ಹಾಗಿಲ್ಲವಾದರೆ ಮುದುಕನಾದ ಈತನಿಗೆ ಬೇಕಾದರೆ ನಮಸ್ಕರಿಸುವೆನು ಎಂದು ಹೇಳಲು ಕೃಷ್ಣಮೂರ್ತಿಯು ಅಯ್ಯಾ ! ನನ್ನ ಶರಣರನ್ನು ಅಪ್ಪಿಕೊಂಡರೆ ಅಪರಾಧವೆ ? ಪೂಜಿಸಿದರೆ ಪಾಪಬರುವುದೆ ? ಸತ್ಕರಿಸಿದರೆ ಸಂಸಾರಬಂಧವಿರುವುದೆ ? ಸದಾ ಭಕ್ತರ ಅಂತರಂಗದಲ್ಲಿಯೇ ನಾನು ಸಂಯುಕ್ತನಾಗಿ ಶೋಭಿಸುತ್ತಿರುವೆನು. ಎಲೈ ಮೂಢನೇ . ನಿನ್ನ ಮರುಳಾಟವನ್ನು ಬಿಡು ಬೇಗನೆ ಈ ಚಂದ್ರಸನನ್ನು ಆಲಿಂಗಿಸು. ಇದರಿಂದ ನಿನಗೆ ಸಹಸ್ರ ಕಾಪಿಲಗೋಧೇನುಗಳನ್ನು ದಾನಮಾಡಿದಷ್ಟು ಫಲವುಂಟು ಎಂದು ತಿಳಿಯಹೇಳಲು ಕುಂತೀಕುಮಾರನು ಆಗ ಚಂದ್ರಹಾಸನನ್ನು ಆಲಿಂಗಿಸಿಕೊಂಡನು. ಬಳಿಕಾ ಚಂದ್ರಹಾಸನು ಅರ್ಜುನನನ್ನು ಬಿಗಿದಪ್ಪಿ ಅಯ್ಯಾ ! ನಾನು ನಿನ್ನಕೂಡೆ ಜಗಳವಾಡಲಾರಂಭಿಸಿದರೆ ಧರ್ಮಾಧ್ವರಕ್ಕೆ ಹಾನಿಬರುವುದೆಂದರಿತು ನನ್ನ ಮಕ್ಕಳನ್ನು ಕುದುರೆಗಳೊಡನೆ ಕಳುಹಿ, ಅಶ್ವರಕ್ಷೆಗಾಗಿ ನಿನ್ನೊಡನೆ ಬರುವಂತೆ ನೇಮಿಸಿರುವೆನು. ಹೆಚ್ಚಾಗಿ ಹೇಳಿ ಫಲವೇನು ? ನಮ್ಮಿಬ್ಬರಿಗೂ ಆಶ್ರಯನಾದ ಶ್ರೀಹರಿಯು ಪ್ರತ್ಯಕ್ಷನಾಗಿರುವಲ್ಲಿ ನಮ್ಮಗಳ ಕರ್ತವ್ಯವೇನಿದೆ? ಎಂದು ಹೇಳಿ ತನ್ನ ಮಕ್ಕಳನ್ನು ಕರೆದು ಕುದುರೆಗಳನೊಪ್ಪಿಸಲು, ಮಕರಧ್ವಜ ಪದ್ಮಾಕ್ಷರು ಅರ್ಜುನನನ್ನು ಕಾಣಿಸಿಕೊಂಡು ಶ್ರೀಹರಿಗೆ ನಮಸ್ಕರಿಸಿದರು. ಹೀಗೆ ಸ್ನೇಹವಾದಬಳಿಕ ಚಂದ್ರಹಾಸನು ಅವ

ರೆಲ್ಲರನ್ನು ನಗರಕ್ಕೆ ಕರೆದುತಂದು ಪಟ್ಟಣವನ್ನು ಸಿಂಗರಿಸಿ, ಮೈಪುಳಕಗಳು ಮೇರೆತಪ್ಪಿದ ಸಮುದ್ರದ ತೆರೆಗಳಂತೆ ಉಬ್ಬುತ್ತಿರಲು ಮಂಗಳಮೂರ್ತಿಯಾದ ಶ್ರೀಹರಿಯನ್ನು ಗಾಲವನೆಂಬ ಪುರೋಹಿತನ ಮೂಲಕ ಪೂಜಿಸಿ, ದುಷ್ಟಬುದ್ಧಿ ಮದನರಿಗೆ ಕೃಷ್ಣಸಂದರ್ಶನವನ್ನು ಮಾಡಿಸಲು, ಅವರು ನಿರ್ಧೂತಕಿಲ್ಬಿಷರಾಗಿ ಕಂಗೊಳಿಸಿದರು.

ಬಳಿಕ ಆ ಪಟ್ಟಣದ ಜನರೆಲ್ಲರೂ ಹರುಷದಿಂದ ಶ್ರೀಹರಿಯ ಸಂದರ್ಶನ ಮಾಡಿ ತೀರ್ಥಪ್ರಸಾದವನ್ನೂ ಸ್ವೀಕರಿಸಿ ಆನಂದಭರಿತರಾಗಿ ಮೋಕ್ಷಭಾಗಿಗಳಾದರು. ಆಗ ಚಂದ್ರಹಾಸನು ತನ್ನ ರಾಜ್ಯವನ್ನು ಸರ್ವಸ್ವದೊಡನೆ ಶ್ರೀಹರಿಯ ಪಾದಗಳಿಗೊಪ್ಪಿಸಿದನು. ಆಹಾ ! ಭಕ್ತವತ್ಸಲನಾದ ಹರಿಗೆ ಅವರಿವರು ಕೊಡುವ ಅಲ್ಪವಸ್ತುಗಳಲ್ಲಿ ಆಸೆಯುಂಟೆ ? ಆತನು ಅರ್ಜುನನ ನಿರೂಪದಂತೆ ಮಕರಧ್ವಜನಿಗೆ ಆ ರಾಜ್ಯವನ್ನು ಕೊಟ್ಟು ಅಲ್ಲಿನ ಉತ್ತಮವಸ್ತುಗಳನ್ನು ಚಾರಕರಮೂಲಕ ಹಸ್ತಿನಾವತಿಗೆ ಕಳುಹಿಸಿ ತಾನು ಮೂರುದಿನಗಳವರೆಗೆ ಆ ಪಟ್ಟಣದಲ್ಲಿದ್ದು ಕುದುರೆಯೊಡನೆ ಹೊರಟನು. ಆಗ ಚಂದ್ರಹಾಸನು ತನ್ನ ಮಗನನ್ನು ಕುರಿತು ಅಪ್ಪಾ ! ನಾನು ಮುದುಕನಾದೆ. ಕೃಷ್ಣದರ್ಶನವಾದಬಳಿಕ ನರರಿಗೆ ಮೋಕ್ಷವಾಗದೆ ಇರಲಾರದು. ಆದಕಾರಣ ಯಾಗಪೂರ್ಣವಾದಬಳಿಕ ನಾನು ನನ್ನ ದೇಹವನ್ನು ಶ್ರೀಹರಿಗೊಪ್ಪಿಸುವೆನು. ನೀನು ಸಂತೋಷಚಿತ್ತನಾಗಿ ಸುಖದಿಂದ ಪ್ರಜೆಗಳನ್ನು ಕಾಪಾಡಿಕೊಂಡಿರು ಎಂದು ಹೇಳಿ ತನ್ನ ಮೂಲಬಲವನ್ನು ತೆಗೆದುಕೊಂಡು ಅರ್ಜುನನೊಡನೆ ಹೊರಟನು. ಬಳಿಕ ಶ್ರೀಹರಿಯು ಚಂದ್ರಹಾಸನನ್ನು ಕುರಿತು ಅಯ್ಯಾ ! ಲೋಕದಲ್ಲಿ ಈ ನಿನ್ನ ಚರಿತ್ರೆಯನ್ನು ಅಕ್ಕರೆಯಿಂದ ಕೇಳುವವರಿಗೆ ಪುತ್ರಸಂಪತ್ತುಗಳೂ, ಆಯುರಾರೋಗ್ಯಭಾಗ್ಯಗಳೂ, ನಿಶ್ಚಲವಾದ ಹರಿಭಕ್ತಿಯೂ ಸ್ಥಿರವಾಗಿರಲಿ ಎಂದು ವರವನ್ನು ಕೊಟ್ಟು, ಅವನೊಡನೆ ಹೊರಟು ಅನೇಕ ದೇಶಗಳನ್ನು ಸುತ್ತಿಕೊಂಡು ಬರುತ್ತಿದ್ದರು.

ಬಳಿಕ ಆ ಕುದುರೆಗಳು ಉತ್ತರದಿಕ್ಕಿಗೆ ಹೊರಟು ಭೂಮಾರ್ಗವನ್ನು ಕಳೆದು ಸಮುದ್ರವನ್ನು ಹೊಕ್ಕು ನಡೆಯಲಾರಂಭಿಸಿದವು. ಅದಕ್ಕೆತಕ್ಕ ಉಪಾಯವನ್ನು ಕಾಣದೆ ಚಿಂತಿಸುತ್ತಿರುವ ಅರ್ಜುನನನ್ನು ಸಂತೈಸಿ ಶ್ರೀಹರಿಯು, ಅರ್ಜುನ, ಮಯೂರಧ್ವಜ, ಮನ್ಮಥ, ಬಭ್ರುವಾಹನ, ಹಂಸಧ್ವಜರು ಗಗನಮಾರ್ಗದಲ್ಲಿ ಸಂಚರಿಸುವ ಶೂರರೆಂದು ತಿಳಿದು ಅವರನ್ನು ಕರೆದುಕೊಂಡು ಹೊರಟು, ಸಮುದ್ರದತೀರದಲ್ಲಿ ಚತುರಂಗಬಲವನ್ನು ನಿಲ್ಲಿಸಿ, ತಾನೂ ಸಮುದ್ರವನ್ನು ಹೊಕ್ಕನು. ಬಳಿಕ ಅರ್ಜುನನ ಕುದುರೆಗಳೆರಡೂ ಸಮುದ್ರದ ನಡುಗಡ್ಡೆಯಲ್ಲಿನ ಒಂದಾನೊಂದು ದ್ವೀಪವನ್ನು ಸೇರಲು, ಅರ್ಜುನಾದಿಗಳೊಡನೆ

ಶ್ರೀಕೃಷ್ಣನೂ ಅರ್ಜುನನೂ ಅಕುವರ್ಣರಕ್ಕೆ ಬಂದನು. ಅಲ್ಲಿ ಯೋಗಾರೂಢನಾಗಿ ಕಣ್ಮುಚ್ಚಿ ಕೊಂಡು ನಶ್ವರವಾದ ಈ ದೇಹವನ್ನು ನಂಬಿರಲಾರೆನೆಂದು ಬಿಸಿಲುಜಳಕ್ಕೆ ಹೆದರಿ ನಾನಾರಂಧ್ರಗಳಿಂದ ಕೂಡಿದೊಂದು ತರಗೆಲೆಯನ್ನು ತಲೆಗೆ ಮರೆಮಾಡಿಕೊಂಡು, ತಪಸ್ಸುಮಾಡುತ್ತಿದ್ದ ಬಕದಾಲ್ಭ್ಯ ಋಷಿಯನ್ನು ಕಂಡು ನಮಸ್ಕರಿಸಿದರು. ಆತನು ಕಣ್ದೆರೆದುನೋಡಿ ಪುರುಷೋತ್ತಮನಾದ ಶ್ರೀಹರಿಯು ಕೃಷಿಕರಾದ ಮಾನವರನ್ನು ಕೂಡಿಕೊಂಡು ಇಲ್ಲಿಗೆ ಬಂದನು. ನನಗಾದರೋ ಈ ಸ್ಥಲದಲ್ಲಿ ನೆಲೆಯಿಲ್ಲ. ಆಯುಸ್ಸೋ ಅಲ್ಪವಾಗಿರುವುದು. ಮುಂದೆ ಇನ್ನೆಂದಿಗೂ ಇಂತಹ ಸುಖವಾಗಲಾರದೆಂದು ಹೇಳಲು ಅದನ್ನು ಕೇಳಿ ಆಶ್ಚರ್ಯಯುಕ್ತನಾಗಿ ಅರ್ಜು ನನು ಬಕದಾಲ್ಭ್ಯಮುನಿಯನ್ನು ಕುರಿತು, ಸ್ವಾಮಿಾ ! ನಿಮ್ಮ ಮೊಳಕಾಲುಗ ಳಲ್ಲಿ ಬೆಳೆದಿರುವ ಕಿಂಶುಕವೃಕ್ಷದಮೇಲೆ ಹಕ್ಕಿಪಕ್ಷಿಗಳು ಗೂಡುಕಟ್ಟಿ ಬಾಳುತ್ತಿ ರುವುವು. ಮೃಗಸಮೂಹವು ಆ ಮರಕ್ಕೆ ತಮ್ಮ ಮೈಯುಜ್ಜಿ ಮೈದೀಂಟೆ ಯನ್ನು ತೀರಿಸಿಕೊಳ್ಳುವುವು ? ತೊಡೆಗಳಬಳಿ ಬೆಳೆದಿರುವ ನಾನಾಛಿದ್ರವಿವರವಿ ರ್ಮಿತವಾದ ಹುತ್ತಗಳಲ್ಲಿ ಸರ್ಪಗಳು ವಾಸಮಾಡಿಕೊಂಡಿರುವುವು. ಸರ್ಪಗಳು ಸಂತೋಷದಿಂದ ನಿಮ್ಮ ಮೈಮೇಲೆ ಓಡಾಡುತ್ತಿರುವುವು. ಶಿವಶಿವಾ ! ಹೀಗಿ ದ್ದರೂ ವಾಸಮಾಡುವುದಕ್ಕೊಂದು ಮನೆಯನ್ನೇಕೆ ಮಾಡಬಾರದು ? ಕೈಯಲ್ಲಿ ಹಿಡಿದಿರುವ ಈ ಎಲೆಯೊಂದರಿಂದ ಫಲವೇನು ? ಎಂದನು. ಬಕದಾಲ್ಭ್ಯನು ಅಯ್ಯಾ ! ಕನ್ಯಾಪರಿಗ್ರಹರೂಪದಿಂದ ಧರಿಸುವ ಗೃಹಸ್ಥಾಶ್ರಮಧರ್ಮವು ದುಃಖಭಾಜನವಲ್ಲವೇ ? ಅಂತಪ್ಪ ಸಂಸಾರದಲ್ಲಿರುವ ಮನುಷ್ಯರು ಗುಣಾಗುಣ ಗಳನ್ನೂ, ಕೃತ್ಯಾಕೃತ್ಯಗಳನ್ನೂ, ಯುಕ್ತಾಯುಕ್ತಗಳನ್ನು ಬಲ್ಲರೆ ? ಹೀಗಿರು ವವರಿಗೆ ಮೋಕ್ಷವು ಕೈಗೂಡುವುದೇ ? ಕ್ಷಣಿಕವಾದ ಸುಖಕ್ಕೆ ಮೋಸಹೋಗಿ ಅಧೋಗತಿಯನ್ನು ಹೊಂದುವರು. ಬಳಿಕ ಜನನಮರಣ ಜರಾದುಃಖಗಳು ಬಂದೊದಗುವುವು. ಅಕಟಕಟಾ ! ಹೆಂಗಳ ಮೋಹದಿಂದ ಭ್ರಾಂತರಾಗಿ ಪ್ರಾಣಿ ಸಮೂಹದವರು ಹುಟ್ಟುಸಾವುಗಳ ತೊಡಕಿಗೆ ಸಿಕ್ಕಿ ಕೆಟ್ಟುಹೋಗುತ್ತಿರುವರು. ಆಹಾ ! ಅದನ್ನು ಏನು ಹೇಳಲಿ ! ಹೆಂಡತಿ ಮಗ ಮೊಮ್ಮಕ್ಕಳನ್ನು ಹೇಗೆ ಸಾಕಲಿ ! ಭೂಮಿ, ಬೆಳೆ, ಬಾಳು, ಐಸಿರಿ, ದನಕರುಗಳನ್ನು ಹೇಗೆ ಸಲಹಲಿ ! ಸಂಪಾದಿಸಿದ ವಸ್ತುಗಳನ್ನು ಚ್ಯುತಿಯಿಲ್ಲದಂತೆ ಆರೈವ ಮಾರ್ಗವಾವುದು. ವೇದ ಶಾಸ್ತ್ರ ಪುರಾಣಾದಿಗಳನ್ನೋದಿ ಎಂತು ನನ್ನ ಜನ್ಮವನ್ನು ಸಾರ್ಥಕಗೊಳಿಸಿ ಕೊಳ್ಳಲಿ ! ಎಂಬ ಚಿಂತೆಗಳಿಗೆ ವಶನಾಗಿ ಧರ್ಮಮಾರ್ಗವನ್ನು ತೊರೆದು ಆಸೆಯೆಂಬ ಹಗ್ಗದಿಂದ ಬಿಗಿವಡೆದು ಈ ಪ್ರಪಂಚವು ನಾಶವಾಗುತ್ತಿರುವು ದಲ್ಲಾ ! ಆದಕಾರಣ ಹೆಂಡತಿಮಕ್ಕಳನ್ನೂ ಆಶ್ರಮ ಪರ್ಣಶಾಲೆಗಳನ್ನೂ ತೊರೆದು, ಈಗಲೋ ಇನ್ನಾವಕಾಲದಲ್ಲೋ ಬಿದ್ದುಹೋಗುವ ನಶ್ವರವಾದ ಈ

ದೇಹವನ್ನು ಹೇಗೆ ಕಾಪಾಡಿದರೆ ಏನು ? ಎಂದು ತಿಳಿದು ತಲೆಗೆ ತರಗೆಲೆಯನ್ನು ಮರೆಮಾಡಿಕೊಂಡು ಹೊತ್ತುಗಳೆಯುತ್ತಿರುವೆನು ಎಂದು ಹೇಳಲು, ಆಶ್ಚರ್ಯ ಯುಕ್ತನಾದ ಅರ್ಜುನನು ಶಿವಶಿವಾ ! ನಿಮ್ಮಂಥ ಮಹಾತ್ಮರಿಗೆ ಅಲ್ಪಾಯುಷ್ಯ ವಾಗಲು ಕಾರಣವೇನು ? ಈ ತರಗೆಲೆಯು ಎಂದಿನಿಂದ ನಿಮ್ಮ ತಲೆಗೆ ಮರೆಯಾಗಿದೆ ಎಂದು ಬೆಸಗೊಳಲು ಋಷಿವರ್ಯನು ಇಂತೆಂದನು.

ಅಯ್ಯಾ ! ಬಹು ಸ್ವಲ್ಪವಾಗಿ ಮಾರ್ಕಂಡೇಯ ರೋಮಶರೆಂಬವರು ಬೇರೆಬೇರೆ ಗೊತ್ತಿಲ್ಲದಷ್ಟು ಜನರು ಹುಟ್ಟಿ ಸತ್ತರು. ಸತ್ಯಲೋಕವನ್ನು ಆಳಿದ ಚತುರ್ಮುಖರು ಇಪ್ಪತ್ತು ಜನ ಇದುವರೆಗೆ ಸತ್ತೊರಗಿದರು. ಮಹಾಪ್ರಳಯದಲ್ಲಿ ವಾರಿಯೇ ಸರ್ವಲೋಕಗಳನ್ನು ಆವರಿಸುವುದರಿಂದ ಮನೆಮಠಗಳು ನಿಲ್ಲಲಾರವೆಂದರಿತು ಈ ಬಯಲಿನಲ್ಲಿ ಕುಳಿತಿರುವೆನು. ಹೀಗೆ ಪ್ರತಿಯೊಂದು ಸಾರಿಗೂ ಆಗುವ ಜಲಪ್ರಳಯದಲ್ಲಿ ಅನೇಕಾನೇಕ ರೆಂಬೆಕೊಂಬೆಗಳಿಂದ ಚಿಗುರಿಡುದು ಹೊಳೆಯುವ ಒಂದಾಲದಮರವು ಕಾಣಿಸುವುದು. ಆ ಮರದ ಒಂದೆಲೆಯಮೇಲೆ ತನ್ನ ಕಾಲುಬೆರಲನ್ನು ಕೈದಾವರೆಯಲ್ಲಿ ಹಿಡಿದು, ಮುಖಪಂಕಜದಲ್ಲಿಟ್ಟುಕೊಂಡು ಆಳುತ್ತಲೂ ನಗುತ್ತಲೂ ಮಲಗಿದ್ದ ಬಾಲಕನೊಬ್ಬನನ್ನು ಕಂಡೆನು. ಆ ಕಾಲದಲ್ಲಿ ಮಗುವಾಗಿ ವಟಪತ್ರದಲ್ಲಿ ಶಯನಿಸಿದ್ದ ಶ್ರೀಹರಿಯು ಇದುವರೆಗೂ ದೂರದೂರದಲ್ಲಿದ್ದು ಈ ದಿನ ನಿಮ್ಮೈವರನ್ನು ಕರೆದುಕೊಂಡು ಇಲ್ಲಿಗೆ ಬಂದಿರುವನು. ಆದುದರಿಂದ ನಾನು ಧನ್ಯನಾದೆನು. ನನ್ನ ಕೋರಿಕೆಯು ಕೈಗೂಡಿತು. ಇವನನ್ನು ಮರೆಹೊಗುವೆನು ಎಂದು ಹೇಳಿ ಕೃಷ್ಣನನ್ನು ನೋಡಿ ನಸುನಕ್ಕು ನಮಸ್ಕರಿಸಿ, ಎಲೈ ಜಗನ್ಮಯನಾದ ಶ್ರೀಹರಿಯೇ ! ನೀನು ಆಲದೆಲೆಯಮೇಲೆ ಬಾಲಲೀಲೆಯನ್ನು ತೋರಿಸಿದಪರಿಯನ್ನು ಬಿಟ್ಟು ಲಕ್ಷ್ಮೀಕಾಂತನಾಗಿ ಲೋಕತ್ರಯವನ್ನು ಪಾಲಿಸುವ ಪವಿತ್ರವಾದ ರೂಪವನ್ನು ತೋರಿಸಿದ ಹೊರತು ನಾನು ನಿನ್ನನ್ನು ಬಿಡುವುದಿಲ್ಲ ಎಂದು ನುಡಿದು, ಶ್ರೀಕೃಷ್ಣಮೂರ್ತಿಯನ್ನು ಅಕ್ಕರೆಯಿಂದಾಲಿಂಗಿಸಿಕೊಂಡು, ಅರ್ಜುನನನ್ನು ಕುರಿತು ಅಯ್ಯಾ ! ನಮಗೆ ಮನೆಯಿಲ್ಲವಾಗಿ ಸದಾ ವಾಸಕ್ಕೆ ಇವನ ದೇಹವೇ ನನ್ನಮನೆ. ಆ ಮನೆಯಲ್ಲಿರುವುದಕ್ಕೆ ಅನುಕೂಲೆಯಾದ ಹೆಂಡತಿ ಮುಕ್ತಿಕಾಂತೆ. ಇವುಹೊರತಾಗಿ ಬೇರೆಮನೆ ಮಡದಿಗಳಿಲ್ಲವಾದುದರಿಂದ ಇದುವರೆಗೂ ನಾನು ತಲೆಗೆ ತರಗೆಲೆಯನ್ನು ಹಿಡಿದುಕೊಂಡಿದ್ದೆನೆಂದು ಹೇಳಿದನು.

ಬಳಿಕ ಅರ್ಜುನನು ಸ್ವಾಮಿಾ ! ಇಪ್ಪತ್ತು ಬ್ರಹ್ಮಪಟ್ಟವನ್ನು ನೋಡಿದ ನಿಮಗೆ ಗುರುತ್ವವು ಸಲ್ಲದೆ ? ಮಹಾಪುರುಷರು ಇಷ್ಟೊಂದು ದಿನಗಳು ಬದುಕಿರುವುದು ಆಶ್ಚರ್ಯವಲ್ಲವೆ ? ಶಿವಶಿವಾ ! ಲೋಕದಲ್ಲಿ ನಮ್ಮೆಲ್ಲರಿಗೂ ನೀವೇ ಗುರುಗಳು ನಮ್ಮಪರಾಧವನ್ನು ಮನ್ನಿಸಿ, ಧರ್ಮರಾಯನ ಯಾಗವು ಪೂರ್ತಿ

ಯಾಗುವಂತೆ ಮಾಡಬೇಕೆಂದು ಬೇಡಿಕೊಳಲು ಬಕದಾಲ್ಭ್ಯನು ಅಯ್ಯಾ ! ಸರ್ವತಂತ್ರ ಸ್ವತಂತ್ರಿಯಾದ ಶ್ರೀಹರಿಯು ಎದುರಾಗಿರುವಲ್ಲಿ ಗರ್ವಭಾವವನ್ನು ನಮಗೆ ವಹಿಸಬೇಡ ! ಸರ್ವಕ್ಕೂ ಮೂಲನಾದವನು ಈ ಹರಿಯಲ್ಲದೆ ಮತ್ತಾರೂ ಇಲ್ಲ. ಆದರೆ ನಾನು ಹೇಳುವ ಸಂಗತಿಯನ್ನು ಕೇಳು. ಮಹಾಪ್ರಳಯದಲ್ಲಿ ಪದ್ಮಾಭಿದಾನದಿಂದ ಹೊಳೆಯುವ ಚತುರ್ಮುಖಬ್ರಹ್ಮನು ಹಂಸಾರೂಢನಾಗಿ ಬಂದು, ಈ ನನ್ನ ಕುಹರವನ್ನುಸೇರಿ ನನ್ನೆದುರಿಗೆ ನಿಂತು ಅಯ್ಯಾ ಬ್ರಾಹ್ಮಣಾ ! ನೀನು ಯಾರು ? ತಪಸ್ಸಂಗೆಯಲು ಕಾರಣವೇನು ? ನಿನ್ನ ಮನಸ್ಸಿನ ಬಯಕೆ ಏನು ಹೇಳು ? ಇಗೋ ನಾನೆ ಬ್ರಹ್ಮದೇವರು ಬಂದಿರುವೆನು ಎಂದು ಹೇಳಿದನು. ನಿನ್ನಂತ ಹಲವುಜನ ಬ್ರಹ್ಮರನ್ನು ನಾನು ಕಂಡಿರುವೆನು. ಹೊರಡು ಎಂದು ಆತನನ್ನು ಧಿಕ್ಕರಿಸಿ ಗದರಿಸಿದೆನು. ಅದನ್ನು ಕೇಳಿ ಆತನು ಮುನಿದು ಆಹಾ ! ಹಾಗಾದರೆ ನೀನು ನೋಡಿದ ಬ್ರಹ್ಮರನ್ನು ತೋರಿಸು ಎಂದು ಗದರಿಸಿದನು, ಅಷ್ಟುಹೊತ್ತಿಗೊಂದು ಕಾಲವಮಾರುತವುಬೀಸಿ ನಮ್ಮಿಬ್ಬರನ್ನು ಎಂಟು ಮುಖದ ಬ್ರಹ್ಮನಲೋಕಕ್ಕೆ ಕರೆದುಕೊಂಡು ಹೋಯಿತು. ಆತನು ನಮ್ಮನ್ನು ಕಂಡು ಇದಿಗೊಂಡು ನೀವಾರು ಇಲ್ಲಿಗೆ ಬರಲು ಕಾರಣವೇನೆಂದು ಪ್ರಶ್ನೆಮಾಡಲು, ನಾನು ಚತುರ್ಮುಖಬ್ರಹ್ಮನು. ಈ ಯತಿಯು ನನ್ನ ಶಿಷ್ಯನು. ಇವನಿಗೆ ಬಕದಾಲ್ಭ್ಯನೆಂದು ಹೆಸರು ಎಂಬದಾಗಿ ಚತುರ್ಮುಖಬ್ರಹ್ಮನು ಹೇಳಿದನು. ಅದನ್ನುಕೇಳಿ ಎಂಟುಮುಖದ ಬ್ರಹ್ಮನು ಮಹಾರೋಷದಿಂದ ನಮ್ಮನ್ನು ಗಹಗಹಿಸಿ ಹಾಸ್ಯಮಾಡುತ್ತ ಅಯ್ಯಾ ! ನಿಮ್ಮಂತಹ ವಟುಗಳು ನಮ್ಮೂರಿನವರ ಊಳಿಗದಲ್ಲಿ ಲಕ್ಷೋಪಲಕ್ಷರಾಗಿರುವರೆಂದು ನುಡಿದನು. ಅಷ್ಟರಲ್ಲೇ ಮತ್ತೊಂದು ಸುಳಿಗಾಳಿಯು ಸುಳಿದಾಡಿ ನಮ್ಮೆಲ್ಲರನ್ನು ಹೊತ್ತುಕೊಂಡು ಅಂತರಿಕ್ಷವನ್ನು ಹತ್ತಿ ಹದಿನಾರುಮುಖದ ಬ್ರಹ್ಮನಲೋಕಕ್ಕೆಳೆದುಕೊಂಡು ಹೋಯಿತು, ಅಲ್ಲಿದ್ದ ಪುಣ್ಯರೂಪಿಗಳು ನಮ್ಮನ್ನು ಕಂಡು ಇವರೆಂತಹ ವಿಕಾರಸ್ವರೂಪಿಗಳೆಂದು ಹಾಸ್ಯಮಾಡುತ್ತಿದ್ದರು. ಬಳಿಕ ನಾವು ಹದಿನಾರುಮುಖದ ಬ್ರಹ್ಮನನ್ನು ಕಂಡು ಭಕ್ತಿಯಿಂದಾತನಿಗೆರಗಿ ನಮಸ್ಕರಿಸಿದರೂ ಗರ್ವದಿಂದಾತನು ನಮ್ಮನ್ನು ಲಕ್ಷೀಕರಿಸದೆ ಕಡೆಗಣಿಸಿದನು. ಆದುದರಿಂದ ನಾವು ಹೆದರಿ ತಲ್ಲಣಿಸುತ್ತಿರಲು, ಅವನ ಸೇವಕರು ನೀವಾರು ಇಲ್ಲಿಗೆಬರಲು ಕಾರಣವೇನೆಂದು ಕೇಳಿದರು. ನಾವು ಅಷ್ಟಮುಖ ಚತುರ್ವದನ ಬಕದಾಲ್ಭ್ಯರೆಂದು ನುಡಿದು ನಮ್ಮ ಚರಿತ್ರೆಯನ್ನು ತಿಳಿಸಲು ಷೋಡಶಮುಖನು ನಗುನಗುತ್ತ ನಮ್ಮನ್ನು ಹಾಸ್ಯಮಾಡುತ್ತಿರಲು, ಮತ್ತೊಂದು ಮಹಾವಾಯುವು ಮೇಲ್ವಾಯು ನಮ್ಮೆಲ್ಲರನ್ನು ರಭಸದಿಂದೆತ್ತಿಕೊಂಡು ಮೂವತ್ತೆರಡು ಮುಖದ ಬ್ರಹ್ಮನ ಲೋಕಕ್ಕೆ ಹೋಯಿತು, ಆತನು ನಮ್ಮನ್ನು ಕಂಡು ಅತ್ಯುಪಚಾರದಿಂದ ಸನ್ಮಾ

ನಿಸಿ, ಅಯ್ಯಾ ! ಸೂರ್ಯನಮುಂದೆ ಸುಳಿದಾಡುವ ಮಿಂಚುಹುಳುಗಳಿಗೆ ಸಮಾನರಾದ ನೀವು ಇಲ್ಲಿಗೆಬರಲು ಕಾರಣವೇನು ? ಎನಲು ಅದಕ್ಕೆತಕ್ಕ ಉತ್ತರವನ್ನು ನಾವು ಹೇಳುವಷ್ಟರಲ್ಲಿಯೇ ಸುಂಟರಗಾಳಿಯೊಂದು ಸುಳಿದು ನಮ್ಮಗಳನ್ನು ಬಲಾತ್ಕಾರದಿಂದೆತ್ತಿ ಆಕಾಶಕ್ಕೆ ಹಾರಿಸಿ, ಅರವತ್ತುನಾಲ್ಕುಮುಖದ ಬ್ರಹ್ಮನ ಲೋಕವನ್ನು ಸೇರಿ, ಆತನಮುಂದೆ ನಮ್ಮನ್ನು ನಿಲ್ಲಿಸಿತು. ಹೀಗೆ ದ್ವಿಗುಣೀಕೃತವಾದ ಮುಖಗಳುಳ್ಳ ಬ್ರಹ್ಮರ ಲೋಕಂಗಳನ್ನು ನಾವು ಬಹಳವಾಗಿ ನೋಡಿದಬಳಿಕ ಸಾವಿರಮುಖದ ಬ್ರಹ್ಮನಲೋಕಕ್ಕೆ ಹೋಗಿ ಕೋಟಿಸೂರ್ಯಪ್ರಕಾಶನಾಗಿ ಸಮಸ್ತದೇವತತಿ ಸುರಮುನಿ ಗರುಡಗಂಧರ್ವ ಸಿದ್ಧಿಸಾಧ್ಯರುಗಳಿಂದ ಸೇವಿತನಾದ ಸಹಸ್ರಮುಖನನ್ನು ಕಂಡು ಭಕ್ತಿಯಿಂದಾತನಿಗೆ ನಮಸ್ಕರಿಸಲು, ನಮ್ಮೆಲ್ಲರನ್ನು ಬಹುಪ್ರೀತಿಯಿಂದ ಆದರಿಸಿ, ಅಕ್ಕರೆಯಿಂದ ತಕ್ಕೈಸಿ, ಕಂದಗಳಿರಾ ! ಬಹಳವಾಗಿ ಬಳಲಿದಿರಿ, ನಿಮ್ಮಗಳಿಂದಲೆ ನನಗೆ ಸರ್ವದಾ ಸಂತೋಷವಾಗುವುದು. ನಿಮ್ಮ ಪ್ರಾಣಗಳೇ ನನಗೆ ಜೀವನ. ನಿಮ್ಮ ಸುಖವೇ ನನ್ನ ಸುಖ. ನೀವೇನಾನಲ್ಲದೆ ಅನ್ಯರಾರೂ ಇಲ್ಲ. ವ್ಯರ್ಥವಾಗಿ ಗರ್ವದಿಂದ ಬಳಲಿದಿರಲ್ಲಾ ! ಎಂದು ಸಂತೈಸಿ, ನಿಗರ್ವಿಕೆಯಿಂದ ನಮ್ಮಗಳನ್ನು ಸಮಾಧಾನಮಾಡಲು, ಕನಸು ಕಂಡಹಾಗೆ ನಾವೆಲ್ಲರೂ ನಮ್ಮನಮ್ಮ ಸ್ಥಾನಗಳಿಗೆ ಬಂದು ಸುಖವಾಗಿದ್ದೆವು. ಎಲೈ ಪಾರ್ಥನೇ ! ಆದಕಾರಣ ತಿಳಿವವರು ಗರ್ವಪಡಬಾರದು. ಮೊದಲು ನನಗೆ ಸಹಸ್ರಮುಖದಿಂದ ದರ್ಶನಕೊಟ್ಟ ಮಹಾಪುರುಷನೂ ಸಮುದ್ರ ಮಧ್ಯದಲ್ಲಿ ವಟಪತ್ರಶಾಯಿಯಾಗಿ ಮಹಾಪ್ರಳಯದಲ್ಲಿ ಏಕರೂಪದಿಂದಿರುವ ಮೂಲಪುರುಷನಾದ ಶ್ರೀಧವನು ನನ್ನ ಪೂರ್ವಪುಣ್ಯದಿಂದ ಈ ದಿನ ದರ್ಶನ ಕೊಟ್ಟನು. ನಾನು ಧನ್ಯನಾದೆನು ಎಂದು ಹೇಳಲು ಅರ್ಜುನಾದಿಗಳು ಆತನ ಮಾತುಗಳನ್ನು ಲಾಲಿಸಿ ಆದರಿಸಿದರು. ಇದಾದಮೇಲೆ ಶ್ರೀಕೃಷ್ಣನು ಬಕದಾಲ್ಭ್ಯಮುನಿಯನ್ನು ಸಂತೈಸಿ, ಧರ್ಮಾರ್ಥ್ಯರಕ್ಕೆ ಬರಲೊಡಂಬಡಿಸಿ ಅವರೆಲ್ಲರನ್ನೂ ಕೂಡಿಕೊಂಡು ಸಮುದ್ರದ ದಡವನ್ನುಸೇರಿ ಸಿಬಿಕಾರೋಹಣಂಗೈದು ತಂತಮ್ಮ ಸೇನಾಮುಖದೊಡನೆ ನಡೆದುಬರುತ್ತಿರಲು, ಅರ್ಜುನನ ಯಾಗಾಶ್ವವು ಚತುರಂಗಬಲದೊಡನೆ ಸಿಂಧುದೇಶದ ಮೇಲೆ ಹೊರಟು ಸೈಂಧವನ ಪಟ್ಟಣಕ್ಕೆ ನಡೆತಂದಿತು.

ಕೇಳೈ ಜನಮೇಜಯರಾಯನೇ ! ಜಯದ್ರಥನ ಹೆಂಡತಿಯಾದ ದುಶ್ಶಳೆಯು ಅರ್ಜುನನನ್ನು ಕೂಡಿಕೊಂಡು ಶ್ರೀಹರಿಯು ಚತುರಂಗಬಲದೊಡನೆ ತನ್ನ ಪಟ್ಟಣಕ್ಕೆ ಬರುವನೆಂಬ ವಾರ್ತೆಯನ್ನು ಕೇಳಿ, ಏಕಪುತ್ರನನ್ನು ಕಟ್ಟಿಕೊಂಡು ಪತಿದುಃಖದಿಂದವ್ಯಥಿಸುತ್ತಿರುವ ನನಗೆಮೃತ್ಯುರೂಪನಾಗಿ ನನ್ನ ಗಂಡನನ್ನು ಕೊಂದ ಹಗೆಯಾದ ಅರ್ಜುನನು ಬರುತ್ತಿರುವನಲ್ಲಾ ! ಎಂದು ಬೆಮರಿ

ಹನ್ನೈಸಿದಳು. ಮಂತ್ರಿಗಳ ಮಂತಣವು ಕುಂದಿತು. ಪುರಜನರು ಬಹಳವಾಗಿ ಕೊರಗಿದರು. ಬಳಿಕ ದುಶ್ಶಳೆಯು ಧೈರ್ಯಗೊಂಡು ವಿನಯದಿಂದೈತಂದು ಅರ್ಜುನನನ್ನೂ ಶ್ರೀಹರಿಯನ್ನೂ ಕಾಣಿಸಿಕೊಂಡು ನಮಸ್ಕರಿಸಿ ಸ್ವಾಮೀ ! ಭಾರತ ಯುದ್ಧದಲ್ಲಿ ಪತಿಯನ್ನು ನೀಗಿಕೊಂಡು, ಇನ್ನೂ ಬಾಲನಾದ ಒಬ್ಬ ಮಗನನ್ನು ಸಲಹುತ್ತ ಈ ನಗರದಲ್ಲಿ ವಾಸಮಾಡಿಕೊಂಡಿರುವೆನು. ಆದುದರಿಂದ ಭಕ್ತವತ್ಸಲನಾದ ನೀನು ಅನಾಥನಾದ ನನ್ನ ಪುತ್ರನನ್ನು ಕಾಪಾಡಿ ನನ್ನನ್ನು ಸಂರಕ್ಷಿಸಬೇಕೆಂದು ಬೇಡಿಕೊಂಡಳು. ಆಗ ಅರ್ಜುನನು ರಥದಿಂದಿಳಿದು ಅಕ್ಕನಿಗೆ ನಮಸ್ಕರಿಸಿ, ಅಮ್ಮಾ ! ನೀನು ಹೆದರಬೇಡ. ಹಿಂದೆಮಾಡಿದ ವಿಘಾತಿಯನ್ನು ಮರೆತು ನನ್ನನ್ನು ಉದ್ಧರಿಸು. ನಿನ್ನ ಮಗನಿಗೆ ಕರಿತುರಗ ರಥಪದಾತಿಗಳ ಸಹಿತ ರಾಜ್ಯಾಧಿಕಾರವನ್ನು ಕೊಡುವೆನು. ನೀನು ಧರ್ಮರಾಯನು ಮಾಡುವ ಅಧ್ವರಕ್ಕೆ ಬಂದು ಕುಂತಿ ಯಶೋದೆ ದೇವಕಿಯರನ್ನು ಕಂಡು ಧನ್ಯಳಾಗು ಎಂದು ಹೇಳಿದನು. ಆ ಮಾತನ್ನು ಕೇಳಿ ದುಶ್ಶಳೆಗೆ ದುಃಖವು ಇಮ್ಮಡಿಯಾಯಿತು. ಆದರೂ ಅದನ್ನು ಸೈರಿಸಿಕೊಂಡು ಶ್ರೀಹರಿಗೆ ನಮಸ್ಕರಿಸಿ, ಸ್ವಾಮೀ ! ನೀನು ಪ್ರಾಣಿಗಳ ಹೃದಯಮಧ್ಯದಲ್ಲಿದ್ದುಕೊಂಡು ಅವರವರ ದುಃಖಗಳನ್ನು ನಿವಾರಿಸುವೆ ಎಂಬುದನ್ನು ದ್ರೌಪದಿಯ ವಸ್ತ್ರಾಪಹರಣಕಾಲದಲ್ಲಿ ತೋರಿಸಿರುವೆ. ಇನ್ನು ನಾನು ಬಹಳವಾಗಿ ಹೇಳಿ ಫಲವೇನು ? ನಿನ್ನನ್ನು ಸ್ಮರಿಸಿದ ಮಾತ್ರದಲ್ಲಿ ಸಕಲ ಪಾಪಗಳೂ ನಾಶವಾಗುವುವು. ನಿನ್ನ ದಿವ್ಯಮೂರ್ತಿಯನ್ನು ಕಂಡಬಳಿಕ ಸಮಸ್ತ ಕಲ್ಯಾಣಗಳೂ ಕೈಗೂಡುವುವು. ಈಗ ನಾನು ಕೃತಾರ್ಥಳಾದೆನು. ಸ್ವಾಮೀ ! ತಂಗಿ ಎಂಬ ನೆನದಿಂದ ಅರ್ಜುನನು ಅಧ್ವರಶಾಲೆಗೆ ಬರುವಂತೆ ನನ್ನನ್ನು ಕರೆಯುತ್ತಿರುವನು. ವಿಧವೆಯಾದ ನಾನು ಹೇಗೆ ಹಸ್ತಿನಾವತಿಗೆ ಬರಲಿ! ಎಲೈ ಕರುಣಾಮೂರ್ತಿಯೇ! ದಿಕ್ಕಿಲ್ಲದಿರುವ ಈ ಮಗುವನ್ನು ಕಟ್ಟಳ್ಕರಿಂದ ಸಂರಕ್ಷಿಸಬೇಕೆಂದು ಕಾಲ್ಗೆರಗಿ ಬೇಡಿಕೊಂಡಳು. ಅವಳನ್ನು ಸಮಾಧಾನಮಾಡಿ, ಶ್ರೀಕೃಷ್ಣನು ಅರ್ಜುನನೊಡನೆ ನಗರವನ್ನು ಪ್ರವೇಶಮಾಡಿದನು.

ಬಳಿಕ ದುಶ್ಶಳೆಯು ಮಗನನ್ನು ಕಂಡು, ಮೈದಡವಿ ಆಲಿಂಗಿಸಿಕೊಂಡು, ಸನ್ಮಾನಪುರಸ್ಸರವಾಗಿ ಅಭಯವನ್ನು ಕೊಟ್ಟು ಸಂತೋಷದಿಂದ ನಗರದಲ್ಲಾದ ಉತ್ಸವಗಳನ್ನು ನೋಡುತ್ತ ಅರ್ಜುನಾದಿಗಳು ಸತ್ಕೃತರಾದರು. ಬಳಿಕ ಅವರ ಅಪ್ಪಣೆಯಂತೆ ದುಶ್ಶಳೆಯು ತನ್ನ ಮಗನನ್ನು ಕರೆದುಕೊಂಡು ಹಸ್ತಿನಾವತಿಗೆ ಹೊರಡಲು ಸಿದ್ಧಳಾದಳು ಅವಳನ್ನು ಕರೆದುಕೊಂಡು ಶ್ರೀಹರಿಯು ಸಕಲ ಸಾಮಂತರಿಂದೊಡಗೂಡಿ ಹಸ್ತಿನಾಪುರಕ್ಕೆ ಹೊರಟು ಪಟ್ಟಣಕ್ಕೆ ಮೂರು ಯೋಜನದ ದೂರದಲ್ಲಿ ಕುದುರೆಗಳನ್ನು ಕಟ್ಟಿ ದೇವಪುರ ನಿಲಯನಾದ

ಲಕ್ಷ್ಮೀರಮಣನು ಸಂತೋಷಿಸುತ್ತಿದ್ದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀ ನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾ ಸಂಗ್ರಹದಲ್ಲಿ ಮೂವತ್ತೆರಡನೆಯ ಸಂಧಿ ಸಂಪೂರ್ಣಂ. ಶ್ರೀ ಶ್ರೀ ಶ್ರೀ.

# ಮೂವತ್ತಮೂರನೆಯ ಸಂಧಿ.

## ಧರ್ಮರಾಯನು ಯಜ್ಞವನ್ನು ಪ್ರಾರಂಭಿಸಿದುದು.

ಎಲೈ ಕುರುಕುಲಗಳ ವೀರಾಗ್ರಣಿಯಾದ ಜನಮೇಜಯರಾಯನೇ ಲಾಲಿಸು. ಶ್ರೀಹರಿಯು ಹಸ್ತಿನಾಪುರಕ್ಕೆ ಯೋಜನತ್ರಯ ದೂರದಲ್ಲಿ ಕುದುರೆಗಳನ್ನೂ ಕಟ್ಟಿಸಿ ಚತುರಂಗಬಲವನ್ನೂ ನಿಲ್ಲಿಸಿ, ಯಮನಿಯಮಾಸನ ಪ್ರಾಣಾಯಾಮವಿಧಿಗಳಿಂದ ಗಂಗಾತೀರದ ಯಾಗಶಾಲೆಯಲ್ಲಿ ವ್ರತಿಯಾಗಿ ಕುಳಿತಿರುವ ಧರ್ಮರಾಯನನ್ನು ಕಾಣಬೇಕೆಂದು ತವಕದಿಂದೈತಂದು ಧರ್ಮಪುತ್ರನನ್ನು ಕಾಣಿಸಿಕೊಳಲು, ಆತನು ಅತ್ಯಂತ ಸಂತೋಷದಿಂದ ನಮಸ್ಕರಿಸಿ ಸಂತೈಸಲು, ಸಭೆಯವರೆಲ್ಲರೂ ಸಂತೋಷದಿಂದ ಶ್ರೀಹರಿಯನ್ನು ವಂದಿಸಿದರು. ಬಳಿಕ ಆತನು ದೇವಕಿ ಯಶೋದೆ ಕುಂತಿ ಗಾಂಧಾರಿಯರಿಗೆರಗಿ ಉಳಿದ ಬಂಧುಜನರನ್ನು ವಿನಯದಿಂದ ಕಾಣಿಸಿಕೊಂಡು ಎಲೈ ರಾಯನೇ ! ನಿನ್ನ ಯಾಗಾಶ್ವವು ಭೂಮಂಡಲವನ್ನೆಲ್ಲ ಸುತ್ತಿಕೊಂಡು ಇಲ್ಲಿಗೆ ಎರಡು ಯೋಜನದ ದೂರದಲ್ಲಿ ಬಂದು ನಿಂತಿದೆ. ನಿನ್ನ ತಮ್ಮನಾದ ಅರ್ಜುನನ ಪ್ರತಾಪಕ್ಕೆ ಭೂಮಂಡಲವು ನಡುಗಿಹೋಯಿತು. ಇನ್ನು ಈ ಕುದುರೆಗಳನ್ನು ನಗರಪ್ರವೇಶಂಗೆಯ್ಸಿ ಯಾಗವನ್ನು ಪೂರ್ತಿಮಾಡು ಎಂದು ಹೇಳಲು, ಧರ್ಮರಾಯನು ಸ್ವಾಮಿ ! ಕರುಣಾಮೂರ್ತಿಯಾದ ನಿನ್ನ ದಯೆಯೆಂಬ ಮಳೆಯು ಸುರಿದರೆ ಅರ್ಜುನಪ್ರತಾಪವೆಂಬ ಭೂಮಿಯು ಬೆಳೆಯದಿರುವುದೆ ? ಭಕ್ತವತ್ಸಲನಾಗಿ ಜಗದುದ್ಧಾರಕನೆಂಬ ಬಿರುದನ್ನು ಪಡೆದು, ರೋಮರೋಮಗಳಲ್ಲಿಯೂ ಕೋಟಿಯಜ್ಞಗಳ ಫಲವನ್ನು ತುಂಬಿಕೊಂಡಿರುವ ನಿನಗೆ ಪಾಂಡವರೇ ಪ್ರಾಣವಾಗಿರುವಲ್ಲಿ ನಾನು ಹೇಳತಕ್ಕದ್ದೇನು ? ಭಕ್ತರನ್ನು ಪರಿಪಾಲಿಸುವುದೇ ನಿನ್ನ ಜೀವನವಲ್ಲವೇ ? ಸಾಕು ! ಇನ್ನು ಭೂಮಂಡಲದ ಅರಸುಗಳನ್ನು ಜಯಿಸಿದ ಪರಿಯನ್ನು ವಿಸ್ತರಿಸಿ ಹೇಳು ಎಂದು ಕೇಳಲು, ಶ್ರೀಹರಿಯು ಹಸ್ತಿನಾಪುರದಿಂದ ಹೊರಟುದು ಮೊದಲು ಸಕಲ ರಾಜ್ಯಗಳನ್ನು ಗೆದ್ದು ತಿರುಗಿ ಕುದುರೆಯು ರಾಜಧಾನಿಗೆ ಬರುವವರೆಗೂ ನಡೆದ ಕಥೆಯನ್ನು ವಿಸ್ತರಿಸಿ ಹೇಳಿದನು.

ಅದನ್ನು ಕೇಳಿ ಸಂತುಷ್ಟಾಂತರಂಗನಾದ ಧರ್ಮರಾಯನು ಭೀಮನೊಡನೆ ಕೃಷ್ಣನನ್ನು ರಾಣಿವಾಸಕ್ಕೆ ಕರೆದುಕೊಂಡು ಹೋಗಲು, ರಾಣಿಯರಾದ ಸತ್ಯಭಾಮೆ, ಜಾಂಬವತಿ, ರುಕ್ಮಿಣಿ, ಶ್ರೀಲಕ್ಷ್ಮಿಯರು ಮುತ್ತಿನಾರತಿಗಳನ್ನು ಬೆಳಗಿ ಹರಿಯನ್ನು ಕಂಡು ಹರ್ಷಸಾಗರದಲ್ಲಿ ತೇಲುತ್ತ ಹಾಸ್ಯಕರವಾದ ವಚನಗಳಿಂದ ತಮ್ಮ ಪತಿಯ ಚಿತ್ತವನ್ನು ತಮ್ಮೆಡೆಗೆ ಸೆಳೆದುಕೊಂಡರು. ಅವರನ್ನು ಸಂತೈಸಿ, ಸರ್ವಾಂತರ್ಯಾಮಿಯಾದ ಕೃಷ್ಣನು ಮರಳಿ ಓಲಗಶಾಲೆಗೆ ಬಂದು, ಸಭಾಮಂಟಪದ ಸಂದಣಿಯ ಕೆಲಸಗಳಿಗೆ ಭೀಮನನ್ನು ನಿಲ್ಲಿಸಿ, ಧರ್ಮರಾಯ, ಧೃತರಾಷ್ಟ್ರ, ವಿದುರ ಮೊದಲಾದ ವೃದ್ಧರೊಡಗೂಡಿ, ನಾಡೊಡೆಯರನ್ನೂ ಬಕದಾಲ್ಭ್ಯಮುನಿಯನ್ನೂ ಕರೆದುಕೊಂಡು ಬರಲು ಯತ್ನಿಸಿ ಪುರವನ್ನು ಸಿಂಗರಿಸುವಂತೆ ಆಜ್ಞಾಪಿಸಿ ಹೊರಟುಹೋದನು. ಶ್ರೀಕೃಷ್ಣನ ಅಪ್ಪಣೆಯಂತೆ ಆ ಪಟ್ಟಣವು ಅತ್ಯಂತ ವೈಭವದಿಂದ ಶೋಭಾಯಮಾನವಾಗಿ ಅಲಂಕರಿಸಲ್ಪಟ್ಟು ಕತ್ತುರಿಯಸಾರಣೆಯಿಂದಲೂ, ಕೇಸರಿಯಕಾರಣೆಯಿಂದಲೂ, ಪನ್ನೀರುಗಳಚಳಯದಿಂದಲೂ, ಮನೋಹರವಾಗಿದ್ದಿತು. ಬಳಿಕ ಶ್ರೀಹರಿಯು ಧರ್ಮರಾಯನ ಸಭಾಸದರಿಂದೊಡಗೂಡಿ ನಟವಿಟಗಾಯಕರೂ ಪಂಡಿತ ಯೋಗೀಜನರೂ ವೇಣುವೀಣಾ ಮೃದಂಗತತಿಗಳೊಡನೆ ರಾಣಿವಾಸದವರೂ ಆನೆಗಳ ಮೇಲೆ ಕುಳಿತು, ಮುತ್ತಿನಾರತಿಗಳ ಬೆಡಗನ್ನು ಬೀರುತ್ತಿರುವ ಸುವಾಸಿನಿಯರೊಗ್ಗಿನಲ್ಲಿ ಹೊರಟುಬರಲು, ಮಹಾಜನರೆಲ್ಲರೂ ಸಾಲಾಗಿಹೊರಟು ಎಡಬಲಗಳಲ್ಲಿ ನಿಂದಿರುವ ಕುದುರೆಗಳ ನಡುವೆ ನಿಂತಿದ್ದ ಅರ್ಜುನನಿಗೆ ಗಂಧಪುಷ್ಪಾಕ್ಷತೆಗಳನ್ನುತಳಿದು ಮುತ್ತಿನಾರತಿಗಳನ್ನು ಬೆಳಗಿ, ದೂರ್ವಾಂಕುರಗಳಿಂದಲೂ, ದಧಿಲಾಜೆಗಳಿಂದಲೂ, ಸೇಚನೆಮಾಡಿ ಹರಿಸಿದರು. ಸಕಲರೂ ಅನ್ಯೋನ್ಯವಾಗಿ ಒಬ್ಬರನ್ನೊಬ್ಬರು ಕಾಣಿಸಿಕೊಂಡು ಕುಶಲಪ್ರಶ್ನೆಯನ್ನು ಮಾಡಿ ಕಾಣಿಕೆಗಳನ್ನು ಒಪ್ಪಿಸಿದರು. ವಂದನೀಯರಿಗೆರಗಿ ವಂದಿಗಳ ನಮಸ್ಕಾರವನ್ನು ಕೈಕೊಂಡು, ಸಮಬಂಧುಗಳನ್ನು ಆಲಿಂಗಿಸಿಕೊಂಡು, ಸಂದರ್ಶನಸುಖದ ಸಂಭಾಷಣೆಗಳನ್ನಾಡುತ್ತ ಸಕಲರೂ ಬಕದಾಲ್ಭ್ಯಮುನಿಯಬಳಿಗೆ ಬಂದು ದಂಡಿಗೆಗಳನ್ನಿಳಿದು ಆತನಿಗೆ ವಂದಿಸಿ, ಅವನ ಆಶಿಷವನ್ನು ಕೈಗೊಂಡು ಶ್ರೀಹರಿಯು ಅಪ್ಪಣೆಯಂತೆ ಗೋಧೂಳೀ ಲಗ್ನದಲ್ಲಿ ಧರ್ಮರಾಯನನ್ನು ಕಾಣುವತವಕದಿಂದ ಯಾಗಶಾಲೆಗೆ ಬಂದರು. ಬಗೆಬಗೆಯಾದ ಛತ್ರಚಾಮರಗಳೂ, ಪರಿಪರಿಯ ಸಿಂಧಸೀಗುರಿಗಳೂ, ಪತಾಕೆಗಳ ಸಮೂಹವೂ, ವಾದ್ಯವಿಶೇಷಗಳ ಧ್ವನಿಯೊಡನೆ ಕೂಡಿದ ಪಾಠಕರ ಧ್ವನಿಯೂ, ಸಂಗೀತನರ್ತನ ಮೇಳಗಳೊಡನೆ ಬೆರೆದ ಚತುರಂಗಬಲವೂ ಸಂಗಡಬರಲು, ಕುದುರೆಗಳ ಮುಂಭಾಗದಲ್ಲಿ ಯದುವೃಂದ ಸಮನ್ವಿತನಾಗಿ, ಎಡಬಲಗಳಲ್ಲಿ ಬರುತ್ತಿರುವ ಅರ್ಜುನ ವೃಷಕೇತುಗಳ ಆದರಣೆಯನ್ನು

ಕೈಕೊಂಡು ಹಿಂದೆ ಬರುತ್ತಿರುವ ಹಂಸಧ್ವಜಾದಿಗಳ ಸ್ತೋತ್ರವನ್ನು ಕಿವಿಗೊಟ್ಟು ಕೇಳುತ್ತ ಶೋಭಾಯಮಾನವಾಗಿ ಉರಿಯುತ್ತಿರುವ ಕಪ್ಪುರ ದೀವಿಗೆಗಳ ಬೆಳಕಿನಲ್ಲಿ ಶ್ರೀಕೃಷ್ಣನು ಬಂದನು. ಕಿವಿಯಲ್ಲಿ ಕೇಳಬಹುದಲ್ಲದೆ ದೇವತೆಗಳು ಕಣ್ಣಿಂದ ನೋಡಬಲ್ಲರೆ ? ಈ ಚಂದ್ರವಂಶದವರು ಮಾಡಿದ ಅಶ್ವಮೇಧದ ವೈಭವವನ್ನು ಕಣ್ಣಾರೆ ನೋಡುವೆನೆಂದು ಕೃಷ್ಣನೊಡನೆ ಕ್ಷೀರಸಮುದ್ರವು ನಡೆದು ಬರುತ್ತಿರುವುದೋ ಎಂಬಂತೆ ಅತಿಶಯವಾದ ಅಟ್ಟಹಾಸದಿಂದ ಸಕಲರೂ ಬಂದು ಸೇರಿದರು. ಸಭಾಮಧ್ಯದಲ್ಲಿ ಯಜಮಾನನಾಗಿ ಕುಳಿತಿರುವ ಧರ್ಮರಾಯನ ಸಮ್ಮುಖಕ್ಕೆ ಬಂದು ಕುದುರೆಗಳನೊಪ್ಪಿಸಿ ನಮಸ್ಕರಿಸಿದ ಅರ್ಜುನನನ್ನು ಧರ್ಮರಾಯನು ಸಂತೈಸಿ, ವೃಷಕೇತುವನ್ನು ಮನ್ನಿಸಿದನು. ಆಬಳಿಕ ಶ್ರೀಹರಿಯು ಪಾರ್ಥನೊಡನೆ ಬಂದಿರುವ ರಾಜಾಧಿರಾಜರನ್ನು ಬೇರೆಬೇರೆಯಾಗಿ ಧರ್ಮರಾಯನಿಗೆ ತೋರಿಸಿದನು. ಅಯ್ಯಾ ! ನಾನು ಬಹಳವಾಗಿ ವಿಜೃಂಭಿಸಿ ಹೇಳುವುದಿಲ್ಲ. ಸಹಜವಾದ ಮಾತುಗಳಲ್ಲದೆ ಸುಳ್ಳಿಂದಿಗೂ ನಮ್ಮಲ್ಲಿ ಬರಲಾರದು ? ಇವನು ರಾಜಹಂಸನಾದ ಹಂಸಧ್ವಜನು. ಲೋಕವಿಖ್ಯಾತನಾದ ಈತನು ವೀರವರ್ಮನು. ರಾಜಮೌಳಿಗಳ ರತ್ನಾಭರಣನಾಯಕ ಮಣಿಯಾದ ನೀಲಧ್ವಜನೇ ಇವನು. ಶತ್ರುಬಲ ದವಾನಲನಾದ ಶಿಖಧ್ವಜನೇ ಇವನು. ಭೂಲೋಕದ ಸ್ಥಿತಿಲಯಗಳನ್ನು ಚೆನ್ನಾಗಿ ತಿಳಿದ ಚಂದ್ರಹಾಸನೇ ಈತನು. ಇವನಾದರೋ ದೇವೇಂದ್ರನ ಮೊಮ್ಮಗನಾದ ಬಭ್ರುವಾಹನನು ಎಂದು ಬೇರೆಬೇರಾಗಿ ಆತ್ಮಪಾಲಕರನ್ನೂ ಅವರ ಸುತ ಸಹೋದರ ಬಾಂಧವಾದಿಗಳನ್ನೂ ತೋರಿಸಿ, ಅವರು ತಂದು ಸುರಿದಿರುವ ಮಹಾಮೇರುಪ್ರಾಯವಾದ ರತ್ನರಾಶಿಗಳನ್ನು ಕಾಣಿಸಿ ಸಕಲವನ್ನೂ ಧರ್ಮರಾಯನಿಗೆ ಒಪ್ಪಿಸಿದನು. ಅನಂತರದಲ್ಲಿ ಸಕಲ ರಾಜರುಗಳೂ ಕೃಷ್ಣನನ್ನು ಕುರಿತು ಸ್ವಾಮಿಾ ! ನಿನ್ನ ದರ್ಶನವಾಯಿತು. ಇಪ್ಪತ್ತು ಬ್ರಹ್ಮಪಟ್ಟವನ್ನು ಕಂಡ ಬಕದಾಲ್ಭ್ಯಮುನಿಯನ್ನು ಕಂಡೆವು. ಭೂಲೋಕವನ್ನು ಸುತ್ತಿ ನಾನಾ ದೇಶಗಳ ವಿಚಿತ್ರವನ್ನು ಕಣ್ಣಾರೆ ಕಂಡೆವು. ಧರ್ಮರಾಯನ ಯಾಗಕ್ಕೆ ಸಂದು ಕೃತಕೃತ್ಯರಾದೆವು ಎಂದು ಹೇಳಲು ಧರ್ಮರಾಯನು ಅವರೆಲ್ಲರನ್ನೂ ಅಕ್ಕರೆಯಿಂದ ಆದರಿಸಿ ಬೇಕಾದ ಬಿಡಾರಗಳನ್ನು ಬಿಡಿಸಿಕೊಟ್ಟು ಬಗೆಬಗೆಯಾದ ಉಪಚಾರಗಳಿಂದ ಸತ್ಕರಿಸಿ, ಭಕ್ತಿಯಿಂದ ಬಕದಾಲ್ಭ್ಯಮುನಿಯನ್ನು ಪೂಜೆಮಾಡಿ ಅನಂತಗುಣಗಣಗಂಭೀರನಾದ ಶ್ರೀಹರಿಯ ಆಜ್ಞೆಯಂತೆ ಅಧ್ವರೋಪಕ್ರಮಕ್ಕೆ ಸಂಕಲ್ಪಮಾಡಿ ಇಷ್ಟಕಾಚಯನವನ್ನು ನಡೆಸಿ ಶಾಸ್ತ್ರೋಕ್ತವಾದ ಕ್ರಮದಿಂದ ಯಾಗಭೂಮಿಯನ್ನು ಮಂತ್ರಘೋಷದೊಡನೆ ಶುದ್ಧಿಮಾಡಿಕೊಂಡು ಶೃತಿಮಂತ್ರವಿಧಿಗಳಿಂದ ಬಕದಾಲ್ಭ್ಯಮುನಿಯ ಸಮ್ಮತಿಯಂತೆ ಇಟ್ಟಿಗೆಗಳನ್ನು ಜೋಡಿಸಿ, ಗರುಡಾಕಾರವಾದ ಚತುರ್ವ್ಯೂಹವನ್ನು ನಿರ್ಮಿಸಿದರು. ಹೀಗೆ ಇಷ್ಟಕಾಚಯನವಾದಬಳಿಕ ಪರಿಶಿ

ಷ್ಟದಿಂದೊಪ್ಪುವ ಅಷ್ಟಕುಂಡಗಳು ಎಂಟುಮೂಲೆಗಳಲ್ಲಿಯೂ ರಾಜಿಸಿದುವು. ಬಳಿಕ ಪಾಲಾಶ ಖಾದಿರ ಬಿಲ್ವ ಶ್ಲೇಷ್ಮಾತಕ ಮೊದಲಾದ ಯೂಪಶ್ರೇಷ್ಠಗಳು ಇಪ್ಪತ್ತೊಂದು ಸಂದಿರಲು ಚಷಾಲಹುತಸೂತ್ರಗಳು ಸಂದಣಿಸಿರಲು ಮಹಾವ ಳಿಗಳೂ, ಜುಹುಗಳೂ, ಸೃಕ್ಸ್ರುವಗಳೂ, ಗೋಚರ್ಮನಿರ್ಮಿತವಾದ ಉಲೂಖ ಲವೂ, ಸೋಮವಲ್ಲಿಯ ಮುಸಲವೂ, ದರ್ಭಾಸ್ತರಣ ಚಮಸಾದಿಗಳಿಗೆ ಬೇಕಾದ ಸಕಲಸಂಭಾರಗಳೂ ಆ ಯಾಗಮಂಟಪದಲ್ಲಿ ಶೋಭಿಸುತ್ತಿದ್ದಿತು.

ಆಗ ವೇದವ್ಯಾಸನನ್ನು ಆಚಾರ್ಯಪಟ್ಟದಲ್ಲಿಟ್ಟು ಬಕದಾಲ್ಭ್ಯನನ್ನು ಬ್ರಹ್ಮತ್ವಕ್ಕಿರಿಸಿ, ಉಳಿದ ಋಷಿಮಂಡಲಿಯನ್ನು ಅಧ್ವರ್ಯುಗಳಾಗಿ ನೇಮಿಸಿ ಕೊಂಡು ರಕ್ಷೋಘ್ನಮಂತ್ರದಿಂದ ಎಂಟು ಬಾಗಿಲಗಳನ್ನು ಸಂರಕ್ಷಿಸುವ ಋಷಿ ವರ್ಯರಿಂದೊಡಗೂಡಿ, ಸಮಸ್ತ ತಪೋಧನರ ಎದುರಿನಲ್ಲಿ ಧರ್ಮರಾಯನು ಮೃಗ ಶೃಂಗವನ್ನು ಧರಿಸಿ ಯಜಮಾನನಾಗಿ ಕುಳಿತನು. ಬಳಿಕ ಆಚಾರ್ಯನಾದ ವೇದ ವ್ಯಾಸನು ಎದ್ದುನಿಂತು ಸಿಂಹಾಸನಾಧಿಷ್ಠಿತನಾದ ಶ್ರೀಹರಿಯನ್ನು ಕುರಿತು, ಅಯ್ಯಾ ! ಧರ್ಮರಾಯನ ಯಾಗನಿಮಿತ್ತವಾಗಿ ಅರವತ್ತುನಾಲ್ಕುಜನ ದಂಪತಿ ಗಳು ವಿಲಾಸಯುಕ್ತರಾಗಿ ನಿರ್ಮಲವಾದ ಕಲಶಗಳನ್ನುಹೊತ್ತು ಗಂಗಾಜಲ ವನ್ನು ತರಬೇಕೆಂದು ಹೇಳಿದನು. ಆ ಮಾತನ್ನು ಕೇಳಿ ಅನಸೂಯೆಯೊಡನೆ ಅತ್ರಿಯೂ, ಅರುಂಧತಿಯೊಡನೆ ವಸಿಷ್ಠನೂ, ರುಕ್ಮಿಣಿಯೊಡನೆ ಶ್ರೀಹರಿಯೂ, ಸುಭದ್ರೆಸಹಿತ ಅರ್ಜುನನೂ, ಮಾಯಾವತಿಯೊಡನೆ ಮನ್ಮಥನೂ ಉಷೆಯೊ ಡನೆ ಅನಿರುದ್ಧನೂ, ಹಿಡಿಂಬಿಯೊಡನೆ ಭೀಮನೂ, ಪ್ರಭದ್ರೆಯೊಡನೆ ವೃಷಕೇ ತುವೂ, ಲೀಲಾವತಿಯೊಡನೆ ಮಯೂರಧ್ವಜನೂ, ಸುನಂದೆಯೊಡನೆ ನೀಲಧ್ವ ಜನೂ, ಪ್ರಭಾವತಿಯ ಸಂಗಡ ಯೌವನಾಶ್ವನೂ, ಧಮ್ಮಿಲೆಯಿಂದೊಡಗೂಡಿ ಅನುಸಾಲ್ವನೂ, ಉಳಿದ ವೀರರು ಅವರವರ ಹೆಂಡತಿಯರೊಡನೆ ನಿರ್ಮಲವಾದ ಕಲಶಗಳನ್ನು ಹಿಡಿದು, ವಾದ್ಯಘೋಷ ಮಂತ್ರಘೋಷಶಬ್ದಗಳಿಂದ ಕಿವಿಗಿಂ ಪಾಗಿರೆ, ತಳಿರ್ಪೂ ಹಣ್ಣಳಿಂದಲಂಕೃತವಾದ ಕಲಶಗಳನ್ನು ಧರಿಸಿ, ಅರುವತ್ತು ನಾಲ್ಕುಜನ ದಂಪತಿಗಳು ಅಟ್ಟಹಾಸದಿಂದ ಬರುತ್ತಿರಲು, ಗಂಗಾತೀರದಲ್ಲಿ ನಿಂತುಕೊಂಡಿದ್ದ ಶ್ರೀಹರಿಯು ತಾನೇ ಜಲಾಗಮನಕಾರ್ಯವನ್ನು ಕೈಕೊಳ್ಳಲು ದೇವದುಂದುಭಿಗಳು ಮೊಳಗಿದವು. ದೇವತೆಗಳು ಹೂಮಳೆಯನ್ನು ಕರೆದರು. ಬಳಿಕ ದೇವಕಿ ಯಶೋದೆಯರು ಸಂತೋಷದಿಂದ ರುಕ್ಮಿಣಿಯ ಸೆರಗನ್ನೂ ಕೃಷ್ಣನ ಕಂಚುಕಾಗ್ರವನ್ನೂ ಹಿಡಿದು ಕಟ್ಟಿದರು. ಅದನ್ನು ಕಂಡು ನಾರ ದನು ಸತ್ಯಭಾಮೆಯ ಮನೆಗೆ ಬಂದು ಅಮ್ಮಾ ! ನಿನ್ನೊರಗಿತ್ತಿಯಾದ ರುಕ್ಮಿ ಣಿಯು ಸಕಲ ವೈಭವದಿಂದಲಂಕೃತಳಾಗಿ ಸಪ್ತರ್ಷಿಮಂಡಲಿಯಿಂದ ಸೇವಿತ ನಾದ ಶ್ರೀಹರಿಯೊಡನೆ ಸಂದು, ಕೈವಾರಿಸುವ ವಂದಿಮಾಗಧರ ಸ್ತುತಿಗಳಿಂದ

. ಸಂತುಷ್ಟಳಾಗಿ, ಗಂಧ, ಪುಷ್ಪ, ತಾಂಬೂಲ, ಮೊದಲಾದ ಸುಗಂಧದ್ರವ್ಯಗಳ ಚಳಯುದಿಂದೊಪ್ಪುತ್ತಿರುವಳು ಅವಳ ಭಾಗ್ಯವನ್ನು ನಾನೇನೆಂದು ಹೇಳಲಿ ! ಎಂದು ನುಡಿದನು. ಆ ಮಾತನ್ನು ಕೇಳಿ ಭಾಮೆ ಸ್ವಾಮಿಾ ! ತಾವು ತಿಳಿಯುದವರಂತೆ ಬಂದು ನನ್ನ ಮನಸ್ಸನ್ನು ಪರೀಕ್ಷಿಸಬೇಕೆಂದು ಕೇಳುತ್ತಿರುವಿರಿ ! ನಿಮ್ಮ ಮಾತಿನಬಗೆಯನ್ನು ನಾನು ಬಲ್ಲೆ ? ಎಂದು ಆತನನ್ನು ಕರೆದುಕೊಂಡು ಹೋಗಿ ತನ್ನೇಕಾಂತಭವನದ ಪರ್ಯಂಕದಲ್ಲಿ ಮಲಗಿ ನಲಿಯುತ್ತಿರುವ ರುಕ್ಮಿಣಿಸಹಿತನಾದ ಶ್ರೀಹರಿಯನ್ನು ತೋರಿಸಲು, ನಾರದನು ಆಶ್ಚರ್ಯಯುಕ್ತನಾಗಿ, ಆಹಾ ! ನಾನು ಬಂದ ಸುಳುವನ್ನು ಕಂಡು ನೀನಿಲ್ಲಿಗೆ ಬಂದಿರುವೆಯಾ ಸಾಕು. ನಿನ್ನ ಮಾನವಲೀಲೆಯನ್ನು ಏನೆಂದು ಹೇಳಲಿ ! ಎಂದು ಬಗೆಬಗೆಯಾಗಿ ಹೊಗಳಿ ಅಲ್ಲಿಂದ ಜಾಂಬವತಿಯ ಮನೆಗೆ ಬಂದು ಅವಳನ್ನು ಕುರಿತು, ಸತ್ಯಭಾಮೆಗೆ ಹೇಳಿದ ಮಾತುಗಳನ್ನು ಹೇಳಿ ಅವಳಿಂದಲೂ ಸದುತ್ತರವನ್ನು ಪಡೆದು, ಪರಮಾನಂದಭರಿತನಾಗಿ ಕ್ಷಣಮಾತ್ರವಾದರೂ ಶ್ರೀಹರಿಯು ತನ್ನ ಭಕ್ತರನ್ನು ಬಿಟ್ಟಿರಲಾರನೆಂಬುದನ್ನು ಮನಸ್ಸಿನಲ್ಲಿ ನೆಲೆಗೊಳಿಸಿಕೊಂಡು ತೃಪ್ತನಾಗಿ ಧರ್ಮರಾಯನಬಳಿಗೆ ಬಂದು, ರುಕ್ಮಿಣಿಸಹಿತನಾಗಿ ಪೂಜಿಸಿದ ಪೊಂಗಲತಗಳನ್ನು ಹೊತ್ತು ಮುನಿಗಣಸಂಸ್ತುತ್ಯನಾಗಿ, ರಾರಾಜಿಸುತ್ತಿರುವ ದೇವಪುರನಿಲಯನಾದ ಲಕ್ಷ್ಮೀರಮಣನನ್ನು ಕಂಡು ಸ್ತುತಿಸಿದನೆಂಬಲ್ಲಿಗೆ ಶ್ರೀ ಲಕ್ಷ್ಮೀಕಾಂತ ಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿನಾಗಶರ್ಮ ಪ್ರಣೀತ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಮೂವತ್ತಮೂರನೆಯ ಸಂಧಿ ಸಂಪೂರ್ಣಂ. ಶ್ರೀ ಶ್ರೀ ಶ್ರೀ.

ಕಂದಂ || ಕರುಣದೆ ಹರಿಸಂರಕ್ಷಿಸೆ |
ತುರಗವನೊಡಗೊಂಡು ಜಯಿಸಿ ಭೂಪಾಲಕರಂ ||
ಹರುಷದೆ ಪಾರ್ಥಂ ನಡೆತರೆ |
ಮೆರೆದುದು ಧರ್ಮಾಶ್ವಮೇಧವಿಾಜಗವರಿಯಲ್ ||



# ಮೂವತ್ತನಾಲ್ಕನೆಯ ಸಂಧಿ.

ಕಂದಂ || ವರಿಸುತೆ ವೇದವ್ಯಾಸನ |
ಪರತರನಿಯಮೋಕ್ತಿಯಿಂತೆ ಧರ್ಮಜನನುವಿಂ ||
ಧರೆಯಂ ತಣಿಯಿಸಿ ಮಖಮಂ ||
ಹರಿಗರ್ಪಿಸಿ ಧನ್ಯನಾದನಲ್ತೆ ಮಹೀಶಂ ||

## ಅಶ್ವಸಂಜ್ಞಾಪನ ಅವಭೃತಾದಿಗಳು.

ಕೇಳೈ ಜನಮೇಜಯರಾಯನೇ ! ಬಳಿಕ ವೇದವ್ಯಾಸನು ಶಾಸ್ತ್ರಪದ್ಧತಿಯನ್ನನುಸರಿಸಿ ಅರವತ್ತುನಾಲ್ಕು ಜನ ತಂದ ಪತ್ರಪುಷ್ಪಫಲಾಲಂಕೃತಗಳಾದ ಪೊಂಗಳಸಗಳನ್ನು ಪೂಜಿಸಿ, ಶ್ರೀಹರಿಯ ಅಪ್ಪಣೆಯನ್ನು ಕೈಕೊಂಡು ಪ್ರಥಮ ಕಲಶವನ್ನೆತ್ತಿ ಅನುಸೂಯೆಯ ಕೈಗೆ ಕೊಟ್ಟನು. ಆ ಸತೀಮಣಿಯು ಅದನ್ನು ಅರುಂಧತಿಯ ಕೈಗೆ ಕೊಟ್ಟಳು. ಬಳಿಕ ಅರುಂಧತಿಯು ಆ ಕಲಶವನ್ನು ರುಕ್ಮಿಣಿಯ ಸಿರಿಮುಡಿಯಲ್ಲಿಟ್ಟಮೇಲೆ ಸರ್ವರೂ ತಂತಮ್ಮ ಪೊಂಗಲಶಗಳನ್ನು ಪೊತ್ತು ವೈಭವದಿಂದ ಗೀತ ವಾದ್ಯ ನೃತ್ತ ಮಂತ್ರರವರೊಡನೆ ಹೊರಟು ಬರುತ್ತಿರಲು ಮುತ್ತೈದೆಯರು ಆರತಿಗಳನ್ನು ಬೆಳಗಿ ಮುತ್ತಿನ ಸೇಸೆಗಳನ್ನು ತಳಿದರು. ಮಂಗಳವಾದ್ಯಗಳು ಬೋರ್ಗರೆದುವು. ಆಶ್ಚರ್ಯಕರವಾದ ಈ ಉತ್ಸವವನ್ನು ನೋಡಲು ಭೂಮಂಡಲದ ಮಹಾಜನರೂ, ಅಂತರಿಕ್ಷದ ಆದಿತ್ಯವರ್ಯರೂ, ನೆರೆದು ನಿಂತಿದ್ದರು ಹೀಗೆ ತಂದ ಗಂಗಾಜಲದಲ್ಲಿ ಯೂಪಸ್ತಂಭವನ್ನು ತೊಳೆದು, ಅಶ್ವವನ್ನು ಪೂಜಿಸಿ, ಕಲಶೋದಕವನ್ನು ಪ್ರೋಕ್ಷಿಸಿ ಯೂಪಸ್ತಂಭದಲ್ಲಿಕಟ್ಟಿದರು. ಬಳಿಕದ್ರೌಪದಿಸಹಿತನಾಗಿ ಧರ್ಮರಾಜನು ಮೂರ್ಧಾಭಿಷಿ

ಕ್ತನಾಗಿ ಮಂತ್ರಪೂತವಾದ ಜಲಗಳಿಂದ ವಿಧಿವಿಧಾನವನ್ನು ತಿಳಿದು, ಸರ್ವಜ್ಞ ರಾದ ಋಷಿಗಳು ವೇದಋಕ್ಕುಗಳನ್ನು ಪಠಿಸುತ್ತಿರಲು ಯಾವ ಲೋಪವೂ ಇಲ್ಲದಂತೆ ವಿಧಿವತ್ತಾಗಿ ಯಜ್ಞವು ನಡೆಯಲಾರಂಭಿಸಿತು. ಆಕಾಲದಲ್ಲಿ ಬಂದ ಋಷಿಗಳನ್ನು ಅರ್ಘ್ಯಪಾದ್ಯಾಚಮನಗಳಿಂದ ಸತ್ಕರಿಸಿ, ಬಿಡಾರಂಗಳನ್ನು ಬಿಡಿಸುತ್ತ, ಶ್ರೀಹರಿಯು ತಾನೆ ಉಪಚರಿಸ ತೊಡಗಿದನು. ಸಾತ್ಯಕಿಯು ಸುವರ್ಣಾಸನಗಳನ್ನು ಕೊಟ್ಟು ಸತ್ಕರಿಸುತ್ತಿದ್ದನು. ಮನ್ಮಥನು ಮನೋಹರವಾದ ಗಂಧ, ಪುಷ್ಪಾಕ್ಷತೆ, ತಾಂಬೂಲ, ಕಪ್ಪುರ, ಕಸ್ತುರಿಗಳನ್ನು ಕೊಟ್ಟು ಸಂತೋಷಪಡಿಸುತ್ತಿದ್ದನು. ಸಹದೇವನು ಆಯಾ ಜನರ ಬಿಡಾರಕ್ಕೆ ಬೇಕಾದ ಸಂಭಾರಗಳನ್ನು ಒದಗಿಸುವನು. ತಾರತಮ್ಯವನ್ನರಿತು ವಿಾರಿದ ಮರ್ಯಾದೆಯಿಂದ ಭೂರಿಭೋಜನಗಳನ್ನು ನಡೆಸಿ ನಕುಲನು ಆನಂದಿಸುತ್ತಿದ್ದನು. ವೃಷಕೇತುವು ದಿವಾರಾತ್ರಿಗಳಿಗೆ ಬೇಕಾದ ಪರಿಮಳೋದಕವನ್ನು ಸಿದ್ಧಗೊಳಿಸುವನು. ಸರ್ವರನ್ನು ಸಂತೋಷದಿಂದ ನೋಡಿಕೊಂಡು ಆರೈಕೆಮಾಡುವ ಕೆಲಸವು ಹೈಡಿಂಬಿಗೆ ಸಂದುದು. ಬಂಡಿಗಳಮೇಲೆ ಬರುವ ಸಂಭಾರದ್ರವ್ಯಗಳನ್ನು ಕೂಡಿಸುವಕಾರ್ಯದಲ್ಲಿ ಅನಿರುದ್ಧನು ಆಸಕ್ತನಾದನು ಅನ್ನಶಾಲೆಯಲ್ಲಿ ಅಣಿಯಾಗಿ ಪಾಕಮಾಡಿಸುವ ಕೆಲಸವನ್ನು ಕೃತವರ್ಮನು ಕೈಗೊಂಡನು ಮೂರುಯೋಜನದಗಲಕ್ಕೆ ಕಟ್ಟಿದ ಸುಂದರ ಮಂಟಪದಲ್ಲಿ ನೆರೆದ ಮಹಾಜನರಿಗೆ ಬೇಕಾದ ಷಡ್ರಸೋಪೇತವಾದ ಭೋಜನವನ್ನು ಮಾಡಿಸುವ ಕಾರ್ಯವು ಸಾಂಬಾದಿಯಾದವರಿಗೆ ಸಂದಿತು. ಹೀಗಿರುವಲ್ಲಿ ಸಾಕ್ಷಾದ್ಯಜ್ಞಸ್ವರೂಪನಾದ ಶ್ರೀಹರಿಯು ಸಾನ್ನಿಧ್ಯದಿಂದ ಧರ್ಮರಾಯನು ಯಾಗವನ್ನು ಪೂರ್ತಿಮಾಡುವ ಕಾಲದಲ್ಲಿ ಸರ್ವಲೋಕಗಳಿಗೂ ತೃಪ್ತಿಯುಂಟಾಗುವುದು ಆಶ್ಚರ್ಯವೇ ಹೇಳು ? ಸಪ್ತಸಮುದ್ರಗಳಲ್ಲಿ ಸುರಾರ್ಣವನ್ನುಬಿಟ್ಟು ಮಿಕ್ಕ ಆರು ಸಮುದ್ರಗಳನ್ನು ಆಕರ್ಷಣೆ ಮಾಡಿದಂತೆ ಷಡ್ರಸಂಗಳು ಕಂಗೊಳಿಸಿದುವು. ಕುಲಾಚಲಂಗಳನ್ನು ನಗುವಾದದಿಂದ ಶಾಲ್ಯನ್ನರಾಶಿಗಳು ಶೋಭಿಸಿದುವು. ಬಗೆಬಗೆಯಾದ ಭಕ್ಷ್ಯಭೋಜ್ಯ ಪಾಯಸಾದಿಗಳು ಎಂತೆಂತು ಒದಗಿದವೋ ಕಾಣೆ. ಎಲೈ ಜನಮೇಜಯರಾಯನೇ ಕೃಷ್ಣನೆಂಬ ಕಾಮಧೇನುವು ಹತ್ತಿರದಲ್ಲಿರುವಾಗ ಯಾವುದಕ್ಕೆತಾನೆ ಕೊರತೆಯುಂಟು ಎನ್ನುವಂತೆ ಆ ಯಜ್ಞಕ್ಕೆ ಬಂದ ಸರ್ವರೂ ತೃಪ್ತಿಯಿಂದುಂಡು ತಿಂದು ತೇಗಿದಣಿದರು. ಊಟವಾದಬಳಿಕ ಸುಗಂಧಾನುಲೇಪನಂಗಳನ್ನು ಕೊಟ್ಟು, ಕಪ್ಪುರವೀಳೆಯುವನ್ನಿತ್ತು ಮಾಲ್ಯಾಂಬರ ಭೂಷಣಾವಳಿಗಳನ್ನು ತೊಡಿಸಿ, ಆಸೆಪಟ್ಟು ಅವರವರು ಅಪೇಕ್ಷಿಸಿದ ಪದ್ವಸ್ತುಗಳನ್ನು ಸಲ್ಲಿಸಿ ಹೊಗಳಿ ಹಸಾದವೆಂದು ಸೇವಿಸುತ್ತಿರುವ ಭೀಮಾರ್ಜುನರ ಸಂಭ್ರಮವನ್ನು ಕಂಡು, ಅಲ್ಲಿನ ಮಹಾಜನಂಗಳು ಆನಂದಿಸಿದರು. ಹೇಮ, ವಸ್ತ್ರ, ಆಭರಣ, ಮುಕ್ತಾಫಲ, ಕರಿತುರಗ, ರಥಪದಾತಿ

ನವರತ್ನರಾಶಿ, ಗೋಮಹಿಷಿ, ದಾಸದಾಸೀಜನ, ವ್ಯಜನಾತಪತ್ರ, ಪಾಲಕಿ, ಅಗರು ಚಂದನ, ಪರಿಮಳದ್ರವ್ಯ, ಭೂಮಿ, ಕಾಸಿ ಮೊದಲಾದ ದಾನಗಳನ್ನು ಯಾಚಕಾವಳಿಗೆ ಸಂತೋಷವಾಗುವಂತೆ ಭೀಮಾರ್ಜುನರು ಕೊಡುತ್ತಿದ್ದರು. ಬಳಿಕ ಮಂತ್ರವಾರಿ ಸ್ನಾತನಾಗಿ ಧರ್ಮರಾಯನು ಸುಪರ್ಣಚಯನದ ಬಳಿಗೆ ಬಂದು ಹಯವನ್ನು ತರಿಸಿ, ಪಶುವು ಆಹುತಿಗಾಗಿ ದೊರೆದುದೆಂದು ಯಜ್ಞೇಶ್ವರನು ಅಭಿವರ್ಧಿಸುತ್ತಿರಲು, ಶ್ರುತಿವಾಕ್ಯವನ್ನು ಪಠಿಸುತ್ತ, ಎಲೈ ತುರಗವರ್ಯನೇ! ನೀನು ಇಲ್ಲಿಂದ ಅಶ್ವಲೋಕಕ್ಕೆ ಹೋಗು, ಅಲ್ಲಿ ನಿನಗೆ ನಾಶವಿಲ್ಲದ ದೇವಪದವಿ ಉಂಟಾಗುವುದೆಂದು ಹೇಳಿದನು. ಆಗ ಆ ಕುದುರೆಯು ತಲೆಯನ್ನಲ್ಲಾಡಿಸಿ, ಯಜ್ಞಮೂರ್ತಿಯಾದ ಶ್ರೀಹರಿಯನ್ನು ನೋಡಬೇಕೆಂಬ ತನ್ನಾಶಯವನ್ನು ನಕುಲಂಗೆ ತಿಳಿಸಿತು ಅದನ್ನು ಕಂಡು ನಕುಲನು ಅರ್ಜುನನನ್ನು ಕುರಿತು ಅಣ್ಣಾ ! ಇಲ್ಲಿ ನೋಡು. ಈ ಕುದುರೆಯು ಸ್ವರ್ಗಲೋಕದ ದೇವಪದವಿಯನ್ನೊಲ್ಲದೆ ಶ್ರೀಹರಿಯ ಕೃಪೆಗೆಸಂದ ವಿಷ್ಣುಸಾಯುಜ್ಯವನ್ನು ಪಡೆವೆನೆಂದು ನನ್ನೊಡನೆ ಹೇಳುತ್ತಿದೆ. ಕೃಷ್ಣಸಾನ್ನಿಧ್ಯವಿಲ್ಲದೆ ಈಶ್ವರಾರ್ಪಣವಾಗದ ಇತರ ಯಾಗಗಳಲ್ಲಿ ಪ್ರಾಣವನ್ನುಬಿಟ್ಟ ಪಶುಗಳಿಗೂ ಅಂತಪ್ಪ ಯಾಗವನ್ನು ಮಾಡಿದ ಕರ್ತೃಗಳಿಗೂ ಸ್ವರ್ಗಸುಖ ಉಂಟೇ ? ನನ್ನ ಶ್ಲಾಘ್ಯವಾದ ಈ ಯಾಗಕ್ಕೆ ಫಲರೂಪನಾದವನು ಶ್ರೀಕೃಷ್ಣನಾದುದರಿಂದ ಆತನಶರೀರವನ್ನು ಪ್ರವೇಶಿಸುವೆನೆಂದು ಈ ಕುದುರೆಯು ಹೇಳುತ್ತಿದೆಯೆಂದು ಆ ಮಹಾಶ್ವದ ಅಭಿಪ್ರಾಯವನ್ನು ನಕುಲನು ಧರ್ಮಾದಿಗಳೆಲ್ಲರಿಗೂ ತಿಳಿಸಲು, ಆವರು ಆಘೋಟಕವನ್ನು ಅಚ್ಯುತನ ಮುಂಭಾಗದಲ್ಲಿ ಅಭಿಮಂತ್ರಿಸಿ ಯೂಪದಲ್ಲಿ ಕಟ್ಟಿಸಿ ಆಶ್ಚರ್ಯಪಟ್ಟು ಸರ್ವರೂ ಬೆರಗಾಗಿ ನೋಡುತ್ತಿದ್ದರು. ಬಳಿಕ ಧೌಮ್ಯನು ಭೀಮಸೇನನನ್ನು ಕುರಿತು ಅಯ್ಯಾ!ಸರ್ವರೂ ನೋಡುವಂತಹ ಒಂದಾಶ್ಚರ್ಯವನ್ನು ನಿನಗೆ ತೋರಿಸುವೆನು. ನೀನು ನಿಶ್ಚಲಚಿತ್ತನಾಗಿ ಒಂದೇಕ್ಷಣದಲ್ಲಿ ಖಡ್ಗವನ್ನು ಹಿರಿದು ಈ ಕುದುರೆಯನ್ನು ನಿಲ್ಲಿಸು. ಎಂದು ಹೇಳಿ ತಾನು ಮಂತ್ರೋದಕವನ್ನು ಪ್ರೋಕ್ಷಿಸಿ, ಅದರ ಎಡದ ಕಿವಿಯನ್ನು ಕತ್ತಿಯಿಂದ ಸೀಳಲು ರಕ್ತಧಾರೆಯು ತೋರದೆ ಕ್ಷೀರಪ್ರವಾಹವು ಸುರಿಯಿತು. ಅದನ್ನು ಕಂಡು ಸಕಲರೂ ಆಶ್ಚರ್ಯಪಟ್ಟರು. ಬಳಿಕ ಪುರೋಹಿತನಾದ ಧೌಮ್ಯನು ಭೀಮನನ್ನು ಕುರಿತು "ಶ್ರೀಹರಿಗೆ ಪ್ರೀತಿಯುಂಟಾಗುವಂತೆ ಈ ಕುದುರೆಯ ತಲೆಯನ್ನು ನಿನ್ನ ಕೈಕತ್ತಿಯಿಂದ ಕಡಿದುಹಾಕು" ಎಂದು ಹೇಳಿದನು. ಆಗ ಭೀಮನು ಒತ್ತಿಡಿದ ವಾದ್ಯಘೋಷ ಮಂತ್ರರವಗಳೊಡನೆ ಕ್ಷಣಮಾತ್ರದಲ್ಲಿ ಆದರ ತಲೆಯನ್ನು ಕತ್ತರಿಸಲು, ಆ ತಲೆಯು ಕೆಳಗೆ ಬೀಳದೆ ಅಂತರಿಕ್ಷಕ್ಕೆ ಹಾರಿ ಸೂರ್ಯಮಂಡಲದಲ್ಲಿ ಅಡಗಿಕೊಂಡಿತು. ಬಳಿಕ ಇದೇ ಪವಿತ್ರವಾದ ಪಶುವೆಂದು ತಿಳಿದು ಶ್ರೀಹರಿಯು ಅದರ ಉರಸ್ಥಲವನ್ನು ಪ್ರಹರಿಸಲು, ಜೀವಾ

ತ್ಮನು ಅದರ ಹೃದಯದಿಂದ ಹೊರಟು, ಶ್ರೀಕಾಂತನ ಮುಖಪದ್ಮವನ್ನು ಹೊಕ್ಕಿತು. ಸಕಲರೂ ಸಂತುಷ್ಟರಾಗಿ ಎಲೈ ಧರ್ಮರಾಯನೇ ! ಹಿಂದಿನ ಯುಗಗಳಲ್ಲಿ ನಡೆದ ಯಾಗದಲ್ಲಿ ನಾವು ಇಂತಹ ಪಶುವನ್ನು ಕಾಣಲಿಲ್ಲ ! ಇದು ನಿನ್ನ ಪೂರ್ವಪುಣ್ಯದಿಂದ ದೊರೆಯಿತು ಎಂದು ಹೊಗಳಿದರು.

ಕೃಷ್ಣನ ಮಹಿಮೆಯಿಂದ ಆ ಕುದುರೆಯ ದೇಹವು ಶುಭ್ರವಾದ ಕರ್ಪೂರದ ಖಂಡವಾಯಿತು. ಆನಂದ ಪುಳಕಿತನಾದ ಧರ್ಮರಾಯನು ದ್ರೌಪದಿಯೊಡನೆ ಸಕಲ ಬಾಂಧವಸಮೇತನಾಗಿ ಯಜ್ಞೇಶ್ವರನ ಮುಂದೆ ಕುಳಿತು ಭೂಮಿಗೆ ಬೀಳದಂತೆ ಆ ಕರ್ಪೂರವನ್ನು ಸ್ರುವದಿಂದ ತೆಗೆದುಕೊಂಡು ಮೊದಲು ಇಂದ್ರನನ್ನು ಬರಮಾಡಿ ಈ ಧರ್ಮರಾಯನು ಯಜ್ಞದಲ್ಲಿ ಕೊಡುವ ಹವಿಸ್ಸನ್ನು ಸ್ವೀಕರಿಸಿ ತೃಪ್ತನಾಗು ಮುಂದೆ ಕಲಿಯುಗದಲ್ಲಿ ನಿನಗೆ ಇಂಥ ಆಹುತಿಯನ್ನು ಕೊಡುವವರಾರೂ ಇಲ್ಲವೆಂದು ಹೇಳಲು ಇಂದ್ರನು ಎಲೈ ವ್ಯಾಸಮುನಿಯೇ ! ಸರ್ಪನಕ್ಷತ್ರ ಯುಕ್ತವಾದ ಗುರುವಾರದಲ್ಲಿ ನೀನು ಈ ರಾಯನಿಂದ ನನಗೆ ಹವಿಸ್ಸನ್ನು ಕೊಡಿಸಿದರೆ ನಾನು ಸಂಪೂರ್ಣ ತೃಪ್ತಿಯನ್ನು ಹೊಂದುವೆನೆಂದು ಹೇಳಿ ಪ್ರತ್ಯಕ್ಷನಾಗಿ ಬಂದು ನಿಲ್ಲಲು ಆಗ ವೇದವ್ಯಾಸನು ಆಹುತಿಕೊಟ್ಟನು. ಸತ್ಯಾಚಾರ ಸಂಪನ್ನನಾದ ವೇದವ್ಯಾಸನು ಶ್ರುತ್ಯುಕ್ತವಿಧಾನಂಗಳಿಂದ ಆಹುತಿಗಳನ್ನು ಕೊಡುತ್ತಿರಲು ಸಕಲ ದೇವತೆಗಳು ಪ್ರತ್ಯಕ್ಷರಾಗಿ ಬಂದು ತಂತಮ್ಮ ಹವಿರ್ಭಾಗಗಳನ್ನು ಸ್ವೀಕರಿಸುತ್ತ ಸುತ್ಯಾಹವನ ಯಜ್ಞದಲ್ಲಿ ವಿರಚಿಸುವ ಕೆಲಸದಿಂದ ಮೂರು ಲೋಕದ ಚರಾಚರಂಗಳು ದಣಿದವು. ಯಜ್ಞರೂಪನಾದ ಶ್ರೀಹರಿಯೇ ಸಾಕ್ಷಿಯಾಗಿರುವನು. ಶ್ರೌತವಿದ್ಯಾ ನಿಪುಣನಾದ ಧೌಮ್ಯನೇ ಪುರೋಹಿತನು. ಇಪ್ಪತ್ತು ಬ್ರಹ್ಮಪಟ್ಟವನ್ನು ಕಂಡ ಬಕದಾಲ್ಭ್ಯನೇ ಬ್ರಹ್ಮನು. ಭೂಸುರವರ್ಯನಾದ ವೇದವ್ಯಾಸನೇ ಯಜ್ಞಾಚಾರ್ಯನು. ಧರ್ಮರಾಯನೇ ದೀಕ್ಷಿತನು. ಸಕಲ ಋಷಿಗಳು ಋತ್ವಿಜರಾಗಿರಲು ಈ ಯಾಗವು ಭೂಮಂಡಲಕ್ಕೆ ಹೊಸದಾಯಿತೆಂಬ ಆಶ್ಚರ್ಯ ಉಂಟಾಯಿತು. ಆಹುತಿಗಳನ್ನು ಕೊಂಡು ಸಂತುಷ್ಟರಾದ ದೇವತೆಗಳ ತೇಜೋರೂಪನಾದ ಯಜ್ಞೇಶ್ವರನ ಹೋಮ ಧೂಮ ಸಂಸ್ಪರ್ಶನ ಕೃತಸೋಮಪಾನ ಸಂಭ್ರಮದ, ಅಹೋತ್ರರ ಮಂತ್ರಘೋಷಣ, ಹವಿರ್ಗಂಧದಾಘ್ರಾಣ ಸಂಬಂಧದಿಂದ ಧರ್ಮರಾಯನು ಪೂತನಾಗಿ ಕಂಗೊಳಿಸಿದನು. ಯಾಗದಿಂದ ತೃಪ್ತಿಯಾಗಿ ಇಳೆಯು ಪಾವನವಾಯಿತು. ಹವಿರ್ಭಾಗದಿಂದ ಸ್ವರ್ಗಲೋಕವು ಸಂತುಷ್ಟಿಗೊಂಡಿತು. ಪ್ರೇಮದಿಂದ ಶ್ರೀಕೃಷ್ಣನು ಧರ್ಮಜನನ್ನು ಅಪ್ಪಿ, ನಿನ್ನ ಯಾಗವು ಪೂರ್ತಿಯಾಯಿತು ಇನ್ನು ಗಂಗಾಜಲದಲ್ಲಿ ಅವಭೃತಸ್ನಾನವನ್ನು ಮಾಡು ಎಂದು ನೇಮಿಸಿದನು. ಬಳಿಕ ಸರ್ಪಪಾಪ ಪರಿಹಾರಕವಾದ ಅವಭೃತಸ್ನಾನವನ್ನು ಶ್ರೀಹ

ರಿಯ ಎದುರಿಗೆ ಗಂಗೆಯಲ್ಲಿಮಾಡಿ, ಪ್ರಸನ್ನವದನನಾದ ಶ್ರೀಕೃಷ್ಣನ ಕರುಣಾ ಕಟಾಕ್ಷದಿಂದ ಸರ್ವರೊಡನೆ ಸಂಭಾಷಿಸುತ್ತ ಪಟ್ಟಮಹಿಷಿಯೊಡನೆ ಅಭಿಷಿಕ್ತ ನಾದನು. ಸರ್ವರೂ ಸೋಮಪಾನದಿಂದ ಸಂತುಷ್ಟರಾದರು. ಗಾಯನ ನರ್ತನ ವೇಣುವೀಣಾದಿಗಳೊಡನೆ ವಾದ್ಯರವಗಳು ಮೊರೆಯುತ್ತಿರಲು ಧರ್ಮ ರಾಯನು ಬಕದಾಲ್ಭ್ಯಋಷಿಗೆ ನವರತ್ನಖಚಿತವಾದ ಬಂಗಾರದ ಎತ್ತನ್ನೂ, ಒಂದೊಂದು ಆನೆ, ಹತ್ತು ಕುದುರೆ, ಒಂದೊಂದು ರಥ, ಪರಿಜನಚತುಷ್ಟಯ ವನ್ನೂ ಒಂದೊಂದುಕೊಳಗ ಮುತ್ತುಗಳನ್ನು, ನೂರುಭಾರಹೊನ್ನು ರತ್ನಾಭರಣ ಗೋಮಹಿಷಿಗಳನ್ನು ಋತ್ವಿಜರೆಲ್ಲರಿಗೂ ಕೊಟ್ಟು ದ್ವಾರಪಾಲಕರಿಗೂ, ಉಳಿದ ಋಷಿಮಂಡಲಿಯವರಿಗೂ, ಏನೂ ಕೊರತೆಯಿಲ್ಲದಂತೆ ಸಕಲ ವಸ್ತುಗಳನ್ನು ಕೊಟ್ಟು ಉಪಚರಿಸಿ ಅವರ ಆಶೀರ್ವಾದವನ್ನು ಪಡೆದು ಭೂಪಾಲಕರನ್ನು ವಂದಿಸಿ ಪ್ರತಿಯೊಬ್ಬರಿಗೂ ಸಾವಿರ ಕುದುರೆ, ಹತ್ತುಸಾವಿರಾನೆ, ಒಂದುಕೋಟ ಸುವರ್ಣ, ರತ್ನಕಿರೀಟ ಮಣಿಕುಂಡಲ, ದಿವ್ಯಾಂಬರಾಭರಣಗಳನ್ನು ಕೊಟ್ಟು ಮನ್ನಿಸಿ, ರುಕ್ಮಿಣಿ ಮೊದಲಾದ ದೇವರಾಣಿಯರಿಗೆ ಬೇಕಾದ ಉಡುಗೆರೆಗಳನ್ನು ಕೊಟ್ಟು ವಿನಯವಂತನಾಗಿ, ಸರ್ವಜನರಿಂದೊಡಗೂಡಿ, ಧರ್ಮರಾಯನು ಶ್ರೀಹ ರಿಯನ್ನು ಸಿಂಹಾಸನದಮೇಲೆ ಕುಳ್ಳಿರಿಸಿ, ಸರ್ವಾಲಂಕಾರಪೂಜೆಗಳಿಂದ ತೃಪ್ತಿ ಪಡಿಸಿ, ಅಶ್ವಮೇಧಫಲವನ್ನು ಅಚ್ಯುತನಿಗೆ ಧಾರೆಯೆರೆಯಲು, ದೇವದುಂದುಭಿ ಗಳು ಮೊಳಗಿದವು. ಹೂಮಳೆಯು ಸುರಿಯಿತು. ಶ್ರೀಹರಿಯು ತೃಪ್ತನಾ ದನು. ಬಳಿಕ ಧರ್ಮರಾಯನು ಒಡಹುಟ್ಟಿದವರೊಡನೆ ಶ್ರೀಹರಿಗೆ ಯಾಗಫಲ ವನ್ನಿತ್ತು ಉಳಿದ ಯೂಪಗಳಲ್ಲಿ ಕಟ್ಟಿದ್ದ ಪಶುಗಳನ್ನು ಬಿಡಿಸಿ, ಇಂದ್ರತೇಜ ದಿಂದ ರಾರಾಜಿಸುತ್ತಿದ್ದನು.

ಹೀಗೆ ಅಶ್ವಮೇಧಯಾಗವು ಪೂರೈಸಿದಬಳಿಕ ಭೀಮಸೇನನು ರಾಜರ್ಷಿ ಮಂಡಲವನ್ನು ಪ್ರಾರ್ಥಿಸಿ ಶ್ರೇಷ್ಠವಾದ ಯಜ್ಞಶಾಲೆಯಲ್ಲಿ ಹಸೆಗಳನ್ನು ಹಾಕಿಸಿ, ರತ್ನದೀಪಗಳನ್ನಿಡಿಸಿ, ಸಕಲಸಂಭ್ರಮದಿಂದಲಂಕರಿಸಿ, ದಿವ್ಯವಾದ ಭಕ್ಷ್ಯಗಳೊಡನೆ ಷಡ್ರಸೋಪೇತವಾದ ಭೋಜನವನ್ನು ಮಾಡಿಸಿ, ತೃಪ್ತರಾದ ವರಿಗೆ ಗಂಧಮಾಲ್ಯಾಂಬರ ಸುಲೇಪನ ತಾಂಬೂಲಗಳನ್ನಿತ್ತು ದಣಿಸುತ್ತಿರಲು ಸರ್ವರೂ ಆನಂದಭರಿತರಾಗಿ, ಕಮಲಾಕ್ಷನನ್ನು ಕೊಂಡಾಡಿ, ಧರ್ಮರಾಯನ ಮಹಿಮೆಯನ್ನು ವರ್ಣಿಸಿ, ಭೀಮಸೇನನ ಗುಣಗಳನ್ನು ಹೊಗಳಿ, ಅರ್ಜುನನ ಉಚಿತಜ್ಞತೆಯ ವೈಭವವನ್ನು ಸ್ತುತಿಸಿ, ನಕುಲನ ವಿವೇಕವನ್ನು ಮೆಚ್ಚಿ ಕೊಂಡು ಸಹದೇವನ ಶಾಂತಿಯನ್ನೂ, ಧೌಮ್ಯಋಷಿಯ ವಿಚಾರವನ್ನೂ, ಭೂಪಾಲಕರ ಐಕ್ಯಮತ್ಯವನ್ನೂ, ಶ್ರೇಷ್ಠವಾದ ಕ್ರತುವನ್ನು ಸ್ತುತಿಸುತ್ತ ಇರುವ ಬ್ರಾಹ್ಮಣರೊಡನೆ ಧರ್ಮರಾಯನು ಯಾಗಮಂಟಪದಲ್ಲಿ ಕುಳಿತು ಬಕದಾಲ್ಭ್ಯಮುನಿ ಕೃಷ್ಣಮೂರ್ತಿ ಮೊದಲಾದವರಿಂದ ಪುಣ್ಯಕಥೆಗಳನ್ನು

ಕೇಳುತ್ತ, ಸಂತೋಷಿಸುತ್ತಿದ್ದು ಉಳಿದ ಪದಾರ್ಥಗಳನ್ನು ಬ್ರಾಹ್ಮಣರಿಗೆ ಸೂರೆಗೊಟ್ಟು ಆನಂದಭರಿತನಾಗಿ ನಗರವನ್ನು ಪ್ರವೇಶ ಮಾಡಿದನು.

ಬಳಿಕ ಧರ್ಮರಾಯನನ್ನು ಹರಿಸಿ ಆತನಿಂದ ಬೀಳ್ಕೊಂಡು ಸರ್ವರೂ ತಂತಮ್ಮ ಸ್ಥಳಗಳಿಗೆ ತೆರಳಿದರು. ಯದುನಾಯಕನಾದ ಶ್ರೀಹರಿಯು ತನ್ನ ಪರಿವಾರದೊಡನೆ ದ್ವಾರಕಿಗೆ ತೆರಳಿದನು. ಅನಂತರದಲ್ಲಿ ಪ್ರಮೀಳೆಯೊಡನೆ ಅನ್ಯೋನ್ಯವಾಗಿರುವಂತೆ ಅರ್ಜುನನಿಗೆ ಉತ್ತರವಾಯಿತು. ಬಳಿಕ ಸರ್ವಜನಾನಂದಕರನಾಗಿ, ತನ್ನನುಜರಿಂದೊಡಗೂಡಿ ತಾಯಿಯಾದ ಕುಂತಿಯು ಸಂತೋಷಿಸುತ್ತಿರಲು, ಆ ಹಸ್ತಿನಾಪುರದಲ್ಲಿ ರಾಜ್ಯಭಾರ ಮಾಡುತ್ತ ಭಾರತಾಗ್ರಣಿಯಾದ ಧರ್ಮರಾಯನು ದೇವಪುರನಿಲಯ ಲಕ್ಷ್ಮೀರಮಣನ ದಯದಿಂದ ತೊಂಭತ್ತು ವರ್ಷಕಾಲ ರಾಜ್ಯವನ್ನಾಳಿ ಸುಖದಿಂದ ಕಾಲವನ್ನು ಕಳೆದನು. ಇಂತಪ್ಪ ದೇವಪುರನಿಲಯ ಲಕ್ಷ್ಮೀಶನಿಗೆ ಅಂಕಿತವಾದ ಅಶ್ವಮೇಧ ಪರ್ವದ ಈ ಭಾರತಕಥೆಯನ್ನು ಜೈಮಿನಿಋಷಿಯು ಜನಮೇಜಯರಾಯನಿಗೆ ವಿವರಿಸಿದ್ದನು ಆ ಕಥೆಯನ್ನು ಸಜ್ಜನಶಿರೋಮಣಿಗಳ ಸಂತೋಷಾಭಿವೃದ್ಧಿಗಾಗಿ ಶ್ರೀಲಕ್ಷ್ಮೀಕಾಂತಲಸದರುಣ ಚರಣ ಸರೋಜ ಯುಗ್ಮ ಮಕರಂದ ಮಧುಕರಾಯಮಾನ ಕಲ್ಯಾಣಪುರೀನಿಲಯ ಕವಿನಾಗಣ್ಣನು ವಚನಪ್ರಬಂಧದಿಂದ ರಚಿಸಿದನು. ಇಂಥ ಪುಣ್ಯಕಥೆಯನ್ನು ಬರೆದೋದುವ ಕೇಳಿ ಹೇಳುವ ಪುಣ್ಯಾತ್ಮರಿಗೆ ಶೋಕಭಯ ಸಂತಾಪಂಗಳಂ ಕಳೆದು ನಿರ್ಮಲವಾದ ಬುದ್ಧಿ ಬಲ ಚಾತುರ್ಯ ಕೀರ್ತಿಸಂತಾನ ಸುಖಗಳನ್ನು ಶ್ರೀಹರಿಯು ಕೊಡುವನೆಂಬಲ್ಲಿಗೆ ಜೈಮಿನಿಭಾರತ ಕಥಾಸಂಗ್ರಹದಲ್ಲಿ ಮೂವತ್ತನಾಲ್ಕನೆಯ ಸಂಧಿ ಸಂಪೂರ್ಣಂ. ಶ್ರೀ ಶ್ರೀ ಶ್ರೀ.

ಕಂದಂ ॥ ಶ್ರೀಪತಿಯೊರ್ವಂ ಕರುಣಿಸೆ ।
ತಾಪತ್ರಯಮಳಿದು ಸೌಖ್ಯಮೈತರ್ಪವೊಲೀ ॥
ಶ್ರೀಪತಿಯೊಲವಿನ ಜೈಮಿನಿ ।
ಸಾಫಲ್ಯದಕಥೆಯೊಳಾರ್ಗೆ ಸೊಗಮುದಿಸದುಪೇಳ್ ॥೧॥

ಕಂದಂ ॥ ಭಾವದೆ ಲಕ್ಷ್ಮೀಶನಪದ ।
ಪಾವನಸದ್ಭಕ್ತಿತೀವಿ ತುಳುಕಲ್ಕದರಿಂ ॥
ದೀವರ ಜೈಮಿನಿಕಥೆಯಂ ।
ಕೇವಲಮೆನೆ ಬರೆದನಿಂತು ಕವಿನಾಗೇಶಂ ॥೨॥
ಚಂದಿರನಂದದೆ ಸೊಬಗಾ ।
ನಂದದಹರಿಯಂತೆ ಲೀಲೆ ಪಾರ್ಥನ ಶೌರ್ಯಂ ॥
ಸುಂದರ ಧರ್ಮಕಥಾಮೃತ ।
ಮೊಂದಾಗಿರೆ ಸೊಗಸದಿಹುದೆ ಈಕೃತಿಜಗದೊಳ್ ॥೩॥

Acc No.

Title

Author

# THE SELF ENGLISH STUDY

# ದಿ ಸೆಲ್ಫ್ ಇಂಗ್ಲಿಷ್ ಸ್ಟಡಿ.

## ಆಂಗ್ಲಭಾಷಾ ಪ್ರವೇಶದಾಯಿನಿ.

### ಎಂಬ ತಾನಾಗಿ ಇಂಗ್ಲಿಷ್ ಭಾಷೆಯನ್ನು ಕಲಿಯುವ ಪುಸ್ತಕ.

ಒಂದನೆಯ ಪುಸ್ತಕ ೧—೮—೦. ಎರಡನೆಯ ಪುಸ್ತಕ ೧—೮—
ಮೂರನೆಯ ಪುಸ್ತಕ ೧—೮—೦. ಅಂಚೆವೆಚ್ಚ ಬೇರೆ.
ಐದನೆಯ ಮುದ್ರಣ. ಅಚ್ಚು ಅಕಿದ. ಗಟ್ಟಿ ಅಟ್ಟೆ.

ಒಂದನೆಯ ಪುಸ್ತಕದಲ್ಲಿ:—ಎ. ಬಿ. ಸಿ. ಡಿ. ಇಂದ ಜಡ್ ವರಗಿನ ಒ ಣಿಗೆಯ ಅಚ್ಚು ಅಕ್ಷರಗಳನ್ನು ಗುರುತು ಹಿಡಿಯುವದು, ಒಂದಕ್ಕೊಂದ ಕೂಡಿಸುವುದು, ಕೂಡಿಸಿದವುಗಳನ್ನು ಓದುವುದು, ಉಚ್ಚಾರಣೆಯ ಪ್ರಭೇದ ಅವುಗಳ ಅರ್ಥ, ಒಕ್ಕಲುತನ, ಉಡುಗೆತೊಡಿಗೆ, ಪಾಠಶಾಲೆ, ಊಟ, ನಿದ್ದೆ ಸಂಚಾರ, ಕಾರ್ಯಕಲಾಪಗಳಲ್ಲಿ ಬಳಸುವ ಅನೇಕ ಶಬ್ದಗಳು, ಅಂಕೆಗಳು ಮೊದಲಾಗಿ ಉಚ್ಚಾರಣೆ ಅರ್ಥಗಳ ಸಮೇತ ಬರೆದಿದೆ.

ಎರಡನೆಯ ಪುಸ್ತಕದಲ್ಲಿ:—ಕಾಗದಪತ್ರಗಳನ್ನು ಬರೆಯುವ ವಿಧಾ ತಕ್ಕಷ್ಟು ವ್ಯಾಕರಣ ನಿಯಮಗಳು, ತಂತಿಯ ವರ್ತಮಾನ, ರಶೀದಿ, ಹುಂ ಮೊದಲಾದ ವ್ಯವಹಾರಿಗೆ ಅವಶ್ಯಕವಾದ ಅನೇಕ ಸಂಗತಿಗಳಿವೆ.

ಮೂರನೆಯ ಪುಸ್ತಕದಲ್ಲಿ:—[illegible], ಹೋಟಲು, ಕಚೇ ಆಟಪಾಟಗಳ ಕೂಟಗಳು, ಸಭೆಗಳಲ್ಲಿ ಒಬ್ಬರೊಂದಿಗೊಬ್ಬರು ಮಾತಾಡು ವಿನೋದ ಮತ್ತು ಅವಶ್ಯಕವಾದ ದೊಡ್ಡದೊಡ್ಡ ವಾಕ್ಯ ಸಮುದಾಯವಿದೆ.

ಓದುವುದಕ್ಕೂ ಮಾತಾಡುವುದಕ್ಕೂ ಬೋಧಕರ ಸಹಾಯ ಸ್ವಲ್ಪ ಟ್ಟಾಗೂ ಇಲ್ಲದ ಒಂದೆರಡು ತಿಂಗಳ ಅತ್ಯಲ್ಪಕಾಲದಲ್ಲಿ ಕಲಿಸುವ ಅತ್ಯುತ್ತ ವಾದ ಪುಸ್ತಕಗಳಿವು.

ಗ್ರಂಥಕರ್ತರಿಂದಲೂ ಈ ಮೂರು ಪುಸ್ತಕಗಳ ಸಮಸ್ತ ಸ್ವಾತಂತ್ರ್ಯ ವನ್ನು ನಾವು ಪಡೆದಿರುವುದರಿಂದ ಅಪೇಕ್ಷಿತರು ಬೇಗಬೇಗ ನಮ ಬರೆದು ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—ಟಿ. ಕೆ. ಕೃಷ್ಣಸ್ವಾಮಿ ಶೆಟ್ಟಿ,
ಕಲಾನಿಧಿ ಬುಕ್ ಡಿಪೋ ಪ್ರೊಪ್ರೈಟರ್,
ಚಿಕ್ಕಪೇಟೆ ಬೆಂಗಳೂರು ಸಿಟಿ.